| **7.ಆಯವ್ಯಯ ಅಂದಾಜು ತಯಾರಿಕೆಯಲ್ಲಿನ ನ್ಯೂನತೆಗಳು:–**<br><br>2017–18ನೇ ಸಾಲಿನ ಮೈಸೂರು ವಿಶ್ವವಿದ್ಯಾನಿಲಯದ ಆಯವ್ಯಯ ಅಂದಾಜುಗಳನ್ನು ಪರಿಶೀಲಿಸಿದಾಗ ಆಯವ್ಯಯದ ಅಂದಾಜು ಮತ್ತು ವೆಚ್ಚದ ಅಂದಾಜುಗಳ ತಯಾರಿಕೆಯಲ್ಲಿ ಕೆಳಕಂಡ ನ್ಯೂನತೆಗಳು ಕಂಡುಬಂದಿರುತ್ತದೆ.<br><br>2017–18ನೇ ಸಾಲಿನ ಆಯವ್ಯಯದ ಅಂತಿಮ ಶಿಲ್ಕನ್ನು 2017–18ನೇ ಸಾಲಿಗೆ ಪ್ರಾರಂಭಿಕ ಶಿಲ್ಕು ಎಂದು ಪರಿಗಣಿಸದೆ ರೂ.18,97,277/– ಕಡಿಮೆಯಾಗಿ ಲೆಕ್ಕಕ್ಕೆ ತೆಗೆದುಕೊಳ್ಳಲಾಗಿದೆ. ಪರಿಷ್ಕೃತ ಆಯವ್ಯಯ ತಯಾರಿಸುವಾಗ ನಿರೀಕ್ಷಿತ ಆದಾಯ ಮತ್ತು ವೆಚ್ಚಗಳಲ್ಲಿ ಬದಲಾವಣೆ ಮಾಡಬಹುದಾಗಿದ್ದು, ಪ್ರಾರಂಭಿಕ ಶಿಲ್ಕಿನಲ್ಲಿಯೂ ಬದಲಾವಣೆ ಮಾಡಿರುವುದು ಸೂಕ್ತವಾಗಿರುವುದಿಲ್ಲ. ಕೂಡುವಿಕೆ ಲೆಕ್ಕಾಚಾರದಲ್ಲಿಯೂ ತಪ್ಪಾಗಿದ್ದು, ಅಂತಿಮ ಶಿಲ್ಕು ವ್ಯತ್ಯಾಸವಾಗಿರುತ್ತದೆ. ಯೋಜನೆ ಮತ್ತು ಯೋಜನೇತರ ಆದಾಯ ಮತ್ತು ವೆಚ್ಚಗಳನ್ನು ಪರಿಗಣಿಸಲಾಗಿದೆ. ಇದರಿಂದಾಗಿ ವಿಶ್ವವಿದ್ಯಾನಿಲಯದ ಸಮಗ್ರ ಆರ್ಥಿಕ ಸ್ಥಿತಿಯ ವಿವರಗಳು ಲಭ್ಯವಾಗುವುದಿಲ್ಲ ಆಯವ್ಯಯದಲ್ಲಿ ಆದಾಯ ಮತ್ತು ವೆಚ್ಚಗಳನ್ನು ವಾಸ್ತವಕ್ಕೆ ಹತ್ತಿರವಾಗಿ ಪರಿಗಣಿಸದೆ ಇರುವುದರಿಂದ ಕೆಲವು ಲೆಕ್ಕ ಶೀರ್ಷಿಕೆಗಳಲ್ಲಿ ಅವಕಾಶಕ್ಕಿಂತ ಹೆಚ್ಚುವರಿಯಾಗಿರುತ್ತದೆ ಮತ್ತೆ ಕೆಲವು ಶೀರ್ಷಿಕೆಗಳಲ್ಲಿ ಪೂರ್ಣ ಪ್ರಮಾಣದಲ್ಲಿ ಅನುದಾನ ಬಳಕೆಯಾಗಿರುವುದಿಲ್ಲ.<br><br>ಈ ಎಲ್ಲಾ ಲೋಪಗಳನ್ನು ಗಮನಿಸಿದಾಗ ಆಯವ್ಯಯ ತಯಾರಿಕೆಯಲ್ಲಿ ಸಾಕಷ್ಟು ಎಚ್ಚರಿಕೆ ವಹಿಸದಿರುವುದು ಕಂಡುಬಂದಿರುತ್ತದೆ. ಈ ಬಗ್ಗೆ ಆಯವ್ಯಯ ತಯಾರಿಕೆ ಕಾರ್ಯನಿರ್ವಹಿಸುವ ಅಧಿಕಾರಿ/ಸಿಬ್ಬಂದಿಗಳಿಗೆ ಸೂಕ್ತ ಎಚ್ಚರಿಕೆ ನೀಡಿ ಬಜೆಟ್ ಕೈಪಿಡಿ 96 ರಿಂದ 129 ರವರೆಗಿನ | 2017–18ನೇ ಸಾಲಿನ ಆಯವ್ಯಯದ ಅಂತಿಮ ಶಿಲ್ಕನ್ನು 2017–18ನೇ ಸಾಲಿಗೆ ಪ್ರಾರಂಭ ಶಿಲ್ಕು ರೂ.18,97,277/–ಗಳನ್ನು ಕಡಿಮೆಮಾಡಿ ತೆಗೆದುಕೊಳ್ಳಲಾಗಿದೆ ಎಂದು ಕಂಡಿಕೆಯಲ್ಲಿ ಪ್ರಸ್ತಾಪಿಸಲಾಗಿದೆ ಆದರೆ ಸದರಿ ಮೊಬಲಗಿನ ಬಗ್ಗೆ 2017–18ನೇ ಸಾಲಿನ ಆಯವ್ಯಯ ಪುಸ್ತಕದಲ್ಲಿ ಈ ಮಾಹಿತಿಯು ಕಂಡು ಬರುವುದಿಲ್ಲ ಈ ಬಗ್ಗೆ ಸೂಕ್ತ ಮಾಹಿತಿಯನ್ನು ಒದಗಿಸುವಂತೆ ಈ ಮೂಲಕ ಕೋರಲಾಗಿದೆ.<br><br>ಮುಂದುವರಿದು ಹಲವು ಸಂದರ್ಭಗಳಲ್ಲಿ ಕೂಡುವಿಕೆ ಲೆಕ್ಕಾಚಾರ ಮತ್ತು ಇನ್ನಿತರೆ ನ್ಯೂನತೆಗಳನ್ನು ಗಮನಿಸಿದ್ದು ಈ ನ್ಯೂನತೆಗಳನ್ನು ಮುಂದಿನ ಆಯವ್ಯಯ ತಯಾರಿಸುವ ಸಂದರ್ಭದಲ್ಲಿ ಮರುಕಳಿಸದಂತೆ ಎಚ್ಚರ ವಹಿಸಲಾಗುವುದು ಹಾಗೂ ಕಂಡಿಕೆಯಲ್ಲಿ ಪ್ರಸ್ತಾಪಿಸಿ ಸೂಚಿಸಿರುವ ಮೇರೆಗೆ ಬಜೆಟ್ ಕೈಪಿಡಿ 96 ರಿಂದ 129 ರವರೆಗಿನ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಆಯವ್ಯಯವನ್ನು ಸಿದ್ದ ಪಡಿಸಲು ಕ್ರಮ ಕೈಗೊಳ್ಳಲಾಗುವುದು. |

ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಆಯವ್ಯಯ ಅಂದಾಜುಗಳನ್ನು ತಯಾರಿಸಲು ಸೂಚಿಸಿದೆ.

**ಎ)ಆಯವ್ಯಯ ಅಂದಾಜಿನಲ್ಲಿ ನಿಗದಿತ ಅನುದಾನಕ್ಕಂತಲೂ ಹೆಚ್ಚುವರಿ ವೆಚ್ಚ ಭರಿಸಿರುವುದು/ಅನುದಾನ ಬಳಸಿಕೊಂಡಿರುವುದು:–**

ಆಯವ್ಯಯ ಅಂದಾಜಿನ ನಿರೀಕ್ಷಿತ ಸ್ವೀಕೃತಿಗಿಂತಲೂ ವಾರ್ಷಿಕ ಲೆಕ್ಕಗಳನ್ನು ಪರಿಶೀಲಿಸಿದಾಗ ಹೆಚ್ಚುವರಿ ವೆಚ್ಚ ಬರಿಸಿರುವುದನ್ನು ಗುರುತಿಸಿದೆ. ಬಡ್ಜೆಟ್ ನಿಯಮಾವಳಿ ನಿಯಮ–108ರ ಪ್ರಕಾರ ಆಯವ್ಯಯದಲ್ಲಿ ಶೀರ್ಷಿಕೆವಾರು ನಿಗದಿಪಡಿಸಿದ ಅನುದಾನದ ಆರ್ಥಿಕ ಮಿತಿಮೀರಿ ಅಧಿಕ ವೆಚ್ಚವನ್ನು ಭರಿಸಿರುವುದು ಕಂಡುಬಂದಿದ್ದು, ವಿವರ ಕೆಳಕಂಡಂತಿದೆ.

| ಕ್ರ.ಸಂ | ಲೆಕ್ಕ ಶೀರ್ಷಿಕೆ | ಆಯವ್ಯಯದಲ್ಲಿನ ಶೀರ್ಷಿಕೆವಾರು ನಿಗದಿಯಾದ ಅನುದಾನ | ವೆಚ್ಚ | ನಿಗದಿತ ಅನುದಾನಕ್ಕಿಂತಲೂ ಹೆಚ್ಚುವರಿ ವೆಚ್ಚ ಭರಿಸಿರುವ ಮೊತ್ತ (ರೂ.ಗಳಲ್ಲಿ) |
|---|---|---|---|---|
| 1 | 140 | 1000000 | 4526918 | (-)3526918 |
| 2 | 143 | 2791000 | 17829225 | (-)15038225 |
| 3 | 198 | 1000000 | 3142197 | (-)2142197 |
| 4 | 131 | 500000 | 4380986 | (-)3880986 |
| 5 | 110 | 542800000 | 54519405 | (-)2394105 |
| 6 | 115 | 2000000 | 25453418 | (-)14546418 |
| 7 | 122 | 1200000 | 1971050 | (-)771050 |
| 8 | 266 | 8250000 | 9757306 | (-)1507306 |
| 9 | 189 | 1980000 | 4651912 | (-)2671912 |
| 10 | 2017 | 500000 | 37833300 | (-)3733300 |
| 11 | 148 | 4900000 | 10995497 | (-)6095497 |
| 12 | 185 | 1500000 | 18282332 | (-)16782332 |
| | | **ಒಟ್ಟು** | **19,33,43,546** | **(-)73090241** |

ಆಯವ್ಯಯದಲ್ಲಿನ ಅವಕಾಶಕ್ಕಿಂತ ಅಧಿಕವಾಗಿ ವೆಚ್ಚ ಭರಿಸಿರುವ ಬಗ್ಗೆ ಯಾವುದೇ ವಿವರಣೆ ಇರುವುದಿಲ್ಲ. ವಿಶ್ವವಿದ್ಯಾನಿಲಯದಲ್ಲಿ ತಯಾರಿಸುವಾಗ ಬಜೆಟ್ ಕೈಪಿಡಿಯಲ್ಲಿನ ಅಂಶಗಳನ್ನು ಪಾಲಿಸದಿರುವುದು ಕಂಡಬಂದಿರುತ್ತದೆ. ಕೇವಲ ಆಡಳಿತ ಕ್ರಮ ಪಾಲನೆಗಾಗಿ ಎಂಬಂತಾಗಿದ್ದು ಆಯವ್ಯಯದ ಮಿತಿಗಳನ್ನು ಮತ್ತು ಆರ್ಥಿಕ ಶಿಸ್ತನ್ನು ಪಾಲಿಸದಿರುವುದು ವಿಶ್ವವಿದ್ಯಾನಿಲಯದ ಆರ್ಥಿಕ ದೃಷ್ಟಿಯಲ್ಲಿ ಒಳ್ಳೆಯ ಬೆಳವಣಿಗೆಯಾಗಿರುವುದಿಲ್ಲ ಮತ್ತುಇದು ವಿಶ್ವವಿದ್ಯಾನಿಲಯದ ಹಣಕಾಸಿನ ಪರಿಸ್ಥಿತಿ ಮೇಲೆ ವ್ಯತಿರಿಕ್ತ ಪರಿಣಾಮ ಬೀರಬಹುದಾಗಿದೆ, ಈ ಆಯವ್ಯಯದಲ್ಲಿ ನಿಗದಿಪಡಿಸಿದ ಅನುದಾನಕ್ಕಿಂತ **ರೂ.7,30,90,241/–** ಹೆಚ್ಚಿಗೆ ವೆಚ್ಚ ಭರಿಸಲಾಗಿದ್ದು, ಈ ಮೊತ್ತವನ್ನು **ಮರುಹೊಂದಾಣಿಕೆ ಮಾಡಿಕೊಳ್ಳುವವರೆಗೆ ಆಕ್ಷೇಪಣೆಯಲ್ಲಿಡಲಾಗಿದೆ.**

**ಬಿ) ವೆಚ್ಚವಾಗದೆ ಉಳಿದ ಅನುದಾನ**

ಆಯವ್ಯಯದಲ್ಲಿ ಅನುದಾನ ಲಭ್ಯವಿದ್ದರೂ ವೆಚ್ಚ ಮಾಡದೆ ಉಳಿಕೆಯಾಗಿರುವುದನ್ನು ಲೆಕ್ಕ

ಪರಿಶೋಧನೆಯಲ್ಲಿ ಗಮನಿಸಲಾಗಿದೆ. ನಿಯಮಾನುಸಾರ ವಾಸ್ತವಿಕ ಆಯವ್ಯಯ ಅಂದಾಜನ್ನು ತಯಾರಿಸಿ ಅದಕ್ಕೆ ಅನುಗುಣವಾಗಿ ಪೂರ್ಣ ಪ್ರಮಾಣದಲ್ಲಿ ಅನುದಾನವನ್ನು ಬಳಕೆ ಮಾಡಿಕೊಂಡಿದ್ದರೆ ವಿಶ್ವವಿದ್ಯಾನಿಲಯದವು ನರೀಕ್ಷಿತ ಮಟ್ಟದ ಪ್ರಗತಿಯನ್ನು ಸಾಧಿಸಬಹುದಾಗಿತ್ತು ಆದರೆ ನಿಗದಿಯಾದ ಅನುದಾನವನ್ನು ಪೂರ್ಣ ಪ್ರಮಾಣದಲ್ಲಿ ಬಳಸಿಕೊಳ್ಳದಿರುವುದರಿಂದ ವಿಶ್ವವಿದ್ಯಾನಿಲಯದ ನಿರೀಕ್ಷಿತ ಪ್ರಗತಿಯು ಕುಂಠಿತವಾಗಿದ್ದು ವಾಸ್ತವವಾಗಿ ಅವಶ್ಯಕವಿರುವ ಕಾರ್ಯಕ್ರಗಳಿಗೆ ಅನುದಾನದ ಕೊರತೆಯನ್ನು ಸೃಷ್ಟಿಸುತ್ತದೆ, ಆಯವ್ಯಯದಲ್ಲಿ ಒದಗಿಸಿದ ಅನುದಾನ ಪೂರ್ಣ ಪ್ರಮಾಣದಲ್ಲಿ ಬಳಕೆಯಾಗದೆ ಉಳಿದಿರುವ ಮೊಬಲಗಿನ ವಿವರ ಕೆಳಕಂಡಂತಿದರುತ್ತದೆ.

(ಮೊಬಲಗು ರೂ.ಗಳಲ್ಲಿ)

| ಕ್ರ.ಸಂ | ಲೆಕ್ಕ ಶೀರ್ಷಿಕೆ | ಆಯವ್ಯಯದಲ್ಲಿನ ಶೀರ್ಷಿಕೆವಾರು ನಿಗದಿಯಾದ ಅನುದಾನ | ವೆಚ್ಚ ಭರಿಸಿರುವುದು | ಅನುದಾನ ಬಳ:ಕೆಯಾಗದೆ ಉಳಿದಿರುವುದು |
|---|---|---|---|---|
| 1 | 120 | 4000000 | 190327 | 3809673 |
| 2 | 103 | 71514000 | 42134810 | 29379190 |
| 3 | 114 | 4000000 | 781320 | 3218680 |
| 4 | 135 | 25000000 | 476600 | 24523400 |
| 5 | 191 | 60000000 | 21849889 | 3815011 |
| 6 | 192 | 1650000 | 587760 | 1062240 |
| 7 | 184 | 10000000 | 203123 | 9796877 |
| 8 | 183 | 177200000 | 47099538 | 130100462 |
| 9 | 125 | 1130000 | 355090 | 774910 |
| 10 | 190 | 2800000 | 1058911 | 1741089 |
| 11 | 257 | 3000000 | 587760 | 2412240 |
| 12 | 531 | 7500000 | 188400 | 7311600 |
| 13 | 532 | 5000000 | 206800 | 4793200 |
| 14 | 109 | 157200000 | 150001778 | 7198222 |
| 15 | 119 | 30000000 | 181005 | 29818995 |
| 16 | 228 | 120000000 | 17170966 | 102829034 |
| 17 | 111 | 50000000 | 51549 | 49948451 |
| | **ಒಟ್ಟು** | **729994000** | **283125626** | **44,68,68,374** |

ಆಯವ್ಯಯದಲ್ಲಿ ನಿಗದಿಪಡಿಸಿದ ಅನುದಾನವನ್ನು ಪೂರ್ಣ ಪ್ರಮಾಣದಲ್ಲಿ ಬಳಸಿಕೊಳ್ಳಲು ವಿಫಲರಾದ ಅಧಿಕಾರಿ/ಸಿಬ್ಬಂದಿಗಳ ಸೂಕ್ತ ಆಡಳಿತಾತ್ಮಕ ಕ್ರಮ ಕೈಗೊಳ್ಳಲು ಸೂಚಿಸಿದೆ.

ಸದರಿ ಆಕ್ಷೇಪಣೆಗೆ ಸಂಬಂಧಿಸಿದಂತೆ, ಕಂಡಿಕೆ (ಎ)ನಲ್ಲಿ ತಾವು ನೀಡಿರುವ ಪಟ್ಟಿಯಲ್ಲಿನ ವಿವರವನ್ನು ಪರಿಶೀಲಿಸಿ ಈ ಕೆಳಕಂಡ ಅಂಶಗಳನ್ನು ತಮ್ಮ ಗಮನಕ್ಕೆ ತರಲಾಗಿದೆ.

## ಜಿಆರ್ಎ

1.ಶೀರ್ಷಿಕೆ 140ಕ್ಕೆ ಸಂಬಂಧಿಸಿದಂತೆ, 2017–18ನೇ ಸಾಲಿನ ವಾರ್ಷಿಕ ಲೆಕ್ಕಪತ್ರದಲ್ಲಿ ಯಾವುದೇ ವೆಚ್ಚವಾಗಿರುವುದಿಲ್ಲ. ಆದರೆ ವೆಚ್ಚ ರೂ.45,26,910/– ಗಳನ್ನು ಆಕ್ಷೇಪಣೆ ಪಟ್ಟಿಯಲ್ಲಿ ನಮೂದಿಸಲಾಗಿದೆ.

2 ಶೀರ್ಷಿಕೆ 143ಕ್ಕೆ ಸಂಬಂಧಿಸಿದಂತೆ, 2017–18ನೇ ಸಾಲಿನ ವಾರ್ಷಿಕ ಲೆಕ್ಕಪತ್ರದಲ್ಲಿ ರೂ.20,99,108/– ಗಳು ವೆಚ್ಚವಾಗಿರುತ್ತದೆ ಆದರೆ ತಾವು ರೂ,1,78,29,225/–ಗಳನ್ನು ಆಕ್ಷೇಪಣೆ ವೆಚ್ಚದ ಪಟ್ಟಿಯಲ್ಲಿ ನಮೂದಿಸಲಾಗಿದೆ.

3 ಶೀರ್ಷಿಕೆ 198ಕ್ಕೆ ಸಂಬಂಧಿಸಿದಂತೆ, 2017–18ನೇ ಸಾಲಿನ ವಾರ್ಷಿಕ ಲೆಕ್ಕಪತ್ರದಲ್ಲಿ ರೂ.8,47,614/– ಗಳು ವೆಚ್ಚವಾಗಿದ್ದು, ಆಯವ್ಯಯದಲ್ಲಿ ನಿಗದಿಪಡಿಸಿರುವ ಮೊತ್ತಕ್ಕಿಂತ ವೆಚ್ಚವು ಕಡಿಮೆಯಾಗಿರುತ್ತದೆ. ಆದರೆ ರೂ,31,42,197/– ಗಳನ್ನು ಆಕ್ಷೇಪಣೆ ವೆಚ್ಚದ ಪಟ್ಟಿಯಲ್ಲಿ ನಮೂದಿಸಲಾಗಿದೆ.

4 ಶೀರ್ಷಿಕೆ 131ಕ್ಕೆ ಸಂಬಂಧಿಸಿದಂತೆ, 2017–18ನೇ ಸಾಲಿನ ವಾರ್ಷಿಕ ಲೆಕ್ಕಪತ್ರದಲ್ಲಿ ರೂ.4,24,982/– ಗಳು ವೆಚ್ಚವಾಗಿದ್ದು, ಆಯವ್ಯಯದಲ್ಲಿ ನಿಗದಿಪಡಿಸಿರುವ ಮೊತ್ತಕ್ಕಿಂತ ವೆಚ್ಚವು ಕಡಿಮೆಯಾಗಿರುತ್ತದೆ. ಆದರೆ ರೂ,43,80,986/– ಗಳನ್ನು ಆಕ್ಷೇಪಣೆ ವೆಚ್ಚದ ಪಟ್ಟಿಯಲ್ಲಿ ನಮೂದಿಸಲಾಗಿದೆ.

5 ಶೀರ್ಷಿಕೆ 122ಕ್ಕೆ ಸಂಬಂಧಿಸಿದಂತೆ, 2017–18ನೇ ಸಾಲಿನ ವಾರ್ಷಿಕ ಲೆಕ್ಕಪತ್ರದಲ್ಲಿ ರೂ.5,05,850/– ಗಳು ವೆಚ್ಚವಾಗಿದ್ದು, ಆಯವ್ಯಯದಲ್ಲಿ ನಿಗದಿಪಡಿಸಿರುವ ಮೊತ್ತಕ್ಕಿಂತ ವೆಚ್ಚವು ಕಡಿಮೆಯಾಗಿರುತ್ತದೆ. ಆದರೆ ರೂ,19,71,050/– ಗಳನ್ನು ಆಕ್ಷೇಪಣೆ ವೆಚ್ಚದ ಪಟ್ಟಿಯಲ್ಲಿ ನಮೂದಿಸಲಾಗಿದೆ.

6 ಶೀರ್ಷಿಕೆ 148ಕ್ಕೆ ಸಂಬಂಧಿಸಿದಂತೆ, 2017–18ನೇ ಸಾಲಿನ ವಾರ್ಷಿಕ ಲೆಕ್ಕಪತ್ರದಲ್ಲಿ ರೂ.20,59,605/– ಗಳು ವೆಚ್ಚವಾಗಿದ್ದು, ಆಯವ್ಯಯದಲ್ಲಿ ನಿಗದಿಪಡಿಸಿರುವ ಮೊತ್ತಕ್ಕಿಂತ ವೆಚ್ಚವು ಕಡಿಮೆಯಾಗಿರುತ್ತದೆ. ಆದರೆ ರೂ,1,09,95,497/– ಗಳನ್ನು ಆಕ್ಷೇಪಣೆ ವೆಚ್ಚದ ಪಟ್ಟಿಯಲ್ಲಿ ನಮೂದಿಸಲಾಗಿದೆ.

7.ಶೀರ್ಷಿಕೆ 185ಕ್ಕೆ ಸಂಬಂಧಿಸಿದಂತೆ, 2017–18ನೇ ಸಾಲಿನ ವಾರ್ಷಿಕ ಲೆಕ್ಕಪತ್ರದಲ್ಲಿ ಯಾವುದೇ ವೆಚ್ಚವಾಗಿರುವುದಿಲ್ಲ. ಆದರೆ ವೆಚ್ಚ ರೂ.1,82,82,332/– ಗಳನ್ನು ಆಕ್ಷೇಪಣೆ ವೆಚ್ಚದ ಪಟ್ಟಿಯಲ್ಲಿ ನಮೂದಿಸಲಾಗಿದೆ.

| | |
|---|---|
| | 8.ಶೀರ್ಷಿಕೆ 110ಕ್ಕೆ ಸಂಬಂಧಿಸಿದಂತೆ, 2017–18ನೇ ಸಾಲಿನ **ಆಯವ್ಯಯ ಅಂದಾಜಿನಲ್ಲಿ** ರೂ.70,00,00,000/– ಗಳಿಗೆ ಅಂದಾಜಿಸಲಾಗಿದೆ. ಆದರೆ ರೂ,54,28,00,000/–ಗಳನ್ನು ಆಕ್ಷೇಪಣೆ ಪಟ್ಟಿಯಲ್ಲಿ ನಮೂದಿಸಲಾಗಿದೆ. ಹಾಗೂ 2017–18ನೇ ಸಾಲಿನ ವಾರ್ಷಿಕ ಲೆಕ್ಕಪತ್ರದಲ್ಲಿ ರೂ.54,51,94,105/–ಗಳು ವೆಚ್ಚವಾಗಿದ್ದು, ಆಯವ್ಯಯದಲ್ಲಿ ನಿಗದಿಪಡಿಸಿರುವ ಮೊತ್ತಕ್ಕಿಂತ ವೆಚ್ಚವು ಕಡಿಮೆಯಾಗಿರುತ್ತದೆ. ಆದರೆ ರೂ,5,45,19,405/–ಗಳನ್ನು ಆಕ್ಷೇಪಣೆ ಪಟ್ಟಿಯಲ್ಲಿ ನಮೂದಿಸಲಾಗಿದೆ.<br><br>ಮೇಲಿನ ಆಯವ್ಯಯದ ಯಾವುದೇ ಶೀರ್ಷಿಕೆಗಳಲ್ಲಿ ನಿಗದಿಪಡಿಸಿದ ಮೊತ್ತಕ್ಕಿಂತ ಹೆಚ್ಚುವರಿಯಾಗಿ ವೆಚ್ಚವಾಗಿರುವುದಿಲ್ಲ ಆದರೆ ಆಕ್ಷೇಪಿತ ಪಟ್ಟಿಯಲ್ಲಿ ನಮೂದಾಗಿರುವ ಮೊಬಲಗಿಗೂ ಜಿಆರ್‌ಎ ವಾರ್ಷಿಕ ಲೆಕ್ಕಪತ್ರಕ್ಕೂ ತಾಳೆಯಾಗದೇ ಇರುವುದರಿಂದ, ಸದರಿ ಆಕ್ಷೇಪಿತ ಮೊಬಲಗಿನ ವಿವರಗಳ ಸಂಪೂರ್ಣ ಮಾಹಿತಿಯನ್ನು ಒದಗಿಸುವಂತೆ ಕೋರಲಾಗಿದೆ.<br><br>**ಪರೀಕ್ಷಾ ಖಾತೆ**<br><br>1. ಶೀರ್ಷಿಕೆ 115ಕ್ಕೆ ಸಂಬಂಧಿಸಿದಂತೆ, 2017–18ನೇ ಸಾಲಿನ ವಾರ್ಷಿಕ ಲೆಕ್ಕಪತ್ರದಲ್ಲಿ ರೂ.3,33,240/– ಗಳು ವೆಚ್ಚವಾಗಿರುತ್ತದೆ ಆದರೆ ತಾವು ರೂ,2,54,53,418/–ಗಳು ಆಕ್ಷೇಪಣೆ ವೆಚ್ಚದ ಪಟ್ಟಿಯಲ್ಲಿ ನಮೂದಿಸಲಾಗಿದೆ.<br>ಮೇಲಿನ ಆಯವ್ಯಯದ ಯಾವುದೇ ಶೀರ್ಷಿಕೆಗಳಲ್ಲಿ ನಿಗದಿಪಡಿಸಿದ ಮೊತ್ತಕ್ಕಿಂತ ಹೆಚ್ಚುವರಿಯಾಗಿ ವೆಚ್ಚವಾಗಿರುವುದಿಲ್ಲ ಆದರೆ ಆಕ್ಷೇಪಿತ ಪಟ್ಟಿಯಲ್ಲಿ ನಮೂದಾಗಿರುವ ಮೊಬಲಗಿಗೂ ಪರೀಕ್ಷಾ ಖಾತೆ ವಾರ್ಷಿಕ ಲೆಕ್ಕಪತ್ರಕ್ಕೂ ತಾಳೆಯಾಗದೇ ಇರುವುದರಿಂದ, ಸದರಿ ಆಕ್ಷೇಪಿತ ಮೊಬಲಗಿನ ವಿವರಗಳ ಸಂಪೂರ್ಣ ಮಾಹಿತಿಯನ್ನು ಒದಗಿಸುವಂತೆ ಕೊರಲಾಗಿದೆ.<br>ಶೀರ್ಷಿಕೆ 189, ಮತ್ತು 266 ಶೀರ್ಷಿಕೆಗಳಲ್ಲಿ ಆಯವ್ಯಯದಲ್ಲಿ ನಿಗದಿಪಡಿಸಿರುವ ಮೊತ್ತಕ್ಕಿಂತ ಹೆಚ್ಚಿನ ಮೊಬಲಗನ್ನು ವೆಚ್ಚ ಮಾಡಲಾಗಿದೆ ಈ ಬಗ್ಗೆ ವಿ.ವಿ ಪ್ರಾಧಿಕಾರದಿಂದ ಅನುಮೋದನೆ ಪಡೆಯಲು ಕ್ರಮ ಕೈಗೊಳ್ಳಲಾಗುವುದು. ಹಾಗೂ ಇನ್ನು ಮುಂದೆ ಈ ರೀತಿಯಾಗದಂತೆ ಕ್ರಮ ವಹಿಸಲಾಗುವುದು.<br><br>**ಸಹೋದ್ಯಮ ಕೋರ್ಸುಗಳು**<br>ಶೀರ್ಷಿಕೆ 2017ಕ್ಕೆ ಸಂಬಂಧಿಸಿದಂತೆ, 2018–19 ನೇ ಸಾಲಿನ ಆಯವ್ಯಯ ತಯಾರಿಸುವಾಗ 2017–18 ನೇ ಸಾಲಿನ ಪರಿಷ್ಕೃತ ಅಂದಾಜಿನ ಕಾಲಂನಲ್ಲಿ ರೂ–5,00,00,000./– ಗಳಿಗೆ ಮರುಹೊಂದಾಣಿಕೆ**(Re-apporation)** ಯಾಗಿದೆ.ಈ ಬಗ್ಗೆ 2018–19ನೇ ಸಾಲಿನ ಆಯವ್ಯಯ ಅಂದಾಜಿನ ಪರಿಷ್ಕೃತ ಕಾಲಂನಲ್ಲಿ ಗಮನಿಸಬಹುದಾಗಿದೆ. |

| | |
|---|---|
| | ಈ ನಿಟ್ಟಿನಲ್ಲಿ ದಯವಿಟ್ಟು ಮೇಲಿನ ಅಂಶಗಳನ್ನು ಪರಿಗಣಿಸಿ ಸದರಿ ಆಕ್ಷೇಪಣೆಯನ್ನು ಕೈ ಬಿಡಲು ಕೋರಿದೆ.<br><br>ನೀಡಿರುವ ಸೂಚನೆ ಸಲಹೆಗಳನ್ನು ಮುಂದಿನ ದಿನಗಳಲ್ಲಿ ಪಾಲಿಸಲು ಸೂಕ್ತ ಕ್ರಮ ವಹಿಸಲಾಗುವುದು.<br><br>ಆಯವ್ಯಯದಲ್ಲಿ ಒದಗಿಸಿರುವ ಅನುದಾನವನ್ನು ಅಭಿವೃದ್ಧಿ ಕಾರ್ಯಗಳಿಗೆ ಬಳಸಿಕೊಳ್ಳಲು ಸೂಕ್ತ ಕ್ರಮ ವಹಿಸಲಾಗುವುದು.<br><br>ಈ ನಿಟ್ಟಿನಲ್ಲಿ ಸದರಿ ಕಂಡಿಕೆಯಲ್ಲಿ ಪ್ರಸ್ತಾಪಿಸಲಾಗಿರುವ ಆಕ್ಷೇಪಣೆಯನ್ನು ಕೈ ಬಿಡುವಂತೆ ನಿವೇದಿಸಲಾಗಿದೆ. |
| **8.ಆಯವ್ಯಯದಲ್ಲಿ ಅನುದಾನ ನಿಗದಿಯಾಗಿಲ್ಲದಿದ್ದರೂ ವೆಚ್ಚ ಭರಿಸಿರುವುದು:–**<br><br>2017–18 ನೇ ಸಾಲಿನ ಆಯವ್ಯಯ ಅಂದಾಜುಗಳಲ್ಲಿ ಕೆಲವು ಶೀರ್ಷಿಕೆಗಳಲ್ಲಿ ಅನುದಾನ ನಿಗದಿಯಾಗಿಲ್ಲದಿದ್ದರೂ ವೆಚ್ಚ ಭರಿಸಿರುವುದನ್ನು ಗಮನಿಸಿದೆ. ವಿವರವನ್ನು ಅನುಬಂಧ–4 ರಲ್ಲಿ ನೀಡಿದೆ. ಶೀರ್ಷಿಕೆವಾರು ಅನುದಾನ ಹಂಚಿಕೆಯಾಗದೆ ವೆಚ್ಚ ಭರಿಸಿರುವುದು ನಿಯಮ ಬಾಹಿರ ಕ್ರಮವಾಗಿದೆ. ಈ ಬಗ್ಗೆ ಸೂಕ್ತ ವಿವರಣೆಯನ್ನು ನೀಡುವಂತೆ ತಿಳಿಸಿದೆ. | ವಾರ್ಷಿಕ ಆಯವ್ಯಯ ಅಂದಾಜು ತಯಾರಿಸುವ ಸಂದರ್ಭದಲ್ಲಿ ಪ್ರಸಕ್ತ ಸಾಲಿನ ವರ್ಷದ ಕಾಮಗಾರಿಗಳ ಗುರಿಯನ್ನು ಗುರುತಿಸಿ ಪ್ರಸ್ತುತ ವರ್ಷದ ಅಂದಾಜು ಪಟ್ಟಿಯನ್ನು ತಯಾರಿಸಲಾಗುತ್ತದೆ ಹಾಗೂ ಅದರಂತೆ ಕಾಮಗಾರಿಗಳನ್ನು ನಿರ್ವಹಿಸಲಾಗುತ್ತದೆ, ಆದರೆ ಪ್ರಸಕ್ತ ಸಾಲಿನ ಮಧ್ಯಂತರದಲ್ಲಿ ಅನಿವಾರ್ಯ ಕಾರಣಗಳಿಂದ ಹಲವು ಸಣ್ಣ ಪುಟ್ಟ ಕಾಮಗಾರಿಗಳನ್ನು ನಿರ್ವಹಿಸಲೇಬೇಕಾದ ಅನಿವಾರ್ಯತೆ ಬಂದಾಗ ಅಂತಹ ಇಲಾಖಾ ನಿಯಮಾನುಸಾರ ಕಾಮಗಾರಿಗಳಿಗೆ ಸಂಬಂಧ ಪಟ್ಟ ಪ್ರಾಧಿಕಾರದಿಂದ ಪೂರ್ವಾನುಮತಿ ಪಡೆದುಕೊಂಡು ಕಾಮಗಾರಿಗಳನ್ನು ನಿರ್ವಹಿಸಿ ಸದರಿ ಕಾಮಗಾರಿಗಳ ಬಿಲ್ಲುಗಳಿಗೆ ವೆಚ್ಚವನ್ನು ಭರಿಸಲಾಗಿರುತ್ತದೆ ಈ ನಿಟ್ಟಿನಲ್ಲಿ 2017–18ನೇ ಸಾಲಿನ ಲೆಕ್ಕ ಪರಿಶೋಧನೆಯಲ್ಲಿ ಗಮನಿಸಿ ಪ್ರಸ್ತಾಪಿಸಿ ಸೂಚಿಸಿರುವ ಮೇರೆಗೆ ಇನ್ನು ಮುಂದೆ ಈ ರೀತಿಯ ಕುಂದು ಬಾರದಂತೆ ಎಚ್ಚ ರ ವಹಿಸಿ ಆಯವ್ಯಯ ಪಟ್ಟಿಯಲ್ಲಿ ಸೇರಿಸಿ ಅನುಮೋದನೆ ಪಡೆಯಲು ಸೂಕ್ತ ಕ್ರಮ ವಹಿಸಲಾಗುವುದೆಂಬ ಅಂಶವನ್ನು ಆದ್ಯ ಗಮನಕ್ಕೆ ತರಲಾಗಿದೆ. |
| **ಯುವರಾಜ ಕಾಲೇಜು ಆಯವ್ಯಯ (Budget)**<br>**9.ಆಯವ್ಯಯ ಅಂದಾಜುಗಳನ್ನು ಯುವರಾಜ ಕಾಲೇಜು ಹಾಗೂ ಮೈಸೂರು ವಿಶ್ವವಿದ್ಯಾನಿಲಯಗಳ ಎರಡೂ ಕಡೆಯಲ್ಲಿ ತಯಾರಿಸುತ್ತಿರುವ ಕುರಿತು:–(ಯುವರಾಜ ಕಾಲೇಜು)**<br><br>2017–18ನೇ ಸಾಲಿನ ಯುವರಾಜ ಕಾಲೇಜಿನ ವಿವಿಧ ಬ್ಯಾಂಕ್ ಖಾತೆಗಳು, ಆದಾಯ ಮತ್ತು ವೆಚ್ಚದ ವಿವರಗಳನ್ನು ಪರಿಶೀಲಿಸಲಾಗಿ ಖಾಯಂ ಬೋಧಕೇತರ ನೌಕರರ/ಖಾಯಂ ಬೋಧಕ | ಪ್ರಸ್ಥಾವಿಕ ಕಂಡಿಕೆಯಲ್ಲಿ ಯುವರಾಜ ಕಾಲೇಜಿನಲ್ಲಿ ಪ್ರತ್ಯೇಕವಾದ ಆಯವ್ಯಯವನ್ನು ತಯಾರಿಸಲಾಗುತ್ತಿರುವುದರ ಬಗ್ಗೆ ಆಡಿಟ್ ವರದಿಯಲ್ಲಿ ಸೂಚಿತವಾಗಿರುವ ಅಂಶಗಳನ್ನು |

| | |
|---|---|
| ವರ್ಗದವರ ವೇತನ ಭತ್ಯೆಗಳು, ಕಟ್ಟಡ ನಿರ್ವಹಣೆ, ವೈದ್ಯಕೀಯ ವೆಚ್ಚದ ಹುಂಡಿಗಳು, ನೌಕರರಿಗೆ ಮುಂಗಡ ಹುಂಡಿಗಳನ್ನು ಪಾವತಿಸುವ ಆಯವ್ಯಯ ಅಂದಾಜಿನಲ್ಲಿ ಅಂದಾಜು ಮಾಡಿ ವೆಚ್ಚ ಭರಿಸಲಾಗಿದೆ. ಹಾಗೂ ಯುವರಾಜ ಕಾಲೇಜು ವತಿಯಿಂದ ಯೋಜನೆ ಮತ್ತು ಯೋಜನೇತರದ ಆದಾಯ ಮತ್ತು ವೆಚ್ಚಗಳ ಆಯವ್ಯಯ ಅಂದಾಜುಗಳನ್ನು ತಯಾರಿಸಿ ತಾತ್ಕಾಲಿಕ/ಸಂಚಿತ/ಅತಿಥಿ ಉಪನ್ಯಾಸಕರು ಮತ್ತು ಬೋಧಕೇತರ ನೌಕರರುಗಳಿಗೆ ವೇತನ ಭತ್ಯೆಗಳು ಪ್ರಯೋಗಾಲಯಗಳ ರಾಸಾಯನಿಕ ಪರಿಕರಗಳ, ಪರೀಕ್ಷಾ ವೆಚ್ಚಗಳು ಹಾಗೂ ಕಾಲೇಜಿನ ದೈನಂದಿನ ವೆಚ್ಚಗಳಿಗೆ ಆಯವ್ಯಯ ಅಂದಾಜನ್ನು ತಯಾರಿಸಿ ವೆಚ್ಚ ಭರಿಸುತ್ತಿರುವುದನ್ನು ಪರಿಶೀಲಿಸಲಾಗಿದೆ. ಒಂದು ಸಂಸ್ಥೆಯ ಆಯವ್ಯಯವನ್ನು ಪೂರ್ಣವಾಗಿ ಒಂದೇ ಕಡೆ ಸಿದ್ಧಪಡಿಸಿ ವೆಚ್ಚ ಭರಿಸಬೇಕಾಗಿರುತ್ತದೆ. ಆದರೆ ಮೈಸೂರು ವಿಶ್ವವಿದ್ಯಾನಿಲಯ ಹಾಗೂ ಯುವರಾಜ ಕಾಲೇಜು ಎರಡರಲ್ಲಿಯೂ ಆಯವ್ಯಯ ಅಂದಾಜು ತಯಾರಿಸಿ ವೆಚ್ಚ ಭರಿಸಿ ವಾರ್ಷಿಕ ಲೆಕ್ಕಪತ್ರಗಳನ್ನು ನಿರ್ವಹಿಸಲಾಗುತ್ತಿದೆ. ಈ ಬಗ್ಗೆ ಹಿಂದಿನ ಲೆಕ್ಕ ತನಿಖಾ ವರದಿಗಳಲ್ಲಿ ಆಕ್ಷೇಪಿಸಲಾಗಿದ್ದರೂ ಸಹ ಈ ಕ್ರಮವನ್ನು ಅನುಸರಿಸುತ್ತಿರುವುದು ಕಂಡುಬಂದಿದೆ. ಏಕೆ ಈ ರೀತಿ ಮಾಡಲಾಗಿದೆ ಎಂಬ ಬಗ್ಗೆ ವಿವರಣೆ ನೀಡಲು ಸೂಚಿಸಿದೆ.<br><br>ಯುವರಾಜ ಕಾಲೇಜಿಗೆ ಯು.ಜಿ.ಸಿ ವತಿಯಿಂದ ಶೈಕ್ಷಣಿಕ ಸ್ವಾಯತ್ತತೆಯನ್ನು ನೀಡಿ ಅಭಿವೃದ್ಧಿ ಕಾರ್ಯಗಳಿಗೆ ಅಭಿವೃದ್ಧಿ ಅನುದಾನವನ್ನು ಮಂಜೂರು ಮಾಡಲಾಗಿದೆ. ಆದರೆ ಆರ್ಥಿಕ ಸ್ವಾಯತ್ತತೆಯನ್ನು ಹಾಗೂ ಆಡಳಿತಾತ್ಮಕ ಸ್ವಾಯತ್ತತೆಯನ್ನು ಯು.ಜಿ.ಸಿ ವತಿಯಿಂದಾಗಲಿ/ಸರ್ಕಾರದ ವತಿಯಿಂದಾಗಲೀ ನೀಡಿರುವ ಬಗ್ಗೆ ಯಾವುದೇ ಅಧ್ಯಾದೇಶಗಳು/ಆದೇಶಗಳನ್ನು ಹಾಜರುಪಡಿಸಿರುವುದಿಲ್ಲ.<br>ಯುವರಾಜ ಕಾಲೇಜು ವಿಭಾಗಕ್ಕೆ ಆರ್ಥಿಕ ಸ್ವಾಯತ್ತತೆ ನೀಡದೆ ಶೈಕ್ಷಕಣಿಕ ಪರೀಕ್ಷಾ ಕಾರ್ಯಗಳ ಸ್ವಾಯತ್ತತೆಯನ್ನು ಮಾತ್ರ ನೀಡಲಾಗಿರುವುದರಿಂದ ಮೈಸೂರು ವಿಶ್ವವಿದ್ಯಾನಿಲಯದ ವತಿಯಿಂದಲೇ ಅಂಗಸಂಸ್ಥೆಗಳಿಗೂ ಆಯವ್ಯಯವನ್ನು ತಯಾರಿಸುವಂತೆ ಹಾಗೂ ಯುವರಾಜ ಕಾಲೇಜಿಗೆ ಸಂಬಂಧಿಸಿದ ಆರ್ಥಿಕ ವ್ಯವಹಾರಗಳ ಬಗ್ಗೆ ಆಯವ್ಯಯವನ್ನು ಮೈಸೂರು ವಿಶ್ವವಿದ್ಯಾನಿಲಯದ ವತಿಯಿಂದ ತಯಾರಿಸದಿರುವ ಬಗ್ಗೆ ಶಿಸ್ತು ಕ್ರಮ ಕೈಗೊಳ್ಳುವಂತೆ ಸೂಚಿಸಿದೆ. | ಗಮನಿಸಲಾಗಿದೆ ಮತ್ತು ವರದಿಯಲ್ಲಿ ಸೂಚಿತವಾಗಿರುವಂತೆ ಮುಂದಿನ ಆರ್ಥಿಕ ವರ್ಷದಿಂದ ವಿಶ್ವವಿದ್ಯಾನಿಲಯದಿಂದಲೇ ತಯಾರಿಸಲಾಗುವ ಸಮಗ್ರ ಆಯವ್ಯಯಕ್ಕೆ ಯುವರಾಜ ಕಾಲೇಜಿನಿಂದ ಸಲ್ಲಿಸಬೇಕಾದ ಎಲ್ಲಾ ಪೂರಕ ಮಾಹಿತಿಗಳನ್ನು ನಿಗದಿತವಾದ ಅವಧಿಯಲ್ಲಿ ಸಲ್ಲಿಸಲಾಗುವುದು. ಮತ್ತು ಸದರಿ ಕಾಲೇಜಿನ ಎಲ್ಲಾ ನಿರೀಕ್ಷಿತ ಬೇಡಿಕೆಗಳು ಮತ್ತು ವೆಚ್ಚಗಳು ಆಯವ್ಯಯದಲ್ಲಿ ಸೇರ್ಪಡೆ ಆಗುವಂತೆ ಗಮನ ಹರಿಸಲಾಗುವುದು ಎಂಬ ಅಂಶಗಳನ್ನು ಲೆಕ್ಕ ಪರಿಶೋಧನೆ ಅವಗಾಹನೆಗೆ ತರಲಾಗಿದೆ. |
| **ಯುವರಾಜ ಕಾಲೇಜು ಆರ್ಥಿಕ ಸ್ಥಿತಿ**<br>**10.ಆರ್ಥಿಕ ಸ್ಥಿತಿ ಪರಿಶೀಲನೆ:– (ಯುವರಾಜ ಕಾಲೇಜು)**<br><br>ಮೈಸೂರು ವಿಶ್ವವಿದ್ಯಾನಿಲಯದ ಯುವರಾಜ ಕಾಲೇಜು (ಸ್ವಾಯತ್ತ) ಮೈಸೂರು ಈ ಸಂಸ್ಥೆಯ 2017–18ನೇ ಸಾಲಿನ ಲೆಕ್ಕ ಪರಿಶೋಧನೆಯನ್ನು ಕೈಗೊಂಡಿರುವ ಸಂದರ್ಭದಲ್ಲಿ ಸಂಸ್ಥೆಯಲ್ಲಿ 17 ಉಳಿತಾಯ ಖಾತೆಗಳು ಚಾಲ್ತಿಯಲ್ಲಿರುತ್ತದೆ. ಸದರಿ ಖಾತೆಗಳಲ್ಲಿ 2 ಖಾತೆಗಳಿಗೆ | ಪ್ರಸ್ಥಾವಿತ ಕಂಡಿಕೆಯಲ್ಲಿನ ವಿಷಯಕ್ಕೆ ಸಂಬಂಧಿಸಿದಂತೆ ಸದರಿ ಕಾಲೇಜಿನಲ್ಲಿ ಒಟ್ಟು 16 ವಿವಿಧ ಬ್ಯಾಂಕ್ ಖಾತೆಗಳಲ್ಲಿ ಆರ್ಥಿಕ ವಹಿವಾಟು ನಡೆಸಲಾಗುತ್ತಿದ್ದು, ಇವುಗಳಲ್ಲಿ F & R A/c ಮತ್ತು GRA A/c ಖಾತೆಯ ಆರ್ಥಿಕ ವಹಿವಾಟಿನ ಬಗ್ಗೆ ನಗದು ಪುಸ್ತಕ ನಿರ್ವಹಿಸಿ |

| | |
|---|---|
| ಮಾತ್ರ ನಗದು ಪುಸ್ತಕ ನಿರ್ವಹಿಸಲಾಗಿದ್ದು, ಉಳಿದ 15 ಖಾತೆಗಳಿಗೆ ನಗದು ಪುಸ್ತಕವನ್ನು ನಿರ್ವಹಿಸಿರುವುದಿಲ್ಲ ಕರ್ನಾಟಕ ಆರ್ಥಿಕ ಸಂಹಿತೆ 1958 ಅನುಚ್ಛೇಧ 328 ರಿಂದ 332 ರವರೆಗೆ ವಿವರಿಸಿರುವಂತೆ ನಗದು ಪುಸ್ತಕವನ್ನು ನಿರ್ವಹಿಸಲು ಸೂಚಿಸಿದೆ. 17 ಉಳಿತಾಯ ಖಾತೆಗಳ ಆರ್ಥಿಕ ಪರಿಸ್ಥಿತಿ ವಿವರಗಳನ್ನು ಸಂಬಂಧಪಟ್ಟ ಬ್ಯಾಂಕ್ ಪಾಸು ಪುಸ್ತಕಗಳ/ಬ್ಯಾಂಕ್ ಸ್ಟ್ರೋಲ್ ಆಧಾರದ ಮೇಲೆ ಆರ್ಥಿಕ ವ್ಯವಹಾರಗಳನ್ನು ಕೆಳಕಂಡ ಘೋಷ್ವಾರೆಯಂತೆ ವಿವರಿಸಿದೆ.17 ಉಳಿತಾಯ ಖಾತೆಗಳ ಪ್ರತಿ ಖಾತೆಗೆ ಸಂಬಂಧಿಸಿದಂತೆ ಆರ್ಥಿಕ ಸ್ಥಿತಿಯ ವಿವರಗಳನ್ನು ಅನುಬಂಧ–5ರಲ್ಲಿ ವಿವರಿಸಲಾಗಿದೆ. | ಲೆಕ್ಕಪರಿಶೋಧನೆಗೆ ಹಾಜರುಪಡಿಸಲಾಗಿದೆ ಎಂದು ಉಲ್ಲೇಖಿಸಲಾಗಿದೆ. ಉಳಿದ 14 ಬ್ಯಾಂಕ್ ಖಾತೆಗೆ ಸಂಬಂಧಿಸಿದಂತೆ ನಗದು ಪುಸ್ತಕ ನಿರ್ವಹಿಸದೇ ಇರುವ ಬಗ್ಗೆ ಪ್ರಸ್ತಾಪಿಸಲಾಗಿದೆ.<br><br>ಪ್ರಸ್ತುತ 2017–18ನೇ ಸಾಲಿನ ಆಡಿಟ್ ವರದಿಯಲ್ಲಿ ಉಲ್ಲೇಖಿಸಲಾಗಿರುವ ಉಳಿದ 14 ಬ್ಯಾಂಕ್ ಖಾತೆಗಳಿಗೆ ಸಂಬಂಧಿಸಿದ ಆರ್ಥಿಕ ವಹಿವಾಟುಗಳಿಗೆ ನಗದು ಪುಸ್ತಕವನ್ನು ನಿರ್ವಹಿಸಿ ಮುಂದಿನ ಲೆಕ್ಕಪರಿಶೋಧನೆಗೆ ಹಾಜರುಪಡಿಸಲಾಗಿದೆ. ಆದಕಾರಣ ಪ್ರಸ್ಥಾವಿತ ಕಂಡಿಕೆ ಕೈಬಿಡಲು ಕೋರಿದೆ. |

| | **ಮೊತ್ತ (ರೂ.ಗಳಲ್ಲಿ)** |
|---|---|
| ದಿನಾಂಕ:01.04.2017ಕ್ಕೆ ಪ್ರಾರಂಭ ಶಿಲ್ಕು | 4,60,07,108.26 |
| 2017–18ನೇ ಸಾಲಿನಲ್ಲಿ ಸ್ವೀಕೃತಿ | 11,99,57,442.50 |
| **ಒಟ್ಟು** | **16,59,64,550.76** |
| 2017–18ನೇ ಸಾಲಿನ ಖರ್ಚು | 10,51,64,546.70 |
| ದಿನಾಂಕ:31.3.2018ರ ಅಂತಿಮ ಶಿಲ್ಕು | 6,08,00,004.06 |

**11.ಹೂಡಿಕೆಗಳು:– (ಯುವರಾಜ ಕಾಲೇಜು)**

**2017–18ನೇ ಸಾಲಿಗೆ ಹೂಡಿಕೆ ಮಾಡಿರುವ ಠೇವಣಿ ವಿವರ:–**

ಯುವರಾಜ ಕಾಲೇಜು ವಿಭಾಗದ 2017–18ನೇ ಸಾಲಿನ ಸಾಮಾನ್ಯ ನಿಧಿ ಹಾಗೂ ಇತರೆ ಖಾತೆಗಳಲ್ಲಿ ಹೂಡಿಕೆ ಮಾಡಿರುವ ಠೇವಣಿ ಮೊತ್ತವು ದಿನಾಂಕ:31.03.2018ರ ಅಂತ್ಯಕ್ಕೆ ರೂ.1,01,83,517/– ಗಳನ್ನು ವಿವಿಧ ಬ್ಯಾಂಕ್ ಖಾತೆಗಳಲ್ಲಿ ತೊಡಗಿಸಲಾಗಿದ್ದು, ಹೂಡಿಕೆ ಮಾಡಿರುವ ಮೊತ್ತಕ್ಕೆ ಸಂಬಂಧಿಸಿದಂತೆ BOM ಸಭೆಯಲ್ಲಿ ಅನುಮೋದನೆ ಪಡೆದಿರುವ ಹಾಗೂ ಇ–ಟೆಂಡರ್ ಕರೆದು ಹೂಡಿಕೆಗೆ ಬಡ್ಡಿದರ ನಿಗದಿಪಡಿಸಿರುವುದಕ್ಕೆ ಆದೇಶ ಪ್ರತಿ ಹಾಜರುಪಡಿಸಿರುವುದಿಲ್ಲ. ಹಾಗೂ ನಿಶ್ಚಿತ ಠೇವಣಿ ಮೊತ್ತಕ್ಕೆ ಆದಾಯ ತೆರಿಗೆ ಕಟಾಯಿಸಿರುವ ವಿವರಗಳನ್ನು ಒದಗಿಸಲು ಸೂಚಿಸಿದೆ.

| **ಕ್ರ.ಸಂ** | **ಬ್ಯಾಂಕ್‌ನ ಹೆಸರು** | **ಠೇವಣಿ ಮೊಬಲಗು (ರೂ.ಗಳಲ್ಲಿ)** |
|---|---|---|
| 1 | SBI | 98,54,619 |
| 2 | University Employees Credit Co-Operative Society | 3,28,898 |
| | **ಒಟ್ಟು** | **1,01,83,517** |

ನಿಶ್ಚಿತ ಠೇವಣಿಗಳ ವಿವರ ಪರಿಶೀಲಿಸಿದಾಗ SAF (105) ದತ್ತಿ ನಿಧಿ ಖಾತೆಯಲ್ಲಿ

ಪ್ರಸ್ಥಾವಿತ ಕಂಡಿಕೆಯಲ್ಲಿ ಯುವರಾಜ ಕಾಲೇಜು ಮೈಸೂರು 2017–18ನೇ ಸಾಲಿನ ಲೆಕ್ಕಪರಿಶೋಧನಾವರದಿಯಲ್ಲಿ ಸೂಚಿಸಿರುವಂತೆ ಹೂಡಿಕೆ ವಿಧಾನಗಳನ್ನು ಅನುಸರಿಸಲು ಕ್ರಮವಹಿಸಲಾಗಿದೆ ಮತ್ತು ಲೆಕ್ಕಪರಿಶೋಧನ ವರದಿಯಲ್ಲಿ SAF(105) ದತ್ತಿ ನಿಧಿಯ ಖಾತೆಯಲ್ಲಿನ ಮೊತ್ತ ರೂ.3,28,898/– ನ್ನು ವಿಶ್ವವಿದ್ಯಾನಿಲಯದ ನೌಕರರ ಸಹಕಾರಿ ಸಂಘ ದಲ್ಲಿ ನಿಶ್ಚಿತ ಠೇವಣಿಯಾಗಿ ಹೂಡಿಕೆ ಮಾಡಿರುವುದನ್ನು ಆಕ್ಷೇಪಿಸಿ ರಾಷ್ಟ್ರೀಕೃತ ಬ್ಯಾಂಕ್‌ಗಳಲ್ಲಿ ಹೂಡಿಕೆ ಮಾಡಲು ಸೂಚಿಸಲಾಗಿತ್ತು ಅದರನ್ವಯ ಪ್ರಸುತ್ತ ಎಸ್.ಬಿ.ಐ (ವಿಶ್ವವಿದ್ಯಾನಿಲಯದ ಶಾಖೆ ಮೈಸೂರು) ಹೂಡಿಕೆ ಮಾಡಲು ಕ್ರಮವಹಿಸಲಾಗಿದೆ.

ಮೈಸೂರು ವಿಶ್ವವಿದ್ಯಾನಿಲಯದ ನೌಕರರ ಸಹಕಾರಿ ಸಂಘದಿಂದ ಹೂಡಿಕೆಗಳನ್ನು ಹಿಂಪಡೆದು ಹೊಸದಾಗಿ ಹೂಡಿಕೆ ಮಾಡಿರುವ ವಿವರ ಈ ರೀತಿ ಇದೆ

| **ಕ್ರ ಸಂ** | **ಎಫ್.ಡಿ.ಆರ್ ನಂ** | **ದಿನಾಂಕ** | **ಹೂಡಿಕೆ ಮೊತ್ತ** |
|---|---|---|---|
| 1 | 40342682418 | 06.08.2021 | 202844 |
| 2 | 40342682871 | 06.08.2021 | 28500 |
| 3 | 4034268699 | 06.08.2021 | 111638 |
| 4 | 40342683466 | 06.08.2021 | 14000 |

ರೂ.3,28,898/– ಮೊಬಲಗನ್ನು University Employees Credit Co-Operative Society ಸಂಘದಲ್ಲಿ ಠೇವಣಿ (FDR) ಹೂಡಿಕೆ ಮಾಡಲಾಗಿದೆ. ಠೇವಣಿಯನ್ನು ರಾಷ್ಟ್ರೀಕೃತ ಬ್ಯಾಂಕ್‌ಗಳಲ್ಲಿ ತೊಡಗಿಸಬೇಕಾಗಿದ್ದು, ಕೂಡಲೇ ಠೇವಣಿ ಮೊತ್ತವನ್ನು ರಾಷ್ಟ್ರೀಕೃತ ಬ್ಯಾಂಕ್‌ಗಳಲ್ಲಿ ಹೂಡಿಕೆ ಮಾಡಿ ವಿವರಗಳನ್ನು ಹಾಜರುಪಡಿಸುವವರೆಗೆ **ರೂ.3,28,898/– ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.**

**ಊ.ನಿಶ್ಚಿತ ಠೇವಣಿಯ ಹೂಡಿಕೆಯಲ್ಲಿನ ನ್ಯೂನ್ಯತೆಗಳು:– (ಯುವರಾಜ ಕಾಲೇಜು)**

**I. ಠೇವಣಿ ಹೂಡಿಕೆಯಲ್ಲಿ ಮಾನದಂಡಗಳನ್ನು ಪಾಲಿಸದಿರುವುದು:–**

Karnataka State Department Of Public Enterprises ರವರು ಹೊರಡಿಸಿರುವ ಸುತ್ತೋಲೆಯಲ್ಲಿ ಠೇವಣಿ ಮಾಡುವಲ್ಲಿ ಅನುಸರಿಸಬೇಕಾದ ಕ್ರಮಗಳ ಬಗ್ಗೆ ಮಾನದಂಡಗಳನ್ನು ನೀಡಿದೆ ಆದರೆ ಇಲ್ಲಿ ಈ ಮಾನದಂಡಗಳನ್ನು ಅನುಸರಿಸದಿರುವುದು ಕಂಡುಬಂದಿರುತ್ತದೆ. ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯವು ಠೇವಣಿ ಇಡುವ ಮೊದಲು ಈ ಮಾನದಂಡಗಳನ್ನು ಪಾಲಿಸುವುದು ಹೂಡಿಕೆಯ ಸುರಕ್ಷತಾ ದೃಷ್ಟಿಯಿಂದ ಅಗತ್ಯವಿರುತ್ತದೆ. ಬ್ಯಾಂಕ್‌ಗಳಲ್ಲಿ ಠೇವಣಿಗಳನ್ನು ಹೂಡಲು ಈ ಕೆಳಕಂಡ ಮಾನದಂಡಗಳನ್ನು ಅನುಸರಿಸಿ ನಂತರ ಬ್ಯಾಂಕ್‌ಗಳಲ್ಲಿ ಠೇವಣಿ ಮಾಡಬೇಕಾಗಿರುತ್ತದೆ.

**ಮಾನದಂಡಗಳು:–**

| | | |
|---|---|---|
| 1 | **Bank Networth For Nationalized SCBS for RRBS** | **500 Crores**<br>**100 Crores** |
| 2 | **Bank Profitability Track Record** | **3 Years** |
| 3 | **Capital Adequacy Ratio** | 10% |
| 4 | **NPA** | 2% |
| 5 | **Participation in Governments Development Programme** | **Atleast 5 Programme** |

ಸರದಿ ಸಾಲಿನ ಎಲ್ಲಾ ನಿಶ್ಚಿತ ಠೇವಣಿಗಳ ಹೂಡಿಕೆ/ಮರುಹೂಡಿಕೆಗೆ ಸಂಬಂಧಿಸಿದಂತೆ ದಿನಾಂಕ:31.03.2018ರ ಅಂತ್ಯಕ್ಕೆ ಎಲ್ಲ ಠೇವಣಿಗಳ ಬ್ಯಾಂಕ್‌ವಾರು ಅಂತಿಮ ಶಿಲ್ಕಿನ ವಿವರಗಳ ದೃಢೀಕರಣ ಪತ್ರಗಳನ್ನು ಬ್ಯಾಂಕ್ ವ್ಯವಸ್ಥಾಪಕರಿಂದ ಪಡೆದು ಲೆಕ್ಕ ಪರಿಶೋಧಗೆ ಹಾಜರುಪಡಿಸಿಲ್ಲದ ಕಾರಣ ಖಚಿತಪಡಿಸಲು ಸಾಧ್ಯಾವಾಗಿರುವುದಿಲ್ಲ ಈ ಸಂಬಂಧ ಈ ಕೆಳಕಂಡ ನ್ಯೂನತೆಗಳನ್ನು ಗಮನಿಸಲಾಗಿದೆ.

| | | | |
|---|---|---|---|
| 5 | 40342683319 | 06.08.2021 | 17600 |
| | | **ಒಟ್ಟು ರೂ** | **374582** |

ಈ ಮೊತ್ತವು ಹೂಡಿಕೆ ಮಾಡಿದ ಮೊತ್ತಕ್ಕೆ ಜಮೆಯಾಗಿರುವ ಬಡ್ಡಿಯೂ ಸೇರಿದಂತೆ ಮೈಸೂರು ವಿಶ್ವವಿದ್ಯಾನಿಲಯದ ನೌಕರರ ಸಹಕಾರಿ ಸಂಘದಿಂದ ಹಿಂಪಡೆದು ಎಸ್,ಬಿ,ಐ ನಲ್ಲಿ ಹೊಸದಾಗಿ ಹೂಡಿಕೆ ಮಾಡಿರುವ ಮೊತ್ತವಾಗಿದೆ. (ಈ ಸಂಬಂಧದ ಎಫ್,ಡಿ,ಆರ್ ಪತ್ರಗಳನ್ನು ಅಡಕಗೊಳಿಸಿದೆ.)

ಅಲ್ಲದೇ ಆಡಿಟ್ ವರದಿಯಲ್ಲಿ ಹೂಡಿಕೆಗೆ ಸಂಬಂಧಿಸಿದಂತೆ ಸೂಚಿತವಾಗಿರುವ ಸಲಹೆಗಳು ಸೂಚನೆಗಳು ಮಾನದಂಡಗಳನ್ನು ಹೊಸ ಹೂಡಿಕೆಗಳನ್ನು ಮಾಡುವಾಗ ಅನುಸರಿಸಲು ಕ್ರಮವಹಿಸಲಾಗಿದೆ.

ಆದ ಕಾರಣ ಸೂಚಿತ ಆಕ್ಷೇಪಣೆ ಕಂಡಿಕೆ ಕೈ ಬಿಡಲು ಕೋರಿದೆ.

| | |
|---|---|
| 1. ಹೂಡಿಕೆ ಮಾಡಿರುವ ಸಂಪನ್ಮೂಲವನ್ನು ಯಾವ ಉದ್ದೇಶಕ್ಕೆ ಹೂಡಿಕೆ ಮಾಡಲಾಗಿದೆ ಎನ್ನುವ ವಿವರವನ್ನು ಮತ್ತು ನಿಶ್ಚಿತ ಠೇವಣಿಗಳನ್ನು ಕಛೇರಿಯಲ್ಲಿ ನಿರ್ವಹಿಸಿರುವ ನಿಗದಿತ ನಮೂನೆಯ ವಹಿಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸಿರುವುದಿಲ್ಲ<br>2. 2018–19ನೇ ಸಾಲಿನಲ್ಲಿ ಒಟ್ಟು 688 ಸಂಖ್ಯೆ ಎಫ್.ಡಿ.ಆರ್ ಗಳನ್ನು ನಿರ್ವಹಿಸಲಾದ ಗಣಕೀಕೃತ ಪ್ರತಿಯಲ್ಲಿ ಪರಿಶೀಲಿಸಿದ್ದು, ರಾಷ್ಟ್ರೀಕೃತ ಬ್ಯಾಂಕ್‌ಗಳಿಂದ ದರಪಟ್ಟಿ ಆಹ್ವಾನಿಸಿದ ತುಲನಾತ್ಮಕ ದರಪಟ್ಟಿ ಹಾಜರುಪಡಿಸಿರುವುದಿಲ್ಲ.<br>3. ಠೇವಣಿ ಮೊತ್ತದ ಮೇಲೆ ಸಂದಾಯವಾದ ಬಡ್ಡಿ ಮೊತ್ತಕ್ಕೆ ಆದಾಯ ತೆರಿಗೆ ಕಟಾಯಿಸಿರುವ ಟಿ.ಡಿ.ಎಸ್ ಪ್ರಮಾಣ ಪತ್ರ ಹಾಜರುಪಡಿಸಿರುವುದಿಲ್ಲ.<br>4. ಎಫ್.ಡಿ.ಆರ್ ಗಳನ್ನು ಹಿಂಪಡೆದ ಮತ್ತು ಮರುಹೂಡಿಕೆ ಮಾಡಿದ ವಿವರಗಳ ಕಡೆಗಳನ್ನು ಲೆಕ್ಕ ತನಿಖೆಗೆ ಹಾಜರುಪಡಿಸಿರುವುದಿಲ್ಲ ಹಾಗೂ ನವೀಕರಿಸಲಾದ ಜೆರಾಕ್ಸ್ ಪ್ರತಿಗಳನ್ನು ಪಕ್ವವಾದ ಠೇವಣಿ ರಶೀದಿಗಳನ್ನು ಹಣಕಾಸು ಅಧಿಕಾರಿಗಳಿಂದ ದೃಢೀಕರಿಸಿ ಹಾಜರುಪಡಿಸಿರುವುದಿಲ್ಲ.<br>ವಿಶ್ವವಿದ್ಯಾನಿಲಯವು Investment Committe ಯ ಮುಖಾಂತರ ಸಮಿತಿಯಲ್ಲಿ ಕೈಗೊಂಡ ನಿರ್ಣಯಗಳಂತೆ ಬ್ಯಾಂಕ್‌ಗಳಲ್ಲಿ ಠೇವಣಿ ಇಡುವುದು ವಿಶ್ವವಿದ್ಯಾನಿಲಯವು ಮಾಡಿಕೊಂಡಿರುವ Investment Policy (ಹೂಡಿಕೆ ನಿಯಮ)ಯಾಗಿರುತ್ತದೆ. ಈ ಸಮಿತಿಯಲ್ಲಿ ಠೇವಣಿ ಇಡಲು ಇಚ್ಛಿಸಿದಂತಹ ಬ್ಯಾಂಕ್‌ಗಳಿಂದ ದರಪಟ್ಟಿ ಹಾಗೂ ಬ್ಯಾಂಕ್ ಹೊಂದಿರುವ Quotation Track Record (Based on DPSE Parameters)ನ್ನು ಪಡೆದು ಸಮಿತಿಯಲ್ಲಿ ಮಂಡಿಸಿ ಯಾವ ಬ್ಯಾಂಕಿನಲ್ಲಿ ಠೇವಣಿ ಇಡಬೇಕು ಹಾಗೂ ಯಾವು ಬ್ಯಾಂಕ್‌ನಲ್ಲಿ ಠೇವಣಿ ಸುರಕ್ಷಿತ ಎಂಬುದನ್ನು ನಿರ್ಣಯಿಸಿ ಕ್ರಮ ಕೈಗೊಳ್ಳುವುದು ಸೂಕ್ತವಾದ ಹೂಡಿಕೆ ಕ್ರಮವಾಗಿದೆ. ಮೇಲ್ಕಂಡ ನ್ಯೂನತೆಗಳು ಹಾಗೂ ಹೂಡಿಕೆ ಮಾನದಂಡಗಳನ್ನು ಗಣನೆಗೆ ತೆಗೆದುಕೊಳ್ಳದೆ ಹೂಡಿಕೆ ಮಾಡಿರುವ ಅಧಿಕಾರಿ/ನೌಕರರ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಲು ಸೂಚಿಸಿದೆ. | |
| **12.ಸ್ವೀಕರಿಸಲಾದ ಮೊತ್ತ ಹಾಗೂ ಬ್ಯಾಂಕಿಗೆ ಜಮಾ ಮಾಡಲಾದ ಮೊತ್ತಕ್ಕೂ ವ್ಯತ್ಯಾಸವಿರುವ ಬಗ್ಗೆ:– (ಯುವರಾಜ ಕಾಲೇಜು)**<br>ಮೈಸೂರು ವಿಶ್ವವಿದ್ಯಾನಿಲಯ ಯುವರಾಜ ಕಾಲೇಜಿನ 2017–18ನೇ ಸಾಲಿನ ಸಾಮಾನ್ಯ ರೆವಿನ್ಯೂ ಖಾತೆಗೆ ಸಂಬಂಧಿಸಿದ ನಗದು ಪುಸ್ತಕದ ಅನ್ವಯ ಒಟ್ಟು ಸ್ವೀಕರಿಸಲಾದ ಮೊತ್ತ ರೂ.78,51,710/–ಗಳಾಗಿದೆ<br>ಸದರಿ ಸಾಲಿನಲ್ಲಿ ಸ್ವೀಕರಿಸಲಾದ ಮೊತ್ತವನ್ನು ಬ್ಯಾಂಕಿಗೆ ಜಮಾ ಮಾಡಲಾದ ಜಮಾ | ಪ್ರಸ್ತಾವಿಕ ಕಂಡಿಕೆಯಲ್ಲಿ ಯುವರಾಜ ಕಾಲೇಜು, ಮೈಸೂರು 2017–18ನೇ ಸಾಲಿನಲ್ಲಿ ವಿವಿಧ ಕೋರ್ಸುಗಳಿಗೆ ವಿದ್ಯಾರ್ಥಿಗಳಿಂದ ನಿಗದಿತ ರೂಪದಲ್ಲಿ ಮತ್ತು ಬ್ಯಾಂಕ್ ಆಪರೇಶನ್ಸ್ ಇಲ್ಲದ ದಿನಗಳಲ್ಲಿ ಮತ್ತು Internet Link ಇಲ್ಲದ ಸಮಯದಲ್ಲಿ ವಿದ್ಯಾರ್ಥಿಗಳ ಪ್ರೇಶಾತಿಗೆ ತೊಂದರೆ ಆಗದಿರಲಿ ಎಂಬ ಉದ್ದೇಶದಿಂದ ಡಿಡಿ ರೂಪದಲ್ಲಿ ಪ್ರವೇಶಾತಿ ಶುಲ್ಕ ಪಡೆದು |

ವಹಿಯನ್ನು ಪರಿಶೀಲಿಸಲಾಗಿ ರೂ.73,57,000/– ಜಮೆ ಮಾಡಿರುವುದು ಕಂಡುಬಂದಿರುತ್ತದೆ. ಇದರಿಂದಾಗಿ ಸ್ವೀಕರಿಸಲಾದ ಮತ್ತು ಜಮೆ ಮಾಡಲಾದ ಮೊತ್ತಕ್ಕೆ ರೂ.4,94,710/–ಗಳನ್ನು ಕಡಿಮೆ ಜಮಾ ಮಾಡಲಾಗಿರುತ್ತದೆ. ಈ ಮೊತ್ತದ ಬಗ್ಗೆ ಸೂಕ್ತ ಮಾಹಿತಿ ನೀಡುವವರೆಗೆ ರೂ.4,94,710/–ಗಲನ್ನು ಸಂಬಂಧಿಸಿದವರಿಂದ ವಸೂಲಿಸಿ ಬ್ಯಾಂಕ್ ಖಾತೆಗೆ ಜಮಾ ಮಾಡಲು ಹಾಗೂ ಕಡಿಮೆ ಜಮಾ ಮಾಡಿದ ಸಿಬ್ಬಂದಿಯ ಮೇಲೆ ಆಡಳಿತಾತ್ಮಕ ಕ್ರಮ ಕೈಗೊಳ್ಳಲು ಸೂಚಿಸಿದೆ ಸ್ವೀಕೃತಿ/ಜಮಾ ಮಾಡಲಾದ ಮೊತ್ತದ ವಿವರವನ್ನು ಅನುಬಂಧ–6ರಲ್ಲಿ ವಿವರಿಸಿದೆ.

ನಗದು ಪುಸ್ತಕದಲ್ಲಿ ನಮೂದಿಸಲಾದ ಸ್ವೀಕೃತಿ ಮತ್ತು ಬ್ಯಾಂಕಿಗೆ ಜಮೆ ಮಾಡಲಾದ ಇರಸಾಲು (Remittence) ವಹಿ ಅನ್ವಯ ಬ್ಯಾಂಕ್ ಖಾತಾ ಸಂಖ್ಯೆ: ಎಸ್.ಬಿ.ಎಂ ಖಾತೆ ಸಂಖ್ಯೆ: 64078604199 ಹಾಜರುಪಡಿಸಲಾಗಿದ್ದು, ಈ ಬ್ಯಾಂಕ್ ಖಾತೆಯೊಂದಿಗೆ ಲೆಕ್ಕ ಸಮನ್ವಯಮಾಡಿಕೊಂಡಿರುವ ಬಗ್ಗೆ ವಿವರವನ್ನು ನಗದು ಪುಸ್ರಕದಲ್ಲಿ ನಮೂದಿಸಿರುವುದಿಲ್ಲ. ಪ್ರವೇಶಾವಕಾಶ ಕಲ್ಪಿಸಲಾಗಿದೆ.

ಈ ರೀತಿಯಾಗಿ ಸ್ವೀಕರಿಸಲಾದ ಮೊತ್ತಕ್ಕೂ ಇರಸಾಲು ಮಾಡಿರುವ ಮೊತ್ತಕ್ಕೂ ವ್ಯತ್ಯಾಸ ಎಂದು ಪರಿಗಣಿಸಿ ಒಟ್ಟು ರೂ. 4,94,710/– ಮೊತ್ತವನ್ನು ವಸೂಲಾತಿಗೆ ಸೂಚಿಸಲಾಗಿದೆ.

ಆದರೆ ಸದರಿ ಸಾಲಿನಲ್ಲಿ ವಿದ್ಯಾರ್ಥಿಗಳಿಂದ ಸ್ವೀಕೃತಿಯಾಗಿ ಬಂದಿರುವ ಮೊತ್ತದ (ನಗದು ಮತ್ತು ಡಿಡಿ ರೂಪದ) ಮಾಹೆವಾರು ವಸೂಲಾತಿ ಮತ್ತು ಇರಸಾಲು (GRA A/c No. 00000064078604199), ಯುವರಾಜ ಕಾಲೇಜು, ಮೈಸೂರು ಇಲ್ಲಿಗೆ ಜಮಾ ಮಾಡಿರುವುದನ್ನು ದೃಢೀಕರಿಸುವ ಇರಸಾಲು ವಹಿ ಮತ್ತು Bank Pass Book (SBI, Crawford Hall Branch) ಪ್ರಕಾರದ ವಿವರ ಈ ರೀತಿಯಿದೆ.

| ಮಾಹೆ | ವಸೂಲಾತಿ ಮೊತ್ತ (ನಗದು+ಡಿಡಿ) | ಇರಸಾಲು ಬ್ಯಾಂಕ್ ಖಾತೆ | |
|---|---|---|---|
| | | ನಗದು ರೂಪದಲ್ಲಿ | ಡಿಡಿ ರೂಪದಲ್ಲಿ |
| 1 | 2 | 3 | 4 |
| 04/2017 | --- | --- | --- |
| 05/2017 | 11,25,500 | 11,25,500 | --- |
| 06/2017 | 58,97,075 | 58,96,425 | 650 |
| 07/2017 | 05,82,320 | 51,280 | 05,31,040 |
| 08/2017 | 68,200 | 68,200 | --- |
| 09/2017 | 56,000 | 56,000 | --- |
| 10/2017 | 06,480 | 06,480 | --- |
| 11/2017 | 01,17,610 | 01,17,610 | --- |
| 12/2017 | --- | --- | --- |
| 01/2017 | 86,000 | --- | 86,000 |
| 02/2017 | --- | --- | --- |
| 03/2017 | --- | --- | --- |
| ಒಟ್ಟು | 79,39,185 | 73,21,495 | 06,17,690 |

| | |
|---|---|
| ನಗದು ರೂಪದಲ್ಲಿ ಇರಸಾಲು | 73,21,495/– |
| ಡಿಡಿ ರೂಪದಲ್ಲಿ ಇರಸಾಲು | 06,17,690/– |
| ಒಟ್ಟು | 79,39,185/– |

ವ್ಯತ್ಯಾಸ=ಇಲ್ಲ

ಆದ ಕಾರಣ ಪ್ರಸ್ಥಾವಿತ ವಸೂಲಾತಿ ಕಂಡಿಕೆ ಕೈ ಬಿಡಲು ಕೋರಿದೆ.(ಅಡಕ :– ಬ್ಯಾಂಕ್ ಸ್ಟೇಟ್ಮೆಂಟ್ ಪ್ರತಿ).

<table>
<tr>
<td>
<u>13.RUSA Grant ಅನುದಾನದ ವಿವರ ಒದಗಿಸಿಲ್ಲದಿರುವುದು :– (ಯುವರಾಜ ಕಾಲೇಜು)</u><br><br>
2017–18ನೇ ಸಾಲಿಗೆ ಯುವರಾಜ ಕಾಲೇಜಿನ ಯೋಜನೆಗಳ ಅನುಷ್ಠಾನಕ್ಕಾಗಿ RUSA ಅನುದಾನದ ಸ್ವೀಕೃತಿ, ಬಳಕೆ ಹಾಗೂ ಬಾಕಿ ಉಳಿದ ಅನುದಾನದ ಮತ್ತು ಉಪಯುಕ್ತತಾ ಪತ್ರ ಗಳನ್ನು ಲೆಕ್ಕ ಪರಿಶೋಧನೆಗೆ ಹಾಜರುಪಡಿಸುವಂತೆ ಲೆಕ್ಕ ತನಿಖಾ ವಿಚಾರಣೆ ಸಂಖ್ಯೆ:26/26.04.2019 ರಲ್ಲಿ ಕೋರಿದ್ದು ನೀಡಲಾಗಿರುವ ಉತ್ತರದಲ್ಲಿ 2017–18ನೇ ಸಾಲಿನಲ್ಲಿ RUSA ಅನುದಾನ ಸ್ವೀಕೃತವಾಗಿರುವುದಿಲ್ಲ ಎಂದು ತಿಳಿಸಿರುತ್ತಾರೆ ಬೇರೆ ಯಾವುದೇ ದಾಖಲೇಗಳನ್ನು ಹಾಜರುಪಡಿಸಿಲ್ಲವಾದ್ದರಿಂದ RUSA ಅನುದಾನಗಳ ಬಗ್ಗೆ ಪರಿಶೀಲಿಸಲು ಸಾಧ್ಯವಾಗಿರುವುದಿಲ್ಲ.
</td>
<td>
2017–18ನೇ ಸಾಲಿನಲ್ಲಿ RUSA ಯೋಜನೆಯಲ್ಲಿ ಯಾವುದೇ ಅನುದಾನ ಬಿಡುಗಡೆಯಾಗಿರುವುದಿಲ್ಲ ಎಂಬ ಅಂಶವನ್ನು ಲೆಕ್ಕ ಪರಿಶೋಧನೆ ಅವಗಾಹನೆಗೆ ತರಲಾಗಿದೆ.
</td>
</tr>
<tr>
<td>
<u>14. ಯು.ಜಿ.ಸಿ ವತಿಯಿಂದ CPE ಯೋಜನೆಯಡಿ ಕಾಲೇಜಿಗೆ ಸ್ವೀಕೃತವಾದ ಅನುದಾನವನ್ನು ನಿಗದಿತ ಉದ್ದೇಶಕ್ಕೆ ಬಳಕೆಯಾಗಿರುವ ಮಾಹಿತಿ ನೀಡದಿರುವುದು:– (ಯುವರಾಜ ಕಾಲೇಜು)</u><br><br>
ಯುವರಾಜ ಕಾಲೇಜು, ಮೈಸೂರು ವಿಭಾಗಕ್ಕೆ 2017–18ನೇ ಸಾಲಿಗೆ ಯು.ಜಿ.ಸಿ ವತಿಯಿಂದ CPE ಯೋಜನೆಯಡಿ ಒಟ್ಟು ಮೊಬಲಗು ರೂ.1,06,44,000/–ಗಳು Canara bank ಬ್ಯಾಂಕ್ ಖಾತೆಗೆ ಜಮೆ ಆಗಿದ್ದು, ವಿವರ ಕೆಳಗಿನಂತಿದೆ.<br><br>
<table>
<tr><td colspan="4">ಮೊತ್ತ ರೂ.ಗಳಲ್ಲಿ</td></tr>
<tr><td>1</td><td rowspan="3">ಕೆನರ ಬ್ಯಾಂಕ್</td><td>07.09.2017</td><td>8056000</td></tr>
<tr><td>2</td><td>27.11.2017</td><td>848000</td></tr>
<tr><td>3</td><td>05.12.2017</td><td>1696000</td></tr>
<tr><td colspan="3">ಒಟ್ಟು ರೂ</td><td>1,06,44,000</td></tr>
</table><br>
ಮೇಲ್ಕಂಡಂತೆ ಯು.ಜಿ.ಸಿ.ಯು 2017–18ನೇ ಸಾಲಿಗೆ ಅನುದಾನವನ್ನು ಬಿಡುಗಡೆ ಮಾಡಲಾಗಿದ್ದು, ಯು.ಜಿ.ಸಿ.ಯು ನಿಯಮಾವಳಿಹಾಗೂ ಮಾರ್ಗಸೂಚಿ ಪ್ರಕಾರ ಈ ಅನುದಾನವನ್ನು ಬಳಸಿಕೊಂಡಿರುವ ಬಗ್ಗೆ ಪಾವತಿ ಓಚರ್‌ಗಳು ಖರೀದಿ ಮತ್ತು ದಾಸ್ತಾನುವಹಿ ವಿವರಗಳನ್ನು ಹಾಗೂ ಉಪಯುಕ್ತತಾ ಪತ್ರವನ್ನು ಸಕ್ಷಮ ಪ್ರಾಧಿಕಾರಕ್ಕೆ ಸಲ್ಲಿಸಿರುವ ಕುರಿತು ಮಾಹಿತಿಯನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸುವಂತೆ ಕೋರಿ ಲೆಕ್ಕ ವಿಚಾರಣೆ ಸಂಖ್ಯೆ:8/08.04.2019ರಲ್ಲಿ ಕೋರಲಾಗಿತ್ತು ಯು.ಜಿ.ಸಿ ವೆಚ್ಚದ ಕಡತದಲ್ಲಿ ಸಂಬಂಧಿಸಿದ ಮಾಹಿತಿಗಳು ಲಭ್ಯವಿರುವುದಿಲ್ಲ 2017–18ನೇ ಸಾಲಿನ ಅನುದಾನಕ್ಕೆ ಸಂಬಂಧಿಸಿದ ವಿವರಗಳನ್ನು ಕೆಳಗಿನಂತೆ ಒದಗಿಸಲು ಸೂಚಿಸಿದೆ ಅಲ್ಲಿಯವರೆಗೆ ರೂ.1,06,44,000/–ಗಳನ್ನು
</td>
<td>
ಪ್ರಸ್ಥಾವಿತ ಕಂಡಿಕೆಯಲ್ಲಿ ಸೂಚಿತವಾದ ವಿಷಯಕ್ಕೆ ಸಂಬಂಧಿಸಿದಂತೆ, ಸದರಿ ಕಾಲೇಜಿನಲ್ಲಿ 2017–18ನೇ ಸಾಲಿನಲ್ಲಿ ವಿಶ್ವವಿದ್ಯಾನಿಲಯ ಧನಸಹಾಯ ಆಯೋಗ (UGC) ದಿಂದ CPE (College Potential for Excellence) ಉಪಯೋಜನೆ ಅಡಿಯಲ್ಲಿ ಬಿಡುಗಡೆಯಾಗಿರುವ ಅನುದಾನ ಮೊತ್ತ ರೂ.1,06,44,000/– ಎಂದು ವರದಿಯಲ್ಲಿ ಉಲ್ಲೇಖಿಸಲಾಗಿದೆ, ಆದರೆ ವಾಸ್ತವವಾಗಿ ಬಿಡುಗಡೆಯಾಗಿರುವ ಅನುದಾನ ರೂ.1,06,00,000/– ಆಗಿರುತ್ತದೆ. ಯುವರಾಜ ಕಾಲೇಜಿನಿಂದ ಕೆನರಾಬ್ಯಾಂಕ್ ಮೈಸೂರು ಮುಖ್ಯಶಾಖೆಯಲ್ಲಿ ತೆರೆಯಲಾಗಿರುವ Current A/c No. 0518201003309 ಗೆ ಜಮೆಯಾಗಿರುತ್ತದೆ. ಜಮೆಯಾಗಿರುವ ಮೊತ್ತದ ಬಳಕೆಗೆ ಸಂಬಂಧಿಸಿದಂತೆ ಯಾವುದೇ ವಿವರಗಳನ್ನು ಲೆಕ್ಕ ಪರಿಶೋಧನೆಗೆ ಹಾಜರುಪಡಿಸಿರುವುದಿಲ್ಲ ಎಂಬ ಅಂಶವನ್ನು ಉಲ್ಲೇಖಿಸಿ CPE ಉಪಯೋಜನೆಯಲ್ಲಿ ಬಿಡುಗಡೆಯಾಗಿರುವ ಒಟ್ಟು ಮೊತ್ತ ರೂ. 1,06,00,000/– (1,06,44,000/– ಎಂದು ತಪ್ಪಾಗಿ ವರದಿಯಲ್ಲಿ ಉಲ್ಲೇಖಿತವಾಗಿದೆ) ನ್ನು ಆಕ್ಷೇಪಿಸಲಾಗಿದೆ.<br><br>
ಸದರಿ ಉಪಯೋಜನೆಯಲ್ಲಿ ಬಿಡುಗಡೆಯಾಗಿರುವ ಮೊತ್ತದ ವೆಚ್ಚಕ್ಕೆ ಸಂಬಂಧಿಸಿದಂತೆ, ಯೋಜನೆಯ ಮಾರ್ಗದರ್ಶಿ ಸೂಚನೆಗಳನ್ವಯ ಕ್ರಿಯಾಯೋಜನೆಗಳನ್ನು ತಯಾರಿಸಿ, ಸಕ್ಷಮ ಅಧಿಕಾರಿಗಳಿಂದ ಅನುಮೋದನೆ ಪಡೆದು ಕ್ರಮವಹಿಸಲಾಗುವುದು. ಈ ಸಂಬಂಧದ ವಿವರಗಳನ್ನು ಮುಂದಿನ ಲೆಕ್ಕಪರಿಶೋಧನೆಗೆ ಹಾಜರುಪಡಿಸಲಾಗುವುದು (2017–18 ನೇ ಸಾಲಿನಲ್ಲಿ ಸೂಚಿತವಾದ ಮೊತ್ತಗಳಲ್ಲಿ ಯಾವುದೇ ವೆಚ್ಚ ಭರಿಸಿರುವುದಿಲ್ಲ ಮತ್ತು
</td>
</tr>
</table>

**ಆಕ್ಷೇಪಣೆಯಲ್ಲಿಡಲಾಗಿದೆ.**

1. 2017–18ನೇ ಸಾಲಿಗೆ ಮುಕ್ತಾಯಗೊಳಿಸಲಾದ/ಚಾಲ್ತಿಯಲ್ಲಿರುವ/ಹೊಸದಾಗಿ ಪ್ರಾರಂಭಗೊಳಿಸಲಾದ ಯೋಜನೆಗಳ ವಿವರ.
2. ಯೋಜನೆವಾರು ಬಿಡುಗಡೆಯಾದ ಅನುದಾನದ ವಿವರ
3. ಯು.ಪಿ.ಸಿ ನಿಯಮಾವಳಿ ಪ್ರಕಾರ ಅನುದಾನ ಬಳಕೆಯಾಗಿರುವ ಬಗ್ಗೆ ದೃಢೀಕರಣ.
4. ಯೋಜನೆಗಳ ಅನುದಾನದ ಮೂಲಕ ಬಳಸಿಕೊಳ್ಳಲಾದ ಪೀಠೋಪಕರಣಗಳು/ ರಾಸಾಯನಿಕ ಸಾಮಗ್ರಿಗಳು ಇತ್ಯಾದಿ ಖರೀದಿ ಬಿಲ್ಲುಗಳು/ಎ.ಸಿ/ಡಿ.ಸಿ ಬಿಲ್ಲುಗಳ ವಹಿ
5. ಅನುದಾನದ ವಹಿ
6. ಬಿ.ಆರ್ ರಿಜಿಸ್ಟರ್
7. ದಾಸ್ತಾನು ವಹಿ.

ಯೋಜನೆಯ ಅವಧಿ 2021–22 ನೇ ಸಾಲಿನ ಆರ್ಥಿಕ ವರ್ಷದ ಅಂತ್ಯದವರೆಗೂ ಜಾರಿ ಇರುತ್ತದೆ ಎಂಬ ಅಂಶವನ್ನು ಲೆಕ್ಕಪರಿಶೋಧನೆ ಅವಗಾಹನೆಗೆ ತರಲಾಗಿದೆ ಮತ್ತು ಆಕ್ಷೇಪಣೆಯನ್ನು ಕೈಬಿಡಲು ಕೋರಿದೆ.

## ಮೈಸೂರು ವಿಶ್ವವಿದ್ಯಾನಿಲಯದ ವಾರ್ಷಿಕ ಲೆಕ್ಕಪತ್ರ

**15.ಆರ್ಥಿಕ ಸ್ಥಿತಿ:–**

ಮೈಸೂರು ವಿಶ್ವವಿದ್ಯಾನಿಲಯದ 2017–18ನೇ ಸಾಲಿನ ವಾರ್ಷಿಕ ಲೆಕ್ಕಗಳನ್ನು ಪರಿಶೀಲಿಸಿದಾಗ ವಾರ್ಷಿಕ ಲೆಕ್ಕಪತ್ರದಲ್ಲಿ 40 ಉಳಿತಾಯ ಖಾತೆಗಳನ್ನು ಹೊಂದಿರುತ್ತದೆ. ಕರ್ನಾಟಕ ವಿಶ್ವವಿದ್ಯಾನಿಲಯದ ಕಾಯ್ದೆ–2000 ನಿಯಮ–46, 47 ರ ರೀತ್ಯ ವಾರ್ಷಿಕ ಲೆಕ್ಕಗಳನ್ನು ಸಿದ್ದಪಡಿಸಿ ಸಿಂಡಿಕೇಟ್, ಅಕಾಡೆಮಿಕ್ ಕೌನ್ಸಿಲ್‌ನಲ್ಲಿ ಒಪ್ಪಿಗೆ ಪಡೆದು ಆರ್ಥಿಕ ಸಾಲಿನ ಸೆಪ್ಟೆಂಬರ್ ಮಾಹೆಯಲ್ಲಿ ರಾಜ್ಯ ಸರ್ಕಾರದ ಗಮನಕ್ಕೆ ತರಬೇಕಾಗಿರುತ್ತದೆ. ಪ್ರಸಕ್ತ ಸಾಲಿನ ವರ್ಷಿಕ ಲೆಕ್ಕ ಪತ್ರಗಳನ್ನು ವಿಶ್ವವಿದ್ಯಾನಿಲಯ ಕಯ್ದೆ ಸೆಕ್ಷನ್–32ರ ರೀತ್ಯಾ ಅನುಮೋದನೆಗಾಗಿ ಮಂಡಿಸಲಾಗಿರುತ್ತದೆ.ಹಾಗೂ ಪತ್ರ ಸಂಖ್ಯೆ:ಹಶಾ 52/99/2017–18/617 ದಿನಾಂಕ:01.09.2017 ರಂದು ಪ್ರಧಾನ ನಿರ್ದೇಶಕರು ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆ ಬೆಂಗಳೂರುರವರಿಗೆ ಸಲ್ಲಿಸಲಾಗಿರುತ್ತದೆ.

**2017–18ನೇ ಸಾಲಿಗೆ ವಾರ್ಷಿಕ ಲೆಕ್ಕಗಳ ಆರ್ಥಿಕ ಪರಿಸ್ಥಿತಿ ವಿವರ ಕೆಳಗಿನಂತಿದೆ**

| 2017–18ನೇ ಸಾಲಿಗೆ ವಾರ್ಷಿಕ ಲೆಕ್ಕಗಳ ಪ್ರಕಾರ | | |
|---|---|---|
| ಕ್ರ.ಸಂ | ವಿವರ | ಮೊತ್ತ(ರೂ.ಗಳಲ್ಲಿ) |
| 1 | 2017–18ನೇ ಸಾಲಿನ ಪ್ರಾರಂಭ ಶಿಲ್ಕು | 293,94,96,089.14 |
| 2 | ಸ್ವೀಕೃತಿ | 1162,33,20,749.27 |
| | Part-1-437,77,87,268.01 | |
| | Part-2-724,55,33,481.26 | |
| 3 | ಒಟ್ಟು ಮೊತ್ತ(1+2) | 1456,28,16,838.41 |
| 4 | ಪಾವತಿ Part-1-337,66,46,730.98 | 1069,25,09,892.30 |
| | ಪಾವತಿ Part-2-731,58,63,161.32 | |
| 5 | 2017–18ನೇ ಸಾಲಿನ ಅಂತಿಮ ಶಿಲ್ಕು(3–4) | 387,03,06,946.11 |

2017–18ನೇ ಸಾಲಿನ ಆಯವ್ಯಯ ಅಂದಾಜಿನಲ್ಲಿ ಜಿ.ಆರ್.ಎ ಮತ್ತು ಪರೀಕ್ಷಾ ಖಾತೆಗೆ ಸಂಬಂಧಿಸಿದಂತೆ ಪುಟ ಸಂಖ್ಯೆ:–01 ರಿಂದ 46 ರವರೆಗೆ ಆಯವ್ಯಯವು ಲಭ್ಯವಿರುತ್ತದೆ ಪುಟಸಂಖ್ಯೆ:–47 ರಲ್ಲಿ ರಾಜ್ಯ ಸರ್ಕಾರ ಅಭಿವೃದ್ಧಿ ಅನುದಾನ (ಯೋಜನೆ)ದ ಆಯವ್ಯಯ ಮಂಡಿಸಲಾಗಿದೆ ಹಾಗೂ ಪುಟ ಸಂಖ್ಯೆ 48 ರಿಂದ 94 ರವರೆಗೆ ವಿಶ್ವವಿದ್ಯಾನಿಲಯದ ವಿವಿಧ ಖಾತೆಗಳ ಆಯವ್ಯಯ ಅಂದಾಜುಗಳನ್ನು ಮಂಡಿಸಲಾಗಿದ್ದು ಪುಟ ಸಂಖ್ಯೆ 95 ರಲ್ಲಿ ಒಟ್ಟಾರೆ ಆಯವ್ಯಯದ ಸಂಕ್ಷಿಪ್ತ ವಿವರಗಳ ಪಟ್ಟಿಯನ್ನು ಮಂಡಿಸಲಾಗಿದೆ.

ವಿಶ್ವವಿದ್ಯಾನಿಲಯದ ಪ್ರಾಧಿಕಾರಗಳ ಮುಂದೆ ಕರಡು ಆಯವ್ಯಯದ ಪೂರ್ಣ ವಿವರವನ್ನು ಮಂಡಿಸಿ ಅನುಮೋದನೆ ಪಡೆಯಲಾಗಿದೆ ಕರಡು ಆಯವ್ಯಯ ಅನುಮೋದನೆ ಆಗಿರುವುದರಿಂದ ವಿವಿಯ ಎಲ್ಲಾ ಶೀರ್ಷಿಕೆಗಳ ಅನುಮೋದನೆ ಆದಂತೆ ಆಗಿರುತ್ತದೆ ಈ ಸಂಬಂಧ ಸಭೆಯ ಅನುಮೋದನೆಯ ಪತ್ರವನ್ನು ಮಾಹಿತಿಗಾಗಿ ಇದರೊಂದಿಗೆ ಲಗತ್ತಿಸಲಾಗಿದೆ. ಹಾಗೂ ಕಂಡಿಕೆ 15 ರ ಆಕ್ಷೇಪಣೆಯನ್ನು ಕೈ ಬಿಡುವಂತೆ ಕೋರಲಾಗಿದೆ.

**2017–18ನೇ ಸಾಲಿನ ಆಯವ್ಯಯ ಅಂದಾಜಿನ ಪ್ರಕಾರ**

| ಕ್ರ.ಸಂ | ಸ್ವೀಕೃತಿ ಮತ್ತು ವೆಚ್ಚದ ವಿವರ | ಮೊತ್ತ (ರೂ.ಗಳಲ್ಲಿ) |
|---|---|---|
| 1 | 2016–17ರ ಅಂತಿಮ ಶಿಲ್ಕು | 37,14,02,078 |
| 2 | 2017–18ನೇ ಸಾಲಿನ ಆಯವ್ಯಯದಲ್ಲಿ ತೆಗೆದುಕೊಳ್ಳಲಾಗಿರುವ ಆರಂಭಿಕ ಶಿಲ್ಕು | 36,95,04,801 |
| 3 | 2017–18ನೇ ಸಾಲಿನಲ್ಲಿ ನಿರೀಕ್ಷಿತ ಸ್ವೀಕೃತಿ | 2,28,97,00,000 |
| 4 | ಒಟ್ಟು(2+3) | 265,92,04,801 |
| 5 | ವೆಚ್ಚ | 269,63,00,000 |
| 6 | 2017–18ನೇ ಸಾಲಿನ ಅಂತಿಮ ಶಿಲ್ಕು | (–) 3,70,95,199 |

| | | ಮೊತ್ತ (ರೂ.ಗಳಲ್ಲಿ) |
|---|---|---|
| ವಾರ್ಷಿಕ ಲೆಕ್ಕಪತ್ರದಂತೆ(Part-1) | 437,77,87,268.01 | 337,66,46,730 |
| ಪರಿಷ್ಕೃತ ಆಯವ್ಯಯ ಪಟ್ಟಿತಂತೆ (Revised Budget) | 267,79,78,692 | 267,13,30,000 |
| ವ್ಯತ್ಯಾಸ | 231,41,55,544 | 70,53,16,730 |

ಮೇಲಿನ ಪಟ್ಟಿಯಲ್ಲಿರುವಂತೆ 2017–18ನೇ ಸಾಲಿನ ವಾರ್ಷಿಕ ಲೆಕ್ಕಗಳು (Annul Accounts) ಸ್ವೀಕೃತಿ ಹಾಗೂ ವೆಚ್ಚ ಮತ್ತು ಪರಿಷ್ಕೃತ ಆಯವ್ಯಯ (Revised Budget) ಸ್ವೀಕೃತಿ ಹಾಗೂ ವೆಚ್ಚಗಳ ಮೊತ್ತದಲ್ಲಿ ವ್ಯತ್ಯಾಸ ಕಂಡುಬಂದಿರುತ್ತದೆ. ಆಯವ್ಯಯ ಅಂದಾಜಿನಲ್ಲಿ ಕೇವಲ ಜಿ.ಆರ್.ಎ & ಎಫ್&ಆರ್ ಖಾತೆಗಳ ವ್ಯವಹಾರಗಳನ್ನು ಕೇವಲ 2 ಉಳಿತಾಯ ಖಾತೆಗಳಿಗೆ ಅನುಮೋದನೆ ಪಡೆದಿದ್ದು ವಾರ್ಷಿಕ ಲೆಕ್ಕಪತ್ರದಲ್ಲಿ ಉಳಿದ 38 ಖಾತೆಗಳ ಒಟ್ಟು ಜಮಾ–ಖರ್ಚುನ್ನು ವಾರ್ಷಿಕ ಆಯವ್ಯಯದಲ್ಲಿ ಸೇರಿಸಿರುವುದಿಲ್ಲ ಇವುಗಳನ್ನು ಸೇರಿಸಿ ಅನುಮೋದನೆ ಪಡೆಯಬೇಕಾಗಿರುತ್ತದೆ ಇದರಿಂದ ಹೆಚ್ಚುವರಿ ವ್ಯತ್ಯಾಸ ಕಂಡುಬಂದಿದ್ದು ಪರಷ್ಕೃತ ಮಂಜೂರಾತಿ ಆದೇಶ ಪ್ರತಿಯನ್ನು ಒದಗಿಸುವಂತೆ ಲೆಕ್ಕತನಿಖಾ ವಿಚಾರಣೆ ಸಂಖ್ಯೆ:85/12.06.2019ರಲ್ಲಿ ನೀಡಲಾಗಿದ್ದು ಯಾವುದೇ ವವರಣೆ ನೀಡಿರುವುದಿಲ್ಲ ಈ ಬಗ್ಗೆ ಸೂಕ್ತ ಕ್ರಮಕೈಗೊಂಡು ಲೆಕ್ಕ ಸಮನ್ವಯಗೊಳಿಸಿ ವರದಿ ನೀಡಲು ಸೂಚಿಸಿದೆ.

**16.ವಾರ್ಷಿಕ ಲೆಕ್ಕಗಳು:–**

2017–18ನೇ ಸಾಲಿನಲ್ಲಿ ಮೈಸೂರು ವಿಶ್ವವಿದ್ಯಾನಿಲಯವು 40 ಬ್ಯಾಂಕ್ ಖಾತೆಗಳನ್ನು ಹೊಂದಿದ್ದು ವಾರ್ಷಿಕ ಲೆಕ್ಕಗಳಲ್ಲಿ ಶೀರ್ಷಿಕೆ ಮತ್ತು ಉಪಶೀರ್ಷಿಕೆವಾರು ಆಯವ್ಯಯದಲ್ಲಿ ನಿಗದಿಪಡಿಸಿದಂತೆ ಅನುದಾನದ ವಿವರಗಳನ್ನು ವೆಚ್ಚದ ಕಾಲಂನ್ನು (Payments) ಉಪಶೀರ್ಷಿಕೆವಾರು ದಾಖಲಿಸಿರುವುದಿಲ್ಲ ಅನುದಾನ ದಾಖಲಿಸದೆ ಇರುವುದರಿಂದ ನಿಗದಿ

ವಿಶ್ವವಿದ್ಯಾನಿಲಯವು 40 ಬ್ಯಾಂಕ್ ಖಾತೆಗಳನ್ನು ಹೊಂದಿರುವುದು ಸರಿಯಷ್ಟೆ. ಹೀಗೆ ಹೊಂದಿರುವ ಖಾತೆಗಳಲ್ಲಿ ತೊಡಗಿಸಿರುವ ಮೊತ್ತಗಳಿಗೆ ಆಯಾಯ ಸಮಿತಿ, ಪ್ರಾಧಿಕಾರ, ಯೋಜನೆ ಮುಖ್ಯಸ್ಥರ ನಿರ್ದೇಶನಗಳಂತೆ ಶೀರ್ಷಿಕೆ ಮತ್ತು ಉಪಶೀರ್ಷಿಕೆಗಳಲ್ಲಿ ನಿಗದಿ ಪಡಿಸಿದ ಕಾಮಗಾರಿಗಳಿಗೆ ನಿಯಮಗಳನುಸಾರ ವೆಚ್ಚಗಳನ್ನು ಭರಿಸಲಾಗುತ್ತದೆ. ಹಾಗೂ

ಮೊತ್ತಕ್ಕಿಂತ ಅಧಿಕ ವೆಚ್ಚದ ಸಾಧ್ಯತೆ ಕಂಡುಬರುವ ಕಾರಣ ವಾರ್ಷಿಕ ಲೆಕ್ಕಗಳಲ್ಲಿ ಅನುದಾನವನ್ನು ನಮೂದಿಸುವುದು ಅವಶ್ಯಕವಾಗಿರುತ್ತದೆ, ಹಾಗೂ ಬ್ಯಾಂಕ್ ಖಾತಿಗಳ ಸಂಖ್ಯೆ ಪ್ರಾರಂಭಿಕ ಶಿಲ್ಕು ಮತ್ತು ಆರ್ಥಿಕ ವರ್ಷದ ಅಂತ್ಯಕ್ಕೆ ಬ್ಯಾಂಕ್ ಅಂತಿಮ ಶಿಲ್ಕು ವಿವರಗಳನ್ನು ವಾರ್ಷಿಕ ಲೆಕ್ಕಗಳಲ್ಲಿ ನಮೂದಿಸಲು ಸೂಚಿಸಿದೆ.

ಮುಂದುವರೆದು ವಿಶ್ವವಿದ್ಯಾನಿಲಯದಲ್ಲಿ ಆರ್ಥಿಕ ವಹಿವಾಟು ನಡೆಸಲಾಗುವ ಚಾಲ್ತಿಯಲ್ಲಿರುವ/ಚಾಲ್ತಿಯಲ್ಲಿಲ್ಲದ ಒಟ್ಟು ಬ್ಯಾಂಕ್ ಖಾತೆಗಳ ಖಾತಾ ವಿವರಗಳನ್ನು ಹಾಜರುಪಡಿಸುವಂತೆ ಲೆಕ್ಕ ತನಿಖಾ ವಿಚಾರಣೆ ಸಂಖ್ಯೆ:56/25.05.2019ರಲ್ಲಿ ಕೋರಲಾಗಿದ್ದು ಯಾವುದೇ ಮಾಹಿತಿ ಒದಗಿಸಿರುವುದಿಲ್ಲ.

ಭರಿಸಲಾದ ವೆಚ್ಚಗಳಿಗೆ ಅದಕ್ಕೆ ಸಂಬಂಧಪಟ್ಟ ಶೀರ್ಷಿಕೆವಾರು ಅನುದಾನವನ್ನು ನಮೂದಿಸಲಾಗುತ್ತಿದೆ. ಹಾಗೂ ಆಯಾಯ ಅನುದಾನ ಮತ್ತು ಅಂತಿಮ ಶುಲ್ಕದ ವಿವರಗಳನ್ನು ಒದಗಿಸಲಾಗುತ್ತದೆ. ಆದಾಗ್ಯೂ ಹಲವು ಸಂದರ್ಭಗಳಲ್ಲಿ ಕೈ ತಪ್ಪಿನಿಂದ ಹಲವು ನ್ಯೂನತೆಗಳಿದ್ದಲ್ಲಿ ಕಂಡಿಕೆ 16ರಲ್ಲಿ ಸೂಚಿಸಿರುವಂತೆ ಕ್ರಮ ವಹಿಸಲಾಗುವುದೆಂಬ ಅಂಶವನ್ನು ಆದ್ಯ ಗಮನಕ್ಕೆ ತರಲಾಗಿದೆ.

**16.(ಎ) ದಿನಾಂಕ:31.03.2018ರ ಬ್ಯಾಂಕ್ ಸ್ಟ್ರೋಲ್‌ನಲ್ಲಿರುವಂತೆ ಅಂತಿಮ ಶಿಲ್ಕಿಗೂ ನಗದು ಪುಸ್ತಕದಲ್ಲಿನ ಅಂತಿಮ ಶಿಲ್ಕಿಗೂ ವ್ಯತ್ಯಾಸ ಕಂಡುಬಂದಿರುವ ಕುರಿತು;–**

2017–18ನೇ ಸಾಲಿನ ಮೈಸೂರು ವಿಶ್ವವಿದ್ಯಾನಿಲಯದ ಆರ್ಥಿಕ ವಹಿವಾಟುಗಳ ಬ್ಯಾಂಕ್ ಖಾತೆಗಳ ವಿವರಗಳನ್ನು ಪರಿಶೀಲಿಸಿದಾಗ ಬ್ಯಾಂಕ್ ಸ್ಟ್ರೋಲ್‌ನಲ್ಲಿರುವಂತೆ ದಿನಾಂಕ:31.03.2018ರ ಅಂತಿಮ ಆಲ್ಕಿಗೂ ನಗದು ಪುಸ್ತಕದಲ್ಲಿನ ದಿನಾಂಕ:31.03.2018ರ ಅಂತಿಮ ಶಿಲ್ಕಿಗೂ ವ್ಯತ್ಯಾಸ ಕಂಡುಬಂದಿರುತ್ತದೆ. ವಿವರ ಕೆಳಲಂಡಂತಿದೆ.

| | **ಮೊತ್ತ (ರೂ.ಗಳಲ್ಲಿ)** |
|---|---|
| ಬ್ಯಾಂಕ್ ಸ್ಟ್ರೋಲ್ ಪ್ರಕಾರ ದಿನಾಂಕ:31.03.2018ರ ಅಂತಿಮ ಶಿಲ್ಕು | 177,68,53,229.93 |
| ನಗದು ಪುಸ್ತಕದ ಪ್ರಕಾರ ದಿನಾಂಕ:31.03.2018ರ ಅಂತಿಮ ಶಿಲ್ಕು | 83,72,41,939.80 |
| **ವ್ಯತ್ಯಾಸ** | **93,96,11,290.13** |
| (Unencashed Cheques) ನಗದಾಗದ ಧನಾದೇಶಗಳು | 73,46,11,348.90 |
| ನಿವ್ವಳ ವ್ಯತ್ಯಾಸ | 20,49,99,941.23 |

ಮೇಲಿನ ವ್ಯತ್ಯಾಸದ ಮೊತ್ತ ರೂ.93,11,290.13 ಗಳಲ್ಲಿನಗದಾಗದ ಧನಾದೇಶಗಳ ವಿವರಗಳನ್ನು ನೀಡಲಾಗಿದ್ದು, ಉಳಿಕೆ ರೂ.20,49,99,941.23 ಗಳ ವ್ಯತ್ಯಾಸದ ಮೊತ್ತಕ್ಕೆ ಕಾರಣ ನೀಡಿರುವುದಿಲ್ಲ ಉಳಿಕೆ ಮೊಬಲಗಿಗೆ ಲೆಕ್ಕ ಸಮನ್ವಯಗೊಳಿಸಿ ಪೂರ್ಣ ವಿವರಗಳನ್ನು ಹಾಜರುಪಡಿಸಲು ವರದಿಯಲಲಿ ಸೂಚಿಸಿದೆ. ವಿವರಗಳನ್ನು ಅನುಬಂಧ–6 (ಎ) ರಲ್ಲಿ ಲಗತ್ತಿಸಿದೆ.

ದಿನಾಂಕ:31.03.2018 ರಂದು ಬ್ಯಾಂಕ್ ಸ್ಟ್ರೋಲ್‌ನಲ್ಲಿರುವಂತೆ ಅಂತಿಮ ಶಿಲ್ಕಿಗೂ ನಗದು ಪುಸ್ತಕದ ಅಂತಿಮ ಶಿಲ್ಕಿಗೂ ರೂ.20,49,99,941.23/–ಗಳ ವ್ಯತ್ಯಾಸವಿರುವುದಾಗಿ ಕಂಡಿಕೆ ಸಂಖ್ಯೆ16(ಎ) ನಲ್ಲಿ ಗಮನಿಸಿ ರೂ.20,49,99,941.23/–ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ. ಈ ಕುರಿತು ವಿಷಯಕ್ಕೆ ಸಂಬಂಧಿಸಿದಂತೆ ವಿಶ್ವವಿದ್ಯಾನಿಲಯ ವಿವಿಧ ವಿಭಾಗಗಳಲ್ಲಿ 40 ವಿವಿಧ ನಗದು ಪುಸ್ತಕಗಳನ್ನು ನಿರ್ವಹಿಸುತ್ತಿದ್ದು ನಗದು ಪುಸ್ತಕಕ್ಕೆ ಸಂಬಂಧಿಸಿದಂತೆ ಪ್ರತಿ ಲೆಕ್ಕ ಖಾತೆಗೂ ಬ್ಯಾಂಕಿನಿಂದ ಬ್ಯಾಂಕ್ ಸ್ಟ್ರೋಲ್‌ನ್ನು ಪಡೆದು ನಗದು ಪುಸ್ತಕದ ಅಂತಿಮ ಶಿಲ್ಕಿಗೆ ಲೆಕ್ಕ ಸಮನ್ವಯಗೊಳಿಸುವ ಕಾರ್ಯವನ್ನು ಕೈಗೊಂಡಿದ್ದು ಸದರಿ ಕಂಡಿಕೆ ಆಕ್ಷೇಪಣೆಗೆ ಅನುಪಾಲನಾ ವರದಿಯನ್ನು ಮುಂದಿನ ಲೆಕ್ಕ ತಪಾಸಣಾ ತಂಡಕ್ಕೆ ಮಾಹಿತಿಯನ್ನು ಒದಗಿಸಲಾಗುವುದೆಂಬ ಅಂಶವನ್ನು ಆದ್ಯ ಗಮನಕ್ಕೆ ತರಲಾಗಿದೆ.

**17.ನಗದಾಗದ ಧನಾದೇಶಗಳ ವಿವರ :–**

2017–18ನೇ ವರ್ಷಕ್ಕೆ ಸಂಬಂಧಿಸಿದಂತೆ ಮೈಸೂರು ವಿಶ್ವವಿದ್ಯಾನಿಲಯದ ಒಟ್ಟು ಖಾತೆಗಳಲ್ಲಿ ನಗದಾಗದೆ ಇರುವ ಧನಾದೇಶಗಳ ಮೊತ್ತ ರು.73,46,11,348.9/–ಗಳಿದ್ದು ವಿವರಗಳನ್ನು ಅನುಬಂಧ–7ರಲ್ಲಿ ನೀಡಲಾಗಿದೆ ಅವಧಿ ಮೀರಿದ ಧನಾದೇಶಗಳನ್ನು ರದ್ದುಪಡಿಸಿ ನಗದು ಪುಸ್ತಕದಲ್ಲಿ ಸ್ವೀಕೃತಿ ಪಡೆದು ಲೆಕ್ಕ ಸಮನ್ವಯಗೊಳಿಸಿ ವಿವರಗಳನ್ನು ಲೆಕ್ಕ ತಪಾಸಣೆಗೆ ಒದಗಿಸಲು ಸೂಚಿಸಿದೆ.

2017–18 ನೇ ಸಾಲಿನಲ್ಲಿ ಅಂದರೆ ದಿನಾಂಕ: 31.03.2018ರಲ್ಲಿ ವಿತರಿಸಲಾದ ರೂ.73,46,11,348.9 ಗಳಿಗೆ ಸಂಬಂಧಿಸಿದ ನಗದಾಗದ ಧನಾದೇಶಗಳಲ್ಲಿ ಅವಧಿ ಮೀರಿದ ಧನಾದೇಶಗಳನ್ನು ರದ್ದು ಪಡಿಸಿ ಸದರಿ ವಿವರಗಳನ್ನು ನಗದು ಪುಸ್ತಕದಲ್ಲಿ ಸ್ವೀಕೃತಿ ಪಡೆದು ಲೆಕ್ಕ ಸಮನ್ವಯಗೊಳಿಸಲು ಕ್ರಮ ಕೈಗೊಂಡಿದ್ದು ಸದರಿ ಮಾಹಿತಿಯನ್ನು ಮುಂದಿನ ಲೆಕ್ಕ ತನಿಖಾ ಅವಧಿಯಲ್ಲಿ ಒದಗಿಸಲಾಗುವುದೆಂಬ ಅಂಶವನ್ನು ಆದ್ಯ ಗಮನಕ್ಕೆ ತರಲಾಗಿದೆ.

**18.ಹಿಂದಿನ ವರ್ಷಗಳ ಧನಾದೇಶಗಳನ್ನು ಒಟ್ಟಾರೆ ರದ್ದುಪಡಿಸಲಾಗಿರುವುದು :–**

2017–18ನೇ ಸಾಲಿನ ವಾರ್ಷಿಕ ಲೆಕ್ಕಗಳಲ್ಲಿನ 16 ಖಾತೆಗಳ ನಗದು ಪುಸ್ತಕವನ್ನು ಪರಿಶೀಲಿಸಲಾಗಿ ದಿನಾಂಕ:31.03.2018ರ ಅಂತ್ಯಕ್ಕೆ ರೂ.1,87,76,786/–ಗಳ ಮೊತ್ತದ ಹಿಂದಿನ ವರ್ಷದ ಧನಾದೇಶಗಳನ್ನು ರದ್ದುಪಡಿಸಲಾಗಿರುವುದನ್ನು ಲೆಕ್ಕ ತನಿಖೆಯಲ್ಲಿ ಗಮನಿಸಿದೆ ವಿವರವನ್ನು ಅನುಬಂಧ–8ರಲ್ಲಿ ನೀಡಿದೆ ಕರ್ನಾಟಕ ಆರ್ಥಿಕ ಸಂಹಿತೆ ಅನುಚ್ಛೇದ–279(ಟಿಪ್ಪಣಿ) ಪ್ರಕಾರ ಸಂದಾಯ ಮಾಡಲಾದ ಧನಾದೇಶ ಅಧಿಕಾರವು ಅದನ್ನು ಹೊರಡಿಸಲಾದ ದಿನದಿಂದ ಮೂರು ತಿಂಗಳವರೆಗೆ ಮಾನ್ಯವಾಗಿರುತ್ತದೆ ಮತ್ತು ತರುವಾಯ ಸಂದಾಯವನ್ನು ಪುನಃ ನವೀಕರಿಸುವ/ಹೊಸದಾದ ಧನಾದೇಶಗಳನ್ನು ವಿತರಣೆ ಮಾಡಬೇಕಾಗಿರುತ್ತದೆ.

**ನಗದು ಪುಸ್ತಕ :–**

2017–18ನೇ ಸಾಲಿನ ವಿಶ್ವವಿದ್ಯಾನಿಲಯದ ವಿವಿಧ ಖಾತೆಗಳ ನಗದು ಪುಸ್ತಕಗಳನ್ನು ಪರಿಶೀಲಿಸಿದಾಗ ನಗದು ಪುಸ್ತಕದಲ್ಲಿನ ಪ್ರಾರಂಭಿಕ ಶಿಲ್ಕಿಗೂ 2017–18ನೇ ಸಾಲಿನ ವಾರ್ಷಿಕ ಲೆಕ್ಕಗಲ್ಲಿನ ಪ್ರಾರಂಭ ಶಿಲ್ಕಿಗೂ ರೂ.4,37,881/–ಗಳ ವ್ಯತ್ಯಾಸ ಕಂಡುಬಂದಿರುತ್ತದೆ. ವಿವರ ಕೆಳಗಿನಂತಿದೆ.

| | **ಮೊತ್ತ (ರೂ.ಗಳಲ್ಲಿ)** |
|---|---|
| ನಗದು ಪುಸ್ತಕದ ಪ್ರಕಾರ ಪ್ರಾರಂಭ ಶಿಲ್ಕು | 61,39,09,087 |
| ವಾರ್ಷಿಕ ಲೆಕ್ಕಗಳ ಪ್ರಕಾರ ಪ್ರಾರಂಭದ ಶಿಲ್ಕು | 61,43,46,968 |
| **ವ್ಯತ್ಯಾಸ** | **4,37,881** |

ವ್ಯತ್ಯಾಸದ ಮೊತ್ತಕ್ಕೆ ಸೂಕ್ತ ವಿವರಣೆ ನೀಡಿ ನಗದು ಪುಸ್ತಕದಲ್ಲಿ ದಾಖಲಿಸಿರುವುದಿಲ್ಲ ಇದರಿಂದಾಗಿ ಎಲ್ಲಿ ಯಾವಾಗ ವ್ಯತ್ಯಾಸ ಉಂಟಾಗಿದೆ ಎಂಬುದನ್ನು ತಿಳಿಯಲು ಸಾಧ್ಯವಾಗಿರುವುದಿಲ್ಲ ಮೇಲಿನ ವ್ಯತ್ಯಾಸದ ಮೊತ್ತಕ್ಕೆ ಸೂಕ್ತ ವಿವರಣೆಯನ್ನು ನೀಡುವಂತೆ ಸೂಚಿಸಿದೆ.

2017–18ನೇ ಸಾಲಿನ ವಾರ್ಷಿಕ ಲೆಕ್ಕ ಪತ್ರಗಳಲ್ಲಿ ವಿಶ್ವವಿದ್ಯಾನಿಲಯದ 16 ಖಾತೆಗಳ ನಗದು ಪುಸ್ತಕದ ವ್ಯವಹಾರಗಳಲ್ಲಿ ದಿನಾಂಕ:31.03.2018ರ ಅಂತ್ಯಕ್ಕೆ ಅನುಬಂಧ–8ರಲ್ಲಿ ವಿವರಿಸಿ ಪ್ರಸ್ತಾಪಿಸಿರುವಂತೆ ರೂ.1,87,76,786/–ಗಳ ಮೊತ್ತದ ಚೆಕ್‌ಗಳನ್ನು ರದ್ದು ಪಡಿಸಲಾಗಿದ್ದು ಈ ಚೆಕ್‌ಗಳಲ್ಲಿ 3 ತಿಂಗಳ ಅವಧಿ ಮೀರಿದ ಚೆಕ್‌ಗಳಿಗೆ ಹೊಸ ಚೆಕ್‌ಗಳನ್ನು ನೀಡುವ ವ್ಯವಸ್ಥೆಯನ್ನು ಅನುಸರಿಸಲಾಗುತ್ತಿದೆ, ಮುಂದುವರಿದು ರೂ.4,37,881/–ಗಳ ಮೊತ್ತಕ್ಕೆ ಬ್ಯಾಂಕಿನ ಸ್ಟ್ರೋಲ್ ಮತ್ತು ನಗದು ಪುಸ್ತಕದ ವಿವರಗಳೊಂದಿಗೆ ಸಮನ್ವಯಗೊಳಿಸಲಾಗಿರುತ್ತದೆಂಬ ಅಂಶವನ್ನು ಹಾಗೂ ಮಾಹಿತಿಯನ್ನು ಆದ್ಯ ಗಮನಕ್ಕೆ ತರುತ್ತ ಸದರಿ ಆಕ್ಷೇಪಿತ ಕಂಡಿಕೆಯನ್ನು ಕೈ ಬಿಡುವಂತೆ ನಿವೇದಿಸಲಾಗಿದೆ.

**<u>19. ವಾರ್ಷಿಕ ಲೆಕ್ಕಗಳಲ್ಲಿನ ಖಾತೆಗಳಲ್ಲಿ ಇತರೆ ಜಮೆ ಮತ್ತು ಇತರೆ ವೆಚ್ಚಗಳಿಗೆ ಪ್ರತ್ಯೇಕ ವಿವರಗಳನ್ನು ಒದಗಿಸದಿರುವುದು :–</u>**

2017–18ನೇ ಸಾಲಿನ ವಾರ್ಷಿಕ ಲೆಕ್ಕಗಳಲ್ಲಿನ ಹತ್ತು ವಿವಿಧ ಉಳಿತಾಯ ಖಾತೆಗಳ ಸ್ವೀಕೃತಿ ಮತ್ತು ಪಾವತಿ ವಿವರಗಳನ್ನು ಪರಿಶೀಲಿಸಿದಾಗ

ಇತರೆ ಜಮೆಗಳು – ರೂ.92,63,790/–

ಇತರೆ ವೆಚ್ಚಗಳು – ರೂ.1,41,99,810/–

ಎಂದು ದಾಖಲಿಸಲಾಗಿದೆ. ವಿವರಗಳನ್ನು ಅನುಬಂಧ–9ರಲ್ಲಿ ನೀಡಲಾಗಿದೆ ಇತರೆ ಜಮೆ ಹಾಗೂ ಪಾವತಿಗಳಿಗೆ ಸಂಬಂಧಿಸಿದಂತೆ ಬ್ಯಾಂಕ್ ಖಾತೆಯಲ್ಲಿ ಜಮೆಯಾಗಿರುವ ಬಗ್ಗೆ ಮತ್ತು ವೆಚ್ಚಗಳ ಬಗ್ಗೆ ಪ್ರತ್ಯೇಕವಾಗಿ ವೆಚ್ ಮಾಡಿರುವ ಮೊತ್ತ ಹಾಗೂ ದಿನಾಂಕವಾರು ವಿವರಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸುವಂತೆ ಲೆಕ್ಕ ತನಿಖಾ ವಿಚಾರಣೆ ಸಂಖ್ಯೆ:114/26.06.2019ರಲ್ಲಿ ಕೋರಲಾಗಿದ್ದು ಯಾವುದೇ ಮಾಹಿತಿ ಒದಗಿಸಿರುವುದಿಲ್ಲ ಈ ಮೊತ್ತಗಳಿಗೆ ವಿವರಗಳನ್ನು ಒದಗಿಸಲು.

2017–18ನೇ ಸಾಲಿನಲ್ಲಿ ಇತರೆ ಜಮೆಗಳ ಬಾಬ್ತು ರೂ.92,63,790/–ಗಳು ಬಂದಿದ್ದು ಮತ್ತು ರೂ.1,41,99,810/–ಗಳು ಇತರೆ ಬಾಬ್ತುಗಳಿಗೆ ಖರ್ಚಾಗಿದ್ದು ಸದರಿ ಜಮೆ ಹಾಗೂ ಖರ್ಚುಗಳಿಗೆ ದಿನಾಂಕವಾರು ವಿವರಗಳನ್ನು ಲೆಕ್ಕಪರಿಶೋಧನೆಗೆಒದಗಿಸಿರುವುದಿಲ್ಲವೆಂದು ಲೆಕ್ಕಪರಿಶೋಧನಾ ಕಂಡಿಕೆ–19ರಲ್ಲಿ ಗಮನಿಸಿ ಪ್ರಸ್ತಾಪಿಸಲಾಗಿರುತ್ತದೆ.

ಈ ಸಂಬಂಧ ಸದರಿ ಇತರೆ ಜಮೆಗಳು ರೂ.92,63,790/–ಗಳಿಗೆ ಹಾಗೂ ರೂ.1,41,99,810/–ಗಳ ಇತರೆ ಖರ್ಚಿಗೆ ದಿನಾಂಕವಾರು ವಿವರಗಳನ್ನು ಇದರೊಂದಿಗೆ ಮಾಹಿತಿಗಾಗಿ ಲಗತ್ತಿಸಲಾಗಿದೆ.

ಈ ಸಂಬಂಧ ಇತರೆ ಜಮೆಗಳು ರೂ.92,63,790/–ಗಳು ಮತ್ತು ಇತರೆ ಖರ್ಚುಗಳಡಿಯಲ್ಲಿನ ರೂ.1,41,99,810/–ಗಳ ಆಕ್ಷೇಪಣೆಯನ್ನು ಕೈ ಬಿಡುವಂತೆ ನಿವೇದಿಸಲಾಗಿದೆ.

**20.2016–17 ಹಾಗೂ 2017–18ನೇ ಸಾಲುಗಳಿಗೆ ಸಂಬಂಧಿಸಿದಂತೆ ವಿ.ವಿ ಜಿ.ಆರ್.ಎ ಖಾತೆ ಹಾಗೂ ಹೆಚ್‌ಎಮ್‌ಎಮ್ ಖಾತೆಗಳಿಗೆ ಜಮೆ ಮಾಡಲಾದ ಮೊತ್ತಗಳಿಗೆ ದೃಢೀಕೃತ ಬ್ಯಾಂಕ್ ಸ್ಕ್ರೋಲ್ ಹಾಜರುಪಡಿಸದೆ ಇರುವುದು :– (ಸರ್,ಎಂ,ವಿಶ್ವೇಶ್ವರಯ್ಯ ಸ್ನಾತಕೋತ್ತರ ಕೇಂದ್ರದ ವಿದ್ಯಾರ್ಥಿನಿಲಯ)**

ಸರ್,ಎಂ,ವಿಶ್ವೇಶ್ವರಯ್ಯ ಸ್ನಾತಕೋತ್ತರ ಕೇಂದ್ರದ ವಿದ್ಯಾರ್ಥಿನಿಲಯಕ್ಕೆ ಸಂಬಂಧಿಸಿದಂತೆ 2016–17ನೇ ಸಾಲುಗಳಲ್ಲಿ ವಿದ್ಯಾರ್ಥಿಗಳಿಂದ ಸ್ವೀಕರಿಸಲ್ಪಟ್ಟ ಹಾಗೂ ಸರ್ಕಾರದಿಂದ ಬಿಡುಗಡೆಯಾದ ಮೊತ್ತವನ್ನು ವಿಶ್ವವಿದ್ಯಾನಿಲಯ ಜಿ,ಆರ್,ಎ ಹಾಗೂ ಎಚ್,ಎಂ,ಎಂ ಖಾತೆಗಳಿಗೆ ಜಮೆ ಮಾಡುವುದರ ಸಂಬಂಧ ವಿಶ್ವವಿದ್ಯಾನಿಲಯ ಹಣಕಾಸು ಅಧಿಕಾರಿ/ಕುಲಸಚಿವರಿಂದ ದೃಢೀಕರಿಸಲ್ಪಟ್ಟ ಬ್ಯಾಂಕ್ ಸ್ಕ್ರೋಲ್‌ಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸುವಂತೆ ಕೋರಿ ವಿಚಾರಣೆ ಪತ್ರ ಸಂಖ್ಯೆ:01/03.07.2019 ನೀಡಲಾಗಿದ್ದು ಹಾಜರುಪಡಿಸದ ಕಾರಣ ಸದರಿ ಮೊತ್ತಗಳು ವಿದ್ಯಾರ್ಥಿನಿಲಯದ ಜಿ,ಆರ್,ಎ ಹಾಗೂ ಎಚ್,ಎಂ,ಎಂ ಖಾತೆಗಳಿಗೆ ಜಮೆಯಾಗಿರುವ ಬಗ್ಗೆ ಖಚಿತಪಡಿಸಿಕೊಳ್ಳಲು ಸಾಧ್ಯವಾಗಿರುವುದಿಲ್ಲ ಆದ್ದರಿಂದ ಜಮೆ ಮಾಡಲಾದ ಒಟ್ಟು ಮೊತ್ತ ರೂ.4,33,706/–ಗಳನ್ನು ಆಕ್ಷೇಪಿಸಲಾಗಿದೆ ವಿವರಗಳನ್ನು ಅನುಬಂಧ–10ರಲ್ಲಿ ನೀಡಿದೆ.

ಪ್ರಸ್ತಾಪಿತ ಕಂಡಿಕೆಯಲ್ಲಿನ ವಿಷಯಕ್ಕೆ ಸಂಬಂಧಿಸಿದಂತೆ 2016–17 ಮತ್ತು 2017–18ನೇ ಸಾಲಿನಲ್ಲಿ ವಿದ್ಯಾರ್ಥಿಗಳಿಂದ ಸ್ವೀಕರಿಸಲ್ಪಟ್ಟ ಮತ್ತು ಸರ್ಕಾರದಿಂದ ಬಿಡುಗಡೆಯಾದ ಮೊತ್ತವು ಜಿ.ಆರ್.ಎ ಖಾತೆಗೆ ಮತ್ತು ಎಚ್.ಎಂ.ಎಂ ಖಾತೆಗಳಗೆ ಹೊಂದಾಣಿಕೆಯಾಗಿರುವುದನ್ನು ಧೃಢೀಕರಿಸುವ ಬ್ಯಾಂಕ್ ಸ್ಕ್ರೋಲ್‌ಗಳನ್ನು ಹಾಜರುಪಡಿಸದೆ ಇರುವ ಬಗ್ಗೆ ಉಲ್ಲೇಖಿಸಲಾಗಿದೆ.

ಲೆಕ್ಕ ಪರಿಶೋಧನಾ ವರದಿಯಲ್ಲಿ ಸೂಚಿತವಾದ ಮೊತ್ತಗಳಿಗೆ (ಅನುಬಂಧ–10) ವರದಿಯಲ್ಲಿ ಸೂಚಿಸಿರುವ ಬ್ಯಾಂಕ್ ಸ್ಕ್ರೋಲ್ ಪ್ರತಿ ಲಗತ್ತಿಸಿದೆ.

ಆದ ಕಾರಣ ಲೆಕ್ಕ ಪರಿಶೋಧನಾ ವರದಿಯಲ್ಲಿ ಸೂಚಿತವಾದ ಆಕ್ಷೇಪಣೆ ಕಂಡಿಕೆ ಕೈ ಬಿಡಲು ಕೋರಿದೆ.

ಸರ್,ಎಂ,ವಿಶ್ವೇಶ್ವರಯ್ಯ ಸ್ನಾತಕೋತ್ತರ ಕೇಂದ್ರದ, ಮಂಡ್ಯ ವಿದ್ಯಾರ್ಥಿನಿಲಯದ ವಿದ್ಯಾರ್ಥಿಗಳಿಂದ ಸ್ವೀಕರಿಸಲ್ಪಟ್ಟ ಮತ್ತು ಸರ್ಕಾರದಿಂದ ಬಿಡುಗಡೆಯಾದ ಅನುದಾನವು ವಿಶ್ವವಿದ್ಯಾನಿಲಯದ ಜಿ.ಆರ್.ಎ ಖಾತೆಗೆ ಮತ್ತು ಎಚ್.ಎಂ.ಎಂ ಖಾತೆಗೆ ಹೊಂದಾಣಿಕೆ ಆಗಿರುವ ವಿವರ ಈ ರೀತಿ ಇದೆ.

(2017–18ನೆ ಸಾಲಿನ ಲೆಕ್ಕ ಪರಿಶೋಧನೆ ವರದಿ ಕಂಡಿಕೆ ಸಂಖ್ಯೆ:20) ಅನುಬಂಧ 10ರ ಪ್ರಕಾರ

| ಕ್ರ.ಸಂ | ಬ್ಯಾಂಕ್ ಸ್ಕ್ರೋಲ್ ಪ್ರಕಾರ ಜಿ.ಆರ್.ಎ ಖಾತೆಗೆ ಹೊಂದಾಣಿಕಾಗಿರುವ ದಿನಾಂಕ | ಹೊಂದಾಣಿಕೆ ವಿವರ | ಹೊಂದಾಣಿಕೆ ಮೊತ್ತ |
|---|---|---|---|
| 2016–17ನೇ ಸಾಲು | | | |
| 1 | 05–08.2016 | ನಗದು ಜಮಾ | 11,340/– |
| 2 | 11–08–2016 | ನಗದು ಜಮಾ | 22,680/– |
| 3 | 18–08–2016 | ನಗದು ಜಮಾ | 29,375/– |
| 4 | 24–08–2016 | ನಗದು ಜಮಾ | 37,100/– |
| 5 | 25–08–2016 | ನಗದು ಜಮಾ | 12,300/– |
| 6 | 31–08–2016 | ನಗದು ಜಮಾ | 48,500/– |
| 7 | 29–09–2016 | ನಗದು ಜಮಾ | 28,975/– |
| 8 | 08–02–2017 | ನಗದು ಜಮಾ | 2,000/– |
| | | | 1,92,270/– |
| 2017–18ನೇ ಸಾಲು | | | |

| | | | |
|---|---|---|---|
| 1 | 05–04–2017 | ನಗದು ಜಮಾ | 4,280/– |
| 2 | 09–06–2017 | ನಗದು ಜಮಾ | 5,450/– |
| 3 | 03–08–2017 | ನಗದು ಜಮಾ | 67,650/– |
| 4 | 07–08–2017 | ನಗದು ಜಮಾ | 50,445/– |
| 5 | 09–08–2017 | ನಗದು ಜಮಾ | 19,390/– |
| 6 | 14–08–2017 | ನಗದು ಜಮಾ | 20,775/– |
| 7 | 23.08.2017 | ನಗದು ಜಮಾ | 13,850/– |
| 8 | 28–08–2017 | ನಗದು ಜಮಾ | 4,155/– |
| 9 | 01.09.2017 | ನಗದು ಜಮಾ | 4,155/– |
| 10 | 07–09–2017 | ನಗದು ಜಮಾ | 400/– |
| 11 | 08–09–2017 | ನಗದು ಜಮಾ | 1,385/– |
| | | | 1,91,935/– |

03–08–2018 ರಂದು ರೂ.32,610/– ಅನುದಾನ ಬಾಬ್ತು ಹೊಂದಾಣಿಕೆಯಾಗಿರುತ್ತದೆ. ಸದರಿ ಮೊತ್ತ 2018–19ನೇ ಸಾಲಿನಲ್ಲಿ ಹೊಂದಾಣಿಕೆಯಾಗಿರುತ್ತದೆ.

| ಎಚ್.ಎಂ.ಎಂ ಖಾತೆ ಸಂಖ್ಯೆ:64000861010 | | | |
|---|---|---|---|
| 1 | 05–04–2017 | ನಗದು ಜಮಾ | 4,315/– |
| 2 | 15–09–2017 | ನಗದು ಜಮಾ | 1,943/– |
| 3 | 27–09–2017 | ನಗದು ಜಮಾ | 2,736/– |
| 4 | 01–03–2018 | ನಗದು ಜಮಾ | 7,897/– |
| | | | 16,891/– |

**ಫೋಷ್ವಾರೆ**

| **I** | | |
|---|---|---|
| 1 | ಜಿ.ಆರ್.ಎ ಖಾತೆ ಹೊಂದಾಣಿಕೆಯಾಗಿರುವ ಮೊತ್ತ (2016–17) | 1,92,270/– |
| 2 | ಜಿ.ಆರ್.ಎ ಖಾತೆ 2017–18ನೇ ಸಾಲಿನಲ್ಲಿ ಹೊಂದಾಣಿಕೆಯಾಗಿರುವ ಮೊತ್ತ | 1,91,935/– |
| 3 | 03–08–2018ರಲ್ಲಿ ಹೊಂದಾಣಿಕೆ | 32,610/– |
| | **ಒಟ್ಟು ಮೊತ್ತ** | **4,16,815/–** |
| **II** | | |
| 4 | ಎಚ್.ಎಂ.ಎಂ ಖಾತೆ ಬಾಬ್ತು | 16,891/– |

**I + II= 4,33,706/- ಆದ ಕಾರಣ ಆಡಿಟ್ ವರದಿಯಲ್ಲಿ ಸೂಚಿತ ಆಕ್ಷೇಪಣೆ ಕೈ ಬಿಡಲು ಕೋರಿದೆ.**

**21.Online Programme ವಿವಿಧ ಖಾತೆಗಳ ಪರಿಶೀಲನೆ ಕುರಿತು :–**

2017–18ನೇ ಸಾಲಿಗೆ ಮೈಸೂರು ವಿಶ್ವವಿದ್ಯಾನಿಲಯ Online Programme ಸಂಬಂಧಿಸಿದಂತೆ ನಗದು ಪುಸ್ತಕ ಬ್ಯಾಂಕ್ ಸ್ಟ್ರೋಲ್ ವಿವರಗಳನ್ನು ಪರಿಶೀಲಿಸಲಾಗಿ ಕೆಳಗಿನಂತೆ 3 ವಿವಿಧ ಖಾತೆಗಳನ್ನು ನಿರ್ವಹಿಸಿರುವುದು ಕಂಡುಬಂದಿರುತ್ತದೆ.

1. Online Programme Escrow Account HDFC A/C No : 50200007531292
2. Online Programme Account HDFC A/C No 50100062717249
3. Online Programme Reserve Account HDFC/AC No :50100062940329

ಮೇಲ್ಕಂಡ ಖಾತೆಗಳ ನಗದು ಪುಸ್ತಕಗಳನ್ನು ಪರಿಶೀಲಿಸಲಾಗಿ ಒಂದು ಖಾತೆಯಿಂದ ಇನ್ನೊಂದು ಖಾತೆಗೆ ಮೊತ್ತಗಳನ್ನು ವರ್ಗಾವಣೆ ಮಾಡಿರುವ ವಿವರಗಳನ್ನು ದಾಖಲಾಗಿರುತ್ತದೆ ಹಾಗೂ ಯಾವುದೇ ವೆಚ್ಚವನ್ನು ಭರಿಸದಿರುವುದು ಕಂಡುಬಂದಿರುತ್ತದೆ. Online Programme ನ 3 ವಿವಿಧ ಖಾತೆಗಳಲ್ಲಿ ಮೊತ್ತಗಳ ವರ್ಗಾವಣೆ ನಂತರ ದಿನಾಂಕ:31.03.2018ಕ್ಕೆ ಬ್ಯಾಂಕ್ ಖಾತೆಗಳಲ್ಲಿ ಉಳಿದಿರುವ ಅಂತಿಮ ಶಿಲ್ಕಿನ ವಿವರ ಕೆಳಕಂಡಂತಿರುತ್ತದೆ.

1. Online Programme Escrow A/C Rs:-18,209,14/-
2. Online Programme A/C Rs:-2,02,05,362,.17
3. Online Reserve A/C Rs:-3,15,094.88

ನಗದು ಪುಸ್ತಕ ಪರಿಶೀಲನೆಯಲ್ಲಿ Online Programme ವಿವಿಧ ಖಾತೆಗಳಿಂದ Trust A/C ಗೆ ಹಣ ವರ್ಗಾವಣೆ ಮಾಡಿರುವು ಕಂಡುಬಂದಿರುತ್ತದೆ. ಸದರಿ Trust A/C ನ ಉದ್ದೇಶ ಅದರ Guide Lines, trust A/C ತರದು ನಿರ್ವಹಿಸಲು ಹಾಗೂ Online ವಿವಿಧ ಖಾತೆಗಳನ್ನು ತೆರೆದು ನಿರ್ವಹಿಸಲು ಬಗ್ಗೆ ಕುಲಾಧಿಪತಿಗಳಿಂದ ಪಡೆದಿರುವ ಅನುಮೋದನಾ ಪತ್ರವನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸುವಂತೆ ವಿಚಾರಣೆ ಪತ್ರ ಸಂಖ್ಯೆ:19 ದಿನಾಂಕ:15.05.2019ರಲ್ಲಿ ಕೋರಲಾಗಿತ್ತು ಯಾವುದೇ ವಿವರಗಳನ್ನು ಲೆಕ್ಕ ತನಿಖೆಗೆ ಹಾಜರುಪಡಿಸದಿರುವುದರಿಂದ Online Programme ಗೆ ಖಾತೆ ತೆರೆದಿರು ಬಗ್ಗೆ ಕುಲಾಧಿಪತಿಗಳಿಂದ ಪಡೆದಿರುವ ಆದೇಶವನ್ನು ಹಾಜರುಪಡಿಸಲು ಸೂಚಿಸಿದೆ.

ಕಂಡಿಕೆ 21 ರಲ್ಲಿ ಪ್ರಸ್ತಾಪಿಸಿರುವಂತೆ Trust A/C ನ ಉದ್ದೇಶ ಮತ್ತು Guide Lines, ಹಾಗೂ ಕುಲಾಧಿಪತಿಗಳ ಅನುಮೋದನಾ ಪತ್ರದ ವಿವರಗಳು ಈ ಕೆಳಕಂಡಂತಿರುತ್ತದೆ.

I. **Trust ನ ಉದೇಶ:–**

1. This MOU Governs the establishment, Operation and maintenance of the first party's proposed online educations system for the duration of the MOU

2. This MOU shall govern all programs and courses notified through online learning by the first party on the above mentioned platform for the duration of the MOU

II. **Guide Lines:-** Guide lines details enclosed here with for reference.

III. **ಕುಲಾಧಿಪತಿಗಳ ಅನುಮೋದನೆ:–**

ಪತ್ರ ಸಂಖ್ಯೆ: G,S/10/MOU/2013, ದಿನಾಂಕ:09.10.2013ರ ಕುಲಾಧಿಪತಿಗಳ ಅನುಮೋದನಾ ಪತ್ರವನ್ನು ಮಾಹಿತಿಗಾಗಿ ಇದರೊಂದಿಗೆ ಲಗತ್ತಿಸಲಾಗಿದೆ.

ಮೇಲಿನ ಮಾಹಿತಿ ಮತ್ತು ವಿವರಗಳ ಮೇರೆಗೆ ಕಂಡಿಕೆ 21 ರಲ್ಲಿ ಪ್ರಸ್ತಾಪವಾಗಿರುವ ಆಕ್ಷೇಪಣೇಯನ್ನು ಕೈ ಬಿಡುವಂತೆ ನಿವೇದಿಸಿದೆ.

**22. Online Programme ಬ್ಯಾಂಕ್ ಖಾತೆಗೆ ಜಮೆ ಆಗಿರುವ ಮತ್ತು ವರ್ಗಾವಣೆಯಾಗಿರುವ ಮೊತ್ತಗಳ ವಿವರ :–**

2017–18ನೇ ಸಾಲಿಗೆ Online Programme ಬಾಬ್ತು ಸಂಗ್ರಹವಾಗಿರು ಶುಲ್ಕದ ಮೊತ್ತವನ್ನು HDFC Bank, ಸರಸ್ವತಿ ಪುರಂ ಶಾಖೆ, ಮೈಸೂರು ಇಲ್ಲಿನ ಬ್ಯಾಂಕ್ ಖಾತೆ ಸಂಖ್ಯೆ:50200007531292 ರಲ್ಲಿ ಬ್ಯಾಂಕ್ ಖಾತೆ

ಸಂಖ್ಯೆ:50100062717249 ರಲ್ಲಿ ಹಾಗೂ ಬ್ಯಾಂಕ್ ಖಾತೆ ಸಂಖ್ಯೆ:50100062940329 ರಲ್ಲಿ ನಿರ್ವಹಿಸಲಾಗುತ್ತಿದ್ದು ಖಾತೆಗಳಲ್ಲಿನ ಆರಂಭಿಕ ಶಿಲ್ಕು ಜಮೆ ಹಾಗೂ ವರ್ಗಾವಣೆ ವಿವರ ಕೆಳಗಿನಂತಿದೆ.

| ವಿವರಗಳು | ಮೊತ್ತ (ರೂ.ಗಳಲ್ಲಿ) |
|---|---|
| ದಿನಾಂಕ:01.04.2017ರ ಆರಂಭಿಕ ಶಿಲ್ಕು | 1,56,26,208.68 |
| 2017–18ನೇ ಸಾಲಿಗೆ ಬ್ಯಾಂಕ್ ಖಾತೆಗೆ ಜಮೆ ಬಾಬ್ತು | 6,22,98,255.44 |
| **ಒಟ್ಟು** | **7,79,24,464.12** |
| **ಖರ್ಚು ವರ್ಗಾವಣೆ** | |
| Online Escrow ಖಾತೆ –1,40,44,639.22<br>Online Programme ಖಾತೆ –3,97,00,764.00<br>Online Reserve ಖಾತೆ –36,40,394.71 | 5,73,85,797.93 |
| ದಿನಾಂಕ:31.03.2018ರ ಅಂತಿಮ ಶಿಲ್ಕು | 2,05,38,666.19 |

ಬ್ಯಾಂಕ್ ಖಾತೆಗಳಲ್ಲಿ ಸಂಗ್ರಹಿಸಲಾಗಿರುವ ಮತ್ತು ವರ್ಗಾವಣೆ ಮಾಡಲಾಗಿರುವ ಮೊತ್ತಗಳ ಮಾಹೆವಾರು ವಿವರಗಳನ್ನು ಅನುಬಂಧ–11 ರಲ್ಲಿ ನೀಡಲಾಗಿದೆ.

2017–18ನೇ ಸಾಲಿನಲ್ಲಿ Online Programme ಗೆ ಸಂಬಂಧಿಸಿದಂತೆ HDFC Bank ನಲ್ಲಿ 3 ಖಾತೆಗಳನ್ನು ತೆರೆದಿದ್ದು ಇವುಗಳ ವಿವರ ಕ್ರಮವಾಗಿ

1) ಬ್ಯಾಂಕ್ ಖಾತೆ ಸಂಖ್ಯೆ:– 50200007531292,
2) ಬ್ಯಾಂಕ್ ಖಾತೆ ಸಂಖ್ಯೆ:– 50100062717249 ಮತ್ತು
3) ಬ್ಯಾಂಕ್ ಖಾತೆ ಸಂಖ್ಯೆ:– 50100062940329.

ರಂತೆ ಖಾತೆ ತೆರೆದು ಆನ್ ಲೈನ್‌ಗೆ ಸಂಬಂಧಿಸಿದ ಜಮೆ ಮತ್ತು ಖರ್ಚುಗಳ ವಿವರಗಳನ್ನು ಆಯಾಯ ಸಂಬಂಧಿಸಿದ ಖಾತೆಗಳಲ್ಲಿಯೆ ನಿರ್ವಹಿಸಲಾಗುತ್ತದೆ ಹಾಗೂ Online Programme ನ ನಿಯಮಗಳನುಸಾರ ನಿರ್ವಹಣೆ ಮಾಡಲಾಗುತ್ತಿದ್ದು ಸದರಿ ಯೋಜನೆಯನ್ನು ನಿಯಮದಂತೆ ಪೂರ್ಣಗೊಳಿಸಲಾಗುವುದೆಂಬ ಅಂಶವನ್ನು ಆದ್ಯ ಗಮನಕ್ಕೆ ತರಲಾಗಿದೆ ಹಾಗೂ ಸದರಿ ಆಕ್ಷೇಪಿತ ಕಂಡಿಕೆಯನ್ನು ಕೈ ಬಿಡುವಂತೆ ನಿವೇದಿಸಲಾಗಿದೆ.

**ವಿಶ್ವವಿದ್ಯಾನಿಲಯದ ಹೂಡಿಕೆಗಳು**

**23.2017–18ನೇ ಸಾಲಿಗೆ ಹೂಡಿಕೆ ಮಾಡಿರುವ ಠೇವಣಿಯನ್ನು ಬ್ಯಾಂಕ್ ಖಾತೆವಾರು ತೊಡಗಿಸಿರುವ ವಿವರ:–**

2017–18 ಸಾಲಿನಲ್ಲಿ ವಿಶ್ವವಿದ್ಯಾನಿಲಯದಿಂದ ಬ್ಯಾಂಕ್‌ಗಳಲ್ಲಿ ಹೊಂದಿರುವ ನಿಶ್ಚಿತ ಠೇವಣಿ ವಿವರಗಳನ್ನು ಪರಿಶೀಲಿಸಿದೆ. 2016–17ನೇ ಸಾಲಿನಿಂದ ಮುಂದುವರೆದ 18 ಖಾತೆಗಳಿಂದ ರೂ.2,32,51,49,121/– 2017–18ನೇ ಸಾಲಿನಲ್ಲಿ ಇದೇ ಖಾತೆಗಳಿಂದ ರೂ.28,18,78,469/– ಮತ್ತು ಹೊಸದಾಗಿ 3 ಖಾತೆಗಳಿಂದ ರೂ.5,00,00,000/– ಒಟ್ಟು ರೂ.287,18,78,469/–

ದಿನಾಂಕ:31.03.2018ರ ಅಂತ್ಯಕ್ಕೆ ವಿಶ್ವವಿದ್ಯಾನಿಲಯದ ವಿವಿಧ 10 ಖಾತೆಗಳಲ್ಲಿ ರೂ.286,24,90,143/– ಗಳನ್ನು ನಿಶ್ಚಿತ ಠೇವಣಿ ಖಾತೆಗಳಲ್ಲಿ ತೊಡಗಿಸಿದ್ದು, ಸದರಿ ನಿಶ್ಚಿತ ಠೇವಣಿ ಖಾತೆಗಳ ಮೊತ್ತಕ್ಕೆ ಸಂಬಂಧಪಟ್ಟ ಬ್ಯಾಂಕುಗಳಿಂದ ದೃಢೀಕರಣ ಪತ್ರಗಳನ್ನು

| | |
|---|---|
| ಹೂಡಿಕೆ ಮಾಡಲಾಗಿದೆ 2017–18ನೇ ಸಾಲಿನಲ್ಲಿ ಒಟ್ಟು ರೂ.233,45,37,447/– ಹೊಂಡೆದಿದ್ದು ದಿನಾಂಕ:31.03.2018ರ ಅಮತ್ಯಕ್ಕೆ 10 ಖಾತೆಗಳಲ್ಲಿ ರೂ.2,86,24,90,143/– ಬಾಕಿ ಉಳಿದಿರುತ್ತದೆ. ಬಾಕಿ ಉಳಿದಿರುವ ನಿಶ್ಚಿತ ಠೇವಣಿ ಖಾತೆಗಳಿಗೆ ಸಂಬಂಧಿಸಿದಂತೆ ಬ್ಯಾಂಕ್‌ಗಳಿಂದ ಪಡೆದ ದೃಢೀಕರಣ ಪತ್ರಗಳನ್ನು 2017–18ನೇ ಸಾಲಿನ ಠೇವಣಿ ವಿವರಗಳನ್ನು ಅನುಬಂಧ–12ರಲ್ಲಿ ವಿವರಿಸಲಾಗಿದೆ. | ಪಡೆದು 2017–18ನೇ ಸಾಲಿನ ಲೆಕ್ಕ ಪರಿಶೋಧನಾ ತಂಡಕ್ಕೆ ಒದಗಿಸಲಾಗಿದ್ದು ಸದರಿ ವಿವರಗಳನ್ನು ಪರಿಶೀಲಿಸಲಾಗಿರುತ್ತದೆ<br><br>ಈ ನಿಟ್ಟಿನಲ್ಲಿ ಆಕ್ಷೇಪಿತ ಕಂಡಿಕೆ 23 ನ್ನು ಕೈ ಬಿಡುವಂತೆ ನಿವೇದಿಸಲಾಗಿದೆ. |
| **24.ನಿಶ್ಚಿತ ಠೇವಣಿ ಹೂಡಿಕೆಯಲ್ಲಿ ಬಡ್ಡಿ ನಷ್ಟ ಉಂಟಾಗಿರುವುದು:–**<br><br>ವಿಶ್ವವಿದ್ಯಾನಿಲಯದ ಠೇವಣಿ ವಿವರಗಳನ್ನು ಪರಿಶೀಲಿಸಿದಾಗ ಠೇವಣಿ ಹೂಡಿಕೆಯನ್ನು ವಿವಿಧ ಬ್ಯಾಂಕ್ಗಳಲ್ಲಿ ಬೇರೆ ಬೇರೆ ಬಡ್ಡಿದರದಲ್ಲಿ ಹೂಡಿಕೆ ಮಾಡಿರುವುದು ಕಂಡುಬಮದಿದ್ದು ಠೇವಣಿ ಹೂಡುವಾಗ ಗರಿಷ್ಠ ಬಡ್ಡಿ ದರ ನೀಡುವ ಬ್ಯಾಂಕಿನಲ್ಲಿ ಠೇವಣಿಯನ್ನು ಮಾಡಬಹುದಾಗಿದ್ದು ತುಲನಾತ್ಮಕ ಬಡ್ಡಿದರಪಟ್ಟಿಯನ್ನು ಸಿದ್ದಪಡಿಸಿ ಗರಿಷ್ಠ ಬಡ್ಡಿ ನೀಡುವ ಬ್ಯಾಂಕಿನಲ್ಲಿ ಹೂಡಿಕೆ ಮಾಡುವುದು ಹಣಕಾಸು ಅಧಿಕಾರಿಯವರ ಕರ್ತವ್ಯವಾಗಿರುತ್ತದೆ, ಹೀಗೆ ಮಾಡದಿರುವುದು ನಿಶ್ಚಿತ ಠೇವಣಿ ನಿರ್ವಹಣೆಯಲ್ಲಿ ಗರಿಷ್ಠ ಬಡ್ಡಿಇ ದರ ಪಡೆಯದಿರುವುದರಿಂದ ನಷ್ಟಕ್ಕೆ ಕಾರಣವಾಗಿದೆ.<br><br>ದಿನಾಂಕ:01.04.2017 ರಿಂದ 31.03.2018ರ ಅವಧಿಯ ಈ ನಡುವೆ ಎಸ್.ಬಿ.ಐ ರಾಷ್ಟ್ರೀಕೃತ ಬ್ಯಾಂಕಿನಲ್ಲಿ ವಿವಿಧ ಬಡ್ಡಿ ದರಗಳಲ್ಲಿ ಠೇವಣಿ ಮಾಡಲಾಗಿರುವುದನ್ನು ಪರಿಶೀಲಿಸಿದೆ. ಆರಂಭದಲ್ಲಿ ಠೇವಣಿ ಪಡ್ಡಿದರ ಗರಿಷ್ಠ ಮೊತ್ತ 6.9% ಗಳಾಗಿದ್ದು ಕೆಲವು ಹೂಡಿಕೆಗಳಲ್ಲಿ ಇದೇ ಬ್ಯಾಂಕ್ ಶಾಖೆಯಲ್ಲಿ ಹಾಗೂ ಒಂದೇ ದಿನದಲ್ಲಿ ಶೇ ಕಡಿಮೆ ದರ 5.5% ನಿಶ್ಚಿತ ಠೇವಣಿ ಮಾಡಿರುವುದು ಕಂಡುಬಂದಿದೆ ಗರಿಷ್ಠ ಬಡ್ಡಿ ದರ ಇದ್ದರೂ ಸಹ ಇದೇ ಶಾಖೆಯಲ್ಲಿ ಕಡಿಮೆ ಬಡ್ಡಿ ದರದಲ್ಲಿ ನಿಶ್ಚಿತ ಠೇವಣಿ ಹೂಡಿಕೆ ಮಾಡಿರುವುದು ನಿಯಮಬಾಹಿರವಾಗಿರುತ್ತದೆ. ಆದ್ದರಿಂದ ಗರಿಷ್ಠ ಬಡ್ಡಿ ದರದ ವ್ಯತ್ಯಾಸದ ಮೊತ್ತವನ್ನು ಲೆಕ್ಕಾಚಾರ ಮಾಡಿ ರೂ.38,39,696.85 ಗಳನ್ನು ಸಂಬಂಧಪಟ್ಟ ಅಧಿಕಾರಿಗಳಿಂದ ವಸೂಲಾತಿಗೆ ಸೂಚಿಸಲಾಗಿದೆ ವಿವರಗಳನ್ನು ಅನುಬಂಧ–13ರಲ್ಲಿ ನೀಡಲಾಗಿದೆ. | ಕಂಡಿಕೆ 24 ರಲ್ಲಿ ದಿನಾಂಕ:01.04.2017 ರಿಂದ 31.03.2018ರ ಅವಧಿಯಲ್ಲಿ ಎಸ್,ಬಿ,ಐ ರಾಷ್ಟ್ರೀಕೃತ ಬ್ಯಾಂಕಿನಲ್ಲಿ ಒಂದೇ ದಿನ ಗರಿಷ್ಠ ಬಡ್ಡಿ ದರ ಮೊತ್ತ ರೂ.6.9% ಹಾಗೂ ಕಡಿಮೆ ಬಡ್ಡಿ ದರ ರೂ.5.5% ಇದ್ದು ಒಂದೇ ಬ್ಯಾಂಕಿನಲ್ಲಿ ಒಂದೇ ದಿನದ ನಿಶ್ಚಿತ ಠೇವಣಿಯಲ್ಲಿ ಕಡಿಮೆ ಬಡ್ಡಿದರ ರೂ.5.5% ರಲ್ಲಿ ತೊಡಗಿಸಿದ್ದು ಇದರಿಂದ ನಿಶ್ಚಿತ ಠೇವಣಿ ಮೊತ್ತದಲ್ಲಿ ಭಾರಿ ನಷ್ಟ ಉಂಟಾಗಿದ್ದು ರೂ.38,39,697/–ಗಳನ್ನು ಸಂಬಂಧ ಪಟ್ಟವರಿಂದ ವಸೂಲಿಸುವಂತೆ ಪ್ರಸ್ತಾಪಿಸಲಾಗಿರುತ್ತದೆ ಆದರೆ ವಿಶ್ವವಿದ್ಯಾನಿಲಯದ ಆವರಣದಲ್ಲಿರುವ ರಾಷ್ಟ್ರೀಕೃತ ಬ್ಯಾಂಕ್ ಆದ ಎಸ್,ಬಿ,ಐ ಬ್ಯಾಂಕಿನಲ್ಲಿ ವಿಶ್ವವಿದ್ಯಾನಿಲಯದ ವ್ಯವಹಾರಗಳು ನಡೆಯುತ್ತಿರುವುದರಿಂದ ಸದರಿ ನಿಶ್ಚಿತ ಠೇವಣಿ ಮೊತ್ತವನ್ನು ಇದೇ ರಾಷ್ಟ್ರೀಕೃತ ಬ್ಯಾಂಕಿನಲ್ಲಿ ತೊಡಗಿಸಲಾಗಿದೆ. ಮುಂದುವರಿದು ಅನುಬಂಧ–13ರಲ್ಲಿ ಪ್ರಸ್ತಾಪಿಸಲಾಗಿರುವ ನಿಶ್ಚಿತ ಠೇವಣಿ ಮೊತ್ತವನ್ನು ದಿನಾಂಕ:01.04.2017 ರಿಂದ 31.03.2018ರ ಅವಧಿಯಲ್ಲಿ ತೊಡಗಿಸಲಾದ್ದು ಈ ಅವಧಿಯಲ್ಲಿ ಅಂದರೆ ದಿನಾಂಕ:15.04.2017 ರಲ್ಲಿ ಬ್ಯಾಂಕಿನ ಬಡ್ಡಿದರ ಶೇ.6.9% ಹಾಗೂ ದಿನಾಂಕ:29.06.2017 ಮತ್ತು ದಿನಾಂಕ:05.07.2017ರಲ್ಲಿ ಶೇ.5.5% ರಷ್ಟು ಬಡ್ಡಿ ದರವಿರುತ್ತದೆ ಆದರೆ ಕಂಡಿಕೆಯಲ್ಲಿ ಪ್ರಸ್ತಾಪಿಸಿರುವಂತೆ ಈ ಎರಡೂ ಮಾದರಿಯ ಬಡ್ಡಿದರ ಒಂದೇ ತಿಂಗಳಿಗೆ ಅನ್ವಯಿಸುವುದಿಲ್ಲವಾದ್ದರಿಂದ ವಸೂಲಾತಿಯ ಪ್ರಶ್ನೆ ಉದ್ಭವಿಸುವುದಿಲ್ಲವೆಂಬ ಅಂಶವನ್ನು ಅವಗಾಹನೆಗೆ ತರುತ್ತ ಸದರಿ ಎರಡು ಮಾದರಿಯ ಬಡ್ಡಿದರವನ್ನು ಇದರೊಂದಿಗೆ ಒದಗಿಸಿರುವ ದರ ಪಟ್ಟಿಯಲ್ಲಿ ಪರಿಶೀಲಿಸಬಹುದಾಗಿದೆ<br><br>ಹಾಗೂ ವಿಷಯವನ್ನು ಪರಿಶೀಲಿಸಿ ವಸೂಲಾತಿಗೆ ಸೂಚಿಸಿರುವ ಮೊತ್ತವನ್ನು ವಸೂಲಾತಿಯಿಂದ ಕೈ ಬಿಡುವಂತೆ ನಿವೇದಿಸಲಾಗಿದೆ. |
| **25.ನಿಶ್ಚಿತ ಠೇವಣಿ ಹೂಡಿಕೆಯಲ್ಲಿನ ನ್ಯೂನತೆಗಳು:–**<br><br>**Policy Lapses**<br>Department Of Public Enterprises ಹೊರಡಿಸಿರುವ ಸುತ್ತೋಲೆಯಲ್ಲಿ ಠೇವಣಿ ಮಾಡುವಲ್ಲಿ ಅನುಸರಿಸಬೇಕಾದ ಕ್ರಮಗಳ ಬಗ್ಗೆ ಮಾನದಂಡಗಳನ್ನು ನೀಡಿದೆ ವಿಶ್ವವಿದ್ಯಾನಿಲಯವು | ಕಂಡಿಕೆಯಲ್ಲಿ Investment ಸಮಿತಿಯ ಬಗ್ಗೆ ಪ್ರಸ್ತಾಪಿಸಲಾಗಿದ್ದು ಸದರಿ Investment ಸಮಿತಿಯನ್ನು ಪ್ರಾರಂಭಿಸುವ ಬಗ್ಗೆ ಕ್ರಮ ಕೈಗೊಳ್ಳಲಾಗುವುದು. ದಿನಾಂಕ:31.03.2018ರ |

ಠೇವಣಿ ಇಡುವ ಮೊದಲು ಈ ಮಾನದಂಡಗಳನ್ನು ಪಾಲಿಸುವುದು ಹೂಡಿಕೆಯ ಸುರಕ್ಷತಾ ದೃಷ್ಠಿಯಿಂದ ಅಗತ್ಯವಿರುತ್ತದೆ.

**ಮಾನದಂಡಗಳು**

| | | |
|---|---|---|
| 1 | Bank Networth For Nationalised SC BS for RRBS | 500 corers<br>100 corers |
| 2 | Bank Profitability Track record | 3 years |
| 3 | Capital Adequacy Ratio | 10% |
| 4 | NPA | 2% |
| 5 | Participation in Governments Development program | At least 5program |

ಈ ವಿಶ್ವವಿದ್ಯಾನಿಲಯದಲ್ಲಿ Investment ಸಮಿತಿಯ ನಿರ್ಣಯಗಳಂತೆ ಬ್ಯಾಂಕ್‌ಗಳಲ್ಲಿ ಠೇವಣೀ ಇಡುವುದ Investment Policy ನಿಯಮವಾಗಿರುತ್ತದೆ. ಈ ಸಮಿತಿಯ ಠೇವಣಿ ಇಡಲು ಇಚ್ಛಿಸಿದಂತಹ ಬ್ಯಾಂಕ್‌ಗಳಿಂದ Quotation ದರಪಟ್ಟಿ ಹಾಗೂ ಬ್ಯಾಂಕ್ ಹೊಂದಿರುವ Track Record (Based in DPSE parameters) ನ್ನು ಪಡೆದು ಸಮಿತಿಯಲ್ಲಿ ಮಂಡಿಸಿ ಯಾವ ಬ್ಯಾಂಇನಲ್ಲಿ ಠೇವಣಿ ಇಡಬೇಕು ಹಾಗೂ ಯಾವ ಬ್ಯಾಂಕ್‌ನಲ್ಲಿ ಠೇವಣಿ ಸುರಕ್ಷಿತ ಎಂಬುದನ್ನು ನಿರ್ಣಯಿಸಿ ಕ್ರಮಕೈಗೊಳ್ಳುವುದು ಸೂಕ್ತವಾದ ಹೂಡಿಕೆ ಕ್ರಮವಾಗಿದೆ.

ವರದಿ ಸಾಲಿನ ಎಲ್ಲಾ ನಿಶ್ಚಿತ ಠೇವಣಿಗ ಹೂಡಿಕೆ/ಮರು ಹೂಡಿಕೆಗೆ ಸಂಬಂಧಿಸಿದಂತೆ ದಿನಾಂಕ:31.03.2018ರ ಅಂತ್ಯಕ್ಕೆ ಎಲ್ಲಾ ಠೇವಣಿಗಳ ಬ್ಯಾಂಕ್‌ವಾರು ಅಂತಿಮ ಶಿಲ್ಕನ ವಿವರಗಳ ದೃಢೀಕರಣ ಪತ್ರವನ್ನು ಭಾಗಶಃ ಹಾಜರುಪಡಿಸಲಾಗಿದ್ದು ಪೂರ್ಣ ಪ್ರಮಾಣದಲ್ಲಿ ಪ್ರಮಾಣಪತ್ರಗಳನ್ನು ಬ್ಯಾಂಕ್‌ಗಳಿಂದ ಪಡೆದು ಲೆಕ್ಕಪರಿಶೋಧನೆಗೆ ಹಾಜರುಪಡಿಸದ ಕಾರಣ ಖಚಿತಪಡಿಸಲು ಸಾಧ್ಯವಾಗಿರುವುದಿಲ್ಲ.

1. ಹೂಡಿಕೆ ಮಾಡಿರುವ ಸಂಪನ್ಮೂಲವನ್ನು ಯಾವ ಉದ್ದೇಶಕ್ಕೆ ಹೂಡಿಕೆ ಮಾಡಲಾಗಿದೆ ಎನ್ನುವ ವಿರಗಳನು ತಿಳಿಸಿರುವುದಿಲ್ಲ.

2. 2017–18ನೇ ಸಾಲಿನಲ್ಲಿ ಎಫ್,ಡಿ,ಆರ್‌ಗಳನ್ನು ನಿರ್ವಹಿಸಲಾದ ಗಣಕೀಕೃತ ಪ್ರತಿಯಲ್ಲಿ

ಅಂತ್ಯಕ್ಕೆ ಬ್ಯಾಂಕ್‌ವಾರು ಠೇವಣಿಗಳ ಅಂತಿಮ ಶಿಲ್ಕಿನ ವಿವರಗಳ ದೃಢೀಕರಣ ಪತ್ರಗಳನ್ನು ಒದಗಿಸಲಾಗಿದೆ

1. ವಿಶ್ವವಿದ್ಯಾನಿಲಯದ ಸಂಪನ್ಮೂಲಗಳಿಂದ ಉತ್ಪತ್ತಿಯಾದಂತಹ ಆರ್ಥಿಕ ಆದಾಯದಲ್ಲಿ ವಿಶ್ವವಿದ್ಯಾನಿಲಯದ ಶೈಕ್ಷಣಿಕ ಚಟುವಟಿಕೆಗಳ ನಿರ್ವಹಣೆಯ ನಂತರ ಉಳಿಕೆ ಸಂಪನ್ಮೂಲವನ್ನು ತಾತ್ಕಾಲಿಕವಾಗಿ ಬ್ಯಾಂಕ್‌ಗಳಲ್ಲಿ ತೊಡಗಿಸಿ ಅವಶ್ಯಕ ಬಿದ್ದಾಗ ಸದರಿ ಮೊತ್ತವನ್ನು ಶೈಕ್ಷಣಿಕ ಹಾಗೂ ಅಭಿವೃದ್ಧಿ ಕಾರ್ಯಗಳಿಗೆ ಉಪಯೋಗಿಸಿಕೊಳ್ಳಲಾಗುವುದು.

2. ರಾಷ್ಟ್ರೀಕೃತ ಬ್ಯಾಂಕ್ ಆದ ಸ್ಟೇಟ್ ಬ್ಯಾಂಕ್ ಮೈಸೂರು ಈ ಶಾಖೆಯು

| | |
|---|---|
| ಪರಿಶೀಲಿಸಿದ್ದು ರಾಷ್ಟ್ರೀಕೃತ ಬ್ಯಾಂಕ್‌ಗಳಿಂದ ಬಡ್ಡಿದರಕ್ಕೆ ಸಂಬಂಧಿಸಿದಂತೆ ಕರೆಯಲಾಗಿರುವ ದರಪಟ್ಟಿ ಹಾಜರುಪಡಿಸಿರುವುದಿಲ್ಲ.<br><br>3. ಠೇವಣಿ ಮೊತ್ತದ ಮೇಲೆ ಆದಾಯ ತೆರಿಗೆ ಕಟಾಯಿಸಿರುವ ಟಿ.ಡಿ.ಎಸ್ ಪ್ರಮಾಣ ಪತ್ರ ಹಾಜರುಪಡಿಸಿರುವುದಿಲ್ಲ.<br><br>ಮೇಲಿನ ದಾಖಲೆಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸಲು ಸೂಚಿಸಿದೆ. | ವಿಶ್ವವಿದ್ಯಾನಿಲಯದ ಸಂಕೀರ್ಣದಲ್ಲಿದ್ದು ವಿಶ್ವವಿದ್ಯಾನಿಲಯದ ಎಲ್ಲಾ ಆರ್ಥಿಕ ಚಟುವಟಿಕೆಗಳು ಇದೇ ಬ್ಯಾಂಕಿನಲ್ಲಿ ದಿನಂಪ್ರತಿ ವರ್ಷಪೂರ ಕಾರ್ಯ ಚಟುವಟಿಕೆಗಳನ್ನು ನಡೆಯುತ್ತಿದ್ದು ಈ ಹಿನ್ನಲೆಯಲ್ಲಿ ಎಫ್.ಡಿ.ಆರ್ ಗಳನ್ನು ಆಯಾಯ ಅವಧಿಯ ಬಡ್ಡಿದರ ಆಧಾರದಲ್ಲಿ ತೊಡಗಿಸಲಾಗುವುದು.<br><br>3. ವಿಶ್ವವಿದ್ಯಾನಿಲಯದಿಂದ ತೊಡಗಿಸಿರುವ ಠೇವಣಿ ಮೊತ್ತಕ್ಕೆ ಟಿ.ಡಿ.ಎಸ್ ಕಟಾಯಿಸುತ್ತಿರುವುದಿಲ್ಲವೆಂಬ ಅಂಶವನ್ನು ಆದ್ಯ ಗಮನಕ್ಕೆ ತರಲಾಗಿದೆ,<br><br>ಈ ಹಿನ್ನಲೆಯಲ್ಲಿ ಸದರಿ ಕಂಡಿಕೆಯ ಆಕ್ಷೇಪಣೆಯನ್ನು ಕೈ ಬಿಡುವಂತೆ ನಿವೇದಿಸಲಾಗಿದೆ. |

**26. ನಿಶ್ಚಿತ ಠೇವಣಿ ಮೊತ್ತದ ಬ್ಯಾಂಕ್ ದೃಢೀಕರಣ ಪತ್ರ ಹಾಜರುಪಡಿಸದಿರುವುದು :–**

2017–18ನೇ ಸಾಲಿನಲ್ಲಿ ವಿವಿಧ ಬ್ಯಾಂಕ್‌ಗಳಲ್ಲಿ ನಿಶ್ಚಿತ ಠೇವಣಿಗಳನ್ನು ಹೂಡಿಕೆ ಮಾಡಲಾಗಿದ್ದು 21 ಖಾತೆಗಳಲ್ಲಿನ ನಿಶ್ಚಿತ ಠೇವಣಿಗಳ ಹೂಡಿಕೆಗಳ ಒಟ್ಟು ಮೊತ್ತ ರೂ.201,97,92,696/–ಗಳಲ್ಲಿ ರೂ.1,77,15,75,654/–ಗಳಿಗೆ ಮಾತ್ರ ಬ್ಯಾಂಕುಗಲ ದೃಢೀಕೃತ ಪ್ರಮಾಣ ಪತ್ರಗಳನ್ನು (Confirmation letter) ಲೆಕ್ಕಪರಿಶೋಧನೆಗೆ ಹಾಜರುಪಡಿಸಲಾಗಿದ್ದು ಉಳಿದ 4 ಖಾತೆಗಳ ನಿಶ್ಚಿತ ಠೇವಣಿಗಳ ಮೊತ್ತ ರೂ.24,82,17,042/–ಗಳಿಗೆ ಬ್ಯಾಂಕ್ ದೃಢೀಕರಣ ಖಾತ್ರಿ ಪತ್ರ ಹಾಜರುಪಡಿಸಿರುವುದಿಲ್ಲ ಬ್ಯಾಂಕ್ ದೃಢೀಕರಣ ಖಾತ್ರಿ ಪತ್ರವನ್ನು ಹಾಜರುಪಡಿಸದೆ ಇರುವುದರಿಂದ ಈ ಮೊತ್ತದ ಹಣವು ಬ್ಯಾಂಕಿನಲ್ಲಿಯೇ ಅಥವಾ (Confirmation letter) ಪರಿಶೀಲನೆಗೆ ಹಾಜರುಪಡಿಸುವವರೆಗೆ ರೂ.24,82,17,042/–ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.

**ಬ್ಯಾಂಕ್ ಖಾತ್ರಿ ಪತ್ರ ನೀಡುವ ಮೊಬಲಗಿನ ವಿವರ ಕೆಳಕಂಡಂತಿದೆ.**

| ಕ್ರ.ಸಂ | ಖಾತೆಗಳ ವಿವರ | ನಿಶ್ಚಿತ ಠೇವಣಿ ಮೊಬಲಗು (ರೂ.ಗಳಲ್ಲಿ) |
|---|---|---|
| 1 | GIS | 3,31,17,042 |
| 2 | Centenary fund | 19,20,00,000 |
| 3 | Online Programme | 31,00,000 |
| 4 | Registrar and joint director Social welfare | 2,00,00,000 |
| | **total** | **24,82,17,042** |

ರೂ.24,82,17,042/–ಗಳ ನಿಶ್ಚಿತ ಠೇವಣಿ ಮೊತ್ತಕ್ಕೆ ಸಂಬಂಧ ಪಟ್ಟ ಬ್ಯಾಂಕುಗಳಿಂದ ದೃಢೀಕರಣ ಪತ್ರವನ್ನು ಪಡೆದು ಲೆಕ್ಕಪರಿಶೋಧನೆಗೆ ಹಾಜರು ಪಡಿಸಿರುವುದಿಲ್ಲವೆಂದು 2017–18 ನೇ ಸಾಲಿನ ಕಂಡಿಕೆ 26ರಲ್ಲಿ ಗಮನಿಸಿ ಆಕ್ಷೇಪಿಸಲಾಗಿದ್ದು ಸದರಿ ರೂ.24,82,17,042/–ಗಳ ಮೊತ್ತಕ್ಕೆ ಸಂಬಂಧ ಪಟ್ಟ ಬ್ಯಾಂಕಿನಿಂದ ದೃಢೀಕರಣ ಪತ್ರವನ್ನು ಪಡೆಯಲಾಗಿದ್ದು ಇದರ ಮಾಹಿತಿಯನ್ನು ಇದರೊಂದಿಗೆ ಲಗತ್ತಿಸಿಲಾಗಿದೆ ಇದರ ವಿವರಗಳಉ ಈ ಕೆಳಕಂಡಂತಿರುತ್ತದೆ

| ಕ್ರ ಸಂ | ಬ್ಯಾಂಕಿನ ವಿವರ | ಮೊತ್ತ |
|---|---|---|
| 1 | State Bank of India university Campus Branch Mysuru | 19,20,00,000 |
| 2 | SBI Branch Mysuru | 31,00,000 |
| 3 | SBI Branch Mysuru | 2,00,00,000 |
| 4 | SBI Branch Mysuru | 3,31,17,042 |
| | **Total** | **24,82,17,042** |

ಕಂಡಿಕೆ 26 ರಲ್ಲಿ ಗಮನಿಸಿ ಆಕ್ಷೇಪಿಸಲಾದ ಮೊತ್ತ ರೂ. 24,82,17,042/– ಗಳ ನಿಶ್ಚಿತ ಠೇವಣಿಯ ಮೊತ್ತಕ್ಕೆ ಬ್ಯಾಂಕಿನಿಂದ ದೃಢೀಕರಣ ಪತ್ರವನ್ನು ಲೆಕ್ಕ ಪರಿಶೋಧನೆಗೆ ಒದಗಿಸಲಾಗಿದ್ದು ಆ ಮೇರೆಗೆ ಸದರಿ ಈ ಕಂಡಿಕೆಯ ಮೊತ್ತ ರೂ. 24,82,17,042/–ಗಳನ್ನು ಆಕ್ಷೇಪಣೆಯಿಂದ ಇತ್ಯರ್ಥ ಪಡಿಸುವಂತೆ ನಿವೇದಿಸಲಾಗಿದೆ.

| | |
|---|---|
| **27. ವಾರ್ಷಿಕ ಲೆಕ್ಕಗಳಲ್ಲಿ ಒಂದು ಖಾತೆಯಿಂದ ಇನ್ನೊಂದು ಖಾತೆಗೆ ಹಣ ವರ್ಗಾವಣೆ ಮಾಡಿರುವ ಕುರಿತು:–**<br><br>ಮೈಸೂರು ವಿಶ್ವವಿದ್ಯಾನಿಲಯದ 2017–18ನೇ ಸಾಲಿನ ವಾರ್ಷಿಕ ಲೆಕ್ಕಗಳನ್ನು ಪರಿಶೀಲಿಸಿದಾಗ ಒಟ್ಟು 33 ಖಾತೆಗಳಲ್ಲಿ ಹಣವನ್ನು ಖಾತೆಯಿಂದ ಖಾತೆಗೆ ಸಾಲ ಮತ್ತು ಇತರೆ ಉದ್ದೇಶಗಳಿಗೆ ವರ್ಗಾವಣೆ ಮಾಡಲಾಗಿದೆ.<br><br>(table 1, below)<br><br>ಸದರಿ ಮೊಬಲಗು ವಿವರಗಳನ್ನು ಅನುಬಂಧ–14ರಲ್ಲಿ ನೀಡಿದೆ ಸಾಲ ಮತ್ತು ವರ್ಗಾವಣೆ ಆರ್ಥಿಕ ವಹಿವಾಟುಗಳಿಗೆ ಸಂಡಿಕೇಟ್ ಮತ್ತು ಹಣಕಾಸು ಸಮಿತಿ ಸಭೆಯ ಅನುಮೋದನೆ/ಕುಲಾಧಿಪತಿಗಳಿಂದ ಅನುಮೋದನೆ ಪಡೆದಿರುವ ಪ್ರತಿಗಳನ್ನು ಮತ್ತು ಕರ್ನಾಟಕ ಆರ್ಥಿಕ ಅಂಹಿತೆ– ಅನುಚ್ಛೇದ– 308 ರಿಂದ 311ರ ನಿಯಮಗಳ ಪ್ರಕಾರ ಆರ್ಥಿಕ ಇಲಾಖೆಯ ಪೂರ್ವ ಮಂಜೂರಾತಿ ಪಡೆಯುವುದು ಹಾಗೂ ನಿರ್ದಿಷ್ಟ ಉದ್ದೇಶಗಳಿಗೆ ಮಾತ್ರ ಅನುದಾನಗಳನ್ನು ಬಬಳಕೆ ಮಾಡುವುದು ನಿಯಮವಾಗಿರುತ್ತದೆ ಹಾಗೂ ಇತರೆ ಉದ್ದೇಶಗಳಿಗೆ ವರ್ಗಾಯಿಸತಕ್ಕದ್ದಲ್ಲ ಎಂದು ಸ್ಪಷ್ಟಪಡಿಸಿದೆ. ಅದರಂತೆ ನಿಯಮಗಳನ್ನು ಪಾಲಿಸಿರುವ ಬಗ್ಗೆ ವಿವರ ನೀಡುವಂತೆ ಲೆಕ್ಕ ತನಿಖಾ ವಿಚಾರಣೆ ಸಂಖ್ಯೆ:17/14.05.2019 ರಲ್ಲಿ ಕೋರಲಾಗಿದ್ದು ಯಾವುದೇ ಮಾಹಿತಿ ನೀಡಿರುವುದಿಲ್ಲ ಕೂಡಲೇ ಅಮರ್ಪಕವಾದ ವಿವರಣೆಯನ್ನು ಲೆಕ್ಕ ತನಿಖೆಗೆ ನೀಡುವಂತೆ ಸೂಚಿಸಿದೆ ಹಾಗೂ ಒಂದು ಖಾತೆಯಿಂದ ಇನ್ನೊಂದು ಖಾತೆಗೆ ಸಾಲ ಮತ್ತು ವರ್ಗಾವಣೆಯಾಗಿರುವ ಅನುದಾನ ವರ್ಗಾಯಿಸಿರುವುದು ಮತ್ತು ಖಾತೆಗೆ ಹಿಂಪಡೆದು ಹೊಂದಾಣಿಕೆಯಾಗಿರುವುದರಲ್ಲಿ ವ್ಯತ್ಯಾಸ ಕಂಡುಬಂದಿರುತ್ತದೆ. ವಿವರ ಕೆಳಗಿನಂತಿದೆ.<br><br>(table 2, below)<br><br>ಸಾಲ ಮತ್ತು ವರ್ಗಾವೆ ಮೊತ್ತವನ್ನು ಖಾತೆವಾರು ಬ್ಯಾಂಕ್ ಲೆಕ್ಕಗಳೊಂದಿಗೆ ಸಮನ್ವಯಗೊಳಿಸಿ ಹೊಂದಾಣಿಕೆ ವಿವರವನ್ನು ಹಾಜರುಪಡಿಸುವಂತೆ ಸೂಚಿಸಿದೆ. | ಕಂಡಿಕೆ 27 ಅನುಬಂಧ–14ರಲ್ಲಿ ಗಮನಿಸಿ ಪ್ರಸ್ತಾಪಿಸಲಾದ ಅನುದಾನ/ಹಣವನ್ನು 2017–18ನೇ ಸಾಲಿನ ಆಯವ್ಯಯದಲ್ಲಿ ಸಂಬಂಧಪಟ್ಟ ಅಭಿವೃದ್ಧಿ ಶೀರ್ಷಿಕೆಗಳಲ್ಲಿ ಅನುವು/ಅವಕಾಶ ಕಲ್ಪಿಸಿಕೊಂಡು ಪ್ರತಿಯೊಂದು ಅಭಿವೃದ್ಧಿ ಲೆಕ್ಕಶೀರ್ಷಿಕೆಗಳಡಿಯಲ್ಲಿ ಅನುದಾನ ಒದಗಿಸಲಾಗಿರುತ್ತದೆ ಸದರಿ ಸಾಲಿನಲ್ಲಿ ಅವಕಾಶ ಕಲ್ಪಿಸಿಕೊಂಡ ಹಲವು ಲೆಕ್ಕ ಶೀರ್ಷಿಕೆಗಳಡಿಯಲ್ಲಿ ಅನುದಾನ ಬಳಕೆಯಾಗದೆ ಉಳಿದುಕೊಂಡ ಸಂದರ್ಭದಲ್ಲಿ ಅಂತಹ ಅನುದಾನ/ಹಣವನ್ನು ಇತರೆ ಅಭಿವೃದ್ಧಿ ಲೆಕ್ಕಶೀರ್ಷಿಕೆಗಳಿಗೆ ತುರ್ತು ಸಂದರ್ಭದಲ್ಲಿ ವರ್ಗಾಯಿಸಿಕೊಂಡು ವಿಶ್ವವದ್ಯಾನಿಲಯದ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲಾಗಿರುತ್ತದೆ ಈ ವ್ಯವಸ್ಥೆಯಿಂದ ಇತರೆ ಅಭಿವೃದ್ಧಿ ಲೆಕ್ಕ ಶೀರ್ಷಿಕೆಯ ಕಾಮಗಾರಿಗಳಿಗೆ ಯಾವುದೇ ಧಕ್ಕೆಯಾಗದಂತೆ ಎಚ್ಚರವಹಿಸಲಾಗಿರುತ್ತದೆ,<br><br>ಹಾಗೂ ಈ ರೀತಿಯ ವರ್ಗಾವಣೆ ಸಂಬಂಧ ಸಂಬಂಧಪಟ್ಟ ಸಿಂಡಿಕೇಟ್ ಸಮಿತಿ, ಹಣಕಾಸು ಸಮಿತಿ ಹಾಗೂ ಕುಲಪತಿಗಳಿಂದ ಅನುಮೋದನೆ ಪಡೆಯಲು ಕ್ರಮವಹಿಸಲಾಗಿರುತ್ತದೆ. ಎಂಬ ಅಂಶವನ್ನು ಆದ್ಯ ಗಮನಕ್ಕೆ ತರಲಾಗಿದೆ. ಮುಂದುವರಿದು ಹೀಗೆ ಒಂದು ಖಾತೆಯಿಂದ ಇನ್ನೊಂದು ಖಾತೆಗೆ ವರ್ಗಾವಣೆ ಮಾಡಿಕೊಂಡ ಅನುದಾನ/ಹಣವನ್ನು 2017–18ನೇ ಸಾಲಿನ ಲೆಕ್ಕಪತ್ರಗಳಲ್ಲಿ ಬ್ಯಾಂಕಿನ ಸ್ಕ್ರೋಲ್‌ನೊಂದಿಗೆ ಹಾಗೂ ಸಂಬಂಧಪಟ್ಟ ನಗದು ಪುಸ್ತಕದೊಂದಿಗೆ ಲೆಕ್ಕ ಸಮನ್ವಯಗೊಳಿಸಿಕೊಳ್ಳಲಾಗಿರುತ್ತದೆ ಎಂಬ ಅಂಶವನ್ನು ಆದ್ಯ ಗಮನಕ್ಕೆ ತರಲಾಗಿದೆ.<br><br>ಈ ನಿಟ್ಟಿನಲ್ಲಿ ಸದರಿ 2017–18ನೇ ಸಾಲಿನ ಹಣ ವರ್ಗಾವಣೆ ಸಂಬಂಧದ ಶೀರ್ಷಿಕೆಯ ಕಂಡಿಕೆಯ ಆಕ್ಷೇಪಣೆಯನ್ನು ಕೈ ಬಿಡುವಂತೆ ನಿವೇದಿಸಲಾಗಿದೆ. |

Table 1:

| | ಮೊತ್ತ (ರೂ.ಗಳಲ್ಲಿ) |
|---|---|
| 1) ಒಂದು ಖಾತೆಯಿಂದ ಇನ್ನೊಂದು ಖಾತೆಗೆ ಸಾಲ | 89,51,93,632.23 |
| 2) ಒಂದು ಖಾತೆಯಿಂದ ಇನ್ನೊಂದು ಖಾತೆಗೆ ವರ್ಗಾವಣೆ | 124,07,01,461 |

Table 2:

| | ಮೊತ್ತ (ರೂ.ಗಳಲ್ಲಿ) |
|---|---|
| Transfer from ಸಾಲ | 89,51,93,632.23 |
| Transfer to other A/C | 124,07,01,461 |
| ವ್ಯತ್ಯಾಸ | 34,55,07,828.27 |

## ಭಾಗ – 3

## ಶೈಕ್ಷಣಿಕ ವಿಭಾಗ

### 28. ನಿರ್ವಹಣ ಶುಲ್ಕ ಮತ್ತು ಭದ್ರತಾ ಠೇವಣಿಯನ್ನು ಸ್ವೀಕರಿಸಿರುವ ಸಂಬಂಧ ಪೂರಕ ಲೆಕ್ಕ ಪತ್ರ ದಾಖಲೆಗಳನ್ನು ಲೆಕ್ಕ ಪರಿಶೋಧನೆಗೆ ಹಾಜರುಪಡಿಸದಿರುವುದು:– (ಆಡಳಿತ ವಿಭಾಗ)

ವಿಶ್ವವಿದ್ಯಾನಿಲಯದ ವಿವಿಧ ಭವನಗಳು/ಸಭಾಂಗಣಗಳು/ಮೈದಾನಗಳು ಮತ್ತು ಚಿತ್ರೀಕರಣ ಮಾಡಬಹುದಾದಂತಹ ಇತರೆ ಸ್ಥಳಗಳ ಬಾಡಿಗೆ ಸಂಬಂಧ 2017–18ನೇ ಸಾಲಿನಲ್ಲಿ ನಿರ್ವಹಣಾ ಶುಲ್ಕ ಮತ್ತು ಭದ್ರತಾ ಠೇವಣಿಗಳನ್ನು ಸ್ವೀಕರಿಸಿರುವ ಕೆಲವು ರಶೀದಿ ಪುಸ್ತಕಗಳ ವಿವರ ಈ ಕೆಳಕಂಡಂತಿದೆ.

| ಕ್ರ. ಸಂ | ರಶೀದಿ ಪುಸ್ತಕ ಸಂಖ್ಯೆ | ರಶೀದಿ ಸಂಖ್ಯೆ/ದಿನಾಂಕ | ನಿರ್ವಹಣಾ ಶುಲ್ಕ (ರೂ) | ಭದ್ರತಾ ಠೇವಣಿ (ರೂ) | ಒಟ್ಟು ಸ್ವೀಕೃತಿ (ರೂ) |
|---|---|---|---|---|---|
| 1 | 148 | 7367/20.04.17 | 4,25,000 | 60,000 | 4,85,000 |
| 2 | 148 | 7368/24.04.17 | 15,000 | – | 15,000 |
| 3 | 149 | 7414/01.07.17 | 10,000 | – | 10,000 |
| 4 | 149 | 7418/10.07.17 | 5,000 | – | 5,000 |
| 5 | 150 | 7457/30.10.17 | 1,60,750 | – | 1,60,750 |
| 6 | 150 | 7459/02.11.17 | 7,500 | – | 7,500 |
| 7 | 150 | 7469/18.11.17 | 75,000 | 60,000 | 1,35,000 |
| 8 | 150 | 7475/08.12.17 | 1,52,500 | 60,000 | 2,12,500 |
| 9 | 150 | 7483/27.12.17 | 15,000 | – | 15,000 |
| 10 | 150 | 7494/09.02.18 | 22,500 | – | 22,500 |
| 11 | 150 | 7495/22.02.18 | 1,57,500 | 25,000 | 1,82,500 |
| 12 | 150 | 7496/22.02.18 | 11,000 | 22,000 | 33,000 |
| 13 | 150 | 7497/22.02.18 | 25,000 | 20,000 | 45,000 |
| 14 | 150 | 7498/01.03.18 | 75,000 | 60,000 | 1,35,000 |
| 15 | 151 | 7505/09.03.18 | 7500 | – | 7500 |
| 16 | 151 | 7507/13.03.18 | 7000 | 10,000 | 17,000 |
| 17 | 151 | 7509/14.03.18 | 5000 | 3000 | 8000 |
| 18 | 154 | 7687/20.03.18 | 1,60,000 | 60,000 | 2,20,000 |
| 19 | 716 | 35752/22.03.18 | 2000 | – | 2000 |

ವಿಶ್ವವಿದ್ಯಾನಿಲಯದ ವಿವಿಧ ಭವನಗಳು ಸಭಾಂಗಣಗಳು/ಮೈದಾನಗಳು ಮತ್ತು ಚಿತ್ರೀಕರಣ ಮಾಡಬಹುದಾದ ಸ್ಥಳಗಳ ಬಾಡಿಗೆ ಸಂಬಂಧವಾಗಿ ನಿರ್ವಹಣಾ ಶುಲ್ಕ ಮತ್ತು ಭದ್ರತಾ ಠೇವಣಿಗಳನ್ನು ಸ್ವೀಕರಿಸಿರುವ ಬಗ್ಗೆ ಸಂಪೂರ್ಣ ಲೆಕ್ಕಪತ್ರ ದಾಖಲೆಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸದಿರುವ ಬಗ್ಗೆ ಕಂಡಿಕೆಯಲ್ಲಿ ಪ್ರಸ್ತಾಪಿಸಲಾಗಿರುತ್ತದೆ.

ಕಂಡಿಕೆಯಲ್ಲಿ ಪ್ರಸ್ತಾಪಿಸಿರುವ **ಕ್ರಮಸಂಖ್ಯೆ 01 ರಿಂದ 23ರ ರಶೀದಿ** ಸಂಖ್ಯೆಗಳಿಗೆ ಸಂಬಂಧಿಸಿದ ಸಂಪೂರ್ಣ ಕಡತಗಳನ್ನು ಲೆಕ್ಕಪರಿಶೋಧನೆಗೆ ಹಾಜರು ಪಡಿಸಲು ಸಾಧ್ಯವಾಗದಿರುವುದಕ್ಕೆ ವಿಷಾದಿಸುತ್ತಾ ಕ್ರಮಸಂಖ್ಯೆ 01 ರಿಂದ 23ರ ರಶೀದಿಗಳ ಬಾಡಿಗೆದಾರರ ಮನವಿ ಪತ್ರಗಳು, ಕುಲಪತಿಯವರು ಮತ್ತು ಕುಲಸಚಿವರವರ ಅನುಮೋದನಾ ಪತ್ರಗಳ ಪ್ರತಿಗಳು, ಕಛೇರಿ ಆದೇಶದ ಪ್ರತಿಗಳು, ಹಾಗೂ ರಶೀದಿಗಳ ಜೆರಾಕ್ಸ್ ಪ್ರತಿಗಳನ್ನು ಈ ಕೂಡ ಲಗತ್ತಿಸಿ ಸಲ್ಲಿಸಿದೆ.

ಕಂಡಿಕೆಯಲ್ಲಿನ ಕ್ರಮಾಂಕ 01 ರಿಂದ 23 ರಶೀದಿ ಸಂಖ್ಯೆಗಳಲ್ಲಿ ನಿರ್ವಾಹಣಾ ಶುಲ್ಕ ರೂ.17,02,550/–ಗಳು ಮತ್ತು ಭದ್ರತಾ ಠೇವಣಿ ಮೊತ್ತ ರೂ.4,94,500/–ಗಳು ಸೇರಿದಂತೆ ಒಟ್ಟು ಮೊತ್ತ ರೂ.21,97,050/–ಗಳಲ್ಲಿ ಭದ್ರತಾ ಠೇವಣಿಯ ಹಣ ರೂ.4,94,500/–ಗಳನ್ನು ಕಾರ್ಯಕ್ರಮ ಮುಗಿದ ನಂತರ ಅವರುಗಳಿಂದ ವಿಶ್ವವಿದ್ಯಾನಿಲಯದ ಆಸ್ತಿಗೆ ಯಾವುದೇ ರೀತಿಯ ಲೋಪವಾಗದೇ ಇರುವುದನ್ನು ಪರಿಗಣಿಸಿ ಭದ್ರತಾ ಠೇವಣಿ ಹಣವನ್ನು ಕಡತದ ಮೂಲಕ ಆದೇಶ ಪಡೆದು ಹಿಂದಿರುಗಿಸಲಾಗಿರುತ್ತದೆ ಮುಂದಿನ ಸಾಲುಗಳಿಂದ ಭದ್ರತಾ ಠೇವಣಿ ಹಣವನ್ನು ಬ್ಯಾಂಕ್ ಖಾತೆಗೆ ಜಮಾ ಮಾಡುತ್ತಿರುವುದಾಗಿ ನಿವೇದಿಸುತ್ತಾ ಕಂಡಿಕೆಯಲ್ಲಿ ಪ್ರಸ್ತಾಪಿಸಿರುವ ನಿರ್ವಹಣಾ ಶುಲ್ಕ ಮತ್ತು ಭದ್ರತಾ ಠೇವಣಿಗೆ ಸಂಬಂಧಿಸಿದ ಬಾಡಿಗೆದಾರರ ಮನವಿ ಪತ್ರಗಳು, ಕುಲಪತಿಯವರು ಮತ್ತು ಕುಲಸಚಿವರವರ ಅನುಮೋದನಾ ಪತ್ರಗಳು ಮತ್ತು ಕಛೇರಿ ಆದೇಶಗಳು ಹಾಗೂ ರಶೀದಿಗಳ ಮೂಲ ಪ್ರತಿಗಳನ್ನು ಅಡಹಾಕ್ ಸಮಿತಿ ಸಭೆಯಲ್ಲಿ ಮಂಡಿಸುವುದಾಗಿ ಕೋರುತ್ತಾ **ಕಂಡಿಕೆಯಲ್ಲಿನ ಆಕ್ಷೇಪಿತ ಮೊತ್ತ ರೂ.21,97,050/–ಗಳನ್ನು ತೀರುವಳಿಗೊಳಿಸಬೇಕಾಗಿ ತಮ್ಮಲ್ಲಿ ಕೋರಿದೆ.**

| | | | | | |
|---|---|---|---|---|---|
| 20 | 716 | 35753/22.03.18 | 2,800 | – | 2,800 |
| 21 | 717 | 35832/24.03.18 | 64,000 | 22,000 | 86,000 |
| 22 | 719 | 35903/38,03,18 | 1,75,000 | 32,500 | 2,07,500 |
| 23 | 719 | 35904/28.03.18 | 1,22,500 | 60,000 | 1,82,500 |
| | | | | **ಒಟ್ಟು ಮೊತ್ತ** | 21,97,050 |

ಮೇಲ್ಕಂಡ ರಶೀದಿಗಳ ಮೂಲಕ ಸ್ವೀಕರಿಸಲಾದ ನಿರ್ವಹಣಾ ಶುಲ್ಕ ಮತ್ತು ಭದ್ರತಾ ಠೇವಣಿಗಳಿಗೆ ಸಂಬಂಧಿಸಿದಂತೆ, ಬಾಡಿಗೆದಾರರ ಮನವಿ ಪತ್ರಗಳು, ಕಛೇರಿ ಆದೇಶಗಳು, ಕುಲಪತಿಯವರು ಮತ್ತು ಕುಲಸಚಿವರ ಅನುಮೋದನಾ ಪತ್ರಗಳು, ಭದ್ರತಾ ಠೇವಣಿ ವಹಿಗಳು, ಅನುಮತಿ ಪತ್ರಗಳು, ಸಂಬಂಧಿಸಿದ ಕಡತಗಳು ಮತ್ತು ವಹಿಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸಿರುವುದಿಲ್ಲ.

ಈ ಸಂಬಂಧ ಸಂಪೂರ್ಣ ಲೆಕ್ಕಪತ್ರ ದಾಖಲೆಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸುವಂತೆ ಮೌಖಿಕವಾಗಿ ಹಾಗೂ ವಿಚಾರಣಾ ಪತ್ರ ಸಂಖ್ಯೆ:08/2019–20 ದಿನಾಂಕ:02.05.2019/22/2019–20 ದಿನಾಂಕ:13.05.2019/32/2019–20 ದಿನಾಂಕ: 20.05.2019 ರಲ್ಲಿ 3 ವಿಚಾರಣಾ ಪತ್ರಗಳನ್ನು ನೀಡಿದರೂ ಸಹ ಹಾಜರುಪಡಿಸದೇ ಇರುವುದನ್ನು ಲೆಕ್ಕಪರಿಶೋಧನೆಯಲ್ಲಿ ತೀವ್ರವಾಗಿ ಆಕ್ಷೇಪಿಸಿದ್ದು, ಮೇಲ್ಕಂಡ ರಶೀದಿಗಳ ಮೂಲಕ ಸ್ವೀಕರಿಸಲಾದ ನಿರ್ವಹಣಾ ಶುಲ್ಕ ಮತ್ತು ಭದ್ರತಾ ಠೇವಣಿಗಳ ನಿಖರತೆ ಬಗ್ಗೆ ಪರಿಶೋಧಿಸಲು ಸಾಧ್ಯವಾಗದೇ ಸ್ವೀಕರಿಸಿರುವ **ಒಟ್ಟು ರೂ.21,97,050/–ಗಳನ್ನು ಆಕ್ಷೇಪಣೆಗೆ ಸೂಚಿಸಲಾಗಿದೆ.**

**29. ಸ್ನಾತಕೋತ್ತರ ಕೋರ್ಸುಗಳಿಗೆ ಪ್ರವೇಶಾತಿ ಪಡೆದ ವಿದ್ಯಾರ್ಥಿಗಳ ವಿವರಗಳು ಮತ್ತು ಶುಲ್ಕ ವಸೂಲಾತಿಯ ವಿವರಗಳ ಪರಿಶೀಲನೆ:– (ಮಹಾರಾಜ ಕಾಲೇಜು)**

ಮೈಸೂರು ವಿಶ್ವವಿದ್ಯಾನಿಲಯದ ಮಹಾರಾಜ ಕಾಲೇಜಿನ 2017–18ನೇ ಸಾಲಿನಲ್ಲಿ ಸ್ನಾತಕೋತ್ತರ ಕೋರ್ಸುಗಳಾದ ಅಪರಾಧಶಾಸ್ತ್ರ (Criminology) ಹಾಗೂ ಅಂತರರಾಷ್ಟ್ರೀಯ ಸಂಬಂಧಗಳು (International Relationship INR) ಕೋರ್ಸುಗಳಿಗೆ ಪ್ರವೇಶಾತಿಯನ್ನು ವಿದ್ಯಾರ್ಥಿಗಳು ಪಡೆದಿರುತ್ತಾರೆ. ಶುಲ್ಕ ವಸೂಲಾತಿಯ ವಿವರಗಳನ್ನು ಪರಿಶೀಲಿಸಲಾಗಿದ್ದು, ವಿವರ ಈ ಕೆಳಕಂಡಂತಿದೆ.

**(ಎ) ಮೊದಲನೇ ವರ್ಷದ ಅಪರಾಧ ಶಾಸ್ತ್ರ (ಸ್ಕೀಂ 'ಎ')**

| Sl. No | Category | No of Students | Demand | Collection | Balance | Remarks |
|---|---|---|---|---|---|---|
| 1 | SC | 03 | 50700 | 16900 | 33800 | |
| 2 | IIA | 01 | 16900 | 16900 | - | |
| 3 | IIIA | 01 | 16900 | 7900 | 9000 | |

ಪ್ರಸ್ತಾವಿತ ಕಂಡಿಕೆಯಲ್ಲಿ Criminology ಕೋರ್ಸ್‌ನ ಮೊದಲನೇ ವರ್ಷ ಮತ್ತು ಎರಡನೇ ವರ್ಷ International Relationship (INR) ಮೊದಲೇ ವರ್ಷದ ವಿದ್ಯಾರ್ಥಿಗಳಿಗೆ (SC/ST, ಮತ್ತು ಹಿಂದುಳಿದ ವರ್ಗಗಳು) ವಿಶ್ವವಿದ್ಯಾನಿಲಯದ ಫೀಸ್ ಪರಿಷ್ಕರಣಾ ಸಮಿತಿಯಿಂದ ನಿರ್ಧರಿತವಾಗಿರುವ ಫೀಸ್‌ಗಳಿಗೆ ಸರ್ಕಾರದ ಆದೇಶದನ್ವಯ ರಿಯಾಯಿತಿ ನೀಡಿ ಪ್ರವೇಶಾತಿ ಕಲ್ಪಿಸಲಾಗಿದೆ. ಇದರಿಂದಾಗಿ ಮೈಸೂರು ವಿಶ್ವವಿದ್ಯಾನಿಲಯ ಮತ್ತು ಮಹಾರಾಜ ಕಾಲೇಜಿಗೆ ಬರಬೇಕಾಗಿರುವ ಮೊತ್ತ 2017–18ನೇ ಸಾಲಿನ ಫೀಸ್ ಬೇಡಿಕೆ ವಸೂಲಾತಿ ಮತ್ತು ಬಾಕಿ ವಿವರದ ಪ್ರಕಾರ **ರೂ.1,14,980/–** ಆಗಿದ್ದು ಈ ಮೊತ್ತವು ಜಿಲ್ಲಾ ಸಮಾಜ ಕಲ್ಯಾಣ ಇಲಾಖೆ, ಮೈಸೂರು ಇವರಿಂದ ಬಿಡುಗಡೆಯಾಗಿ ಪ್ರಾಂಶುಪಾಲರು ಮಹಾರಾಜ ಕಾಲೇಜು ಮೈಸೂರು ಇಲ್ಲಿ ನಿರ್ವಹಿಸಲ್ಪಡುತ್ತಿರುವ SC/ST Scholorship SB A/cಗೆ ಹೊಂದಾಣಿಕೆಯಾಗಿರುತ್ತದೆ ಈ ಮೊತ್ತವನ್ನು ಚಲನ್ ಸಂಖ್ಯೆ:21137 ದಿನಾಂಕ:24.01.2018 ರಲ್ಲಿ ವಿಶ್ವವಿದ್ಯಾನಿಲಯದ ಸಾಮಾನ್ಯ ರೆವಿನ್ಯೂ

| | | | | | | |
|---|---|---|---|---|---|---|
| 4 | IIIB | 01 | 16900 | 7900 | 9000 | |
| 5 | GM (University of mysore) | 01 | 16900 | 16900 | - | |
| 6 | GM | 03 | 50700 | 50700 | - | |
| 7 | GM (Other State) | 01 | 16900 | 16900 | - | |
| **Total** | | **11** | **185900** | **134100** | **51800** | |

(ಬಿ) ಮೊದಲನೇ ವರ್ಷದ ಅಪರಾಧ ಶಾಸ್ತ್ರ (ಸ್ಕೀಂ 'ಬಿ')

| Sl. No | Category | No of Students | Demand | Collection | Balance | Remarks |
|---|---|---|---|---|---|---|
| 1 | IIA | 01 | 23900 | 23900 | - | - |
| 2 | GM (Other State) | 03 | 83700 | 83700 | - | - |
| 3 | GM (University of mysore) | 01 | 23900 | 23900 | - | - |
| 4 | FN (Foregin National) | 01 | 34400 | 34400 | - | - |
| **Total** | | **06** | **165900** | **165900** | | |

(ಸಿ) ಎರಡನೇ ವರ್ಷದ ಅಪರಾಧ ಶಾಸ್ತ್ರ (ಸ್ಕೀಂ 'ಎ')

| Sl. No | Category | No of Students | Demand | Collection | Balance | Remarks |
|---|---|---|---|---|---|---|
| 1 | SC | 02 | 28000 | 6000 | 22000 | |
| 2 | ST | 02 | 28000 | 28000 | - | |
| 3 | Cat-1 | 01 | 14000 | 6250 | 7480 | |
| 4 | IIIA | 01 | 14000 | 14000 | - | |
| 5 | GM (Other State) | 01 | 26320 | 26320 | - | |
| 6 | GM | 02 | 28000 | 28000 | - | |
| **Total** | | **09** | **138320** | **108840** | **29480** | |

(ಡಿ) ಎರಡನೇ ವರ್ಷದ ಅಪರಾಧ ಶಾಸ್ತ್ರ (ಸ್ಕೀಂ 'ಬಿ')

ಖಾತೆಗೆ ಜಮಾ ಮಾಡಲಾಗಿದೆ (ಚಲನ್ ಪ್ರತಿ ಲಗತ್ತಿಸಿದೆ)

ಆದ್ದರಿಂದ ಸೂಚಿತ ವಸೂಲಾತಿ ಕಂಡಿಕೆ ಕೈಬಿಡಲು ಕೋರಿದೆ.

| Sl. No | Category | No of Students | Demand | Collection | Balance | Remarks |
|---|---|---|---|---|---|---|
| 1 | SC | 01 | 22000 | 14000 | 8000 | |
| 2 | CAT-1 | 01 | 26000 | 26000 | - | |
| 3 | GM (Other State) | 01 | 26000 | 26000 | - | |
| **Total** | | **03** | **74000** | **66000** | **8000** | |

**International (INR) 1st year (Scheme 'A')**

| Sl. No | Category | No of Students | Demand | Collection | Balance | Remarks |
|---|---|---|---|---|---|---|
| 1 | SC | 05 | 39500 | 31600 | 7900 | |
| 2 | ST | 02 | 15800 | - | 15800 | |
| 3 | Cat-1 | 01 | 7900 | 5900 | 2000 | |
| **Total** | | **08** | **63200** | **37500** | **25700** | |

**International (INR) 2st year (Scheme 'A')**

| Sl. No | Category | No of Students | Demand | Collection | Balance | Remarks |
|---|---|---|---|---|---|---|
| **1** | **SC** | **06** | **36000** | **36000** | **-** | |

**ಸ್ನಾತಕೋತ್ತರ ಕೋರ್ಸುಗಳಲ್ಲಿ ಬಾಕಿ ಇರುವ ವಸೂಲಿಸಬೇಕಾದ ಮೊತ್ತದ ವಿವರಗಳು ಈ ಕೆಳಕಂಡಂತದೆ.**

| Sl. No | Category | Demand | | Total amount |
|---|---|---|---|---|
| | | 1st year | 2nd year | |
| 1 | Criminology | 51800 | 37480 | 89280 |
| 2 | International Relation INR | 25700 | - | 25700 |
| **Total** | | **77500** | **37480** | **114980** |

2017–18ನೇ ಸಾಲಿನಲ್ಲಿ ಶೈಕ್ಷಣಿಕ ವರ್ಷಕ್ಕೆ ಸ್ನಾತಕೋತ್ತರ ಕೋರ್ಸ್‌ಗಳಾದ ಅಪರಾಧ ಶಾಸ್ತ್ರ (ಕ್ರಿಮಿನಾಲಜಿ) ಮತ್ತು ಇಂಟರ್‌ನ್ಯಾಷನಲ್ ರಿಲೇಷನ್ ಶಿಪ್ (INR) (ಅಂತರರಾಷ್ಟ್ರೀಯ ಸಂಬಂಧಗಳು) ಕೋರ್ಸುಗಳಿಗೆ ಪ್ರವೇಶಾತಿ ಪಡೆದಿರುವ ಒಟ್ಟು ವಿದ್ಯಾರ್ಥಿಗಳ ಸಂಖ್ಯೆ:43 ಗಳಾಗಿರುತ್ತದೆ. ಆದರೆ ವಿದ್ಯಾರ್ಥಿಗಳು ಚಲನ್ ಮೂಲಕ ಹಾಗೂ ಸರ್ಕಾರದಿಂದ ಮರುಭರಿಕೆಯಾಗಿರುವ ಒಟ್ಟು ಮೊತ್ತ ರೂ.5,48,340/–ಗಳು ವಸೂಲಾತಿಯಾಗಿರುತ್ತದೆ. ಉಳಿಕೆ ವಸೂಲಾತಿಯಾಗಬೇಕಾಗಿರುವ ಒಟ್ಟು ಮೊತ್ತ ರೂ.1,14,980/–ಗಳಾಗಿರುತ್ತದೆ. ಬಾಕಿ ಉಳಿದ ಶುಲ್ಕ

ರೂ.1,14,980/–ಗಳನ್ನು ವಸೂಲಾತಿಗೆ ಸೂಚಿಸಲಾಗಿದೆ. ಈ ಶುಲ್ಕ ಜಮಾ ವಿವರಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸುವಂತೆ ಸೂಚಿಸಿದೆ.

**30. 2017–18ನೇ ಸಾಲಿನ ಪ್ರವೇಶಾತಿ ಶುಲ್ಕಗಳ ಬೇಡಿಕೆ ವಸೂಲಾತಿ ಮತ್ತು ಬಾಕಿ ಶುಲ್ಕಗಳ ವಿವರಗಳು(ಮಹಾರಾಜ ಕಾಲೇಜು)**

2017–18ನೇ ಸಾಲಿನ ಪ್ರವೇಶಾತಿ ವಹಿ ಮತ್ತು ಡಿ.ಸಿ.ಬಿ ವಹಿಯನ್ನು ಪರಿಶೀಲಿಸಲಾಗಿ ವಿವಿಧ ಕೋರ್ಸ್‌ಗಳಿಗೆ ವಿದ್ಯಾರ್ಥಿಗಳು ಪ್ರವೇಶಾತಿ ಪಡೆದಿರುವ ಹಾಗೂ ಕೋರ್ಸ್‌ಗಳಿಗೆ ವಿದ್ಯಾರ್ಥಿಗಳಿಂದ ಶುಲ್ಕ ವಸೂಲಾತಿ ಮಾಡಿರುವ ವಿವರಗಳು ಈ ಕೆಳಕಂಡಂತಿದೆ.

| | **ಮೊತ್ತ ರೂ.ಗಳಲ್ಲಿ** |
|---|---|
| ವಿದ್ಯಾರ್ಥಿಗಳಿಂದ ಶುಲ್ಕ ವಸೂಲಾತಿ ಮಾಡಬೇಕಾಗಿರುವ ಮೊತ್ತ | **1,89,74,580.00** |
| ವಿದ್ಯಾರ್ಥಿಗಳಿಂದ ಶುಲ್ಕ ವಸೂಲಾತಿ ಮಾಡಿರುವ ಮೊತ್ತ | **61,28,774.00** |
| ವಿದ್ಯಾರ್ಥಿಗಳು/ಸರ್ಕಾರದಿಂದ ಮರುಭರಿಕೆಯಾಗಬೇಕಾಗಿರುವ ಮೊತ್ತ | **1,28,45,806.00** |

2017–18ನೇ ಸಾಲಿಗೆ ಸರ್ಕಾರದಿಂದ ಮತ್ತು ವಿದ್ಯಾರ್ಥಿಗಳಿಂದ ಇದುವರೆವಿಗೂ ರೂ.1,28,45,806/–ಗಳನ್ನು ವಸೂಲಾತಿ ಮಾಡದಿರುವುದರಿಂದ ವಿಶ್ವವಿದ್ಯಾನಿಲಯಕ್ಕೆ ಆರ್ಥಿಕ ನಷ್ಟ ಉಂಟಾಗಿರುತ್ತದೆ. ಪ್ರಾಂಶುಪಾಲರು ಸೂಕ್ತ ಕ್ರಮವಹಿಸಿ ಆಯಾಯಾ ವರ್ಷದಲ್ಲೆ ಶುಲ್ಕಗಳನ್ನು ವಿದ್ಯಾರ್ಥಿಗಳಿಂದ ವಸೂಲಿಸಿಕೊಂಡಿದ್ದಲ್ಲಿ ಈ ರೀತಿ ಶುಲ್ಕ ಬಾಕಿ ಉಳಿಯುತ್ತಿರಲಿಲ್ಲ. ಆದ್ದರಿಂದ ರೂ.1,28,45,806/–ಗಳನ್ನು ವಸೂಲಾತಿ ಸೂಚಿಸಿದೆ. ವಿವರಗಳನ್ನು ಅನುಬಂಧ–15ರಲ್ಲಿ ವಿವರಿಸಿದೆ.

ಪ್ರಸ್ಥಾವಿಕೆ ಕಂಡಿಕೆಯಲ್ಲಿ 2017–18ನೇ ಸಾಲಿನ ಲೆಕ್ಕ ಪರಿಶೋಧನಾ ವರದಿಯಲ್ಲಿ ಮಹಾರಾಜ ಕಾಲೇಜು, ಮೈಸೂರು 2017–18ನೇ ಸಾಲಿನ ವಿವಧ ಕೋರ್ಸ್‌ಗಳಿಗೆ ಪ್ರವೇಶಾತಿ ಪಡೆದಿರುವ ಪರಿಶಿಷ್ಠ ಜಾತಿ/ಪರಿಶಿಷ್ಠ ಪಂಗಡದ ವಿದ್ಯಾರ್ಥಿಗಳು ಮತ್ತು ಹಿಂದುಳಿದ ವರ್ಗದ ವಿದ್ಯಾರ್ಥಿಗಳಿಗೆ ಕಾಲೇಜಿನಿಂದ ನಿಗದಿತವಾಗಿರುವ ಪ್ರವೇಶಾತಿ ಶುಲ್ಕದಲ್ಲಿ ಸರ್ಕಾರಿ ಆದೇಶದನ್ವಯ ಪ್ರವೇಶ ಅವಕಾಶ ಕಲ್ಪಿಸಲಾಗಿದೆ.

ಇದರಿಂದಾಗಿ ನಿಗದಿತವಾದ ಶುಲ್ಕಕ್ಕೆ ರಿಯಯಿತಿ ನೀಡಿರುವ ಬಾಬ್ತು ಜಿಲ್ಲಾ ಅಧಿಕಾರಿಗಳು ಪರಿಶಿಷ್ಠ ಜಾತಿ/ಪರಿಶಿಷಗ್ಠ ಇಲಾಖೆ ಮತ್ತು ಜಿಲ್ಲಾ ಅಧಿಕಾರಿಗಳು ಸಮಾಜ ಕಲ್ಯಾಣ ಉಲಾಖೆಯಿಂದ ಮರುಭರಿಕೆಯಾಗದೆ ಇರುವ ಬಗ್ಗೆ ಕಂಡಿಕೆಯಲ್ಲಿ ಉಲ್ಲೇಖಿಸಲಾಗಿದೆ.

ಪ್ರಸ್ತುತ ಈ ಮೊತ್ತವು ಸಂಬಂಧಿಸಿದ ಇಲಾಖೆಗಳಿಂದ ಕಾಲೇಜು ಖಾತೆಗೆ ಮರುಭರಿಕೆಯಾಗಿರುತ್ತದೆ. ಈ ರೀತಿ ಮರುಭರಿಕೆಯಾದ ಮೊತ್ತವನ್ನು ಜಿ.ಆರ್.ಎ ಖಾತೆ ಹಾಗೂ ಕಾಲೇಜಿನ ಖಾತೆಗೆ ಜಮೆ ಮಾಡಲಾಗಿರುತ್ತದೆ. ಅದರ ವಿವರ ಈ ರೀತಿ ಇದೆ.

| ಕ್ರ.ಸಂ | ಖಾತೆ ವಿವರ | ಚಲನ್ ಸಂಖ್ಯೆ/ದಿನಾಂಕ | | ಮೊತ್ತ |
|---|---|---|---|---|
| 1 | ಜಿ.ಆರ್.ಎ | 21136/28.12.2017 | ಪ.ಜಾತಿ/ಪ.ಪಂಗಡದ ವಿದ್ಯಾರ್ಥಿಗ ಪ್ರವೇಶಾತಿ ಶುಲ್ಕದ ಬಾಬ್ತು | 45,167 |
| 2 | | 21137/24.01.2018 | | 17,90,344/– |
| 3 | | 22645/01.03.2018 | | 13,09,205/– |
| | | | **ಒಟ್ಟು ಮೊತ್ತ** | **31,44,716/–** |
| 1 | ಪ್ರಾಂಶುಪಾಲರು ಮಹಾರಾಜ ಕಾಲೇಜು, ಮೈಸೂರು | 47000/27.12.2017 | | 43,76,002/– |
| 2 | | 92531/01.032018 | | 16,233/– |
| 3 | | 21137/24.01.2018 | | 11,94,225/– |
| 4 | | 47019/28.02.2018 | | 83,780/– |
| 5 | | 47007/23.01.2018 | | 25,92,125/– |
| 6 | | 22645/01.03.2018 | | 45,167/– |
| 7 | | | | |
| 8 | | | | |
| 9 | | | | |
| | | | **ಒಟ್ಟು** | **83,07,532/–** |

**ಘೋಷ್ವಾರೆ**

| | | |
|---|---|---|
| ಎ | ಜಿ.ಆರ್.ಎ ಖಾತೆಗೆ ಹೊಂದಾಣಿಕೆಯಾಗಿರುವ ಮೊತ್ತ | 31,44,716/- |
| | ಪ್ರಾಂಶುಪಾಲರು ಮಹಾರಾಜ ಕಾಲೇಜು, ಖಾತೆಗೆ ಹೊಂದಾಣಿಕೆಯಾಗಿರುವ ಮೊತ್ತ | 83,07,532/- |
| | ಒಟ್ಟು ಮೊತ್ತ | 1,14,52,548/- |
| | | |
| ಬಿ | ಆಡಿಟ್ ವರದಿಯಲ್ಲಿ ಸೂಚಿತ ಮೊತ್ತ ಬಾಕಿ | 1,28,45,806/- |
| | 2017-18ನೇ ಸಾಲಿನಲ್ಲಿ ಮರುಭರಿಕೆ | 1,14,52,548/- |
| | ಮರುಭರಿಕೆ ಆಗಬೇಕಾದ ಮೊತ್ತ | 13,93,558/- |

ಮರುಭರಿಕೆಯಾಗಬೇಕಾಗಿರುವ ಮೊತ್ತದ ಸಲುವಾಗಿ ಕ್ರಮವಹಿಸಲಾಗುವುದು ಮತ್ತು ಈ ವಿವರಗಳನ್ನು ಮುಂದಿನ ಲೆಕ್ಕ ಪರಿಶೋಧನೆಗೆ ಹಾಜರುಪಡಿಸಲಾಗುವುದು.

**31.ಲಲಿತಾ ಕಲಾ ಕಾಲೇಜಿನಲ್ಲಿ ಲಭ್ಯವಿದ್ದ ವಿವಿಧ ಕೋರ್ಸ್‌ಗಳಿಗೆ ಉಚಿತ ಪ್ರವೇಶಾತಿ ಪಡೆದಿರುವ ಪರಿಶಿಷ್ಟಜಾತಿ ವಿದ್ಯಾರ್ಥಿಗಳ ಪ್ರವೇಶಾತಿ ಹಾಗೂ ಇತರೆ ಶುಲ್ಕಗಳನ್ನು ಸಮಾಜ ಕಲ್ಯಾಣ ಇಲಾಖೆಯಿಂದ ಮರುಭರಿಕೆ ಮಾಡಿಕೊಳ್ಳದಿರುವುದರ ಬಗ್ಗೆ(ಲಲಿತಾ ಕಲಾ ಕಾಲೇಜು).**

ಮೈಸೂರು ವಿಶ್ವವಿದ್ಯಾನಿಲಯ ಲಲಿತ ಕಲಾ ಕಾಲೇಜಿನಲ್ಲಿ 2017-18ನೇ ಸಾಲಿಗೆ ಲಭ್ಯವಿದ್ದ ವಿವಿಧ ಕೋರ್ಸ್‌ಗಳಿಗೆ ಪ್ರವೇಶ ಪಡೆದಿರುವ ವಿದ್ಯಾರ್ಥಿಗಳ ಪ್ರವೇಶ ವಹಿಯನ್ನು ಅವರ ವೈಯಕ್ತಿಕ ಕಡತ ಹಾಗೂ ಶುಲ್ಕ ಜಮಾ ಚಲನ್‌ಗಳೊಂದಿಗೆ ಪರಿಶೀಲಿಸಲಾಗಿ, ಸದರಿ ಸಾಲಿಗೆ ಪ್ರವೇಶಾತಿ ಪಡೆದಿರುವ ವಿದ್ಯಾರ್ಥಿಗಳ ಸಂಖ್ಯೆ ಇನ್ನಿತರೆ ಶುಲ್ಕಗಳ ಬೇಡಿಕೆ, ವಸೂಲಾತಿ ಹಾಗೂ ಬಾಕಿ ವಿವರಗಳು ಕೆಳಗಿನಂತಿದೆ.

| ಕ್ರ.ಸಂ | ಕೋರ್ಸ್ | ವಿದ್ಯಾರ್ಥಿಗಳ ಸಂಖ್ಯೆ | ವಸೂಲಿಸಬೇಕಾದ ಪ್ರವೇಶಾತಿ ಒಟ್ಟು ಶುಲ್ಕ(ರೂ) | ವಸೂಲಿಸಿರುವ ಶುಲ್ಕ (ರೂ) | ಬಾಕಿ ಇರುವ ಶುಲ್ಕ (ರೂ) |
|---|---|---|---|---|---|
| 1 | 1st year BPA | 11 | 80,960 | 73,600 | 7,360 |
| 2 | 2nd year BPA | 12 | 71,760 | 53,820 | 17,940 |
| 3 | 3rd year BPA | 07 | 48,860 | 42,880 | 5,980 |
| 4 | 2nd year Diploma | 05 | 25,900 | 25,900 | - |
| 5 | 1st year M.Music | 09 | 89,100 | 79,200 | 9,900 |
| 6 | 2nd year M.Music | 09 | 74,480 | 66,860 | 7,620 |
| 7 | M Dance | 06 | 45,720 | 45,720 | - |
| | | **59** | **4,36,780** | **3,87,980** | **48,800** |

ಒಟ್ಟು ಪ್ರವೇಶಾತಿ ಹಾಗೂ ಇತರೆ ಶುಲ್ಕಗಳ ಮೊತ್ತ ರೂ.4,36,780/-ಗಳನ್ನು ವಸೂಲಿಸಬೇಕಾಗಿದ್ದು,

ಮೈಸೂರು ವಿಶ್ವವಿದ್ಯಾನಿಯದ ಲಲಿತಾ ಕಲಾ ಕಾಲೇಜುನಲ್ಲಿ 2017-18ನೇ ಸಾಲಿನ ಪ್ರವೇಶಾತಿ ವಹಿಯ ಡಿ,ಸಿ,ಬಿ ಬಗ್ಗೆ ಪರಿಶೀಲಿಸಿದ್ದು ಕಂಡಿಕೆಯಲ್ಲಿ ರೂ.48,800/-ಗಳು ಶುಲ್ಕ ಬಾಕಿ ಉಳಿದಿರುವುದಾಗಿ ಪ್ರಸ್ತಾಪಿಸಲಾಗಿರುತ್ತದೆ.

ಕಂಡಿಕೆಯಲ್ಲಿ ಬಾಕಿಯಿರುವ ಶುಲ್ಕ ಕ್ರಮಸಂಖ್ಯೆ:-01 ರ ಮೊತ್ತ **ರೂ.7,360/-** ಕ್ರಮ ಸಂಖ್ಯೆ:-02ರ ಬಾಕಿ ಮೊತ್ತ ರೂ.17,940/-ಗಳಲ್ಲಿ ಮರುಭರಿಕೆಯಾದ ಮೊತ್ತ **ರೂ.11,960/-**ಗಳು ಮತ್ತು ಕ್ರಮ ಸಂಖ್ಯೆ:-05 ರ ಮೊತ್ತ **ರೂ.9,900/-ಗಳು** ಹಾಗೂ ಕ್ರಮ ಸಂಖ್ಯೆ:- 06 ರ ಮೊತ್ತ **ರೂ.7,620/-ಗಳು** ಸೇರಿದಂತೆ ಒಟ್ಟು ಮೊತ್ತ **ರೂ.36,840/-ಗಳು** ಸಮಾಜಕಲ್ಯಾಣ ಇಲಾಖೆಯಿಂದ ಮರುಭರಿಕೆಯಾಗಿದ್ದು **ಪ್ರಾಂಶುಪಾಲರ ಖಾತೆಯಲ್ಲಿ ರೂ.2,690/-ಗಳನ್ನು** ಉಳಿಸಿಕೊಂಡು ದಿನಾಂಕ:08.06.2018 ರಂದು **ರೂ.22,630/-ಗಳು** ಮತ್ತು ದಿನಾಂಕ:22.08.2019ರಂದು **ರೂ.11,520/-ಗಳು** ಸೇರಿದಂತೆ **ಒಟ್ಟು 34,150/-ಗಳನ್ನು ಸಾಮಾನ್ಯ ರೆವಿನ್ಯೂ ಖಾತೆಗೆ** ಜಮಾ ಮಾಡಲಾಗಿರುತ್ತದೆ. ಮರುಭರಿಕೆಯಾಗಿರುವ ವಿದ್ಯಾರ್ಥಿಗಳ ವಿವರಣಾ ಪಟ್ಟಿ ಚಲನ್‌ಗಳ ಪ್ರತಿ ಮತ್ತು ಬ್ಯಾಂಕ್ ಸ್ಟ್ರೋಲ್ ಪಟ್ಟಿ ಲಗತ್ತಿಸಿ ಸಲ್ಲಿಸಿದೆ.

ಆ ಪೈಕಿ ರೂ.3,89,980/–ಗಳನ್ನು ವಸೂಲಿಸಿದ್ದು, ರೂ.48,800/–ಗಳನ್ನು ವಸೂಲಿಸಿದೆ ಬಾಕಿ ಉಳಿಸಿಕೊಂಡಿರುವುದು ಕಂಡುಬಂದಿರುತ್ತದೆ, ಮತ್ತು ಆ ಬಾಕಿ ಶುಲ್ಕ ಮೊತ್ತ ರೂ.48,800/–ಗಳು ಸದರಿ ಸಾಲಿನಲ್ಲಿ ಉಚಿತವಾಗಿ ಪ್ರವೇಶಾತಿ ಪಡೆದಿರುವ ಪರಿಶಿಷ್ಟ ಜಾತಿ ವಿದ್ಯಾರ್ಥಿಗಳಿಂದ ಬರಬೇಕಾಗಿದ್ದ ಮೊತ್ತವಾಗಿದ್ದು, ಅದು ಸಮಾಜ ಕಲ್ಯಾಣ ಇಲಾಖೆಯಿಂದ ಮರುಭರುಕೆಯಾಗದಿರುವುದು ಕಂಡುಬಂದಿರುತ್ತದೆ. ಈ ಸಂಬಂಧ ವಿವರಣೆ ಕೋರಿ ವಿಚಾರಣಾ ಪತ್ರ ಸಂಖ್ಯೆ:03/02.04.2019 ನೀಡಲಾಗಿತ್ತಾದರೂ ಉತ್ತರ ಬಾರದ ಕಾರಣ, ಸದರಿ ಬಾಕಿ ಶುಲ್ಕ ರೂ.48,800/–ಗಳನ್ನು ಸಂಬಂಧಪಟ್ಟವರಿಂದ ವಸೂಲಿಸಿ/ಮರುಭರಿಕೆ ಮಾಡಿಕೊಂಡು ವಿಶ್ವವಿದ್ಯಾನಿಲಯದ ಖಾತೆಗೆ ಜಮಾ ಮಾಡಿ ವರದಿ ಸಲ್ಲಿಸಲು ಸೂಚಿಸಿದೆ.

ಉಳಿದ 2 ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ಮಂಜೂರಾಗದ ಕಾರಣ **ರೂ.11,960/–ಗಳು ಬಾಕಿ** ಉಳಿದಿದ್ದು ಸದರಿ ವಿದ್ಯಾರ್ಥಿಗಳು ಮೂಲ ಅಂಕಪಟ್ಟಿಗಳನ್ನು ಹಿಂಪಡೆಯುವ ಸಮಯದಲ್ಲಿ ಸದರಿ ಶುಲ್ಕವನ್ನು ವಸೂಲಿಸಿ ವಿಶ್ವವಿದ್ಯಾನಿಲಯದ ಖಾತೆಗೆ ಜಮಾ ಮಾಡಿ ಮಾಹಿತಿಯನ್ನು ಒದಗಿಸುವುದಾಗಿ ನಿವೇದಿಸುತ್ತಾ **ಕಂಡಿಕೆಯಲ್ಲಿ ವಸೂಲಾತಿಗೆ ಸೂಚಿಸಿರುವ ಮೊತ್ತ ರೂ.48,800/–ಗಳಲ್ಲಿ (2,690+34,150)=ರೂ.36,840/–ಗಳ ಮೊತ್ತವನ್ನು ತೀರುವಳಿಗೊಳಿಸುವಂತೆ ಕೋರಿದೆ.**

**32.2017–18ನೇ ಸಾಲಿಗೆ ಪ್ರವೇಶಾತಿ ವಿವರ :– (ಯುವರಾಜ ಕಾಲೇಜು)**

2017–18ನೇ ಸಾಲಿಗೆ ಯುವರಾಜ ಕಾಲೇಜಿನ ಸ್ನಾತಕ ಮತ್ತು ಸ್ನಾತಕೋತ್ತರ ಕೋರ್ಸ್‌ಗಳ ವಿದ್ಯಾರ್ಥಿಗಳ ಪ್ರವೇಶಾತಿಗೆ ಸಂಬಂಧಸಿದಂತೆ ವಿದ್ಯಾರ್ಥಿಗಳ ಪ್ರವೇಶಾತಿ ಶುಲ್ಕದ ಬ್ಯಾಂಕ್ ಚಲನ್‌ಗಳನ್ನು ಹಾಗೂ ಪ್ರವೇಶಾತಿ ವಹಿಯ ವಿವರಗಳನ್ನು ಪರಿಶೀಲಿಸಲಾಗಿದ್ದು, ಲೆಕ್ಕ ತಪಾಸಣೆಗೆ ಹಾಜರುಪಡಿಸಿರುವ ಡಿ.ಸಿ.ಬಿ ತಃಖ್ತೆಯಲ್ಲಿನ ವಿವರಗಳು ಕೆಳಗಿನಂತಿದೆ.

**2017–18ನೇ ಸಾಲಿಗೆ ಸ್ನಾತಕ ಕೋರ್ಸ್‌ಗಳ ಪ್ರವೇಶಾತಿ ಶುಲ್ಕದ ಡಿ.ಸಿ.ಬಿ ವಿವರ**

| ಕ್ರ ಸಂ | ವರ್ಷವಾರು ವಿವರ | ವಿದ್ಯಾರ್ಥಿಗಳ ಸಂಖ್ಯೆ | ಬೇಡಿಕೆ ಮೊತ್ತ (ರೂ) | ವಸೂಲಾತಿಯಾಗಿರುವ ಪ್ರವೇಶಾತಿ ಶುಲ್ಕ ಮೊತ್ತ (ರೂ) | ಶುಲ್ಕ ವಿನಾಯಿತಿಯಿಂದ ಬರಬೇಕಾಗಿರುವ ಮೊಬಲಗು (ರೂ) |
|---|---|---|---|---|---|
| 1 | ಪ್ರಥಮ ವರ್ಷ (ಸ್ಕೀಂ 'ಎ' +ಸ್ಕೀಂ 'ಬಿ') | 823 | 1,28,97,790 | 99,77,330 | 29,20,460 |
| 2 | ದ್ವೀತಿಯ ವರ್ಷ (ಸ್ಕೀಂ 'ಎ' +ಸ್ಕೀಂ 'ಬಿ') | 893 | 1,08,58,490 | 76,65,615 | 31,92,875 |
| 3 | ತೃತೀಯ ವರ್ಷ (ಸ್ಕೀಂ 'ಎ' +ಸ್ಕೀಂ 'ಬಿ') | 670 | 71,87,900 | 49,56,313 | 22,28,587 |
| | **ಒಟ್ಟು** | **2386** | **3,09,41,180** | **2,25,99,258** | **83,41,922** |

**2017–18ನೇ ಸಾಲಿಗೆ ಸ್ನಾತಕೋತ್ತರ ಕೋರ್ಸ್‌ಗಳ ಪ್ರವೇಶಾ ಶುಲ್ಕದ ಡಿ.ಸಿ.ಬಿ ವಿವರ**

| ಕ್ರ ಸಂ | ವರ್ಷವಾರು ವಿವರ | ವಿದ್ಯಾರ್ಥಿಗಳ ಸಂಖ್ಯೆ | ಬೇಡಿಕೆ ಮೊತ್ತ (ರೂ) | ವಸೂಲಾತಿಯಾಗಿರುವ ಪ್ರವೇಶಾತಿ ಶುಲ್ಕ ಮೊತ್ತ (ರೂ) | ಶುಲ್ಕ ವಿನಾಯಿತಿಯಿಂದ ಬರಬೇಕಾಗಿರುವ ಮೊಬಲಗು (ರೂ) |
|---|---|---|---|---|---|
| 1 | ಪ್ರಥಮ ವರ್ಷ (ಸ್ಕೀಂ 'ಎ' +ಸ್ಕೀಂ 'ಬಿ') | 266 | 1,00,02,620 | 78,47,135 | 21,55,485 |

ಪ್ರಸ್ಥಾವಿತ ಕಂಡಿಕೆಯಲ್ಲಿ ಯುವರಾಜ ಕಾಲೇಜು, ಮೈಸೂರು 2017–18ನೇ ಸಾಲಿನಲ್ಲಿ ಸ್ನಾತಕ ಕೋರ್ಸುಗಳ ಪ್ರವೇಶಾತಿ ಶುಲ್ಕದ (ವಿದ್ಯಾರ್ಥಿಗಳಿಗೆ) ಸರ್ಕಾರಿ ಆದೇಶದನ್ವಯ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ಹಿಂದುಳಿದ ವಿದ್ಯಾರ್ಥಿಗಳಿಗೆ ನಿಗದಿತವಾದ ಪ್ರವೇಶ ಶುಲ್ಕಕ್ಕೆ ವಿನಾಯಿತಿ ನೀಡಿರುವುದರಿಂದ ಕಾಲೇಜಿಗೆ ಬರಬೇಕಾಗಿರುವ ಮೊತ್ತ ಆಡಿಟ್ ವರದಿಯಲ್ಲಿ ಸೂಚಿತವಾಗಿರುವಂತೆ ರೂ.83,41,922/– ಆಗಿದ್ದು ಈ ಬಾಬ್ತಿನಲ್ಲಿ ರೂ. 49,39,590/– ಗಳನ್ನು ವಿವಿಧ ಸಾಲಿನಲ್ಲಿ ವಿದ್ಯಾರ್ಥಿವೇತನ ಮಂಜೂರು ಮಾಡಿದ್ದು, ಸದರಿ ಮೊತ್ತವನ್ನು ಡಿ.ಸಿ.ಬಿ (2017–18) ವಹಿಯಲ್ಲಿ ನಮೂದಿಸಲಾಗಿದೆ ಹಾಗೂ 2ನೇ ಮತ್ತು 3ನೇ ವರ್ಷಗಳ ಸ್ನಾತಕ ಪದವಿಗಳಿಗೆ ದಾಖಲಾದ ವಿದ್ಯಾರ್ಥಿಗಳ ಶುಲ್ಕವನ್ನು ನಮೂದಿಸಲಾಗುತ್ತಿದ್ದು, ಇದರಲ್ಲಿ ಕೆಲವು ವಿದ್ಯಾರ್ಥಿಗಳು ವೃತ್ತಿಪರ ಕೋರ್ಸುಗಳಿಗೆ ಸೇರಲು ಹಾಗೂ ಇನ್ನಿತರ ಕಾರಣಗಳಿಂದ ಕಾಲೇಜಿನಲ್ಲಿ ವ್ಯಾಸಂಗ ಮುಂದುವರಿಸದ (discontinue) ವಿದ್ಯಾರ್ಥಿಗಳ ಪ್ರವೇಶ ಶುಲ್ಕ ವಸೂಲಾತಿಯಾಗಿರುವುದಿಲ್ಲ.

ಮೇಲಿನ ರೀತಿಯಲ್ಲಿಯೇ 2017–18ನೇ ಸಾಲಿನ ಸ್ನಾತಕೋತ್ತರ ಕೋರ್ಸುಗಳ ಪ್ರವೇಶಾತಿ ಶುಲ್ಕಕ್ಕೆ ಸಂಬಂಧಿಸಿದಂತೆ ಆಡಿಟ್ ವರದಿಯಲ್ಲಿ ಸೂಚಿತವಾಗಿರುವ ಒಟ್ಟು ಮೊತ್ತ ರೂ.36,23,740/– ಆಗಿದ್ದು, ಈ ಬಾಬ್ತಿನಲ್ಲಿ ರೂ. 33,25,255/–ಗಳನ್ನು ವಿವಿಧ ಸಾಲಿನಲ್ಲಿ ವಿದ್ಯಾರ್ಥಿವೇತನ ಮರುಭರಿಕೆಯಾಗಿದ್ದು ಸದರಿ ಮೊತ್ತವನ್ನು ಡಿ.ಸಿ.ಬಿ(2017–18) ವಹಿಯಲ್ಲಿ ನಮೂದಿಸಲಗಿದೆ.

ಜಿಲ್ಲಾ ಅಧಿಕಾರಿಗಳು, ಸಮಾಜ ಕಲ್ಯಾಣ ಇಲಾಖೆಯಿಂದ ಮರುಭರಿಕೆ

| | | | | | |
|---|---|---|---|---|---|
| 2 | ದ್ವಿತೀಯ ವರ್ಷ (ಸ್ಕೀಂ 'ಎ' +ಸ್ಕೀಂ 'ಬಿ') | 257 | 76,18,655 | 61,50,400 | 14,68,255 |
| | **ಒಟ್ಟು** | **523** | **1,76,21,275** | **1,39,97,535** | **36,23,740** |

2017–18ನೇ ಸಾಲಿನ ವಿವಿಧ ಶೈಕ್ಷಣಿಕ ಕೋರ್ಸುಗಳ ವಸೂಲಾತಿ ಮತ್ತು ಬಾಕಿ ವಿವರಗಳನ್ನು ಪರಿಶೀಲಿಸಿದಾಗ ರೂ.1,19,65,662/–ಗಳ ಶುಲ್ಕ ವಿನಾಯಿತಿ ಮೊತ್ತವು (83,41,922 +36,23,740) ಮರಿಭರಿಕೆಯಾಗಬೇಕಾಗಿದ್ದು, ಕಾಲೇಜು ನಿಧಿಗೆ ಮರುಭರಿಕೆ ಮಾಡಿಕೊಂಡು ವಿವರಗಳನ್ನು ಹಾಜರುಪಡಿಸುವವರೆಗೆ **ರೂ.1,19,65,662/–ಗಳನ್ನು** ಆಕ್ಷೇಪಣೆಯಲ್ಲಿಡಲಾಗಿದೆ.

ಆಗಬೇಕಾದ ಮೊತ್ತ ರೂ. 2,98,485/– ಆಗಿರುತ್ತದೆ. ಸದರಿ ಮೊತ್ತದ ಮರುಭರಿಕೆ ಕ್ರಮವಹಿಸಲಾಗುವುದು.

ಆದ ಕಾರಣ, ಪ್ರಸ್ಥಾವಿಕ ಕಂಡಿಕೆಯನ್ನು ಕೈಬಿಡಲು ಕೋರಿದೆ. (ಈ ಸಂಬಂಧ ಜಿಲ್ಲಾ ಅಧಿಕಾರಿಗಳು ಸಮಾಜ ಕಲ್ಯಾಣ ಇಲಾಖೆ, ಮೈಸೂರು ರವರಿಂದ ಮರುಭರಿಕೆ ಆಗಬೇಕಾಗಿರುವ ಮೊತ್ತಕ್ಕೆ ಸಂಬಂಧಿಸಿದಂತೆ ಬರೆದಿರುವ ವಿವರಣೆ ಪತ್ರದ ಪ್ರತಿ ಲಗತ್ತಿಸಿದೆ).

**33. ವಿದ್ಯಾರ್ಥಿ ಪ್ರವೇಶಾತಿ ಶುಲ್ಕದ ಡಿ.ಸಿ.ಬಿ (ಬೇಡಿಕೆ ವಸೂಲಾತಿ ಬಾಕಿ) ವಹಿ ನಿರ್ವಹಣೆ ಕುರಿತು:– (ಯುವರಾಜ ಕಾಲೇಜು)**

ಯುವರಾಜ ಕಾಲೇಜು, ಮೈಸೂರು ಇಲ್ಲಿನ 2017–18ನೇ ಸಾಲಿನ ವಿದ್ಯಾರ್ಥಿಗಳ ಪ್ರವೇಶಾತಿ ಶುಲ್ಕದ ಮೊತ್ತಕ್ಕೆ ಸಂಬಂಧಿಸಿದಂತೆ ಶುಲ್ಕದ ಬೇಡಿಕೆ ವಸೂಲಾತಿ ಬಾಕಿ ಡಿ.ಸಿ.ಬಿ ವಹಿಯನ್ನು ಕ್ರಮಬದ್ಧವಾಗಿ ನಿರ್ವಹಿಸದೇ ಇರುವುದು ಲೆಕ್ಕ ಪರಿಶೀಲನೆಯಲ್ಲಿ ಕಂಡುಬಂದಿರುತ್ತದೆ. ವಿದ್ಯಾರ್ಥಿಗಳಿಗೆ ನಿಗದಿಪಡಿಸಿರುವ ಪ್ರವೇಶಾತಿ ಶುಲ್ಕದ ಮೊತ್ತಕ್ಕೆ ಎದುರಾಗಿ ವಿದ್ಯಾರ್ಥಿಗಳಿಂದ ಪಡೆದಿರುವ ಶುಲ್ಕದ ಮೊತ್ತ ಹಾಗೂ ವರ್ಷದ ಅಂತ್ಯಕ್ಕೆ ಕಟ್ಟದೆ ಬಾಕಿ ಉಳಿದಿರುವ ಶುಲ್ಕದ ಮೊತ್ತದ ವಿವರಗಳನ್ನು ಡಿ.ಸಿ.ಬಿ ವಹಿಯಲ್ಲಿ ಕ್ರಮಬದ್ಧವಾಗಿ ದಾಖಲಿಸಿರುವುದಿಲ್ಲ. ಡಿ.ಸಿ.ಬಿ ವಹಿಯಲ್ಲಿ ದಾಖಲಿಸಿರುವ ವಿವರಗಳನ್ನು ಕಛೇರಿ ಮುಖ್ಯಸ್ಥರು ದೃಢೀಕರಿಸಿರುವದಿಲ್ಲ. ಸದರಿ ವಿಷಯದ ಕುರಿತು ಕಛೇರಿ ಮುಖ್ಯಸ್ಥರು ಕೂಡಲೇ ಕ್ರಮ ಕೈಗೊಂಡು ಡಿ.ಸಿ.ಬಿ ವಹಿಯನ್ನು ಕ್ರಮಬದ್ಧವಾಗಿ ನಿರ್ವಹಿಸಲು ಸೂಚಿಸಿದೆ.

ಪ್ರಸ್ಥಾವಿತ ಕಂಡಿಕೆಯಲ್ಲಿ ಸೂಚಿತವಾಗಿರುವಂತೆ ಸದರಿ ಕಾಲೇಜಿನ ವಿದ್ಯಾರ್ಥಿಗಳ ಪ್ರವೇಶಾತಿ ಶುಲ್ಕದ ಬೇಡಿಕೆ, ವಸೂಲಾತಿ ಮತ್ತು ಬಾಕಿ (DCB) ವಹಿಯ ನಿರ್ವಹಣೆಗೆ ಸಂಬಂಧಿಸಿದಂತೆ, ವಿದ್ಯಾರ್ಥಿಗಳಿಗೆ ನಿಗದಿಪಡಿಸಲಾಗಿರುವ ಪ್ರವೇಶಾತಿ ಶುಲ್ಕ ವಸೂಲಾತಿಯಾಗಿರುವ ಪ್ರವೇಶಾತಿ ಶುಲ್ಕ ಮತ್ತು ಬಾಕಿ ಮೊತ್ತಕ್ಕೆ ಸಂಬಂಧಿಸಿದಂತೆ, ವಿದ್ಯಾರ್ಥಿವಾರು ಮತ್ತು ವಿದ್ಯಾರ್ಥಿಗಳ ಕೆಟಗರಿವಾರು ನಿರ್ವಹಿಸಲಾಗಿದೆ ಮತ್ತು ಈ ವಿವರಗಳನ್ನು ಕಛೇರಿ ಮುಖ್ಯಸ್ಥರಿಂದ ದೃಢೀಕರಿಸಿ, 2018–19ನೇ ಸಾಲಿನ ಲೆಕ್ಕ ತನಿಖೆಗೆ ಹಾಜರುಪಡಿಸಲು ಕ್ರಮವಹಿಸಲಾಗಿದೆ.

ಆದ ಕಾರಣ, ಪ್ರಸ್ಥಾವಿತ ಕಂಡಿಕೆಯನ್ನು ಕೈಬಿಡಲು ಕೋರಿದೆ.

**34. ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ವಿದ್ಯಾರ್ಥಿವೇತನ ಬಟವಾಡೆಯಾಗದೆ ಉಳಿದಿದ್ದು, ಸಮಾಜ ಕಲ್ಯಾಣ ಇಲಾಖೆಗೆ ಮರು ಜಮೆ ಮಾಡದಿರುವುದು:– (ಯುವರಾಜ ಕಾಲೇಜು)**

2016–17ನೇ ಸಾಲಿನಲ್ಲಿ ಕಾಲೇಜಿನಲ್ಲಿ ವ್ಯಾಸಂಗ ಮಾಡಿತ್ತಿರುವ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ವಿದ್ಯಾರ್ಥಿಗಳಿಗೆ ಭಾರತ ಸರ್ಕಾರದ ವತಿಯಿಂದ ಮೆಟ್ರಿಕ್‌ನಂತರ ವಿದ್ಯಾರ್ಥಿವೇತನ ಒಟ್ಟು ರೂ.1,01,86,081/–ಗಳು ಮಂಜೂರಾಗಿರುತ್ತದೆ. ವಿವರಗಳನ್ನು ಅನುಬಂಧ–16 ರಲ್ಲಿ ನೀಡಿದೆ. ವಿದ್ಯಾರ್ಥಿ ವೇತನ ಮಂಜೂರಾದ ಆದೇಶ, ಕಡತ ಹಾಗೂ ವಿದ್ಯಾರ್ಥಿವೇತನ ವಿತರಣಾ ವಹಿಯನ್ನು ಪರಿಶೀಲಿಸಿದಾಗ ಒಟ್ಟು ವಿದ್ಯಾರ್ಥಿವೇತನ ರೂ.1,01,86,081/–ರಲ್ಲಿ ರೂ.1,01,47,621/–ಗಳು ವಿದ್ಯಾರ್ಥಿಗಳಿಗೆ ಬಟವಾಡೆಯಾಗಿರುತ್ತದೆ. ಬಟವಾಡೆಯಾಗದೆ ಉಳಿದ ಮೊತ್ತ ರೂ.38,460/–ಗಳನ್ನು ಸಮಾಜ ಕಲ್ಯಾಣ ಇಲಾಖೆಗೆ ಜಮೆ ಮಾಡಿ ವಿವರಗಳನ್ನು ಸಲ್ಲಿಸಲು ಸೂಚಿಸಿದೆ. ವಿವರ ಕೆಳಗಿನಂತಿದೆ.

| | ಮೊತ್ತ (ರೂ.ಗಳಲ್ಲಿ) |
|---|---|
| ಸಮಾಜ ಕ್ಲಯಾಣ ಇಲಾಖೆಯಿಂದ 2016–17ನೇ ಸಾಲಿನ ಮಂಜೂರಾದ ವಿದ್ಯಾರ್ಥಿವೇತನ | 1,01,86,081 |
| ಬಟವಾಡೆ ಮಾಡಿದ ಮೊತ್ತ | 1,01,47,621 |
| ಬಟವಾಡೆಯಾಗದೆ ಉಳಿದ ಮೊತ್ತ | **38,460** |

ಮುಂದುವರೆದು ಮೆಟ್ರಿಕ್ ನಂತರದ ಭಾರತ ಸರ್ಕಾರ ವಿದ್ಯಾರ್ಥಿವೇತನದ ಮಂಜೂರಾತಿಗಾಗಿ ಒಟ್ಟು ವಿದ್ಯಾರ್ಥಿಗಳ ಸಂಖ್ಯೆ ವಿದ್ಯಾರ್ಥಿವೇತನದ ಬೇಡಿಕೆ ಮೊತ್ತವನ್ನು ಸಲ್ಲಿಸದಿರುವುದು ಕಡತದಿಂದ ಕಂಡುಬಂದಿದೆ ಹಾಗೂ 2015–16 ಮತ್ತು 2016–17ನೇ ಸಾಲಿನಲ್ಲಿ ಮಂಜೂರಾದ ವಿದ್ಯಾರ್ಥಿವೇತನವು ಬಟವಾಡೆಯಾಗದಿರುವುದು ಕಡತದಲ್ಲಿ ಗಮನಿಸಲಾಗಿದ್ದು ವಿತರಣೆಯಾಗದೆ ಎಸ್.ಬಿ.ಐ ಬ್ಯಾಂಕ್ ಖಾತೆ ಸಂಖ್ಯೆ:54007592180 ರಲ್ಲಿ ಸಂಗ್ರಹವಾಗಿರುವ ವಿದ್ಯಾರ್ಥಿವೇತನ ಮೊತ್ತ ರೂ.1,30,53,738.52 ಗಳನ್ನು ಸಂಬಂಸಿದ ಇಲಾಖೆಗೆ ಮರು ಜಮೆ ಮಾಡಿ ವಿವರಗಳನ್ನು ಹಾಜರುಪಡಿಸುವವರೆಗೆ ರೂ.1,30,53,738/–ಗಳನ್ನು ಆಕ್ಷೇಪಣೆಯಲ್ಲಿದಲಾಗಿದೆ.

**ವಿದ್ಯಾರ್ಥಿ ವೇತನ ವಹಿ ಪರಿಶೀಲಿಸಿದಾಗ ಕಂಡುಬಂದ ಅಂಶಗಳು:–**

1. ಬ್ಯಾಂಕ್ ಲೆಕ್ಕಗಳೊಂದಿಗೆ ವಿತರಣೆಯಾದ ಮೊತ್ತವನ್ನು ಪ್ರತಿ ಮಾಹೆ ಲೆಕ್ಕ ಸಮನ್ವಯಗೊಳಿಸಿ ಸಮನ್ವಯಪಟ್ಟಿಯನ್ನು ತಯಾರಿಸಲು ಸೂಚಿಸಿದೆ.
2. ಸರ್ಕಾರದಿಂದ ಮಂಜೂರಾದ ವಿದ್ಯಾರ್ಥಿವೇತನ, ವಿತರಣೆ ಹಾಗೂ ಬಾಕಿ ಉಳಿದ ವಿದ್ಯಾರ್ಥಿವೇತನ (ಮಂಜೂರಾದ ದಿನಾಂಕ/ಮೊಬಲಗಿನ ಅನುಗುಣವಾಗಿ) ಬೇಡಿಕೆ ಮೊತ್ತವನ್ನು ದಾಖಲಿಸಿ & ದೃಢೀಕರಿಸಿ ಡಿ.ಸಿ.ಬಿ ವಹಿಯೊಂದಿಗೆ ಹಾಜರುಪಡಿಸುವುದು.

ಪ್ರಸ್ಥಾವಿತ ಕಂಡಿಕೆಯಲ್ಲಿ 2016–17ನೇ ಸಾಲಿನಲ್ಲಿ ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಿದ್ದ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಭಾರತ ಸರ್ಕಾರದಿಂದ (GOI) ಬಿಡುಗಡೆಯಾಗಿರುವ ಒಟ್ಟು ಮಂಜೂರಾದ ವಿದ್ಯಾರ್ಥಿವೇತನ ರೂ.1,01,86,081/–. ಇದರಲ್ಲಿ ಬಟವಾಡೆ ಮಾಡಿರುವ ವಿದ್ಯಾರ್ಥಿವೇತನ ರೂ.1,0147,621/–. ಬಟವಾಡೆಯಾಗದೇ ಉಳಿದಿರುವ ಮೊತ್ತ ರೂ.38460/–ಗಳನ್ನು ಲೆಕ್ಕಪರಿಶೋಧನಾ ವರದಿಯಲ್ಲಿ ಸೂಚಿತವಾಗಿರುವಂತೆ ಸಮಾಜ ಕಲ್ಯಾಣ ಇಲಾಖೆಗೆ ಜಮಾ ಮಾಡಲಾಗಿದೆ ಚಲನ್ ಸಂಖ್ಯೆ:72102500259182 ದಿನಾಂಕ:08/07/2021 (ಈ ಸಂಬಂಧ ಚಲನ್ ಪ್ರತಿ ಅಡಕಗೊಳಿಸಿದೆ).

ಆದ ಕಾರಣ ಪ್ರಸ್ಥಾವಿತ ಕಂಡಿಕೆ ಕೈ ಬಿಡಲು ಕೋರಿದೆ.

2017-18ನೇ ಸಾಲಿನಲ್ಲಿ ಲೆಕ್ಕ ಪರಿಶೋಧನಾ ವರದಿಯಲ್ಲಿ ಸೂಚಿತವಾಗಿರುವ ಒಟ್ಟು ಮೊತ್ತವು ಸದರಿ ಕಾಲೇಜಿನ ಈ ಕೆಳಕಂಡ ಪ್ರತ್ಯೇಕವಾದ ಬ್ಯಾಂಕ್ ಖಾತೆಗಳಿಗೆ ಆಂತರಿಕವಾಗಿ ಹೊಂದಾಣಿಕೆಯಾಗಬೇಕಾಗಿರುವ ಮೊತ್ತವಾಗಿರುತ್ತದೆ.

Details of Account, Yuvaraja's College, mYsore

| Sl. No | Account Name | Account Number |
|---|---|---|
| 1 | Sports Account | 54007592113 |
| 2 | NSS | 54007592191 |
| 3 | CSF | 54007592102 |
| 4 | Magazine | 54007613533 |
| 5 | ECA | 64084925331 |
| 6 | SAF | 54007592124 |
| 7 | Reading Room | 54007591947 |
| 8 | F & R | 54007592293 |
| 9 | GRA | 64078604199 |

| | |
|---|---|
| 3. ಸಮಾಜ ಕಲ್ಯಾಣ ಇಲಾಖೆಯ ಆದೇಶದ ನಿರ್ದೇಶನದಂತೆ ಮಂಜೂರಾದ ವಿದ್ಯಾರ್ಥಿವೇತನವನ್ನು 15 ದಿನಗಳ ಒಳಗಾಗಿ ವಿದ್ಯಾರ್ಥಿಗಳಿಗೆ ವಿತರಣೆಯಾಗದೆ. ಲೆಕ್ಕ ಸಮನ್ವಯಗೊಳಿಸದೆ ಹಣವನ್ನು ಸಂಬಂಧಿಸಿದ ಬ್ಯಾಂಕ್ ಖಾತೆಯಲ್ಲಿಯೇ ಉಳಿಸಿಕೊಂಡಿರುವುದು ನಿಯಮ ಬಾಹಿರ ಕ್ರಮವಾಗಿರುತ್ತದೆ. ಈ ಬಗ್ಗೆ ಕೂಡಲೇ ಕ್ರಮವಹಿಸಿ ವರದಿಯನ್ನು ನೀಡುವಂತೆ ಸೂಚಿಸಿದೆ.<br><br>ಮಂದುವರೆದು 2016–17ನೇ ಸಾಲಿನಲ್ಲಿ 163 ಮಂದಿ ಪರಿಶಿಷ್ಟ ಜಾತಿ ಮತ್ತು 37 ಮಂದಿ ಪರಿಶಿಷ್ಟ ಪಂಗಡ ವಿದ್ಯಾರ್ಥಿಗಳಿಗೆ ಸರ್ಕಾರದ ವತಿಯಿಂದ ಮಂಜೂರಾದ ವಿದ್ಯಾರ್ಥಿವೇತದಲ್ಲಿ ಪೂರ್ಣ ಪ್ರಮಾಣದ ವಿದ್ಯಾರ್ಥಿವೇತನ ಬಿಡುಗಡೆಯಾಗದೇ ರೂ.1,17,240/–ಗಳು ಬಾಕಿ ಉಳಿದಿರುತ್ತದೆ. ಸದರಿ ಮೊತ್ತವನ್ನು ಕಾಲೇಜು ಪತ್ರ ಸಂಖ್ಯೆ:ಯು.ಕಾ.ಮೈ/ಜಿ.ಎಲ್–8/ಎಸ್.ಸಿ&ಎಸ್.ಟಿ–07/2017–18 ದಿನಾಂಕ:14.07.2017ರಲ್ಲಿ ವಿದ್ಯಾರ್ಥಿವೇತನ ಮಂಜೂರಾಗದೆ ಇರುವ ಕಾರಣ ಸದರಿ ವಿದ್ಯಾರ್ಥಿಗಳಿಂದ ಕಾಲೇಜಿಗೆ ಬರಬೇಕಾಗಿರುವ ಬೇಬಾಕಿ ಮೊತ್ತವನ್ನು ನಗದು ಗುಮಾಸ್ತರು ವಿದ್ಯಾರ್ಥೀಗಳಿಂದ ಕಟ್ಟಿಸಕೊಳ್ಳಬೇಕೆಂದು ಪತ್ರದಲ್ಲಿ ಸೂಚಿಸಲಾಗಿದೆ. ಅದರಂತೆ ವಿದ್ಯಾರ್ಥಿಗಳಿಂದ ರೂ.1,17,240/–ಗಳನ್ನು ಪಡೆದು ಕಾಲೇಜು ನಿಧಿಗೆ ಜಮಾ ಮಾಡಿ ವಿವರಗಳನ್ನು ಲೆಕ್ಕ ತನಿಖೆಗೆ ಹಾಜರುಪಡಿಸುವಂತೆ ಸೂಚಿಸಿ **ರೂ.1,17,240/–ಗಳನ್ನು ವಸೂಲಾತಿಗೆ ಸೂಚಿಸಿದೆ.** | ಈ ಸಂಬಂಧ ಪೂರ್ಣವಿವರವನ್ನು ಮುಂದಿನ ಲೆಕ್ಕ ತನಿಖೆಗೆ ಹಾಜರುಪಡಿಸಲು ಕ್ರಮವಹಿಸಲಾಗಿದೆ. ಆದ್ದರಿಂದ ಸದರಿ ಕಂಡಿಕೆಯಲ್ಲಿ ಸೂಚಿತವಾಗಿರುವ ಮೊತ್ತದ ರೂ.1,30,53,739=00 ಗಳ ಆಕ್ಷೇಪಣೆ ಕೈ ಬಿಡಲು ಕೋರಿದೆ.<br><br>ವಿದ್ಯಾರ್ಥಿ ವೇತನದ ವಹಿ ಬ್ಯಾಂಕ್ A/c ಗಳ ನಿರ್ವಹಣೆಗೆ ಸಂಬಂಧಿಸಿದಂತೆ ಸೂಚಿತವಾಗಿರುವಂತೆ<br>1) ಬ್ಯಾಂಕ್ ಲೆಕ್ಕಗಳೊಂದಿಗೆ ವಿತರಣೆಯಾದ ಮೊತ್ತವನ್ನು ಪ್ರತಿಮಾಹೆ ಲೆಕ್ಕ ಸಮನ್ವಯಗೊಳಿಸಿ ಸಮನ್ವಯ ಪಟ್ಟಿಯನ್ನು ತಯಾರಿಕೆಗೆ ಕ್ರಮವಹಿಸಲಾಗಿದೆ.<br>2) ಸರ್ಕಾರದಿಂದ ಮಂಜೂರಾದ ವಿದ್ಯಾರ್ಥಿವೇತನ, ವಿತರಣೆ ಮತ್ತು ಬಾಕಿ ಉಳಿದಿರುವ ಮೊತ್ತಕ್ಕೆ ಸಂಬಂಧಿಸಿದಂತೆ DCB ವಹಿ ನಿರ್ವಹಣೆಗೆ ಕ್ರಮವಹಿಸಲಾಗಿದೆ.<br>3) ಸಮಾಜ ಕಲ್ಯಾಣ ಇಲಾಖೆಯ ನಿರ್ದೇಶನದ ಅನ್ವಯ ವಿದ್ಯಾರ್ಥಿ ವೇತನ ಬಿಡುಗಡೆಯಾದ 15 ದಿನದಲ್ಲಿಯೇ ವಿತರಣೆಗೆ ಕ್ರಮವಹಿಸಲಾಗುವುದು. ಈ ಸಂಬಂಧ ಮೊತ್ತವು ಬ್ಯಾಂಕ್ ಖಾತೆಯಲ್ಲಿಯೇ ಸಂಗ್ರಹವಾಗಿ ಮುಂದುವರೆಯುವಂತೆ ಗಮನಹರಿಸಲಾಗುವುದು.<br>4) 2016–17ನೇ ಸಾಲಿನಲ್ಲಿನ ಪರಿಶಿಷ್ಟಜಾತಿ ವಿದ್ಯಾರ್ಥಿಗಳು 163 ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳು 37 ಸಂಖ್ಯೆ. ವಿದ್ಯಾರ್ಥಿಗಳ ವಿದ್ಯಾರ್ಥಿ ವೇತನವು ಕಾಲೇಜಿನಿಂದ ಮರುಭರಿಕೆ ಆಗಬೇಕಾದ ಮೊತ್ತಕ್ಕಿಂತ ರೂ.1,17,240=00 ಕಡಿಮೆ ಮೊತ್ತ ವಿದ್ಯಾರ್ಥಿವೇತನ ಸರ್ಕಾರದಿಂದ ಬಿಡುಗಡೆಯಾಗದ ಹಿನ್ನಲೆಯಲ್ಲಿ ಈ ವಿಷಯ ಉದ್ಭಸಿದೆ.<br><br>ಆಡಿಟ್ ವರದಿಯಲ್ಲಿ ಸೂಚಿತವಾಗಿರುವಂತೆ ರೂ.1,17,240/–ಗಳ ಮೊತ್ತ ಸಂಬಂಧಿಸಿದ ವಿದ್ಯಾರ್ಥಿಗಳಿಂದ ವಸೂಲಿಸಲು ಕ್ರಮವಹಿಸಲಾಗುವುದು ಮತ್ತು ಈ ವಿವರವನ್ನು ಮುಂದಿನ ಲೆಕ್ಕ ಪರಿಶೋಧನೆಗೆ ಹಾಜರುಪಡಿಸಲಾಗುವುದು. |
| **35. 2017–18ನೇ ಸಾಲಿನಲ್ಲಿ ವಿವಿಧ ವಿಭಾಗಗಳ ಪ್ರಥಮ ಹಾಗೂ ದ್ವಿತೀಯ ವರ್ಷದ ವಿವಿಧ ಕೋರ್ಸ್‌ಗಳಿಗೆ ಪ್ರವೇಶಾತಿ ಪಡೆದ ವಿದ್ಯಾರ್ಥಿಗಳ ಶುಲ್ಕವಿನಾಯಿತಿ ಮೊತ್ತವನ್ನು ಮರುಭರಿಕೆ ಮಾಡಿಕೊಳ್ಳದಿರುವ ಬಗ್ಗೆ:– (ಆಡಳಿತಾಧಿಕಾರಿಗಳ ಕಛೇರಿ)**<br><br>2017–18ನೇ ಸಾಲಿನಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಆಡಳಿತಾಧಿಕಾರಿಗಳವರ ಕಛೇರಿ ವ್ಯಾಪ್ತಿಗೆ ಒಳಪಡುವ ವಿವಿಧ ವಿಭಾಗಗಳಲ್ಲಿ ಲಭ್ಯವಿದ್ದ ಪ್ರಥಮ ಹಾಗೂ ದ್ವಿತೀಯ ವರ್ಷದ ವಿವಿಧ ಕೋರ್ಸ್‌ಗಳಿಗೆ ಪ್ರವೇಶಾತಿ ಪಡೆದ ವಿದ್ಯಾರ್ಥಿಗಳ ಶುಲ್ಕ ಸ್ವೀಕೃತಿ ವಿವರಗಳಿಗೆ ಸಂಬಂಧಿಸಿದಂತೆ ಹಾಜರುಪಡಿಸಲಾದ ದೃಢೀಕೃತ ಬೇಡಿಕೆ, ವಸೂಲಾತಿ ಮತ್ತು ಬಾಕಿ (ಡಿಸಿಬಿ) ವಹಿಯನ್ನು ಬ್ಯಾಂಕ್ ಜಮಾ ಚಲನ್‌ಗಳನ್ನು ಹಾಗೂ ಮೈಸೂರು ವಿಶ್ವವಿದ್ಯಾನಿಲಯ ಶುಲ್ಕಪಟ್ಟಿಯೊಂದಿಗೆ ಪರಿಶೀಸಲಾಗಿ. | **ರೂ.3,25,86,913/–ಗಳನ್ನು** ಸಂಬಂಧಪಟ್ಟ ಇಲಾಖೆಗಳಿಂದ ಮರುಬರಿಕೆ ಮಾಡಿಕೊಂಡಿರುವುದಿಲ್ಲವೆಂದು 2017–18ನೇ ಸಲಿನ ಲೆಕ್ಕ ಪರಿಶೋಧನಾ ವರದಿ ಕಂಡಿಕೆ 35ರಲ್ಲಿ ಆಕ್ಷೇಪಿಸಲಾಗಿದೆ. ಆದರೆ ಸದರಿ ಮೊತ್ತ ರೂ.3,25,86,913/–ಗಳು ಈ ಕೇಲಕಂಡ ವಿವರಗಳಲ್ಲಿ ಹಾಗೂ ಇದರೊಂದಿಗೆ ಲಗತ್ತಿಸಿರುವ ಚಲನ್ ವಿವರಗಳಲ್ಲಿ ಈಗಾಗಲೇ ಮರುಭರಿಕೆಯಾಗಿರುತ್ತದೆ. |

ಪ್ರಥಮ ವರ್ಷದ ಪ್ರವೇಶಾತಿಗೆ ಸಂಬಂಧಿದಂತೆ ನಿಗದಿಪಡಿಸಲಾದ ವಿಭಾಗವಾರು, ಕೋರ್ಸ್‌ವಾರು, ವರ್ಗಾವಾರು ಪ್ರವೇಶಾತಿ ಮತ್ತು ಇತರೆ ಶುಲ್ಕಗಳ ಒಟ್ಟು ಬೇಡಿಕೆ ಮೊತ್ತ ರೂ.5,38,18,580/–ಗಳಾಗಿದ್ದು, ಆ ಪೈಕಿ ರೂ.3,50,48,800/–ಗಳು ಮಾತ್ರ ವಸೂಲಾಗಿರುತ್ತದೆ. ಮತ್ತು ರೂ.1,87,69,780/–ಗಳು ವಸೂಲಾಗದೆ ಬಾಕಿ ಉಳಿದಿರುತ್ತದೆ.

ದ್ವಿತೀಯ ವರ್ಷದ ಪ್ರವೇಶಾತಿಗೆ ಸಂಬಂಧಿಸಿದಂತೆ ನಿಗದಿಪಡಿಸಲಾದ ನಿಭಾಗವಾರು, ಕೋರ್ಸ್‌ವಾರು, ವರ್ಗವಾರು, ಪ್ರವೇಶಾತಿ ಹಾಗೂ ಇತರೆ ಶುಲ್ಕ ಬೇಡಿಕೆ ಮೊತ್ತ ರೂ.3,86,25,328/–ಗಳಾಗಿದ್ದು ಆ ಪೈಕಿ ವಸೂಲಾದ ಮೊತ್ತ ರೂ.2,48,08,195/–ಗಳು ಮತ್ತು ವಸೂಲಾಗದೆ ಬಾಕಿ ಉಳಿದ ಮೊತ್ತ ರೂ.1,38,17,133/–ಗಳು ವಸೂಲಾಗದೇ ಬಾಕಿ ಉಳಿದಿರುತ್ತದೆ. ವಿವರಗಳನ್ನು <u>**ಅನುಬಂಧ–17ರಲ್ಲಿ**</u> ನೀಡಿದೆ.

ಹೀಗೆ 2017–18ನೇ ಸಾಲಿಗೆ ಸಂಬಂಧಿದಂತೆ ಒಟ್ಟು ರೂ.3,25,86,913/–ಗಳು (1,87,69,780+1,38,17,133) ಸರ್ಕಾರದ ಹಾಗೂ ಸಂಬಂಧಪಟ್ಟ ಇಲಾಖೆಗಳಿಂದ ಮರುಭರಿಕೆಯಾಗದೆ ಬಾಕಿ ಉಳಿದಿದ್ದು, ಈ ಬಾಕಿ ಮೊತ್ತವು ವಿಶ್ವವಿದ್ಯಾನಿಲಯಕ್ಕೆ ಸಂಧಾಯವಾಗಬೇಖದ ಹಣವಾಗಿದ್ದು, ಸಂದಾಯವಾಗದಿರುವುದರಿಂದ ವಿಶ್ವವಿದ್ಯಾನಿಯದಕ್ಕೆ ಆರ್ಥಿಕ ನಷ್ಟ ಉಂಟಾಗಿರುತ್ತದೆ. ಅಲ್ಲದೇ ಸಕಾಲದಲ್ಲಿ ಮರುಭರಿಕೆ ಮಾಡಿಕೊಳ್ಳದೇ ಹೋದರೆ ವರ್ಷಕ್ಕೆ ಆರ್ಥಿಕ ನಷ್ಟದ ಪ್ರಮಾಣ ಹೆಚ್ಚಾಗುವ ಸಾಧ್ಯತೆ ಇರುತ್ತದೆ.

ಈ ಸಂಬಂಧ ವಿವರಣೆ ಕೋರಿ ವಿಚಾರಣೆ ಪತ್ರ ಸಂಖ್ಯೆ:18/2019–20/ದಿನಾಂಕ:14.06.2019 ನೀಡಲಾಗಿತ್ತಾದರೂ ಉತ್ತರ ಬಾರದ ಕಾರಣ ಒಟ್ಟು ಬಾಕಿ ಮೊತ್ತ **ರೂ.3,25,86,913/–ಗಳನ್ನು ಸರ್ಕಾರ ಹಾಗೂ** ಸಂಬಂಧಪಟ್ಟ ಇಲಾಖೆಗಳಿಂದ ಮರುಭರಿಕೆ ಮಾಡಿಕೊಂಡು ವಿಶ್ವವಿದ್ಯಾನಿಲಯದ ಖಾತೆಗೆ ಜಮೆ ಮಾಡಿ ವರದಿ ಸಲ್ಲಿಸುವವರೆಗೆ **ರೂ.3,25,86,913/–ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.**

| ಕ್ರ.ಸಂ | ಸರ್ಕಾರ ಹಾಗೂ ಇತರೆ ಇಲಾಖೆಗಳಿಂದ ಮರುಭರಿಕೆಯಾಗಬೇಕದ ಮೊತ್ತ | ಸರ್ಕಾರ ಹಾಗೂ ಇತರೆ ಇಲಾಖೆಗಳಿಂದ ಮರುಭರಿಕೆಯಾಗಿರುವ ಮೊತ್ತ | | ಮರುಭರಿಕೆಯಾಗಬೇಕಗಿರುವ ಮೊತ್ತ | ಷರಾ |
|---|---|---|---|---|---|
| 1 | 2 | | 3 | 4 | 5 |
| 1 | 1,87,69,780 | ಕ್ರ.ಸಂಖ್ಯೆ 1 ರಿಂದ 31 ರವರೆಗಿನ ಚೆಕ್‌ಗಳ ಮೊತ್ತ | 3,09,67,358 | ಮರುಭರಿಕೆಗೆಯಾವುದು ಬಾಕಿ ಇರುವುದಿಲ್ಲ | ಬ್ಯಾಂಕ್ ಚೆಕ್‌ಗಳು ಹಾಗೂ ಚಲನ್‌ಗಳನ್ನು ಲಗತ್ತಿಸಲಾಗಿದೆ. |
| 2 | 1,38,17,133 | ಕ್ರ.ಸಂಖ್ಯೆ 1 | 16,19,555 | | |
| ಒಟ್ಟು | **3,25,86,913** | | **3,25,86,913** | | |

**ಈ ನಿಟ್ಟಿನಲ್ಲಿ ಆಕ್ಷೇಪಿತ ಮೊತ್ತ ರೂ.3,25,86,913/–ಗಳ ಆಕ್ಷೇಪಣೆಯಿಂದ ಕೈ ಬಿಡುವಂತೆ ನಿವೇದಿಸಲಾಗಿದೆ.**

### <u>36. 2017–18ನೇ ಸಾಲಿಗೆ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ವಿದ್ಯಾರ್ಥಿ ವೇತನ ಪೂರ್ಣವಾಗಿ ಬಟವಾಡೆಯಾಗದಿರುವ ಕುರಿತು:– (ಆಡಳಿತಾಧಿಕಾರಿಗಳ ಕಛೇರಿ)</u>

2017–18ನೇ ಸಾಲಿನ ಆಡಳಿತಾಧಿಕಾರಿ ಕಛೇರಿಯ ಲೆಕ್ಕ ಪರಿಶೋಧನೆಯಲ್ಲಿ ಎಸ್.ಸಿ/ಎಸ್.ಟಿ ವಿದ್ಯಾರ್ಥಿಗಳ ವಿದ್ಯಾಥಿ ವೇತನದ ಕಡತ ಹಾಗೂ ವರದಿಯನ್ನು ಪರಿಶೀಲಿಸಿದಾಗ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ವಿದ್ಯಾರ್ಥಿಗಳಿಗೆ ಭಾರತ ಸರ್ಕಾರದ ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನ ಹಾಗೂ ತಾಲ್ಲೂಕು ಸಮಾಜ ಕಲ್ಯಾಣ ಅಧಿಕಾರಿ, ಮೈಸೂರು ಕಛೇರಿಯಿಂದ 2017–18ನೇ ಸಾಲಿಗೆ ರೂ.2,24,46,249/–ಗಳು ಮಂಜೂರಾಗಿದ್ದು, ಈ ಮೊತ್ತದಲ್ಲಿ ರೂ.2,11,81,495/–ಗಳನ್ನು ವಿದ್ಯಾರ್ಥೀಗಳಿಗೆ ವಿತರಿಸಲಾಗಿರುತ್ತದೆ. ರೂ.12,64,754/– ಬಾಕಿ ಇದ್ದು, ಬಾಕಿ ಇರುವ

ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳ ವೇತನ ಪೂರ್ಣವಾತಿ ಸಂಬಂಪಟ್ಟ ವಿದ್ಯಾರ್ಥಿಗಳಿಗೆ ಬಟವಾಡೆಯಾಗದಿರುವುದಿಲ್ಲವೆಂದು ಆಕ್ಷೇಪಿಸಿ ರೂ.12,64,754/–ಗಳನ್ನು 2017–18ನೇ ಸಾಲಿನ ಲೆಕ್ಕ ಪರಿಶೋಧನಾ ಕಂಡಿಕೆ 36ರಲ್ಲಿ ಪ್ರಸ್ತಾಪಿಸಲಾಗಿದೆ.

ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳು ಆಯಾಯ ವಿಭಾಗಳಿಗೆ ಪ್ರವೇಶಾತಿ ಪಡಯುವ ಸಂದರ್ಭದಲ್ಲಿ ವಿದ್ಯಾರ್ಥಿಗಳಿಗೆ ನಿಗದಿಪಡಿಸಲಾದ ಆದಾಯ ಮಿತಿ ರೂ2.50 ಲಕ್ಷದವರೆಗಿನ ಆದಾಯದ ದೃಢೀಕರಣ ಪತ್ರವನ್ನು ಸಲ್ಲಿಸಲು ಹಾಗೂ ವಿದ್ಯಾರ್ಥಿ ನಿಲಯದ

<table>
<tr>
<td>ರೂ.12,64,754/–ಗಳನ್ನು ವಿದ್ಯಾರ್ಥಿಗಳಿಗೆ ವಿತರಿದುವವರೆಗೆ ಆಕ್ಷೇಪಣೆಯಲ್ಲಿಡಲಾಗಿದೆ. ವಿವರಗಳನ್ನು ಅನುಬಂಧ–18ರಲ್ಲಿ ನೀಡಿದೆ.</td>
<td>ಪ್ರವೇಶಾತಿ ವಿವರಗಳನ್ನು ವಿಶ್ವವಿದ್ಯಾನಿಲಯಕ್ಕೆ ನಿಯಮಾನುಸಾರ ಸಲ್ಲಿಸಬೇಕಾಗಿರುತ್ತದೆ ಮತ್ತು ಹಲವು ವಿದ್ಯಾರ್ಥಿಗಳು 'ಬಿ' ಸ್ಕೀಂನಲ್ಲಿ ಪ್ರವೇಶಾತಿ ಪಡೆದಿದ್ದು ಈ ಸಂಬಂಧ ಪ್ರವೇಶಾತಿ ಶುಲ್ಕದ ರಶೀದಿಯನ್ನು ಸಲ್ಲಿಸುವಂತೆ ವಿಶ್ವವಿದ್ಯಾನಿಲಯದದಿಂದ ತಿಳುವಳಿಕೆ ನೀಡಲಾಗಿದೆಯಾದರು ಹಲವು ವಿದ್ಯಾರ್ಥಿಗಳು ಅಧ್ಯಯನ ವಿಭಾಗದ ಪ್ರವೇಶಾತಿ ವಿವರ, ವಿದ್ಯಾರ್ಥಿ ವೇತನ ಮಂಜೂರಾದ ವಿವರ ಹಾಗೂ ಬಟವಾಡೆ ನಮೂನೆ ಫಾರಂಗಳ ಪೂರ್ಣ ಮಾಹಿತಿಯನ್ನು ಸಂಬಂಧಪಟ್ಟ ವಿಭಾಗಗಳಿಗೆ ಸಲ್ಲಿಸದೇ ಇರುವುದರಿಂದ ಸದರಿ ಮಾಹಿತಿಯನ್ನು ಕೂಡಲೆ ಸಂಬಂಧಪಟ್ಟ ವಿಭಾಗಗಳಿಗೆ ಸಲ್ಲಿಸುವಂತೆ ಸೂಚಿಸಲಾಗಿದ್ದು ನಿಯಮಾನಿಸಾರ ಸಂಬಂಧಪಟ್ಟ ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳು ವಿದ್ಯಾರ್ಥಿಗಳು ವಿವರಗಳನ್ನು ಒದಗಿಸಿದ ನಂತರ ವಿದ್ಯಾರ್ಥಿಗಳಿಗೆ ಸೇರಬೇಕಾದ ಬಟವಾಡೆ ಮೊತ್ತಗಳನ್ನು ವಿತರಿಸಿ ರೂ.12,64,754/–ಗಳ ಮೊತ್ತವನ್ನು ಇತ್ಯರ್ಥ ಪಡಿಸಲು ಕ್ರಮ ಕೈಗೊಳ್ಳಲಾಗಿರುತ್ತದೆ.<br><br>ಮುಂದುವರೆದು ಸದರಿ ವಿದ್ಯಾರ್ಥಿಗಳು ಉಚಿತವಾಗಿ ಅಧ್ಯಯನ ವಿಭಾಗಗಳಿಗೆ ಮತ್ತು ವಿದ್ಯಾರ್ಥಿ ನಿಲಯಗಳಿಗೆ ಪ್ರವೇಶಾತಿ ಪಡೆದಿರುವುದರಿಂದ ನಿರ್ವಹಣೆ ಶುಲ್ಕಗಳು ವಿಶ್ವವಿದ್ಯಾನಿಲಯಕ್ಕೆ ಸಂದಾಯವಾಬೇಕಾಗಿರುವುದರಿಂದ ಹಾಗೂ ಬೇಬಾಕಿ ಪತ್ರ ಸಲ್ಲಿಸಬೇಕಾಗಿದ್ದು ಮೇಲೆ ವಿವರಿಸಲಾದ ಮಾಹಿತಿಯನ್ನು ವಿದ್ಯಾರ್ಥಿಗಳು ಒದಗಿಸಿದ ನಂತರ ಅವರುಗಳಿಗೆ ಸಲ್ಲಬೇಕಾದ ಬಟವಾಡೆ ಮೊತ್ತವನ್ನು ವಿತರಿಸಲಾಗುವುದು. ಈ ನಿಟ್ಟಿನಲ್ಲಿ ರೂ.12,64,754/–ಗಳನ್ನು ಆಕ್ಷೇಪಣೆಯಿಂದ ಇತ್ಯರ್ಥಗೊಳಿಸುವಂತೆ ನಿವೇದಿಸಿದೆ.</td>
</tr>
<tr>
<td><u>37. ಎಸ್.ಸಿ/ಎಸ್.ಟಿ ವಿದ್ಯಾರ್ಥಿ ವೇತನ ಖಾತೆಯಲ್ಲಿ ಜಮೆಯಾಗಿರುವ ಬ್ಯಾಂಕ್ ಬಡ್ಡಿಯನ್ನು ಸಂಬಂಧಪಟ್ಟ ಇಲಾಖೆ ಖಾತೆಗೆ ಹಿಂದಿರುಗಿಸುವ ಬಗ್ಗೆ:– (ಆಡಳಿತಾಧಿಕಾರಿಗಳ ಕಛೇರಿ)</u><br><br>2017–18ನೇ ಸಾಲಿನ ಲೆಕ್ಕಪರಿಶೋಧನೆಯಲ್ಲಿ ಎಸ್.ಸಿ/ಎಸ್.ಟಿ ವಿದ್ಯಾರ್ಥಿ ವೇತನ ಖಾತೆಯ ಬ್ಯಾಂಕ್ ಸ್ಟ್ರೋಲ್‌ನ್ನು ಪರಿಶೀಲಿಸಲಾಗಿ ಸದರಿ ಖಾತೆಗೆ ವಿವಿಧ ದನಾಂಕಗಳಂದು ರೂ.9,17,528/–ಗಳು ಬ್ಯಾಂಕ್ ಬಡ್ಡಿ ಜಮೆಯಾಗಿರುತ್ತದೆ, ಈ ಸಂಬಂಧ ಜಮೆಯಾಗಿರುವ ಒಟ್ಟು ಬಡ್ಡಿಯನ್ನು ವಿದ್ಯಾರ್ಥಿ ವೇತನ ಮಂಜೂರು ಮಾಡುವ ಇಲಾಖೆಗೆ ಹಿಂದಿರುಗಿಸಬೇಕಾಗಿರುತ್ತದೆ. ಖಾತೆಗೆ ಜಮೆ ಮಾಡಲಾದ ಚಲನ್‌ಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸುವಂತೆ ಲೆಕ್ಕಪರಿಶೋಧನಾ ವಿಚಾರಣಾ ಪತ್ರ ಸಂಖ್ಯೆ: 20/2019–2020 ದಿನಾಂಕ:15.06.2019 ರಂದು ನೀಡಲಾಗಿದ್ದರೂ ಸಹ ಯಾವುದೇ ಲೆಕ್ಕಪತ್ರ ದಾಳಕೆಗಳನ್ನು ಹಾಜರುಪಡಿಸಿರುವುದಿಲ್ಲ. ಆದ್ದರಿಂದ ಸೂಕ್ತ ಕ್ರಮ ವಹಿಸಿ ಬ್ಯಾಂಕ್ ಬಡ್ಡಿಯನ್ನು ಸಮಾಜ ಕಲ್ಯಾಣ ಇಲಾಖೆ ಖಾತೆಗೆ ಜಮೆ ಮಾಡಿ, ಜಮೆ ಮಾಡಲಾದ ಚಲನ್‌ಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸುವವರೆಗೆ ರೂ.9,17,528/–ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.</td>
<td>2017–18ನೇ ಸಾಲಿನ ಲೆಕ್ಕ ಪರಿಶೋಧನ ಕಂಡಿಕೆ ಸಂಖ್ಯೆ:37ರಲ್ಲಿ ಗಮನಿಸಿ ಪ್ರಸ್ತಾಪಿಸಿರುವಂತೆ ರೂ.9,17,528/–ಗಳು 2017–18ನೇ ಸಾಲಿನಲ್ಲಿ ವಾರ್ಷಿಕ ಬಡ್ಡಿ ರೂಪದಲ್ಲಿ ಈ ಕೆಳಕಂಡ ವಿವರಗಳನ್ನು ಬಂದಿದ್ದು ಸದರಿ ಮೊತ್ತ ರೂ.9,17,528/–ಗಳನ್ನು ಸಮಾಜ ಕಲ್ಯಾಣ ಇಲಾಖೆಯ ಖಾತೆಗೆ ಚಲನ್ ಸಂಖ್ಯೆ:1156660845, ದಿನಾಂಕ:06.04.2021ರಲ್ಲಿ ಜಮಾ ಮಾಡಲಾಗಿರುತ್ತದೆ.<br><br>ಈ ನಿಟ್ಟಿನಲ್ಲಿ ಸದರಿ ಆಕ್ಷೇಪಿತ ಮೊತ್ತ ರೂ.9,17,528/–ಗಳನ್ನು ಆಕ್ಷೇಪಣೆ ಕಂಡಿಕೆಯಿಂದ ಕೈಬಿಡುವಮತೆ ನಿವೇದಿಸಿದೆ.<br><br>ಜಮೆ ಮಾಡದ ವಿವರಗಳು ಈ ಕೆಳಕಂಡಂತಿರುತ್ತದೆ.
<table>
<tr><th>ಕ್ರಮ ಸಂಖ್ಯೆ</th><th>2017–18ನೇ ಸಾಲಿನಲ್ಲಿ ಬಂದ ಬಡ್ಡಿ ವಿವರ</th><th>ಮೊತ್ತ ರೂ ಗಳಲ್ಲಿ</th><th>ಸಮಾಜ ಕಲ್ಯಾಣ ಇಲಾಖೆ ಖಾತೆಗೆ ಜಮಾ ಮಾಡಿರುವುದು.</th></tr>
</table>
</td>
</tr>
</table>

| | | | |
|---|---|---|---|
| 1 | 25.06.2018 | 2,39,676=00 | **J186660845**<br>**ದಿನಾಂಕ:06-04-2021** |
| 2 | 25-09-2018 | 2,91,249=00 | **J186660845**<br>**ದಿನಾಂಕ:06-04-2021** |
| 3 | 25-122018 | 1,55,485=00 | **J186660845**<br>**ದಿನಾಂಕ:06-04-2021** |
| 4 | 25-03-2019 | 2,31,118=00 | **J186660845**<br>**ದಿನಾಂಕ:06-04-2021** |
| | **ಒಟ್ಟು ಮೊತ್ತ** | **9,17,528=00** | |

**38. 2017-18ನೇ ಸಾಲಿನ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಗೆ ವಿದ್ಯಾರ್ಥಿಗಳು ಸಲ್ಲಿಸಿರುವ ಶುಲ್ಕ, ವಿನಾಯಿತಿ ಬೇಡಿಕೆ ಮೊತ್ತವನ್ನು ಹಾಗೂ ಮಂಜೂರಾತಿಯಾದ ಬಾಕಿಯ ವಿವರ:- (ಆಡಳಿತಾಧಿಕಾರಿಗಳ ಕಛೇರಿ).**

2017-18ನೇ ಶೈಕ್ಷಣಿಕ ಸಾಲಿನ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ಮಂಜೂರಾತಿಯಾದ ಶುಲ್ಕ ವಿನಾಯಿತಿ ಬೇಡಿಕೆ ಹಾಗೂ ಬಾಕಿ ವಿವರಗಳನ್ನು ಕೆಳಕಂಡಂತೆ ವಿವರಿಸಲಾಗಿದೆ.

| **ವಿವರ** | **ಮೊಬಲಗು (ರೂ.ಗಳಲ್ಲಿ)** |
|---|---|
| 2016-17ನೇ ಸಾಲಿನಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ ಬರಬೇಕಾದ ಶುಲ್ಕ ವಿನಾಯಿತಿ ಮೊತ್ತ. | 1,95,33,275 |
| 2017-18ನೇ ಸಾಲಿನಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಗೆ ಸಲ್ಲಿಸಿರುವ ಶುಲ್ಕ ವಿನಾಯಿತಿ ಬೇಡಿಕೆ ಮೊತ್ತ | 2,10,86,635 |
| ಒಟ್ಟು | 4,06,19,910 |
| 2017-18ನೇ ಸಾಲಿಗೆ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ ಮಂಜೂರಾತಿಯಾದ ಮೊತ್ತ | 1,49,00,416 |
| ಮಂಜೂರಾತಿಯಾಗದೆ ಬಾಕಿ ಇರುವ ಶುಲ್ಕ ವಿನಾಯಿತಿ ಮೊತ್ತ | 2,57,19,494 |

2016-17 ಮತ್ತು 2017-18ರಲ್ಲಿ ಒಟ್ಟು ರೂ.4,06,19,910/-ಗಳ ಶುಲ್ಕ ವಿನಾಯಿತಿ ಬೇಡಿಕೆ ಪ್ರಸ್ತಾವನೆಯನ್ನು ಹಿಂಡುಳಿದ ವರ್ಗಗಳ ಕಲ್ಯಾಣ ಇಲಾಖೆಗೆ ಸಲ್ಲಿಸಿದ್ದು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ ರೂ.1,49,00,416/-ಗಳನ್ನು ಮಾತ್ರ ಬಿಡುಗಡೆ ಮಾಡಲಾಗಿದೆ. ಉಳಿಕೆ ರೂ.2,57,19,494/-ಗಳು ಬಂದಿರುವುದಿಲ್ಲ. **ಆದ್ದರಿಂದ ರೂ.2,57,19,494/-ಗಳನ್ನು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ ಹಿಂಪಡೆಯಲು ಸೂಚಿಸಿದೆ.**

ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ಶುಲ್ಕ ವಿನಾಯಿತಿ ಬೇಡಿಕೆಯನ್ನು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಗೆ 2016-17ನೇ ಸಾಲಿನಲ್ಲಿ ರೂ.1,95,33,275/-ಗಳು

ಹಾಗೂ 2017-18ನೇ ಸಾಲಿನಲ್ಲಿ ರೂ.2,10,86,635/-ಗಳು

ಒಟ್ಟು ರೂ.4,06,19,910

2017-18ನೇ ಸಾಲಿನಲ್ಲಿ ರೂ.4,06,19,910/-ಗಳ ಬೇಡಿಕೆಯನ್ನು ಸಲ್ಲಿಸಿದ್ದು 2017-18ನೇ ಸಾಲಿನಲ್ಲಿ 1,49,00,416/- ರೂ ಗಳು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ ಬಿಡುಗಡೆಯಾಗಿದ್ದು ರೂ.2,57,19,494/-ಗಳು ಬಿಡುಗಡೆಯಾಗದೆ ಬಾಕಿ ಉಳಿದುಕೊಂಡಿರುತ್ತದೆ ರೂ.2,57,19,494/-ಗಳಿಗೆದುರಾಗಿ ದಿನಾಂಕ:20.04.2018 ರಲ್ಲಿ ಕ್ರಮವಾಗಿ ರೂ.33,96,935/- ಮತ್ತು ರೂ.1,77,04,120/- ಒಟ್ಟು ಮೊತ್ತ ರೂ.2,11,01,055/-ಗಳು ಬಿಡುಗಡೆಯಾಗಿದ್ದು ಉಳಿಕೆ ಬಾಕಿ ಮೊತ್ತ ರೂ.46,18,439/-ಗಳನ್ನು ಬಿಡುಗಡೆ ಮಾಡುವಂತೆ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಗೆ ಕೋರಲಾಗಿರುತ್ತದೆ

1. ಕಂಡಿಕೆ 38 ರಲ್ಲಿ ಆಕ್ಷೇಪಿಸಿ ಸೂಚಿಸಲಾದ ಮೊತ್ತ ರೂ.25719494
2. ದಿನಾಂಕ:20.04.2018ರಲ್ಲಿ ಬಿಡುಗಡೆಯಾದ ಮೊತ್ತ ರೂ.21101055
3. ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ

ಬಿಡುಗಡೆ ಆಗ ಬೇಕಾಗಿರುವ ಮೊತ್ತ ರೂ.4618439

ಈ ನಿಟ್ಟಿನಲ್ಲಿ ಸದರಿ ಆಕ್ಷೇಪಿತ ಕಂಡಿಕೆಯನ್ನು ಕೈ ಬಿಡುವಂತೆ ನಿವೇದಿಸಲಾಗಿದೆ.

**39. ವಿದ್ಯಾರ್ಥಿಗಳ ಪ್ರವೇಶಾತಿ ಹಾಗೂ ಪ್ರವೇಶ ಶುಲ್ಕದ ವಸೂಲಾತಿ ವಿವರಗಳ ಕುರಿತು:–(ಸಂಜೆ ಕಾಲೇಜು).**

2017–18ನೇ ಸಾಲಿನ ಲೆಕ್ಕಪರಿಶೋಧನೆಗೆ ಹಾಜರುಪಡಿಸಲಾದ ಪ್ರವೇಶಾತಿ ವಹಿ ಹಾಗೂ ಇತರ ಪೂರಕ ದಾಖಲೆಗಳನ್ವಯ ವಿಶ್ವವಿದ್ಯಾನಿಲಯದ ಸಂಜೆ ಕಾಲೇಜಿನಲ್ಲಿ ಸದರಿ ಸಾಲಿಗೆ ಪ್ರವೇಶಾತಿ ಪಡೆದ ವಿವಿಧ ಸ್ನಾತಕಪೂರ್ವ ಹಾಗೂ ಸ್ನಾತಕೋತ್ತರ ವಿದ್ಯಾರ್ಥಿಗಳ ಒಟ್ಟು ಸಂಖ್ಯೆ:541 ಗಳಾಗಿರುತ್ತದೆ. ಕೋರ್ಸ್‌ವಾರು ವರ್ಗವಾರು ವಿದ್ಯಾರ್ಥಿಗಳ ವಿವರವನ್ನು **ಅನುಬಂಧ–19ರಲ್ಲಿ** ಒದಗಿಸಲಾಗಿದೆ.

2017–18ನೇ ಸಾಲಿನಲ್ಲಿ ವಿವಿಧ ಸ್ನಾತಕಪೂರ್ವ ಹಾಗೂ ಸ್ನಾತಕೋತ್ತರ ಕೋರ್ಸ್‌ಗಳಿಗೆ ಪ್ರವೇಶಾತಿ ಪಡೆದಿರುವ ವಿದ್ಯಾರ್ಥಿಗಳ ಬೋಧನಾ ಶುಲ್ಕದ ಜೊತೆ ಇನ್ನಿತರ ವಿವರಗಳನ್ನು ಮೂಲ ಚಲನ್‌ಗಳು ಹಾಗೂ ಪ್ರವೇಶಾತಿ ವಹಿಯೊಂದಿಗೆ ಪರಿಶೀಲಿಸಲು ನಿರ್ವಹಿಸಿರುವ ಪ್ರವೇಶಾತಿ ಶುಲ್ಕ ವಹಿಯನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸುವಂತೆ ವಿಚಾರಣಾ ಪತ್ರದ ಸಂಖ್ಯೆ:02/2018–19/25.03.2019 ರಂದು ಕೋರಲಾಗಿತ್ತು. ಆದರೆ ಕೋರಿರುವ ಮಾಹಿತಿಯನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸಿರುವುದಿಲ್ಲ. ಆದ್ದರಿಂದ ಹಾಜರುಪಡಿಸಿರುವ ಲೆಕ್ಕಪತ್ರ ದಾಖಲೆ/ವಹಿಗಳ ಆಧಾರದ ಮೇಲೆ 2017–18ನೇ ಶೈಕ್ಷಣಿಕ ಸಾಲಿನಲ್ಲಿ ಪ್ರವೇಶಾತಿ ಪಡೆದಿರುವ ವಿದ್ಯಾರ್ಥಿಗಳಿಂದ ವಸೂಲಾಗಿರುವ ಪ್ರವೇಶ ಶುಲ್ಕದ ಬೇಡಿಕೆ ವಸೂಲಾತಿ ಬಾಕಿ (ಡಿಸಿಬಿ) ವಿವರದ ತಃಖ್ತೆ ಸಿದ್ದಪಡಿಸಲಾಗಿದ್ದು, ಬೇಡಿಕೆ ಮೊತ್ತ ರೂ.42,59,406/–ಗಳಾಗಿರುತ್ತದೆ. ವಸೂಲಾಗಿರುವ ಮೊತ್ತ ರೂ.33,61,246/–ಗಳಾಗಿರುತ್ತದೆ. ಹಾಗೂ ಬಾಕಿ ಮೊತ್ತ ರೂ.8,97,860/–ಗಳಾಗಿದೆ. ವಿವರವನ್ನು ಅನುಬಂಧ–20ರಲ್ಲಿ ಲಗತ್ತಿಸಿದೆ. ಬಾಕಿ ಉಳಿದಿರುವ ಪ್ರವೇಶಾತಿ ಶುಲ್ಕದ ಮೊತ್ತಕ್ಕೆ ಸಂಬಂಧಪಟ್ಟಂತೆ ಸಮಾಜ ಕಲ್ಯಾಣ ಇಲಾಖೆ/ಪರಿಶಿಷ್ಟ ಜಾತಿ–ಪರಿಶಿಷ್ಟ ಪಂಗಡ ಘಟಕಗಳಿಂದ ಬರಬೇಕಾಗಿರುವ ಬಾಕಿ ಶುಲ್ಕದ ಮೊತ್ತವನ್ನು ಮರುಭರಿಕೆ ಮಾಡಿಕೊಂಡು ವಿಶ್ವವಿದ್ಯಾನಿಲಯದ/ಕಾಲೇಜಿನ ಸಂಬಂಪಟ್ಟ ಖಾತೆಗೆ ಜಮೆ ಮಾಡುವವರೆಗೆ ಬಾಕಿ ಮೊತ್ತ **ರೂ.8,97,860/–ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.**

ಪ್ರಸ್ಥಾವಿತ ಕಂಡಿಕೆಯಲ್ಲಿ ಸಂಜೆ ಕಾಲೇಜು ಮೈಸೂರು ಇಲ್ಲಿನ 2017–18ನೇ ಸಾಲಿನ ಆಡಿಟ್ ವರದಿಯಲ್ಲಿ ವಿವಿಧ ಕೋರ್ಸ್‌ಗಳಿಗೆ ಪ್ರವೇಶ ಅವಕಾಶ ನೀಡುವಾಗ (ಪರಿಶಿಷ್ಠ ಜಾತಿ ಮತ್ತು ಪರಿಶಿಷ್ಠ ಪಂಗಡ) ವಿದ್ಯಾರ್ಥಿಗಳಿಗೆ ಪ್ರವೇಶಾತಿ ಸಮಯದಲ್ಲಿ ಸರ್ಕಾರದ ಆದೇಶದನ್ವಯ ಪ್ರವೇಶಾತಿ ಶುಲ್ಕದಲ್ಲಿ ರಿಯಾಯಿತಿ ನೀಡಿದ್ದು, ಈ ರೀತಿ ರಿಯಾಯಿತಿ ನೀಡಿದ್ದ ಮೊತ್ತವು ಜಿಲ್ಲಾ ಅಧಿಕಾರಿಗಳು, ಸಮಾಜ ಕಲ್ಯಾಣ ಇಲಾಖೆ, ಮೈಸೂರು ಇವರ ಕಛೇರಿಯಿಂದ ಕಾಲೇಜು ಖಾತೆಗೆ ಮರುಭರಿಕೆ ಆಗದಿರುವ ಬಗ್ಗೆ ಆಕ್ಷೇಪಿಸಲಾಗಿದೆ.

ಆದರೆ ಪ್ರಸ್ತುತ ಸೂಚಿತವಾದ ಮೊತ್ತವು ಸಮಾಜ ಕಲ್ಯಾಣ ಇಲಾಖೆಯಿಂದ ಮರುಭರಿಕೆಯಾಗಿದ್ದು ಸದರಿ ಮೊತ್ತವನ್ನು ವಿಶ್ವವಿದ್ಯಾನಿಲಯದ ಸಾಮಾನ್ಯ ರೆವೆನ್ಯೂ ಖಾತೆ ಮತ್ತು ಪ್ರಾಂಶುಪಾಲರು ಸಂಜೆ ಕಾಲೇಜು ಮೈಸೂರು ಇವರ ಖಾತೆಗೆ ಜಮೆಯಾತಿರುವ ವಿವರ ಈ ರೀತಿ ಇದೆ.

| ಕ್ರ.ಸಂ | ಚಲನ್ ಸಂಖ್ಯೆ/ದಿನಾಂಕ | ಖಾತೆ ವಿವರ | ಮೊತ್ತ |
|---|---|---|---|
| 1 | 061/26.07.2018 | ಜಿ.ಆರ್.ಎ | 3,50,040/– |
| 2 | 10517/26.07.2018 | ಪ್ರಾಂಶುಪಾಲರು, ಸಂಜೆ ಕಾಲೇಜು ರವರ ಖಾತೆ | 1,30,875/– |
| 3 | 062/26.07.2018 | ಪ್ರಾಂಶುಪಾಲರು, ಸಂಜೆ ಕಾಲೇಜು ರವರ ಖಾತೆ | 96,300/– |
| 4 | 10518/26.07.2018 | ಪ್ರಾಂಶುಪಾಲರು, ಸಂಜೆ ಕಾಲೇಜು ರವರ ಖಾತೆ | 29,825/– |
| 5 | 060/26.07.2018 | ಜಿ.ಆರ್.ಎ | 1,04,350/– |
| 6 | 701/05.05.2021 | ಜಿ.ಆರ್.ಎ | 1,94,560/– |
| | | **ಒಟ್ಟು ಮೊತ್ತ** | **9,05,950/–** |

ವರದಿಯಲ್ಲಿ ಸೂಚಿತವಾಗಿರುವ ಮೊತ್ತಕ್ಕಿಂತ ರೂ.8,090/– ಹೆಚ್ಚು ಜಿ.ಆರ್.ಎ ಖಾತೆಗೆ ಜಮೆಯಾಗಿದೆ.

ಸಮಾಜ ಕಲ್ಯಾಣ ಇಲಾಖೆಯಿಂದ ಮರುಭರಿಕೆ ಆಗಬೇಕಾದ ಪ್ರವೇಶಾತಿ ಶುಲ್ಕ ಮತ್ತು ಪರೀಕ್ಷಾ ಶುಲ್ಕದ ಮೊತ್ತಗಳು ನಿಗದಿತವಾಗಿ ಆಯಾ ಆರ್ಥಿಕ ವರ್ಷ ಅಂತ್ಯದೊಳಗೆ ಇಲಾಖೆಯಿಂದ ಮರುಭರಿಕೆಯಾಗಿರುವುದಿಲ್ಲ.

ಇಲಾಖೆಯಿಂದ ಮರುಭರಿಕೆಯಾದ ನಂತರ ಆಡಿಟ್ ವರದಿಯಲ್ಲಿ ಸೂಚಿತವಾಗಿರುವಂತೆ ಕ್ರಮವಹಿಸಲಾಗಿದೆ.(ಚಲನ್ ಪ್ರತಿಗಳನ್ನು ಅಡಕಗೊಳಿಸಿದೆ)

ಆದ ಕಾರಣ ಆಡಿಟ್ ವರದಿಯಲ್ಲಿ ಸೂಚಿತವಾಗಿರುವ ಕಂಡಿಕೆ ಕೈ ಬಿಡಲು ಕೋರಿದೆ.

40. **ವಿವಿಧ ಸ್ನಾತಕ ಪೂರ್ವ ಪದವಿ ಹಾಗೂ ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳಿಂದ ಬಾಕಿ ಉಳಿದಿರುವ ಪರೀಕ್ಷಾ ಶುಲ್ಕಕ್ಕೆ ಸಂಬಂಧಿಸಿದ ಲೆಕ್ಕಪತ್ರ ದಾಖಲೆಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸದಿರುವ ಕುರಿತು:– (ಸಂಜೆ ಕಾಲೇಜು).**

2017–18ನೇ ಶೈಕ್ಷಣಿಕ ಸಾಲಿನಲ್ಲಿ ವಿಶ್ವವಿದ್ಯಾನಿಲಯದ ಸಂಜೆ ಕಾಲೇಜಿನಲ್ಲಿ ವಿವಿಧ ಸೆಮಿಸ್ಟರ್‌ಗಳ ಪರೀಕ್ಷೆಗೆ ಹಾಜರಾಗಿರುವ ವಿದ್ಯಾರ್ಥಿಗಳಿಂದ ವಸೂಲಾದ ಪರೀಕ್ಷಾ/ವಾರು ಪರೀಕ್ಷಾ ಶುಲ್ಕಕ್ಕೆ ಸಂಬಂಧಿಸಿದಂತೆ, ನಿರ್ವಹಿಸಿರುವ ಬೇಡಿಕೆ ವಸೂಲಾತಿ ಬಾಕಿ (ಡಿಸಿಬಿ) ವಹಿ ಹಾಗೂ ವಿತರಣಾ ಪಟ್ಟಿಯನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸುವಂತೆ ವಿಚಾರಣಾ ಪತ್ರದ ಸಂಖ್ಯೆ:03/2018–19/26.03.2019 ರಲ್ಲಿ ಕೋರಲಾಗಿತ್ತು. ಆದರೆ ಯಾವುದೇ ಪೂರಕ ಲೆಕ್ಕಪತ್ರ ದಾಖಲೆಗಳನ್ನು ಹಾಜರುಪಡಿಸದಿರುವ ಕಾರಣ, ಹಾಜರುಪಡಿಸಿರುವ Online ಪರೀಕ್ಷಾ ಶುಲ್ಕ ಪಾವತಿಯ ಚಲನ್ ದಾಖಲೆಗಳನ್ವಯ ಡಿಸಿಬಿ ತಃಖ್ತೆ ಸಿದ್ಧಪಡಿಸಲಾಗಿದ್ದು, ವಿವರವನ್ನು ಅನುಬಂಧ–21 ರಲ್ಲಿ ಲಗತ್ತಿಸಿದೆ. ಬಾಕಿ ಉಳಿದಿರುವ ಪರೀಕ್ಷಾ ಶುಲ್ಕದ ಮೊತ್ತ **ರೂ.2,62,400/–ಕ್ಕೆ** ಸಂಬಂಧಪಟ್ಟಂತೆ ಸಮಾಜ ಕಲ್ಯಾಣ ಇಲಾಖೆ/ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಘಟಕದಿಂದ ಬರಬೇಕಾಗಿರುವ ಬಾಕಿ ಶುಲ್ಕದ ಮೊತ್ತವನ್ನು ಮರುಭರಿಕೆ ಮಾಡಿಕೊಂಡು ವಿಶ್ವವಿದ್ಯಾನಿಲಯದ/ಕಾಲೇಜಿನ ಸಂಬಂಧಪಟ್ಟ ಖಾತೆಗೆ ಜಮೆ ಮಾಡಿ ವರದಿಯನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸುವವರೆಗೆ **ರೂ.2,62,400/–ಗಳನ್ನು** ಆಕ್ಷೇಪಣೆಯಲ್ಲಿಡಲಾಗಿದೆ.

ಪ್ರಸ್ತಾವಿತ ಕಂಡಿಕೆಯಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಸಂಜೆ ಕಾಲೇಜು ಇಲ್ಲಿನ ವಿವಿಧ ಸೆಮಿಸ್ಟರ್ ವಿದ್ಯಾರ್ಥಿಗಳಿಂದ (ಪರಿಶಿಷ್ಠ ಜಾತಿ ಮತ್ತು ಪರಿಶಿಷ್ಠ ಪಂಗಡ) ಸರ್ಕಾರದ ಆದೇಶದನ್ವಯ ವಿಶ್ವವಿದ್ಯಾನಿಯದಿಂದ ರಿಯಾಯಿತಿ ನೀಡು ಪರೀಕ್ಷಾ ಪ್ರವೇಶ ಅವಕಾಶ ಕಲ್ಪಿಸಲಾಗಿದೆ.

ಈ ರೀತಿಯಾಗಿ ವಿಶ್ವವಿದ್ಯಾನಿಲಯದಿಂದ ರಿಯಾಯಿತಿ ನೀಡಿರುವ ಮೊತ್ತವು ಸಮಾಜ ಕಲ್ಯಾಣ ಇಲಾಖೆ (ಪರಿಶಿಷ್ಠ ಜಾತಿ ಮತ್ತು ಪರಿಶಿಷ್ಠ ಪಂಗಡ) ಯಿಂದ ಮರುಭರಿಕೆಯಾಗದಿರುವ ಬಗ್ಗೆ ಆಡಿಟ್ ವರದಿಯಲ್ಲಿ ಪ್ರಸ್ಥಾಪಿಸಲಾಗದೆ.

ಈ ಸಂಬಂಧದ ಮೊತ್ತವು ಸಮಾಜ ಕಲ್ಯಾಣ ಇಲಾಖೆ, ಮೈಸೂರು ಇವರಿಂದ ಸದರಿ ಕಾಲೇಜಿನ ಎಸ್.ಸಿ/ಎಸ್.ಟಿ ಪರೀಕ್ಷಾ ಶುಲ್ಕದ ಖಾತೆಗೆ ಹೊಂದಾಣಿಕೆಯಾಗಿದ್ದು ಈ ಮೊತ್ತದಲ್ಲಿ ಕಾಲೇಜು ಖಾತೆಗೆ ಸಂದಾಯವಾಗಬೇಕಾದ ಮೊತ್ತದ ಸಂದಾಯದ ವಿವರ ಈ ರೀತಿ ಇದೆ. (ಈ ಸಂಬಂಧದ ಚಲನ್ ಪ್ರತಿ ಲಗತ್ತಿಸಿದೆ).

| ಕ್ರ.ಸಂ | ಚಲನ್ ಸಂಖ್ಯೆ/ದಿನಾಂಕ | ಮೊತ್ತ |
|---|---|---|
| 1 | 10515/26.07.2018 | 24,320/– |
| 2 | 10516/27.07.2018 | 35,781/– |
| 3 | 7041/25.03.2019 | 27,525/– |
| 4 | 46476/10.10.2019 | 18,220/– |
| 5 | 13539/05.05.2021 | 67,220/– |
| 6 | 11712/19.07.2021 | 89,334/– |
| | **ಒಟ್ಟು ಮೊತ್ತ** | **2,62,400/–** |

ಆಡಿಟ್ ವದರಿಯಲ್ಲಿ ಸೂಚಿತವಾಗಿರುವ ಪೂರ್ಣ ಮೊತ್ತವು ಮರುಭರಿಕೆಯಾಗಿರುವುದರಿಂದ ಕಂಡಿಕೆ ಕೈ ಬಿಡಲು ಕೋರಿದೆ.

**41. 2017–18ನೇ ಸಾಲಿನಲ್ಲಿ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ಮಂಜೂರಾದ ವಿದ್ಯಾರ್ಥಿ ವೇತನ ಪೂರ್ಣವಾಗಿ ಬಟವಾಡೆಯಾಗದಿರುವ ಕುರಿತು:– (ಆಡಳಿತಾಧಿಕಾರಿಗಳ ಕಛೇರಿ).**

2017–18ನೇ ಸಾಲಿನಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಗೆ ವಿದ್ಯಾರ್ಥಿಗಳು ಸಲ್ಲಿಸಿರುವ ಶುಲ್ಕ ವಿನಾಯಿತಿ ಬೇಡಿಕೆ ಮೊತ್ತವನ್ನು ಹಾಗೂ ಮಂಜೂರಾತಿಯಾದ ಬಾಕಿಯ ವಿವರಗಳನ್ನು ಬಟವಾಡೆ ವಹಿಯೊಂದಿಗೆ ಪರಿಶೀಲಿಸಿದಾಗ 2017–18ನೇ ಸಾಲಿನಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ ಸಂಬಂಧಿತ ವಿದ್ಯಾರ್ಥಿಗಳಿಗೆ ಶುಲ್ಕ ವಿನಾಯಿತಿ ಮೊತ್ತ

2017–18ನೇ ಸಾಲಿನಲ್ಲಿ ಹಿಂದುಳಿತ ವರ್ಗಗಳ ಕಲ್ಯಾಣ ಇಲಾಖೆಯಿಂದ ರೂ.1,49,00,416/–ಗಳು ಮಂಜೂರಾತಿಯಾಗಿದ್ದು ಅದರಲ್ಲಿ ರೂ.1,43,87,116/–ಗಳನ್ನು ಈಗಾಗಲೇ ಸಂಬಂಧಪಟ್ಟ ವಿದ್ಯಾರ್ಥಿಗಳಿಗೆ ಬಟವಾಡೆ ಮಾಡಲಾಗಿದು

| | |
|---|---|
| ರೂ.1,49,00,416/–ಗಳು ಮಾತ್ರ ಮಂಜೂರಾಗಿರುತ್ತದೆ.<br><br>ವಿದ್ಯಾರ್ಥಿಗಳ ಶುಲ್ಕ ವಿನಾಯಿತಿ ಬಟವಾಡೆ ವಹಿಯನ್ನು ಪರಿಶೀಲಿಸಿದಾಗ ರೂ.1,43,87,116/–ಗಳು ಮಾತ್ರ ಬಟವಾಡೆಯಾಗಿದ್ದು ರೂ.5,13,300/–ಗಳು ಬಟವಾಡೆಯಾಗದೆ ಉಳಿಕೆ ಇರುತ್ತದೆ. ಶೀಘ್ರವಾಗಿ ರೂ.5,13,300/–ಗಳನ್ನು ಬಡ್ಡಿ ಸಮೇತ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಲೆಕ್ಕಶೀರ್ಷಿಕೆಗೆ ಜಮೆ ಮಾಡಿ ವಿವರಗಳನ್ನು ಲೆಕ್ಕ ತಪಾಸಣೆಗೆ ಹಾಜರುಪಡಿಸುವವರೆಗೆ ರೂ.5,13,300/–ಗಳನ್ನು ಆಕ್ಷೇಪಣೆಗೆ ಸೂಚಿಸಿದೆ. ಹಾಗೂ ಹಿಂದಿನ ಸಾಲುಗಳಲ್ಲಿ ಬಟವಾಡೆಯಾಗದೆ ಉಳಿದ ಮೊತ್ತವನ್ನು ಸಹ ಹಿಂದಿರಿಗಿಸಲು ಕ್ರಮ ಕೈಗೊಳ್ಳುವುದು ಮತ್ತು ಬ್ಯಾಂಕ್ ತಃಖ್ತೆಯೊಂದಿಗೆ ಉಳಿಕೆ ಶಿಲ್ಕನ್ನು ಸಮನ್ವಯಗೊಳಿಸಿ ವರದಿ ನೀಡುವಂತೆ ಸೂಚಿಸಿದೆ. ವಿವರವನ್ನು ಅನುಬಂಧ–22 ರಲ್ಲಿ ಲಗತ್ತಿಸಿದೆ. | ಉಳಿಕೆ ಬಾಕಿ ಮೊತ್ತ ರೂ.5,13,300/–ಗಳಲ್ಲಿ ವಿದ್ಯಾರ್ಥಿಗಳಿಗೆ ರೂ.3,65,925/–ಗಳನ್ನು ಬಟವಾಡೆ ಮಾಡಲಾಗಿದ್ದು ಉಳಿಕೆ ಬಾಕಿ ಮೊತ್ತ ರೂ.1,47,375/–ಗಳನ್ನು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಲೆಕ್ಕ ಶೀರ್ಷಿಕೆಗೆ ಚಲನ್ ಸಂಖ್ಯೆ ಸಿ.ಆರ್.122002500488743 ಯಲ್ಲಿ ದಿನಾಂಕ:21–12–2020 ರಂದು ಪಾವತಿಸಲಾಗಿರುತ್ತದೆ, ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ನಿಧಿಗೆ ಜಮೆ ಮಾಡಿರುವ ಚಲನ್ ಅನ್ನು ಇದರೊಂದಿಗೆ ಮಾಹಿತಗಾಗಿ ಲಗತ್ತಿಸಲಾಗಿದೆ. ಮುಂದುವರೆದು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ ಬಿಡುಗಡೆಯಾದ ಮೊತ್ತ ರೂ.1,49,00,416/–ಗಳ್ಲಲಿ ಯಾವುದೇ ಬಾಕಿ ಮೊತ್ತ ಉಳಿದಿರುವುದಿಲ್ಲ.<br><br>ರೂ.5,13,300/–ಗಳ ಬಟವಾಡೆ ಮತ್ತು ಜಮೆವಿವರಗಳು ಇಂತಿದೆ.<br><br>ಕ್ರ.ಸಂ \| ಸರ್ಕಾರದಿಂದ ಮಂಜೂರಾತಿಯಾದ ಮೊತ್ತದಲ್ಲಿ ಬಟವಾಡೆಯಾಗದೆ ಉಳಿಕೆಯಾದ ಮೊತ್ತ \| ವಿದ್ಯಾರ್ಥಿಗಳಿಗೆ ಬಟವಾಡೆ ಮಾಡಿರುವ ಮೊತ್ತ \| ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಲೆಕ್ಕ ಶೀರ್ಷಿಕೆಗೆ ಜಮಾ ಮಾಡಿರುವ ಮೊತ್ತ \| ಉಳಿಕೆ ಮೊತ್ತ<br>1 \| ರೂ.5,13,300/– \| ರೂ.3,65,925/– \| ರು.1,47,375/– \| ಯಾವುದು ಇಲ್ಲ<br><br>ಈ ನಿಟ್ಟಿನಲ್ಲಿ ಆಕ್ಷೇಪಣೆಯಲ್ಲಿಟಿರುವ ಮೊತ್ತ ರೂ.5,13,300ಗಳನ್ನು ತೀರುವಳಿಗೊಳಿಸುವಂತೆ ನಿವೇದಿಸಲಾಗಿದೆ. |
| **42. ವಿದ್ಯಾರ್ಥಿಗಳಿಂದ ಪ್ರವೇಶಾತಿ ಶುಲ್ಕವನ್ನು ಕಡಿಮೆ ಸ್ವೀಕರಿಸಿರುವುದು/ಚಲನ್‌ಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸದಿರುವುದು:– (ಪ್ರಾಣಿಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ).**<br>2017–18ನೇ ಸಾಲಿನಲ್ಲಿ Msc in Zoology ಕೋರ್ಸ್‌ಗೆ ಪ್ರವೇಶಾತಿ ಪಡೆದ ವಿದ್ಯಾರ್ಥಿಗಳ ಪ್ರವೇಶಾತಿ ವಹಿ, ಪ್ರವೇಶ ಶುಲ್ಕ ಚಲನ್‌ಗಳು ಹಾಗೂ ಸಂಬಂಧಿತ ಪೂರಕ ಲೆಕ್ಕಪತ್ರ ದಾಖಲೆಗಳನ್ನು ಪರಿಶೀಲಿಸಲಾಗಿ, Msc in Zoology ಕೋರ್ಸ್‌ನ ಪ್ರಥಮ ವರ್ಷದ 2017–18ನೇ ಶೈಕ್ಷಣಿಕ ಸಾಲಿನ ಸ್ಕೀಂ–ಬಿ ನಲ್ಲಿ ಪ್ರವೇಶಾತಿ ಪಡೆದ ಕೆಲವು ವಿದ್ಯಾರ್ಥಿಗಳಿಂದ ವಿಶ್ವವಿದ್ಯಾನಿಲಯವು ಸದರಿ ಕೋರ್ಸ್‌ಗೆ ನಿಗದಿಪಡಿಸಿರುವ ಪ್ರವೇಶಾತಿ ಶುಲ್ಕಕ್ಕಿಂತ ಕಡಿಮೆ ಶುಲ್ಕ ವಸೂಲಿಸಿದ್ದು, ಹಾಗೂ ಕೆಲವು ವಿದ್ಯಾರ್ಥಿಗಳ ಪ್ರವೇಶ ಶುಲ್ಕದ ಚಲನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸಿರುವುದಿಲ್ಲ. ಈ ಸಂಬಂಧ ವಿವರಣೆಯನ್ನು ನೀಡುವಂತೆ ವಿಚಾರಣಾ ಪತ್ರ ಸಂಖ್ಯೆ:03/2019–20/13.06.2019 ರಲ್ಲಿ ಕೋರಲಾಗಿದ್ದು ಯಾವುದೇ ವಿವರಣೆಯನ್ನು ನೀಡಿರುವುದಿಲ್ಲ. ಕಡಿಮೆ ಪ್ರವೇಶಾತಿ ಶುಲ್ಕ ಚಲನ್ನು ಹಾಜರುಪಡಿಸದಿರುವ ವಿದ್ಯಾರ್ಥಿಗಳ ವಿವರ ಈ ಕೆಳಕಂಡಂತಿದೆ. | ಪ್ರಸ್ಥಾವಿತ ಕಂಡಿಕೆಯ ವಿಷಯಕ್ಕೆ ಸಂಬಂಧಿಸಿದಂತೆ ಲೆಕ್ಕ ಪರೀಶೋಧನಾ ವರದಿಯಲ್ಲಿ ಸೂಚಿತವಾಗಿರುವ ಅಶ್ವಿನಿ.ಎಚ್, 3ಎ ವರ್ಗ, ಸ್ಕೀಂ ಬಿ, ಇವರಿಂದ ವಸೂಲಾತಿಗೆ ಸೂಚಿತವಾಗಿದ್ದ ಮೊತ್ತ ರೂ.30,000/–ಗಳನ್ನು ಸಂಬಂಧಪಟ್ಟ ವಿದ್ಯಾರ್ಥಿಯು ಚಲನ್ ಸಂಖ್ಯೆ:–4142, ದಿನಾಂಕ:02.08.2017ರಲ್ಲಿ ವಿಶ್ವವಿದ್ಯಾನಿಲಯದ ನಿಧಿಗೆ ಸಂಧಾಯಮಾಡಿರುವ ಚಲನ್ ಪ್ರತಿಯನ್ನು ಅಧ್ಯಕ್ಷರು ಪ್ರಾಣಿ ಶಾಸ್ತ್ರ ಆಧ್ಯಯನ ವಿಭಾಗ, ಮೈಸೂರು ರವರು ದೃಢೀಕರಿಸಿರುವ ಪ್ರತಿ ಲಗತ್ತಿಸಿದೆ.<br><br>ಆದ ಕಾರಣ ಸೂಚಿತ ವಸೂಲಾತಿ ಕಂಡಿಕೆ ಕೈ ಬಿಡಲು ಕೋರಿದೆ. |

| ಕ್ರ. ಸಂ | ವಿದ್ಯಾರ್ಥಿಯ ಹೆಸರು | ವರ್ಗ | ಸ್ಕೀಂ | ಪ್ರವೇಶಾತಿ ಪಡೆದ ವರ್ಷ | ವಿ.ವಿ.ನಿಗದಿಪಡಿಸಿರುವ ಶುಲ್ಕ (ರೂ.ಗಳಲ್ಲಿ) | ವಸೂಲಾದ ಶುಲ್ಕ (ರೂ.ಗಳಲ್ಲಿ) | ಬಾಕಿ ಶುಲ್ಕ (ರೂ.ಗಳಲ್ಲಿ) | ಷರಾ |
|---|---|---|---|---|---|---|---|---|
| 1 | ಅಶ್ವಿನಿ ಎಚ್ | 3ಎ | ಬಿ | 2017–18 1ನೇ ವರ್ಷ | 52,900 | 22,900 | 30,000 | ರೂ.30,000 ಕ್ಕೆ ಚಲನ್‌ನ್ನು ಹಾಜರುಪಡಿಸಿರುವುದಿಲ್ಲ |
| | | | | | | **ಒಟ್ಟು ಮೊತ್ತ (ರೂ)** | **30,000** | |

ಮುಂದುವರೆದು, ಮೇಲ್ಕಂಡ ವಿವರಗಳಂತೆ ವಿದ್ಯಾರ್ಥಿಗಳಿಂದ ಕಡಿಮೆ ಸ್ವೀಕರಿಸಿರುವ/ಪ್ರವೇಶ ಶುಲ್ಕದ ಚಲನನ್ನು ಹಾಜರುಪಡಿಸದಿರುವ ಶುಲ್ಕದ ಒಟ್ಟು ಮೊತ್ತ ರೂ.30,000/–ಗಳನ್ನು ಸದರಿ ವಿದ್ಯಾರ್ಥಿಯಿಂದ ಕೂಡಲೇ ವಸೂಲಿಸಿ ವಿಶ್ವವಿದ್ಯಾನಿಲಯದ ಖಾತೆಗೆ ಜಮೆ ಮಾಡಿ ದಾಖಲೆಯನ್ನು ಹಾಜರುಪಡಿಸಲು ಸೂಚಿಸಿದೆ.

**43. ವಿದ್ಯಾರ್ಥಿಯಿಂದ ಪ್ರವೇಶಾತಿ ಶುಲ್ಕವನ್ನು ಕಡಿಮೆ ಸ್ವೀಕಸಿರುವುದು:– (ಜೈವಿಕ ತಂತ್ರಜ್ಞಾನ ಸ್ನಾತಕೋತ್ತರ ಅಧ್ಯಯನ ವಿಭಾಗ)**

2017–18ನೇ ಸಾಲಿನಲ್ಲಿ Msc in Bio-Technology ಕೋರ್ಸ್‌ಗೆ ಪ್ರವೇಶಾತಿ ಪಡೆದ ವಿದ್ಯಾರ್ಥಿಗಳ ಪ್ರವೇಶಾತಿ ವಹಿ, ಪ್ರವೇಶ ಶುಲ್ಕದ ಚಲನ್‌ಗಳು ಹಾಗೂ ಸಂಬಂಧಿತ ಪೂರಕ ಲೆಕ್ಕಪತ್ರ ದಾಖಲೆಗಳನ್ನು ಪರಿಶೀಲಿಸಲಾಗಿ, Msc in Bio-Technology ಕೋರ್ಸ್‌ನ ಪ್ರಥಮ ವರ್ಷದ (2017–18) ಸ್ಕೀಂ–ಬಿನಲ್ಲಿ ಪ್ರವೇಶಾತಿ ಪಡೆದ ವಿದ್ಯಾರ್ಥಿಯಿಂದ ವಿಶ್ವವಿದ್ಯಾನಿಲಯವು ಸದರಿ ಕೋರ್ಸ್‌ಗೆ ನಿಗದಿಪಡಿಸಿರುವ ಪ್ರವೇಶಾತಿ ಶುಲ್ಕಕ್ಕಿಂತ ಕಡಿಮೆ ಶುಲ್ಕ ಸ್ವೀಕರಿಸಿರುವುದು ಕಂಡುಬಂದಿದೆ. ಈ ಸಂಬಂಧ ಸ್ಪಷ್ಟೀಕರಣ/ವಿವರಣೆಯನ್ನು ನೀಡುವಂತೆ ವಿಚಾರಣಾ ಪತ್ರ ಸಂಖ್ಯೆ: 03/2019–20/17.06.2019 ರಂದು ಕೋರಲಾಗಿದ್ದು, ಯಾವುದೇ ಸ್ಪಷ್ತೀಕರಣ/ವಿವರಣೆಯನ್ನು ನೀಡಿರುವುದಿಲ್ಲ. ಕಡಿಮೆ ಪ್ರವೇಶಾತಿ ಶುಲ್ಕ ಸ್ವೀಕರಿಸಿರುವ ವಿದ್ಯಾರ್ಥಿಯ ವಿವರ ಈ ಕೆಳಕಂಡಂತಿದೆ.

| ವಿದ್ಯಾರ್ಥಿಯ ಹೆಸರು ಮತ್ತು ಕೋರ್ಸ್‌ನ ನಿವರ | ಸ್ಕೀಂ | ವಿ.ವಿ.ನಿಗದಿಪಡಿಸಿರುವ ಶುಲ್ಕ (ರೂ.ಗಳಲ್ಲಿ) | ವಸೂಲಾದ ಶುಲ್ಕ (ರೂ.ಗಳಲ್ಲಿ) | ಬಾಕಿ ಶುಲ್ಕ ((ರೂ.ಗಳಲ್ಲಿ) |
|---|---|---|---|---|
| **ಅಹಮದ್ ನಜಿಮ್ ನಾಸಿರ್ (ವಿದೇಶಿ ವಿದ್ಯಾರ್ಥಿ)** Msc- ಪ್ರಥಮ ವರ್ಷ | ಬಿ | **1,81,650** | **1,56,700** | **24,950** |

ವಿದ್ಯಾರ್ಥಿಯಿಂದ ಕಡಿಮೆ ಸ್ವೀಕರಿಸಿರುವ ಪ್ರವೇಶ ಶುಲ್ಕದ ಮೊತ್ತ ರೂ.24,950/–ಗಳನ್ನು ಸದರಿ ವಿದ್ಯಾರ್ಥಿಯಿಂದ ಕೂಡಲೇ ವಸೂಲಿಸಿ ವಿಶ್ವವಿದ್ಯಾನಿಲಯದ ಖಾತೆಗೆ ಜಮೆ ಮಾಡಿ ವಿವರ/ದಾಖಲೆಯನ್ನು ಲೆಕ್ಕ ಪರಿಶೋಧನಾ ಕಛೇರಿಗೆ ಹಾಜರುಪಡಿಸಲು ಸೂಚಿಸಿದೆ. ವಿದ್ಯಾರ್ಥಿಯು ಪಾವತಿಸದಿದ್ದಲ್ಲಿ ಪ್ರವೇಶಾತಿಯನ್ನು ಸ್ವೀಕರಿಸಿದವರನ್ನೇ ಹೊಣೆಗಾರರನ್ನಾಗಿ ಮಾಡಿ ಅವರಿಂದ ವಸೂಲಾತಿಗೆ ಸೂಚಿಸಿದೆ.

2017–18ನೇ ಸಾಲಿನಲ್ಲಿ ಜೈವಿಕ ತಂತ್ರಜ್ಞಾನ ಅಧ್ಯಯನ ವಿಭಾಗದಲ್ಲಿ ಎಂ.ಎಸ್.ಸಿ ಪ್ರಥಮ ವರ್ಷದ 'ಬಿ' ಸ್ಕೀಂ ಪ್ರವೇಶಾತಿ ಪಡೆದ ವಿದೇಶಿ ವಿದ್ಯಾರ್ಥಿ ಅಹಮದ್ ನಜಿಮ್ ನಾಸಿರ್ ಪ್ರವೇಶಾತಿ ಶುಲ್ಕ ರೂ.24,950/– ಬಾಕಿ ಉಳಿದಿರುವುದಾಗಿ ಹಾಗೂ ವಿದ್ಯಾರ್ಥಿಯಿಂದ ಕೊಡಲೇ ವಸೂಲಾತಿಸಿ ವಿಶ್ವವಿದ್ಯಾನಿಲಯದ ಖಾತೆಗೆ ಜಮಾ ಮಾಡುವ ಬಗ್ಗೆ ಕಂಡಿಕೆಯಲ್ಲಿ ಪ್ರಸ್ತಾಪಿಸಿಲಾಗಿರುತ್ತದೆ.

ಸದರಿ ವಿದ್ಯಾರ್ಥಿಯು 2020–21 ನೇ ಸಾಲಿನಲ್ಲಿ ಎಂ.ಎಸ್.ಸಿ ಪದವಿಯನ್ನು ಪೂರ್ಣಗೊಳಿಸಿ ಯಾವುದೇ ಶುಲ್ಕ ಬಾಕಿ ಉಳಿದಿರುವುದಿಲ್ಲ (ಡಿ,ಸಿ,ಬಿ,ಪ್ರಕಾರ)ವಾಗಿ ವಿಶ್ವವಿದ್ಯಾನಿಲಯದ ಆಡಳಿತಾಧಿಕಾರಿಯವರು ನೀಡಿರುವ ಬೇಬಾಕಿ ಪ್ರಮಾಣ ಪತ್ರದ ಪ್ರತಿಯನ್ನು ಈ ಕೂಡ ಲಗತ್ತಿಸಿ ಸಲ್ಲಿಸುತ್ತಾ **ಕಂಡಿಕೆಯಲ್ಲಿನ ವಸೂಲಾತಿ ಮೊತ್ತ ರೂ.24,950/–ಗಳನ್ನು ತೀರುವಳಿಗೊಳಿಸುವಂತೆ ಕೋರಲಾಗಿದೆ.**

**44.ಅಧ್ಯಯನ ವಿಭಾಗದ ಪ್ರವೇಶಾತಿ ಶುಲ್ಕದ ಬೇಡಿಕೆ–ವಸೂಲಾತಿ–ಬಾಕಿ (ಡಿಸಿಬಿ) ವಿವರ:– (ಜೈವಿಕ ತಂತ್ರಜ್ಞಾನ ಸ್ನಾತಕೋತ್ತರ ಅಧ್ಯಯನ ವಿಭಾಗ).**

2017–18ನೇ ಶೈಕ್ಷಣಿಕ ಸಾಲಿನ ಜೈವಿಕ ತಂತ್ರಜ್ಞಾನ ಅಧ್ಯಯನ ವಿಭಾಗದ ಲೆಕ್ಕ ಪರಿಶೋಧನಾ

2017–18 ನೇ ಸಾಲಿನಲ್ಲಿ Msc in Bio-Technology ಕೋರ್ಸ್‌ಗೆ ಪ್ರವೇಶಾತಿ

ಅವಧಿಯಲ್ಲಿ Msc in Bio-Technology ಕೋರ್ಸ್‌ನ ಪ್ರವೇಶಾತಿ ವಿವರವನ್ನು ಪರಿಶೀಲಿಸಲಾಗಿ, ಸದರಿ ಸಾಲಿನಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ವರ್ಗಗಳ ವಿದ್ಯಾರ್ಥಿಗಳಿಗೆ ಪ್ರವೇಶಾತಿಯಲ್ಲಿ ಶುಲ್ಕ ವಿನಾಯಿತಿ ನೀಡಲಾಗಿದೆ. ಸರ್ಕಾರದಿಂದ/ಸಮಾಜ ಕಲ್ಯಾಣ ಇಲಾಖೆಯಿಂದ ವಿನಾಯಿತಿ ನೀಡಲಾದ ಶುಲ್ಕವನ್ನು ಮರುಭರಿಕೆ ಮಾಡಿಕೊಂಡ ಬಗ್ಗೆ ಪೂರಕ ಲೆಕ್ಕಪತ್ರ ದಾಖಲೆಗಳನ್ನು ಲೆಕ್ಕ ಪರಿಶೋಧನೆಗೆ ಹಾಜರುಪಡಿಸುವಂತೆ ವಿಚಾರಣಾ ಪತ್ರದ ಸಂಖ್ಯೆ:04/2019–20/18.06.2019 ರಂದು ನೀಡಲಾಗಿರುತ್ತದೆ.

Msc in Bio-Technology ಕೋರ್ಸ್‌ಗೆ ಪ್ರವೇಶಾತಿ ಪಡೆದ ವಿದ್ಯಾರ್ಥಿಗಳ ಪ್ರವೇಶಾತಿ ವಿವರಗಳು ಹಾಗೂ ಪ್ರವೇಶ ಶುಲ್ಕದ ಚಲನ್‌ಗಳನ್ನು ಪರಿಶೀಲಿಸಲಾಗಿ, ವಿದ್ಯಾರ್ಥಿಗಳಿಂದ ಬರಬೇಕಾದ ಪ್ರವೇಶ ಶುಲ್ಕದ ಒಟ್ಟು ಬೇಡಿಕೆ ಮೊತ್ತ ರೂ.24,61,855/–ಗಳಾಗಿದ್ದು, ವಸೂಲಾಗಿರುವ ಮೊತ್ತ ರೂ.24,40,035/–ಗಳಾಗಿದೆ. ಹಾಗೂ ಬಾಕಿ ಉಳಿದಿರುವ ಮೊತ್ತ ರೂ.21,820/–ಗಳಾಗಿದೆ. ವಿವರವನ್ನು **ಅನುಬಂಧ–23** ರಲ್ಲಿ ನೀಡಲಾಗಿದೆ. ಬಾಕಿ ಶುಲ್ಕವನ್ನು ಸಂಬಂಧಿಸಿದವರಿಂದ ವಸೂಲಿ/ಮರುಭರಿಕೆ ದಾಖಲೆಗಳನ್ನು ಹಾಜರುಪಡಿಸುವವರೆಗೆ **ಮೊತ್ತ ರೂ.21,820/–ಗಳನ್ನು ವಸೂಲಾತಿಗೆ ಸೂಚಿಸಿದೆ.**

ಪಡೆದ ವಿದ್ಯಾರ್ಥಿಗಳ ಪ್ರವೇಶ ಶುಲ್ಕ **ರೂ.21,820/–ಗಳು (ಅನುಬಂಧ–23ರಲ್ಲಿ)** ಬಾಕಿ ಉಳಿದಿರುವುದಾಗಿ ಹಾಗೂ ಸಂಬಂಧಪಟ್ಟ ವಿದ್ಯಾರ್ಥಿಗಳಿಂದ ವಸೂಲಿ/ಮರುಭರಿಕೆ ಬಗ್ಗೆ ಕಂಡಿಕೆಯಲ್ಲಿ ಪ್ರಸ್ತಾಪಿಸಲಾಗಿರುತ್ತದೆ.

2017–18ನೇ ಸಾಲಿನಲ್ಲಿ Msc in Bio-Technology ಕೋರ್ಸ್‌ಗೆ ಪ್ರವೇಶಾತಿ ಪಡೆದು ಬಾಕಿ ಉಳಿದಿದ್ದ ಪ್ರವೇಶಾತಿ ಶುಲ್ಕದಲ್ಲಿ ಪ್ರಥಮ ವರ್ಷದ ಎಂ.ಎಸ್ಸಿ, 'ಎ' ಸ್ಕೀಂ ನ ಎಸ್.ಸಿ/ಎಸ್.ಟಿ ವಿದ್ಯಾರ್ಥಿಗಳಿಂದ **ರೂ.15,800/ಗಳು** ಮತ್ತು ದ್ವಿತೀಯ ವರ್ಷದ ಎಂ,ಎಸ್ಸಿ 'ಎ' ಸ್ಕೀಂ ನ ಎಸ್.ಸಿ ವಿದ್ಯಾರ್ಥಿಯಿಂದ **ರೂ.6,020/–ಗಳು** ಸೇರಿದಂತೆ **ಒಟ್ಟು ರೂ.21,820/–ಗಳು ಮರುಭರಿಕೆಯಾಗಿರುವ** ಬಗ್ಗೆ ಆಡಳಿತಾಧಿಕಾರಿ ಕಛೇರಿಯ ಎಸ್.ಸಿ/ಎಸ್.ಟಿ ವಿದ್ಯಾರ್ಥಿಗಳ ವಿದ್ಯಾರ್ಥಿ ವೇತನ ಬಟವಾಡೆ ವಹಿಯ ಪುಟ ಸಂಖ್ಯೆ ಮತ್ತು ವಿದ್ಯಾರ್ಥಿಗಳ ಕ್ರಮ ಸಂಖ್ಯೆ ಹಾಗೂ ವಿದ್ಯಾರ್ಥಿಗಳ ಹೆಸರನ್ನೊಳಗೊಂಡ **ಅನುಬಂಧವನ್ನು ಲಗತ್ತಿಸಿ** ಸಲ್ಲಿಸುತ್ತಾ ಪ್ರಸ್ತುತ **ಕಂಡಿಕೆಯ ವಸೂಲಾತಿ ಮೊತ್ತ ರೂ.21,820/–ಗಳನ್ನು ತೀರುವಳಿಗೊಳಿಸುವಂತೆ ಕೋರಿದೆ.**

**45.2017–18ನೇ ವರ್ಷದ ಪ್ರವೇಶಾತಿ ಪಡೆದಿರುವ ವಿದ್ಯಾರ್ಥಿಗಳಿಂದ ಕಡಿಮೆ ಪ್ರವೇಶಾತಿ ಶುಲ್ಕ ವಸೂಲಿ ಮಾಡಿರುವುದು: (ದೈಹಿಕ ಶಿಕ್ಷಣ ಹಾಗೂ ಕ್ರೀಡಾ ವಿಜ್ಞಾನ ಅಧ್ಯಯನ ವಿಭಾಗ)**

2017–18ನೇ ಸಾಲಿನಲ್ಲಿ ದೈಹಿಕ ಶಿಕ್ಷಣ ಹಾಗೂ ಕ್ರೀಡಾ ವಿಜ್ಞಾನ ಅಧ್ಯಯನ ವಿಭಾಗ ವಿವಿಧ ವರ್ಗವಾರು M.PED ಪ್ರವೇಶಾತಿ ಪಡೆದಿರುವ ವಹಿ ಪರಿಶೀಲಿಸಿದಾಗ ವಿದ್ಯಾರ್ಥಿಗಳಿಂದ ಕಡಿಮೆ ಶುಲ್ಕ ವಸೂಲಿ ಮಾಡಿರುವುದು ಕಂಡು ಬಂದಿರುತ್ತದೆ ಈ ಬಗ್ಗೆ ವಿಚಾರಣೆ ಸಂಖ್ಯೆ:05/2018–19 ದಿನಾಂಕ:06.03.2019 ರಂದು ನಿಡಲಾಗಿದ್ದು ವಿಚಾರಣೆಗೆ ಯಾವುದೇ ದಾಖಲಾತಿಯನ್ನು ಹಾಜರುಪಡಿಸದೆ ಇರುವುದರಿಂದ ಮೊಬಲಗು ರೂ.32,000/–ಗಳನ್ನು ವಸೂಲಾತಿಗೆ ಸೂಚಿಸಲಾಗಿದೆ. ವಿವರ ಈ ಕೆಳಕಂಡಂತಿದೆ.

| ಕ್ರ.ಸಂ | ವಿದ್ಯಾರ್ಥಿ ಹೆಸರು | ವರ್ಗ | ವಸೂಲಿಸಬೇಕಾದ ಶುಲ್ಕ (ರೂ.ಗಳಲ್ಲಿ) | ವಸೂಲಾದ ಮೊಬಲಗು (ರೂ.ಗಳಲ್ಲಿ) | ವ್ಯತ್ಯಾಸದ ಮೊಬಲಗು (ರೂ.ಗಳಲ್ಲಿ) |
|---|---|---|---|---|---|
| 1 | **Jyothi P** | **3A** | 22900 | 16900 | 6000 |
| 2 | **Sakisha C N** | **2A** | 22900 | 16900 | 6000 |
| 3 | **Madhushree S** | **3A** | 22900 | ಪ್ರವೇಶಾತಿ ವಹಿಯಲ್ಲಿ ದಾಖಲು ಮಾಡಿಲ್ಲ, ಚಲನ್ ಹಾಜರುಪಡಿಸಿಲ್ಲ | |
| 4 | **Rama Kumar** | **St B** | 36400 | 26400 | 10000 |
| 5 | **Praveena BC** | **Sc B** | 36400 | 26400 | 10000 |
| | | | | ಒಟ್ಟು | 32,000 |

ಪ್ರಸ್ಥಾವಿತ ಕಂಡಿಕೆಯ ವಿಷಯಕ್ಕೆ ಸಂಬಂಧಿಸಿದಂತೆ ಎಸ್ ಮಧು ಶ್ರೀ 3ಎ ವರ್ಗ ಇವರ ಪ್ರವೇಶಾತಿ ಶುಲ್ಕಕ್ಕೆ ಸಂಬಂಧಿದಂತೆ ಪ್ರವೇಶಾತಿ ದಾಖಲೆಯಲ್ಲಿ ದಾಖಲಿಸಲು ಕ್ರಮವಹಿಸಲಾಗಿದೆ. ಮತ್ತು ಈ ಸಂಬಂಧದ ಚಲನ್‌ಗಳನ್ನು ಹಾಜರುಪಡಿಸಲಾಗಿದೆ. ವಿವರ ಈ ರೀತಿ ಇದೆ.(ಚಲನ್ ಪ್ರತಿ ಲಗತ್ತಿಸಿದೆ)

| ಕ್ರ.ಸಂ | ಚಲನ್ ಸಂಖ್ಯೆ/ದಿನಾಂಕ | ಮೊತ್ತ (ಜಿ.ಆರ್.ಎ ಖಾತೆ) |
|---|---|---|
| 1 | 570/27.07.2017 | 1,000/– |
| 2 | 568/27.07.2017 | 20,780/– |
| 3 | Bank Credit Slip | 970/– |
| 4 | 569/27.07.2017 | 150/– |
| | **ಒಟ್ಟು ರೂ** | **22,900/–** |

ಆದ ಕಾರಣ ಸೂಚಿತ ಆಕ್ಷೇಪಣೆ ಮೊತ್ತ ಕೈ ಬಿಡಲು ಕೋರಿದೆ.

ಮುಂದುವರೆದು, ಸದರಿ ಕಂಡಿಕೆಯಲ್ಲಿ 2017–18ನೇ ಸಾಲಿನಲ್ಲಿ M.PED ಕೋರ್ಸ್‌ಗೆ ಪ್ರವೇಶಾತಿ ನೀಡುವ ಸಂರ್ಭದಲ್ಲಿ ನಿದಗಿತವಾಗಿ ವಸೂಲಿಸಬೇಕಾಗಿದ್ದ ಪ್ರವೇಶಾತಿ ಶುಲ್ಕವನ್ನು ಕಡಿಮೆ ದರದಲ್ಲಿ ವಸೂಲಿಸಿರುವ ಬಗ್ಗೆ ಪ್ರಸ್ತಾಪಿಸಲಾಗಿದೆ.

ವಿವರದಲ್ಲಿ ತಿಳಿಸಿರುವಂತೆ ಬ್ಯಾಂಕ್ ಖಾತೆಗೆ ಜಮೆ ಮಾಡಿರುವ ಚಲನ್ ಸ್ವೀಕೃತಿ, ಬ್ಯಾಂಕ್ ಸ್ಕ್ರೋಲ್ ಡಿಸಿಬಿ ವಹಿ ಶುಲ್ಕದರ ನಿಗದಿಪಡಿಸಿರುವ ಆದೇಶದ ಪ್ರತಿ ಇತ್ಯಾದಿ ದಾಖಲಾತಿಗಳನ್ನು ಹಾಜರುಪಡಿಸದೆ ಇರುವುದರಿಂದ ಮೊಬಲಗು ರೂ.32,000/–ವಸೂಲಾತಿಗೆ ಸೂಚಿಸಿದೆ.

ಶ್ರೀ ಎಸ್ ಮಧು 3ಎ ಕೆಟಗರಿ ಇವರ ಪ್ರವೇಶಾತಿ ಶುಲ್ಕ ರೂ.22,900/–ಕ್ಕೆ ಪ್ರವೇಶಾತಿ ವಹಿಯಲ್ಲಿ ದಾಖಲು ಮಾಡದೇ, ಚಲನ್ ಹಾಜರುಪಡಿಸದೆ ಇರುವುದರಿಂದ ಮೊಬಲಗು ರೂ.22,900/– ಆಕ್ಷೇಪಣೆಯಲ್ಲಿಡಲಾಗಿದೆ.

ಆದರೆ ವಾಸ್ತವಾಗಿ ಸೂಚಿತವಾದ ವಸೂಲಾತಿ ಮೊತ್ತವನ್ನು ಈಗಾಗಲೇ ವಸೂಲಾತಿ ಮಾಡಿ ಸಂಬಂಧಿಸಿದ ಲೆಕ್ಕ ಶೀರ್ಷಿಕೆಗೆ ಜಮಾಮಾಡಲಾಗಿದೆ. ಅದರ ವಿವರ ಈ ರೀತಿ ಇದೆ.

| ಕ್ರ.ಸಂ | ವಿದ್ಯಾರ್ಥಿ ಹೆಸರು | ವರ್ಗ | ವಸೂಲಿಗೆ ಸೂಚಿತವಾಗಿರುವ ಮೊತ್ತ | ಸಂದಾಯಮಾಡಿರುವ ವಿವರ ಚಲನ್ ನಂ/ದಿನಾಂಕ |
|---|---|---|---|---|
| 1 | ಜ್ಯೋತಿ | 3ಎ | 6,000/– | 06169/02.03.2018 |
| 2 | ಸತೀಶ್.ಜಿ.ಎನ್ | 2ಎ | 6,000/– | 43717/16.07.2018 |
| 3 | ರಾಮ್ ಕುಮಾರ್ | ಎಸ್.ಟಿ ಬಿ.ಸ್ಕೀಂ | 10,000/– | 06132/16.04.2018 |
| 4 | ಪ್ರವೀಣ್ ಬಿ.ಸಿ | ಎಸ್.ಸಿ ಬಿ.ಸ್ಕೀಂ | 10,000/– | 06136/10.04.2018 |
| | | **ಒಟ್ಟು ರೂ** | **32,000/–** | |

ಈ ಸಂಬಂಧದ ಎಲ್ಲಾ ಚಲನ್ ಪ್ರತಿಗಳನ್ನು ಅಡಕಗೊಳಿಸಿದೆ.

ಆದ ಕಾರಣ ಸೂಚಿತ ವಸೂಲಾತಿ ಕಂಡಿಕೆ ಕೈ ಬಿಡಲು ಕೋರಿದೆ.

**46. ಮುಂಜಾಗರೂಕತಾ ಠೇವಣಿ ಶುಲ್ಕವನ್ನು ಕೆಲವು ವಿದ್ಯಾರ್ಥಿಗಳಿಗೆ ಹಿಂದುರುಗಿಸಿರುವುದು:– (ಸ್ನಾತಕೋತ್ತರ ಮಹಿಳಾ ವಿದ್ಯಾರ್ಥಿ ನಿಲಯ ಬ್ಲಾಕ್–02)**

ಮೈಸೂರು ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಮಹಿಳಾ ವಿದ್ಯಾರ್ಥಿ ನಿಲಯ ಬ್ಲಾಕ್–02 2017–18ನೇ ಸಾಲಿನ ಲೆಕ್ಕ ಪರಿಶೋಧನೆಯಲ್ಲಿ ಸಾಮಾನ್ಯ ವರ್ಗದಡಿ ಪ್ರವೇಶಾತಿ ಪಡೆದಿರುವ ವಿದ್ಯಾರ್ಥಿಗಳ ಮುಂಜಾಗರೂಕತಾ ಠೇವಣಿ ಶುಲ್ಕವನ್ನು ಹಿಂದಿರುಗಿಸಿರುವ ಲೆಕ್ಕ ಪತ್ರ ದಾಖಲೆಗಳನ್ನು ಪರಿಶೀಲಿಸಲಾಗಿದ್ದು ಕೆಲವು ವಿದ್ಯಾರ್ಥಿಗಳಿಗೆ ಮಾತ್ರ ಹಿಂದುರುಗಿಸಿರುವುದು ಕಂಡು ಬಂದಿರುತ್ತದೆ. ವಿವರ ಈ ಕಳಕಂಡಂತಿದೆ.

| ಕ್ರ.ಸಂ | ಸಾಮಾನ್ಯ ವರ್ಗದಡಿ ಪ್ರವೇಶಾತಿ ಪಡೆದ ವಿದ್ಯಾರ್ಥಿಗಳ ಸಂಖ್ಯೆ | ಒಟ್ಟು ಠೇವಣಿ ಶುಲ್ಕ ಮೊತ್ತ (ರೂ ಗಳಲ್ಲಿ) | ಠೇವಣಿ ವಿತರಿಸಲಾದ ವಿದ್ಯಾರ್ಥಿಗಳ ಸಂಖ್ಯೆ | ವಿತರಿಸಿರುವ ಠೇವಣಿ ಶುಲ್ಕ (ರೂ ಗಳಲ್ಲಿ) | ವಿತರಣೆ ಆಗದೇ ಬಾಕಿ ಇರುವ ಠೇವಣಿ ಮೊತ್ತ (ರೂ ಗಳಲ್ಲಿ) |
|---|---|---|---|---|---|
| 1 | 220 | 2,20,000 | 200 | 2,00,000 | 20,000 |

ಮೇಲಿನ ವಿವರದಂತೆ ಸದರಿ ಸಾಲಿನಲ್ಲಿ ಸಾಮಾನ್ಯ ವರ್ಗದಡಿ ಪ್ರವೇಶಾತಿ ಪಡೆದ ವಿದ್ಯಾರ್ಥಿಗಳಿಗೆ ಪಾವತಿಯಾಗದೇ ಬಾಕಿ ಉಳಿದಿರುವ ಮೊತ್ತ **ರೂ.20,000/–ಗಳನ್ನು** ಶೀಘ್ರವಾಗಿ ಹಿಂದಿರುಗಿಸಲು ಸೂಚಿಸಿದೆ.

ಸದರಿ ಸಾಲಿನಲ್ಲಿ ಸಾಮಾನ್ಯ ವರ್ಗದಡಿಯಲ್ಲಿ ಪ್ರವೇಶಾತಿ ಪಡೆದ ಒಟ್ಟು ವಿದ್ಯಾರ್ಥಿಗಳ ಸಂಖ್ಯೆ:–220 ಒಟ್ಟು ಠೇವಣಿ ಮೊತ್ತ ರೂ.2,20,000/–ಗಳು. ಠೇವಣಿ ವಿತರಿಸಲಾದ ವಿದ್ಯಾರ್ಥಿಗಳ ಸಂಖ್ಯೆ:–200 ವಿತರಿಸಿರುವ ಠೇವಣಿ ಮೊತ್ತ ರೂ.2,00,000/–ಗಳು ವಿತರಣೆಯಾಗದೆ ಬಾಕಿ ಇರುವ ಠೇವಣಿ ಮೊತ್ತ ರೂ.20,000/–ಗಳನ್ನು ಸಂಬಂಧಪಟ್ಟ ವಿದ್ಯಾರ್ಥಿಗಳಿಗೆ ಶೀಘ್ರವಾಗಿ ಹಿಂದಿರುಗಿಸಲು ಕಂಡಿಕೆಯಲ್ಲಿ ಪ್ರಸ್ತಾಪಿಸಲಾಗಿರುತ್ತದೆ.

ವಿಶ್ವವಿದ್ಯಾನಿಲಯದ ಆದೇಶ ಸಂಖ್ಯೆ:–ವಿ.ಷೇ.ಪಾ–8/26/105/2019–20 ದಿನಾಂಕ: 06.11.2019 ರಲ್ಲಿ ಮಾನ್ಯ ಕುಲಪತಿಗಳ ಅನುಮೋದನೆಯ ಮೇರೆಗೆ ಹಾಗೂ ದಿನಾಂಕ:30.09.2019 ರಂದು ನಡೆದ ಸಭಾ ನಡಾವಳಿಯಂತೆ ಪ್ರಸ್ತಾವನೆಯಲ್ಲಿನ **ಕ್ರಮ ಸಂಖ್ಯೆ:–07 ರಲ್ಲಿ** 2017–18ನೇ ಸಾಲಿನಲ್ಲಿ ಸಾಮಾನ್ಯ ವರ್ಗದ ವಿದ್ಯಾರ್ಥಿಗಳಿಗೆ ನೀಡದೆ ಉಳಿದ ಭದ್ರತಾ ಠೇವಣಿಯ ಮೊತ್ತ ರೂ.20,000/–ಗಳನ್ನು ವಿಶ್ವವಿದ್ಯಾನಿಲಯದ ಸಾಲ ಮತ್ತು ಮುಂಗಡ ಖಾತೆಗೆ ಜಮಾ ಮಾಡಲು ಆದೇಶಿಸಿರುವ ಹಿನ್ನೆಲೆಯಲ್ಲಿ ಆದೇಶದ 2ನೇ ಕ್ರಮಾಂಕದಲ್ಲಿ ಪ್ರಸ್ತಾಪಿಸಿರುವ **ಕ್ರಮ ಸಂಖ್ಯೆ:–07, 08, 10 ಮತ್ತು 11 ಕ್ಕೆ** ಸಂಬಂಧಿಸಿದಂತೆ ಒಟ್ಟು ಮೊತ್ತ **ರೂ.2,58,593/–ಗಳನ್ನು ಚಲನ್ ನಂ.4989 ದಿನಾಂಕ:11.2019** ರಂದು

| | |
|---|---|
| | ವಿಶ್ವವಿದ್ಯಾನಿಲಯದ **"ಸಾಲ ಮತ್ತು ಮುಂಗಡ ಖಾತೆ"ಗೆ** ಜಮಾ ಮಾಡಲಾಗಿರುತ್ತದೆ. ಇದರಲ್ಲಿ 2017–18ನೇ ಸಾಲಿನಲ್ಲಿ ವಿತರಿಸದೇ ಉಳಿದಿರುವ ಮುಂಜಾಗರೂಕತಾ ಠೇವಣಿ ಮೊತ್ತ **ರೂ.20,000/–ಗಳು** ಸಹ ಸೇರಿರುತ್ತದೆ ಧನಾದೇಶದ ಪ್ರತಿ ಜಮಾ ಮಾಡಿರುವ ಚಲನ್ ಪ್ರತಿ ಮತ್ತು ಬ್ಯಾಂಕ್ ಸ್ಕ್ರೋಲ್ ಪ್ರತಿ ಲಗತ್ತಿಸಿ ಸಲ್ಲಿಸಿದೆ. |
| **47 ಸಂಸ್ಥೆಯ ವಿವಿಧ ಕೋರ್ಸ್‌ಗಳಿಗೆ ಪ್ರವೇಶಾತಿ ವಿವರ (ಮಹಿಳಾ ಅಧ್ಯಯನ ವಿಭಾಗ).**<br><br>2017–18ನೇ ಸಾಲಿಗೆ ಸಂಸ್ಥೆಯಲ್ಲಿ ಎಂ.ಎ ಸ್ನಾತಕೋತ್ತರ ಪದವಿ ಕೋರ್ಸ್‌ಗಳ ಪ್ರವೇಶಾತಿಗೆ ಸಂಬಂಧಿಸಿದಂತೆ ಪೂರಕ ದಾಖಲೆಗಳೊಂದಿಗೆ ಪ್ರವೇಶಾತಿ ವಹಿಗಳನ್ನು ಪರಿಶೀಲಿಸಲಾಗಿದೆ.<br><br>**ಪ್ರವೇಶಾತಿ ಶುಲ್ಕದ ಬೇಡಿಕೆ ವಸೂಲಾತಿ ಮತ್ತು ಬಾಕಿ ಶುಲ್ಕದ ವಿವರಗಳು.**<br>ಎಂ.ಎ ಸ್ನಾತಕೋತ್ತರ ಪದವಿ ಪ್ರವೇಶಾತಿ ವಹಿಗಳನ್ನು ಪರಿಶೀಲಿಸಲಾಗಿ 2017–18ನೇ ಸಾಲಿನಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಪ್ರವೇಶಾತಿಯಲ್ಲಿ ಶುಲ್ಕ ವಿನಾಯಿತಿ ನೀಡಲಾಗಿರುತ್ತದೆ.<br><br>ಪ್ರವೇಶಾತಿ ಶುಲ್ಕದಲ್ಲಿ ವಿನಾಯಿತಿ ನೀಡಿದ್ದಕ್ಕೆ ಸರ್ಕಾರದಿಂದ ಅಥವಾ ಸಮಾಜ ಕಲ್ಯಾಣ ಇಲಾಖೆಯಿಂದ ವಿನಾಯಿತಿ ನೀಡಲಾದ ಶುಲ್ಕವನ್ನು ಮರುಭರಿಕೆ ಮಾಡಿಕೊಂಡ ಬಗ್ಗೆ ದಾಖಲೆಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸಲು ವಿಚಾರಣಾ ಪತ್ರ ಸಂಖ್ಯೆ:02/2018–19 ದಿನಾಂಕ:27.02.2019 ರಲ್ಲಿ ನೀಡಲಾಗಿರುತ್ತದೆ. ಪ್ರವೇಶಾತಿ ವಹಿಯಲ್ಲಿನ ಶುಲ್ಕ ವಿವರಗಳನ್ನು ಪರಿಶೀಲಿಸಲಾಗಿ 2017–18ನೇ ಸಾಲಿನ ಎಂ.ಎ ಸ್ನಾತಕೋತ್ತರ ಪದವಿಯ ಬೋಧನಾ ಶುಲ್ಕ ಒಟ್ಟು ರೂ.2,62,260/–ಗಳು ಸ್ವೀಕೃತಿಯಾಗಬೇಕಾಗಿದ್ದು, ಸದರಿ ಸಾಲಿನಲ್ಲಿ ಯಾವುದೇ ಶುಲ್ಕ ವಸೂಲಾಗದೆ ರೂ.2,62,260/–ಬಾಕಿ ಉಳಿಸಿರುತ್ತದೆ. ಡಿ.ಸಿ.ಬಿ ವಿವರಗಳನ್ನು **ಅನುಬಂಧ–24ರಲ್ಲಿ** ಲಗತ್ತಿಸಿದೆ.<br><br>ಬಾಕಿ ಶುಲ್ಕದ ಮರುಭರಿಕೆ ಬಗ್ಗೆ ದಾಖಲೆಗಳನ್ನು ಹಾಜರುಪಡಿಸದಿ**ರುವುದರಿಂದ ರೂ.2,62,260/–ಗಳನ್ನು ವಸೂಲಾತಿಗೆ ಸೂಚಿಸಲಾಗಿದೆ.** | 2017–18ನೇ ಸಾಲಿನಲ್ಲಿ ಮಹಿಳಾ ಅಧ್ಯಯನ ವಿಭಾಗದಲ್ಲಿ ಎಂ.ಎ ಸ್ನಾತಕೋತ್ತರ ಪದವಿಗೆ ಪ್ರವೇಶಾತಿ ಪಡೆದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಪ್ರವೇಶಾತಿ ಶುಲ್ಕದಲ್ಲಿ ವಿನಾಯಿತಿ ನೀಡಿದ್ದು ಸರ್ಕಾರದಿಂದ ಅಥವಾ ಸಮಾಜ ಕಲ್ಯಾಣ ಇಲಾಖೆಯಿಂದ ಪ್ರವೇಶಾತಿ ಶುಲ್ಕ ಮರುಭರಿಕೆಯ ಒಟ್ಟು **ಮೊತ್ತ ರೂ.2,62,260/–ಗಳ** ಬಗ್ಗೆ ಅನುಬಂಧ–24 ರಲ್ಲಿ ಪ್ರಸ್ತಾಪಿಸಲಾಗಿರುತ್ತದೆ.<br><br>**ಕಂಡಿಕೆಯ ಅನುಬಂಧ–24ರ ಕ್ರಮ ಸಂಖ್ಯೆ (01)ರಲ್ಲಿ** 2017–18ನೇ ಸಾಲಿಗೆ ಮೊದಲನೇ ವರ್ಷದ ಎಂ.ಎ ಪದವಿಗೆ ಪ್ರವೇಶಾತಿ ಪಡೆದ 18 ವಿದ್ಯಾರ್ಥಿಗಳ ಪೈಕಿ ಕ್ರಮ ಸಂಖ್ಯೆ: 09ರ ವಿದ್ಯಾರ್ಥಿ ಗಣೇಶ್ ಎಸ್.ಜಿ ಪ್ರವೇಶಾತಿ ರದ್ದು ಪಡಿಸಿದ್ದು 17 ವಿದ್ಯಾರ್ಥಿಗಳು ಪ್ರವೇಶಾತಿ ಪಡೆದಿರುತ್ತಾರೆ, ಇದರಲ್ಲಿ ಕ್ರಮ ಸಂಖ್ಯೆ (03) ಮತ್ತು (04)ರ ವಿದ್ಯಾರ್ಥಿಗಳಿಂದ ಪ್ರವೇಶಾತಿ ಶುಲ್ಕ **ರೂ.27,800/–ಗಳು** ಮರುಭರಿಕೆಯಾಗಿರುವುದಿಲ್ಲ. ಉಳಿಕೆ 15 ವಿದ್ಯಾರ್ಥಿಗಳಿಂದ ಪ್ರವೇಶಾತಿ ಶುಲ್ಕ ಸಮಾಜ ಕಲ್ಯಾಣ ಇಲಾಖೆಯಿಂದ ಮರುಭರಿಕೆಯಾಗಿರುತ್ತದೆ ಮತ್ತು **ಅನುಬಂಧ–24ರ ಕ್ರಮ ಸಂಖ್ಯೆ (02)ರ** ಎಂ.ಎ ಅಂತಿಮ ಸೆಮಿಸ್ಟರ್‌ನ (03)ಮಂದಿ ವಿದ್ಯಾರ್ಥಿಗಳಿಂದ ರೂ.12,060/–ಗಳ ಪ್ರವೇಶಾತಿ ಶುಲ್ಕ ಮರುಭರಿಕೆಯಾಗಿದ್ದು, ಆಡಳಿತಾಧಿಕಾರಿಯವರು ನೀಡಿರುವ ಮರುಭರಿಕೆಯ ವಿವರಣಾ ಪಟ್ಟಿಯನ್ನು ಈ ಕೂಡ ಲಗತ್ತಿಸಿ ಸಲ್ಲಿಸುತ್ತಾ **ಕಂಡಿಕೆಯಲ್ಲಿ ವಸೂಲಾತಿಗೆ ಸೂಚಿಸಿರುವ ಒಟ್ಟು ಮೊತ್ತ ರೂ.2,62,260/–ಗಳಲ್ಲಿ ರೂ.2,34,460/–ಗಳನ್ನು ತೀರುವಳಿಗೊಳಿಸಬೇಕಾಗಿ ಕೋರಿದೆ.** |
| **48. ನಗದು ಪುಸ್ತಕ ಪರಿಶೀಲನೆ:– (ವಿದ್ಯಾರ್ಥಿನಿಲಯ ಬ್ಲಾಕ್–2, ಸರಸ್ವತಿಪುರಂ)**<br>ಕಛೇರಿಯ ನಗದು ಪುಸ್ತಕವನ್ನು ಪರಿಶೀಲಿಸಲಾಗಿ ದಿನಾಂಕ:14.07.2017 ರಂದು ರಶೀತಿ ಪುಸ್ತಕ ಸಂಖ್ಯೆ:68 ರಶೀತಿ ಸಂಖ್ಯೆ: 3367 ರಿಂದ 3376 ರವರೆಗೆ ರೂ.35250/–ಗಳನ್ನು ಸ್ವೀಕೃತಿ ತೆಗೆದುಕೊಳ್ಳಲಾಗಿದೆ. ಈ ಮೊತ್ತದಲ್ಲಿ ವಿಶ್ವವಿದ್ಯಾನಿಲಯದ ಅಧಿಸೂಚನೆ ಸಂಖ್ಯೆ:ವಿ.ಕ್ಷೇ.ಪಾ1/16/489/2017–18 ದಿನಾಂಕ:05.07.2017ರ ಪ್ರಕಾರ ಠೇವಣಿ ಶುಲ್ಕವನ್ನು ಮಾತ್ರ | ಕಛೇರಿಯ ನಗದು ಪುಸ್ತಕದಲ್ಲಿ ದಿನಾಂಕ:14.07.2017ರಂದು ಸ್ವೀಕೃತಿ ಮೊತ್ತದಲ್ಲಿ **ಠೇವಣಿ ಮೊತ್ತ** ರೂ.4500/–ಗಳಾಗಿದ್ದು ಈ ಮೊತ್ತವನ್ನು ನಿಲಯದ ಖಾತೆಯಲ್ಲಿ ಉಳಿಸಿಕೊಂಡು ಉಳಿದ ಮೊತ್ತವನ್ನು ಜಿ,ಆರ್,ಎ ಖಾತೆಗೆ ಜಮಾ ಮಾಡಬೇಕಾಗಿರುತ್ತದೆ ಆದರೆ **ರೂ.4500/–ಗಳ** ಬದಲಾಗಿ **ರೂ.8310/–ಗಳನ್ನು** ನಿಲಯದ ಖಾತೆಗೆ ಜಮಾ |

| | |
|---|---|
| ವಿದ್ಯಾರ್ಥಿನಿಲಯಗಳಲ್ಲಿ ಜಮಾ ಮಾಡುವುದು ಮತ್ತು ಉಳಿದ ಎಲ್ಲಾ ಶುಲ್ಕಗಳ ಮೊಬಲಗನ್ನು ವಿಶ್ವವಿದ್ಯಾನಿಲಯದ ಜಿ.ಆರ್.ಎ ಖಾತೆಗೆ ಜಮಾ ಮಾಡುವ ಬಗ್ಗೆ ನಿರ್ದೇಶನ ನೀಡಲಾಗಿದೆ. ಅದರಂತೆ ಜಿ.ಆರ್.ಎ ಖಾತೆ ಮತ್ತು ನಿಲಯದ ಖಾತೆಯ ಜಮಾ ವಿವರಗಳನ್ನು ಮತ್ತು ರಿಜಿಸ್ಟರ್‌ನ್ನು ಪರಿಶೀಲಿಸಲಾಗಿ ದಿನಾಂಕ:14.07.2017ರ ಸ್ವೀಕೃತಿ ಮೊತ್ತದಲ್ಲಿ ಠೇವಣಿ ಮೊತ್ತ ರೂ.4500/–ಗಳು ಇದ್ದು, ಈ ಮೊತ್ತವನ್ನು ನಿಲಯದ ಖಾತೆಯಲ್ಲಿ ಉಳಿಸಿಕೊಂಡು ಉಳಿದ ಮೊತ್ತ ಜಿ.ಆರ್.ಎ ಖಾತೆಗೆ ಜಮೆ ಮಾಡಬೇಕಾಗಿರುತ್ತದೆ. ಆದರೆ ರೂ.4500/–ಗಳ ಬದಲಾಗಿ ರೂ.8310/–ಗಳನ್ನು ಹೆಚ್ಚುವರಿಯಾಗಿ ನಿಲಯದ ಖಾತೆಗೆ ಜಮಾ ಮಾಡಿರುವುದು ಕಂಡುಬಂದಿದ್ದು, ವ್ಯತ್ಯಾಸದ ಮೊತ್ತ ರೂ.3,810ಗಳನ್ನು ಜಿ.ಆರ್.ಎ ಖಾತೆಗೆ ಜಮೆ ಮಾಡಲು ಸೂಚಿಸಿದೆ. ವಿಶ್ವವಿದ್ಯಾನಿಲಯದ ಜಿ.ಆರ್.ಎ ಖಾತೆಗೆ ಜಮಾ ಮಾಡಿರುವ ಬಗ್ಗೆ ವಿವರವನ್ನು ಲೆಕ್ಕ ತಪಾಸಣೆಗೆ ಒದಗಿಸಿವವರೆಗೆ **ರೂ.3,810ಗಳನ್ನು ಆಕ್ಷೇಪಣೆಯಲ್ಲಿದಲಾಗಿದೆ.** | ಮಾಡಿದ್ದು ವ್ಯತ್ಯಾಸದ ಮೊತ್ತ **ರೂ.3810/–**ಗಳನ್ನು ಜಿ.ಆರ್.ಎ ಖಾತೆಗೆ ಜಮಾ ಮಾಡಿ ವಿವರವನ್ನು ಒದಗಿಸುವಂತೆ ಕಂಡಿಕೆಯಲ್ಲಿ ಪ್ರಸ್ತಾಪಿಸಲಾಗಿದೆ.<br><br>ವಿಶ್ವವಿದ್ಯಾನಿಲಯದ ಆದೇಶ ಸಂಖ್ಯೆ:ವಿಕ್ಷೇಪಾ/26/1054/2019–20 ದಿನಾಂಕ:06.11. 2019ರಲ್ಲಿ ಮಾನ್ಯ ಕುಲಪತಿಗಳ ಅನುಮೋದನೆಯ ಮೇರೆಗೆ ಹಾಗೂ 30.09.2019 ರಂದು ನಡೆದ ಸಭಾನಡಾವಳಿಯಂತೆ ವಿದ್ಯಾರ್ಥಿನಿಲಯದ ಉಳಿತಾಯ ಖಾತೆಯಲ್ಲಿ ಲಭ್ಯವಿರುವ ಮೊಬಲಗನ್ನು ವಿಶ್ವವಿದ್ಯಾನಿಲಯದ ವಿವಿಧ ಖಾತೆಗಳಿಗೆ (ಜಿ,ಆರ್,ಎ ಖಾತೆ, ಸಾಲ ಮತ್ತು ಮುಂಗಡ ಖಾತೆ ಹಾಗೂ ಇತರೆ ಖಾತೆ) ಜಮಾ ಮಾಡಲು ಅನುಮೋದನೆ ನೀಡಿರುವ ಹಿನ್ನೆಲೆಯಲ್ಲಿ **ಆದೇಶದ ಪ್ರಸ್ತಾವನೆಯ ಕ್ರಮಾಂಕ 1,2,3,4,5,9,12, ಮತ್ತು 13ಕ್ಕೆ ಸಂಬಂಧಿಸಿದ ಒಟ್ಟು ಮೊತ್ತ ರೂ.1,33,340/–**ಗಳಲ್ಲಿ ವಿಶ್ವವಿದ್ಯಾನಿಲಯದ ಹಣಕಾಸು ಅಧಿಕಾರಿಗಳ ಆದೇಶ ದಿನಾಂಕ:08.11.2019ರ ಪ್ರಕಾರ ಶಿಕ್ಷಕ ಸಲಹೆಗಾರರು ಕ್ರೀಡಾ ವಿಜ್ಞಾನ ಅಧ್ಯಯನ ವಿಭಾಗದ ವಿದ್ಯಾರ್ಥಿನಿಲಯ ಖಾತೆ ಸಂಖ್ಯೆ:54007591255ಕ್ಕೆ ಧನಾದೇಶ ಸಂಖ್ಯೆ:453003 ದಿನಾಂಕ:29.11.2019 ರಂದು ರೂ,53,700/–ಗಳನ್ನು ಜಮಾ ಮಾಡಿದ್ದು ಉಳಿದ **ಮೊತ್ತ ರೂ.79,640/–ಗಳನ್ನು ಜಿ.ಆರ್.ಎ ಖಾತೆಗೆ ಚಲನ್ ನಂ:10248 ದಿನಾಂಕ:13.11.2019 ರಲ್ಲಿ** ಜಮಾ ಮಾಡಲಾಗಿರುತ್ತದೆ ಚಲನ್ ಪ್ರತಿ ಮತ್ತು ಬ್ಯಾಂಕ್ ಸ್ಕ್ರೋಲ್ ಲಗತ್ತಿಸಿದೆ.<br><br>ಮುಂದುವರಿದು ಆದೇಶದ ಪ್ರಸ್ತಾವನೆಯಲ್ಲಿನ **ಕ್ರಮಸಂಖ್ಯೆ:6,7,8,10 ಮತ್ತು 11ಕ್ಕೆ ಸಂಬಂಧಿಸಿದ ಒಟ್ಟು ಮೊತ್ತ ರೂ.84,856/–ಗಳನ್ನು ಚಲನ್ ನಂ;4926 ದಿನಾಂಕ:13.11.2019 ರಲ್ಲಿ ವಿಶ್ವವಿದ್ಯಾನಿಲಯದ ಸಾಲ ಮತ್ತು ಮುಂಗಡ ಖಾತೆಗೆ ಜಮಾ** ಮಾಡಿರುತ್ತದೆ ಚಲನ್ ಪ್ರತಿ ಮತ್ತು ಬ್ಯಾಂಕ್ ಸ್ಕ್ರೋಲ್ ಪ್ರತಿ ಲಗತ್ತಿಸಿದ್ದು ಕಂಡಿಕೆಯಲ್ಲಿ ಆಕ್ಷೇಪಿಸಿರುವ ಮೊತ್ತ **ರೂ.3,810/–ಗಳು ಪ್ರಸ್ತಾವನೆಯಲ್ಲಿನ ಕ್ರಮ ಸಂಖ್ಯೆ:07**ರಲ್ಲಿ **(ರೂ.7,000 ಗಳು)** ಸೇರ್ಪಡೆಯಾಗಿರುವುದಾಗಿ ನಿವೇದಿಸುತ್ತಾ ಕಂಡಿಕೆಯಲ್ಲಿನ **ಆಕ್ಷೇಪಣೆ ಮೊತ್ತ ರೂ.3,810/–ಗಳನ್ನು ತೀರುವಳಿಗೊಳಿಸಬೇಕಾಗಿ ಕೋರಿದೆ.** |
| **49. 2017–18ನೇ ಶಲಿನ ವಿದ್ಯಾರ್ಥೀನಿಲಯದ ಪ್ರವೇಶದ ಅರ್ಜಿ ಶುಲ್ಕ ರೂ.7,400/–ಗಳನ್ನು ಜಿ.ಆರ್.ಎ. ಖಾತೆಗೆ ಜಮಾ ಮಾಡಿದ ವಿವರ ಹಾಜರುಪಡಿಸದಿರುವುದು:– (ವಿದ್ಯಾರ್ಥಿನಿಲಯ ಬ್ಲಾಕ್–2, ಸರಸ್ವತಿಪುರಂ).**<br><br>2017–18ನೇ ಸಾಲಿನಲ್ಲಿ ವಿದ್ಯಾರ್ಥಿನಿಲಯದ ಪ್ರವೇಶಾತಿ ವಿವರಗಳನ್ನು ಪರಿಶೀಲಿಸಿದಾಗ 149 ವಿದ್ಯಾರ್ಥಿಗಳು ಪ್ರವೇಶಾತಿ ಹೊಂದಿದ್ದು, ವಿಶ್ವವಿದ್ಯಾನಿಲಯದ ಅಧಿಸೂಚನೆ ಸಂಖ್ಯೆ:ವಿಕ್ಷೇಪಾ1/16/489/2017–18 ದಿನಾಂಕ:05.07.2017ರ ಪ್ರಕಾರ ಪ್ರವೇಶಾತಿ ಅರ್ಜಿ ಶುಲ್ಕ ರೂ.50/–ಗಳಾಗಿರುತ್ತದೆ. ಅದರಂತೆ 149 ವಿದ್ಯಾರ್ಥಿಗಳಿಂದ ರೂ.7,450/– ಅರ್ಜಿ ಶುಲ್ಕಗಳನ್ನು ಜಿ.ಆರ.ಎ ಖಾತೆಗೆ ಜಮೆ ಮಾಡಬೇಕಾಗಿರುತ್ತದೆ. ವಿಕಲಚೇತನದ ಒಬ್ಬ ವಿದ್ಯಾರ್ಥಿಯ ಅರ್ಜಿ ಶುಲ್ಕ | 2017–18ನೇ ಸಾಲಿನಲ್ಲಿ ವಿದ್ಯಾರ್ಥಿ ನಿಲಯ ಬ್ಲಾಕ್–2 ಸರಸ್ವತಿಪುರಂ ವಿದ್ಯಾರ್ಥಿನಿಲಯದಲ್ಲಿ ಪ್ರವೇಶಾತಿ ಪಡೆದ 149 ವಿದ್ಯಾರ್ಥಿಗಳಲ್ಲಿ ವಿಕಲ ಚೇತನದ ಒಬ್ಬ ವಿದ್ಯಾರ್ಥಿಯ ಅರ್ಜಿ ಶುಲ್ಕ ಮಾತ್ರ ಜಮೆಯಾಗಿದ್ದು ಉಳಿದ 148 ವಿದ್ಯಾರ್ಥಿಗಳ ಅರ್ಜಿ ಶುಲ್ಕ ರೂ.7,400/–ಗಳ ವಸೂಲಾತಿ ಮತ್ತು ಜಮಾ ಮಾಡುವ ಬಗ್ಗೆ ಕಂಡಿಕೆಯಲ್ಲಿ ಪ್ರಸ್ತಾಪಿಸಲಾಗಿರುತ್ತದೆ. |

<table>
<tr>
<td>ರೂ.50/– ಮಾತ್ರ ಜಮೆ ಮಾಡಲಾಗಿದ್ದು, ಉಳಿದ ಅರ್ಜಿ ಶುಲ್ಕದ ಮೊತ್ತ ರೂ.7400/–ಗಳನ್ನು ಜಿ.ಆರ್.ಎ ಖಾತೆಗೆ ಜಮೆ ಮಾಡಿರುವ ವಿವರಗಳು ಲಭ್ಯವಿಲ್ಲದಿರುವುದರಿಂದ ಸಂಬಂಧಸಿದವರಿಂದ ಕೂಡಲೇ ರೂ.7,400/–ಗಳನ್ನು ವಸೂಲಿಸಿ ವಿಶ್ವವಿದ್ಯಾನಿಲಯದ ಖಾತೆಗೆ ಜಮಾ ಮಾಡಿ ಜಮಾ ವಿವರಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸುವಂತೆ ಸೂಚಿಸಿದೆ.</td>
<td>2017–18ನೇ ಸಾಲಿನಲ್ಲಿ ಯುವರಾಜ ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಿದ್ದ ವಿದ್ಯಾರ್ಥಿಗಳಿಗೆ ಪ್ರತ್ಯೇಕವಾಗಿ ಯುವರಾಜ ಕಾಲೇಜು ಪುರುಷರ ವಿದ್ಯಾರ್ಥಿ ನಿಲಯದಲ್ಲಿಯೇ (ಒಂದೇ ಕಡೆ) ಪ್ರವೇಶಾತಿ ಅರ್ಜಿಗಳನ್ನು ವಿತರಿಸಲು ನಿರ್ದೇಶಕರು ವಿದ್ಯಾರ್ಥಿ ಕ್ಷೇಮಾಪಾಲನಾ ವಿಭಾಗ ವತಿಯಿಂದ ಮೌಖಿಕವಾಗಿ ಸೂಚಿಸಿ ಸದರಿ ವಿಭಾಗದ ವತಿಯಿಂದ ಪ್ರವೇಶಾತಿ ಅರ್ಜಿಗಳನ್ನು ಯುವರಾಜ ಕಾಲೇಜಿನ ಪುರುಷ ವಿದ್ಯಾರ್ಥಿ ನಿಲಯಕ್ಕೆ ವಿತರಿಸಿದ್ದು ಯುವರಾಜ ಕಾಲೇಜಿನ ಪರುಷ ವಿದ್ಯಾರ್ಥಿನಿಲಯದಲ್ಲಿಯೇ ಪ್ರವೇಶಾತಿ ಅರ್ಜಿಗಳನ್ನು ವಿತರಿಸಲಾಗಿರುತ್ತದೆ. ಪ್ರವೇಶಾತಿ ಅರ್ಜಿ ವಿತರಣೆಯ ಪುಸ್ತಕದ ಕ್ರಮ ಸಂಖ್ಯೆ ವಿವರ ಮತ್ತು ವಿದ್ಯಾರ್ಥಿ ನಿಲಯ ಬ್ಲಾಕ್–2 ಸರಸ್ವತಿಪುರಂನ ಪ್ರವೇಶಾತಿ ವಹಿಯ ಕ್ರಮ ಸಂಖ್ಯೆ ಹಾಗೂ ವಿದ್ಯಾರ್ಥಿಗಳಿಗೆ ವಿತರಿಸಿದ ಅರ್ಜಿ ಸಂಖ್ಯೆಯ ವಿವರಗಳ ಪ್ರತಿಗಳನ್ನು ಉದಾರಣೆಗಾಗಿ ಸಲ್ಲಿಸಿದೆ.<br><br>ಯುವರಾಜ ಕಾಲೇಜು ಪರುಷ ವಿದ್ಯಾರ್ಥಿನಿಲಯ 2017–18ನೇ ಸಾಲಿನ ಪ್ರವೇಶಾತಿ ಅರ್ಜಿ ಶುಲ್ಕ ರೂ.10,000/–ಗಳನ್ನು ಚಲನ್ ನಂ–37064 ದಿನಾಂಕ:11.07.2017 ರಂದು ವಿಶ್ವವಿದ್ಯಾನಿಲಯದ ಸಾಮಾನ್ಯ ರೆವಿನ್ಯೂ ಖಾತೆಗೆ ಜಮಾ ಮಾಡಿರುತ್ತಾರೆ, ಚಲನ್ ಪ್ರತಿ ಹಾಗೂ ಬ್ಯಾಂಕ್ ಸ್ಕ್ರೋಲ್ ಪ್ರತಿ ಲಗತ್ತಿಸಿದ್ದು ಕಂಡಿಕೆಯಲ್ಲಿ ವಸೂಲಾತಿಗೆ ಸೂಚಿಸಿರುವ ರೂ.7,400/–ಗಳನ್ನು ತೀರುವಳಿಗೊಳಿಸಬೇಕಾಗಿ ಕೋರಿದೆ.</td>
</tr>
<tr>
<td><u>50. 2017–18ನೇ ಸಾಲಿಗೆ ಗುರುತಿನ ಚೀಟಿ ದಾಸ್ತಾನು ಸ್ವೀಕೃತಿ ವಿತರಣೆ ವಹಿ ಪರಿಶೀಲನೆಗೆ ಹಾಜರುಪಡಿಸದಿರುವುದು:– (ವಿದ್ಯಾರ್ಥಿನಿಲಯ ಬ್ಲಾಕ್–2, ಸರಸ್ವತಿಪುರಂ).</u><br><br>2017–18ನೇ ಸಾಲಿಗೆ ಮೈಸೂರು ವಿಶ್ವವಿದ್ಯಾನಿಲಯದ ಪುರುಷ ವಿದ್ಯಾರ್ಥಿನಿಲಯ–02, ಸರಸ್ವತಿಪುರಂ, ಮೈಸೂರು ಇಲ್ಲಿ ಪ್ರವೇಶಾತಿ ಪಡೆದಿರುವ ವಿದ್ಯಾರ್ಥಿಗಳಿಗೆ ಗುರುತಿನ ಚೀಟಿಗಳನ್ನು ವಿತರಿಸಲು, Spartan IT Solution, ಮೈಸೂರು ರವರಿಗೆ Digital ID Card ಮುದ್ರಣದ ವೆಚ್ಚ ರೂ.7,350/–ಗಳನ್ನು ಧನಾದೇಶ ಸಂಖ್ಯೆ:291522 ದಿನಾಂಕ:23.09.2017ರಲ್ಲಿ ಪಾವತಿಸಲಾಗಿರುತ್ತದೆ. ಒಟ್ಟು 149 ವಿದ್ಯಾರ್ಥಿಗಳಿಗೆ ಗುರತಿನ ಚೀಟಿಗಳನ್ನು ವಿತರಿಸಿರುವ ಬಗ್ಗೆ ಹಾಗೂ ಗುರುತಿನ ಚೀಟಿ (Digital ID Card) ಗಳನ್ನು ದಾಸ್ತಾನಿಗೆ ತೆಗೆದುಕೊಂಡು ವಿದ್ಯಾರ್ಥಿಗಳಿಗೆ ವಿತರಿಸಿರುವ ಕುರಿತು ದಾಸ್ತಾನು ಸ್ವೀಕೃತಿ/ವಿತರಣಾ ವಹಿಯನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸದಿರುವುದರಿಂದ ಗುರುತಿನ ಚೀಟಿ ಮುದ್ರಣದ ವೆಚ್ಚದ ಬಾಬ್ತು ಪಾವತಿಸಲಾಗಿರುವ ಮೊತ್ತ ರೂ.7,350/–ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.</td>
<td>2017–18ನೇ ಸಾಲಿನಲ್ಲಿ ಪುರುಷ ವಿದ್ಯಾರ್ಥಿ ನಿಲಯ–02 ಸರಸ್ವತಿಪುರಂ ನಲ್ಲಿ ಪ್ರವೇಶಾತಿ ಪಡೆದಿರುವ 149 ವಿದ್ಯಾರ್ಥಿಗಳಿಗೆ ಗುರುತಿನ ಚೀಟಿಗಳ ಮುದ್ರಣ ವೆಚ್ಚದ ಬಾಬ್ತು ರೂ.7,350/–ಗಳ ಸಂಬಂಧವಾಗಿ ವಿದ್ಯಾರ್ಥಿನಿಲಯದಲ್ಲಿ 2017–18ನೇ ಸಾಲಿನ ಗುರುತಿನ ಚೀಟಿಗಳ ದಾಸ್ತಾನು ಸ್ವೀಕೃತಿ/ವಿತರಣಾ ವಹಿಯನ್ನು ಲೆಕ್ಕ ಪರಿಶೋಧನಗೆ ಹಾಜರುಪಡಿಸದಿರುವ ಬಗ್ಗೆ ಪ್ರಸ್ತಾಪಿಸಲಾಗಿರುತ್ತದೆ.<br><br>2017–18ನೇ ಸಾಲಿನಲ್ಲಿ ವಿದ್ಯಾರ್ಥಿನಿಲಯದಲ್ಲಿ ಪ್ರವೇಶಾತಿ ಪಡೆದಿರುವ 149 ವಿದ್ಯಾರ್ಥಿಗಳ ಗುರುತಿನ ಚೀಟಿಗಳ ಮುದ್ರಣ ವೆಚ್ಚದ ಬಾಬ್ತು ರೂ.7,350/–ರ ಸಂಬಂಧವಾಗಿ ಗುರುತಿನ ಚೀಟಿಗಳ ದಾಸ್ತಾನು ಸ್ವೀಕೃತಿ ಮತ್ತು ವಿದ್ಯಾರ್ಥಿಗಳಿಗೆ ವಿತರಿಸಿರುವ ವಿತರಣಾ ವಹಿಯನ್ನು ನಿರ್ವಹಿಸಲಾಗಿದ್ದು ಅನಿವಾರ್ಯ ಕಾರಣದಿಂದಾಗಿ ಲೆಕ್ಕ ಪರಿಶೋಧನೆಗೆ ದಾಸ್ತಾನು ಹಾಜರುಪಡಿಸದಿರುವ ಬಗ್ಗೆ ವಿದ್ಯಾರ್ಥಿನಿಲಯದ</td>
</tr>
</table>

| | |
|---|---|
| | ಶಿಕ್ಷಕಸಲಹೆಗಾರರು ವಿಷಾದಿಸುತ್ತಾ ಸದರಿ ದಸ್ತಾನು ಮತ್ತು ವಿತರಣಾ ವಹಿಯನ್ನು ಮುಂದಿನ ಲೆಕ್ಕ ಪರಿಶೋಧನೆಗೆ ಹಾಜರುಪಡಿಸುವುದಾಗಿ ವಿನಂತಿಸಿಕೊಂಡಿರುತ್ತಾರೆ. |
| **51. 2017–18ನೇ ಸಾಲಿಗೆ ಪ್ರವೇಶಾತಿ ಪಡೆದಿರುವ ವಿದ್ಯಾರ್ಥಿಗಳಿಂದ ಕಡಿಮೆ ಪ್ರವೇಶಾತಿ ಶುಲ್ಕವನ್ನು ಸ್ವೀಕರಿಸಿರುವ ಕುರಿತು:– (ಡಾ॥ಬಿ.ಆರ್.ಅಂಬೇಡ್ಕರ್ ಸಂಶೋಧನಾ ಮತ್ತು ವಿಸ್ತರಣಾ ಕೇಂದ್ರ)**<br>2017–18ನೇ ಸಾಲಿನಲ್ಲಿ ಡಾ॥ಬಿ.ಆರ್.ಅಂಬೇಡ್ಕರ್ ಸಂಶೋಧನಾ ಮತ್ತು ವಿಸ್ತರಣಾ ಕೇಂದ್ರದಲ್ಲಿ ಪ್ರವೇಶಾತಿ ಪಡೆದಿರುವ ವಿದ್ಯಾರ್ಥಿಗಳ ಪ್ರವೇಶಾತಿ ಶುಲ್ಕದ ಬೇಡಿಕೆ (Demand Register) ವಸೂಲಾತಿ ಹಾಗೂ ಬಾಕಿ ವಿವರಗಳ ವಹಿ ಅಥವಾ ಡಿಸಿಬಿ Register ಅನ್ನು ನಿರ್ವಹಿಸದಿರುವುದರಿಂದ ಲೆಕ್ಕ ಪರಿಶೋಧನೆಗೆ ಹಾಜರುಪಡಿಸಲಾದ ಪ್ರವೇಶಾತಿ ವಹಿ ಹಾಗೂ ವಿಶ್ವವಿದ್ಯಾನಿಲಯದಿಂದ ನಿಗದಿಪಡಿಸಿದ ಶುಲ್ಕಗಳ ಪಟ್ಟಿ (Fee Structure) ಅನುಸಾರ ಪ್ರವೇಶಾತಿ ಶುಲ್ಕ ವಿವರಗಳನ್ನು ಪರಿಶೀಲಿಸಲಾಗಿದ್ದು, 2017–18ನೇ ಸಾಲಿಗೆ ಪ್ರವೇಶ ಪಡೆದಿರುವ ವಿದ್ಯಾರ್ಥಿಗಳಿಂದ ಒಟ್ಟಾರೆ ರೂ.64,900/–ಗಳನ್ನು ಸಂಗ್ರಹಿಸಬೇಕಾಗಿದ್ದು, ರೂ.44,600/–ಗಳನ್ನು ಕಡಿಮೆ ಸಂಗ್ರಹಿಸಲಾಗಿರುತ್ತದೆ. ಹಾಗೂ ರೂ.20,300/–ಗಳ ಶುಲ್ಕ ಬಾಕಿಯಿರುತ್ತದೆ. ಈ ಸಂಬಂಧ ಕಡಿಮೆ ಶುಲ್ಕದ ಸಂಗ್ರಹಣೆಗೆ ಸೂಕ್ತ ಸ್ಪಷ್ಟೀಕರಣವನ್ನು ಒದಗಿಸುವಂತೆ ವಿಚರಣಾ ಪತ್ರ ಸಂಖ್ಯೆ:02/27.02.2019ರನ್ವಯ ಕೋರಲಾಗಿ ದಿನಾಂಕ:27.02.2019ರಂದು ಸ್ಪಷ್ಟೀಕರಣವನ್ನು ಒದಗಿಸಲಾಗಿದ್ದು ಪ್ರವೇಶಾತಿ ಸಂದರ್ಭದಲ್ಲಿ ರೂ.44,600/–ಗಳನ್ನು ಸ್ವೀಕರಿಸಲಾಗಿದ್ದು ಬಾಕಿ ಮೊತ್ತ ರೂ.20,300/–ಗಳನ್ನು ಎರಡನೇ ಚತುರ್ಮಾಸದ ವೇಳೆಯಲ್ಲಿ ಪಾವತಿಸಬೇಕಾಗಿರುತ್ತದೆ. ಹಾಗೂ ವಿದ್ಯಾರ್ಥಿಗಳು ಪೂರ್ಣ ಶುಲ್ಕವನ್ನು ಪಾವತಿಸುವವರೆಗೆ ಪ್ರವೇಶಾತಿ ಸಮಯದಲ್ಲಿ ವಿದ್ಯಾರ್ಥಿಗಳಿಂದ ಪಡೆಯಲಾಗಿದ್ದ ಮೂಲ ಅಂಕಪಟ್ಟಿಗಳನ್ನು ಸಂಸ್ಥೆಯಲ್ಲೇ ಕಾಯ್ದಿರಿಸಲಾಗುತ್ತದೆ. ಈ ವಿಷಯವಾಗಿ ವಿದ್ಯಾರ್ಥಿಗಳಿಗೆ ಸೂಚನಾ ಪತ್ರ ಹೊರಡಿಸಿ ಬಾಕಿ ಶುಲ್ಕವನ್ನು ಸಂಗ್ರಹಿಸಲು ಕ್ರಮವಹಿಸಲಾಗುವುದು ಎಂದು ತಿಳಿಸಲಾಗಿರುತ್ತದೆ, ಆದರೆ ವಿದ್ಯಾರ್ಥಿಗಳ ಆರ್ಥಿಕ ಪರಿಸ್ಥಿತಿಯ ಹಿತದೃಷ್ಟಿಯಿಂದ ಎರಡು ಹಂತಗಳಲ್ಲಿ ಶುಲ್ಕವನ್ನು ಸಂಗ್ರಹಿಸುವುದು ಸಮಂಜಸವಾಗಿದ್ದರೂ, ವಿದ್ಯಾರ್ಥಿಗಳು ಪಾವತಿಸುವವರೆಗೆ ಅವಧಿ ವಿಸ್ತರಿಸುವುದು ಕ್ರಮವಾಗಿರುವುದಿಲ್ಲ. ಈಗಾಗಲೇ 2017–18ರಲ್ಲಿ ಶೈಕ್ಷಣಿಕ ವರ್ಷಪೂರ್ಣಗೊಂಡಿದ್ದು, ಈವರೆವಿಗೂ ಬಾಕಿ ಮೊಬಲಗು **ರೂ.20,300/–ಗಳನ್ನು ಸಂಬಂಧಿಸಿದ ವಿದ್ಯಾರ್ಥಿಗಳಿಂದ ವಸೂಲಿಸಿ ವಿಶ್ವವಿದ್ಯಾನಿಲಯದ ಖಾತೆಗೆ ಜಮೆ ಮಾಡಿ ವಿವರವನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸಲು ಸೂಚಿಸಲಾಗಿದೆ. ವಿವರವನ್ನು ಅನುಬಂಧ–25ರಲ್ಲಿ ನೀಡಿದೆ.** | ಕಂಡಿಕೆಯಲ್ಲಿ ಪ್ರಸ್ತಾಪಿಸಿರುವಂತೆ ಮುಂದಿನ ಶೈಕ್ಷಣಿಕ ವರ್ಷದಲ್ಲಿ ಪ್ರವೇಶಾತಿ ಪಡೆಯುವ ವಿದ್ಯಾರ್ಥಿಗಳ ಡಿ,ಸಿ,ಬಿ ವಹಿಯನ್ನು ನಿರ್ವಹಿಸಲಾಗುವುದು 2017–18ನೇ ಸಾಲಿನಲ್ಲಿ 11 ಮಂದಿ ವಿದ್ಯಾರ್ಥಿಗಳು ಪ್ರವೇಶಾತಿ ಪಡೆದಿದ್ದು ಇವರಲ್ಲಿ 07 ಮಂದಿ ವಿದ್ಯಾರ್ಥಿಗಳ ಪ್ರವೇಶಾತಿ ಶುಲ್ಕದ ಬಾಕಿ ಮೊತ್ತ ರೂ.20,300/–ಗಳನ್ನು ಸಂಬಂಧಿಸಿದ ವಿದ್ಯಾರ್ಥಿಗಳಿಂದ ವಸೂಲಿಸಿ ವಿಶ್ವವಿದ್ಯಾನಿಲಯದ ಖಾತೆಗೆ ಜಮಾ ಮಾಡುವ ಬಗ್ಗೆ ಪ್ರಸ್ತಾಪಿಸಲಾಗಿದೆ.<br><br>**ಕಂಡಿಕೆಯ ಅನುಬಂಧ:–25ರ ಕ್ರಮಾಂಕ–10ರ** ವಿದ್ಯಾರ್ಥಿ ಮಂಜುನಾಥ್‌ರವರಿಂದ **ಬಾಕಿ ಉಳಿದಿರುವ ಶುಲ್ಕ ರೂ.2900/–ಗಳನ್ನು ಚಲನ್ ನಂ 21382 ದಿನಾಂಕ:27.12.2019 ರಂದು ಸಾಮಾನ್ಯ ರೆವಿನ್ಯೂ ಖಾತೆಗೆ ಜಮಾ ಮಾಡಲಾಗಿರುತ್ತದೆ.** ಉಳಿದ 06 ಮಂದಿ ವಿದ್ಯಾರ್ಥಿಗಳ ಪ್ರವೇಶಾತಿ ಶುಲ್ಕ ರೂ.17,400/–ಗಳು ಬಾಕಿ ಉಳಿದಿರುತ್ತದೆ ಈ ವಿದ್ಯಾರ್ಥಿಗಳಿಗೆ 2 ನೇ ಕಂತಿನ ಪ್ರವೇಶಾತಿ ಶುಲ್ಕ ಪಾವತಿಸಲು ಕಛೇರಿಯಿಂದ ಸೂಚನ ಪತ್ರ ಹಾಗೂ ದೂರವಾಣಿ ಮೂಲಕ ಹಲವು ಬಾರಿ ತಿಳಿಸಲಾಗಿದೆ ಅಲ್ಲದೇ ಉಳಿಕೆ ಪ್ರವೇಶಾತಿ ಶುಲ್ಕವನ್ನು ಪಾವತಿಸಿದ ನಂತರ ಗ್ರಂಥಾಲಯ, ವಿದ್ಯಾರ್ಥಿನಿಲಯ ಮತ್ತು ಆಡಳಿತಾಧಿಕಾರಿಗಳ ಕಛೇರಿಗಳಿಂದ ಬೇ ಬಾಕಿ ಪತ್ರಗಳನ್ನು ಪಡೆದ ನಂತರವೇ ಪ್ರವೇಶಾತಿ ಸಂದರ್ಭದಲ್ಲಿ ನೀಡಿರುವ ಮೂಲ ಅಂಕಪಟ್ಟಿ ಮತ್ತು ಇತರೆ ದಾಖಲೆಗಳನ್ನು ಹಿಂದಿರುಗಿಸಲಾಗುವುದಾಗಿ ನಿವೇದಿಸುತ್ತಾ ಚಲನ್ ಮತ್ತು ಬ್ಯಾಂಕ್ ಸ್ಕ್ರೋಲ್ ಪ್ರತಿ ಲಗತ್ತಿಸಿದೆ. **ಕಂಡಿಕೆಯಲ್ಲಿನ ವಸೂಲಾತಿ ಮೊತ್ತ ರೂ.20,300/–ಗಳಲ್ಲಿ ರೂ.2,900/–ಗಳನ್ನು ತೀರುವಳಿಗೊಳಿಸುವಂತೆ ಕೋರಿದೆ.** |
| **52. ಮುಂಜಾಗರೂಕತಾ ಠೇವಣಿ ಶುಲ್ಕವನ್ನು ಕೆಲವು ಮಾತ್ರ ವಿದ್ಯಾರ್ಥಿಗಳಿಗೆ ಹಿಂದಿರುಗಿಸಿರುವುದು (Caution Deposit):-(ಸ್ನಾತಕೋತ್ತರ ಮಹಿಳಾ ವಿದ್ಯಾರ್ಥಿನಿಲಯ ಬ್ಲಾಕ್–1)**<br><br>2017–18ನೇ ಸಾಲಿನಲ್ಲಿ ಸಾಮಾನ್ಯ ವರ್ಗದಡಿ ಪ್ರವೇಶಾತಿ ಪಡೆದಿರುವ ವಿದ್ಯಾರ್ಥಿಗಳ | ಪ್ರಸ್ಥಾವಿತ ಕಂಡಿಕೆಯಲ್ಲಿನ ವಿಷಯಕ್ಕೆ ಸಂಬಂಧಿದಂತೆ 2017–18ನೇ ಸಾಲಿನಲ್ಲಿ ಐಶ್ವರ್ಯ |

| | |
|---|---|
| ಮುಂಜಾಗುರೂಕತಾ ಠೇವಣಿ ಶುಲ್ಕವನ್ನು ಹಿಂದಿರುಗಿಸಿರುವ ಲೆಕ್ಕಪತ್ರಗಳನ್ನು ಪರಿಶೀಲಿಸಲಾಗಿದ್ದು ಭಾಗಶಃ ವಿದ್ಯಾರ್ಥಿಗಳಿಗೆ ಹಿಂದುರುಗಿಸಿರುವುದು ಕಂಡುಬಂದಿರುತ್ತದೆ.<br><br>2017–18ನೇ ಸಾಲಿನಲ್ಲಿ ಸಾಮಾನ್ಯ ವರ್ಗದಡಿ ಪ್ರವೇಶ ಪಡೆದ ವಿದ್ಯಾರ್ಥಿಗಳಿಗೆ Caution Deposit ಮೊಬಲಗನ್ನು ಜಮಾ ಮಾಡುವಾಗ ಪ್ರವರ್ಗ–1ರ ವಿದ್ಯಾರ್ಥಿನಿ ಐಶ್ವರ್ಯ ಬಿ.ಎನ್ ರವರಿಗೆ ರೂ.1,000/–ಗಳನ್ನು ಹೆಚ್ಚುವರಿ ಜಮೆ ಮಾಡಲಾಗಿದೆ. ಆದ್ದರಿಂದ ಸದರಿ ವಿದ್ಯಾರ್ಥಿಯಿಂದ ರೂ.1,000/–ಗಳನ್ನು ವಸೂಲಾತಿ ಮಾಡಿ ಸಂಬಂಧಪಟ್ಟ ಖಾತೆಗೆ ಜಮಾ ಮಾಡಲು ಸೂಚಿಸಲಾಗಿದೆ. ಸಾಮಾನ್ಯ ವರ್ಗದಡಿ ಪ್ರವೇಶಾತಿ ಪಡೆದು ಮುಂಜಾಗುರೂಕತಾ ಠೇವಣಿ ನೀಡಿದ್ದ ವಿದ್ಯಾರ್ಥಿಗಳಿಗೆ ಮಾತ್ರ ವಿತರಿಸಬೇಕಾಗಿರುತ್ತದೆ. ಹಿಂದಿರುಗಿಸಬೇಕಾದ ಮುಂಜಾಗುರೂಕತಾ ಠೇವಣಿಗಳನ್ನು ತುರ್ತಾಗಿ ಹಿಂದಿರುಗಿಸಲು ಸೂಚಿಸಿದೆ. | ಬಿ.ಎನ್ ಪ್ರವರ್ಗ 1ರ ವಿದ್ಯಾರ್ಥಿನಿಗೆ ಹೆಚ್ಚುವರಿಯಾಗಿ ಪಾವತಿಸಲಾಗಿದ್ದ **ಮುಂಜಾಗರೂಕತಾ ಠೇವಣಿ** ರೂ.1,000/–ವನ್ನು ಧನಾದೇಶ ಸಂಖ್ಯೆ:644182, ದಿನಾಂಕ;03.01.2020ರಲ್ಲಿ ವಸೂಲಾತಿಸಿ ಎಸ್.ಬಿ ಖಾತೆ ಸಂಖ್ಯೆ:54007591368ಕ್ಕೆ ದಿನಾಂಕ;03.01.2020 ಮರು ಜಮೆ ಮಾಡಲಾಗಿದೆ. (ಈ ಸಂಬಂಧದ ಚೆಲನ್ ಪ್ರತಿ ಲಗತ್ತಿಸಲಾಗಿದೆ).<br><br>ಆದ ಕಾರಣ ಸೂಚಿತ ವಸೂಲಾತಿ ಕಂಡಿಕೆ ಕೈ ಬಿಡಲು ಕೋರಿದೆ. |
| **53. 2017–18ನೇ ಸಾಲಿನಲ್ಲಿ ಪರಿಶಿಷ್ಟ/ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳಿಗೆ ಕೊಠಡಿ ಬಾಡಿಗೆ ಧನಸಹಾಯದಲ್ಲಿ ಹೆಚ್ಚುವರಿ ಪಾವತಿ ಮಾಡಿರುವ ಬಗ್ಗೆ:– (ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ವಿಶೇಷ ಘಟಕ)**<br>ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ವಿಶೇಷ ಘಟಕ ಮೈಸೂರು ವಿಶ್ವವಿದ್ಯಾನಿಲಯ 2017–18ನೇ ಸಾಲಿನ ಶೈಕ್ಷಣಿಕ ವರ್ಷದಲ್ಲಿ ಪದವಿ ಮತ್ತು ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಕೊಠಡಿ ಬಾಡಿಗೆ ಧನಸಹಾಯ ನೀಡುವ ಕಡತ ಹಾಗೂ ಬಿಲ್ಲುಗಳನ್ನು ಪರಿಶೀಲಿಸಿದಾಗ ಡಾ॥ ಬಿ.ಆರ್. ಅಂಬೇಡ್ಕರ್ ಸ್ನಾತಕೋತ್ತರ ಅಧ್ಯಯನ ವಿಭಾಗ ಚಾಮರಾಜನಗರ ಇಲ್ಲಿ ಪ್ರವೇಶ ಪಡೆದಿರುವ ವಿದ್ಯಾರ್ಥಿಗಳಿಗೆ ಕೊಠಡಿ ಬಾಡಿಗೆಯನ್ನು ವಿಶ್ವವಿದ್ಯಾನಿಲಯ ಪ್ರಕಟಣಾ ಸಂಖ್ಯೆ:ವಿಫ3/35/2017–18ರ ಪ್ರಕಾರ ಕೊಠಡಿ ಬಾಡಿಗೆಗೆ ಪಡೆದ ದಿನಾಂಕದಿಂದ ಲೆಕ್ಕಚಾರ ಹಾಕದೆ, ಕೊಠಡಿ ಬಾಡಿಗೆಯನ್ನು ಅಧಿಕವಾಗಿ ಪಾವತಿಸಿರುವುದು ಕಂಡುಬಂದಿದ್ದು, ವ್ಯತ್ಯಾಸದ ಮೊತ್ತಕ್ಕೆ ಸೂಕ್ತ ವಿವರಣೆಯನ್ನು ನೀಡುವಂತೆ ಲೆಕ್ಕಪರಿಶೋಧನಾ ವಿಚಾರಣಾ ಸಂಖ್ಯೆ;5/13.03.2019 ರಲ್ಲಿ ಕೋರಲಾಗಿತ್ತು. ಆದರೆ ಉತ್ತರ ನೀಡಿರುವುದಿಲ್ಲ. ಅನುಬಂಧ–26ರಲ್ಲಿ ನೀಡಿರುವ ವಿವರದಂತೆ ರೂ.7,916/–ಗಳ ಮೊತ್ತವನ್ನು ವಸೂಲಿಸಿ ಜಿ.ಆರ್.ಎ ಖಾತೆಗೆ ಜಮೆ ಮಾಡಿದ ವಿವರವನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸುವಂತೆ ಸೂಚಿಸಿದೆ. | ಪ್ರಸ್ತಾವಿತ ಕಂಡಿಕೆಯಲ್ಲಿ ಸೂಚಿತವಾಗಿರುವ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಂದ ವಸೂಲಿಸಬೇಕಾಗಿರುವ ಕೊಠಡಿ ಬಾಡಿಗೆ ಮೊತ್ತವನ್ನು ಆಡಿಟ್ ವರದಿಯಲ್ಲಿ ಸೂಚಿತವಾಗಿರುವಂತೆ ಸಂಬಂಧಿಸಿದ ವಿದ್ಯಾರ್ಥಿಗಳಿಂದ ವಸೂಲಾತಿ ಮಾಡಿ ಜಿ,ಆರ್,ಎ ಖಾತೆಗೆ ಜಮಾ ಮಾಡಲಾಗಿದೆ ವಿವರ ಈ ರೀತಿಯಿದೆ<br><br>(see table below)<br><br>ಆಡಿಟ್ ವರದಿಯಲ್ಲಿ ಸೂಚಿತವಾದ ಮೊತ್ತ ಸಂಬಂಧಿಸಿದ ಲೆಕ್ಕಶೀರ್ಷಿಕೆಗೆ ಜಮಾ ಅಗಿರುತ್ತದೆ ಈ ವಿವರಗಳನ್ನು 2018–19ನೇ ಸಾಲಿನ ಲೆಕ್ಕಪರಿಶೋಧನೆ ಹಾಜರುಪಡಿಸಲಾಗಿದೆ ಅದಕಾರಣ ಕಂಡಿಕೆ ಕೈ ಬಿಡಲು ಕೋರಿದೆ.(ಈ ಸಂಬಂಧದ ಚಲನ್ ಪ್ರತಿಗಳನ್ನು ಅಡಕಗೊಳಿಸಿದೆ). |

| ಕ್ರ ಸಂ | ವಿದ್ಯಾರ್ಥಿ ಹೆಸರು | ಜಿ,ಆರ್,ಎ ಖಾತೆಗೆ ಜಮಾ ಚಲನ್ ನಂ ದಿನಾಂಕ | ಜಮಾ ಮಾಡಿರುವ ಮೊತ್ತ |
|---|---|---|---|
| 1 | ಪ್ರವೀಣ್ ಕುಮಾರ್ ಆರ್ | 18045/04.4.2019 | 2022 |
| 2 | ರಾಜೀವಪ್ಪ | 18043/03.4.2019 | 1818 |
| 3 | ಮಾಲಿತಿ ಆರ್ | 18042/27.3.2019 | 44 |
| 4 | ದೀಪು ಎಂ | 18035/27.3.2019 | 44 |
| 5 | ಗಂಗಾಧರ್ ಎಂ | 18047/23.4.2019 | 1994 |
| 6 | ಆಕಾಶ್ ಪಿ | 18048/08.4.2019 | 1994 |
| | | **ಒಟ್ಟು** | **7916** |

**54. 2017–18ನೇ ಪರಿಶಿಷ್ಟ ಜಾತಿ/ಪರಿಶಿಷ್ಟ ಮಂಗಡದ ವಿದ್ಯಾರ್ಥಿಗಳಿಗೆ ಸ್ಕಾಲರ್‌ಶಿಪ್ ಮಂಜೂರಾಗದ ಕಾರಣ ಶುಲ್ಕ ವಸೂಲಿ ಬಾಕಿ ಇರುವ ಬಗ್ಗೆ:– (ಡಾ.ಬಿ.ಆರ್.ಅಂಬೇಡ್ಕರ್ ಸ್ನಾತಕೋತ್ತರ ಅಧ್ಯಯನ ಕೇಂದ್ರ, ಚಾಮರಾಜನಗರ).**

2017–18ನೇ ಸಾಲಿನ ಪರಿಶೀಷ್ಟ ಜಾತಿ/ಪರಿಶಿಷ್ಟ ಪಂಗಡ ಪ್ರವೇಶಾತಿ ಶುಲ್ಕದ ಡಿ.ಸಿ.ಬಿ ವಹಿ ಪರಿಶೀಲಿಸಲಾಗಿ 5 ಜನ ವಿದ್ಯಾರ್ಥಿಗಳಿಗೆ ಸ್ಕಾಲರ್‌ಶಿಪ್ ಮಂಜೂರಾಗಿರುವುದಿಲ್ಲ. ಆದುದರಿಂದ ನಿಗದಿತ ಶುಲ್ಕ ವಸೂಲಿ ಬಾಕಿ ಉಳಿದಿದ್ದು.

| ಕ್ರ. ಸಂ | ವಿದ್ಯಾರ್ಥಿ ಹೆಸರು | ಕೋರ್ಸ್ | ಶುಲ್ಕ ವಸೂಲಿ ಬಾಕಿ ಮೊತ್ತ (ರೂ ಗಳಲ್ಲಿ) |
|---|---|---|---|
| 1 | ಪ್ರಭುಪ್ರಸಾದ್ (ಪರಿಶಿಷ್ಟ ಜಾತಿ) | 1st MSc Maths | 10,800 |
| 2 | ಗೀತಾ (ಪರಿಶಿಷ್ಟ ಜಾತಿ) | 1st MSc Kannada | 10,800 |
| 3 | ಪವಿತ್ರ ಎಸ್ (ಪರಿಶಿಷ್ಟ ಪಂಗಡ) | 1st MSc Computer Science | 37,580 |
| 4 | ಹನುಮಂತ ಎಂ (ಪರಿಶಿಷ್ಟ ಪಂಗಡ) | 1st MSc MSW | 27,080 |
| 5 | ನವೀನ್ ವೈ ಕೆ (ಪರಿಶಿಷ್ಟ ಪಂಗಡ) | 1st MSc Lib Science | 18,580 |
| | | ಒಟ್ಟು ಮೊತ್ತ | 1,04,840 |

ಬಾಕಿ ಮೊಬಲಗು ರೂ.1,04,840/–ಗಳನ್ನು ವಸೂಲಿ ಮಾಡಲು ಸೂಚಿಸಿದೆ. (ವಿಚರಣಾ ಪತ್ರ ಸಂಖ್ಯೆ:6/19–20 ದಿನಾಂಕ; 27.06.2019ರಲ್ಲಿ ನೀಡಲಾಗಿದೆ)

ಪ್ರಸ್ಥಾವಿತ ಕಂಡಿಕೆಯಲ್ಲಿ 2017–18ನೇ ಸಾಲಿನಲ್ಲಿ ಡಾ॥ ಬಿ.ಆರ್ ಅಂಬೇಡ್ಕರ್ ಸ್ನಾತಕೋತ್ತರ ಕೇಂದ್ರ ಚಾಮರಾಜನಗರ ಇಲ್ಲಿನ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಸ್ಕೀಂ 'ಬಿ' ಗೆ ಸೇರಿದ 5 ವಿದ್ಯಾರ್ಥಿಗಳಿಗೆ ಪ್ರವೇಶಾತಿ ಸಂದರ್ಭದಲ್ಲಿ ನೀಡಿರುವ ವಿನಾಯಿತಿ ಪ್ರವೇಶ ಶುಲ್ಕದ ಬಾಬ್ತು ಸರ್ಕಾರದಿಂದ ಸ್ನಾತಕೋತ್ತರ ಕೇಂದ್ರಕ್ಕೆ ಬಿಡುಗಡೆಯಾಗಿರುವುದಿಲ್ಲ.

ಆದ ಕಾರಣ ಆಡಿಟ್ ವರದಿಯಲ್ಲಿ ಸೂಚಿಸಿರುವಂತೆ ಸಂಬಂಧಿಸಿದ ವಿದ್ಯಾರ್ಥಿಗಳಿಂದ ವಸೂಲಿಸಿರುವ ಸೂಚಿತ ಮೊತ್ತದ ವಿವರ ಈ ರೀತಿ ಇದೆ.

| ಕ್ರ ಸಂ | ವಿದ್ಯಾರ್ಥಿ ಹೆಸರು | ಕೋರ್ಸ್ | ವಸೂಲಿತಿಗೆ ಸೂಚಿಸಿರುವ ಮೊತ್ತ | ಷರಾ |
|---|---|---|---|---|
| 1 | ಪ್ರಭುಪ್ರಸಾದ್ (ಪರಿಶಿಷ್ಟ ಜಾತಿ) | 1st MSc Maths | 10,800 | ಈ ಬಾಬ್ತಿನಲ್ಲಿ ರೂ.10575 ಚಲನ್ ನಂ 3037 ದಿನಾಂಕ:30.08.2019ರಲ್ಲಿ ಜಿ.ಆರ್ ಆಕೌಂಟ್‌ಗೆ ಸಂದಾಯವಾಗಿದೆ ಉಳಿಕೆ ಮೊತ್ತ 225 ಅಂಕಪಟ್ಟಿಗಳ ಬಾಬ್ತು ಆಗಿದ್ದು ಅಂಕಪಟ್ಟಿ ವಿತರಣೆ ಸಂದರ್ಭದಲ್ಲಿ ವಸೂಲಿಸಲಾಗಿದೆ |
| 2 | ಗೀತಾ (ಪರಿಶಿಷ್ಟ ಜಾತಿ) | 1st MSc Kannada | 10,800 | ಸದರಿ ವಿದ್ಯಾರ್ಥಿಗಳ ಮೂಲ ದಾಖಲೆಗಳಾದ ಎಸ್‌ಎಸ್‌ಎಲ್‌ಸಿ, ಪಿಯುಸಿ ಮತ್ತು ಪದವಿ ಪ್ರಮಾಣ ಪತ್ರಗಳನ್ನು ವಿದ್ಯಾರ್ಥಿಗಳಿಗೆ ನೀಡದೆ ಸ್ನಾತಕೋತ್ತರ ಕೇಂದ್ರದಲ್ಲಿ ತಡೆಹಿಡಿಯಲಾಗಿದೆ ಸದರಿ ಪ್ರಮಾಣ ಪತ್ರಗಳನ್ನು ವಿದ್ಯಾರ್ಥಿಯಿಂದ ಬರಬೇಕಾದ ಬಾಕಿ ಮೊತ್ತವನ್ನು ವಸೂಲಿಸಿ ನಂತರ ತಡೆಹಿಡಿಯಲಾದ ಪ್ರಮಾಣ ಪತ್ರಗಳನ್ನು ವಿದ್ಯಾರ್ಥಿಗೆ ಹಿಂತಿರುಗಿಸಿ ಮಾಹಿತಿಯನ್ನು ಮುಂದಿನ ಲೆಕ್ಕಪರಿಶೋಧನೆಗೆ ಹಾಜರು ಪಡಿಸಲಾಗುವುದು ಎಂಬ ಅಂಶವನ್ನು ಆದ್ಯ ಗಮನಕ್ಕೆ ತರಲಾಗಿದೆ. |
| 3 | ಪವಿತ್ರ ಎಸ್ (ಪರಿಶಿಷ್ಟ ಪಂಗಡ) | 1st MSc Computer Science | 37,580 | ಸದರಿ ವಿದ್ಯಾರ್ಥಿಗಳ ಮೂಲ ದಾಖಲೆಗಳಾದ ಎಸ್‌ಎಸ್‌ಎಲ್‌ಸಿ, ಪಿಯುಸಿ ಮತ್ತು ಪದವಿ ಪ್ರಮಾಣ ಪತ್ರಗಳನ್ನು ವಿದ್ಯಾರ್ಥಿಗಳಿಗೆ ನೀಡದೆ ಸ್ನಾತಕೋತ್ತರ ಕೇಂದ್ರದಲ್ಲಿ ತಡೆಹಿಡಿಯಲಾಗಿದೆ ಮೇಲ್ಕಂಡ ಸದರಿ ಪ್ರಮಾಣ ಪತ್ರಗಳನ್ನು ವಿದ್ಯಾರ್ಥಿಯಿಂದ ಬರಬೇಕಾದ |

| | | | | |
|---|---|---|---|---|
| | | | | ಬಾಕಿ ಮೊತ್ತವನ್ನು ವಸೂಲಿಸಿ ನಂತರ ತಡೆಹಿಡಿಯಲಾದ ಪ್ರಮಾಣ ಪತ್ರಗಳನ್ನು ವಿದ್ಯಾರ್ಥಿಗೆ ಹಿಂತಿರುಗಿಸಿ ಮಾಹಿತಿಯನ್ನು ಮುಂದಿನ ಲೆಕ್ಕಪರಿಶೋಧನೆಗೆ ಹಾಜರು ಪಡಿಸಲಾಗುವುದು ಎಂಬ ಅಂಶವನ್ನು ಆದ್ಯ ಗಮನಕ್ಕೆ ತರಲಾಗಿದೆ |
| 4 | ಹನುಮಂತರಾಜು ಎಂ (ಪರಿಶಿಷ್ಟ ಪಂಗಡ) | 1st MSc MSW | 27,080 | ಸರ್ಕಾರದಿಂದ ವಿದ್ಯಾರ್ಥಿವೇತನ ಬಿಡುಗಡೆಯಾಗಿ ಸ್ನಾತಕೋತ್ತರ ಕೇಂದ್ರದ ಖಾತೆಗೆ ಹೊಂದಾಣಿಕೆಯಾಗಿರುವುದನ್ನು (ರೂ.27,080) ದೃಢೀಕರಿಸುವ ಲೆಡ್ಜರ್ ಪ್ರತಿ ಲಗತ್ತಿಸಿದೆ. |
| 5 | ನವೀನ್ ವೈ ಕೆ (ಪರಿಶಿಷ್ಟ ಪಂಗಡ) | 1st MSc Lib Science | 18,850 | ಸರ್ಕಾರದಿಂದ ವಿದ್ಯಾರ್ಥಿವೇತನ ಬಿಡುಗಡೆಯಾಗಿ ಸ್ನಾತಕೋತ್ತರ ಕೇಂದ್ರದ ಖಾತೆಗೆ ಹೊಂದಾಣಿಕೆಯಾಗಿರುವುದನ್ನು (ರೂ15,700) ದೃಢೀಕರಿಸುವ ಲೆಡ್ಜರ್ ಪ್ರತಿ ಲಗತ್ತಿಸಿದೆ.<br><br>ಸದರಿ ಪ್ರಕರಣದಲ್ಲಿ ವಿಶ್ವವಿದ್ಯಾನಿಲಯದ fees Structure ಪ್ರಕಾರ ದ್ವಿತೀಯ MSc Lib Science ನಿಗಧಿಯಾಗಿರುವ ಮೊತ್ತ ರೂ.16,445/–ಯಾಗಿದ್ದು ಇದರ ಪ್ರತಿ ಲಗತ್ತಿಸಿದೆ (ವರದಿಯಲ್ಲಿ ಸೂಚಿಸಿರುವಂತೆ ರೂ.18,850 ಆಗಿರುವುದಿಲ್ಲ)<br><br>ಉಳಿಕೆ ಮೊತ್ತವನ್ನು ರೂ.745 ವಿದ್ಯಾರ್ಥಿಯಿಂದ ವಸೂಲಿಸಿ (ಘಟಿಕೋತ್ಸವದ ಬಾಬ್ತು) ವಿದ್ಯಾರ್ಥಿಗೆ ಪ್ರಮಾಣ ಪತ್ರ ನೀಡಲಾಗಿದೆ. |

ಆದ ಕಾರಣ ಸೂಚಿತ ವಸೂಲಾತಿ ಕಂಡಿಕೆ ಕೈ ಬಿಡಲು ಕೋರಿದೆ.

**55. 2017–18ನೇ ಸಾಲಿನಲ್ಲಿ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಂದ ಪ್ರವೇಶಾತಿ ಶುಲ್ಕದ ಉಳಿಕೆ ಮೊತ್ತ ವಸೂಲಾತಿ ಮಾಡಬೇಕಿದ್ದು, ವಸೂಲಿ ಬಾಕಿ ಉಳಿದಿರುವುದು:–(ಡಾ.ಬಿ.ಆರ್.ಅಂಬೇಡ್ಕರ್ ಸ್ನಾತಕೋತ್ತರ ಅಧ್ಯಯನ ಕೇಂದ್ರ, ಚಾಮರಾಜನಗರ).**

2017–18ನೇ ಸಾಲಿನ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ಶೇಕಡ 50ರ ಶುಲ್ಕ ವಿನಾಯಿತಿಯೊಡನೆ ಪ್ರವೇಶಾತಿ ಶುಲ್ಕ ವಸೂಲಿ ಮಾಡಲಾಗಿರುವುದನ್ನು ಗಮನಿಸಲಾಗಿದೆ.

ಪ್ರಸ್ಥಾವಿತ ಕಂಡಿಕೆಯಲ್ಲಿ ಡಾ॥ಬಿ.ಆರ್ ಅಂಬೇಡ್ಕರ್ ಸ್ನಾತಕೋತ್ತರ ಕೇಂದ್ರ ಚಾಮರಾಜನಗರ ಇಲ್ಲಿನ ವಿವಿಧ ಕೋರ್ಸ್‌ಗಳ ಹಿಂದುಳಿದ ವರ್ಗಕ್ಕೆ ಸೇರಿದ

(ವಿಶ್ವವಿದ್ಯಾನಿಲಯದ ಸುತ್ತೋಲೆ ರೀತ್ಯಾ) ಆದರೆ 2017–18ನೇ ಸಾಲಿನಲ್ಲಿ 2ನೇ ವರ್ಷದ ಹಾಗೂ ಮೊದಲನೇ ವರ್ಷದ ವಿದ್ಯಾರ್ಥಿಗಳಿಂದ ಬಾಕಿ ಮೊತ್ತದ ಹಿಂಭರ್ತಿ ಅಥವಾ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ಮಂಜೂರು ಮಾಡಲು ಕೋರಲಾಗಿದ್ದು, ಹಿಂದುಳಿದ ವರ್ಗಗಳ ಇಲಾಖೆ ಚಾಮರಾಜನಗರದಿಂದ ವಿದ್ಯಾರ್ಥಿವೇತನ ಮೊತ್ತವು ಕಡಿಮೆ ಮಂಜೂರಾಗಿರುವುದರಿಂದ ಪ್ರವೇಶಾತಿ ಶುಲ್ಕದ ವ್ಯತ್ಯಾಸದ/ಕಡಿಮೆ ಮಂಜೂರಾದ ಮೊತ್ತವನ್ನು ವಿದ್ಯಾರ್ಥಿಗಳಿಂದಲೇ ವಸೂಲು ಮಾಡಬೇಕಾಗಿರುತ್ತದೆ. ಈ ಸಂಬಂಧ ಬಾಕಿ ವಸೂಲಿ ಮೊತ್ತದ ವಿವರಗಳುಳ್ಳ ತಃಖ್ತೆಯನ್ನು ಅನುಬಂಧ–27ರಲ್ಲಿ ಲಗತ್ತಿಸಲಾಗಿದೆ. ಒಟ್ಟಾರೆ 2017–18ನೇ ಸಾಲಿನ ಪ್ರವೇಶಾತಿ ಶುಲ್ಕದ ವಸೂಲಿ ಬಾಕಿ ಮೊತ್ತ ರೂ.1,97,396/–ಗಳನ್ನು ಸಂಬಂಧಪಟ್ಟವರಿಂದ (ವಿದ್ಯಾರ್ಥಿಗಳಿಂದ) ವಸೂಲಾಗಿದೆ ಸೂಚಿಸಿದೆ.

ವಿದ್ಯಾರ್ಥಿಗಳಿಗೆ ಸರ್ಕಾರದ ಆದೇಶದಂತೆ ನಿಗಧಿತವಾದ ಪ್ರವೇಶಾತಿ ಶುಲ್ಕದಲ್ಲಿ ಶೇ.50 ವಿನಾಯಿತಿ ನೀಡಿ ಪ್ರವೇಶ ಅವಕಾಶ ನೀಡಲಾಗಿದೆ.

ಈ ರೀತಿ ರಿಯಾಯಿತಿ ನೀಡಿ ಪ್ರವೇಶಾತಿ ಅವಕಾಶ ಕಲ್ಪಿಸಿರುವದರಿಂದ ಉಂಟಾಗಿರುವ ಕೊರತೆಯಾದ ಫೀ ಬಾಬ್ತು ಪೂರ್ಣವಾಗಿ ಹಿಂದುಳಿದ ವರ್ಗಗಳ ಇಲಾಖೆಯಿಂದ ಮರುಭರಿಕೆಯಾಗಿರುವುದಿಲ್ಲ.

ಈ ವಿವರವನ್ನು ಲೆಕ್ಕಪರಿಶೋಧನಾ ವರದಿ ಅನುಬಂಧ–27ರಲ್ಲಿ ಉಲ್ಲೇಖಿಸಲಾಗಿದೆ. ಅಡಿಟ್ ವರದಿಯಲ್ಲಿ ವಸೂಲಾತಿಗೆ ಸೂಚಿಸಿರುವ ಮೊತ್ತ ರೂ.1,97,396/–ರ ವಸೂಲಾತಿಗೆ ಸ್ನಾತಕೋತ್ತರ ಕೇಂದ್ರ ವಹಿಸಿರುವ ಕ್ರಮದ ವಿವರ ಈ ರೀತಿ ಇದೆ.

ಈ ಬಾಬ್ತಿನಲ್ಲಿ 12 ವಿದ್ಯಾರ್ಥಿಗಳಿಂದ ಅಡಿಟ್ ವರದಿಯಲ್ಲಿ ಸೂಚಿತವಾಗಿರುವಂತೆ ವಸೂಲಾತಿ ಮಾಡಿರುವ ವಿವರ ಈ ರೀತಿ ಇದೆ

| ಕ್ರ ಸಂ | ವಿದ್ಯಾರ್ಥಿ ಹೆಸರು | ಕೋರ್ಸ್ | ವಸೂಲಿಸಿರುವ ಮೊತ್ತ | ಚಲನ್ ನಂ ದಿನಾಂಕ | ಹೊಂದಾಣಿಕೆ ಯಾಗಿರುವ ಖಾತೆ |
|---|---|---|---|---|---|
| 1 | ರಮ್ಯ ಬಿ | ಪ್ರಥಮ ಎಂ,ಕಾಂ | 4180 | 18053 25.09.2019 | ಜಿ,ಆರ್,ಎ ಖಾತೆ |
| 2 | ಜಯಶ್ರೀ ಎಸ್ | ಪ್ರಥಮ ಎಂ,ಕಾಂ | 4180 | 18061 01.07.2019 | ಜಿ,ಆರ್,ಎ ಖಾತೆ |
| 3 | ಭಾನುಪ್ರಿಯ | ಕಂಪ್ಯೂಟರ್ ಸೈನ್ಸ್ ದ್ವಿತಿಯ ವರ್ಷ | 7884 | 2936 06.08.2019 | ಜಿ,ಆರ್,ಎ ಖಾತೆ |
| 4 | ಕಾವ್ಯ ಎನ್ | ಕಂಪ್ಯೂಟರ್ ಸೈನ್ಸ್ ದ್ವಿತಿಯ ವರ್ಷ | 784 | 2941 13.08.2019 | ಜಿ,ಆರ್,ಎ ಖಾತೆ |
| 5 | ಚೈತ್ರ ಎಸ್ | ಕಂಪ್ಯೂಟರ್ ಸೈನ್ಸ್ ಪ್ರಥಮ ವರ್ಷ | 784 | 2901 25.07.2019 | ಜಿ,ಆರ್,ಎ ಖಾತೆ |
| 6 | ಕಲಾವತಿ ಎಂ | ಎಂ,ಕಾಂ ದ್ವಿತಿಯ ವರ್ಷ | 3580 | 17940 21.08.2019 | ಜಿ,ಆರ್,ಎ ಖಾತೆ |
| 7 | ಸುಪ್ರಿಯಾ | ಲೈಬ್ರರಿ ಸೈನ್ಸ್ ದ್ವಿತಿಯ ವರ್ಷ | 13580 | 2939 08.08.2019 | ಜಿ,ಆರ್,ಎ ಖಾತೆ |
| 8 | ಆನಂದ ಎಂ | ಲೈಬ್ರರಿ ಸೈನ್ಸ್ ದ್ವಿತಿಯ ವರ್ಷ | 4460 | 17615 27.08.2018 | ಜಿ,ಆರ್,ಎ ಖಾತೆ |
| 9 | ಸಚ್ಚಿನ್ ಟಿ,ಬಿ | ಲೈಬ್ರರಿ ಸೈನ್ಸ್ ದ್ವಿತಿಯ ವರ್ಷ | 4460 | 17599 26.06.2018 | ಜಿ,ಆರ್,ಎ ಖಾತೆ |
| 10 | ಪ್ರೀತಿ ಎಸ್ | ಕಂಪ್ಯೂಟರ್ ಸೈನ್ಸ್ ಪ್ರಥಮ ವರ್ಷ | 13580 | 3059 14.10.2019 | ಜಿ,ಆರ್,ಎ ಖಾತೆ |
| 11 | ಕಾರ್ತಿಕ್ ಎಂ ಎನ್ | ಕಂಪ್ಯೂಟರ್ ಸೈನ್ಸ್ ಪ್ರಥಮ ವರ್ಷ | 13580 | 7559 14.11.2020 | ಜಿ,ಆರ್,ಎ ಖಾತೆ |
| 12 | ಸಂಧ್ಯಾ ಎಸ್ | ಕಂಪ್ಯೂಟರ್ ಸೈನ್ಸ್ ಪ್ರಥಮ ವರ್ಷ | 13580 | 3051 03.09.2019 | ಜಿ,ಆರ್,ಎ ಖಾತೆ |

| | | | | | |
|---|---|---|---|---|---|
| | | ಒಟ್ಟು | 84632 | | |

2. ಆಡಿಟ್ ವರದಿಯ ಅನುಬಂಧ–27 ರಲ್ಲಿ ಸೂಚಿತವಾಗಿರುವಂತೆ ಉಳಿಕೆ ವಿದ್ಯಾರ್ಥಿಗಳ ಪ್ರವೇಶಾತಿ ಶುಲ್ಕದ ವಸೂಲಾತಿಗೆ ಸಂಬಂಧಿಸಿದಂತೆ ಸದರಿ ವಿದ್ಯಾರ್ಥಿಗಳ ಎಸ್‌ಎಸ್‌ಎಲ್‌ಸಿ,ಪಿಯುಸಿ ಮತ್ತು ಪದವಿ ಪ್ರಮಾಣ ಪತ್ರಗಳ ಮೂಲ ಪ್ರಮಾಣ ಪತ್ರಗಳನ್ನು ಸ್ನಾತಕೋತ್ತರ ಕೇಂದ್ರದ ಭದ್ರತೆಯಲ್ಲಿ ಇರಿಸಲಾಗಿದೆ.

ಇವುಗಳನ್ನು ಪಡೆಯಲು ವಿದ್ಯಾರ್ಥಿಗಳು ಬಂದ ಸಂಧರ್ಭದಲ್ಲಿ ಅವರುಗಳಿಂದ ಆಡಿಟ್ ವರದಿಯಲ್ಲಿ ಸೂಚಿತವಾದ ಮೊತ್ತವನ್ನು ವಸೂಲಿಸಿದ ನಂತರವೇ ಮೂಲ ಪ್ರಮಾಣ ಪತ್ರಗಳನ್ನು ವಿದ್ಯಾರ್ಥಿಗಳಿಗೆ ನೀಡಲಾಗುವುದು ಎಂದು ನಿರ್ದೇಶಕರು ಬಿ.ಆರ್ ಅಂಬೇಡ್ಕರ್ ಸ್ನಾತಕೋತ್ತರ ಕೇಂದ್ರ ಚಾಮರಾಜನಗರ ಅವರು ದೃಢೀಕರಿಸಿರುತ್ತಾರೆ. (ಈ ಪತ್ರದ ಪ್ರತಿ ಅಡಕಗೊಳಿಸಿದೆ.) ಈ ಸಂಬಂಧದ ವಿವರಗಳನ್ನು ಮುಂದಿನ ಲೆಕ್ಕ ಪರಿಶೋಧನೆಗೆ ಹಾಜರುಪಡಿಸಲು ಕ್ರಮವಹಿಸಲಾಗುವುದು.

**ವಿದ್ಯಾರ್ಥಿಗಳಿಂದ ಸ್ನಾತಕೋತ್ತರ ಕೇಂದ್ರಕ್ಕೆ ಬಾಕಿಯಿರುವ ಮೊತ್ತದ ವಿವರ**

| ಕ್ರ ಸಂ | ವಿದ್ಯಾರ್ಥಿ ಹೆಸರು | ಕೋರ್ಸ್ ವಿವರ | ವಸೂಲಿಗೆ ಸೂಚಿತವಾಗಿರುವ ಮೊತ್ತ |
|---|---|---|---|
| 1 | ಭಾರ್ಗವಿ ವಿ.ಎಂ | ರಾಜ್ಯಶಾಸ್ತ್ರ ಪ್ರಥಮ ವರ್ಷ | 5580 |
| 2 | ಬಸವಣ್ಣ ಎಂ | ಲೈಬ್ರರಿ ಸೈನ್ಸ್ ದ್ವಿತಿಯ ವರ್ಷ | 4460 |
| 3 | ನಾಗೇಶ್ ಜೆ | ಎಂ,ಕಾಂ ಪ್ರಥಮ ವರ್ಷ | 4180 |
| 4 | ಶಾಂತಲ ಪಿ.ಎಲ್ | ಕಂಪ್ಯೂಟರ್ ಸೈನ್ಸ್ ಪ್ರಥಮ ವರ್ಷ | 13580 |
| 5 | ಶೃತಿ ಬಿ.ಟಿ | ಕಂಪ್ಯೂಟರ್ ಸೈನ್ಸ್ ದ್ವಿತಿಯ ವರ್ಷ | 7884 |
| 6 | ಶಿಲ್ಪ ಎಸ್.ಜಿ | ಕಂಪ್ಯೂಟರ್ ಸೈನ್ಸ್ ದ್ವಿತಿಯ ವರ್ಷ | 11380 |
| 7 | ಪವಿತ್ರ ಎಸ್ | ಕಂಪ್ಯೂಟರ್ ಸೈನ್ಸ್ ಪ್ರಥಮ ವರ್ಷ | 13580 |
| 8 | ಮಮತ ಎಸ್ | ಕಂಪ್ಯೂಟರ್ ಸೈನ್ಸ್ ದ್ವಿತಿಯ ವರ್ಷ | 11380 |
| 9 | ನಿಶ್ಚಿತ ಪಿ | ಕಂಪ್ಯೂಟರ್ ಸೈನ್ಸ್ ಪ್ರಥಮ ವರ್ಷ | 13580 |
| 10 | ಐಶ್ವರ್ಯ ಎ.ಎನ್ | ಕಂಪ್ಯೂಟರ್ ಸೈನ್ಸ್ ಪ್ರಥಮ ವರ್ಷ | 13580 |
| 11 | ನಂದಿನಿ ಎಸ್ | ಕಂಪ್ಯೂಟರ್ ಸೈನ್ಸ್ ಪ್ರಥಮ ವರ್ಷ | 13580 |
| | | ಒಟ್ಟು | 112764 |

| | |
|---|---|
| **56. 2017–18ನೇ ಸಾಲಿನ ಮುದ್ರಣಾಲಯ ಮತ್ತು ಸಾಮಾಗ್ರಿ ವಿಭಾಗದ ಬೇಡಿಕೆ ಮತ್ತು ವಸೂಲಾತಿ ವಿವರ:– (ಮುದ್ರಣಾಲಯ ಮತ್ತು ಲೇಖನ ಸಾಮಾಗ್ರಿ ವಿಭಾಗ)**<br>2017–18ನೇ ಸಾಲಿನಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಮುದ್ರಣಾಲಯ ಮತ್ತು ಲೇಖನ ಸಾಮಾಗ್ರಿ ವಿಭಾಗದ ಬೇಡಿಕೆ ವಸೂಲಾತಿ ವಿವರಗಳನ್ನು ಅನುಬಂಧ–28ರಲ್ಲಿ ನೀಡಲಾಗಿದೆ. ವಿಭಾಗದಲ್ಲಿ ಒಟ್ಟು ಬೇಡಿಕೆ ರೂ.79,80,717/–ಆಗಿದ್ದು ವಸೂಲಾತಿಯ ರೂ.73,15,536/– ಆಗಿರುತ್ತದೆ. ಉಳಿದ ರೂ.6,65,181/–ಗಳು ಬಾಕಿ ಇರುತ್ತದೆ. ಸದರಿ ಮೊತ್ತವನ್ನು ಶೀಘ್ರವಾಗಿ ವಸೂಲಿ ಮಾಡಲು ಸೂಚಿಸಲಾಗಿದೆ. | 2017–18ನೇ ಸಾಲಿನಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಮುದ್ರಣಾಲಯ ಮತ್ತು ಲೇಖನ ಸಾಮಾಗ್ರಿ ವಿಭಾಗದಲ್ಲಿ ಬೇಡಿಕೆ ಮತ್ತು ವಸೂಲಾತಿಗೆ ಸಂಬಂಧಿಸಿದಂತೆ ಅನುಬಂಧ–28ರಲ್ಲಿ ರೂ.6,65,181/–ಗಳು ಬಾಕಿ ಉಳಿದಿದ್ದು ಸದರಿ ಮೊತ್ತವನ್ನು ಶೀಘ್ರವಾಗಿ ವಸೂಲಾತಿ ಮಾಡಲು ಪ್ರಸ್ತಾಪಿಸಲಾಗಿರುತ್ತದೆ.<br><br>ಸದರಿ ವಸೂಲಾತಿಗೆ ಸಂಬಂಧಿಸಿದಂತೆ ವಿಶ್ವವಿದ್ಯಾನಿಲಯದ ವಿವಿಧ ವಿಭಾಗಗಳಿಗೆ ಪತ್ರ ಹಾಗೂ ಜ್ಞಾಪನ ಪತ್ರಗಳನ್ನು ಬರೆಯಲಾಗಿದೆ ಅಲ್ಲದೆ ಮಾನ್ಯ ಕುಲಸಚಿವ ರವರ ಗಮನಕ್ಕೆ ಪತ್ರದ ಮೂಲಕ ತರಲಾಗಿದ್ದು ನಂತರದಲ್ಲಿ ಅಧ್ಯಕ್ಷರು ರಸಾಯನಶಾಸ್ತ್ರ ಅಧ್ಯಯನ ವಿಭಾಗ ಮಾನಸಗಂಗೋತ್ರಿ ಮತ್ತು ಹಣಕಾಸು ಅಧಿಕಾರಿಗಳು ಮೈಸೂರು ವಿಶ್ವವಿದ್ಯಾನಿಲಯದವರಿಂದ **ಕ್ರಮವಾಗಿರೂ.17,501/– ಮತ್ತು ರೂ.60,016/–ಗಳು** ಸೇರಿದಂತೆ ಒಟ್ಟು ಮೊತ್ತ **ರೂ.77,517/–ಗಳು** ವಸೂಲಾತಿಯಾಗಿರುತ್ತದೆ (ಪ್ರತಿ ಲಗತ್ತಿಸಿದೆ) ಉಳಿಕೆ ಮೊತ್ತ **ರೂ.5,87,664/–ಗಳನ್ನು** ಶೀಘ್ರವಾಗಿ ವಸೂಲಾತಿ ಮಾಡಿ ವರದಿ ಸಲ್ಲಿಸುವುದಾಗಿ ನಿವೇದಿಸುತ್ತಾ **ಕಂಡಿಕೆಯ ವಸೂಲಾತಿ ಮೊತ್ತದಲ್ಲಿ ರೂ.77,517/–ಗಳನ್ನು ತೀರುವಳಿ ಮಾಡಿಕೊಡುವಂತೆ ಕೋರಲಾಗಿದೆ.** |
| **57. 2017–18ನೇ ಶೈಕ್ಷಣಿಕ ಸಲಿಗೆ ಮಾನಸಗಂಗೋತ್ರಿ ಶಿಕ್ಷಣ ಸಂಸ್ಥೆಯಲ್ಲಿ ವಿವಿಧ ತರಗತಿಗಳಿಗೆ ಪ್ರವೇಶಾತಿ ಪಡೆದ ವಿದ್ಯಾರ್ಥಿಗಳಿಂದ ಸ್ವೀಕರಿಸಬೇಕಾದ ಪ್ರವೇಶಾತಿ ಶುಲ್ಕ, ಸ್ವೀಕರಿಸಿದ ಪ್ರವೇಶಾತಿ ಶುಲ್ಕ ಹಾಗೂ ಬಾಕಿ ಇರುವ ಪ್ರವೇಶಾತಿ ಶುಲ್ಕಗಳ ವಿವರಗಳು:–(ಮಾನಸಗೊಂಗೋತ್ರಿ ಶಿಕ್ಷಣ ಸಂಸ್ಥೆ)**<br><br>2017–18ನೇ ಶ್ಯಕ್ಷಣಿಕ ಸಾಲಿಗೆ ವಿವಿಧ ತರಗತಿಗಳಿಗೆ ಪ್ರವೇಶಾತಿ ಶುಲ್ಕವನ್ನು ಸ್ವೀಕರಿಸಿರುವುದು ಕಂಡುಬಂದಿರುತ್ತದೆ. 2017–18ನೇ ಸಾಲಿಗೆ ಒಟ್ಟು 368 ವಿದ್ಯಾರ್ಥಿಗಳು ಪ್ರವೇಶಾತಿ ಪಡೆದಿದ್ದು, ಪ್ರತಿ ತರಗತಿಯಲ್ಲಿ ಪ್ರವೇಶಾತಿ ಪಡೆದ ವರ್ಗವಾರು ವಿದ್ಯಾರ್ಥಿಗಳ ವಿವರಗಳನ್ನು ವಿವರವನ್ನು **ಅನುಬಂಧ–29ರಲ್ಲಿ** ವಿವರಿಸಲಾಗಿದೆ.<br><br>2017–18ನೇ ಸಾಲಿನಲ್ಲಿ ರೂ.1,63,200/–ಗಳನ್ನು ಸ್ವೀಕರಿಸಬೇಕಾಗಿದ್ದು ರೂ.1,42,950/–ಗಳನ್ನು ಸ್ವೀಕರಿಸಲಾಗಿದ್ದು ರೂ.20,600/– ವಸುಲಾಗದೇ ಬಾಕಿ ಉಳಿದಿರುತ್ತದೆ. 2017–18ನೇ ಶೈಕ್ಷಣಿಕ ವರ್ಷ ಪೂರ್ಣಗೊಂಡಿದ್ದರೂ ಸಹ ಇದುವರೆಗೂ ಬಾಕಿ ಉಳಿದಿರುವ ಪ್ರವೇಶಾತಿ ಶುಲ್ಕಗಳ ವಸೂಲಾತಿಗೆ ಸಂಬಂಧಪಟ್ಟಂತೆ ಯಾವೂದೇ ಕ್ರಮಗಳನ್ನು ಕೈಗೊಳ್ಳದಿರುವುದು ಲೆಕ್ಕ ಪರಿಶೋಧನಾ ಅವಧಿಯಲ್ಲಿ ಕಂಡು ಬಂದಿರುತ್ತದೆ. ಕಡಿಮೆ ಪ್ರವೇಶಾತಿ ಶುಲ್ಕ ವಸೂಲಿಸಿರುವ ಸಂಬಂಧ | ಮಾನಸಗಂಗೋತ್ರಿ ಶಿಕ್ಷಣ ಸಂಸ್ಥೆಯು ಹಿರಿಯ ಪ್ರಾಥಮಿಕ ಶಾಲೆ ಹಾಗೂ ಪ್ರೌಢಶಾಲೆಗಳೆಂಬ ಎರಡು ಅನುದಾನಿತ ಶಾಲೆಗಳನ್ನು ಕರ್ನಾಟಕ ಸರ್ಕಾರದ ಶಿಕ್ಷಣ ಇಲಾಖೆಯ ನೇರ ಅನುದಾನದಿಂದ ನಡೆಸಲಾಗುತ್ತಿದೆ. ಅನುದಾನ ಸಂಹಿತೆ ನಿಯಮದ ಪ್ರಕಾರ ಸರ್ಕಾರಿ ಶಾಲೆಗಳು ಮತ್ತು ಅನುದಾನಿತ ಶಾಲೆಗಳು ಸರ್ಕಾರ ನಿಗದಿಪಡಿಸುವ ಪ್ರವೇಶಾತಿ ಶುಲ್ಕವನ್ನಷ್ಟೇ ಪಡೆದು ಶಾಲೆಯನ್ನು ನಡೆಸಬೇಕು. ಅದರ ಪ್ರಕಾರ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗ ಮತ್ತು ಇತರೆ ಹಿಂದುಳಿದ ವರ್ಗಗಳ ಹಾಗೂ ಸಾಮಾನ್ಯ ವರ್ಗದ ಮಕ್ಕಳಿಗೆ ಕರ್ನಾಟಕ ಸರ್ಕಾರದ ಶಿಕ್ಷಣ ಇಲಾಖೆಯು ನಿಗದಿಪಡಿಸಿರುವ ಪ್ರವೇಶಾತಿ ಶುಲ್ಕವನ್ನು 2017–18ನೇ ಸಾಲಿನ ಎಲ್ಲಾ ಮಕ್ಕಳಿಂದ ವಸೂಲಾತಿ ಮಾಡಿ ಮುಖ್ಯೋಪಾಧ್ಯಾಯರುಗಳ ಖಾತೆಗೆ ಜಮಾ ಮಾಡಿಕೊಂಡು ಆನಂತರ ಸರ್ಕಾರದ ಸಂಬಂಧಪಟ್ಟ ಶೀರ್ಷಿಕೆಗಳಿಗೆ ಈಗಾಗಲೇ ಜಮಾ ಮಾಡಲಾಗಿದೆ. |

| | |
|---|---|
| ಸ್ಪಷ್ಟೀಕರಣವನ್ನು ನೀಡುವಂತೆ ವಿಚಾರಣಾಪತ್ರ ಸಂಖ್ಯೆ:02/2019–20 ದಿನಾಂಕ 04/04/2019ರಲ್ಲಿ ನೀಡಲಾಗಿ ಯಾವುದೇ ಪೂರಕ ಲೆಕ್ಕಪತ್ರಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸಿರುವುದಿಲ್ಲ ಬಾಕಿ ವಸೂಲಿಸಬೇಕಾದ ಪ್ರವೇಶಾತಿ ಶುಲ್ಕ **ರೂ.20,600/–ನ್ನು** ಸಂಬಂಧಪಟ್ಟ ವಿದ್ಯಾರ್ಥಿಗಳಿಂದ ವಸೂಲಿಸಿ, ಜಮಾ ಮಾಡಿರುವ ಚಲನ್‌ಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸಲು ಸೂಚಿಸಿದೆ. | ಈ ಶಿಕ್ಷಣ ಸಂಸ್ಥೆಯು ಹೆಚ್ಚುವರಿಯಾಗಿ ಪ್ರತಿ ವರ್ಷವೂ ಶಾಲಾಭಿವೃದ್ಧಿ ಶುಲ್ಕ ಎಂದು ಪ್ರತಿ ಮಗುವಿನಿಂದ ಪಡೆಯುತ್ತಿದೆ, ಬಾಕಿ ಇರುವ ಶಾಲಾಭಿವೃದ್ಧಿ ಶುಲ್ಕವನ್ನು ಮಗುವಿನ ಪೋಷಕರು ನಾವುಗಳು ಎಷ್ಟೇ ಬಲವಂತ ಮಾಡಿದರೂ ಪಾವತಿ ಮಾಡುವುದಿಲ್ಲ, ನಾವುಗಳು ಕಠಿಣ ಕ್ರಮ ಕೈಗೊಂಡು ಶಾಲಾಭಿವೃದ್ಧಿ ಶುಲ್ಕವನ್ನು ವಸೂಲಿ ಮಾಡಲು ಸಾಧ್ಯವಾಗದ ಕಾರಣವೆಂದರೆ ಪ್ರಾಥಮಿಕ ಹಾಗೂ ಪ್ರೌಢಶಾಲಾ ಶಿಕ್ಷಣವು ಮಕ್ಕಳಿಗೆ **"ಉಚಿತ ಮತ್ತು ಕಡ್ಡಾಯ"** ಆಗಿರುವುದರಿಂದ ಹಾಗೂ ಕಂಡಿಕೆಯ **ಅನುಬಂಧ–29ರಲ್ಲಿ** ವಿವರಿಸಿರುವ ಎಲ್.ಕೆ.ಜಿ ಯಿಂದ 10ನೇ ತರಗತಿಯ ವರೆಗಿನ ವಿದ್ಯಾರ್ಥಿಗಳಿಂದ ಬರಬೇಕಾದ ಬಾಕಿ ಶುಲ್ಕ **ಒಟ್ಟು 20,600/–** ರೂಪಾಯಿಗಳು ನಮ್ಮ ಸಂಸ್ಥೆಗೆ ಬರಬೇಕಾದ ಬಾಕಿ ಹಣ ಎಂದು ವಸೂಲಿ ಮಾಡಲು ಸಾಧ್ಯವಾಗುವುದಿಲ್ಲವಾಗಿ. ಅಲ್ಲದೇ ಇದು ಪ್ರವೇಶಾತಿ ಶುಲ್ಕವಲ್ಲ ಶಾಲಾಭಿವೃದ್ಧಿ ಶುಲ್ಕವಾಗಿರುತ್ತದೆ ಎಂಬ ಅಂಶಗಳನ್ನು ಸಂಸ್ಥೆಯ ಕಾರ್ಯದರ್ಶಿ ರವರು ತಮ್ಮ ಅವಗಾಹನೆಗೆ ಸಲ್ಲಿಸುತ್ತಾ **ಕಂಡಿಕೆಯಲ್ಲಿ ಪ್ರಸ್ತಾಪಿಸಿರುವ ವಸೂಲಾತಿ ಮೊತ್ತ ರೂ.20,600/–ಗಳನ್ನು ತೀರುವಳಿ ಮಾಡಿಕೊಡುವಂತೆ ಕೋರಿರುತ್ತಾರೆ.** |
| **58. ನಿವೃತ್ತ ಖಾಯಂ ನೌಕರರಿಗೆ ಪಿಂಚಣಿ/ಗೌರವಧನ ಪಾವತಿಸಿರುವುದು:–(ಮಾನಸಗೊಂಗೋತ್ರಿ ಶಿಕ್ಷಣ ಸಂಸ್ಥೆ)**<br><br>2017–18ನೇ ಸಾಲಿನಲ್ಲಿ ನಿವೃತ್ತ ಖಾಯೋ ನೌಕರರುಗಳಿಗೆ ಗೌರವಧನ ರೂಪದಲ್ಲಿ ಮಾರ್ಚ್–2017ನೇ ಮಾಹೆಯಿಂದ ಜುಲೈ2017 ರವರೆಗೆ ಒಟ್ಟು 03 ಜನ ನಿವೃತ್ತರಿಗೆ ಒಟ್ಟು ರೂ.26,000/–ಗಳನ್ನು ವಿಶ್ವವಿದ್ಯಾನಿಲಯದ ಆದೇಶವಿಲ್ಲದೆ ಪಾವತಿಸಲಾಗಿದೆ. ಈ ರೀತಿ ನಿಯಮದಲ್ಲಿ ಅವಕಾಶವಿಲ್ಲದೆ ಪಾವತಿಸಿರುವ **ಒಟ್ಟು ಮೊತ್ತ ರೂ.26,000/–ಗಳನ್ನು** ಸಂಬಂಧಸಿದ ನೌಕರರಿಂದ ವಸೂಲಿಸಲು ಸೂಚಿಸಿದೆ. ವಿವರಗಳು ಕೆಳಕಂಡಂತಿದೆ.<br><br>**2017–18ನೇ ಸಾಲಿನ ನಿವೃತ್ತ ವೇತನ ಪಾವತಿ ವಿವರ ತಃಖ್ತೆ**<br>ಕ್ರ.ಸಂ \| ಮಾಹೆಯಾನ \| ಹೆಸರು \| ತಿಂಗಳು \| ಮೊತ್ತ<br>1 \| 1600/– \| ಶ್ರಿಮತಿ ಲೀಲಮ್ಮ (3/17 to 7/17) \| 5 ತಿಂಗಳು \| 8000/–<br>2 \| 2000/– \| ಗೌರಮ್ಮ (3/17 to 7/17) \| 5 ತಿಂಗಳು \| 10,000/–<br>3 \| 1600/– \| ಆರ್.ನಂಜಮ್ಮ \| 5 ತಿಂಗಳು \| 8000/–<br>**ಒಟ್ಟು ಮೊತ್ತ** \| **26,000/–** | ಕಂಡಿಕೆಯಲ್ಲಿ ಪ್ರಸ್ತಾಪಿಸಿರುವ 03 ಜನ ನೌಕರರುಗಳು ಅನುದಾನ ರಹಿತ ಖಾಯಂ ನೌಕರರುಗಳು ಅಲ್ಲದೇ ಸದರಿ ಸಂಸ್ಥೆಯು ಅನುದಾನ ರಹಿತ ಸಂಸ್ಥೆಯಾದುದ್ದರಿಂದ **ದಿನಾಂಕ:05.11.2014** ರಂದು ಕಾರ್ಫಡ್ ಭವನದ ಶಿಕ್ಷಣ ಮಂಡಳಿ ಸಭಾಂಗಣದಲ್ಲಿ ಮಾನ್ಯ ಕುಲಪತಿಯವರ ಅಧ್ಯಕ್ಷತೆಯಲ್ಲಿ ನಡೆದ ಆಡಳಿತ ಮಂಡಳಿಯ ಸಭಾ ನಡಾವಳಿ **ಕ್ರಮಸಂಖ್ಯೆ:–07ರಲ್ಲಿ** ಸದರಿ ನೌಕರರಿಗೆ ವಿಶ್ರಾಂತಿ ವೇತನ ನೀಡಲು ಬರುವುದಿಲ್ಲ ಆದರೆ ಮಾನವೀಯತೆ ದೃಷ್ಠಿಯಿಂದ **ವಿಶ್ರಾಂತಿ ವೇತನ** ಎನ್ನುವ ಪದ ಬಳಕೆಯ ಬದಲು **ಗೌರವ ಧನ** ಎಂಬ ಪದ ಬಳಕೆಯಲ್ಲಿ ಭೋಧಕರಿಗೆ ರೂ.2,000/–ಗಳು ಮತ್ತು ಭೋಧಕೇತರರಿಗೆ ರೂ.1,600/–ಗಳು ಗೌರವಧನ ಪಾವತಿಸಲು ತಿರ್ಮಾನಿಸಿದರಿಂದ ಸದರಿ ನಿವೃತ್ತ ನೌಕರರುಗಳಿಗೆ ಈ ಅವಧಿಯಲ್ಲಿ ಗೌರವಧನ ಪಾವತಿಸಿದ್ದು ನಂತರದಲ್ಲಿ ಸ್ಥಗಿತಗೊಳಿಸಲಾಗಿದೆ. ಎಂಬ ಅಂಶವನ್ನು ತಮ್ಮ ಅವಗಾಹನೆಗೆ ತಂದು ಸಭಾ ನಿರ್ಣಯದ ಪ್ರತಿಯನ್ನು ಲಗತ್ತಿಸಿ ಸಲ್ಲಿಸುತ್ತಾ **ಕಂಡಿಕೆಯಲ್ಲಿನ ವಸೂಲಾತಿ ಮೊತ್ತ ರೂ.26,000/–ಗಳನ್ನು ತೀರುವಳಿಗೊಳಿಸುವಂತೆ ಕೋರಿದೆ.** |

| | |
|---|---|
| **59. ವಾಹನಗಳ ಚಲಿಸುವಿಕೆ ಸರಾಸರಿಯನ್ನು ಪ್ರತಿ ಒಂಧು ಲಿಟರ್ ಪೆಟ್ರೋಲ್‌ಗೆ 7 ಕಿ.ಮೀ ಮೈಲೇಜ್‌ನಂತೆ ವಾಹನ ಚಾಲಕರ ಮನವಿಯನ್ನು ಪರಿಗಣಿಸಿ ನಿಗದಿಪಡಿಸಿರುವುದು:-(ಆಡಳಿತ ವಿಭಾಗ)**<br><br>2017-18ನೇ ಸಾಲಿನ ಲೆಕ್ಕ ಪರಿಶೋಧನೆ ಕೈಗೊಂಡ ಅವಧಿಯಲ್ಲಿ ಹಾಜರುಪಡಿಸಿದ ವಾಹನಗಳ ಕಡತಗಳನ್ನು ಪರಿಶೀಲಿಸಿದಾಗ (Toyota Camry KA-09 MG-2016 ರ ಕಡತ/ದಾಖಲೆಗಳು ಮತ್ತು ಲಾಗ್ ಪುಸ್ತಕ) ಸದರಿ ವಾಹನ ಚಾಲಕ ಶ್ರೀ ಎ ಕಪಿಲನ್ ರವರು ಲೀಟರ್ ಪೆಟ್ರೋಲ್‌ಗೆ 07 ಕಿ.ಮೀ ರಂತೆ ನಿಗಧಿಪಡಿಸುವಂತೆ ಕೋರಿದ್ದು, ಅದಕ್ಕೆ ವಿಶ್ವವಿದ್ಯಾನಿಲಯದಿಂದ ಒಪ್ಪಿಗೆ ಪಡೆದು ಲಾಗ್ ಪುಸ್ತಕದಲ್ಲಿ ಪ್ರತಿ ಸರಿಯೂ ಒಂದು ಲೀಟರ್ ಪೆಟ್ರೋಲ್ಗ್ 07 ಕಿ.ಮೀ ನಿಗದಿಪಡಿಸಲಾಗಿರುತ್ತದೆ. ಇದಕ್ಕೆ ವಿವರನೆ/ಸ್ಪಷ್ಟಿಕರಣ ನೀಡುವಂತೆ ವಿಚಾರಣೆ ಪತ್ರ ಸಂಖ್ಯೆ:02 ದಿನಾಂಕ:24.04.2019 ರಲ್ಲಿ ಕೋರಲಾಗಿತ್ತು. ಆದರೆ ನೀಡಿರುವ ಉತ್ತರವು ಸರ್ಮಪವಾಗಿರುವುದಿಲ್ಲ.<br><br>Toyota ಸಂಸ್ಥೆಯವರು ನೀಡಿರುವ Economy Consumer Information ಪ್ರಕಾರ ಒಂಧು ಲೇಟರ್ ಪೆಟ್ರೋಲ್‌ಗೆ 12.98 ಕಿ.ಮೀ ಕ್ರಮಿಸುತ್ತದೆ ಎಂದು ತಿಳಿಸಿರುತ್ತಾರೆ. ಆದರೆ ಇಲ್ಲಿ ವಾಹನ ಚಾಲಕರು ಹೊಸ ಕಾರ್‌ಗೆ 7 ಕಿ.ಮೀ/ಲೀ ಎಂದು ಹೇಳಿರುವುದಕ್ಕೆ ಯಾವ ಆಧಾರದ ಮೇಲೆ ನಿಗದಿಪಡಿಸಿದ್ದಾರೆ ಎಂಬುದಕ್ಕೆ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ ಹಾಗೂ ಇದ್ದಕ್ಕೆ ವಿಶ್ವವಿದ್ಯಾನಿಲಯ ಒಪ್ಪಿಗೆ ನೀಡಿರುವುದು ಸರಿಯಾಗಿರುವುದಿಲ್ಲ. ಇದರಿಂದ ಇಂಧನ ಬಳಕೆಯು ಹಾಗೂ ವಿಶ್ವವದ್ಯಾನಿಲಯದ ಹಣವು ದುರ್ಬಳಕೆಯಾಗಿರುವ ಸಂಭವವಿರುತ್ತದೆ, ಇದರಿಂದಾಗಿ ವಿಶ್ವವಿದ್ಯಾನಿಲಯಕ್ಕೆ ನಷ್ಟವಾಗುತ್ತಿದೆ. ಇದಕ್ಕೆ ಸಂಬಂಧಿಸಿದಂತೆ ಆರ್.ಟಿ.ಓ ರವರಿಂದ ತಪಾಸಣೆ ನಡೆಸಿ ವಾಹನವು ಪ್ರತಿ ಲೀಟರ್ ಇಂಧನಕ್ಕೆ ಎಷ್ಟು ದೂರ ಕ್ರಮಿಸುತ್ತದೆ ಎಂಬುದನ್ನು ದೃಢಪಡಿಸಿಕೊಳ್ಳಲು ವರದಿಯಲ್ಲಿ ಸೂಚಿನೆ ನೀಡಿದೆ. ಹಾಗೂ ಈ ಬಗ್ಗೆ 2017-18ರಲ್ಲಿ ಈ ವಾಹನಕ್ಕೆ ತುಂಬಿಸಿರುವ ಇಂಧನ ವೆಚ್ಚ ರೂ.45,452/-ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ. | ಕಂಡಿಕೆಯಲ್ಲಿ ಪ್ರಸ್ಥಾಪಿಸಿರುವ **ವಾಹನ ಸಂಖ್ಯೆ:ಕೆ.ಎ.09 ಎಂ.ಜಿ.2016 Toyota Camry ವಾಹನವು 2013ರ ಮಾದರಿಯಾಗಿದ್ದು** ಈ ವಾಹನದ Fuel Consumtion Economy Meter Reading ನಲ್ಲಿ ಒಂದು ಲೀಟರ್ ಪೆಟ್ರೋಲ್‌ಗೆ 7.01 ಕಿ.ಮೀ ತೋರಿಸುತ್ತಿರುವ ಹಿನ್ನಲೆಯಲ್ಲಿ ವಾಹನ ಚಾಲಕರು ಕೋರಿರುವಂತೆ ಒಂದು ಲೀಟರ್ ಪೆಟ್ರೋಲ್‌ಗೆ 07 ಕಿ.ಮೀ ರಂತೆ ನಿಗದಿಪಡಿಸಿರುವುದಾಗಿ ನಿವೇದಿಸಿದೆ.<br><br>ಆಕ್ಷೇಪಣೆಯಲ್ಲಿ ತಿಳಿಸಿರುವ Toyota Camry Economy Consumtion Information-2019ರ ಮಾದರಿಯ ಹೈಬ್ರಿಡ್ ವಾಹನದಾಗಿರುತ್ತದೆ. ಇದರ ಉಪಯುಕ್ತತೆಯಲ್ಲಿ ಇಂಧನ ಮತ್ತು ಬ್ಯಾಟರಿ ಚಾಲಿತ ಬಳಕೆಯಾಗಿರುವುದರಿಂದ ಹೆಚ್ಚಿನ ಮೈಲೇಜ್ ನೀಡಲಾಗುತ್ತಿದೆ (ಒಂದು ಲೀಟರ್ ಪೆಟ್ರೋಲ್‌ಗೆ 12.98 ಕಿ.ಮೀ) ಎಂಬ ಅಂಶವನ್ನು ತಮ್ಮ ಅವಗಾಹನೆಗೆ ತರುತ್ತಾ. ಸದರಿ ವಾಹನದ ಇಂಧನ ಬಳಕೆಗೆ ಸಂಬಂಧಿಸಿದಂತೆ ಹವಾ ನಿಯಂತ್ರಣ ಬಳಕೆ, ರಸ್ತೆ ತಡೆ ಡಿಬ್ಬಗಳಿಗೆ ವಾಹನ ನಿಯಂತ್ರಣ ಬ್ರೇಕ್ ಬಳಕೆ, ಸಿಗ್ನಲ್ ತಡೆಗಳು ಮತ್ತು ವಾಹನವು ಹಿಂಭಾಗ ಚಲಿಸುವ ಸಂದರ್ಭ ಈ ಎಲ್ಲಾ ಅಂಶಗಳು ಸೇರಿದಂತೆ ಹಾಗೂ ಸದರಿ ವಾಹನವು 2013ರ ಮಾದರಿಯ ವಾಹನವಾಗಿದ್ದು ಏಂಟು ವರ್ಷಗಳ ಹಳೆಯ ವಾಹನ ಮತ್ತು 1,36,000 ಕಿ.ಮೀಟರ್ ಕ್ರಮಿಸಿದ್ದು Toyota ಸಂಸ್ಥೆಯು ನಿಗದಿಪಡಿಸಿರುವ ಇಂಧನ ಬಳಕೆ ಪ್ರಮಾಣಕ್ಕೆ ಹೊರತಾಗಿರುವುದಾಗಿ ನಿವೇದಿಸುತ್ತಾ ವಾಹನದ ಇಂಧನ ಬಳಕೆಯನುಸಾರ ಸರಾಸರಿ ಕಿ.ಮೀಟರ್ ತೋರಿಸುವ ಮೀಟರ್ ಜೆರಾಕ್ಸ್ ಪ್ರತಿಯನ್ನು ಲಗತ್ತಿಸಿದ್ದು **ಕಂಡಿಕೆಯ ಆಕ್ಷೇಪಣೆ ಮೊತ್ತ ರೂ.45,452/-ಗಳನ್ನು ತೀರುವಳಿಗೊಳಿಸುವಂತೆ ಕೋರಿದೆ.** |
| **60. ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ-2000 ರಲ್ಲಿನ ಅಧಿನಿಯಮಗಳಲ್ಲಿ ಅಧಿಕಾರ ಪ್ರದತ್ತವಾಗದಿದ್ದರೂ ಕುಲಪತಿಯವರು ತಮ್ಮ ಅಧಿಕಾರ ವ್ಯಾಪ್ತಿ ಮೀರಿ ಬಾಡಿಗೆ ದರದಲ್ಲಿ (ನಿರ್ವಹಣಾ ಶುಲ್ಕ) ಶೇಕಡಾವಾರು ರಿಯಾಯಿತಿ ನೀಡುವ ಮೂಲಕ ವಿಶ್ವವಿದ್ಯಾನಿಲಯಕ್ಕೆ ಆರ್ಥಿಕ ನಷ್ಟ ಉಂಟುವಾಡಿರುವುದು:-(ಆಡಳಿತ ವಿಭಾಗ)**<br>ವಿಶ್ವವಿದ್ಯಾನಿಲಯ ಅಧೀನಕ್ಕೆ ಒಳಪಡುವ ವಿವಿಧ ಖಾಲಿ ಮೈದಾನಗಳು ಬಯಲು ರಂಗಮಂದಿರ, ವಿವಿಧ ಭವನಗಳು, ವಿವಿಧ ಸಭಾಂಗಣಗಳು ಮತ್ತು ಚಿತ್ರೀಕರಣ ಮಾಡುಬಹುದಾದಂತಹ ಇತರೆ ಸ್ಥಳಗಳನ್ನು ಸಾರ್ವಜನಿಕ ಸಂಸ್ಥೆಗಳಿಗೆ, ವಿದ್ಯಾ ಸಂಸ್ಥೆಗಳಿಗೆ ಚಿತ್ರ ತಂಡಗಳಿಗೆ ಹಾಗೂ ವಾಣಿಜ್ಯ | ವಿಶ್ವವಿದ್ಯಾನಿಲಯದ ಅಧೀನಕ್ಕೆ ಒಳಪಡುವ ವಿವಿಧ ಭವನಗಳು ಸಭಾಂಗಣಗಳು ಮತ್ತು ಬಯಲು ರಂಗಮಂದಿರ ಹಾಗೂ ಮೈದಾನಗಳನ್ನು ಸರ್ಕಾರಿ ಸಾಮ್ಯದ ಸಂಸ್ಥೆಗಳಿಗೆ, ವಿದ್ಯಾಸಂಸ್ಥೆಗಳು ಮತ್ತು ಸಂಘ ಸಂಸ್ಥೆಗಳಿಗೆ ಹಾಗೂ ಶೈಕ್ಷಣಿಕ ಕಾರ್ಯಕ್ರಮಗಳು ಸೆಮಿನಾರ್ |

ಸಂಸ್ಥೆಗಳಿಗೆ ಬಾಡಿಗೆ ನೀಡಿ ನಿರ್ವಹಣಾ ಶುಲ್ಕ ಹಾಗೂ ಭದ್ರತಾ ಠೇವಣಿಯನ್ನು ರಶೀದಿ ಮೂಲಕ ಸ್ವೀಕರಿಸಿರುವುದನ್ನು ಪರಿಶೋಧಿಸಲಾಗಿ ಕೆಲವು ಸಂಸ್ಥೆಗಳಿಗೆ, ಲಕ್ಷಾಂತರ ಹಣ ಬಂಡವಾಳ ಹೂಡಿ ಹಾಗೂ ವ್ಯಾಪಾರ ವಹಿವಾಟು ನಡೆಸುವ ವಾಣಿಜ್ಯ ಸಂಸ್ಥೆಗಳಿಗೆ ನಿಗದಿಪಡಿಸಿರುವ ಬಾಡಿಗೆ ದರದ ನಿರ್ವಹಣಾ ಶುಲ್ಕಗಳಲ್ಲಿ ಶೇ.25, ಶೇ28.57 ಶೇ30, ಶೇ35 ಮತ್ತು ಶೇ50 ರಷ್ಟು ಹೀಗೆ ವಿವಿಧ ದರಗಳಲ್ಲಿರಿಯಾಹಿತಿ ನೀಡುದ್ದು, ಹೀಗೆ ರಿಯಾಯಿತಿ ನೀಡಿರುವುದರಿಂದ ವಿಶ್ವವಿದ್ಯಾನಿಲಯಕ್ಕೆ ಲಕ್ಷಾಂತರ ರೂ.ಗಳ ಆರ್ಥಿಕ ನಷ್ಟ ಉಂಟಾಗಿರುತ್ತದೆ. ಈ ಆರ್ಥಿಕ ನಷ್ಟ ಕುರಿತಂತೆ ವಿಚಾರಣಾ ಪತ್ರ ಸಂಖ್ಯೆ:32/2019–20ನ್ನು ದಿನಾಂಕ:20.05.2019 ರಂದು ನೀಡಲಾಗಿ ವಿಶ್ವವಿದ್ಯಾನಿಲಯದಲ್ಲಿ ದಿನಾಂಕ:19.08.2015 ರಂದು ನಡೆದ ಸಿಂಡಿಕೇಟ್ ಏಳನೇ ಸಾಮಾನ್ಯ ಸಭೆಯ ನಡಾವಳಿಯನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸಿದ್ದು ಈ ನಡಾವಳಿಯನ್ನು ಪರಿಶೀಲಿಸಲಾಗಿ, ವಿಷಯ ಸಂಖ್ಯೆ:2015/8.40 ರಲ್ಲಿನ ತೀರ್ಮಾನದಂತೆ, ನಿರ್ವಹಣಾ ಶುಲ್ಕ ಹಾಗೂ ಭದ್ರತಾ ಠೇವಣಿಗಳನ್ನು ಪರಿಷ್ಕರಿಸಿ, ನಿಗದಿಪಡಿಸಿದ್ದು ಕುಲಸಚಿವರ ಕರಡು ಅನುಮೋದನೆ ಮೇರೆಗೆ ಸಹಾಯಕ ಕುಲಸಚಿವ(ಸಾಮಾನ್ಯ)ರವರು ತಮ್ಮ ಕಛೇರಿ ಆದೇಶ ಸಂಖ್ಯೆ:ಜಿ.ಎಲ್1/126/2012–13/ದಿ:29.08.2015 ರಲ್ಲಿ ಆದೇಶಿಸಿದ್ದು ಪರಿಷ್ಕೃತ ಹಾಗೂ ನಿಗದಿ ಪಡಿಸಿದ ಶುಲ್ಕಗಳು ದಿನಾಂಕ:29.08.2015 ರಿಂದ ಜಾರಿಯಲ್ಲಿರುತ್ತದೆ.

ಮೇಲ್ಕಂಡ ನಡಾವಳಿಗಳು ಮತ್ತು ಆದೇಶಗಳಲ್ಲಿ ಬಾಡಿಗೆಯ ನಿರ್ವಹಣಾ ಶುಲ್ಕ ಹಾಗೂ ಭದ್ರತಾ ಠೇವಣಿಗಳ ದರಗಳನ್ನು ಪರಿಷ್ಕರಿಸಿ ನಿಗದಿಪಡಿಸಿದ್ದು, ನಿರ್ವಹಣಾ ಶುಲ್ಕದ ಮೇಲೆ ರಿಯಾಯಿತಿ ನೀಡುವ ಬಗ್ಗೆ ಪ್ರಸ್ತಾವನೆಯಾಗಲೀ ಅಥವಾ ಸಿಂಡಿಕೇಟ್‌ನ ತೀರ್ಮಾನವಾಗಲೀ ಆಗಿರುವುದಿಲ್ಲ.

ಸಿಂಡಿಕೇಟ್ ಸಾಮಾನ್ಯ ಸಭೆಯ ನಡಾವಳಿಯಲ್ಲಿನ ವಿಷಯ ಸಂಖ್ಯೆ:2015/8.40 ರಲ್ಲಿನ ತೀರ್ಮಾನ ಹಾಗೂ ಸಹಾಯಕ ಕುಸಚಿವ (ಸಾಮಾನ್ಯ) ರವರ ಕಛೇರಿ ಆದೇಶ ಸಂಖ್ಯೆ:ಜಿ.ಎಲ್1/726/2012–13/ದಿನಾಂಕ:29.08.2015 ರಲ್ಲಿನ ಷರತ್ತನ ಸಂಖ್ಯೆ(6) ರಲ್ಲಿ ದಾಖಾಲಿಸಿರುವಂತೆ "ಉಳಿದಂತೆ ಇನ್ನಿತರೆ ನಿರ್ಧಾರದ ಅಧಿಕಾರವನ್ನು ಮಾನ್ಯ ಕುಲಪತಿಗಳ ವಿವೇಚನೆಗೆ ಒಳಪಟ್ಟಿರುತ್ತದೆ" ಎನ್ನುವ ವಾಕ್ಯವನ್ನೇ ಮಾನದಂಡವಾಗಿಸಿಕೊಂಡು ಕುಲಪತಿಯವರು ಈ ರೀತಿ ರಿಯಾಯಿತಿ ದರ ನೀಡುತ್ತಿರುವುದು. ಲೆಕ್ಕಪರಿಶೋಧನೆಯಲ್ಲಿ ಕಂಡುಬಂದಿರುತ್ತದೆ. ಮೇಲ್ಕಂಡ ವಾಕ್ಯವನ್ನು ತಪ್ಪಾಗಿ ಗ್ರಹಿಸಲಾಗಿದ್ದು ಬಾಡಿಗೆ ನೀಡಲು ಅನುಮತಿ ನೀಡದ ದಿನಗಳ ಸಂಖ್ಯೆಗಳನ್ನು ಹೆಚ್ಚಿಸಲು/ಮುಂದುವರೆಸಲು ಅಥವಾ ಒಂದೇ ಅವಧಿಗೆ ಬೇರೆ ಬೇರೆ ಸಂಸ್ಥೆಗಳಿಗೆ ಬಾಡಿಗೆ ಪಡೆಯಲು ಕೋರಿಕೆ ಬಂದಾಗ, ಈ ಎರಡೂ ಸಂದರ್ಭಗಳಲ್ಲಿ ಮಾತ್ರ ತಮ್ಮ "ವಿವೇಚನೆಯನ್ನು" ಬಳಸಬಹುದಾಗಿದ್ದು ಹೀಗೆ ವಿಶ್ವವಿದ್ಯಾನಿಲಯಕ್ಕೆ ಆರ್ಥಿಕ ನಷ್ಟ ಉಂಟುಮಾಡುವ ತೀರ್ಮಾನ ಕೈಗೊಳ್ಳಲು ಕುಲಪತಿಯವರಿಗೆ ಅಧಿಕಾರವಿರುವುದಿಲ್ಲವೆಂದು ಲೆಕ್ಕಪರಿಶೋಧನೆಯಲ್ಲಿ ಅಭಿಪ್ರಾಯಪಡಲಾಗಿದೆ.

ಕ್ವಿಜ್ ವಾರ್ಷಿಕ ಮಹಾಸಭೆ ಮತ್ತು ವಿಚಾರ ಸಂಕೀರ್ಣ ಹಾಗೂ ಚಿತ್ರೀಕರಣಕ್ಕಾಗಿ ಬಾಡಿಗೆ ನೀಡಿ ನಿರ್ವಹಣಾ ಶುಲ್ಕ ಹಾಗೂ ಭದ್ರತಾ ಠೇವಣಿಯ ದರವನ್ನು ವಿಶ್ವವಿದ್ಯಾನಿಲಯದ ಆದೇಶ ಸಂಖ್ಯೆ:ಜಿಎಲ್1/126/2012–13/ದಿನಾಂಕ:29.08.2015ರಲ್ಲಿ ಪರಿಷ್ಕೃತ ನಿರ್ವಹಣಾ ಶುಲ್ಕ ಹಾಗೂ ಠೇವಣಿ ದರಗಳು ದಿನಾಂಕ:29.08.2015ರಿಂದ ಜಾರಿಗೊಳಿಸಲಾಗಿರುವುದು ಸರಿಯಷ್ಟೇ.

ಸದರಿ ಕಂಡಿಕೆಯ **ಅನುಬಂಧ–30ರಲ್ಲಿ ವಿವರಿಸಿರುವ–53 ಸಂಖ್ಯೆಯ** ವಿವಿಧ ಕಾರ್ಯ ಕ್ರಮಗಳು ಸೆಮಿನಾರ್, ರಾಷ್ಟ್ರೀಯ ಸಮೇಳನ ಮತ್ತು ವಿದ್ಯಾರ್ಥಿಗಳ ಕ್ವಿಜ್ ಸಂಘ ಸಂಸ್ಥೆಗಳ ವಾರ್ಷಿಕ ಮಹಾಸಭೆ, ಸರ್ಕಾರಿ ಸಂಸ್ಥೆ ಹಾಗೂ ವಿಶ್ವವಿದ್ಯಾನಿಲಯದ ನೌಕರರ ಸಹಕಾರ ಸಂಘದ ವಾರ್ಷಿಕ ಸಭೆಗಳು ನಡೆಸುವ ಸಂಬಂಧವಾಗಿ ನಿರ್ವಹಣಾ ಶುಲ್ಕದಲ್ಲಿ ರಿಯಾಯಿತಿ ಕೋರಿದ್ದು ದಿನಾಂಕ:16.01.2019ರ ಸಿಂಡಿಕೇಟ್ ಸಭಾ ನಿರ್ಣಯದಲ್ಲಿ ಕೋರಿಕೆಯ ಮೇಲೆ ದರಗಳಲ್ಲಿ ರಿಯಾಯಿತಿ ನೀಡುವ ಅಧಿಕಾರವನ್ನು ಮಾನ್ಯಕುಲಪತಿಗಳಿಗೆ ನೀಡಿರುವ ಹಾಗೂ ದಿನಾಂಕ:19.08.2015ರ ಸಿಂಡಿಕೇಟ್ ಸಭಾ ನಿರ್ಣಯದ ಮೇರೆಗೆ ಮಾನ್ಯ ಕುಲಪತಿಗಳು ವಿವೇಚನಾಯುಕ್ತವಾಗಿ ನಿರ್ವಹಣಾ ಶುಲ್ಕದಲ್ಲಿ ರಿಯಾಯಿತಿ ನೀಡಲಾಗಿರುತ್ತದೆ. **ಅನುಬಂಧ–30ರಲ್ಲಿ** ವಿವರಿಸಿರುವ ರಶೀದಿಗಳ ಸಂಬಂಧ ವಿವಿಧ ಭವನ, ಸಭಾಂಗಣ ಮತ್ತು ಇತರೆ ಸ್ಥಳಗಳಿಗೆ ನಿರ್ವಹಣಾ ದರದಲ್ಲಿ ರಿಯಾಯಿತಿ ನೀಡಿರುವ ಕಡತದ ಜೆರಾಕ್ಸ್ ಪ್ರತಿಗಳು, ಆದೇಶದ ಪ್ರತಿಗಳು ಹಾಗೂ ರಶೀದಿಗಳ ಪ್ರತಿಗಳನ್ನು ಈ ಕೂಡ ಲಗತ್ತಿಸಿ ಸಲ್ಲಿಸುತ್ತಾ,

ಮಾನ್ಯ ಕುಲಪತಿರವರು ಸಂಘ ಸಂಸ್ಥೆಗಳ ಸಮೇಳನ, ಕ್ವಿಜ್, ಧಾರ್ಮಿಕ ಕಾರ್ಯಕ್ರಮಗಳು ಮತ್ತು ಇತರೆ ಸದ್ಭಾವನಾಯುಕ್ತ ಕಾರ್ಯಕ್ರಮಗಳು ಹಾಗೂ ಸರ್ಕಾರಿ ಕಾರ್ಯಕ್ರಮಗಳಿಗೆ ಕೋರಿಕೆಯ ಮೇಲೆ ನಿರ್ವಹಣಾ ದರದಲ್ಲಿ ರಿಯಾಯಿತಿ ನೀಡಿರುವುದಾಗಿ **ತಮ್ಮಲ್ಲಿ ನಿವೇದಿಸುತ್ತಾ ವಸೂಲಾತಿಗೆ ಸೂಚಿಸಿರುವ ಒಟ್ಟು ಮೊತ್ತ ರೂ.26,30,400/–ಗಳನ್ನು ತೀರುವಳಿಗೊಳಿಸುವಂತೆ ಕೊರಿದೆ.**

| | |
|---|---|
| ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ–2000 ರಲ್ಲಿನ ಅಧ್ಯಾಯ–III ರ ಪ್ರಕರಣಗಳು–15 ರಲ್ಲಿನ ಕುಲಪತಿಯ ಅಧಿಕಾರಗಳು ಇದರಲ್ಲಿ ಪ್ರಸ್ತಾಪಿಸಿರುವಂತೆ ಕುಲಪತಿಯವರು ವಿಶ್ವವಿದ್ಯಾನಿಲಯಕ್ಕೆ ಆರ್ಥಿಕ ನಷ್ಟ ಉಂಟುಮಾಡುವಂತಹ ಅಧಿಕಾರ ಚಲಾಯಿಸಲು ಹಕ್ಕುಳ್ಳವರಾಗಿರುವುದಿಲ್ಲ.<br><br>ಹಾಜರುಪಡಿಸಿದ ಲೆಕ್ಕಪತ್ರ ದಾಖಲೆಗಳನ್ವಯ 2017–18ನೇ ಸಾಲಿನಲ್ಲಿ (ಅನುಬಂಧ–30) ರಲ್ಲಿ ವಿವರಿಸಿರುವಂತೆ ನಿರ್ವಹಣಾ ಶುಲ್ಕ ಒಟ್ಟು ರೂ.63,32,000/– ಅನ್ನು ಸ್ವೀಕರಿಬೇಕಾಗಿದ್ದು ಈ ಪೈಕಿ ರೂ.37,01,600/–ಗಳನ್ನು ಮಾತ್ರ ಸ್ವೀಕರಿಸಿರುವುದರಿಂದ ರೂ.26,30,400/–ಗಳ ನಿರ್ವಹಣಾ ಶುಲ್ಕ ಸ್ವೀಕರಿಸದೇ ಬಾಕಿ ಉಳಿದಿರುತ್ತದೆ.<br><br>ವಿಶ್ವವಿದ್ಯಾನಿಲಯದ ಅಧಿನಿಯಮಗಳಲ್ಲಿ ಅಧಿಕಾರ ಪ್ರದತ್ತವಾಗದಿದ್ದರೂ ಸಹ ಕುಲಪತಿಯವರು ತಮ್ಮ ಅಧಿಕಾರ ವ್ಯಾಪ್ತಿ ಮೀರಿ ಬಾಡಿಗೆ ದರದಲ್ಲಿ ನಿರ್ವಹಣಾ ಶುಲ್ಕವನ್ನು ಶೇಕಡವಾರು ರಿಯಾಯಿತಿ ನೀಡಿರುವುದರಿಂದ ವಿಶ್ವವಿದ್ಯಾನಿಲಯಕ್ಕೆ ರೂ.26,30,400/–ಗಳ ಆರ್ಥಿಕ ನಷ್ಟ ಉಂಟಾಗಿರುವುದರಿಂದ ಸಂಬಂಧಿಸಿದವರೆಲ್ಲರ ಹೊಣೆಗಾರಿಕೆ ಮೇಲೆ **ಅನುಬಂಧ–30** ರಲ್ಲಿನ ಕಾಲಂ ಸಂಖ್ಯೆ(8) ರ ಒಟ್ಟು ಮೊತ್ತ **ರೂ.26,30,400/–ಗಳನ್ನು** ವಸೂಲಾತಿಗೆ ಸೂಚಿಸಲಾಗಿದ್ದು ಕರ್ನಾಟಕ ಆರ್ಥಿಕ ಸಂಹಿತೆ, ಅನುಚ್ಛೇಧ–369ರ ರೀತ್ಯಾ ವಸೂಲಿಸಿದ ಮತ್ತು ಕೈಗೊಂಡ ಕ್ರಮದ ಬಗ್ಗೆ ಅನುಪಾಲನಾ ವರದಿ ಸಲ್ಲಿಸಲು ಸೂಚಿಸಿದೆ. | |
| **<u>61. ವಿವಿಧ ಭವನಗಳು, ಸಭಾಂಗಣಗಳು ಹಾಗೂ ಮೈದಾನಗಳನ್ನು ಬಾಡಿಗೆ ನೀಡಲು ಅನುಮತಿ ನೀಡಿದ ಆದೇಶಗಳಲ್ಲಿ ನಿಗದಿಪಡಿಸಿರುವ ಶೇಕಡವಾರು ರಿಯಾಯಿತಿ ದರಗಳನ್ನು ಉಲ್ಲಂಘಿಸಿ ನಿರ್ವಹಣಾ ಶುಲ್ಕಗಳನ್ನು ಕಡಿಮೆ ಸ್ವೀಕರಿಸಿರುವುದರಿಂದ ಆರ್ಥಿಕ ನಷ್ಟ ಉಂಟಾಗಿರುವುದು:–(ಆಡಳಿತ ವಿಭಾಗ).</u>**<br><br>2017–18ನೇ ಸಾಲಿನಲ್ಲಿ ವಿಶ್ವವಿದ್ಯಾನಿಲಯದ ವಿವಿಧ ಭವನಗಳು, ಸಭಾಂಗಣಗಳು ಹಾಗೂ ಮೈದಾನಗಳನ್ನು ವಿವಿಧ ಕಾರ್ಯಕ್ರಮಗಳಿಗಾಗಿ ಸಂಸ್ಥೆಗಳು ಮತ್ತು ಸಾರ್ವಜನಿಕರಿಗೆ ಬಾಡಿಗೆ ನೀಡಿದ್ದು ಈ ಸಂಬಂಧ ಅವುಗಳನ್ನು ಉಪಯೋಗಿಸಿಕೊಳ್ಳಲು ಅನುಮತಿ ನೀಡಿರುವ ಆದೇಶಗಳನ್ನು ಹಾಗೂ ಈ ಆದೇಶಗಳಿಗೆ ಎದುರಾಗಿ ಬಾಡಿಗೆ ಸ್ವೀಕರಿಸಿರುವ ರಶೀದಿ ಪುಸ್ತಕಗಳನ್ನು ಪರಿಶೋಧಿಸಲಾಗಿ, ಸಹಾಯಕ ಕುಲಸಚಿವರು (ಸಾಮಾನ್ಯ) ರವರು ಅನುಮತಿ ನೀಡಿರುವ ಆದೇಶಗಳಲ್ಲಿ ನಿಗದಿಪಡಿಸಿರುವ ನಿರ್ವಹಣಾ ಶುಲ್ಕಕ್ಕೆ ಶೇಕಡವಾರು ರಿಯಾಯಿತಿ ನೀಡಿದ್ದು, ನೀಡಿರುವ ರಯಾಯಿತಿ ದರಗಳನ್ನು ಉಲ್ಲಂಘಿಸಿ, ನಿರ್ವಹಣಾ ಶುಲ್ಕಗಳನ್ನು ಕಡಿಮೆ ಸ್ವೀಕರಿಸಲಾಗಿದೆ. **(ವಿವರಗಳನ್ನು ಅನುಬಂಧ–31 ರಲ್ಲಿ ವಿವರಿಸಿದೆ.) ಅನುಬಂಧ–31 ರಲ್ಲಿನ ಕ್ರಮ ಸಂಖ್ಯೆ(4)** ರಲ್ಲಿನ ಕಾರ್ಯಕ್ರಮಕ್ಕೆ ಆದೇಶದಲ್ಲಿ ರಿಯಾಯಿತಿ ನೀಡದಿದ್ದರೂ ಸಹ ರೂ.75,000/–ಗಳಿಗೆ ಬದಲಾಗಿ ರೂ.22,500/–ಗಳನ್ನು ಮಾತ್ರ ಸ್ವೀಕರಿಸಿ, ಆರ್ಥಿಕ ನಷ್ಟ ಉಂಟು ಮಾಡಲಾಗಿದೆ. ಕಡಿಮೆ ಸ್ವೀಕರಿಸಿರುವ ನಿರ್ವಹಣಾ ಶುಲ್ಕ **ರೂ.1,85,000/–ಗಳನ್ನು** ಸಂಬಂದಿಸಿದವರಿಂದ | ಸದರಿ ಕಂಡಿಕೆಯ ಅನುಬಂಧ–31ರಲ್ಲಿ ಕ್ರಮಾಂಕ (01) ರಿಂದ (05) ರವರೆಗೆ ಸೆನೆಟ್ ಭವನ, ರಾಣಿ ಬಹದ್ದೂರ್ ಸಭಾಂಗಣ ಮತ್ತು ವಾಲಿಬಾಲ್ ಮೈದಾನಗಳಲ್ಲಿ ನಿಗದಿಪಡಿಸಿರುವ ಶೇಕಡವಾರು ರಿಯಾಯಿತಿ ದರಗಳನ್ನು ಉಲ್ಲಂಘಿಸಿ ನಿರ್ವಹಣಾ ಶುಲ್ಕವನ್ನು ಕಡಿಮೆ ಸ್ವೀಕರಿಸಿ ಆರ್ಥಿಕ ನಷ್ಟ ಉಂಟಾಗಿರುವ ಬಗ್ಗೆ ಪ್ರಸ್ತಾಪಿಸಲಾಗಿರುತ್ತದೆ.<br><br>ಪ್ರಸುತ್ತ ಕಂಡಿಕೆಗೆ ಸಂಬಂಧಿಸಿದಂತೆ ತಮ್ಮಲ್ಲಿ ವಿನಂತಿಸುವುದೆಂದರೆ **ಕಂಡಿಕೆ ಸಂಖ್ಯೆ–60 ಅನುಬಂಧ–30ರಲ್ಲಿ ಕ್ರಮಸಂಖ್ಯೆ:–01 ರಿಂದ 53 ರವರೆಗೆ** ವಿಶ್ವವಿದ್ಯಾನಿಲಯದ ವಿವಿಧ ಭವನಗಳು, ಸಭಾಂಗಣಗಳು ಹಾಗೂ ಮೈದಾನಗಳನ್ನು ಬಾಡಿಗೆ ನೀಡಲು ಅನುಮತಿ ನೀಡುವ ಸಂಬಂಧ ಸ್ವೀಕರಿಸಬೇಕಾದ ನಿರ್ವಹಣಾ ಶುಲ್ಕ ಮತ್ತು ಭದ್ರತಾ ಠೇವಣಿಯ ಬಗ್ಗೆ ವಿವರವಾಗಿ ವಿವರಿಸಿ ನಿರ್ವಹಣಾ ಶುಲ್ಕದಲ್ಲಿ ಶೇಕಡವಾರು ರಿಯಾಯಿತಿ ನೀಡಿರುವ ಬಗ್ಗೆ ಆಕ್ಷೇಪಿಸಿದ್ದು **ರೂ.26,30,400/–ಗಳ** ನಿರ್ವಹಣಾ ಶುಲ್ಕ ಸ್ವೀಕರಿಸದೇ ಇರುವ ಬಗ್ಗೆ |

| | |
|---|---|
| ವಸೂಲಾತಿಗೆ ಸೂಚಿಸಿದೆ ಹಾಗೂ ಕಡಿಮೆ ಸ್ವೀಕೃತಿಗೆ ಕಾರಣರಾದವರ ವಿರುದ್ಧ ನಿಯಮಾನುಸಾರ ಆಡಳಿತಾತ್ಮಕ ಕ್ರಮ ಕೈಗೊಳ್ಳಬಹುದಾಗಿದೆ. | ಪ್ರಸ್ತಾಪಿಸಲಾಗಿರುತ್ತದೆ **ಕಂಡಿಕೆ ಸಂಖ್ಯೆ:–61 ಅನುಬಂಧ–31ರಲ್ಲಿರುವ ಕ್ರಮಸಂಖ್ಯೆ:–01 ರಿಂದ (05)** ರಲ್ಲಿನ ವಿಷಯಗಳು **ಕಂಡಿಕೆ ಸಂಖ್ಯೆ–60ರ ಅನುಬಂಧ–30ರ ಕ್ರಮಸಂಖ್ಯೆ:–11,12,14,42 ಮತ್ತು 43ಗಳಲ್ಲಿ ಪುನರಾವರ್ತನೆಯಾಗಿರುವುದಾಗಿ** ತಮ್ಮ ಅವಗಾಹನೆಗೆ ತರಬಯಸಲಾಗಿರುತ್ತದೆ.<br><br>ಸದರಿ ಕಂಡಿಕೆಯ **ಅನುಬಂಧ–31 ರಲ್ಲಿನ ಕ್ರಮ ಸಂಖ್ಯೆ:–(04) ರಲ್ಲಿ ಸೆನೆಟ್ ಭವನವನ್ನು ಉಷಾಕೋಕಿಲ ಬೆಂಗಳೂರುವರಿಗೆ ಬಾಡಿಗೆ ನೀಡಿರುವುದಿಲ್ಲ**. ಸದರಿ ಭವನವನ್ನು ದಿನಾಂಕ:08.01.2018ರಂದು **"**ಪ್ರಜಾವಾಣಿ ಕ್ವಿಜ್ ಕಾಂಪಿಟೇಷನ್**"** ಕಾರ್ಯಕ್ರಮ ನಡೆಸಲು ದಿ ಪ್ರಿಂಟರ್ಸ್ (ಮೈಸೂರು) ಲಿಮಿಟೆಡ್ ಬೆಂಗಳೂರು ರವರಿಗೆ ಮಾನ್ಯ ಕುಲಪತಿಗಳು ಉಚಿತವಾಗಿ ನೀಡಲು ಆದೇಶಿಸಿದ್ದು ಆದರೆ ವಿದ್ಯುತ್,ನೀರು ಮತ್ತು ಸ್ವಚ್ಛತಾ ಕಾರ್ಯಗಳ ಸಂಬಂಧವಾಗಿ ಶೇ30ರಷ್ಟು ನಿರ್ವಹಣಾ ವೆಚ್ಚ ಭರಿಸಬೇಕಾದ್ದರಿಂದ **ರೂ.22,500/–ಗಳನ್ನು** ನಿರ್ವಹಣಾ ವೆಚ್ಚ ವಾಗಿ ಪಡೆಯಲಾಗಿರುತ್ತದೆ ಸಂಬಂಧಪಟ್ಟ ಕಡತದ ಪ್ರತಿ ಮತ್ತು ರಶೀದಿ ಪ್ರತಿ ಹಾಗೂ **ಅನುಬಂಧ–30** ಮತ್ತು **ಅನುಬಂಧ–31ರ** ಪ್ರತಿಗಳನ್ನು ಲಗತ್ತಿಸಿ ಸಲ್ಲಿಸುತ್ತಾ **ಕಂಡಿಕೆ 61ರ** ಮೊತ್ತವು **ಕಂಡಿಕೆ ಸಂಖ್ಯೆ:–60**ರಲ್ಲಿ ಸೇರ್ಪಡೆಯಾಗಿರುವುದರಿಂದ ಕಂಡಿಕೆಯಲ್ಲಿ **ವಸೂಲಾತಿಗೆ ಸೂಚಿಸಿರುವ ಮೊತ್ತ ರೂ.1,85,000/–ಗಳನ್ನು** ತೀರುವಳಿಗೊಳಿಸುವಂತೆ ತಮ್ಮಲ್ಲಿ ಕೋರಲಾಗಿದೆ. |
| **<u>62. ಸಭಾಂಗಣಗಳು ಮತ್ತು ಚಲನಚಿತ್ರ ಚಿತ್ರೀಕರಣಕ್ಕಾಗಿ ಬಾಡಿಗೆ ನೀಡಿರುವ ಸಂಬಂಧ ಕಂಡುಬಂದ ನ್ಯೂನ್ಯತೆಗಳು:–(ಆಡಳಿತ ವಿಭಾಗ).</u>**<br><br>ವಿಶ್ವವಿದ್ಯಾನಿಲಯದ ವಿವಿಧ ಸಭಾಂಗಣಗಳು ಹಾಗೂ ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿನ ವಿವಿಧ ಕಟ್ಟಡಗಳು ಹಾಗೂ ವಿವಿಧ ಸ್ಥಳಗಳಲ್ಲಿ ಚಲನಚಿತ್ರಗಳನ್ನು ಚಿತ್ರೀಕರಿಸಿರುವ ಸಂಬಂಧ ಪೂರಕ ಲೆಕ್ಕಪತ್ರ ದಾಖಲೆಗಳನ್ನು ಪರಿಶೋಧಿಸಲಾಗಿ ಈ ಕೆಳಕಂಡ ನ್ಯೂನ್ಯತೆಗಳು ಕಂಡು ಬಂದಿರುತ್ತದೆ.<br><br>ಅ) ವಿವಿಧ ಸಂಸ್ಥೆಯವರು ರಾಣಿ ಬಹದ್ದೂರ್ ಸಭಾಂಗಣವನ್ನು ಹಾಗೂ ಮಾನಸಗಂಗೋತ್ರಿಯ ವಾಲಿಬಾಲ್ ಮೈದಾನವನ್ನು ಕಾರ್ಯಕ್ರಮಗಳಿಗಾಗಿ ಉಪಯೋಗಿಸಿಕೊಂಡಿದ್ದು, ಆನಂತರ ಸಹಾಯಕ ಕುಲಸಚಿವ (ಸಾಮಾನ್ಯ) ರವರು ಉಪಯೋಗಿಸಿಕೊಂಡಿರುವುದಕ್ಕೆ "ಘಟನೋತ್ತರ" ಮಂಜೂರಾತಿ ನೀಡಿರುತ್ತಾರೆ. )ರಶೀದಿ ಸಂಖ್ಯೆ:7377/ದಿನಾಂಕ:05.06.2017 ರೂ.7,500/– ರಶಿದಿ ಸಂಖ್ಯೆ:7382/ದಿನಾಂಕ:09.06.2017 ರೂ.7,500/– ಮತ್ತು ರಶೀದಿ ಸಂಖ್ಯೆ:7408/ ದಿನಾಂಕ: 17.06.2017 ರೂ.7,500/–) | ಕಂಡಿಕೆಯ (ಅ) ರಲ್ಲಿ ಪ್ರಸ್ತಾಪಿಸಿರುವ ರಾಣಿ ಬಹದ್ದೂರ್ ಸಭಾಂಗಣ ಹಾಗೂ ಮಾನಸ ಗಂಗೋತ್ರಿಯ ವಾಲಿಬಾಲ್ ಮೈದಾನವನ್ನು ವಿವಿಧ ಸಂಸ್ಥೆಯವರು ಉಪಯೋಗಿಸಿರುವ ಸಂಬಂಧವಾಗಿ ಘಟನ್ನೋತರ ಮಂಜೂರಾತಿ ನೀಡಿರುವ ಬಗ್ಗೆ ಪ್ರಸ್ತಾಪಿಸಿ ಆಕ್ಷೇಪಿಸಲಾಗಿರುತ್ತದೆ.<br><br>1.ಅಧ್ಯಕ್ಷರು ಜಿಲ್ಲಾ ಪತ್ರಕರ್ತರ ಸಂಘ ಮೈಸೂರು ಇವರಿಂದ ದಿನಾಂಕ:**11.06.2017ರಂದು** ನಡೆಯುವ ಕಾರ್ಯಕ್ರಮಕ್ಕೆ ದಿನಾಂಕ:24.05.2017 ರಂದು ಮಾನ್ಯ ಕುಲಪತಿಗಳು/ಕುಲಸಚಿವರವರಿಂದ ಕರಡು ಅನುಮೋದನೆಯಾಗಿದ್ದು ದಿನಾಂಕ:**27.05.2017ರಂದು** ವಿಶ್ವವಿದ್ಯಾನಿಲಯ ಆದೇಶ ಹೊರಡಿಸಿದ್ದು ದಿನಾಂಕ:**05.06.2017ರಂದು ರಶೀತಿ ಸಂಖ್ಯೆ:7377**ರಲ್ಲಿ ನಿರ್ವಹಣಾ ವೆಚ್ಚ ರೂ.7500/–ಗಳನ್ನು ಮಾತ್ರ ಸ್ವೀಕರಿಸಿದೆ.<br><br>2.ಅಧ್ಯಕ್ಷರು ಮೈಸೂರು ಜಿಲ್ಲಾ ಟ್ಯಾಕ್ಸ್ ಪ್ರಾಕ್ಟೀಸನರ್ಸ್ ಅಸೋಸಿಯೇಷನ್ |

| | |
|---|---|
| ಸಂಸ್ಥೆಯವರು ವಿಶ್ವದ್ಯಾನಿಲಯದ ಪೂರ್ವಾನುಮತಿ ಇಲ್ಲದೇ ವಿಶ್ವವಿದ್ಯಾನಿಲಯದ ಕಟ್ಟಡಗಳನ್ನು ಮೈದಾನಗಳನ್ನು ಕಾರ್ಯಕ್ರಮಗಳಿಗಾಗಿ ಉಪಯೋಗಿಸಿಕೊಂಡಿದ್ದು, ಆನಂತರ ದಿನಗಳಲ್ಲಿ ನಿರ್ವಹಣಾ ಶುಲ್ಕದಲ್ಲಿ "ರಿಯಾಯಿತಿ" ನೀಡುವುದರೊಂದಿಗೆ ಉಪಯೋಗಿಸಕೊಂಡಿರುವುದಕ್ಕೆ ಘಟನೋತ್ತರ ಮಂಜೂರಾತಿ ನೀಡಿರುವುದನ್ನು ಲೆಕ್ಕಪರಿಶೋಧನೆಯಲ್ಲಿ ತೀವ್ರವಾಗಿ ಆಕ್ಷೇಪಿಸಲಾಗಿದೆ. ವಿಶ್ವವಿದ್ಯಾನಿಲಯದ ಎಲ್ಲಾ ಪ್ರದೇಶಗಳಲ್ಲಿ ಭದ್ರತಾ ಸಿಬ್ಬಂದಿ ಇದ್ದು ಇವರು ಅನುಮತಿ ಪಡೆಯದಿದ್ದರೂ ಹೇಗೆ ಚಿತ್ರೀಕರಣಕ್ಕೆ ಸ್ಥಳ ನೀಡಿದರು ಎಂಬ ಬಗ್ಗೆ ಅನುಮಾನ ಪಡುವಂತಾಗಿದೆ. ಇದೊಂದು ಕರ್ತವ್ಯ ಲೋಪವಾಗಿದ್ದು ಸಂಬಂಧಿಸಿದ ಕಟ್ಟಡಗಳ ಉಸ್ತುವಾರಿ ಹೊತ್ತಿರುವ ಅಧಿಕಾರಿಗಳ ವಿರುದ್ಧ ನಿಯಮಾನುಸಾರ ಆಡಳಿತಾತ್ಮಕ ಕ್ರಮ ಕೈಗೊಳ್ಳಬಹುದಾಗಿದೆ.<br><br>ಆ) ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿನ ಪ್ರದೇಶಗಳು ಹಾಗೂ ಕಟ್ಟಡಗಳಲ್ಲಿ ವಿದೇಶಿ ಭಾಷಾ ಚಲನಚಿತ್ರಗಳ ಚಿತ್ರೀಕರಣಕ್ಕಾಗಿ ಒಂದು ದಿನದ ಪೂರ್ಣ ಅವಧಿಗೆ ಬಾಡಿಗೆ ದರ ನಿಗದಿಪಡಿಸಿದ್ದು, ಇದರಿಂದಾಗಿ ರಾತ್ರಿ ವೇಳೆಯಲ್ಲಿಯೂ ಸಹ ಚಲನಚಿತ್ರಗಳು ಚಿತ್ರೀಕರಣ ಗೊಂಡಿರುತ್ತದೆ, ಒಂದು ದಿನದ ಈ ಚಿತ್ರೀಕರಣ ಅವಧಿಯನ್ನು ಹಗಲು ಹಾಗೂ ರಾತ್ರಿ ಎಂದು ಪ್ರತ್ಯೇಕಿಸಿರುವುದಿಲ್ಲ.<br><br>ಒಂದು ದಿನದ ಸೂರ್ಯೋದಯದಿಂದ ಸೂರ್ಯಾಸ್ತದವರೆಗೆ ಹಗಲಿನ ಅವಧಿಗೆ ಬಾಡಿಗೆ ದರ ನಿಗದಿಪಡಿಸಿ, ಸೂರ್ಯಸ್ತದಿಂದ ಮುಂದಿನ ದಿನದ ಸೂರ್ಯೋದಯದವರೆಗೆ ರಾತ್ರಿ ಅವಧಿಗೆ ಬಾಡಿಗೆ ದರ ನಿಗದಿಪಡಿಸಬಹುದಾಗಿರುತ್ತದೆ ಕಾರಣ ರಾತ್ರಿ ವೇಳೆಯಲ್ಲಿ ವಿಶ್ವವಿದ್ಯಾನಿಲಯದ ವಿದ್ಯುತ್ ದೀಪಗಳ ಬೆಳಕಿನಲ್ಲಿ ಚಲನಚಿತ್ರ ದೃಶ್ಯಗಳನ್ನು ಚಿತ್ರೀಸಿಕೊಳ್ಳಲಾಗುತ್ತದೆ. ಹಾಗೂ ರಾತ್ರಿ ವೇಳೆ ವಿಶ್ವವಿದ್ಯಾನಿಲಯದ ಪ್ರಾಚೀನ ಕಟ್ಟಡಗಳು, ಪಾರಂಪರಿಕ ಕಟ್ಟಡಗಳು ಹಾಗೂ ಇನ್ನಿತರೇ ಕಟ್ಟಡಗಳನ್ನು ದೀಪಾಲಂಕೃತಗೊಂಡಂತೆ ವೈಭವಯುತವಾಗಿ ಚಿತ್ರಿಸಿಕೊಳ್ಳಲಾಗುತ್ತದೆ. ಹಾಗಾಗಿ ಹಗಲು ಮತ್ತು ರಾತ್ರಿ ವೇಳೆಯ ಚಿತ್ರೀಕರಣಕ್ಕಾಗಿ ಪ್ರತ್ಯೇಕವಾದ ಹಾಗೂ ಇನ್ನು ಹೆಚ್ಚಿನ ಬಾಡಿಗೆ ದರ ನಿಗದಿ ಪಡಿಸಬಹುದಾಗಿರುತ್ತದೆ. ಹೆಚ್ಚಿನ ಬಾಡಿಗೆ ದರ ನಿಗದಿ ಪಡಿಸುವುದರಿಂದ ವಿಶ್ವವಿದ್ಯಾನಿಲಯ ನಿಧಿಗೆ ಇನ್ನು ಹೆಚ್ಚಿನ ಶುಲ್ಕ ಸಂಗ್ರಹವಾಗುತ್ತದೆ. ಆದುದರಿಂದ ಮೇಲ್ಕಂಡ ನ್ಯೂನ್ಯತೆಗಳ ಬಗ್ಗೆ ಗಮನಹರಿಸಿ, ಕೂಡಲೇ ಈ ಬಗ್ಗೆ ಕ್ರಮವಹಿಸಿ ಅನುಪಾಲನಾ ವರದಿ ಸಲ್ಲಿಸಲು ಸೂಚಿಸಿದೆ. | ಮೈಸೂರುರವರಿಂದ ದಿನಾಂಕ:**10.06.2017ರಂದು** ನಡೆಯುವ ಕಾರ್ಯಕ್ರಮಕ್ಕೆ ದಿನಾಂಕ:**05.06.2017ರಂದು** ಮಾನ್ಯ ಕುಲಪತಿಗಳು/ಕುಲಸಚಿವರಿಂದ ಕರಡು ಅನುಮೋದನೆಯಾಗಿದ್ದು ದಿನಾಂಕ:**09.06.2017ರಂದು** ರಶೀತಿ **ಸಂಖ್ಯೆ:7382ರಲ್ಲಿ** ನಿರ್ವಹಣಾ ವೆಚ್ಚ ರೂ.7500/–ಗಳನ್ನು ಮಾತ್ರ ಸ್ವೀಕರಿಸಲಾಗಿದೆ.<br><br>3.ರಿಜಿನಾಲ್ಡ್ ವೆಸ್ಲಿ ಗೌರವ ಕಾರ್ಯದರ್ಶಿ ಮೈಸೂರು ಲಿರ್ಟರ್‌ರಿ ಅಸೋಸಿಯೇಷನ್ ಮೈಸೂರು ಇವರಿಂದ ದಿನಾಂಕ:**18.06.2017ರಂದು** ನಡೆಯುವ ಕಾರ್ಯಕ್ರಮಕ್ಕೆ ಮಾನ್ಯ ಕುಲಪತಿಗಳು/ಕುಲಸಚಿವರು ರವರಿಂದ ದಿನಾಂಕ:**17.06.2017ರಂದು** ಕರಡು ಆದೇಶ ಅನುಮೋದನೆಯಾಗಿದ್ದು ಅಂದೇ **ರಶೀತಿ ಸಂಖ್ಯೆ:7408ರಲ್ಲಿ** ನಿರ್ವಹಣಾ ವೆಚ್ಚವಾಗಿ ರೂ.7500/–ಗಳನ್ನು ಮಾತ್ರ ಸ್ವೀಕರಿಸಿದೆ.<br><br>ಕ್ರಮಾಂಕ (2) ಮತ್ತು (3) ರ ಪ್ರಕರಣಗಳಲ್ಲಿ ಕರಡು ಆದೇಶ ಅನುಮೋದನೆಯಾದ ಕೂಡಲೇ ರಶೀದಿ ಮಾಡಿದ್ದು ನಂತರದಲ್ಲಿ ಘಟನೋತ್ತರ ಮಂಜೂರಾತಿ ನೀಡಲಾಗಿರುತ್ತದೆ. ಮುಂದೆ ಈ ರೀತಿ ಆಗದಂತೆ ಸೂಕ್ತ ನಿಗಾವಹಿಸುವಂತೆ ಸಂಬಂಧಪಟ್ಟ ನೌಕರ ಮತ್ತು ಇತರೆ ಅಧಿಕಾರಿಗಳಿಗೆ ಸೂಕ್ತ ಎಚ್ಚರಿಕೆ ನೀಡಲಾಗಿರುತ್ತದೆ.<br>(ಆ) ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿನ ಪ್ರದೇಶಗಳು ಹಾಗೂ ಕಟ್ಟಡಗಳಲ್ಲಿ ವಿದೇಶಿ ಭಾಷಾ ಹಾಗೂ ಭಾರತೀಯ ಭಾಷಾ ಚಲನ ಚಿತ್ರಗಳ ಚಿತ್ರೀಕರಣಕ್ಕಾಗಿ ನಿಗದಿಪಡಿಸುವ ಬಾಡಿಗೆ ದರಕ್ಕೆ ಸಂಬಂಧಿಸಿದಂತೆ ತಮ್ಮ ಸಲಹೆ ಮತ್ತು ಸೂಚನೆಗಳ ಬಗ್ಗೆ ಆದ್ಯ ಗಮನ ನೀಡಿ ಮುಂದಿನ ಆರ್ಥಿಕ ವರ್ಷದಿಂದ ಸದರಿ ವಿಷಯವನ್ನು ಅಂದರೆ ಬೆಳ್ಳಿಗೆ 6ಘಂಟೆಯಿಂದ ಸಂಜೆ 6 ಘಂಟೆವರೆಗೆ ಮತ್ತು ಸಂಜೆ 6 ಘಂಟೆಯಿಂದ ಬೆಳ್ಳಿಗೆ 6 ಘಂಟೆವರೆಗೆ ಚಿತ್ರೀಕರಣಕ್ಕಾಗಿ ಬಾಡಿಗೆ ದರ ನಿಗದಿಪಡಿಸುವ ಸಂಬಂಧ ವಿಶ್ವವಿದ್ಯಾನಿಲಯ ಚಿತ್ರೀಕರಣದ ಸಮಯವನ್ನು ನಿಗಧಿ ಪಡಿಸಿರುವ ಆದೇಶದ ಪ್ರತಿಗಳನ್ನು ಲಗತ್ತಿಸಿ ಸಲ್ಲಿಸಿದೆ. |
| **63. ಅತಿಥಿ ಉಪನ್ಯಾಸಕರುಗಳ ನೇಮಕಾತಿ ಪ್ರಕ್ರಿಯೆ ಕಡತಗಳನ್ನು ಹಾಜರುಪಡಿಸದಿರುವುದು ಹಾಗೂ ನೇಮಕಾತಿ ಪ್ರಕ್ರಿಯೆಯ ನ್ಯೂನ್ಯತೆಗಳು:– (ಆಡಳಿತ ವಿಭಾಗ).**<br><br>2017–18ನೇ ಸಾಲಿನಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ವಿಭಾಗಳು, ಕಾಲೇಜುಗಳು ಸ್ನಾತಕೋತ್ತರ ಕೇಂದ್ರಗಳು ಹಾಗೂ ಅಂಗಸಂಸ್ಥೆಗಳಿಗೆ ಅತಿಥಿ ಉಪನ್ಯಾಸಕರುಗಳನ್ನು ನೇಮಕ | ಮೈಸೂರು ವಿಶ್ವವಿದ್ಯಾನಿಲಯವು ಘಟಕ ಕಾಲೇಜುಗಳು/ ಸ್ನಾತಕೋತ್ತರ ಕೇಂದ್ರಗಳು/ಸಂಸ್ಥೆಗಳು/ ಅಧ್ಯಯನ ವಿಭಾಗಗಳಲ್ಲಿ ಲಭ್ಯವಾಗುವ ವಿಷಯವಾರು ಒಟ್ಟು |

| | |
|---|---|
| ಮಾಡಿ ವೇತನ ಭತ್ಯೆಯನ್ನು ಪಾವತಿ ಮಾಡಿರುವುದು ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾಗಿದೆ. ಅತಿಥಿ ಉಪನ್ಯಾಸಕರುಗಳನ್ನು ನೇಮಕ ಮಾಡಿಕೊಳ್ಳುವಾಗ ವಿಷಯವಾರು /ತರಗತಿವಾರು/ ಸೆಮೀಸ್ಟರ್‌ವಾರು (Semister-wise) ಪಠ್ಯಕ್ರಮದನ್ವಯ ಪಠ್ಯಕ್ರಮ ರಚನಾ ತಜ್ಞರ ಸಮಿತಿ ನಿಗದಿಪಡಿಸಿರುವ ಬೋಧನಾ ಅವಧಿಗನುಗುಣವಾಗಿ ಖಾಯಂ ಬೋಧಕ ವರ್ಗದಿಂದ ಯು.ಜಿ.ಸಿ ನಿಯಮಾವಳಿಯನ್ವಯ ನಿಗದಿಪಡಿಸಿರುವ ಬೋಧನಾ ಅವಧಿಗಳನ್ವಯ ಲಭ್ಯವಿರುವ ಬೋಧನಾ ಅವಧಿಯ ವಿವರ, ಕೊರತೆ ಇರುವ ಬೋಧನಾ ಅವಧಿ ವಿವರಗಳಿಗೆ ಎದುರಾಗಿ ಅತಿಥಿ ಉಪನ್ಯಾಸಕರುಗಳನ್ನು ನೇಮಕ ಮಾಡಿಕೊಂಡಿರುವ ಕಡತಗಳನ್ನು ಹಾಜರುಪಡಿಸುವಂತೆ ಲೆಕ್ಕಪರಿಶೋಧನಾ ವಿಚಾರಣಾ ಪತ್ರದ ಸಂಖ್ಯೆ:02/2019–20/ದಿನಾಂಕ:22.04.2019, ವಿಚಾರಣಾ ಪತ್ರದ ಸಂಖ್ಯೆ:05/2019–20/ದಿನಾಂಕ;25.04.2019 ಹಾಗೂ ವಿಚಾರಣಾ ಪತ್ರ ಸಂಖ್ಯೆ:24/2019–20/ದಿನಾಂಕ:16.05.2019 ರಲ್ಲಿ ಕೋರಲಾಗಿ, ಹಾಜರುಪಡಿಸಿರುವ ಕೆಲವೊಂದು ಕಡತಗಳನ್ನು ಪರಿಶೀಲಿಸಲಾಗಿ ವಿವಿಧ ಅಧ್ಯಯನ ವಿಭಾಗಗಳಿಂದ ವಿಷಯವಾರು ಅಗತ್ಯವಿರುವ ಅತಿಥಿ ಉಪನ್ಯಾಸಕರುಗಳನ್ನು ನೇಮಕ ಮಾಡಿಕೊಳ್ಳುವ ಬಗ್ಗೆ ಕೋರಿರುವ ಕಡತಗಳು ಹಾಗೂ ನೇಮಕಾತಿ ಆದೇಶಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸಿದ್ದು ವಿಷಯವಾರು/ತರಗತಿವಾರು/ಸೆಮೀಸ್ಟರ್‌ವಾರು ಪಠ್ಯಕ್ರಮ ರಚನಾ ತಜ್ಞರ ಸಮಿತಿಯು ನಿಗದಿಪಡಿಸಿರುವ ಬೋಧನಾ ಅವಧಿಗಳಿಗೆ ಅನುಗುಣವಾಗಿ ಖಾಯಂ ಬೋಧಕರು ಲಭ್ಯವಿರುವ ಬೋಧನಾ ಅವಧಿಗಳ ವಿವರಗಳ ಕೊರತೆ ಇರುವ ಬೋಧನಾ ಅವಧಿಗಳಿಗೆ ಅಥಿತಿ ಉಪನ್ಯಾಸಕರುಗಳನ್ನು ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ–2000 ರ ನಿಯಮ–55 ಮತ್ತು ನಿಯಮ–56 ರನ್ವಯ ನೇಮಕಾತಿ ಪ್ರಕ್ರಿಯೆ ಕೈಗೊಂಡಿರುವ ಕಡತಗಳನ್ನು ಹಾಜರುಪಡಿಸಿರುವುದಿಲ್ಲ. ಇದರಿಂದಾಗಿ ವಿಶ್ವವಿದ್ಯಾನಿಲಯದಲ್ಲಿ ಅಗತ್ಯವಿಲ್ಲದಿದ್ದರೂ ಅತಿಥಿ ಉಪನ್ಯಾಸಕರನ್ನು ನೇಮಕ ಮಾಡಿಕೊಂಡು ಹಣ ಪಾವತಿಸುತ್ತಿರುವುದರಿಂಧ ವಿಶ್ವವಿದ್ಯಾನಿಲಯಕ್ಕೆ ಅನಗತ್ಯ ಆರ್ಥಿಕ ಹೊರೆ ಉಂಟಾಗಿದೆ. ಈ ಸಂಬಂಧ ಅಗತ್ಯ ಆಡಳಿತಾತ್ಮಕ ಕ್ರಮ ಕೈಗೊಳ್ಳಲು ಸೂಚಿಸಿದೆ. | ಬೋಧನಾ ಕಾರ್ಯಭಾರದಲ್ಲಿ ಖಾಯಂ ಅಧ್ಯಾಪಕರಿಗೆ ಮತ್ತು ಸಂಶೋಧನಾ ವಿದ್ಯಾರ್ಥಿಗಳಿಗೆ ನಿಯಮಾನುಸಾರ ಹಂಚಿಕೆ ಮಾಡಲಾಗುತ್ತಿದೆ. ಆಯಾಯ ವಿಷಯಗಳ ವಿಭಾಗಗಳಲ್ಲಿ ಅಧ್ಯಾಪಕರುಗಳ ವಯೋನಿವೃತ್ತಿ ಹಾಗೂ ಕೋರ್ಸುಗಳ ನಿರ್ವಹಣೆ ಕುರಿತು ಲಭ್ಯವಾಗುವ ಹೆಚ್ಚುವರಿ ಬೋಧನಾ ಕಾರ್ಯಭಾರಕ್ಕೆ ಯುಜಿಸಿ ನಿಯಮಾನುಸಾರ ಆಯಾಯ ವಿಭಾಗಗಳ ಮುಖ್ಯಸ್ಥರುಗಳು ನೀಡುವ ವಿಷಯವಾರುಗಳ ಹೆಚ್ಚುವರಿ ಬೋಧನಾ ಕಾರ್ಯಭಾರದ ಆಧಾರದ ಮೇಲೆ ಪತ್ರಿಕಾ ಪ್ರಕಟಣೆಯನ್ನು ನೀಡಿ ಅರ್ಹತೆ/ಸೇವಾ ಅನುಭವದ ಆಧಾರದ ಮೇಲೆ ವಿಷಯವಾರು ವಾಕ್–ಇನ್–ಇಂಟರ್‌ವ್ಯೂವ್ ಪದ್ಧತಿಯಲ್ಲಿ ರೋಸ್ಟರ್ ನಿಯಮವನ್ನು ಪಾಲಿಸುವ ಮೂಲಕ ಸಂದರ್ಶನವನ್ನು ನಡೆಸಿ 04, 08 ಮತ್ತು ಗರಿಷ್ಠ 12 ಗಂಟೆಗಳ ಕಾರ್ಯಭಾರವನ್ನು ಹಂಚಿಕೆ ಮಾಡಿ ಸಂಭಾವನೆ ಆಧಾರದ ಮೇಲೆ **ಅತಿಥಿ ಉಪನ್ಯಾಸಕರುಗಳನ್ನು** 2017–18ನೇ ಸಾಲಿಗೆ ಆಹ್ವಾನಿಸಲಾಗಿರುತ್ತದೆ. ಪ್ರತಿ ವರ್ಷ ಈ ರೀತಿ ಸಂದರ್ಶನವನ್ನು ಏರ್ಪಡಿಸಿ, ಆಯ್ಕೆ ಮಾಡಲು ಸಮಯಾವಕಾಶ ಇರುವುದಿಲ್ಲವಾದ್ದರಿಂದ ಆಯಾಯ ಅಧ್ಯಯನ ವಿಭಾಗಗಳ ವಿಭಾಗಾಧ್ಯಕ್ಷರು ಸಲ್ಲಿಸುವ ಕಾರ್ಯಭಾರದ ಆಧಾರದ ಮೇಲೆ ಯು.ಜಿ.ಸಿ ನಿಯಮಾನುಸಾರ ಅರ್ಹ ಅಭ್ಯರ್ಥಿಗಳನ್ನು ವಿದ್ಯಾರ್ಥಿಗಳಿಗೆ ಯಾವುದೇ ರೀತಿಯಲ್ಲಿ ಪಾಠಪ್ರವಚನಗಳಿಗೆ ತೊಂದರೆಯಾಗದಂತೆ ಶೈಕ್ಷಣಿಕ ವರ್ಷ ಮುಗಿದ ನಂತರ ಕೆಲಸದಿಂದ ಬಿಡುಗಡೆಗೊಳಿಸಿ ಅರ್ಹರನ್ನು ಮಾತ್ರವೇ ಮುಂದುವರೆಸಲಾಗುತ್ತಿದೆ.<br><br>ವಿದ್ಯಾರ್ಥಿಗಳ ಪಾಠಪ್ರವಚನಕ್ಕೆ ತೊಂದರೆಯಾಗಬಾರದೆನ್ನುವ ಹಿತದೃಷ್ಟಿಯಿಂದ ಮತ್ತು ವಿದ್ಯಾರ್ಥಿಗಳ ಶೈಕ್ಷಣಿಕ ಅಭ್ಯಾಸದ ಮಟ್ಟವನ್ನು ಉನ್ನತೀಕರಿಸುವ ನಿಟ್ಟಿನಲ್ಲಿ ಹಾಗೂ ವಿಶ್ವವಿದ್ಯಾನಿಲಯಕ್ಕೆ ಈ ವರೆವಿಗೂ ನೇರ ನೇಮಕಾತಿಗಳನ್ನು ಮಾಡಿಕೊಳ್ಳಲು ಅನುಮತಿಸಿಗದೇ ಇರುವುದರಿಂದಲೂ ಮತ್ತು ಸಕಾಲದಲ್ಲಿ ವಿದ್ಯಾರ್ಥಿಗಳಿಗೆ ಪಠ್ಯಕ್ರಮವನ್ನು ಪೂರ್ಣಗೊಳಿಸುವ ಸಲುವಾಗಿ ಪ್ರತಿಭಾನ್ವಿತ ಅತಿಥಿ ಉಪನ್ಯಾಸಕರುಗಳನ್ನು ರೋಸ್ಟರ್ ನಿಯಮದಡಿಯಲ್ಲಿ ನೇಮಿಸಿಕೊಳ್ಳಲಾಗಿರುತ್ತದೆ. ಸದರಿ ವೆಚ್ಚವು ವಿಶ್ವವಿದ್ಯಾನಿಲ ಯದ ಶೈಕ್ಷಣಿಕ ಗುಣಮಟ್ಟ ಹಾಗೂ ವಿದ್ಯಾರ್ಥಿಗಳಿಗೆ ಭೋಧನಾ ಕಾರ್ಯದಲ್ಲಿ ಪ್ರಗತಿ ಸಾಧಿಸುವ ವೆಚ್ಚವಾಗಿರುವುದಾಗಿ ನಿವೇದಿಸಿದೆ. |
| **64. ತಾತ್ಕಾಲಿಕ/ಸಂಚಿತ ವೇತನದಡಿಯಲ್ಲಿ ಬೋಧಕೇತರ ನೌಕರರನ್ನು ನೇಮಕಾತಿ ಮಾಡಿಕೊಂಡಿರುವ ನೇಮಕಾತಿ ಪ್ರಕ್ರಿಯೆ ಕಡತಗಳನ್ನು ಹಾಜರುಪಡಿಸದಿರುವುದು:–(ಆಡಳಿತ ವಿಭಾಗ)**<br><br>ಮೈಸೂರು ವಿಶ್ವವಿದ್ಯಾನಿಲಯದ ಅಧೀನಕ್ಕೊಳಪಡುವ ಎಲ್ಲಾ ಕಛೇರಿಗಳು, ಸಂಸ್ಥೆಗಳು ಪ್ರಾದೇಶಿಕ ಕೇಂದ್ರಗಳು, ಕಾಲೇಜುಗಳಿಗೆ 1994–95 ರಿಂದ 2017–18ನೇ ಸಾಲುಗಳವರೆಗೆ ತಾತ್ಕಾಲಿಕ ಬೋಧಕೇತರ ನೌಕರರುಗಳನ್ನು ನೇಮಕ ಮಾಡಿಕೊಂಡು ವೇತನ ಪಾವತಿಸಿರುವುದನ್ನು | ಮೈಸೂರು ವಿಶ್ವವಿದ್ಯಾನಿಲಯದ ಕಾಪರ್ಡ್‌ಭವನದ ವಿಭಾಗಗಳಾದ ಆಡಳಿತ, ಪರಿಕ್ಷಾಂಗ ಮತ್ತು ಹಣಕಾಸು ವಿಭಾಗ ಹಾಗೂ ವಿಶ್ವವಿದ್ಯಾನಿಲಯದ ಅಧೀನಕೊಳ್ಳಪಡುವ ಎಲ್ಲಾ ಅಧ್ಯಯನ ವಿಭಾಗಗಳು ಪ್ರಸಾರಾಂಗ ಮತ್ತು ಮುದ್ರಣಾಲಯ ಪ್ರಾದೇಶಿಕ ಕೇಂದ್ರಗಳು |

| | |
|---|---|
| ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾಗಿದ್ದು, ಬೋಧಕೇತರ ನೌಕಕರುಗಳ ಮಂಜೂರಾತಿ ಹುದ್ದೆಗಳ ವಿವರಗಳನ್ನು ಹಾಗೂ ಮಂಜೂರಾತಿ ಹುದ್ದೆಗಳಿಗೆ ಎದುರಾಗಿ ಖಾಯಂ ನೌಕರರುಗಳ ವಿವರಗಳು, ಖಾಲಿ ಇರುವ ಹುದ್ದೆಗಳಿಗೆ ಎದುರಾಗಿ ತಾತ್ಕಾಲಿಕ ನೌಕರರನ್ನು 1994–95 ರಿಂದ 2017–18ನೇ ಸಾಲುಗಳವರೆಗೆ ನೇಮಕಾತಿ ಪ್ರಕ್ರಿಯೆಯನ್ನು ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ–2000ರ ನಿಯಮ 56 ಮತ್ತು 57 ರನ್ವಯ ನೇಮಕಾತಿ ಪ್ರಕ್ರಿಯೆ ಕೈಗೊಂಡಿರುವ ಕಡತಗಳನ್ನು ಹಾಜರುಪಡಿಸುವಂತೆ ಲೆಕ್ಕ ಪರಿಶೋಧನಾ ವಿಚರಣಾ ಪತ್ರ ಸಂಖ್ಯೆ:17/03.05.2019 ಮತ್ತು 35/20.05.2019 ಒಟ್ಟು 2 ವಿಚಾರಣಾ ಪತ್ರಗಳಲ್ಲಿ ಕೋರಿರುವ ಕಡತಗಳನ್ನು ಹಾಜರುಪಡಿಸುವಂತೆ ಕೋರಲಾಗಿ ನೇಮಕಾತಿ ಪ್ರಕ್ರಿಯೆ ಕಡತಗಳನ್ನು ಹಾಜರುಪಡಿಸಿರುವುದಿಲ್ಲ. ಈ ಕುರಿತು ಸಂಬಂಧಿಸಿದ ಅಧಿಕಾರಿಗಳು ಮತ್ತು ಸಿಬ್ಬಂದಿಗಳ ಮೇಲೆ ಆಡಳಿತಾತ್ಮಕ ಕ್ರಮವನ್ನು ಕೈಗೊಳ್ಳಲು ಸೂಚಿಸಿದೆ. | ಹಾಗೂ ಕಾಲೇಜುಗಳ ಕಛೇರಿ ಕೆಲಸ ಕಾರ್ಯಗಳ ನಿರ್ವಹಣೆಗಾಗಿ ಭೋಧಕೇತರ ನೌಕರರುಗಳನ್ನು 1994–95 ರಿಂದ 2017–18ನೇ ಸಾಲಿನವರೆಗೆ ತಾತ್ಕಾಲಿಕವಾಗಿ ಒಂದು ವರ್ಷದ ಅವಧಿಗೆ ನೇಮಕಾತಿ ಮಾಡಿಕೊಂಡು, ಕಛೇರಿ ಕೆಲಸ ಕಾರ್ಯಗಳನ್ನು ನಿರ್ವಹಿಸುತ್ತಿರುವುದಾಗಿ ತಮ್ಮಲ್ಲಿ ನಿವೇದಿಸುತ್ತಾ, ಖಾಯಂ ನೌಕರರುಗಳ ವಯೋಸಹಜ ನಿವೃತ್ತಿಯಿಂದ ತೆರವಾದ ಹುದ್ದೆಗೆದುರಾಗಿ ನೇರ ನೇಮಕಾತಿ ಮಾಡಿಕೊಳ್ಳಲು ಅನುಮತಿ ಸಿಗದ ಕಾರಣದಿಂದ ಹಾಗೂ ವಿಶ್ವವಿದ್ಯಾನಿಲಯದಲ್ಲಿ ಹೊಸ ಹೊಸ ಅಧ್ಯಯನ ವಿಭಾಗಗಳನ್ನು ತೆರೆದಿದ್ದು ಇವುಗಳ ಕಛೇರಿ ಕೆಲಸ ಕಾರ್ಯಗಳಿಗೆ ಭೋಧಕೇತರ ನೌಕರರುಗಳ ಅವಶ್ಯಕತೆ ಇರುವುದರಿಂದ ತಾತ್ಕಾಲಿಕ ಭೋಧಕೇತರ ನೌಕರರನ್ನು ನೇಮಕ ಮಾಡಿಕೊಂಡು ಒಂದು ವರ್ಷಪೂರ್ಣಗೊಂಡ ಕೂಡಲೇ ಸೇವೆಯಿಂದ ಬಿಡುಗಡೆಗೊಳಿಸಿ 2–3 ದಿನಗಳ ನಂತರದಲ್ಲಿ ಅವರುಗಳನ್ನೆ ತಾತ್ಕಾಲಿಕವಾಗಿ ಪುನರ್ ನೇಮಕ ಮಾಡಿಕೊಂಡು ಕಛೇರಿ ಕೆಲಸ ಕಾರ್ಯಗಳನ್ನು ಸುಗಮವಾಗಿ ನಿರ್ವಹಿಸುತ್ತಿರುವುದಾಗಿ ತಮ್ಮಲ್ಲಿ ನಿವೇದಿಸಿದೆ. |
| **65. ಕರ್ನಾಟಕ ನಾಗರೀಕ ಸೇವಾ ನಿಯವಾವಳಿಗಳು ಮತ್ತು ಕರ್ನಾಟಕ ಆರ್ಥಿಕ ಸಂಹಿತೆ ಅನುಚ್ಛೇಧಗಳನ್ನು ಉಲ್ಲಂಘಿಸಿ ಸೇವಾ ವಹಿಗಳಲ್ಲಿ ಜನ್ಮದಿನಾಂಕವನ್ನು ದೃಢಪಡಿಸಲು ಮುಖ್ಯಾಧಿಕಾರಿಯವರು ಸಹಿ ಮಾಡದಿರುವುದು:– (ಆಡಳಿತ ವಿಭಾಗ)**<br><br>ಆಡಳಿತ ಶಾಖೆಯ ಪ್ರಥಮ ದರ್ಜೆ ಸಹಾಯಕರುಗಳ ಸೇವಾ ವಹಿಗಳನ್ನು ಪರಿಶೋಧಿಸಲಾಗಿ, ಶ್ರೀ.ಮಹೇಶ (2735) ಶ್ರೀ.ಸತ್ಯನಾರಾಯಣ (4419) ಮತ್ತು ಶ್ರೀ.ಪಿ.ಎಸ್.ಕೃಷ್ಣ (4788) ಈ ಮೂರು ಸಿಬ್ಬಂದಿಯವರ ಸೇವಾ ವಹಿಗಳಲ್ಲಿ ಅವರ ಜನ್ಮ ದಿನಾಂಕವನ್ನು ದೃಢಪಡಿಸಿ ಕಛೇರಿಯ ಮುಖ್ಯಾಧಿಕಾರಿಯವರು ಸಹಿ ಮಾಡಿರುವುದಿಲ್ಲ.<br><br>ಕರ್ನಾಟಕ ನಾಗರೀಕ ಸೇವಾ ನಿಯಮಾವಳಿ–405 ರನ್ವಯ ಕಛೇರಿಯ ಮುಖ್ಯಸ್ಥರು ಜನ್ಮ ದಿನಾಂಕವನ್ನು ದಾಖಲೆಗಳ ಸಾಕ್ಷ್ಯಗಳೊಡನೆ ಪರಿಶೀಲಿಸವೇಕು ಹಾಗೂ ಅದನ್ನು ದೃಢೀಕರಿಸಬೇಕು. ಹಾಗೆಯೇ ಕರ್ನಾಟಕ ಆರ್ಥಿಕ ಸಂಹಿತೆ–1958 ಅನುಚ್ಛೇಧ–404(4) ರನ್ವಯ ಜನನ ದಿನಾಂಕವನ್ನು ನಿರ್ಧಾರ ನಾಡುವ ಅಧಿಕಾರಿಯು ಸರ್ಕಾರಿ ನೌಕರನಿಂದ ಕರ್ನಾಟಕ ಆರ್ಥಿಕ ಸಂಹಿತೆ–1958 ಅನುಚ್ಛೇಧ–404(3) ರಲ್ಲಿ ಸೂಚಿಸಿರುವಂತೆ ಅವನಿಂದ ಸ್ವೀಕರಿಸಲಾದ ದಾಸ್ತಾವೇಜುವಿನಲ್ಲಿರುವಂತೆ ಅವನ ಜನನ ದಿನಾಂಕವನ್ನು ಅವನ ಸೇವಾ ವಹಿಯಲ್ಲಿ ಬರೆದು ಅದಕ್ಕೆ ಕಛೇರಿಯ ಮುಖ್ಯಾಧಿಕಾರಿಯವರು ತನ್ನ ಸಹಿ ಮಾಡಬೇಕಾಗಿರುತ್ತದೆ. | ಕಂಡಿಕೆಯಲ್ಲಿ ಪ್ರಸ್ತಾಪಿಸಿರುವ ನೌಕರರುಗಳ ಸೇವಾ ವಹಿಗಳಲ್ಲಿ ಜನ್ಮ ದಿನಾಂಕವನ್ನು ಕರ್ನಾಟಕ ಆರ್ಥಿಕ ಸಂಹಿತೆ–1958ರ ನಿಯಾಮಾನುಸಾರ ಹಾಗೂ ವಿಚಾರಣೆ ಪತ್ರ ಸಂಖ್ಯೆ:29/2019–20 ದಿನಾಂಕ:18.05.2019 ರಲ್ಲಿ ನೀಡಿರುವ ಅನುಸರಣಾ ವರದಿಯ ರೀತ್ಯಾ ಕ್ರಮವಹಿಸಿ ಸದರಿ ನೌಕರರುಗಳ ಸೇವಾವಹಿಗಳಲ್ಲಿ ಅವರುಗಳ ಜನ್ಮ ದಿನಾಂಕವನ್ನು ಧೃಢೀಕರಿಸಿ ನಿರ್ವಾಹಿಸಲಾಗಿರುತ್ತದೆ ಹಾಗೂ ಸೇವಾ ವಹಿಗಳ ಜೆರಾಕ್ಸ್ ಪ್ರತಿಗಳನ್ನು ಲಗತ್ತಿಸಿ ಸಲ್ಲಿಸುತ್ತಾ ತಮ್ಮ ಸಲಹೆ ಮತ್ತು ಮಾರ್ಗದರ್ಶನದಂತೆ ಸೇವಾ ವಹಿಗಳನ್ನು ನಿರ್ವಹಿಸುವ ಬಗ್ಗೆ ಅಗತ್ಯ ಕ್ರಮವಹಿಸಲಾಗಿರುತ್ತದೆ. |

ಸೇವಾ ವಹಿಗಳಲ್ಲಿ ಜನ್ಮ ದಿನಾಂಕದ ಈ ನ್ಯೂನತೆಯ ಬಗ್ಗೆ ಪ್ರಸ್ತಾಪಿಸಿ ವಿಚಾರಣಾ ಪತ್ರ ಸಂಖ್ಯೆ:29/2019–20ನ್ನು ದಿನಾಂಕ:18.05.2019 ರಂದು ನೀಡಲಾಗಿ, ಸಹಾಯಕ ಕುಲಸಚಿವರು (ಸಾಮಾನ್ಯ) ರವರು ದಿನಾಂಕ;18.05.2019 ರಂದು ಕ್ರಮ ಕೈಗೊಳ್ಳಲಾಗುವುದು ಎಂದು ಅನುಸರಣಾ ವರದಿ ನೀಡಿದ್ದು ಇದರಂತೆ ಕ್ರಮವಹಿಸುವುದು.

**66. 2017–18ನೇ ಸಾಲಿನಲ್ಲಿ ಈಜುಕೊಳದ ಟಿಕೇಟ್‌ಗಳನ್ನು ಹಾಗೂ ಪಾಸ್‌ಗಳನ್ನು ಮಾರಾಟ ಮಾಡಿದ್ದಕ್ಕೆ ಸ್ವೀಕರಿಸಿದ ಹಣವನ್ನು ಪೂರ್ಣ ಜಮಾ ಮಾಡದಿರುವುದು:– (ಆಡಳಿತ ವಿಭಾಗ)**

2017–18ನೇ ಸಾಲಿನಲ್ಲಿ ಈಜುಕೊಳದ ಟಿಕೇಟ್‌ಗಳನ್ನು ಮತ್ತು ಪಾಸ್‌ಗಳನ್ನು ಸಾರ್ವಜನಿಕರಿಗೆ ಮಾರಾಟ ಮಾಡಿದ್ದು ಈ ಸಂಬಂಧ ಲೆಕ್ಕಪತ್ರ ದಾಖಲೆಗಳನ್ನು ಪರಿಶೀಲಿಸಲಾಗಿ ಸ್ವೀಕರಿಸಿದ ಹಣವನ್ನು ಪೂರ್ಣ ಜಮಾ ಮಾಡದೇ ಭಾಗಶಃ ಮಾತ್ರ ಜಮೆ ಮಾಡಲಾಗಿದೆ. ವಿವರಗಳು ಈ ಕೆಳಕಂಡಂತಿದೆ ಹಾಗೂ 2017–18ನೇ ಸಾಲಿನಲ್ಲಿ ಉಪಯೋಗಿಸಿದ ಟಿಕೇಟ್‌ಗಳು, ಪಾಸ್‌ಗಳು, ರಶೀದಿ ಪುಸ್ತಕಗಳ ವಿವರಗಳನ್ನು ಹಾಗೂ ಸ್ವೀಕರಿಸಿದ ಹಣದ ವಿವರವನ್ನು **ಅನುಬಂಧ–32** ರಲ್ಲಿ ವಿವರಿಸಲಾಗಿದೆ.

| | **ಮೊತ್ತ (ರೂ.ಗಳಲ್ಲಿ)** |
|---|---|
| 1) ಈಜುಕೊಳದ ವಿವಿಧ ಬಗೆಯ ಟಿಕೇಟ್‌ಗಳು ಮತ್ತು ಪಾಸ್ಗಳ ಮಾರಾಟದಿಂದ ಸ್ವೀಕರಿಸಿದ ಹಾಗೂ ರಶೀದಿಗಳ ಮೂಲಕ ನಗದು ಪುಸ್ತಕಕ್ಕೆ ಸ್ವೀಕೃತಿಗೊಂಡ 2017–18ನೇ ಸಾಲಿನ ಒಟ್ಟು ಸ್ವೀಕೃತಿ | 4,30,300 |
| 2) ಉಪಕುಲಸಚಿವ (ಸಾಮಾನ್ಯ) ವಿಶ್ವವಿದ್ಯಾನಿಲಯ ಮೈಸೂರು ರವರ ಕಛೇರಿ ಪತ್ರ ಸಂಖ್ಯೆ: ಜಿಎಲ್3/74/99–2000/ದಿನಾಂಕ:22.03.2018 ರನ್ವಯ ವಿಶ್ವವಿದ್ಯಾನಿಲಯದ ಈಜಿಕೊಳದ ಪ್ರವೇಶ ದರವನ್ನು ಪರಿಷ್ಕರಿಸಿದ್ದು, ಇದರಂತೆ ದಿನಾಂಕ:22.03.2018 ರಿಂದ ಸಾರ್ವಜನಿಕರಿಂದ (ವಯಸ್ಕರಿಗೆ) ರೂ.60/–ಗಳನ್ನು ಸ್ವೀಕರಿಸುವ ಬದಲು ರೂ.40/–ಗಳನ್ನು ಮಾತ್ರ ಸ್ವೀಕರಿಸಿದ್ದು, ಟಿಕೇಟ್ ಸಂಖ್ಯೆ:33134/22.03.2018 ರಿಂದ ಟಿಕೇಟ್ ಸಂಖ್ಯೆ:33700/23.03.2018 ರ ವರೆಗೆ ಒಟ್ಟು 567 ಟಿಕೇಟ್‌ಗಳ ವ್ಯತ್ಯಾಸ ರೂ.20/–ರಂತೆ ರೂ.11,340/– ಹಾಗೂ ಮಕ್ಕಳ ಟಿಕೇಟ್ ರೂ.40/–ಗಳನ್ನು ಸ್ವೀಕರಿಸುವ ಬದಲು ರೂ.35/–ಗಳನ್ನು ಮಾತ್ರ ಸ್ವೀಕರಿಸಿದ್ದು, ಟಿಕೇಟ್ ಸಂಖ್ಯೆ:42770/22.03.2018 ರಿಂದ ಟಿಕೇಟ್ ಸಂಖ್ಯೆ:42837/22.03.2018 ರವರೆಗೆ ಒಟ್ಟು 68 ಟಿಕೇಟ್‌ಗಳ | |

2017–18ನೇ ಸಾಲಿನಲ್ಲಿ ಈಜುಕೊಳದ ಟಿಕೇಟ್‌ಗಳು ಮತ್ತು ಪಾಸ್‌ಗಳನ್ನು ಸಾರ್ವಜನಿಕರಿಗೆ, ವಿದ್ಯಾರ್ಥಿಗಳಿಗೆ ಮತ್ತು ಉದ್ಯೋಗಿಗಳಿಗೆ ಮಾರಾಟ ಮಾಡಿದ್ದ ಸಂಬಂಧವಾಗಿ **ಅನುಬಂಧ–32ರಲ್ಲಿ** ವಿವರಿಸುವಂತೆ ಹಾಗೂ ಕಂಡಿಕೆಯ ಕ್ರಮಾಂಕ (01) ರಲ್ಲಿನ ಮೊತ್ತದ ಬಗ್ಗೆ ಕೆಳಗಿನಂತಿದೆ ವಿವರಿಸಿದೆ.

| | |
|---|---|
| 2017–18ನೇ ಸಾಲಿನಲ್ಲಿ ಒಟ್ಟು ಸ್ವೀಕೃತಿ ಮೊತ್ತ | ರೂ.4,30,300/– |
| 2017–18ನೇ ಸಾಲಿನಲ್ಲಿ ಜಿ.ಆರ್.ಎ ಖಾತೆಗೆ ಜಮಾ ಮಾಡಿರುವುದು. | ರೂ.3,82,890/– |
| ಬಾಕಿ ಮೊತ್ತ | ರೂ.47,410/– |
| ದಿನಾಂಕ:31.03.2018ರಂದು ಸ್ವೀಕೃತವಾದ ಮೊತ್ತವನ್ನು ದಿನಾಂಕ:03.04.2018 ರಂದು ಜಿ.ಆರ್.ಎ ಖಾತೆಗೆ ಜಮಾ ಮಾಡಿರುವ ಮೊತ್ತ | ರೂ.46,300/– |
| ಉಳಿಕೆ ಮೊತ್ತ | ರೂ.1,110/– |
| ***ಜಮಾ ಮಾಡದೇ ಉಳಿದಿರುವ ಬಾಕಿ ಮೊತ್ತವನ್ನು ಚಲನ್ ನಂ:–35577 ದಿನಾಂಕ:22.04.2021 ರಂದು ಜಿ,ಆರ್,ಎ ಖಾತೆಗೆ ಜಮಾ ಮಾಡಲಾಗಿದೆ.** | ರೂ.1,110/– |
| **ಉಳಿಕೆ** | **--** |

**ಕಂಡಿಕೆಯ ಕ್ರಮಾಂಕ 01ರಲ್ಲಿ** 2017–18ನೇ ಸಾಲಿನ ಒಟ್ಟು ಸ್ವೀಕೃತಿ ಮೊತ್ತ ರೂ.4,30,300/–ಗಳಲ್ಲಿ ಸದರಿ ಸಾಲಿಗೆ ಜಿ,ಆರ್,ಎ ಖಾತೆಗೆ ಜಮಾ ಮಾಡಿರುವ ಒಟ್ಟು ಮೊತ್ತ ರೂ.3,82,890/–ಗಳು. ಬಾಕಿ ಉಳಿದಿರುವ ಮೊತ್ತ ರೂ.47,410/–ಗಳನ್ನು **ದಿನಾಂಕ:03.04.2018 ರಂದು ರೂ.46,300 (ದಿನಾಂಕ:31.03.2018ರ ಮೊತ್ತ) + ರೂ.49010 (ದಿನಾಂಕ:02.04.2018ರ ಮೊತ್ತ)=**ಸೇರಿದಂತೆ **ಒಟ್ಟು ಮೊತ್ತ ರೂ.95,310/–ಗಳನ್ನು ಜಮಾ** ಮಾಡಿರುವ ಬ್ಯಾಂಕ್ ಸ್ಕ್ರೋಲ್ **ಪ್ರತಿ ಹಾಗೂ ಚಲನ್ ನಂ:35577 ದಿನಾಂಕ:22.04.2021 ರಂದು ರೂ.1,110/–ಗಳನ್ನು** ಜಮಾ ಮಾಡಿರುವ ಚಲನ್ ಪ್ರತಿ ಮತ್ತು ಬ್ಯಾಂಕ್ ಸ್ಕ್ರೋಲ್ ಪ್ರತಿಯನ್ನು ಈ ಕೂಡ ಲಗತ್ತಿಸಿ ಸಲ್ಲಿಸಿದೆ.

<table>
<tr>
<td>
<table>
<tr><td>ವ್ಯತ್ಯಾಸ ರೂ.5/– ರಂತೆ ರೂ.340/–ಗಳನ್ನು ಹೀಗೆ ಒಟ್ಟಾರೆ ರೂ.11,680/–ಗಳನ್ನು ಸಾರ್ವಜನಿಕರಿಂದ ಕಡಿಮೆ ಸ್ವೀಕರಿಸಿದೆ.</td><td></td></tr>
<tr><td>ಕಡಿಮೆ ಸ್ವೀಕೃತಿ</td><td>(+)11,680</td></tr>
<tr><td>2017–18ನೇ ಸಾಲಿನ ಒಟ್ಟು ಸ್ವೀಕೃತಿ</td><td>4,41,980</td></tr>
<tr><td>2017–18ನೇ ಸಾಲಿನಲ್ಲಿ ಒಟ್ಟು ಜಮೆ</td><td>(–)3,82,890</td></tr>
<tr><td>ಸ್ವೀಕೃತಿಗಳನ್ನು ಪೂರ್ಣ ಜಮೆ ಮಾಡದಿರುವುದು/ಕಡಿಮೆ ಇರಸಾಲು ಮಾಡಿರುವುದು</td><td>59,090</td></tr>
</table>
<br>
ಮೇಲ್ಕಂಡ ವಿವರಗಳಂತೆ ಒಟ್ಟು ರೂ.59,090/–ಗಳು ಕಡಿಮೆ ಇರಸಲಾಗಿದ್ದು ಕೂಡಲೆ ಜಮಾ ಮಾಡಿ ಮೂಲ ಜಮಾ ಚಲನನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸುವಂತೆ ವಿಚಾರಣಾ ಪತ್ರ ಸಂಖ್ಯೆ:26/2019–20ನ್ನು ದಿನಾಂಕ:18.05.2019 ರಂದು ನೀಡಿದರೂ ಸಹ ಯವುದೇ ಕ್ರಮಕೈಗೊಂಡಿರುವುದಿಲ್ಲ. ಈ ಆರ್ಥಿಕ ನಷ್ಟಕ್ಕೆ ಸಂಬಂಧಸಿದವರ ಮೇಲೆ ಕರ್ನಾಟಕ ಆರ್ಥಿಕ ಸಂಹಿತೆ ಅನುಚ್ಛೇಧ–369ರ ರೀತ್ಯಾ ಕ್ರಮಕೈಗೊಂಡು ಸಂಬಂಧಿಸಿದವರಿಂದ ರೂ.59,090/–ಗಳ ನಷ್ಟದ ಹಣವನ್ನು ವಸೂಲಿಸಿ, ವಿಶ್ವವಿದ್ಯಾನಿಲಯಕ್ಕೆ ಜಮೆ ಮಾಡಿ, ಮೂಲ ಜಮಾ ಚಲನನ್ನು ಹಾಗೂ ಕೈಗೊಂಡ ಕ್ರಮದ ಬಗ್ಗೆ ವರದಿ ನೀಡಲು ಸೂಚಿಸಿದೆ.
</td>
<td>
ಕಂಡಿಕೆಯ ಕ್ರಮಾಂಕ 02ರಲ್ಲಿ ಕಡಿಮೆ ಸ್ವೀಕೃತಿ ರೂ.11,680/–ಗಳಿಗೆ ಸಂಬಂಧಿಸಿದಂತೆ ವಿಶ್ವವಿದ್ಯಾನಿಲಯದ ಆದೇಶ ಸಂಖ್ಯೆ:–ಜಿ.ಎಲ್3/74/99–2000, ದಿನಾಂಕ:22.03.2018 ರಂದು ಪ್ರವೇಶ ದರವನ್ನು ಪರಿಷ್ಕರಿಸಿದ್ದು ಸದರಿ ಆದೇಶವು ಅಂದೇ ಸಾಯಂಕಾಲ 5:00 ಗಂಟೆಯ ಸಮಯದಲ್ಲಿ ಸ್ವೀಕೃತಗೊಂಡಿದ್ದು ಈಜುಕೊಳದ ಪ್ರವೇಶ ದರದ ಟಿಕೇಟ್‌ಗಳು ಸಾರ್ವಜನಿಕರಿಗೆ ಮತ್ತು ಮಕ್ಕಳುಗಳಿಗೆ ಮೊದಲೇ ವಿತರಿಸಿದರಿಂದ ಹಳೆ ಪ್ರವೇಶ ದರದಲ್ಲಿಯೇ ವಸೂಲಿಸಲಾಗಿರುತ್ತದೆ. ಅಲ್ಲದೆ ಅಧಿಕೃತ ಆದೇಶವನ್ನು ಈಜುಕೊಳದ ಸೂಚನಾ ಫಲಕಕ್ಕೆ ಅಂಟಿಸಿ ತದನಂತರ ಟಿಕೇಟ್‌ಗಳ ಮೇಲೆ ಪರಿಷ್ಕೃತ ದರಗಳನ್ನು ನಮೂದಿಸಲು ಸೀಲು (ಮೊಹರು)ಗಳನ್ನು ಮಾಡಿಸಿ ಸಾರ್ವಜನಿಕರಿಗೆ ಮತ್ತು ಮಕ್ಕಳಿಗೆ ದಿನಾಂಕ; 23.03.2018 ರಿಂದ ವಿಶ್ವವಿದ್ಯಾನಿಲಯದ ಈಜುಕೊಳದ ಪ್ರವೇಶ ದರವನ್ನು ಪರಿಷ್ಕೃತ ಆದೇಶದಂತೆ ಪಡೆಯಲಾಗಿರುತ್ತದೆ, ಎಂಬುದಾಗಿ ನಿವೇದಿಸುತ್ತಾ ಕಂಡಿಕೆಯ ಕ್ರಮ ಸಂಖ್ಯೆ:02ರ ಕಡಿಮೆ ಸ್ವೀಕೃತಿ ಮೊತ್ತ ರೂ.11,680/–ಗಳನ್ನು ತೀರುವಳಿಗೊಳಿಸುವಂತೆ ಹಾಗೂ ರೂ.47,410/– ಮೊತ್ತವನ್ನು ಸಾಮಾನ್ಯ ರೆವಿನ್ಯೂ ಖಾತೆಗೆ ಜಮಾ ಮಾಡಿರುವುದರಿಂದ ಕಂಡಿಕೆಯ ಒಟ್ಟು ವಸೂಲಾತಿ ಮೊತ್ತ ರೂ.59,090/–ಗಳನ್ನು ತೀರುವಳಿಗೊಳಿಸಬೇಕಾಗಿ ತಮ್ಮಲ್ಲಿ ಕೋರಿದೆ.
</td>
</tr>
<tr>
<td>
<u>67. ಸಫಾಯಿ ಕರ್ಮಚಾರಿಗಳನ್ನು ಹಾಗೂ ಸ್ವಚ್ಛತಾ ಸಿಬ್ಬಂದಿಗಳನ್ನು ನೇಮಕಾತಿ ಮಾಡಿಕೊಂಡು ವೇತನ ಪಾವತಿಸಿರುವುದು.:–(ಹಣಕಾಸು ವಿಭಾಗ)</u>
<br><br>
2017–18ನೇ ಸಾಲಿನ ಲೆಕ್ಕ ತಪಾಸಣೆಯಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಅಧೀನಕ್ಕೊಳಪಟ್ಟಿರುವ ಎಲ್ಲಾ ಕಛೇರಿಗಳು/ಅಧ್ಯಯನ ಸಂಸ್ಥೆಗಳಿಗೆ 40 ಜನ ಸಫಾಯಿ ಕರ್ಮಚಾರಿಗಳನ್ನು ನೇಮಕಾತಿ ಮಾಡಿಕೊಂಡು ತಲಾ ರೂ.17,457/–ಗಳಂತೆ ಒಟ್ಟು ರೂ.46,34,625/–ಗಳನ್ನು ಪಾವತಿಸಲಾಗಿರುವ ಕಡತಗಳನ್ನು ಪರಿಶೀಲಿಸಲಾಗಿದ್ದು, ಸದರಿ ಸಫಾಯಿ ಕರ್ಮಚಾರಿಗಳನ್ನು ನೇಮಕಾತಿ ಮಾಡಿಕೊಳ್ಳುವ ಮೊದಲು ವಿಶ್ವವಿದ್ಯಾನಿಲಯಕ್ಕೆ ಮಂಜೂರಾಗಿರುವ ಸಫಾಯಿ ಕರ್ಮಚಾರಿಗಳ ಹುದ್ದೆಗಳ ವಿವರಗಳು, ಮಂಜೂರಾಗಿರುವ ಹುದ್ದೆಗಳಿಗೆ ಎದುರಾಗಿ ಖಾಯಂ ನೌಕರರುಗಳ ವಿವರಗಳು, ಖಾಲಿ ಇರುವ ಹುದ್ದೆಗಳಿಗೆ ಎದುರಾಗಿ ಹೊರಗುತ್ತಿಗೆ ಮೂಲಕ ನೇಮಕಾತಿ ಮಾಡಿಕೊಳ್ಳಲು ಟೆಂಡರ್ ಪ್ರಕ್ರಿಯೆ ಕೈಗೊಂಡಿರುವ ಕಡತಗಳನ್ನು ಹಾಗೂ ವಿಶ್ವವಿದ್ಯಾನಿಲಯಗಳ ನೇರವಾಗಿ ತಾತ್ಕಾಲಿಗವಾಗಿ ನೇಮಕ ಮಾಡಿಕೊಳ್ಳಲು ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯದಗಳ ಕಾಯ್ದೆ–2000ರ ನಿಯಮ 56 & 57 ರನ್ವಯ ನೇಮಕಾತಿ ಪ್ರಕ್ರಿಯೆ ಕೈಗೊಂಡಿರುವ ಕಡತಗಳನ್ನು ಹಾಜರುಪಡಿಸುವಂತೆ ಲೆಕ್ಕ ತಪಾಸಣಾ ವಿಚಾರಣಾ ಪತ್ರ ಸಂಖ್ಯೆ:115/ದಿನಾಂಕ:26.06.2019ರಲ್ಲಿ ಕೋರಲಾಗಿದ್ದು, ಕೋರಲಾಗಿರುವ ಯಾವಿದೇ ಕಡತಗಳನ್ನು ಹಾಜರುಪಡಿಸದಿರುವುದರಿಂದ ರೂ.46,34,625/–ಗಳನ್ನು ಆಕ್ಷೇಪಣೆಗೆ ಸೂಚಿಸಿದೆ. ವಿವರಗಳನ್ನು ಅನುಬಂಧ–33ರಲ್ಲಿ ಲಗತ್ತಿಸಿದೆ.
</td>
<td>
ವಿಶ್ವವಿದ್ಯಾನಿಲಯದ ಅಧೀನದಲ್ಲಿ ಬರುವ ವಿವಿಧ ವಿಭಾಗ/ಕಛೇರಿಗಳಲ್ಲಿ ಶೌಚಾಲಯ ವಿದ್ಯಾರ್ಥಿನಿಲಯಗಳು ಸ್ನಾನದಗೃಹ ಒಳಚರಂಡಿ ಮುಂತಾದ ಸ್ಥಳಗಳಲ್ಲಿ ಸ್ವಚ್ಛಗೊಳಿಸುವ ಕಾರ್ಯಕ್ಕೆ ಸಫಾಯಿ ಕರ್ಮಚಾರಿಗಳು ಸ್ವಚ್ಛತಾ ಸಿಬಂಧಿಗಳ ಅವಶ್ಯಕತೆಯ ಮೇರೆಗೆ ವಿಶ್ವವಿದ್ಯಾನಿಲಯದ ವತಿಯಿಂದ ನೇಮಕ ಮಾಡಿಕೊಂಡು ಮೇಲೆ ಪ್ರಸ್ತಾಪಿಸಲಾದ ಸ್ಥಳಗಳಿಗೆ ನಿಯುಕ್ತಿ ಮಾಡಿ ಸ್ವಚ್ಛತಾ ಕಾರ್ಯವನ್ನು ಕೈಗೊಳ್ಳಲಾಗಿರುತ್ತದೆ ಈ ಸಂಬಂಧ ಸದರಿ ಸ್ವಚ್ಛತಾ ಸಿಬ್ಬಂಧಿಗಳಿಗೆ 2017–18ನೇ ಸಾಲಿನಲ್ಲಿ ಅಂದರೆ ಸೆಪ್ಟೆಂಬರ್ 2017 ರಿಂದ ಮಾರ್ಚಿ 2018 ರವರೆಗೆ ರೂ.46,34,652/–ಗಳ ಮೊತ್ತವನ್ನು ವೇತನವಾಗಿ ಪಾವತಿಸಲಾಗಿದೆ ಹಾಗೂ ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿ ಸ್ವಚ್ಛತಾ ಕಾರ್ಯವು ನಿರಂತರವಾಗಿ ನಡೆಯುತ್ತಿರುವುದರಿಂದ ಸದರಿ ಸಫಾಯಿ ಕರ್ಮಚಾರಿಗಳು ಹಾಗೂ ಸ್ವಚ್ಛತಾ ಸಿಬ್ಬಂದಿಗಳ ಅವಶ್ಯಕತೆಯಿರುವುದರಿಂದ ಈ ಪ್ರಕ್ರಿಯೆಯನ್ನು ಕೈಗೊಂಡು ವೇತನ ಪಾವತಿಸಲಾಗಿರುತ್ತದೆ.
<br><br>
ಈ ನಿಟ್ಟಿನಲ್ಲಿ ಕಂಡಿಕೆ 67 ರಲ್ಲಿ ಆಕ್ಷೇಪಿಸಿ ಆಕ್ಷೇಪಣೆಯಲ್ಲಿಟ್ಟಿರುವ ಮೊಬಲಗು ರೂ.46,34,625/–ಗಳನ್ನು ಆಕ್ಷೇಪಣೆಯಿಂದ ಕೈ ಬಿಡುವಂತೆ ನಿವೇದಿಸಲಾಗಿದೆ.
</td>
</tr>
</table>

**68. ತಾತ್ಕಾಲಿಕವಾಗಿ ಬೋಧಕ/ಬೋಧಕೇತರ ವರ್ಗದವರ ನೇಮಕಾತಿ ಕುರಿತು:–(ಹಣಕಾಸು ವಿಭಾಗ)**

ಮೈಸೂರು ವಿಶ್ವವಿದ್ಯಾನಿಲಯದ ಹಣಕಾಸು ವಿಭಾಗದ 2017–18ನೇ ಸಾಲಿನ ಲೆಕ್ಕಪರಿಶೋಧನೆಯಲ್ಲಿ ಸಂಚಿತ/ತಾತ್ಕಾಲಿಕ/ಬೋಧಕೇತರ ನೌಕರರ ವೇತನ ವಿವರಗಳನ್ನು ಪರಿಶೀಲಿಸಿದ್ದು, 2017–18ನೇ ಸಾಲಿಗೆ ತಾತ್ಕಾಲಿಕ/ಅತಿಥಿ/ಅರೆಕಾಲಿಕ ಉಪನ್ಯಾಸಕರು ಹಾಗೂ ತಾತ್ಕಾಲಿಕ ಅಧ್ಯಾಪಕೇತರ ನೌಕರರಿಗೆ GRA/SPS/IOE ಶೀರ್ಷಿಕೆಯಡಿ ಒಟ್ಟು ರೂ.21,81,64,389/–ಗಳ ವೇತನವನ್ನು ಪಾವತಿಸಲಾಗಿರುತ್ತದೆ. ಹಾಗೂ ವಾರ್ಷಿಕ ಲೆಕ್ಕಗಳ ಪ್ರಕಾರ ವೆಚ್ಚವನ್ನು ನಮೂದಿಸಲಾಗಿದೆ. 2017–18ನೇ ಸಾಲಿನ ಉಪ ಲೆಕ್ಕಶೀರ್ಷಿಕೆ ಅನುದಾನ ಸಂಖ್ಯೆ 228 ಮತ್ತು 229ರಡಿ ಭರಿಸಲಾದ ವೇತನ ಪಾವತಿ ವಿವರಗಳನ್ನು ಪರಿಶೀಲಿಸಿದಾಗ ತಾತ್ಕಾಲಿಕ ಬೋಧಕ/ಬೋಧಕೇತರ ನೌಕಕರಿಗೆ ಪಾವತಿಸಿದ ಮೊತ್ತ ರೂ.21,36,96,395/–ಗಳಿಗೆ ಮಾತ್ರ ವಿವರಗಳನ್ನು ಲೆಕ್ಕಪರಿಶೀಧನೆಗೆ ನೀಡಲಾಗಿದ್ದು, ಉಳಿಕೆ ಮೊತ್ತ ರೂ.44,67,994/–ಕ್ಕೆ ವೇತನ ಪಾವತಿ ವಿವರಗಳನ್ನು ಲೆಕ್ಕಪರಿಶೋಧನೆಗೆ ಹಾಜೆಉಪಡಿಸಿರುವುದಿಲ್ಲ. ವಾರ್ಷಿಕ ಲೆಕ್ಕದಲ್ಲಿ ದಾಖಲಿಸಿದ ಪ್ರಕಾರ ರೂ.21,81,64,389/– ಗಳಿಗೆ ಘೋಷ್ವಾರೆ ಕೆಲನಂತಿದೆ. ವಿವರವನ್ನು ಅನುಬಂಧ–34ರಲ್ಲಿ ನೀಡಿದೆ.

| | | ಮೊತ್ತ (ರೂ.ಗಳಲ್ಲಿ) |
|---|---|---|
| 1 | ತಾತ್ಕಾಲಿಕ/ಅತಿಥಿ/ಅರೆಕಾಲಿಕ ಉಪನ್ಯಾಸಕರ ವೇತನ<br>1) GRA-88420601<br>2) SPS-4482007<br>3) IOE-4879755 | 9,29,02,608/– |
| 2 | ಸಂಚಿತ/ತಾತ್ಕಾಲಿಕ/ಬೋಧಕೇತರ ನೌಕರರ ವೇತನ<br>1. GRA-118736732<br>2. SPS-1645294<br>3. IOE-4879755 | 12,52,61,781 |
| | **ಒಟ್ಟು** | **21,81,64,389/–** |

ವಿಭಾಗಕ್ಕೆ ಸಂಬಂಧಿಸಿದಂತೆ ವಿಶ್ವವಿದ್ಯಾನಿಲಯದಲ್ಲಿ ವಿವಿಧ ಹುದ್ದೆಗಲ್ಲಿ ಬೋಧಕ/ಬೋಧಕೇತರ ವರ್ಗದವರ (ಪತ್ರಾಂಕಿತ/ಪತ್ರಾಂಕಿರಲ್ಲದ) ಹುದ್ದೆಗಲ್ಲಿ ಕಾರ್ಯನಿರ್ವಹಿಸುತ್ತಿರುವರ ಹುದ್ದೆಗಳ ಸಂಖ್ಯೆ, ಮಂಜೂರಾದ ಹುದ್ದೆಗಳ ಸಂಖ್ಯೆ, ಖಾಲಿ ಇರುವ ಹುದ್ದೆಗಳ ವಿವರ ನೀಡುವಂತೆ ಲೆಕ್ಕ ತನಿಖಾ ವಿಚಾರಣೆ ಸಂಖ್ಯೆ:89/15.06.2019 ರಲ್ಲಿ ಹಾಜರುಪಡಿರುವಂತೆ ಕೋರಲಾಗಿದ್ದು, ಯಾವುದೇ ಮಾಹಿತಿ ನೀಡಿರುವುದಿಲ್ಲ.

ಮೈಸೂರು ವಿಶ್ವವಿದ್ಯಾನಿಲಯದ ಅಧಿನಿಯಮ 2000 ನಿಯಮ–56 (2), 57 ರ ಪ್ರಕಾರ

ತಾತ್ಕಾಲಿಕ ಬೋಧಕ/ಬೋಧಕೇತರ ವರ್ಗದವರಿಗೆ 2017–18ನೇ ಸಾಲಿನಲ್ಲಿ ರೂ. 21,81,64,389/–ಗಳ ವೇತನವನ್ನು ಪಾವತಿಸಿರುವ ಸಂಬಂಧ ವೇತನ ಪಾವತಿಯ ವಿವರಗಳನ್ನು ಲೆಕ್ಕ ಪರಿಶೋಧನೆಗೆ ಒದಗಿಸುವಂತೆ ಕೇಳಲಾದ ಹಿನ್ನಲೆಯಲ್ಲಿ ಸಂಬಂಧಪಟ್ಟ ಮಾಹಿತಿ/ದಾಖಲೆಗಳನ್ನು ಒದಗಿಸಲಾಗಿದ್ದಾದರು **ರೂ. 21,36,96,395/–ಗಳಿಗೆ** ಮಾತ್ರ ಮಾಹಿತಿ/ದಾಖಲಾತಿ ಒದಗಿಸಿರುವುದಾಗಿಯೂ, ಪೂರ್ಣ ಪ್ರಮಾಣದಲ್ಲಿ ದಾಖಲೆಗಳನ್ನು ಒದಗಿಸಿರುವುದಿಲ್ಲವೆಂಬುದಾಗಿ ಆಕ್ಷೇಪಿಸಿ **ರೂ.44,67,994/–ಗಳನ್ನು** ಕಂಡಿಕೆ ಸಂಖ್ಯೆ:68ರಲ್ಲಿ ಆಕ್ಷೇಪಣೆಯಲ್ಲಿಡಲಾಗಿದೆ. ಈ ನಿಟ್ಟಿನಲ್ಲಿ ಪಾವತಿಸಿರುವ ವೇತನ ಬಿಲ್ಲುಗಳಲ್ಲಿ **ರೂ44,67,994/–ಗಳಿಗೆ** ಬಿಡಿಯಾಗಿ ಒದಗಿಸಲು ಸಾಧ್ಯವಾಗದ ಕಾರಣ 2017–18ನೇ ಸಾಲಿನಲ್ಲಿ ಪಾವತಿಯದ (ಪೂರ್ಣ) ಒಟ್ಟು ಮೊತ್ತ **ರೂ.21,82,64,389/–ಗಳಿಗೆ** ಪಾವತಿ ಮಾಡಲಾದ ವಿವರಗಳನ್ನು ಈ ಮೂಲಕ ಒದಗಿಸಲಾಗಿರುತ್ತದೆ.

**ವಿವರ ಈ ಕೆಳಕಂಡಂತಿರುತ್ತದೆ.**

| ಕ್ರ.ಸಂ | ವೇತನ ಶೀರ್ಷಿಕೆ | ಮೊತ್ತ |
|---|---|---|
| 1 | ವೇತನ ಶೀರ್ಷಿಕೆ 228 | 8,84,20,601/– |
| 2 | ವೇತನ ಶೀರ್ಷಿಕೆ 229 | 11,87,36,732/– |
| 3 | ವೇತನ ಶೀರ್ಷಿಕೆ 229 | 48,79,755/– |
| 4 | ಎಸ್.ಪಿ.ಎಸ್ ಅನುದಾನ | 16,45,294/– |
| 5 | ಎಸ್.ಪಿ.ಎಸ್ ಅನುದಾನ | 44,82,007/– |
| | **ಒಟ್ಟು** | **21,81,64,389/–** |

ಈ ಸಂಬಂಧ ಸದರಿ ಆಕ್ಷೇಪಿತ ಕಂಡಿಕೆಯನ್ನು ತೀರುವಳಿಗೊಳಿಸುವಂತೆ ನಿವೇದಿಸಲಾಗಿದೆ.

| | |
|---|---|
| ಸ್ಟ್ಯಾಚ್ಯೂಟ್‌ನಲ್ಲಿ ತಿಳಿಸಿರುವಂತೆ ಮಂಜೂರಾದ ಹುದ್ದೆಗೆ ಎದುರಾಗಿ ಮಾತ್ರ ತಾತ್ಕಾಲಿಕ ನೇಮಕಾತಿ ಮಾಡಿಕೊಳ್ಳಬಹುದಾಗಿರುತ್ತದೆ. ಬೋಧಕ/ಬೋಧಕೇತರ ವರ್ಗದವರು & ಅತಿಥಿ ಉಪನ್ಯಾಸಕರ ನೇಮಕಾತಿ ವಿವರ ಹಾಗೂ ಹೊಸದಾಗಿ ನೇಮಕಾತಿ/ಹೊರಗುತ್ತಿಗೆ ಆಧಾರದ ನೇಮಕಾತಿ ಕಡತಗಳನ್ನು ಲೆಕ್ಕಪರಿಶೋಧನೆಗೆ ಒದಗಿಸದ ಕಾರಣ ಮಂಜೂರಾದ ಹುದ್ದೆಗಳಿಲ್ಲದಿದ್ದರೂ ಹೆಚ್ಚುವರಿ ಹುದ್ದೆಗಳನ್ನು ನೇಮಕಗೊಂಡಿದ್ದಲ್ಲಿ ನಿಯಮಬಾಹಿರ ಕ್ರಮವಾಗಿರುತ್ತದೆ. ಹಾಗೂ ಈ ನೇಮಕಾತಿ ಪ್ರಕ್ರಿಯೆಯ ನಿಯಮಾನುಸಾರ ಕೈಗೊಳ್ಳಲಾಗಿರು ಬಗ್ಗೆ ಸ್ಪಷ್ಟತೆ ಇರುವುದಿಲ್ಲ. ನೇಮಕಾತಿ ಪ್ರಕ್ರಿಯೆಯಲ್ಲಿ ಲೋಪವಾಗಿದ್ದಲ್ಲಿ ಸಂಬಂಧಿಸಿದ ಆಡಳಿತ ವರ್ಗವೇ ಸಂಪೂರ್ಣವಾಗಿ ಹೊಣೆಗಾರರಾಗಿರುತ್ತಾರೆ.<br><br>ಮುಂದುವರೆದು ವಿವಿಧ ಪ್ರಾಯೋಜಿತ ಕಾರ್ಯಕ್ರಮಗಳಡಿಯಲ್ಲಿ ತಾತ್ಕಾಲಿಕ ನೌಕರರನ್ನು ತಾಂತ್ರಿಕ/ತಾಂತ್ರಿಕೇತರ ಹುದ್ದೆಗಳಲ್ಲಿ ನೇಮಕ ಮಾಡಿಕೊಳ್ಳಲು ಯು.ಜಿ.ಸಿ ನಿಯಮಾವಳಿಯನ್ವಯ ನೇಮಕಾತಿ ಪ್ರಕ್ರಿಯೆ ಕಡತಗಳನ್ನು ಹಾಜರುಪಡಿಸಿರುವುದಿಲ್ಲವಾದ್ದರಿಂದ ಹಾಗೂ ವಿವಿಧ ಪ್ರಾಯೋಜಿತ ಕಾರ್ಯಕ್ರಮಗಳ ಮಾರ್ಗಸೂಚಿಯನ್ವಯ ನೇಮಕಾತಿ ಪ್ರಕ್ರಿಯೆ ಕೈಗೊಂಡಿಲ್ಲದಿರುವುದರಿಂದ ತಾತ್ಕಾಲಿಕ/ಸಂಚಿತ ಬೋಧಕೇತರ ನೌಕರರಿಗೆ ವೇತನ ಪಾವತಿಸಿರುವುದು ನಿಯಮಬಾಹಿರವಾಗಿದೆ.<br><br>ತಾತ್ಕಾಲಿಕ/ಅತಿಥಿ/ಅರೆಕಾಲಿಕ ಬೋಧಕ ವರ್ಗದವರನ್ನು ಮಂಜೂರಾದ ಹುದ್ದೆಗಳಿಗೆದುರಾಗಿ ನೇಮಕ ಪ್ರಕ್ರಿಯೆಯನ್ನು ಮೈಸೂರು ವಿಶ್ವವಿದ್ಯಾನಿಲಯದ ಅಧಿನಿಯಮ 2000 ನಿಯಮ–56(2) ಪ್ರಕಾರ ಸ್ಟ್ಯಾಚ್ಯೂಟ್‌ನಲ್ಲಿ ತಿಳಿಸಿರುವಂತೆ ನೇಮಕಾತಿ ಮಾಡಿರುವ ಬಗ್ಗೆ ಕಡತವನ್ನು ಲೆಕ್ಕ ತನಿಖೆಗೆ ಹಾಜರುಪಡಿಸಿಲ್ಲವಾದ್ದರಿಂದ ತಾತ್ಕಾಲಿಕ ಬೋಧಕ/ಬೋಧಕೇತರ ವರ್ಗ ನೌಕರರಿಗೆ ಪಾವತಿಸಲಾದ ವೇತನ ಒಟ್ಟು ರೂ.21,81,64,389/–ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ. | |
| **<u>69. ಕನ್ನಡ ವಿಶ್ವಕೋಶ ಸಂಪುಟ ರಚನೆಗಾಗಿ ಬಿಡುಗಡೆಯಾದ ಅನುದಾನವನ್ನು ಸಕಾಲದಲ್ಲಿ ಬಳಸಿಕೊಳ್ಳದಿರುವುದು:– (ಹಣಕಾಸು ವಿಭಾಗ)</u>**<br><br>2017–18ನೇ ಸಾಲಿಗೆ ಲೆಕ್ಕಗಳಲ್ಲಿನ ಕನ್ನಡ ಪುಸ್ತಕ ಮುದ್ರಣ ಹಾಗೂ ಪ್ರಕಟಣೆ ವೆಚ್ಚದ ಬಾಬ್ತು ರೂ.5,41,19,415.15/–ಗಳು ಅಂತಿಮ ಶಿಲ್ಕು ಉಳಿದಿದ್ದು, ಪ್ರಸ್ತುತ ಸಾಲಿನವರೆಗೂ ಸದರಿ ಮೊತ್ತವನ್ನು ಬ್ಯಾಂಕ್ ನಿಶ್ಚಿತ ಠೇವಣಿ ರೂಪದಲ್ಲಿ ತೊಡಗಿಸಲಾಗಿದೆ.<br><br>ಆರ್ಥಿಕ ವರ್ಷದಲ್ಲಿ ಕನ್ನಡ ಪುಸ್ತಕ ಮುದ್ರಣ ಹಾಗೂ ಪ್ರಕಟಣೆಗಳ ವೆಚ್ಚಕ್ಕಾಗಲಿ ಅಥವಾ ಕನ್ನಟ ವಿಶ್ವಕೋಶ ಅಂಪುಟ ರಚನೆಗಾಗಿ ವೆಚ್ಚ ಭರಿಸದೆ ಹಣವನ್ನು ನಿಶ್ಚಿತ ಠೇವಣಿಯಲ್ಲಿಯೇ ಮುಂದುವರೆಸಿರುವುದನ್ನು ಗಮನಿಸಿದೆ. ಈ ಹಣವು ನಿಗದಿತ ಉದ್ದೇಶಕ್ಕೆ ನಿಗದಿತ ಸಮಯದಲ್ಲಿ ಬಳಕೆಯಾಗದಿರುವುದು ಹಾಗೂ ಉಪಯುಕ್ತತಾ ಪತ್ರವನ್ನು ಸಲ್ಲಿಸದಿರುವ ಬಗ್ಗೆ ಮಾಹಿತಿಯನ್ನು | 14 ಸಂಪುಟಗಳ ಕನ್ನಡ ವಿಶ್ವಕೋಶ ಮೈಸೂರು ವಿಶ್ವವಿದ್ಯಾನಿಲಯದ ಹಾಗೂ ಕನ್ನಡದ ಮತ್ತು ಶಾಶ್ವತವಾದ ಒಂದು ಯೋಜನೆ ಈಗ ಈ ಯೋಜನೆಯ 14 ಸಂಪುಟಗಳ ಪರಿಷ್ಕಾರ ಮತ್ತು ಪುನರ್ ಮುದ್ರಣ ಕಾರ್ಯ ನಡೆಯುತ್ತಿದೆ ಈಗಾಗಲೇ ಪರಿಷ್ಕೃತ 7 ಸಂಪುಟಗಳು ಪ್ರಕಟವಾಗಿವೆ. ಉಳಿದ 7 ಸಂಪುಟಗಳ ಕೆಲಸ ಪ್ರಗತಿಯಲ್ಲಿದೆ ಸದ್ಯದಲ್ಲಿ ಸಂಪುಟ 8, ಸಂಪುಟ 9 ಮತ್ತು ಸಂಪುಟ 10ರ ಸಂಪುಟಗಳು ಮುದ್ರಣಕ್ಕೆ ಸಿದ್ಧವಾಗುತ್ತಿದೆ ಒಂದು ಸಂಪುಟದ ಮುದ್ರಣದ ಅಂದಾಜುವೆಚ್ಚ ಸುಮಾರು 25 ಲಕ್ಷ ರೂಪಾಯಿಗಳು ಈ ಸಂಪುಟಗಳನ್ನು ಪರಿಷ್ಕರಿಸಿ ಪ್ರಕಟಿಸುವುದರ ಜೊತೆಗೆ ಸಿ.ಡಿ ರೂಪದಲ್ಲಿಯೂ (ಆಡಕತಟ್ಟೆ) |

ನೀಡುವಂತೆ ಲೆಕ್ಕ ತನಿಖಾ ವಿಚಾರಣೆ ಸಂಖ್ಯೆ:46/24.05.2019ರಲ್ಲಿ ಕೋರಲಾಗಿತ್ತು. ವಿಚಾರಣೆಗೆ ಉತ್ತರವಾಗಿ ಕನ್ನಡ ವಿಶ್ವಕೋಶ ಸಿದ್ಧಗೊಂಡಿದ್ದು, ಹಣವನ್ನು ಆಯಾಯ ಸಂಪುಟಗಳ ಮುದ್ರಣದ ಸಮಯದಲ್ಲಿ ಬಳಕೆ ಮಾಡಿ ಕೊಳ್ಳಲಾಗುವುದು ಎಂದು ತಿಳಿಸರುತ್ತಾರೆ.

| ಬ್ಯಾಂಕ್ ಸ್ಟೋಲ್ ಹಾಗೂ ನಗದು ಪುಸ್ತಕದ ಪ್ರಕಾರ | | ಮೊತ್ತ (ರೂ.ಗಳಲ್ಲಿ) |
|---|---|---|
| 1 | ಕನ್ನಡ ವಿಶ್ವಕೋಶ ಎಸ್ ಬಿ ಐ ಖಾತೆ ಸಂಖ್ಯೆ:57007591335 | 4,28,14,283.78 |
| 2 | ಕನ್ನಡ ಪುಸ್ತಕಗಳ ಮುದ್ರಣ ಮತ್ತು ಪ್ರಕಟಣಾ ಖಾತೆ ಎಸ್.ಬಿ.ಐ ಖಾತೆ ಸಂಖ್ಯೆ:54007591346 | 113,05,131.37 |
| | ಒಟ್ಟು | **5,41,19,415.15** |

ಸರ್ಕಾರದ ಆದೇಶದ ನಿಯಮಾವಳಿಯಂತೆ ನಿಗದಿರ ಸಮಯದಲ್ಲಿ ಪೂರ್ಣಗೊಳಿಸದೆ ಹಣ ಬಳಕೆ ಪ್ರಮಾಣ ಪತ್ರವನ್ನು ಸಲ್ಲಿಸದಿರುವುದು ಮತ್ತು ಠೇವಣಿಯಲ್ಲಿ ಹೂಡಿಕೆಯನ್ನು ಮುಂದುವರೆಸಿರುವುದು ಸೂಕ್ತ ಕ್ರಮವಾಗಿರುವುದಿಲ್ಲ. ಈ ಬಗ್ಗೆ ಹಿಂದಿನ ಲೆಕ್ಕ ಪರಿಶೋಧನೆಯಲ್ಲೂ ಸಹ ಆಕ್ಷೇಪಿಸಲಾಗಿದ್ದು, ಯಾವುದೇ ಕ್ರಮ ಕೈಗೊಂಡಿರುವುದಿಲ್ಲ. ಜರೂರು ಕ್ರಮ ತೆಗೆದುಕೊಂಡು ವರದಿಯನ್ನು ಲೆಕ್ಕ ತನಿಖೆಗೆ ಒದಗಿಸುವಂತೆ ಸೂಚಿಸಿದೆ.

ಈಗಾಗಲೇ ಬಿಡುಗಡೆ ಮಾಡಲಾಗಿದೆ ಈ ಸಿ.ಡಿ ರೂಪದಲ್ಲಿ ಪ್ರಕಟಣೆಯಾಗಿ ಸುಮಾರು 15 ವರ್ಷಗಳೇ ಕಳೆದಿದೆ ಸಿ.ಡಿಯು ಪರಿಷ್ಕಾರ ಹಾಗೂ ಪ್ರಕಟಣೆ ಆಗಬೇಕಾಗಿದೆ ಈ ಕೆಲಸ ಅಗಾಧವಾದದ್ದು 14 ಸಾವಿರ ಮುದ್ರಣ ಪುಟಗಳಿಂದ ಸಿ.ಡಿ ರೂಪದ ಪರಿಷ್ಕಾರ ಕಾರ್ಯಕ್ಕೆ ವಿದ್ವಾಂಸರೂ, ತಂತ್ರಜ್ಞರೂ, ಸೇರಿದಂತೆ ನೂರಾರು ಜನ ತಜ್ಞರು ಏಕಕಾಲದಲ್ಲಿ ಕೆಲಸ ಮಾಡಬೇಕಾಗುತ್ತದೆ ಇಂಗ್ಲೀಷ್ ಪ್ರಪಂಚ ಪ್ರಸಿದ್ಧವಾದ ಎನ್‌ಸೈಕ್ಲೋಪೀಡಿಯ ಬ್ರಿಟಾನಿಕ ಮಾದರಿಯಲ್ಲಿ ಕನ್ನಡ ವಿಶ್ವಕೋಶ ಸಿದ್ಧಗೊಂಡಿದೆ ಇದರ ಸಿ.ಡಿ ರೂಪವೂ ಅದೇ ಮಾದರಿಯಲ್ಲಿ ತಯಾರಾಗಬೇಕು ಈ ಕೆಲಸಕಾರ್ಯಕ್ಕೆ ಲಕ್ಷಾಂತರ ರೂಪಾಯಿ ಹಣ ಖರ್ಚಾಗುವ ಸಾಧ್ಯತೆಯಿದೆ ಕನ್ನಡ ವಿಶ್ವಕೋಶ ಮತ್ತು ಪುಸ್ತಕ ಪ್ರಕಟಣೆ ಶೀರ್ಷಿಕೆಯಲ್ಲಿರುವ ಹಣವನ್ನು (5 ಕೋಟಿ, 4 ಲಕ್ಷ 19 ಸಾವಿರ 415.15 ರೂಪಾಯಿಗಳು) ಇಂಥ ಉತ್ಕೃಷ್ಟವಾದ ಹಾಗೂ ಶಾಶ್ವತವಾದ ಕೆಲಸಕ್ಕೆ ಬಳಸಿಕೊಳ್ಳುವ ಯೋಜನೆಯಿದೆ.

ಮೇಲೆ ಕಾಣಿಸಿದ ಹಣವನ್ನು ಆಯಾಯ ಸಂಪುಟಗಳ ಮುದ್ರಣದ ಸಮಯದಲ್ಲಿ ಬಳಕೆ ಮಾಡಿಕೊಳ್ಳಲಾಗುವುದು ಎಂಬ ಅಂಶವನ್ನು ಆದ್ಯ ಗಮನಕ್ಕೆ ತರಲಾಗಿದೆ ಈ ನಿಟ್ಟಿನಲ್ಲಿ ಸದರಿ ಆಕ್ಷೇಪಿತ ಕಂಡಿಕೆ 69ರ ಆಕ್ಷೇಪಣೆಯನ್ನು ಕೈ ಬಿಡುವಂತೆ ನಿವೇದಿಸಿದೆ.

70. **2017–18ನೇ ಸಾಲಿನಲ್ಲಿ ವಿಶ್ವವಿದ್ಯಾನಿಲಯದ ಬೋಧಕ ವರ್ಗದವರು/ಯು.ಜಿ.ಸಿ ವೇತನ ಪಡೆದಿರುವ ಉದ್ಯೋಗದ 2006ರ ವೇತನ ಬಾಕಿ ಮೊತ್ತ ಪಡೆದಿರುವ ವಿವರಣಾ ತಃಖ್ತೆಯನ್ನು ಹಾಜರುಪಡಿಸದಿರುವುದು:– (ಹಣಕಾಸು ವಿಭಾಗ)**

2017–18ನೇ ಸಾಲಿಗೆ ವಿಶ್ವವಿದ್ಯಾನಿಲಯದ ಬೋಧಕ ವರ್ಗದವರಿಗೆ ಯು.ಜಿ.ಸಿ 2006 ಪರಿಷ್ಕೃತ ವೇತನವನ್ನು ಸರ್ಕಾರದ ಆದೇಶ ಸಂಖ್ಯೆ:ಇಡಿ/37/ಯುಎನ್‌ಇ/2009/ಬೆಂಗಳೂರು, ದಿನಾಂಕ:24.12.2009ರ ಪ್ರಕಾರ ಪರಿಷ್ಕೃತ ವೇತನ ವ್ಯತ್ಯಾಸದ ಬಾಕಿ ಮೊತ್ತವನ್ನು (ದಿನಾಂಕ:24.12.2009 ರಿಂದ 31.03.2018) ಪಾವತಿಸಿರುವ ಕುರಿತು ವೇತನ ಬಾಕಿ ಪಾವತಿ ವಿವರ ಬಡವಾಡೆ ವಹಿಯನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸುವಂತೆ ಲೆಕ್ಕ ತನಿಖಾ ವಿಚಾರಣೆ ಸಂಖ್ಯೆ:11/03.05.2019 ಮತ್ತು 110/25.06.2019ರಲ್ಲಿ ಕೋರಲಾಗಿದ್ದು ಸಂಬಂಧಸಿದ ದಾಖಲೆಗಳನ್ನು ಇದುವರೆಗೂ ಹಾಜರುಪಡಿಸದಿರುವುದು. 2006 ಪರೊಷ್ಕೃತ ಯು.ಜಿ.ಸಿ ವೇತನ ವ್ಯತ್ಯಾಸದ ಬಾಕಿ ಮೊತ್ತದ ಪಾವತಿಗೆ ಸಂಬಂಧಿಸಿದಂತೆ ಸರ್ಕಾರದಿಂದ ಬಿಡುಗಡೆಯಾದ ಅನುದಾನ, ಯು.ಜಿ.ಸಿ ವೇತನ ಪಡೆಯುತ್ತಿರುವ ನೌಕರರು/ಬೋಧಕರಿಗೆ ಪಾವತಿಸಲಾದ ವೇತನದ ಬಾಕಿ ಮೊತ್ತ ಹಾಗೂ ಬೋಧಕ ವರ್ಗದವರ ವಿವರಣಾ ಪಟ್ಟಿಯನ್ನು ಕಡತದೊಂದಿಗೆ ತ್ವರಿತವಾಗಿ ಲೆಕ್ಕಪರಿಶೋಧನೆಗೆ ಹಾಜರುಪಡಿಸುವಂತೆ ಸೂಚಿಸಿದೆ. ಲೆಕ್ಕಪತ್ರಗಳನ್ನು ಹಾಜರುಪಡಿಸದೇ ಇರುವುದುರಿಂದ ಈ ಬಗ್ಗೆ ಲೆಕ್ಕ ಪರಿಶೋಧನೆ ಕೈಗೊಳ್ಳಲಾಗಿಲ್ಲ. ಕಡತ/ದಾಖಲೆಗಳನ್ನು ಹಾಜರುಪಡಿಸದ ಸಿಬ್ಬಂದಿ ವಿರುದ್ಧ ಸೂಕ್ತ ಕ್ರಮಕೈಗೊಳ್ಳಲು ಸೂಚಿಸಿದೆ.

ವಿಶ್ವವಿದ್ಯಾನಿಲಯದ ಬೋಧಕ ವರ್ಗದವರಿಗೆ 2006 ರ ಪರಿಷ್ಕೃತ ವೇತನ ಪಾವತಿಸಿರುವ ಬಗ್ಗೆ ಕಂಡಿಕೆ 70 ರಲ್ಲಿ ಪ್ರಸ್ತಾಪಿಸಲಾಗಿದೆ ಈ ಬಗ್ಗೆ ಸರ್ಕಾರದ ಆದೇಶ ಸಂಖ್ಯೆ:ಇಡಿ/37/ಯುಎನ್‌ಇ/2009 ಬೆಂಗಳೂರು ದಿನಾಂಕ:24.12.2009ರ ಆದೇಶದನ್ವಯ ಸಂಬಂಧ ಪಟ್ಟ ಅಂದರೆ ಈ ಕೆಳಕಾಣಿಸಿದ ಬೋಧಕ ಸಿಬ್ಬಂಧಿಗೆ ವೇತನ ಬಾಕಿ ಮೊತ್ತವನ್ನು ದಿನಾಂಕ:24.12.2009 ರಿಂದ 31.03.2018 ರವರೆಗೆ ಸರ್ಕಾರದ ಆದೇಶದ ಪರಿಮಿತಿಯಲ್ಲಿಯೆ ಪಾವತಿ ಮಾಡಲಾಗಿರುತ್ತದೆ

| ಕ್ರ ಸಂ | ಅನುದಾನ | ಇಲಾಖೆ | ಬೋಧಕರ ಹೆಸರು | ಮೊತ್ತ |
|---|---|---|---|---|
| 1 | 01.T | 99 | ಭಟ್ ಹೆಚ್.ಕೆ | 44496 |
| 2 | 01.T | 99 | ಶಂಕರ್ ಎಂ.ಎ | 22592 |
| 3 | 01.T | 99 | ಶ್ರೀಧರ್ ವೈ.ಎನ್ | 440490 |
| 4 | 01.T | 21 | ವೀರಣ್ಣ ಡಿ | 5095 |
| | | | **ಒಟ್ಟು** | **512673** |

ಈ ನಿಟ್ಟಿನಲ್ಲಿ ಸದರಿ ಕಂಡಿಕೆಯಲ್ಲಿ ಪ್ರಸ್ತಾಪಿಸಿರುವ ಆಕ್ಷೇಪಿತ ಮೊತ್ತವನ್ನು ಕೈ ಬಿಡುವಂತೆ

<table>
<tr><td></td><td>ನಿವೇದಿಸಲಾಗಿದೆ</td></tr>
<tr><td>

**71. ನೂತನ ಪಿಂಚಣಿ ಯೋಜನೆ (ಎನ್.ಪಿ.ಎಸ್) ಪಳಪಡುವ ನೌಕರರ ವಂತಿಕೆ ವಿವರ, ಎನ್.ಪಿ.ಎಸ್ ಖಾತೆಗೆ ಜಮಾ ವಿವರಗಳನ್ನು ಹಾಜರುಪಡಿಸದಿರುವುದು:– (ಹಣಕಾಸು ವಿಭಾಗ)**

2017–18ನೇ ಸಾಲಿನಲ್ಲಿ ನೂತನ ಪಿಂಚಣಿ ಯೋಜನೆ (ಎನ್.ಪಿ.ಎಸ್) ಒಳಪಡುವ ವಿಶ್ವವಿದ್ಯಾನಿಲಯದ ನೌಕರರ ಎನ್.ಪಿ.ಎಸ್ ವಂತಿಕೆ ಕಟಾವಣೆ ವಿವರ ಎನ್.ಪಿ.ಎಸ್ ಯೋಜನೆ ಒಳಪಡುವ ನೌಕರರ ವಿವರ, ಹೊಂದಾಣಿಕೆ ವಂತಿಗೆಯೊಂದಿಗೆ ಎನ್.ಪಿ.ಎಸ್ ಖಾತೆಗೆ ಜಮಾ ಮಾಡಿದ ವಿವರಗಳನ್ನು ವೇತನ ಬಟವಾಡೆ ವಹಿಯೊಂದಿಗೆ ಲೆಕ್ಕ ಪರಿಶೋಧನೆಗೆ ಹಾಜರುಪಡಿಸುವಂತೆ ಲೆಕ್ಕ ತನಿಖಾ ವಿಚಾರಣೆ ಸಂಖ್ಯೆ:121/28.06.2019 ರಲ್ಲಿ ಕೋರಲಾಗಿದ್ದು, ಯಾವುದೇ ಮಾಹಿಗಳನ್ನು ನಿರ್ವಹಿಸಿ ನೌಕರರಿಂದ ಸಂಗ್ರಹಿಸಿದ ಎನ್.ಪಿ.ಎಸ್ ಮೊತ್ತ ಮತ್ತು ಸಂಸ್ಥೆಯ ಮೊತ್ತವನ್ನು ಸೇರಿಸಿ ಎನ್.ಪಿ.ಎಸ್ ಖಾತೆಗೆ ಜಮಾ ಮಾಡಿದ ದಿನಾಂಕ/ಓಚರ್‌ಗಳ ಸಂಖ್ಯೆ ಇತ್ಯಾದಿಗಳನ್ನು ನಮೂದಿಸಿ ನಿರ್ವಹಿಸಿರುವುದಿಲ್ಲ. ಈ ಬಗ್ಗೆ ಸೂಕ್ತ ವಿವರಗಳನ್ನು ಹಾಜರುಪಡಿಸುವವರೆಗೆ 2017–18ರಲ್ಲಿ ಪಾವತಿಸಿರುವ ಎನ್.ಪಿ.ಎಸ್ ವಂತಿಗೆ ರೂ.1,22,42,611/–ಗಳನ್ನು ಆಕ್ಷೇಪಣೆಯಲ್ಲಿದಲಾಗಿದೆ.

</td><td>

ವಿಶ್ವವಿದ್ಯಾನಿಲಯದ ನೌಕರರ ನೂತನ ಪಿಂಚಣಿ ಯೋಜನೆಗೆ ಒಳಪಡುವ ಎನ್.ಪಿ.ಎಸ್ ವಂತಿಗೆ ಕಟಾವಣೆ ಹೊಂದಾಣಿಕೆ ವಂತಿಗೆಯೊಂದಿಗೆ ಎನ್.ಪಿ.ಎಸ್ ಖಾತೆಗೆ ಜಮಾ ಮಾಡಿದ ವಿವರಗಳನ್ನು ವೇತನ ಬಟವಾಡೆ ವಹಿಯೊಂದಿಗೆ ಲೆಕ್ಕಪರಿಶೋಧನೆಗೆ ಹಾಜರು ಪಡಿಸಿರುವುದಿಲ್ಲವೆಂದು ಆಕ್ಷೇಪಿಸಿ 2017–18ನೇ ಸಾಲಿನ ಲೆಕ್ಕಪರಿಶೋಧನಾವರದಿಯ ಕಂಡಿಕೆ 71ರಲ್ಲಿ ರೂ.1,22,42,611/–ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ. ಈ ಸಂಬಂಧ ಸದರಿ ವಿವರಗಳನ್ನು ಲೆಕ್ಕಪರಿಶೋಧನೆಗೆ ಒದಗಿಸಲಾಗಿರುತ್ತದೆ.

ಈ ನಿಟ್ಟಿನಲ್ಲಿ ಆಕ್ಷೇಪಿತ ಮೊತ್ತ ರೂ.1,22,42,611/–ಗಳನ್ನು ಆಕ್ಷೇಪಣೆಯಿಂದ ಕೈ ಬಿಡುವಂತೆ ನಿವೇದಿಸಲಾಗಿದೆ.

</td></tr>
<tr><td>

**72. ಶ್ರೀ. ಎನ್.ರಾಚಯ್ಯ ಅಧ್ಯಯನ ಕೇಂದ್ರ ಸ್ಥಾಪನೆ, ಉದ್ದೇಶ ಬಳಕೆ ಪ್ರಮಾಣ ಪತ್ರ ಸಲ್ಲಿಸಿರುವ ವಿವರ ಹಾಜರುಪಡಿಸದಿರುವುದು:– (ಹಣಕಾಸು ವಿಭಾಗ)**

2017–18ನೇ ಸಾಲಿನ ದತ್ತಿನಿಧಿ ಖಾತೆಯ ನಗದು ಪುಸ್ತಕವನ್ನು ಪರಿಶೀಲಿಸಿದಾಗ ಆರ್ಥಿಕ ವರ್ಷದಲ್ಲಿ ಕರ್ನಾಟಕ ಸರ್ಕಾರದಿಂದ, ವಿಶ್ವವಿದ್ಯಾನಿಲಯದಲ್ಲಿ ಶ್ರೀ ಎನ್ ರಾಚಯ್ಯ, ಅಧ್ಯಯನ ಕೇಂದ್ರ ಸ್ಥಾಪನೆ ಮಾಡಲು ರೂ.1,30,00,000/–ಗಳನ್ನು ಸರ್ಕಾರದ ಆದೇಶ ಸಂಖ್ಯೆ–ನಕಿ/ವಜಾಉಯೋ–2/ಸಿಆರ್–130/2016–17, ದಿನಾಂಕ;16.12.2016ರ ಪ್ರಕಾರ ದತ್ತಿನಿಧಿ ಖಾತೆ ಸಂಖ್ಯೆ:54007591299ಗೆ ಜಮೆ ಮಾಲಾಗಿದ್ದು ಮಂಜೂರಾತಿ ನೀಡಲಾಗಿದೆ.

**ಬ್ಯಾಂಕ್ ಖಾತೆಗೆ ಜಮೆಯಾದ ವಿವರ ಕೆಳಗಿನಂತಿದೆ.**

<table>
<tr><th>ಕ್ರ.ಸಂ</th><th>ಧನಾದೇಶ ಸಂಖ್ಯೆ ದಿನಾಂಕ</th><th>ಬ್ಯಾಂಕ್ ಖಾತೆಗೆ ಜಮಾ ಆದ ದಿನಾಂಕ</th><th>ಮೊತ್ತ (ರೂ.ಗಳಲ್ಲಿ)</th></tr>
<tr><td>1</td><td>79339/17.06.2017</td><td>10.08.2017</td><td>1,00,00,000</td></tr>
<tr><td>2</td><td>NEFT Transfer drom No.3199683044306</td><td>27.02.2018</td><td>30,00,000</td></tr>
</table>

</td><td>

ಶ್ರೀ ಎನ್ ರಾಚಯ್ಯ ಅಧ್ಯಯನ ಪೀಠ ಸ್ಥಾಪನೆ ಕುರಿತು ಕರ್ನಾಟಕ ರಾಜ್ಯ ಸರ್ಕಾರದಿಂದ 1,00,00,000.00 + 30,00,000.00= ಒಟ್ಟು 1,30,00,000/– ಬಿಡುಗಡೆಯಾಗಿದ್ದು ಈ ಮೊತ್ತದಲ್ಲಿ ದಿನಾಂಕ:31.03.2018 ರವರೆಗೆ ರೂ. 3.42.424/–ಗಳಲ್ಲಿ 20% ಅಮದರೆ ರೂ.68,485/–ಗಳನ್ನು ನಿಯಮಾನುಸಾರ ಮೂಲ ನಿಧಿಗೆ ಜಮಾ ಮಾಡಿಕೊಂಡು ಇನ್ನುಳಿದ 80% ಮೊಬಲಗು ರೂ.2,73,939/–ಗಳನ್ನು ಶ್ರೀ ರಾಚಯ್ಯ ಅಧ್ಯಯನ ಪೀಠಕ್ಕೆ 2018–19ನೇ ಸಾಲಿನಲ್ಲಿ ನಿಯೋಜಿಸಿಲಾದ ಕಾರ್ಯಕ್ರಮಗಳಿಗೆ ವಿಶ್ವವಿದ್ಯಾನಿಲಯದ ಆದೇಶದನುಸಾರ ಕ್ರಮ ಕೈಗೊಳ್ಳಲಾಗಿರುತ್ತದೆ. ಈ ವರೆವಿಗೆ ವೆಚ್ಚವಾಗಿರುವ ಮೊತ್ತ ರೂ.1,61,483/–ಗಳಾಗಿರುತ್ತದೆ. ಈ ಸಂಬಂಧ 2017–18ನೇ ಸಾಲಿನಲ್ಲಿ ಉಳಿಕೆಯಾದ ಮೊತ್ತದ "ಬಳಕೆ ಪ್ರಮಾಣ ಪತ್ರ" ವನ್ನು ಇದರೊಂದಿಗೆ ಲಗತ್ತಿಸಿತ್ತ, ಸದರಿ ಆಕ್ಷೇಪಿತ ಕಂಡಿಕೆಯನ್ನು ಕೈ ಬಿಡುವಂತೆ ನಿವೇದಿಸಲಾಗಿದೆ.

</td></tr>
</table>

| | | |
|---|---|---|
| | ಒಟ್ಟು | **1,30,00,000** |

ಮೇಲಿನ ಅನುದಾನ ಬಿಡುಗಡೆಯಾಗಿದ್ದು, ಶ್ರೀ ಎನ್ ರಾಜಯ್ಯ ಅಧ್ಯಯನ ಕೇಂದ್ರದ ಸ್ಥಾಪನೆ ಉದ್ದೇಶ ಮಾರ್ಗದರ್ಶಿ/ಸಂಬಂಧಿಸಿದ ಆದೇಶಗಳು ಹಾಗೂ ನಿಗದಿತ ಉದ್ದೇಶಕ್ಕೆ ಬಳಕೆಯಾಗಿರುವ ಬಗ್ಗೆ ವೆಚ್ಚದ ವಿವರಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸುವಂತೆ ಲೆಕ್ಕ ತನಿಖಾ ವಿಚಾರಣೆ ಸಂಖ್ಯೆ:45/22.05.2019ರಲ್ಲಿ ಕೋರಲಾಗಿದ್ದು ಯಾವುದೇ ಮಾಹಿತಿ ಒದಗಿಸಿರುವುದಿಲ್ಲ. ಅನುದಾನದ ಬಳಿಕೆ ಬಗ್ಗೆ ಮಾಹಿತಿಯನ್ನು ಹಾಜರುಪಡಿಸಲು ಸೂಚಿಸಿದೆ.

**73. ಕಾನೂನು ಅಧಿಕಾರಿಗಳಿಗೆ ಹೆಚ್ಚುವರಿ ಸಂಭಾವನೆ ಪಾವತಿಸಿರುವುದು:– (ಹಣಕಾಸು ವಿಭಾಗ)**

2017–18ನೇ ಸಾಲಿನ ಮೈಸೂರು ವಿಶ್ವವಿದ್ಯಾನಿಲಯದ ಹಣಕಾಸು ಶಾಖೆಯ ಲೆಕ್ಕ ಪರಿಶೋಧನೆಯಲ್ಲಿ ಜಿ.ಆರ್.ಎ ಖಾತೆಯ ಓಚರ್ ಸಂಖ್ಯೆ:4387/17.11.2017ರಲ್ಲಿ ಧನಾದೇಶ ಸಂಖ್ಯೆ: 951577 ರಿಂಸ 951580 ವರೆಗೆ ದಿನಾಂಕ:27.11.2017 ರಲ್ಲಿ ರೂ.8,05,000/–ಗಳನ್ನು ಪಾವತಿಸಲಾಗಿರುತ್ತದೆ. ಒಟ್ಟು 23 ಜನ ವಿದ್ಯಾರ್ಥಿಗಳು ಅಂಕಪಟ್ಟಿಗಳ ಅಕ್ರಮದಲ್ಲಿ ಭಾಗಿಯಾಗಿರುವ ಬಗ್ಗೆ ವಿಚಾರಣೆ ನಡೆಸಲು ನಿವೃತ್ತ ನ್ಯಾಯಾಧೀಶರು ಹಾಗೂ ನ್ಯಾಯವಾದಿಗಳನ್ನು ನೇಮಕ ಮಾಡಿಕೊಂಡು ಈ ಹಣ ಪಾವತಿ ಮಾಡಲಾಗಿದೆ. ಈ ರೀತಿ ನೇಮಕ ಮಾಡಿಕೊಳ್ಳುವ ಪೂರ್ವದಲ್ಲಿ ಲಭ್ಯವಿರುವ ನ್ಯಾಯಾಧೀಶರುಗಳಿಂದ ಮಾಹಿತಿ ಪಡೆದು ಅತಿ ಕಡಿಮೆ ದರ ನಮೂದಿಸಿರುವವರನ್ನು ನೇಮಕಾತಿ ಮಾಡಿಕೊಂಡಿರುವ ಬಗ್ಗೆ ಕಡತಗಳ್ಲಿ ಮಹಿತಿ ಇರುವುದಿಲ್ಲ. ಹಾಗೂ ವಿಶ್ವವಿದ್ಯಾನಿಲಯದ ಆದೇಶ ಸಂಖ್ಯೆ:WPC/191/2013-14, ದಿನಾಂಕ:02.11.2016 ಆದೇಶದನ್ವಯ ವಿಚಾರಣೆ ನಡೆಸಲು ವಿಚಾರಣಾಧಿಕಾರಿಗಳು/ನಿವೃತ್ತ ನ್ಯಾಯವಾದಿಗಳನ್ನು ನೇಮಕ ಮಾಡಿಕೊಂಡು 6 ಕ್ಕಿಂತ ಹೆಚ್ಚು ವಿದ್ಯಾರ್ಥಿಗಳನ್ನು ವಿಚಾರಣೆ ನಡೆಸಿದ್ದಲ್ಲಿ ಒಟ್ಟಾರೆಯಾಗಿ ರೂ.4,50,000/–ಗಳನ್ನು ಪಾವತಿಸಲು ಆದೇಶಸಲಾಗಿರುತ್ತದೆ. ಆದರೆ ವಿಶ್ವವಿದ್ಯಾನಿಲಯದ ಆದೇಶ ಸಂಖ್ಯೆ: WPC/191/20136-17 ದಿನಾಂಕ:07.03.2017ರಲ್ಲಿ ರೂ.8,05,000/–ಗಳನ್ನು ಪಾವತಿಸಲಾಗಿರುತ್ತದೆ. ಇದರಿಂದ ರೂ.3,55,000/–ಗಳನ್ನು ಹೆಚ್ಚುವರಿ ಪಾವತಿಸಿದ್ದಂತಾಗಿದ್ದು, ವಿಶವವಿದ್ಯಾನಿಲಯಕ್ಕೆ ಆರ್ಥಿಕ ನಷ್ಠ ಉಂಟಾದಂತಾಗಿರುತ್ತದೆ. ಈ ಬಗ್ಗೆ ಲೆಕ್ಕ ತಪಾಸಣಾ ವಿಚಾರಣಾ ಪತ್ರ ಸಂಖ್ಯೆ:108/24.11.2019ರಲ್ಲಿ ವಿವರಣೆ ಕೋರಲಾಗಿದ್ದು, ಯಾವುದೇ ವಿವರಣೆಯನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸಿರುವುದಿಲ್ಲ. **ರೂ.3,55,000/– ಹೆಚ್ಚುವರಿ ಪಾವತಿಸಿರುವ ಮೊತ್ತವನ್ನು ಸಂಬಂಧಿತರಿಂದ ವಸೂಲಿಸಿ ವಿಶ್ವವಿದ್ಯಾನಿಲಯದ ನಿಧಿಗೆ ಜಮೆ ಮಾಡಿ ವಿವರವನ್ನು ಹಾಜರುಪಡಿಸುವಂತೆ ಸೂಚಿಸಿದೆ.**

ಪರೀಕ್ಷಾ ಅಕ್ರಮದಲ್ಲಿ ಭಾಗಿಯಾಗಿದ್ದಾರೆನ್ನಲಾದ 23 ಜನ ವಿದ್ಯಾರ್ಥಿಗಳ ವಿರುದ್ಧ ವಿಚಾರಣೆ ನಡೆಸುವಂತೆ ಶ್ರೀ ಅನಿಲ್ ಕುಮಾರ್ ಕೆ.ಸಿ ಇವರು ಮಾನ್ಯ ಕರ್ನಾಟಕ ಉಚ್ಚನ್ಯಾಯಾಲದಲ್ಲಿ ದಾವೆ ಹೂಡಿದ ಹಿನ್ನಲೆಯಲ್ಲಿ ಮಾನ್ಯ ಕರ್ನಾಟಕ ಉಚ್ಚನ್ಯಾಯಾಲವು ಆದೇಶ ಸಂಖ್ಯೆ:W A No's 8231-8235 ಮತ್ತು 4522–4539/2013 ರಲ್ಲಿ ಆದೇಶಿಸಿದ ಮೇರೆಗೆ ವಿಶ್ವವಿದ್ಯಾನಿಲಯದ ಆದೇಶ ಸಂಖ್ಯೆ:WPC/191/2013-14 ದಿನಾಂಕ:16.10.2015 ರ ಆದೇಶದಂತೆ ಶ್ರೀ ಆರ್ ವೆಂಕಟೇಶ್ ನಿವೃತ್ತ ಜಿಲ್ಲಾ ಮತ್ತು ಸೆಷನ್ಸ್ ಜಡ್ಜ್ ಮೈಸೂರು ಇವರನ್ನು ವಿಚಾರಣಾಧಿಕಾರಿಯಾಗಿಯೂ ಹಾಗೂ ಶ್ರೀ ಬಿ,ಜಿ ಪ್ರಸಾದ್ ಅಡ್ವೊಕೇಟ್ ಮೈಸೂರು, ಇವರನ್ನು Presenting Officer ಆಗಿಯೂ ನೇಮಕ ಮಾಡಿಕೊಳ್ಳಲಾಯಿತು

ಈ ವಿಚಾರಣಾ ವಿಷಯದಲ್ಲಿ ಮೇಲೆ ವಿವರಿಸಿದಂತೆ ಶ್ರೀ ವೆಂಕಟೇಶ್ ನಿವೃತ್ತ ಜಿಲ್ಲಾ ಮತ್ತು ಸೆಷನ್ಸ್ ಜಡ್ಜ್ ಮೈಸೂರು ವಿಚಾರಣಾಧಿಕಾರಿ ಮತ್ತು ಶ್ರೀ ಬಿ,ಜಿ ಪ್ರಸಾದ್ ಅಡ್ವೋಕೇಟ್ ಮೈಸೂರು Presenting Officer ಇವರುಗಳಿಗೆ ವಿಚಾರಣಾ ಸಂಭಾವನೆಯಾಗಿ ಕ್ರಮವಾಗಿ ರೂ 5,75,000/–ಗಳು ಮತ್ತು ರೂ.2,30,000/–ಗಳು ಒಟ್ಟು ರೂ.8,05,000/–ಗಳನ್ನು ಪಾವತಿ ಮಾಡಬೇಕಾಗಿತ್ತು ಈ ನಿಟ್ಟಿನಲ್ಲಿ ದಿನಾಂಕ:07.02.2017ರ ಸಿಂಡಿಕೇಟ್ ಸಭೆಯ ಅನುಮೋದನೆ ಹಾಗೂ ವಿಶ್ವವಿದ್ಯಾನಿಲಯದ ಆದೇಶ ಸಂಖ್ಯೆ: WPC/191/2013-14 ದಿನಾಂಕ:07.03.2017ರ ಆದೇಶದಂತೆ ಸದರಿ ವಿಚಾರಣಾಧಿಕಾರಿಗಳಾದ ಶ್ರೀ ಆರ್ ವೆಂಕಟೇಶ್ ಮತ್ತು ಶ್ರೀ ಬಿ,ಜಿ,ಪ್ರಸಾದ್ ಇವರುಗಳಿಗೆ ಕ್ರಮವಾಗಿ ರೂ.5,75,000/– ಹಾಗೂ ರೂ.2,30,000/– ಒಟ್ಟು ರೂ.8,05,000/–ಗಳನ್ನು ಪಾವತಿಸಲಾಗಿದೆ.

| | |
|---|---|
| | ಈ ಪ್ರಕರಣವನ್ನು ವಿಶ್ವವಿದ್ಯಾನಿಲಯವು ಇದೊಂದು ವಿಶೇಷ ಪ್ರಕರಣವೆಂದು ಪರಿಗಣಿಸಿ ವಿಚಾರಣಾಧಿಕಾರಿಗೆ ಹಾಗೂ ಮಂಡನಾಧಿಕಾರಿಯವರಿಗೆ ಸಂಭಾವನೆಯನ್ನು ಪಾವತಿಸಲಾಗಿರುತ್ತದೆ ಇದಕ್ಕೆ ಸಂಬಂಧಿಸಿದ ಆದೇಶದ ಪ್ರತಿಗಳನ್ನು ಮಾಹಿತಿಗಾಗಿ ಇದರೊಂದಿಗೆ ಲಗತ್ತಿಸಲಾಗಿದೆ.<br><br>ಈ ನಿಟ್ಟಿನಲ್ಲಿ ಲೆಕ್ಕಪರಿಶೋಧನೆಯ ಕಂಡಿಕೆ 73 ರಲ್ಲಿ ಆಕ್ಷೇಪಿಸಿ ವಸೂಲಾತಿಗೆ ಸೂಚಿಸಿರುವ ಮೊತ್ತ ರೂ.3,55,000/–ಗಳನ್ನು ವಸೂಲಾತಿಯಿಂದ ಕೈ ಬಿಡುವಂತೆ ನಿವೇದಿಸಲಾಗಿದೆ. |
| **74. ಆದಾಯ ತೆರಿಗೆ ಸಮಾಲೋಚಕರನ್ನು ನೇಮಕ ಮಾಡಿಕೊಂಡು ಸಂಭಾವನೆ ಪಾವತಿಸಿರುವುದು.:– (ಹಣಕಾಸು ವಿಭಾಗ)**<br><br>2017–18ನೇ ಸಾಲಿನ ಲೆಕ್ಕ ತಪಾಸಣೆಯಲ್ಲಿ ಸಾಮಾನ್ಯ ಖಾತೆಯ ಓಚರ್ಸ್‌ಗಳ ಪರಿಶೀಲಿಸಲಾಗಿ ಓಚರ್ ಸಂಖ್ಯೆ:4409 ದಿನಾಂಕ:18.11.2017ರಲ್ಲಿ ಧನಾದೇಶ ಸಂಖ್ಯೆ:951452 & 951453 ದಿನಾಂಕ:20.11.2017 ರಂದು ರೂ.12,24,000/–ಗಳನ್ನು ಡಾ॥ ಬಿ.ಎಸದ.ಎನ್.ಪ್ರಸಾದ್, ನಿವೃತ್ತ ಆದಾಯ ತೆರಿಗೆ ಆಯುಕ್ತರಿಗೆ ಪಾವತಿಸಿರುವುದನ್ನು ಗಮನಿಸಲಾಗಿದ್ದು, ವಿಶ್ವವಿದ್ಯಾನಿಲಯದ ವತಿಯಿಂದ ಆದಾಯ ತೆರಿಗೆ ಇಲಾಖೆಗೆ Complaince Requiremnents ಗಳನ್ನು ಸಲ್ಲಿಸಲು ನಿವೃತ್ತ ಆದಾಯ ತೆರಿಗೆ ಅಧಿಕಾರಿಗಳನ್ನು ತಾತ್ಕಾಲಿಕವಾಗಿ ನೇಮಕ ಮಾಡಿಕೊಳ್ಳುವ ಅವಶ್ಯಕತೆ ಇರುವ ಬಗ್ಗೆ ಯಾವುದೇ ಸಮಿತಿಯನ್ನು ರಚಿಸಿರುವ ಹಾಗೂ ಸಮಿತಿಯ ಶಿಫಾರಸ್ಸಿನನ್ವಯ ಇದನ್ನು ಸಿಂಡಿಕೇಟ್ ಅನಿಮೋದಿಸಿರುವ ಹಾಗೂ ವೃತ್ತ ಪತ್ರಿಕೆಗಳಲ್ಲಿ ಜಾಹೀರತು ನೀಡಿ (ದರಪಟ್ಟಿಯನ್ನು) ಪಡೆದು, ಅತಿ ಕಡಿಮೆ ದರ ನಮೂದಿಸಿರುವ ಮತ್ತು ನುರಿತು ತಜ್ಞರನ್ನು ನೇಮಕ ಮಾಡಿಕೊಂಡಿರುವ ಬಗ್ಗೆ ಕಡತಗಳನ್ನು ಹಾಜರುಪಡಿಸುವಂತೆ ಲೆಕ್ಕ ತಪಾಸಣೆ ವಿಚಾರಣೆ ಪತ್ರ ಸಂಖ್ಯೆ:78/ದಿನಾಂಕ:04.06.2019 ರಲ್ಲಿ ಕೋಎಲಾಗಿ, ಯಾವುದೇ ಕಡತಗಳನ್ನು/ಮಾಹಿತಿಗಳನ್ನು ಲೆಕ್ಕ ತಪಾಸಣೆಗೆ ಹಾಜರುಪಡಿಸದಿರುವುದರಿಂದ ಹಾಗೂ ಕರ್ನಾಟಕ ಪಾರದರ್ಶಕ ನಿಯಮ ಉಲ್ಲಂಘನೆ ಮಾಡಿ ಟೆಂಡರ್ ಕರೆಯದೆ ನೇಮಕ ಮಾಡಿಕೊಂಡಿರುವುದರಿಂದ **ರೂ.12,42,000/–ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.** | ಶ್ರೀ ಬಿ.ಎಸ್.ಎನ್ ಪ್ರಸಾದ್ ನಿವೃತ್ತ ತೆರಿಗೆ ಆಯುಕ್ತರು ಹಾಗೂ ವಕೀಲರು ಬೆಂಗಳೂರು ಇವರನ್ನು ಮೈಸೂರು ವಿಶ್ವವಿದ್ಯಾನಿಲಯದ ಆದಾಯ ತೆರಿಗೆ ಕಾನೂನು ಸಲಹೆಗಾರರನ್ನಾಗಿ ನೇಮಕ ಮಾಡುವ ಬಗ್ಗೆ ದಿನಾಂಕ:21.12.2016ರ ಸಿಂಡಿಕೇಟ್ ಸಭೆಯಲ್ಲಿ ನಿರ್ಣಯ ಕೈಗೊಂಡು ಅನುಮೋದನೆ ನೀಡಲಾಗಿದೆ ಈ ಸಂಬಂಧ ದಿನಾಂಕ:21.10.2016 ರ ಪತ್ರದಲ್ಲಿ ಉನ್ನತ ಶಿಕ್ಷಣ ಸಚಿವರು ಒಂದು ಟಿಪ್ಪಣಿಯನ್ನು ನೀಡಿರುತ್ತಾರೆ ನಂತರ ದಿನಾಂಕ:28.10.2016 ರ ಹಣಕಾಸು ಸಮಿತಿ ಸಭೆಯಲ್ಲಿ ಶ್ರೀ ಬಿ.ಎಸ್.ಎನ್ ಪ್ರಸಾದ್ ನಿವೃತ್ತ ತೆರಿಗೆ ಆಯುಕ್ತರು ಇವರನ್ನು ಆದಾಯ ತೆರಿಗೆ ಕನೂನು ಸಲಹೆಗಾರರನ್ನಾಗಿ ನೇಮಕ ಮಾಡಿಕೊಳ್ಳಲು ಅನುಮೋದನೆ ನೀಡಲಾಗಿದೆ ಈ ನಿಟ್ಟಿನಲ್ಲಿ ದಿನಾಂಕ:17.11.2017ರ ಪರಿಷ್ಕೃತ ಆದೇಶ ಸಂಖ್ಯೆ; ಇಟಿ5/226/2009–10 ರ ವಿವಿ ಆದೇಶದಲ್ಲಿ ಶ್ರೀ ಬಿ.ಎಸ್.ಎನ್ ಪ್ರಸಾದ್ ನಿವೃತ್ತ ತೆರಿಗೆ ಆಯುಕ್ತರು, ಇವರಿಗೆ ಆದಾಯ ತೆರಿಗೆ ಕಾನೂನು ಸಲಹೆಗಾರರನ್ನಾಗಿ ನೇಮಿಸಿಕೊಂಡು ಸಂಭಾವನೆ ಪಾವತಿಸಲು ಆದೇಶಿಸಲಾಗಿದೆ ಹಾಗೂ ಈ ಸಂಬಂಧ ಬಿ.ಎಸ್.ಎನ್ ಪ್ರಸಾದ್ ನಿವೃತ್ತ ಇವರು ದಿನಾಂಕ:14.09.2017 ರಂದು Tax Invoice ನ್ನು ಸಲ್ಲಿಸಿರುತ್ತಾರೆ ಮೇಲಿನ ಅನುಮೋದನೆ ಮತ್ತು ಆದೇಶಗಳನುಸಾರ ಸದರಿ ನಿವೃತ್ತ ಆದಾಯ ತೆರಿಗೆ ಆಯುಕ್ತರಿಗೆ ದಿನಾಂಕ:20.11.2017 ರ ಧನಾದೇಶ ಸಂಖ್ಯೆ:951453 ರಲ್ಲಿ ರೂ.12,42,000/–ಗಳನ್ನು ಪಾವತಿಸಲಾಗಿದೆ ಈ ಸಂಬಂಧ ಮೇಲಿನ ಎಲ್ಲಾ ಸಮಿತಿ ಅನುಮೋದನೆ ಆದೇಶದ ಪತ್ರಗಳನ್ನು ಮಾಹಿತಿಗಾಗಿ ಲಗತ್ತಿಸಿದೆ.<br><br>ಈ ನಿಟ್ಟಿನಲ್ಲಿ ಸದರಿ ಆಕ್ಷೇಪಿತ ಕಂಡಿಕೆ 74 ರ ಆಕ್ಷೇಪಿತ ಮೊತ್ತ ರೂ 12,42,000/–ಗಳನ್ನು ಕೈ ಬಿಡುವಂತೆ ನಿವೇದಿಸಲಾಗಿದೆ. |

| | |
|---|---|
| | |
| **75. ಭದ್ರತಾ ಸಿಬ್ಬಂದಿಗಳ ನೇಮಕಾತಿಗೆ ಸಂಬಂಧಿಸಿದಂತೆ SWISS, Mysore ರವರಿಂದ ಭದ್ರತಾ ಠೇವಣಿ (ಎಸ್.ಡಿ) ಪಡೆಯದೆ ಅಗ್ರಿಮೆಂಟ್ ಮಾಡಿಕೊಂಡಿರುವ ಕುರಿತು:– (ಹಣಕಾಸು ವಿಭಾಗ)**<br><br>2017–18ನೇ ಸಾಲಿನಲ್ಲಿ ಮೈಸುರು ವಿಶ್ವವಿದ್ಯಾನಿಲಯದ ವಿವಿಧ ಕಛೇರಿ/ವಿಭಾಗಗಳು/ಸ್ನಾತಕೋತ್ತರ ಕೇಂದ್ರಗಳು/ವಿದ್ಯಾರ್ಥಿನಿಲಯಗಳಿಗೆ ಭದ್ರತಾ ಸಿಬ್ಬಂದಿಗಳನ್ನು ಒದಗಿದಲು ಇ–ಪ್ರಕ್ಯೂರ್‌ಮೆಂಟ್ ಮೂಲಕ Sharp watch Investigation Security System, Mysore ರವರೊಂದಿಗೆ ದಿನಾಂಕ:01.09.2017 ರಿಂದ ದಿನಾಂಕ:31.08.2018ರವರೆಗೆ 1 ವರ್ಷದ ಅವಧಿಗೆ ನೇಮಿಸಿಕೊಂಡಿದ್ದು, ಇವರಿಗೆ 2017–18ನೇ ಸಾಲಿಗೆ ಒಟ್ಟು ರೂ.79,20,381/– ಪಾವತಿಯಾಗಿರುವುದು ಕಂಡುಬಂದಿರುತ್ತದೆ. ಭದ್ರತಾ ಸಿಬ್ಬಂದಿಗಳ ನೇಮಕಾ ಸಂಬಂಧದ ಇ–ಪ್ರಕ್ಯೂರ್‌ಮರಂಟ್‌ನ ಕಡತ/ದಾಖಲೆಗಳನ್ನು ಪರಿಶೀಲಿಸಲಾಗಿ ಅಮದಾಜು ಮೊತ್ತ ರೂ.250.00 ಲಕ್ಷಗಳಿಗೆ ಶೇ 2% ರಂತೆ ರೂ.5,00,000/–ಗಳ ಇ.ಎಮ್.ಡಿ ಮೊತ್ತವನ್ನು ಮಾತ್ರ ಮಡೆದು ಅಗ್ರಿಮೆಂಟ್ ಮಾಡಿಕೊಂಡಿರುವುದನ್ನು ಗಮನಿಸಲಾಗಿದೆ. ಕೆ.ಟಿ.ಪಿ.ಪಿ ನಿಯಮಾನುಸಾರ Performance Security Clause 25 ರಲ್ಲಿರುವಂತೆ Contract Price ಗೆ ಅನುಗುಣವಾಗಿ 5% Performance Security ಯನ್ನು ಸಹ ಪಡೆದುಕೊಳ್ಳಬೇಕಾಗಿರುತ್ತದೆ. ಸದರಿ 5% ಭದ್ರತಾ ಠೇವಣಿಯನ್ನು ಟೆಂಡರ್‌ದಾರರಿಂದ ಪಡೆದುಕೊಂಡಿರುವ ಬಗ್ಗೆ ಮಾಹಿತಿಯು ಕಡತದಲ್ಲಿ ಲಭ್ಯವಿಲ್ಲದಿರುವುದರಿಂದ ಮಾಹಿತಿಯನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸುವಂತೆ ವಿಚಾರಣೆ ಸಂಖ್ಯೆ:71/ದಿನಾಂಕ:31.05.2019ರಲ್ಲಿ ಕೋರಲಾಗಿತ್ತು. ಮಾಹಿತಿಯನ್ನು ಲೆಕ್ಕ ತನಿಖೆಗೆ ಒದಗಿಸದಿರುವುದರಿಂದ 5% ಭದ್ರತಾ ಠೇವಣಿ (Performace Security Deposit) ಪಡೆದಿರುವ ಬಗ್ಗೆ ವಿವರಗಳನ್ನು ಲೆಕ್ಕ ತಪಾಸಣೆಗೆ ಒದಗಿಸಲು ಸೂಚಿಸಿದೆ. | ವಿಶ್ವವಿದ್ಯಾನಿಲಯದ ವಿವಿಧ ಕಛೇರಿ ವಿಭಾಗಗಳು ಸ್ನಾತಕೋತ್ತರ ಕೇಂದ್ರಗಳು ವಿದ್ಯಾರ್ಥಿ ನಿಲಯಗಳಿಗೆ ಹಾಗೂ ಹಾಸನ ಮಂಡ್ಯ ಮತ್ತು ಚಾಮರಾಜನಗರಗಳಲ್ಲಿನ ವಿಶ್ವವಿದ್ಯಾನಿಲಯದ ಆಸ್ತಿಗಳ ಭದ್ರತೆಗಾಗಿ ಭದ್ರಾತ ಸಿಬ್ಬಂಧಿಗಳನ್ನು ಒದಗಿಸಲು ಸಂಬಂಧ ಇ–ಪ್ರಕ್ಯೂರ್‌ಮೆಂಟ್ ಮೂಲಕ Sharp watch Investigation Security System, Mysore ಇವರಿಗೆ 2017–18ನೇ ಸಾಲಿನಲ್ಲಿ ನೇಮಿಸಿಕೊಂಡು ಕರಾರು ಒಪ್ಪಂದ ಮಾಡಿಕೊಳ್ಳಲಾಗಿರುತ್ತದೆ ಕರಾರು ಒಪ್ಪಂದದ ಪ್ರಕಾರ ಸದರಿ ಭದ್ರತಾ ಏಜೆನ್ಸಿಯವರು ಮೈಸೂರು ವಿಶ್ವವಿದ್ಯಾನಿಲಯದ ವಿವಿಧ ಕಛೇರಿ ವಿಭಾಗಗಳಿಗೆ ಹಾಗೂ ಹಾಸನ ಮಂಡ್ಯ ಮತ್ತು ಚಾಮರಾಜನಗರಗಳಲ್ಲಿನ ವಿಶ್ವವಿದ್ಯಾನಿಲಯದ ಆಸ್ತಿಗಳಿಗೆ ಭದ್ರತಾ ಸಿಬ್ಬಂದಿಯನ್ನು ಒದಗಿಸಿದ್ದು ಕರಾರು ಒಪ್ಪಂದದ ಪ್ರಕಾರ ಮೇಲೆ ವಿವರಿಸಿದ ಎಲ್ಲಾ ಕಛೇರಿ ಮತ್ತು ವಿಶ್ವವಿದ್ಯಾನಿಲಯದ ಆಸ್ತಿಗಳಿಗೆ ಸಂಬಂಧಿಸಿದಂತೆ ಉತ್ತಮವಾದ ಸೇವೆಯನ್ನು ಒದಗಿಸಿರುತ್ತಾರೆ ಈ ಅವಧಿಯಲ್ಲಿ ಅಂದರೆ 2017–18ನೇ ಸಾಲಿನಲ್ಲಿ ಯಾವುದೇ ರೀತಿಯ ಭದ್ರತಾ ಲೋಪವಾಗಿರುವುದಿಲ್ಲ ಈ ಸಂಬಂಧ ಸದರಿ ಭದ್ರತಾ ಸಿಬ್ಬಂಧಿಗಳಿಗೆ ಮಾಸಿಕ ವೇತನ ಪಾವತಿಸುವ ಮುನ್ನ ಸಂಬಂಧಪಟ್ಟ ಅಧಿಕಾರಿ ನೌಕರರು ಕರಾರು ಒಪ್ಪಂದದಂತೆ ಕಾರ್ಯ ಕ್ಷಮತೆಯನ್ನು ಪರಿಶೀಲಿಸಿ ನಂತರದಲ್ಲಿ ಮಾಸಿಕ ಮೊತ್ತವನ್ನು ಪಾವತಿಸಲಾಗಿರುತ್ತದೆ ಇ ನಿಟ್ಟಿನಲ್ಲಿ ಭದ್ರತಾ ಸಿಬ್ಬಂದಿಯವರಿಂದ ಯಾವುದೇ ರೀತಿಯ ಕರ್ತವ್ಯ ಲೋಪ ಕಂಡು ಬಂದಿರುವುದಿಲ್ಲವೆಂಬ ಮಾಹಿತಿಯನ್ನು ಅವಗಾಹನೆಗೆ ನಿವೇದಿಸುತ್ತ ಸದರಿ ಆಕ್ಷೇಪಣೆಯ ಕಂಡಿಕೆಯನ್ನು ಕಯ ಬಿಡುವಂತೆ ಕೋರಲಾಗಿದೆ. |
| **76. ಗೃಹ ಸಾಲ ಮತ್ತು ಮುಂಗಡ ವಿವರಗಳಲ್ಲಿ ವಿಶ್ವವಿದ್ಯಾನಿಲಯದ ನೌಕರರಿಂದ ಗೃಹಸಾಲದ ಬಡ್ಡಿ ಮೊತ್ತವನ್ನು ದಾಖಲಿಸದಿರುವುದು ಮತ್ತು ಕಟಾಯಿಸದಿರುವುವ ಕುರಿತು:– (ಹಣಕಾಸು ವಿಭಾಗ)**<br><br>2017–18ನೇ ಸಾಲಿನ ಲೆಕ್ಕಪರಿಶೋಧನೆಯಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಈ ಕೆಳಗಿನ ಸಿಬ್ಬಂದಿಗಳಿಗೆ ಮಂಜೂರಾಗಿರುವ ಗೃಹಸಾಲ ಮತ್ತು ಮುಂಗಡದ ವಿವರಗಳನ್ನು ಅನುಬಂಧ–35ರಲ್ಲಿ ನೀಡಲಾಗಿದೆ. ಮುಂಗಡ ವಹಿಯನ್ನು ಪರಿಶಿಲಸಲಾಗಿ ಕೆಳಕಂಡ ಅಂಶಗಳು ಕಂಡುಬಂದಿರುತ್ತದೆ.<br><br>1. ಲೆಕ್ಕ ತನಿಕಾ ವಿಚಾರಣೆಗೆ ಉತ್ತರವಾಗಿ ಅನಿಪಾಲನಾ ವರದಿಯೊಂದಿಗೆ ನೀಡಿರುವ | ವಿಶ್ವವಿದ್ಯಾನಿಲಯದ ಕಂಡಿಕೆ 76(1) ರಲ್ಲಿ ಪ್ರಸ್ತಾಪಿಸಿರುವ 13 ಜನ ನೌಕರರಿಗೆ ಗೃಹ ನಿರ್ಮಾಣ ಸಾಲವಾಗಿ ರೂ.18,30,000/–ಗಳನ್ನು ಮಂಜೂರಾತಿ ಮಾಡಲಾಗಿದ್ದು ಅಸಲಿನ ಮೊತ್ತಕ್ಕೆ ಬಡ್ಡಿ ಮೊತ್ತ ರೂ.18,73,441/– ಒಟ್ಟು ಸೇರಿಸಿ ರೂ.37,03,441/–ಗಳಾಗಿದ್ದು ಈ ಮೊತ್ತದಲ್ಲಿ 2017–18ನೇ ಸಾಲಿನವರೆಗೆ ಅಸಲು ಮತ್ತು ಬಡ್ಡಿ ಮೊತ್ತ ಒಟ್ಟು ರೂ.25,99,233/–ಗಳನ್ನು ವಸೂಲಿಸಿ ವಿಶ್ವವಿದ್ಯಾನಿಲಯದ ಸಂಬಂಧಪಟ್ಟ ಖಾತೆಗೆ ಜಮೆ |

| | |
|---|---|
| ಹಣಕಸು ಅಧಿಕಾರಿಗಳಿಂದ ದೃಢೀಕರಿಸಿರುವ ಗೃಹಸಾಲ ಮತ್ತು ಮುಂಗಡದ ವಿವರಣಾ ತಃಖ್ತೆಯಲ್ಲಿ ವಿಶ್ವವಿದ್ಯಾನಿಲಯದ ಕೆಳಕಂಡ ಸಿಬ್ಬಂದಿಗಳಿಗೆ ಮಂಜೂರಾಗಿರುವ ಮನೆ ಮುಂಗಡದ ಮೊತ್ತಕ್ಕೆ ಬಡ್ಡಿ ಮೊತ್ತವನ್ನು ದಾಳಲಿಸಿರುವುದಿಲ್ಲ. ಇದರಿಂದಾಗಿ ಅಸಲು ಮೊತ್ತದೊಂದಿಗೆ ಬಡ್ಡಿ ಹಣವನ್ನು ಕಟಾಯಿಸಿರುವ ಬಗ್ಗೆ ಮಾಹಿತಿ ಅಭ್ಯವಿರುವುದಿಲ್ಲ. ಈ ಕುರಿತು ವಿವರಗಳನ್ನು ಲೆಕ್ಕ ತಪಾಸಣೆಗೆ ಹಾಜರುಪಡಿಸಲು ಸೂಚಿಸಿದೆ. | ಮಾಡಲಾಗಿರುತ್ತದೆ ಇದರ ವಿವರಗಳನ್ನು ಮಾಹಿತಿಗಾಗಿ ಇದರೊಂದಿಗೆ ಲಗತ್ತಿಸಲಾಗಿರುತ್ತದೆ. |

| ಕ್ರ.ಸಂ | ಹೆಸರು |
|---|---|
| 1 | ಅಂದಾನಯ್ಯ.ಕೆ |
| 2 | ಬಾಬು.ಎಸ್ |
| 3 | ಚಿಕ್ಕರಸು |
| 4 | ಹೇಮಾವತಿ.ಆರ್ |
| 5 | ಹುಚ್ಚೇಗೌಡ |
| 6 | ಮಾದೇಶ್.ಪಿ |
| 7 | ನಾಗರಾಜು |
| 8 | ಪ್ರಕಾಶ್.ಬಿ |
| 9 | ರುದ್ರಪ್ಪ.ಎಸ್ |
| 10 | ಶಂಕರ್.ಡಿ.ಎಸ್ |
| 11 | ಶಿವಬಸವಯ್ಯ |
| 12 | ವೀರಣ್ಣ.ಡಿ |
| 13 | ವಿಜಯಸುಬ್ಬಮಣ್ಯ.ಎಂ.ಕೆ |

2. ಕೆಳಕಾಣಿಸಿದ ನೌಕರರ ಮುಂಗಡದ ಮೊತ್ತದಲ್ಲಿ ಬಡ್ಡಿ ಮೊತ್ತವನ್ನು ದಾಖಲಿಸಿ, ಅಸಲು ಮೊತ್ತವನ್ನು ಮಾತ್ರ ಕಟಾಯಿಸಿದ್ದು, ಬಾಕಿ ಮೊತ್ತ '0' ಎಂದು ತೋರಿಸಲಾಗಿದೆ. ಸದರಿ ನೌಕರರುಗಳಿಂದ ಬಡ್ಡಿ ಮೊತ್ತ ರೂ.14,39,040/–ವಸೂಲಿಸದಿರುವುದು ಕಂಡುಬಂದಿದ್ದು, ಇದು ಕೆ.ಎಫ್.ಸಿ ಅನುಚ್ಛೇದ 238ರ ಪ್ರಕಾರ ನಿಯಮ ಉಲ್ಲಂಘನೆಯಾಗಿರುತ್ತದೆ. ಶೀಘ್ರವಾಗಿ ಬಡ್ಡಿ ಮೊತ್ತವನ್ನು ವಸೂಲಿಸಿ ವಿಶ್ವವಿದ್ಯಾನಿಲಯಕ್ಕೆ ಜಮೆ ಮಾಡಿರುವ ವಿವರಗಳನ್ನು ಒದಸಿಸುವುದು. ಬಡ್ಡಿ ಮೊತ್ತ ವಸೂಲಿಯಾಗಿದ್ದಲ್ಲಿ ವೇತನದಲ್ಲಿ ಕಟಾಯಿಸಿರುವ ಲೆಕ್ಕ ತನಿಖಾಗೆ ಹಾಜರುಪಡಿಸಲು ಸೂಚಿಸಿದೆ.

| ಕ್ರ.ಸಂ | ಹೆಸರು | ಮೊತ್ತ |
|---|---|---|
| 1 | ಚಿದಾನಂದ ಮೂರ್ತಿ.ಎನ್.ಎಸ್ | 1,51,220 |
| 2 | ಗುರುಸ್ವಾಮಿ.ಎಂ | 1,33,048 |
| 3 | ಕೆಂಪಾಬೋಯಿ | 1,29,891 |
| 4 | ಲಿಂಗರಾಜು.ಸಿ | 1,65,322 |
| 5 | ಮಹದೇವು.ಎಂ | 1,49,341 |

ಕಂಡಿಕೆ 76(2) ರಲ್ಲಿ ಪ್ರಸ್ತಾಪಿಸಿ ಆಕ್ಷೇಪಿಸಲಾದ ಬಡ್ಡಿ ಮೊತ್ತ ರೂ.14,39,040/–ಗಳ ಸಂಬಂಧದಲ್ಲಿ 2016–17ನೇ ಸಾಲಿನ ವರೆಗೆ ರೂ.13,54,439/–ಗಳು ಹಾಗೂ 2017–18ನೇ ಸಾಲಿನಲ್ಲಿ ರೂ.29,880/–ಗಳು ಒಟ್ಟು ಬಡ್ಡಿ ಮೊತ್ತ ರೂ.13,84,319/–ಗಳನ್ನು ಪ್ರಸ್ತಾಪಿಸಲಾದ (11) ಮಂದಿ ನೌಕರರಿಂದ ವಸೂಲಿಸಿ ವಿಶ್ವವಿದ್ಯಾನಿಲಯದ ಸಂಬಂಧ ಪಟ್ಟ ಖಾತೆಗೆ ಜಮೆ ಮಾಡಲಾಗಿರುತ್ತದೆ ಮತ್ತು ರೂ.52,224/–ಗಳನ್ನು 2019–20ನೇ ಸಾಲಿನಲ್ಲಿ ವಸೂಲಿಸಿ ವಿಶ್ವವಿದ್ಯಾನಿಲಯ ಖಾತೆಗೆ ಜಮೆ ಮಾಡಲಾಗಿದೆ ಅಂದರೆ ಆಕ್ಷೇಪಿಸಲಾದ ಬಡ್ಡಿ ಮೊತ್ತ ರೂ.14,39,040/–ಗಳನ್ನು ಪೂರ್ಣ ಪ್ರಮಾಣದಲ್ಲಿ ವಸೂಲಿ ಮಾಡಲಾಗಿರುತ್ತದೆ.

<table>
<tr>
<td>
<table>
<tr><td>6</td><td>ಮೋಹನ್ ಕುಮಾರ್.ಎನ್</td><td>1,29,891</td></tr>
<tr><td>7</td><td>ಮುರಳೀಧರನ್.ಎ</td><td>1,13,548</td></tr>
<tr><td>8</td><td>ಮೈಲಹಳ್ಳಿ ರೇವಣ್ಣ</td><td>1,33,052</td></tr>
<tr><td>9</td><td>ಪದ್ಮ</td><td>61,017</td></tr>
<tr><td>10</td><td>ರಾಜಲಕ್ಷ್ಮಿ</td><td>1,53,656</td></tr>
<tr><td>11</td><td>ವಿಜಯ.ಜೆ</td><td>1,19,054</td></tr>
<tr><td></td><td>ಒಟ್ಟು</td><td>14,39,040</td></tr>
</table>
3. 2017–18ನೇ ಸಾಳಿನಲ್ಲಿ ವಿಶ್ವವಿದ್ಯಾನಿಲುದ ನೌಕರರಿಗೆ ಯಾವಿದೇ ಗೃಹ ಮುಂಗದ ಸಾಲನ್ನು ಮಂಜೂರು ಮಾಡಿರುವುದಿಲ್ಲ ಎಂದು ಅನುಪಾಲನಾ ವರದಿಯಲ್ಲಿ ತೀಲಿಸಿದ್ದು, ಮುಂಗಡ ವಹಿಯಲ್ಲಿ 2017–18ನೇ ಸಾಲಿನವರೆಗೆ ವಿಶ್ವವಿದ್ಯಾನಿಲಯದ ಸಿಬ್ಬಂದಿಗಳಿಂದ ವಸೂಲಾದ ಮುಂಗಡಸ ಅಸಲು ಹಾಗೂ ಬಾಕಿ ಮೊತ್ತದ ವಿವರಗಳನ್ನು ದಾಳಲಿಸಿ ಕಛೇರಿ ಮುಖ್ಯಸ್ತರಿಂದ ದೃಢೀಕರಿಸಿರುವುದಿಲ್ಲ. ದಿನಾಂಕ:31.03.2018ರ ಅಂತ್ಯಕ್ಕೆ ಮನೆ ಮುಂಗಡ ಮಂಜೂರಾಗಿರುವ 39 ನೌಕರರಿಂದ ಒಟ್ಟು ರೂ.7,75,247/–ಬಾಕಿ ಉಳಿದಿದ್ದು, ಈ ಮೊತ್ತದಲ್ಲಿ ಬಡ್ಡಿ ಮೊತ್ತವೂ ಸಹ ಸೇರಿಸಿ ಕಟಾಯಿಸಿರುವ ಬಗ್ಗೆ ಮಾಹಿತಿ ಇರುವುದಿಲ್ಲ. ಸೂಕ್ತ ದಾಖಾಲಾತಿಗಳನ್ನು ಹಾಜರಿಪಡಿಸಿ ನಿಯಮಾನಿಸಾರ ವಸೂಲಾತಿದೆ ಕ್ರಮ ಕೈಗೊಳ್ಳಲು ಸೂಚಿಸಿದೆ. ಒಟ್ಟು ವಸೂಲಾತಿ ಮೊತ್ತ ರೂ.22,14,287/–ಗಳಿ (ರೂ.14,39,040+ರೂ.7,75,247).
</td>
<td>ಕಂಡಿಕೆ 76(3) ರ ರೂ.7,75,247/–ಗಳಿಗೆ ಸಂಬಂಧಿಸಿದಂತೆ 2017–18ನೇ ಸಾಲಿನಲ್ಲಿ ವಸೂಲಾತಿ ಮಾಡಲಾಗಿದ್ದು ಪೂರ್ಣ ವಿವರಗಳನ್ನು ಮುಂದಿನ ಲೆಕ್ಕ ತನಿಖಾ ಸಮಯದಲ್ಲಿ ಹಾಜರುಪಡಿಸಲಾಗುವುದು ಈ ನಿಟ್ಟಿನಲ್ಲಿ ಕಂಡಿಕೆ 76 ರಲ್ಲಿ ಆಕ್ಷೇಪಿಸಿರುವ ಆಕ್ಷೇಪಣೆಯನ್ನು ಕೈ ಬಿಡುವಂತೆ ನಿವೇದಿಸಲಾಗಿದೆ.</td>
</tr>
<tr>
<td><u>77. ನಿಯಮವನ್ನು ಉಲ್ಲಂಘಿಸಿ ಅಧ್ಯಾಪಕ ವರ್ಗದವರಿಗೆ/ಅಧ್ಯಾಪಕೇತರ ನೌಕರಿಗೆ ಸಂಭಾವನೆ ಮೊತ್ತ ಪಾವತಿಸಿರುವುದು:– (ಹಣಕಾಸು ವಿಭಾಗ)</u><br><br>
ಮೈಸೂರು ವಿಶ್ವವದಿಯಾನಿಲಯದ 2017–18ನೇ ಸಾಲಿನ ಜಿ.ಆರ್.ಎ ಖಾತೆಯ ಪಾವತಿ ಓಚರ್‌ಗಳನ್ನು ಪರಿಶೀಲಿಸಿದಾಗ 2017–18ನೇ ಸಾಲಿನ ಸ್ವಾಯತ್ತತೆ ಕಾಲೇಜುಗಳ ಸಂಯೋಜನೆ ಕಾರ್ಯಸ ಪರಾಮರ್ಶನಾ ಸಮಿತಿಯ ಅಧ್ಯಕ್ಷರು, ಸದಸ್ಯರುಗಳಾದ ಅಧ್ಯಪಕ ವರ್ಗದವರಿಗೆ ಹಾಗೂ ಅಧ್ಯಾಪಕೇತರ ನೌಕರರಿಗೆ ಸಂಭಾವನೆ ಮೊತ್ತ ರೂ.47,750/–ಗಳನ್ನು ಧನಾದೇಶ ಸಂಖ್ಯೆ:952518/ದಿನಾಂಕ:22.02.2018ರಲ್ಲಿ ಹಾಗೂ ಸಂಭಾವನೆ ಮೊತ್ತ ರೂ.6,92,250/–ಗಳನ್ನು ಧನಾದೇಶ ಸಂಖ್ಯೆ:952819/22.03.2018ರಲ್ಲಿ ಪಾವತಿಸಲಾಗಿರುವುದು ಕಂಡುಬಂದಿರುತ್ತದೆ. ಸರ್ಕಾರದ ಆದೇಶ ಸಂಖ್ಯೆ:ಇಡಿ30 ಯುಎನ್‌ಇ 2000, ದಿನಾಂಕ:19.05.2003ರನ್ವಯ ಯು.ಜಿ.ಸಿ ವೇತನ ಪಡೆಯುವ ಅಧ್ಯಾಪಕ ವರ್ಗದವರಿಗೆ ಸಂಭಾವನೆ ಪಡೆಯುವ ಅವಕಾಶ ಇರುವುದಿಲ್ಲ ಹಾಗೂ ಕೆ.ಸಿ.ಎಸ್.ಆರ್ ನಿಯಮ 28 (ಸಿ) ರನ್ವಯ ಕಾಲೇಜುಗಳ ಸಂಯೋಜನಾ ಕಾರ್ಯ ಇತ್ಯಾದಿ ಕೆಲಸಗಳನ್ನು ನಿರ್ವಹಿಸುವುದು ನೌಕರರ ಕರ್ತವ್ಯದ ಒಂದು ಭಾಗವೇ ಆಗಿರುವುದರಿಂದ ಮೇಲ್ಕಂಡಂತೆ ಅಧ್ಯಾಪಕ ವರ್ಗ ಹಾಗೂ ಅಧ್ಯಾಪಕೇತರ ನೌಕರರಿಗೆ ಸಂಭಾವನೆಯನ್ನು</td>
<td>ಸ್ವಾಯತ್ತತೆ ಕಾಲೇಜುಗಳ ಸಂಯೋಜನೆ ಕಾರ್ಯ ಪರಾಮರ್ಶನ ಸಮಿತಿಯ ಅಧ್ಯಕ್ಷರು ಸದಸ್ಯರುಗಳಾದ ಅಧ್ಯಾಪಕವರ್ಗ, ಹಾಗೂ ಅಧ್ಯಾಪಕೇತರ ನೌಕರರಿಗೆ ಸಂಭಾವನೆ ಮೊತ್ತ ಪಾವತಿಸಿರುವ ಸಂಬಂಧ ಗಮನಿಸಿ 2017–18ನೇ ಸಾಲಿನ ಲಕ್ಕಪರಿಶೋಧನಾ ಕಂಡಿಕೆ 77ರಲ್ಲಿ ಆಕ್ಷೇಪಿಸಲಾಗಿರುವ ಸಂಬಂಧ ಸದರಿ ಸಂಭಾವನೆ ಬಗ್ಗೆ ಸಂಯೋಜನೆ ಕಾರ್ಯ ಪರಾಮರ್ಶನ ಸಮಿತಿಯ ಅಧ್ಯಕ್ಷರು ಸದಸ್ಯರುಗಳಾದ ಅಧ್ಯಾಪಕವರ್ಗ ಹಾಗೂ ಅಧ್ಯಾಪಕೇತರ ನೌಕರರು ತಮ್ಮ ದಿನ ನಿತ್ಯದ ಕರ್ತವ್ಯ ಮತ್ತು ಜವಾಬ್ದಾರಿಗಳ ಜೊತೆ ಜೊತೆಗೆ ಕಛೇರಿಯ ಅವಧಿ ಮೀರಿ ಹಾಗೂ ರಜಾ ದಿನಗಳಲ್ಲಿ ಕರ್ತವ್ಯ ನಿರ್ವಹಿಸುವುದರಿಂದ ಇವರ ಹೆಚ್ಚುವರಿ ಸೇವೆಯನ್ನು ನಿರ್ವಹಿಸುವುದನ್ನು ಗಮನಿಸಿ ಇಂತಹ ಕಾರ್ಯಗಳಲ್ಲಿ ಭಾಗವಹಿಸುವ ಅಧ್ಯಾಪಕ ಹಾಗೂ ಅಧ್ಯಾಪಕೇತರ ನೌಕರರ ವರ್ಗದವರಿಗೆ ,ಸಂಭಾವನೆಯ ಅವಶ್ಯಕತೆ ಹಾಗೂ ಅನಿವಾರ್ಯತೆಯನ್ನು ಗಮನಿಸಿ ಉತ್ತೇಜನ ಪೂರಕವಾಗಿ ವಿ,ವಿ ಆದೇಶ ಸಂಖ್ಯೆ:ಯುಎ/2/119/2003–04</td>
</tr>
</table>

| | |
|---|---|
| ಪಾವತಿಸಿರುವುದು ನಿಯಮದ ಉಲ್ಲಂಘನೆಯಾದಂತಾಗಿರುತ್ತದೆ. ಈ ಕುರಿತು ವಿಚಾರಣೆ ಸಂಖ್ಯೆ:82/ದಿನಾಂಕ:07.06.2019ರಲ್ಲಿ ಸೂಕ್ತ ವಿವರಣೆ ನೀಡಲು ಕೋರಲಾಗಿತ್ತು. ಆದರೆ ಯಾವೂದೇ ವಿವರಗಳನ್ನು ನೀಡಿರುವುದಿಲ್ಲ. ನಿಯಮವನ್ನು ಉಲ್ಲಂಘಿಸಿ ಪಾವತಿಸಲಾಗಿರುವ ಒಟ್ಟು ಮೊತ್ತ ರೂ.7,40,000/-ಗಳನ್ನು ಸಂಬಂಧಿಸಿದವರಿಂದ ವಸೂಲಿಸಿ ವಿಶ್ವವಿದ್ಯಾನಿಲಯದ ಖಾತೆಗೆ ಜಮೆ ಮಾಡಿ ವಿವರಗಳನ್ನು ಲೆಕ್ಕ ತನಿಖೆಗೆ ಹಾಜರುಪಡಿಸಲು ಸೂಚಿಸಿದೆ. ವಿವರಗಳನ್ನು ಅನುಬಂಧ-36ರಲ್ಲಿ ಲಗತ್ತಿಸಿದೆ. | ದಿನಾಂಕ:15.01.2013ರಲ್ಲಿ ಸಂಭಾವನೆ ಪಾವತಿಸಲು ಅನುಮತಿಸಲಾಗಿದೆ ಅಲ್ಲದೆ ದಿನಾಂಕ:12.05.2016ರ ಸಿಂಡಿಕೇಟ್ ಸಭೆಯಲ್ಲಿ ಸದರಿ ವಿಷಯವನ್ನು ಮಂಡಿಸಿ ಅನುಮೋದನೆ ಪಡೆಯಲಾಗಿದೆ ಹಾಗೂ ವಿ.ವಿ ಆದೇಶ ಸಂಖ್ಯೆ:ಯುಎ-2/2003-2004 ದಿನಾಂಕ:27.07.2016ರ ಆದೇಶದಲ್ಲಿ ಸಂಭಾವನೆಯ ಬಗ್ಗೆ ಅನುಮತಿಸಲಾಗಿರುತ್ತದೆ ಹಾಗೂ ಇದಕ್ಕೆ ಸಂಬಂಧಿಸಿದಂತೆ ಸಿಂಡಿಕೇಟ್ ಸಭೆಯ ತೀರ್ಮಾನದ ಸಭಾನಡಾವಳಿ ಪತ್ರ ಹಾಗೂ ವಿ.ವಿ ಆದೇಶಗಳ ಪ್ರಕ್ರಿಯೆಯನ್ನು ಮಾಹಿತಿಗಾಗಿ ಇದರೊಂದಿಗೆ ಲಗತ್ತಿಸುತ್ತ ರೂ.7,40,000/-ಗಳ ವಸೂಲಾತಿ ಕಂಡಿಕೆಯನ್ನು ಕೈ ಬಿಡುವಂತೆ ನಿವೇದಿಸಲಾಗಿದೆ. |
| **78. ಆಯ-ವ್ಯಯ ತಯಾರಿಸಿದ ಕಾರ್ಯಕ್ಕೆ ಸಂಭಾವನೆ ಪಾವತಿಸಿರುವುದು:- (ಹಣಕಾಸು ವಿಭಾಗ)**<br><br>2017-18ನೇ ಸಾಲಿನ ಹಣಕಾಸು ವಿಭಾಗದ ಸಾಮಾನ್ಯ ಖಾತೆಯ ಓಚರ್‌ಗಳನ್ನು ಲೆಕ್ಕ ತಪಾಸಣೆಯಲ್ಲಿ ಪರಿಶೀಲಿಸಲಾಗಿ ಹಣಕಾಸು ಶಾಖೆಯ ನೌಕರರುಗಳು ಆಯ-ವ್ಯಯ ಸಿದ್ದಪಡಿಸಿದ ಕರ್ತವ್ಯಕ್ಕಾಗಿ ಸಂಭಾವನೆಯನ್ನು ಪಾವತಿಸಲಾಗಿರುತ್ತದೆ. (ಹಣಕಾಸು ಶಾಖೆಯ ನೌಕರರು) ಆಯ-ವ್ಯಯ ತಯಾರಿಕಾ ಕಾರ್ಯವು ದಿನ ನಿತ್ಯ ಕರ್ತವ್ಯದ ಒಂದು ಬಾಗವಾಗಿರುವುದರಿಂದ ಕೆ.ಸಿ.ಎಸ್.ಆರ್ ನಿಯಮ 28(ಸಿ) ರನ್ವಯ ವಿಶೇಷ ಕರ್ತವ್ಯಗಳಿಗೆ ಸರ್ಕಾರದ ವಿಶೇಷ ಆದೇಶ ಮೂಲಕ ಅನ್ಯತಾ ಉಪಬಂಧಿಸಿದನ್ನು ಬಿಟ್ಟು ವಿಶೇಷ ಅನುಮತಿ ಇಲ್ಲದೇ ಯಾವುದೇ ಸಂಭಾವನೆಯನ್ನು ಪಡೆಯುವಂತಿಲ್ಲ/ಪಾವತಿಸುವಂತಿಲ್ಲ. ಹಾಗೂ 28 (ಎ), (ಬಿ) & (ಸಿ) ನಿಯಮಗಳನ್ವಯ ಸರ್ಕಾರಿ ನೌಕರನು ಸರ್ಕಾರದ 24 ಗಂಟೆ ನೌಕರನಾಗಿದ್ದು, ಕಛೇರಿಯ ಕರ್ತವ್ಯದ ಹೆಚ್ಚು ಸಮಯ ಕರ್ತವ್ಯ ನಿರ್ವಹಿಸುವುದು ಹೊಣೆಯಾಗಿರುವುದರಿಂದ ಮತ್ತು ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000ರ ನಿಯಮ 41 (5) (6) (7) ರನ್ವಯ ಯಾವುದೇ ಆದೇಶಗಳು/ಆದ್ಯಾದೇಶಗಳನ್ನು ಮಾಡುವಾಗ ಸಿಂಡಿಕೇಟ್ ಸಭೆಯ ಅನಿಮೋದನೆಯೊಂದಿಗೆ ಸರ್ಕಾರದ/ಗೌರವಾನ್ವಿತ ಕುಲಾಧಿಪತಿಗಳ ಅನಿಮೋದನೆ ಪಡೆಯಬೇಕಾಗಿದ್ದು, ಆದೇಶವಿಲ್ಲದೆ ಆಯ-ವ್ಯಯ ಯಮಾರಿಕಾ ಕಾರ್ಯದಲ್ಲಿ ಭಾಗವಹಿಸಿರುವ ನೌಕರರಿಗೆ ರೂ.99,800/-ಗಳನ್ನು ಪಾವತಿಸಿರುವ ಮೊತ್ತವನ್ನು ಪಡೆದಿರುವವರಿಂದ ವಸೂಲಿಸಿ ವಿಶ್ವವಿದ್ಯಾನಿಲಯದ ಸಾದಿಲ್ವಾರು ಶೀರ್ಷಿಕೆ '115' ಕ್ಕೆ ಜಮ ಮಾಡಿ ಜಮೆ ಮಾಡಲಾದ ವಿವರಗಳನ್ನು ಲೆಕ್ಕ ತಪಾಸಣೆಗೆ ಹಾಜರುಪಡಿಸುವಂತೆ ಸೂಚಿಸಿದೆ. | ವಿಶ್ವವಿದ್ಯಾನಿಯದ 2017-18ನೇ ಸಾಲಿನ ಆಯ-ವ್ಯಯ ಅಂದಾಜು ತಯಾರಿಕೆಯ ಕಾರ್ಯದಲ್ಲಿ ತಮ್ಮ ದಿನನಿತ್ಯದ ಕಛೇರಿ ಕಾರ್ಯಗಳ ನಿರ್ವಹಣೆಯ ಜೊತೆಜೊತೆಯಲ್ಲಿಯೇ ಮತ್ತು ಹೆಚ್ಚುವರಿಯಾಗಿ ಸರ್ಕಾರಿ ರಜಾ ದಿನಗಳಲ್ಲಿಯೂ ತೊಡಗಿಸಿಕೊಂಡಿರುವ ಸಂಬಂಧ ಕಛೇರಿ ಸಿಬ್ಬಂದಿಗೂ ಪ್ರೋತ್ಸಾಹ ಧನದ ರೂಪದಲ್ಲಿ ನೀಡಿರುವ ಮೊತ್ತವಾಗಿದೆ. (99,800)<br>ವಿಶ್ವವಿದ್ಯಾನಿಲಯದ ಆಯವ್ಯಯ ತಯಾರಿಕೆಯು ಸುದೀರ್ಘ ಪ್ರಕ್ರಿಯೆಯಾಗಿದ್ದು ಶೀರ್ಷಿಕೆಗಳಲ್ಲಿನ ವಿವಿಧ ವಿಭಾಗಗಳ ನಿರೀಕ್ಷಿತ ಆದಾಯ ಮತ್ತು ನಿರೀಕ್ಷಿತ ವೆಚ್ಚಗಳ ವಿವರಗಳನ್ನು ಒಳಗೊಂಡ ವಾರ್ಷಿಕ ಹಣಕಾಸು ತಯಾರಿಕ ವರದಿಯಾಗಿರುತ್ತದೆ.<br>ಆಯ-ವ್ಯಯ ತಯಾರಿಕೆಯು ಮೇಲೆ ಉಲ್ಲೇಖಿಸಿರುವಂತೆ ಪ್ರತಿಯೊಂದು ವಿಭಾಗಗಳ ಸ್ವೀಕೃತಿಗಳ ವಿವರ ಸಂಗ್ರಹಿಸಿ ಕ್ರೋಢೀಕರಿಸಿ ಮತ್ತು ಇದೇ ರೀತಿಯಲ್ಲಿ ಸಂಭವನೀಯ ವೆಚ್ಚಗಳ ವಿವರ ಸಂಗ್ರಹಣೆ ನಿರ್ಧರಣೆಯನ್ನು ಒಳಗೊಂಡಿರುತ್ತದೆ. ಅಲ್ಲದೇ ಈ ರೀತಿಯಾಗಿ ತಯಾರಿಸಿದ ಕ್ರೋಢೀಕೃತ ವಿವರವನ್ನು ನಿಗದಿತವಾದ ಅವಧಿಯಲ್ಲಿ ಸರ್ಕಾರಕ್ಕೆ ಸಲ್ಲಿಸುವುದು ಅವಶ್ಯಕವಾಗಿರುತ್ತದೆ ಮತ್ತು ಆಯ-ವ್ಯಯ ತಯಾರಿಕೆಯಂತಹ ವಾರ್ಷಿಕವಾಗಿ ಬರುವ ವಿಶೇಷ ಪ್ರಕರಣಗಳಲ್ಲಿ ಒಂದು ರೀತಿಯ ಸಂಭಾವನೆಯ ಪಾವತಿಗೆ ಕೆಸಿಎಸ್‌ಆರ್ ನಿಯಾಮಾವಳಿಗಳಡಿಯಲ್ಲಿ ಬರುವ ಉಪನಿಯಮ 28 (ಶುಲ್ಕ ಮತ್ತು ಸಂಭಾವನೆ) ರಲ್ಲಿನ ಟಿಪ್ಪಣಿಸಂಖ್ಯೆ – 01 ರಲ್ಲಿ ಪ್ರಸ್ತಾವಿತವಾಗಿರುವಂತೆ ಸರ್ಕಾರಿ ನೌಕರರು ಕಛೇರಿಯ ಅವಧಿಯನ್ನು ಮೀರಿ ಕೆಲಸ ನಿರ್ವಹಿಸಿದಂತಹ ಸಂದರ್ಭಗಳಲ್ಲಿ ಮತ್ತು ಸರ್ಕಾರಿ ರಜಾ ದಿನಗಳಲ್ಲಿಯೂ ಕೆಲಸ ನಿರ್ವಹಿಸಿದ ವಿಶೇಷ ಪ್ರಕರಣಗಳಲ್ಲಿ ನೌಕರರಿಗೆ ಪ್ರೋತ್ಸಾಹಿಸುವ ಸಲುವಾಗಿ ಸಂಭಾವನೆ ಪ್ರೋತ್ಸಾಹಧನ ಪಾವತಿಗೆ ಅವಕಾಶ ಕಲ್ಪಿಸಲಾಗಿದೆ. ಈ ಸಂದರ್ಭದಲ್ಲಿ ಅವಶ್ಯಕ ನಿರ್ವಹಣೆಯನ್ನು ಗಮನದಲ್ಲಿರಿಸಿಕೊಂಡು ನೌಕರರ ಸೇವೆಯನ್ನು ಬಳಸಿಕೊಳ್ಳಲಾಗಿರುತ್ತದೆ.<br>ಆದುದರಿಂದ ಈ ನಿಟ್ಟಿನಲ್ಲಿ ಈ ವಿಷಯವನ್ನು ವಿಶೇಷ ಸಂಧರ್ಭವೆಂದು ಪರಿಗಣಿಸಿ |

<table>
<tr>
<td></td>
<td>ವಸೂಲಾತಿ ಮೊತ್ತ ರೂ.99,800/–ಗಳನ್ನು ವಸೂಲಾತಿ ಕಂಡಿಕೆಯಿಂದ ಕೈ ಬಿಡುವಂತೆ ನಿವೇದಿಸಲಾಗಿದೆ.</td>
</tr>
<tr>
<td>

<u>**79. ಯೂರೋಪ್ ಯೂನಿಯನ್ ಯೋಜನೆಯಡಿಯಲ್ಲಿ ಮಾರ್ಗಸೂಚಿ ಉಲ್ಲಂಘಿಸಿ ಸಂಶೋಧನಾ ವಿದ್ಯಾರ್ಥಿಗಳಿಗೆ & ಅತಿಥಿ ಉಪನ್ಯಾಸಕರುಗಳಿಗೆ ವೇತನ ಪಾವತಿಸಿರುವುದು:– (ಹಣಕಾಸು ವಿಭಾಗ)**</u>

2017–18ನೇ ಸಾಲಿನ ಲೆಕ್ಕ ತಪಾಸಣೆಯಲ್ಲಿ EU-ALBA ಯೋಜನೆಯ ಅನುದಾನದ ಲೆಕ್ಕ ಪತ್ರಗಳನ್ನು ಪರಿಶೀಲಿಸಲಾಗಿ EU-ALBA Consortum Agreementsನ ಮಾರ್ಗಸೂಚಿಯಲ್ಲಿ ಸಂಶೋಧನಾ ವಿದ್ಯಾರ್ಥಿ (ಹಿರಿಯ/ಕಿರಿಯ) ಹಾಗೂ ಅತಿಥಿ ಉಪನ್ಯಾಸಕರುಗಳನ್ನು ನೇಮಕ ಮಾಡಿಕೊಳ್ಳಲು ಅವಕಾಶವಿರುವುದಿಲ್ಲ. ಆದರೆ ಸಂಶೋಧನಾ ವಿದ್ಯಾರ್ಥಿಗಳು & ಅತಿಥಿ ಉಪನ್ಯಾಸಕರುಗಳನ್ನು ನೇಮಕ ಮಾಡಿಕೊಂಡು ರೂ.6,33,938– (3,95,200+2,38,138)ಗಳನ್ನು ಪಾವತಿ ಮಾಡಲಾಗಿದೆ. ನೇಮಕಾತಿ ಕಡತಗಳನ್ನು ಲೆಕ್ಕ ತಪಾಸಣೆಗೆ ಹಾಜರುಪಡಿಸುವಂತೆ ಕೋರಿ ವಿಚಾರಣಾ ಪತ್ರ ಸಂಖ್ಯೆ:99/19.06.2019 ರಲ್ಲಿ ಕೋರಲಾಗಿದ್ದು, ಯಾವುದೇ ವಿವರಣೆಯನ್ನು ನೀಡಿರುವುದರಿಂದ ವೇತನ ಪಾವತಿಸಿರುವ ಮೊತ್ತ **ರೂ.6,33,938/–ಗಳನ್ನು ಆಕ್ಷೇಪಣೆಗೆ ಸೂಚಿಸಿದೆ.**

</td>
<td>

ಯುರೋಪ್ ಯೂನಿಯನ್ ಯೋಜನೆ ಯ ಅನುದಾನದಡಿ Increasity Yields Of Miccet and Sorgwam by a new and Sustaiuable Seed Teehnology Develeped in Sahel ಯೋಜನೆಯನ್ನು ಕೈಗೊಂಡು ಜೈವಿಕ ತಂತ್ರಜ್ಞಾನ ಅಧ್ಯಯನಕ್ಕಾಗಿ ಅನುದಾನ ಸಂಸ್ಥೆಯಿಂದ ರೂ.47,41,067/–ಗಳು ಬಿಡುಗಡೆಯಾಗಿದು ವಿ.ವಿ ಆದೇಶ ಸಂಖ್ಯೆ:ಡಿವಿ4/61/2013–14 ದಿನಾಂಕ:09.09.2014ರಲ್ಲಿ ಈ ಕೆಳಕಂಡ ಶೀರ್ಷಿಕೆಗಳಡಿಯಲ್ಲಿ ಅನುದಾನ ಹಂಚಿಕೆಯಾಗಿರುತ್ತದೆ.

| ಕ್ರ ಸಂ | ವಿವರ | ಮೊಬಲಗು |
|---|---|---|
| 1 | Human Resoures | 3212284 |
| 2 | Travel | 411788 |
| 3 | Eqeuipment Supplies | 353578 |
| 4 | Local Office | 220298 |
| 5 | Other Costs | 233007 |
| 6 | Administrative Cost | 310112 |
| | **Total** | **4741067** |

ರೂ.47,41,067/–ಗಳ ಹಂಚಿಕೆಯಾಗಿರುವ ಅನುದಾನದಡಿಯಲ್ಲಿ 2017–18ನೇ ಸಾಲಿನಲ್ಲಿ ಈ ಯೋಜನೆಯಡಿ ಸಂಶೋಧನಾ ವಿದ್ಯಾರ್ಥಿಗಳ ವೇತನ ಪಾವತಿಗೆ ರೂ.6,33,938/–ಗಳನ್ನು ಪಾವತಿಸಳಾಗಿರುತ್ತದೆ

ಮುಂದುವರಿದು ಕಂಡಿಕೆ–79 ರಲ್ಲಿ ಪ್ರಸ್ತಾಪಿಸಿರುವಂತೆ ಹಿರಿಯ ಕಿರಿಯ ವಿದ್ಯಾರ್ಥಿಗಳಿಗೆಂದು ಯಾವುದೇ ಪ್ರಕ್ಯೇಕಕೆಯ ವಿಷಯವಿರುವುದಿಲ್ಲ ಆದರೆ ಕೈ ತಪ್ಪಿನಿಂದ 2017–18ನೇ ಸಾಲಿನ ವಾರ್ಷಿಕ ಲೆಕ್ಕ ಪತ್ರದಲ್ಲಿ ಹಿರಿಯ ಕಿರಿಯ ವಿದ್ಯಾರ್ಥಿಗಳ ಕೋಡ್‌ಗಳಡಿಯಲ್ಲಿ ತಪ್ಪಾಗಿ ಪಾವತಿ ವಿವರ ನಮೂದಾಗಿರುತ್ತದೆ

ಯೂರೋಪಿಯನ್ ಯೂನಿಯನ್ ಯೋಜನೆಯಡಿಯಲ್ಲಿ 531 ಫೆಲೋಷಿಪ್ 228, ಟೀಚಿಂಗ್ ಸ್ಯಾಲರಿ ಹಾಗೂ229, ನಾನ್–ಟೀಚಿಂಗ್ ಸ್ಯಾಲರಿಯ ಶೀರ್ಷಿಕೆಯಡಿಯಲ್ಲಿ ವೇತನವನ್ನು ಪಾವತಿಸಲಾಗಿರುತ್ತದೆ.

ಈ ನಿಟ್ಟಿನಲ್ಲಿ 2017–18ನೇ ಸಾಲಿನಲ್ಲಿ ಸದರಿ ಸಂಶೋಧನಾ ಕಾರ್ಯದಡಿಯಲ್ಲಿ

</td>
</tr>
</table>

| | |
|---|---|
| | ಪಾವತಿಯಾಗಿರುವ ಹಾಗೂ ಕಂಡಿಕೆ 79 ರಲ್ಲಿ ಆಕ್ಷೇಪಿಸಿ ಆಕ್ಷೇಪಣೆಯಲ್ಲಿಟ್ಟಿರುವ ಮೊತ್ತ ರೂ.6,33,938/–ಗಳನ್ನು ಆಕ್ಷೇಪಣೆಯಿಂದ ಕೈ ಬಿಡುವಂತೆ ನಿವೇದಿಸಲಾಗಿದೆ. |
| 80. **<u>ಬೋಧಕೇತರ ನೌಕರರ ಪರೀಕ್ಷತಾ ಪೋಷಣೆ ಆಗಿರುವ ವಿವರಗಳನ್ನು ಸೇವಾವಹಿಯಲ್ಲಿ ನಮೂದಿಸಿರುವುದು:– (ಹಣಕಾಸು ವಿಭಾಗ)</u>**<br><br>2017–18ನೇ ಸಾಲಿನ ಲೆಕ್ಕ ತಪಾಸಣೆಯಲ್ಲಿ ಹಣಕಾಸು ವಿಭಾಗದ ನೌಕರರ ಸೇವಾವಹಿಯನ್ನು ಪರಿಶೀಲಿಸಲಾಗಿ ಅನುಬಂಧ–37ರಲ್ಲಿ ವಿವರಿಸಿರುವ ನೌಕರರ ಪರೀಕ್ಷತಾ ಅವಧಿ ಘೋಷಣೆ ಆಗಿರುವ ಮಾಹಿತಿಗಳನ್ನು ಸೇವಾವಹಿಯಲ್ಲಿ ನಮೂದಿಸಿರುವ ಬಗ್ಗೆ ಲೆಕ್ಕ ತಪಾಸಣಾ ವಿಚಾರಣಾ ಪತ್ರ ಸಂಖ್ಯೆ: 1) 52/25.05.2019, 2) 78(ಎ)/04.06.2019, 3) 122/27.06.2019 ರಲ್ಲಿ ಒಟ್ಟು 3 ವಿಚಾರಣಾ ಪತ್ರಗಳನ್ನು ನೀಡಿ ಕಡತಗಳನ್ನು ಹಾಜರುಪಡಿಸುವಂತೆ ಕೋರಲಾಗಿದ್ದು ಯಾವುದೇ ಕಡತಗಳನ್ನು ಹಾಜರುಪಡಿಸಿರುವುದಿಲ್ಲ.<br><br>ಮೈಸೂರು ವಿಶ್ವವಿದ್ಯಾನಿಲಯದ ನೌಕರರ (ಪರೀವಿಕ್ಷಣ) ಪರಿನಿಯಮ–1983ರ ನಿಯಮ 4 ಮತ್ತು 5ರನ್ವಯ ನೇಮಕವಾದ 2 ವರ್ಷಗಳಲ್ಲಿ ನಿಗದಿಪಡಿಸಿರುವ ಎಲ್ಲಾ ಷರತ್ತುಗಳನ್ನು ಪೂರ್ಣಗೊಳಿಸಿ ಇಲಾಖಾ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿ ಪರೀಕ್ಷಾ ಅವಧಿ ಘೋಷಣೆ ಮಾಡಬೇಕಾಗಿರುತ್ತದೆ. ಹಾಗೂ ಸೇವಾವಹಿಯಲ್ಲಿ ನಮೂದಿಸಬೇಕಾಗಿರುತ್ತದೆ. ಆದರೆ ಸದರಿ ನೌಕರರಿಗೆ ಪರೀಕ್ಷತಾ ಅವಧಿಯನ್ನು ಘೋಷಣೆ ಮಾಡದೆ ಎಲ್ಲಾ ಸವಲತ್ತುಗಳನ್ನು ನೀಡಿರುವುದು ನಿಯಮವನ್ನು ಉಲ್ಲಂಘಿಸಂದಂತಾಗಿರುವುದರಿಂದ ಮೈಸೂರು ವಿಶ್ವವಿದ್ಯಾನಿಲಯದ ನೌಕರರ (ಪರೀಕ್ಷಣ) ಪರಿನಿಯಮ–1983ರ ನಿಯಮ 4 ಮತ್ತು 5ರನ್ವಯ ಆಡಳಿತಾತ್ಮಕ ಕ್ರಮವಹಿಸಿ ವಿವರಗಳನ್ನು ಲೆಕ್ಕ ತಪಾಸಣೆಗೆ ಹಾಜರುಪಡಿಸುವಂತೆ ಸೂಚಿಸಿದೆ. | ವಿಶ್ವವಿದ್ಯಾನಿಲಯದ ಬೋಧಕೇತರ ನೌಕರರ ಪರೀಕ್ಷತಾ ಅವಧಿಯ ಘೋಷಣೆಗಳ ವಿವರಗಳನ್ನು ಸಂಬಂಧಪಟ್ಟ ನೌಕರರ ವೇವಾ ವಹಿಯಲ್ಲಿ ನಮೂದಿಸಿರುವುದಿಲ್ಲವೆಂದು ಕಂಡಿಕೆ ಸಂಖ್ಯೆ 80ರಲ್ಲಿ ಗಮನಿಸಿ ಸೂಚಿಸಿರುವ ಮೇರೆಗೆ ಸದರಿ ನೌಕರರ ಸೇವಾ ವಹಿಯಲ್ಲಿ ಪರೀಕ್ಷತಾ ಅವಧಿಯ ಘೋಷಣಾ ವಿವರಗಳನ್ನು ನಮೂದಿಸಿ ಲೆಕ್ಕ ಪರಿಶೋಧನೆಗೆ ಹಾಜರುಪಡಿಸಲಾಗಿದೆ. ವಿವರಗಳನ್ನು ಇದರೊಂದಿಗೆ ಮಾಹಿತಿಗಾಗಿ ಲಗತ್ತಿಸಿದೆ.<br><br>ಈ ಸಂಬಂಧ ಸದರಿ ಆಕ್ಷೇಪಣೆಯನ್ನು ಕೈ ಬಿಡುವಂತೆ ಕೋರಲಾಗಿದೆ. |
| **<u>81. ಭೋಧಕೇತರ ನೌಕರರ ಮಂಜೂರಾತಿ ಹುದ್ದೆಗಳಿಗಿಂತ ಹೆಚ್ಚುವರಿ ಹುದ್ದೆಗಳನ್ನು ಸೃಷ್ಟಿಸಿ ಸ್ವತಂತ್ರ ಪ್ರಭಾರದ ಮೇಲೆ ನೇಮಕ ಮಾಡಿಕೊಂಡು ಪ್ರಭಾರ ಭತ್ಯೆ ನೀಡಿರುವುದು:– (ಹಣಕಾಸು ವಿಭಾಗ)</u>**<br><br>ಮೈಸೂರು ವಿಶ್ವವಿದ್ಯಾನಿಲಯದ ಎಲ್ಲಾ ಕಛೇರಿಗಳು, ಕಾಲೇಜುಗಳು ಪ್ರಾದೇಶಿಕ ಕೇಂದ್ರಗಳು ಮತ್ತು ಅಧ್ಯಯನ ವಿಭಾಗಗಳಿಗೆ ಸರ್ಕಾರದಿಂದ ಮಂಜೂರಾಗಿರುವ ಬೋಧಕೇತರ ಒಟ್ಟು ಹುದ್ದೆಗಳು 312ಗಳಾಗಿದ್ದು ನಿಯಮಾನುಸಾರ Statute Chapter:12.2 ರ Schedule-2 ರನ್ವಯ ಬೋಧಕೇತರ ನೌಕರರ ಮಂಜೂರಾದ ವಿವಿಧ 312 ಹುದ್ದೆಗಳಿಗೆ ಮಾತ್ರವೇ ನೇಮಕಾತಿ ಅಥವಾ ಪದೋನ್ನತಿ ನೀಡಬೇಕಾಗಿರುತ್ತದೆ ಆದರೆ 27 ಬೋಧಕೇತರ ಹುದ್ದೆಗಳಿಗೂ KCSR ನಿಯಮ 32ರನ್ವಯ ಸ್ವತಂತ್ರ ಪ್ರಭಾರ ನೀಡುವ ಮೂಲಕ ಪ್ರಭಾರ ಭತ್ಯೆ 7.5% ಅನ್ನು ನೀಡುತ್ತಿರುವುದನ್ನು ಲೆಕ್ಕ ತಪಾಸಣೆಯಲ್ಲಿ ಪರಿಶೀಲಿಸಲಾಗಿದ್ದು ಮೈಸೂರು ವಿಶ್ವವಿದ್ಯಾನಿಲಯದಿಂದ ಕರಡು | ದಿನಾಂಕ: 21–11–2016ರಂದು ಜರುಗಿದ ಸಿಂಡಿಕೇಟ್ ಸಭೆಯ ನಿರ್ಣಯದ ಮೇರೆಗೆ, ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಬೋಧಕೇತರರ ಉದ್ಯೋಗಿಗಳಿಗೆ ಉನ್ನತೀಕರಿಸಿದ 27 ಹುದ್ದೆಗಳ ಎದುರಾಗಿ ಸ್ವತಂತ್ರ ಪ್ರಭಾರದ ಆಧಾರದ ಮೇಲೆ ಪದೋನ್ನತಿ ನೀಡುವ ಸಂಬಂಧ ಸಭೆಯು ಚರ್ಚಿಸಿ ಬೋಧಕೇತರರ ಉದ್ಯೋಗಿಗಳಿಗೆ ಸ್ವತಂತ್ರ ಪ್ರಭಾರದಆಧಾರದ ಮೇಲೆ ಪದೋನ್ನತಿ ನೀಡುವ ಸಂಬಂಧ ಈಗಾಗಲೇ ಸರ್ಕಾರಕ್ಕೆ ಕಳುಹಿಸಲಾಗಿರುವ ಅಧಿನಿಯಮದಅಂಕಿತವನ್ನು ಕಾಯ್ದಿರಿಸಿ ಹಾಗೂ ಸಂಬಂಧಪಟ್ಟ ಬೋಧಕೇತರ ಉದ್ಯೋಗಿಗಳ ಮುಚ್ಚಳಿಕೆಯನ್ನು ತೆಗೆದುಕೊಂಡು ಕೆಸಿಎಸ್‌ಆರ್ ನಿಯಮ 32 ಮತ್ತು 68ರ |

ಅಧಿನಿಯಮವನ್ನು ರಚಿಸಿ ಸರ್ಕಾರದ ಅನುಮೋದನೆಗೆ ದಿನಾಂಕ:23.01.1999 ರಲ್ಲಿ ಕಳುಹಿಸಲಾಗಿದ್ದು ಸರ್ಕಾರದ ಅಧೀನ ಕಾರ್ಯದರ್ಶಿಗಳು ಶಿಕ್ಷಣ ಇಲಾಖೆ (ವಿಶ್ವವಿದ್ಯಾನಿಲಯ) ಇವರ ಪತ್ರ ಸಂಖ್ಯೆ:EDR/UMS/ಬೆಂಗಳೂರು ದಿನಾಂಕ:05.04.1999ರ ಪತ್ರದಲ್ಲಿ ಹುದ್ದೆಗಳನ್ನು ಸೃಜಿಸಲು ತಡೆಹಿಡಿಯಲಾಗಿದೆ ಆದರೆ ಪುನಃ ವಿಶ್ವವಿದ್ಯಾನಿಲಯದಿಂದ ಬೋಧಕೇತರ 27 ಹುದ್ದೆಗಳನ್ನು ಸೃಜಿಸಿರುವ ಕರಡು ಅಧಿನಿಯಮವನ್ನು ಸರ್ಕಾರದ ಅನುಮೋದನೆ ದಿನಾಂಕ:29.11.2002ರಲ್ಲಿ ಕಳುಹಿಸಿಕೊಡಲಾಗಿದ್ದು ಸರ್ಕಾರದ ಅಧೀನ ಕಾರ್ಯದರ್ಶಿಗಳು ಶಿಕ್ಷಣ ಇಲಾಖೆ (ವಿಶ್ವವಿದ್ಯಾನಿಲಯ-1) ರವರ ಪತ್ರ ಸಂಖ್ಯೆ:ID/18/UMS/2003/ಬೆಂಗಳೂರು ದಿನಾಂಕ:23.07.2003ರ ಪತ್ರದಲ್ಲಿ ಬೋಧಕೇತರ 27 ಹುದ್ದೆಗಳ ಸೃಜಿಸಿರುವ ಅನುಶಾಸನ/ಅಧಿನಿಯಮವನ್ನು ಅನುಮೋದಿಸದೆ ಹಿಂದಿರುಗಿಸಿರುತ್ತಾರೆ.

ವಿಶ್ವವಿದ್ಯಾನಿಲಯದಿಂದ ಬೋಧಕೇತರ ನೌಕರರ ವಿವಿಧ ಹುದ್ದೆಗಳನ್ನು ಉನ್ನತೀಕರಿಸಲು ಕರಡು ಪರಿನಿಯವನ್ನು ರಚಿಸಿ ಸರ್ಕಾರದ ಅನುಮೋದನೆಗೆ ವಿಶ್ವವಿದ್ಯಾನಿಲಯದ ಪತ್ರ ಸಂಖ್ಯೆ:ETS 200/1998-99 ದಿನಾಂಕ:04.01.2010ರಲ್ಲಿ ಕಳುಹಿಸಲಾಗಿದ್ದು ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಶಿಕ್ಷಣ ಇಲಾಖೆ (ವಿಶ್ವವಿದ್ಯಾನಿಲಯಗಳು) ಪತ್ರ ಸಂಖ್ಯೆ:ED07/UMS/2010 ಬೆಂಗಳೂರು ದಿನಾಂಕ:27.05.2010ರಲ್ಲಿ ಪರಿನಿಯಮವನ್ನು ಪರಿಗಣಿಸಲು ಸಾಧ್ಯವಿಲ್ಲವೆಂದು ಹಿಂದಿರುಗಿಸಲಾಗಿದ್ದರೂ ಹಾಗೂ ಕರ್ನಾಟಕ ಸರ್ಕಾರದ ಆರ್ಥಿಕ ಇಲಾಖೆಯ ಸುತ್ತೋಲೆ ಸಂಖ್ಯೆ:FD3/SRP/98/ಬೆಂಗಳೂರು ದಿನಾಂಕ:14.02.1998ರ ಸುತ್ತೋಲೆಯನ್ವಯ ಆರ್ಥಿಕ ಮಿತವ್ಯಯ ಚಾಲ್ತಿಯಲ್ಲಿರುವುದರಿಂದ ಸರ್ಕಾರದ ಅನುಮತಿ ಇಲ್ಲದೆ ಯಾವುದೇ ಹುದ್ದೆಗಳನ್ನು ಸೃಜಿಸಲು ಅಥವಾ ಆರ್ಥಿಕ ಹೊರೆಯಾಗುವಂತಹ ಯಾವುದೇ ಕಾರ್ಯಗಳನ್ನು ಕೈಗೊಳ್ಳುವಂತಿಲ್ಲವೆಂದು ಸುತ್ತೋಲೆಯಲ್ಲಿ ಕಡ್ಡಾಯವಾಗಿ ತಿಳಿಸಿದ್ದರೂ ಹಾಗೂ 3 ಬಾರಿ ಸರ್ಕಾರದಿಂದ ಬೋಧಕೇತರರ 27 ಹುದ್ದೆಗಳ ಸೃಜನೆಯ ಕರಡು ಅಧಿನಿಯಮವನ್ನು ಅನುಮೋದಿಸದೆ ಹಿಂದಿರುಗಿಸಿದ್ದರೂ (ತಿರಸ್ಕರಿಸಿದ್ದರೂ) ಸಹ 2017-18ನೇ ಸಾಲಿನಲ್ಲಿ ಬೋಧಕೇತರ ಹುದ್ದೆಗಳಿಗೆ KCSR ನಿಯಮ 32 ರನ್ವಯ ಸ್ವತಂತ್ರ ಪ್ರಭಾರದ ಮೇಲೆ ಪದೋನ್ನತಿ ನೀಡಿ ಪ್ರಭಾರ ಭತ್ಯೆಯನ್ನು ಪಾವತಿಸಿರುವುದನ್ನು ಗಮನಿಸಲಾಗಿದೆ.

ಬೋಧಕೇತರ ನೌಕರರ ವಿವಿಧ ದರ್ಜೆಯ 27 ಹುದ್ದೆಗಳು ಮಂಜೂರಾಗದಿದ್ದರೂ ಸರ್ಕಾರದ ಆದೇಶವನ್ನು ಪರಿಗಣಿಸದೇ ಹಾಗೂ ಸರ್ಕಾರದಿಂದ ಈ ಪ್ರಸ್ತಾವನೆ ತಿರಸ್ಕರಿಸಿದ್ದರು 2017-18ನೇ ಸಾಲಿನಲ್ಲಿ ಸ್ವತಂತ್ರ ಪ್ರಭಾರದ ಮೇಲೆ ಪದೋನ್ನತಿ ನೀಡಿ ಪ್ರಭಾರ ಭತ್ಯೆಯನ್ನು ಪಾವತಿಸಿರುವ ಮೊತ್ತ ರೂ.2,05,830/-ಗಳನ್ನು ವಸೂಲಾತಿಗೆ ಸೂಚಿಸಿದೆ ಸರ್ಕಾರದ ನಿರ್ದೇಶನವನ್ನು ಪಾಲಿಸದಿರುವ ಅಧಿಕಾರಿಗಳ ವಿರುದ್ಧ ಆಡಳಿತಾತ್ಮಕ ಕ್ರಮ ಜರುಗಿಸಲು ಸೂಚಿಸಿದೆ

ಪ್ರಕಾರ ಪ್ರಭಾರವುಆರು ತಿಂಗಳಿಗಿಂತ ಹೆಚ್ಚಾದಲ್ಲಿ ಮರುಆದೇಶ ನೀಡುವ ಷರತ್ತುಗೊಳಪಟ್ಟು ಸ್ವತಂತ್ರ ಪ್ರಭಾರದಆಧಾರದ ಮೇಲೆ ಪದೋನ್ನತಿ ನೀಡುವಂತೆ ಸಿಂಡಿಕೇಟ್ ಸಭೆಯು ತೀರ್ಮಾನಿಸಿತು.

ಮೇಲಿನ ಸಿಂಡಿಕೇಟ್ ಸಭೆಯ ನಿರ್ಣಯದಂತೆ, ಗ್ರೂಪ್ 'ಎ', 'ಬಿ' ಮತ್ತು 'ಸಿ' ವೃಂದದ ಹುದ್ದೆಗಳಾದ ಉಪಕುಲಸಚಿವ, ಸಹಾಯಕ ಕುಲಸಚಿವ, ಅಧೀಕ್ಷಕ, ಹಿರಿಯ ಸಹಾಯಕ ಮತ್ತು ಪ್ರಥಮದರ್ಜೆ ಸಹಾಯಕರನ್ನೊಳಗೊಂಡ ಉನ್ನತೀಕರಿಸಿದ ಹುದ್ದೆಗಳಿಗೆ ಎದುರಾಗಿ ದಿನಾಂಕ: 02-01-2017 ಮತ್ತು ದಿನಾಂಕ: 14-02-2017ರಲ್ಲಿ ಸುಮಾರು 21 ಉದ್ಯೋಗಿಗಳಿಗೆ ಈ ಕೆಳಕಂಡಂತೆ ಮುಚ್ಚಳಿಕೆಯನ್ನು ಪಡೆದು, ಕೆಸಿಎಸ್‌ಆರ್ ನಿಯಮ 32 ಮತ್ತು 68ರ ಅವಕಾಶಗಳಿಗೆ ಅನುಗುಣವಾಗಿಆಯಾ ವೃಂದದ ವೇತನ ಶ್ರೇಣಿಯ ಕನಿಷ್ಠ ವೇತನದ 7.5% ರಷ್ಟು ಪ್ರಭಾರ ಭತ್ಯೆಯೊಡನೆಆರು ತಿಂಗಳ ಅವಧಿಗೆ ಪ್ರಭಾರದಆಧಾರದ ಮೇಲೆ ಪದೋನ್ನತಿ ನೀಡಲಾಗಿದೆ.

**ಮೈಸೂರು ವಿಶ್ವವಿದ್ಯಾನಿಲಯದಲ್ಲಿ ವಿವಿಧ ವೃಂದದಒಟ್ಟು 27 ಹುದ್ದೆಗಳನ್ನು ಉನ್ನತೀಕರಿಸುವ ಸಂಬಂಧಅಧಿನಿಯಮವನ್ನು ರಚಿಸಿ ಸನ್ಮಾನ್ಯ ಕುಲಾಧಿಪತಿಗಳ ಅಂಕಿತಕ್ಕಾಗಿ ಸರ್ಕಾರಕ್ಕೆ ಸಲ್ಲಿಸಲಾಗಿದ್ದು, ಸದರಿಅಧಿನಿಯಮದಅನುಮೋದನೆಯನ್ನು ಕಾಯ್ದಿರಿಸಿ 27 ಹುದ್ದೆಗಳಿಗೆ ಎದುರಾಗಿ ಸ್ವತಂತ್ರ ಪ್ರಭಾರದಆಧಾರದ ಮೇಲೆ ನನ್ನನ್ನು ಕಾರ್ಯನಿರ್ವಹಿಸಲು ಸೂಚಿಸಿರುವುದನ್ನು ಒಪ್ಪಿಕೊಂಡು ಈ ಸಂಬಂಧಅಧಿನಿಯಮವು ಸರ್ಕಾರದಿಂದತಿರಸ್ಕೃತಗೊಂಡಲ್ಲಿಅಥವಾ ಸರ್ಕಾರಿ ಲೆಕ್ಕ ಪರಿಶೋಧಕರು ಆಕ್ಷೇಪಿಸಿದ್ದಲ್ಲಿ ನಾನು ಪಡೆದಿರುವ ಪ್ರಭಾರ ಭತ್ಯೆಯನ್ನು ಹಿಂದಿರುಗಿಸಲುಒಪ್ಪಿರುತ್ತೇನೆಎಂದು ಮುಚ್ಚಳಿಕೆಯನ್ನು ಬರೆದುಕೊಟ್ಟಿರುತ್ತೇನೆ.**

ಈ ಹಿನ್ನೆಲೆಯಲ್ಲಿ ಸದರಿ ಉದ್ಯೋಗಿಗಳು ಈಗಾಗಲೇ ಪಡೆದಿರುವ ಪ್ರಭಾರ ಭತ್ಯೆಯನ್ನು ಲೆಕ್ಕ ಪರಿಶೋಧಕರು ಆಕ್ಷೇಪಿಸಿದಲ್ಲಿ, ಹಿಂದಿರುಗಿಸಲುಒಪ್ಪಿಗೆ ಸೂಚಿಸಿ ಮುಚ್ಚಳಿಕೆಯನ್ನು ಬರೆದುಕೊಟ್ಟಿರುವುದರಿಂದ ಹಾಗೂ ಸದರಿ ಉದ್ಯೋಗಿಗಳಲ್ಲಿ ಐವರು ಉದ್ಯೋಗಿಗಳು ಈಗಾಗಲೇ ವಯೋನಿವೃತ್ತಿ ಹೊಂದಿರುವುದರಿಂದ ಸದರಿ ನಿವೃತ್ತ ಉದ್ಯೋಗಿಗಳ ಹಾಗೂ ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಉದ್ಯೋಗಿಗಳ ಪಿಂಚಣಿ/ವೇತನದಿಂದ ಕಟಾಯಿಸಿ, ಸಂಬಂಧಪಟ್ಟಖಾತೆಗೆ ಹಿಂದಿರುಗಿಸಲುಕ್ರಮ ವಹಿಸಲಾಗುವುದು.

| | |
|---|---|
| ವಿವರಗಳನ್ನು ಅನುಬಂಧ–38ರಲ್ಲಿ ನೀಡಲಾಗಿದೆ. | |
| **82. ಸ್ವಂತ ಕಾರಿನಲ್ಲಿ ಪ್ರಯಾಣಿಸಿದ್ದಕ್ಕಾಗಿ ನಿಯಮ ಬಾಹಿರವಾಗಿ ಹೆಚ್ಚುವರಿ ಪ್ರಯಾಣ ಭತ್ಯೆ ನೀಡಿರುವುದು:– (ಹಣಕಾಸು ವಿಭಾಗ)**<br><br>2017–18ನೇ ಸಾಲಿನಲ್ಲಿ ಕೆ.ಸೆಟ್ ಪರೀಕ್ಷೆ ಸಂಬಂಧ ಬೇರೆ ಬೇರೆ ಊರುಗಳಿಗೆ ಅಧ್ಯಾಪಕರುಗಳು ತಮ್ಮ ಸ್ವಂತ ಕಾರಿನಲ್ಲಿ ಪ್ರಯಾಣಿಸಿದಕ್ಕಾಗಿ ಪ್ರಯಾಣ ಭತ್ಯೆಯನ್ನು ಕೆ.ಸಿ.ಎಸ್.ಆರ್ ನಿಯಮ 451 ರ ಪ್ರಕಾರ 1 ಕಿ.ಮೀಗೆ ರೂ.3/– ನೀಡಲು ಅವಕಾಶವಿದೆ. ಆದರೆ ಸದರಿ ಪರೀಕ್ಷೆ ಸಂಬಂಧ ಬೇರೆ ಬೇರೆ ಊರುಗಳಿಗೆ ಸ್ವಂತ ಕಾರಿನಲ್ಲಿ ಪ್ರಯಾಣಿಸಿರುವ ಅಧ್ಯಾಪಕರುಗಳಿಗೆ ಒಂದು ಕಿ.ಮೀ ಗೆ ರೂ.13/– ಗಳನ್ನು ಹಾಗೂ ರೂ.7/–ಗಳ ಲೆಕ್ಕದಲ್ಲಿ ನೀಡಲಾಗಿದೆ ಇದು ನಿಯಮಬಾಹಿರವಾಗಿದೆ ಈ ಬಗ್ಗೆ ಸೂಕ್ತ ವಿವರಣೆ ನೀಡುವಂತೆ ಆಡಿಟ್ ವಿಚಾರಣಾ ಪತ್ರ ಸಂಖ್ಯೆ 80/19–20 ದಿನಾಂಕ:07.06.2019 ರಲ್ಲಿ ಕೋರಲಾಗಿತ್ತು ಆದರೆ ಯಾವುದೇ ಉತ್ತರ ನೀಡಿರುವುದಿಲ್ಲ ಆದ್ದರಿಂದ ಹೆಚ್ಚುವರಿಯಾಗಿ ಪಾವತಿಸಲಾಗಿರುವ ಪ್ರಯಾಣ ಭತ್ಯೆ ರೂ.1,95,870/– ಗಳನ್ನು ಸಂಬಂಧಿಸಿದವರಿಂದ ವಸೂಲಿ ಮಾಡಿ ವಿಶ್ವವಿದ್ಯಾನಿಲಯ ಖಾತೆಗೆ ಜಮೆ ಮಾಡಲು ಸೂಚಿಸಿದೆ ವಿವರ **ಅನುಬಂಧ–39**ರಲ್ಲಿ ನೀಡಿದೆ. | ಮೈಸೂರು ವಿಶ್ವವಿದ್ಯಾನಿಲಯದ ಅಧ್ಯಾಪಕರುಗಳು ಕೆ,ಸೆಟ್ ಪರೀಕ್ಷಾ ಕಾರ್ಯಾದ ನಿಮಿತ್ತ ಬೇರೆ ಬೇರೆ ಸ್ಥಳಗಳಿಗೆ ತಮ್ಮ ಸ್ವಂತ ಕಾರುಗಳಲ್ಲಿ ಪ್ರಯಾಣಿಸಿದ ಭತ್ಯೆಯನ್ನು ಒಂದು ಕಿ,ಮೀ ಗೆ ರೂ.7 ರೂ.13 ಹಾಗೂ ರೂ.16 ಗಳ ದರದಲ್ಲಿ ಪಾವತಿಸಿರುವ ಸಂಬಂಧ 2017–18ನೇ ಸಾಲಿನಲ್ಲಿ ಲೆಕ್ಕ ಪರಿಶೋಧನಾ ವರದಿಯ ಕಂಡಿಕೆ ಸಂಖ್ಯೆ: 82 ರಲ್ಲಿ ಗಮನಿಸಿ ಆಕ್ಷೇಪಿಸಲಾಗಿರುತ್ತದೆ<br><br>ಈ ಸಂಬಂಧ ಸದರಿ ಅಧ್ಯಾಪಕರುಗಳು ಕೆ,ಸೆಟ್ ಪರೀಕ್ಷಾ ಕಾರ್ಯಕ್ಕೆ ಬೇರೆ ಬೇರೆ ಸ್ಥಳಗಳಿಗೆ ಸ್ವಂತ ಕಾರುಗಳಲ್ಲಿ ಪ್ರಯಾಣಿಸಿ ಪರೀಕ್ಷಾ ಕಾರ್ಯದಲ್ಲಿ ತೊಡಗಿಸಿಕೊಳ್ಳಲು ವಿಶ್ವವಿದ್ಯಾನಿಲಯ ಹಾಗೂ ಯು,ಜಿ,ಸಿ ವತಿಯಿಂದ ನೀಡಲಾದ ಈ ಕೆಳಕಂಡ ಆದೇಶಗಳಲ್ಲಿನ ದರಗಳನುಸಾರ ಕ್ರಮವಾಗಿ ರೂ.7 ರೂ.13 ಹಾಗೂ ರೂ.16 ಗಳಿದ್ದು ಅದರಂತೆ ಅಧ್ಯಾಪಕರುಗಳ ಪ್ರಯಾಣ ಭತ್ಯೆಯನ್ನು ಪಾವತಿಸಲಾಗಿರುತ್ತದೆ ಸದರಿ ವಿಶ್ವವಿದ್ಯಾನಿಲಯದ ಹಾಗೂ ಯು,ಜಿ,ಸಿ ಆದೇಶಗಳ ಪ್ರತಿಯನ್ನು ಮಾಹಿತಿಗಾಗಿ ಇದರೊಂದಿಗೆ ಲಗತ್ತಿಸುತ್ತ ವಸೂಲಾತಿಗೆ ಸೂಚಿಸಿರುವ ಮೊತ್ತ ರೂ.1,95,870/–ಗಳನ್ನು ವಸೂಲಾತಿ ಕಂಡಿಕೆಯಿಂದ ಕೈ ಬಿಡುವಂತೆ ನಿವೇದಿಸಿದೆ.<br>1.ಮೈಸೂರು ವಿಶ್ವವಿದ್ಯಾನಿಯದ ಆದೇಶ ಸಂಖ್ಯೆ:ಕೆ,ಸೆಟ್/05/2017–18 ದಿನಾಂಕ:11.10.2017<br>2.ಮೈಸೂರು ವಿಶ್ವವಿದ್ಯಾನಿಯದ ಆದೇಶ ಸಂಖ್ಯೆ:ಕೆ,ಸೆಟ್/05/2017–18 ದಿನಾಂಕ:06.12.2017<br>3. ಮೈಸೂರು ವಿಶ್ವವಿದ್ಯಾನಿಯದ ಆದೇಶ ಸಂಖ್ಯೆ:ಕೆ,ಸೆಟ್/05/2017–18 ದಿನಾಂಕ:15.12.2017<br><br>4. ಯು,ಜಿ.ಸಿ Office Memorandum No:F.21-1/2015(FD-1B) Date:29.07.2015. |
| **83. ಡಾ.ಕೃಷ್ಣೇಗೌಡ, ನಿವೃತ ಪ್ರಾಧ್ಯಾಪಕರು ಇವರನ್ನು ನಿರ್ದೇಶಕರನ್ನಾಗಿ ನೇಮಕ ಮಾಡಲಾಗಿದ್ದು ನೇಮಕಾತಿ ಪ್ರಕ್ರಿಯೆ ಕಡತವನ್ನು ಹಾಜರುಪಡಿಸದಿರುವ ಕುರಿತು:– (ಹಣಕಾಸು ವಿಭಾಗ)** | |

| | |
|---|---|
| ಸ್ಕೂಲ್ ಆಫ್ ಪ್ಲಾನಿಂಗ್ ಅಂಡ್ ಆರ್ಕಿಟೆಕ್ಚರ್ ವಿಭಾಗದ ನಿರ್ದೇಶಕರನ್ನಾಗಿ ಡಾ.ಕೃಷ್ಣೇಗೌಡ, ನಿವೃತ ಪ್ರಾಧ್ಯಾಪಕರು ಇವರನ್ನು ನೇಮಕ ಮಾಡಲಾಗಿದ್ದು 2017–18ನೇ ಸಾಲಿಗೆ ಅನ್ವಯವಾಗುವಂತೆ ರೂ.2,24,154/–ಗಳ ಸಂಭಾವನೆಯನ್ನು ಪಾವತಿಸಲಗಿದೆ ನಿಯಮಾನುಸಾರ ನಿವೃತ್ತ ಅಧಿಕಾರಿ / ನೌಕರರನ್ನು ಶಾಸನ ಬದ್ಧ ಅಧಿಕಾರವುಳ್ಳ ಹುದ್ದೆಗಳಿಗೆ ಮರು ನೇಮಕ ಮಾಡುವಂತಿಲ್ಲ ಹಾಗೂ ನೇಮಕ ಮಾಡುವ ಅಗತ್ಯತೆ ಕಂಡುಬಂದಲ್ಲಿ ಸರ್ಕಾರದ ಅನುಮೋದನೆ ಪಡೆಯುವುದು ಅವಶ್ಯಕವಾಗಿರುತ್ತದೆ ಈ ಸಂಬಂಧ ಸದರಿ ಅಧಿಕಾರಿಯವರ ನೇಮಕಾತಿ ಪ್ರಕ್ರಿಯೆ ಕಡತ, ಸಿಂಡಿಕೇಟ್‌ನಿಂದ ಪಡೆಯಲಾದ ಒಪ್ಪಿಗೆ ಪರಿನಿಯಮಾವಳಿಗಳು ಹಾಗೂ ಸರ್ಕಾರದಿಂದ ಪಡೆಯಲಾದ ಅನುಮೋದನೆಯನ್ನು ಲೆಕ್ಕ ತನಿಖೆಗೆ ಹಾಜರುಪಡಿಸುವಂತೆ ಲೆಕ್ಕ ತನಿಖಾ ವಿಚಾರಣಾ ಪತ್ರಗಳ ಸಂಖ್ಯೆ: 1) ಸಂಖ್ಯೆ 08, ದಿನಾಂಕ:02.05.2019 ಮತ್ತು 2) ಸಂಖ್ಯೆ 44, ದಿನಾಂಕ:21.05.2019 ರ ಮೂಲಕ ಕೋರಲಾಗಿರುತ್ತದೆ ಆದರೆ ಯಾವುದೆ ದಾಖಲಾತಿಗಳನ್ನು ಲೆಕ್ಕ ತನಿಖೆಗೆ ಹಾಜರುಪಡಿಸಿರುವುದಿಲ್ಲ ಇದರಿಂದಾಗಿ ನಿರ್ದೇಶಕರ ನೇಮಕಾತಿಯ ಅಗತ್ಯತೆಯನ್ನು ಖಚಿತಪಡಿಸಿಕೊಳ್ಳಲು ಸಾಧ್ಯವಾಗಿರುವುದಿಲ್ಲ ಆದ್ದರಿಂದ ವಿವರಗಳನ್ನು ಲೆಕ್ಕ ತನಿಖೆಗೆ ಹಾಜರುಪಡಿಸುವವರೆಗೆ ಡಾ.ಕೃಷ್ಣೇಗೌಡ, ನಿವೃತ ಪ್ರಾಧ್ಯಾಪಕರು ಇವರಿಗೆ 2017–18ನೇ ಸಾಲಿನಲ್ಲಿ ಪಾವತಿಸಲಾಗಿರುವ ಸಂಭಾವನೆಯ ಮೊಬಲಗು ರೂ.2,24,154/–ಗಳನ್ನು ಆಕ್ಷೇಪಣೆಗೆ ಸೂಚಿಸಲಾಗಿದೆ. | ಸ್ಕೂಲ್ ಆಫ್ ಪ್ಲಾನಿಂಗ್ ಅಂಡ್ ಆರ್ಕಿಟೆಕ್ಚರ್ ವಿಭಾಗಕ್ಕೆ ಸಂಬಂಧಿಸಿದಂತೆ ವಿಶ್ವವಿದ್ಯಾನಿಲಯದಿಂದ ಅಧಿನಿಯಮವನ್ನು ರಚಿಸಿ ಸದರಿ ಅಧಿನಿಯಮಕ್ಕೆ ಮಾನ್ಯ ಕುಲಾಧಿಪತಿಯವರಿಂದ ಅನುಮೋದನೆಯನ್ನು ಪಡೆಯಲಾಗಿದೆ. ಈ ಅಧಿನಿಯಮದಲ್ಲಿ ನಿರ್ದೇಶಕರನ್ನು ನಾಮ ನಿರ್ದೇಶನ ಮಾಡಲು ಮಾನ್ಯ ಕುಲಪತಿಯವರಿಗೆ ಅವಕಾಶವನ್ನು ಕಲ್ಪಿಸಲಾಗಿದೆ. ಇದರನ್ವಯ ನಿರ್ದೇಶಕರನ್ನು ನಾಮ ನಿರ್ದೇಶನ ಮಾಡುವುದನ್ನು ಅವರಿಗೆ ಸಂಭಾವನೆಯನ್ನು ನಿಗದಿಪಡಿಸುವ ವಿಷಯವನ್ನು ಸಿಂಡಿಕೇಟ್ ಸಭೆಗೆ ಮಂಡಿಸಿ ಅನುಮೋದನೆ ಪಡೆದು ನಿರ್ದೇಶಕರನ್ನಾಗಿ ನಾಮ ನಿರ್ದೇಶನ ಮಾಡಲು ಕ್ರಮವಹಿಸಲಾಗುವುದು.<br><br>ದಿನಾಂಕ 11/11/2016ರಂದು ಜರುಗಿದ ಸಿಂಡಿಕೇಟ್ ಸಭೆಯ ತೀರ್ಮಾನದನ್ವಯ ಡಾ. ಕೃಷ್ಣೇಗೌಡ, ನಿವೃತ್ತ ಪ್ರಾಧ್ಯಾಪಕರು, ಸ್ಕೂಲ್ ಆಫ್ ಪ್ಲಾನಿಂಗ್ ಅಂಡ್ ಆರ್ಕಿಟೆಕ್ಚರ್‌ಗೆ ಇವರನ್ನು 03 ವರ್ಷದ ಅವಧಿಗೆ ಅಥವಾ ಅವರಿಗೆ 65 ವರ್ಷಗಳವರೆಗೆ ಯಾವುದು ಮೊದಲು ಘಟಿಸುವುದೋ ಅಲ್ಲಿಯವರೆಗೆ ಮಾಸಿಕ ರೂ. 50,000/–ಗಳ ಗೌರವಧನದೊಂದಿಗೆ ಸ್ಕೂಲ್ ಆಫ್ ಪ್ಲಾನಿಂಗ್ ಅಂಡ್ ಆರ್ಕಿಟೆಕ್ಚರ್‌ನ ನಿರ್ದೇಶಕರಾಗಿ ಮುಂದುವರಿಸಲು ಸಿಂಡಿಕೇಟ್ ಸಭೆಯು ತೀರ್ಮಾನಿಸಿರುತ್ತದೆ.<br><br>ಸ್ಕೂಲ್ ಆಫ್ ಪ್ಲಾನಿಂಗ್ ಅಂಡ್ ಆರ್ಕಿಟೆಕ್ಚರ್‌ಗೆ ಸಂಬಂಧಿಸಿದ ಅಧಿನಿಯಮದ ಪ್ರತಿ ಮತ್ತು ಡಾ. ಕೃಷ್ಣೇಗೌಡ ಇವರನ್ನು ನಿರ್ದೇಶಕರಾಗಿ ನೇಮಿಸಲು ಸಿಂಡಿಕೇಟ್‌ನಿಂದ ಅನುಮೋದನೆ ನೀಡಿರುವ ನಡಾವಳಿ ಹಾಗೂ ಮಾನ್ಯ ಕುಲಪತಿಯವರ ಅನುಮೋದನೆ ಆದೇಶ ಸಂಖ್ಯೆ :ಇಟಿ9/227/2010–11 ದಿ.02.12.2016ರ ಆದೇಶದನ್ವಯ ನೇಮಕ ಮಾಡಿಕೊಂಡಿದ್ದು, ಆದೇಶದ ಮೇರೆಗೆ ನಿವೃತ್ತ ಪ್ರಾಧ್ಯಾಪಕರಿಗೆ 65 ವರ್ಷಗಳು ಪೂರ್ಣಗೊಳಿಸುವವರೆಗೆ, ನಿರ್ದೇಶಕರಾಗಿ ಕಾರ್ಯ ನಿರ್ವಹಿಸಲು ಆದೇಶ ನೀಡಲಾಗಿರುತ್ತದೆ.<br><br>ಈ ಸಂಬಂಧ ಸಿಂಡಿಕೇಟ್ ಸಭೆಯ ದಿನಾಂಕ 11.11.2016ರ ನಡಾವಳಿ ಹಾಗೂ ಕುಲಪತಿಯವರ ದಿನಾಂಕ 02.12.2016ರ ಆದೇಶದ ಪ್ರತಿಗಳನ್ನು ಮಾಹಿತಿಗಾಗಿ ಒದಗಿಸಲಾಗಿದೆ. ಈ ನಿಟ್ಟಿನಲ್ಲಿ ಆಕ್ಷೇಪಿತ ಕಂಡಿಕೆಯ ಮೊತ್ತ ರೂ. 2,24,154/–ಗಳನ್ನು ಆಕ್ಷೇಪಣೆಯಿಂದ ಕೈಬಿಡಲು ನಿವೇದಿಸಿದೆ. |
| **84. ತಾತ್ಕಾಲಿಕ ಅತಿಥಿ ಉಪನ್ಯಾಸಕರುಗಳು ಹಾಗೂ ತಾತ್ಕಾಲಿಕ ಬೋಧಕೇತರ ಸಿಬ್ಬಂದಿಯನ್ನು ನೇಮಕ ಮಾಡಿಕೊಂಡಿರುವ ನೇಮಕಾತಿ ಪ್ರಕ್ರಿಯೆ ಕಡತ ಹಾಗೂ ಇತರೆ ದಾಖಲಾತಿ ವಿವರಗಳನ್ನು ಹಾಜರುಪಡಿಸದಿರುವ ಕುರಿತು ( School of Planning) :- (ಹಣಕಾಸು ವಿಭಾಗ)**<br><br>ಸ್ಕೂಲ್ ಆಫ್ ಪ್ಲಾನಿಂಗ್ ಅಂಡ್ ಆರ್ಕಿಟೆಕ್ಚರ್ ವಿಭಾಗಕ್ಕೆ ಅಗತ್ಯವಿರುವ ತಾತ್ಕಾಲಿಕ / ಅತಿಥಿ ಉಪನ್ಯಾಸಕರುಗಳು ಹಾಗೂ ತಾತ್ಕಾಲಿಕ ಬೋಧಕೇತರ ಸಿಬ್ಬಂದಿಯನ್ನು ನೇಮಕ ಮಾಡಿಕೊಂಡು | ಸ್ಕೂಲ್ ಆಫ್ ಪ್ಲಾನಿಂಗ್ ಅಂಡ್ ಆರ್ಕಿಟೆಕ್ಚರ್ ವಿಭಾಗಕ್ಕೆ ಸಂಬಂಧಿಸಿದಂತೆ ವಿಶ್ವವಿದ್ಯಾನಿಲಯದಿಂದ ಅಧಿನಿಯಮವನ್ನು ರಚಿಸಿ ಸದರಿ ಅಧಿನಿಯಮಕ್ಕೆ ಮಾನ್ಯ |

| | |
|---|---|
| 2017–18 ನೇ ಸಾಲಿನಲ್ಲಿ ಕ್ರಮವಾಗಿ 1) ತಾತ್ಕಾಲಿಕ / ಅತಿಥಿ ಉಪನ್ಯಾಸರುಗಳಿಗೆ ರೂ.30,66,581/– ಹಾಗೂ 2) ತಾತ್ಕಾಲಿಕ ಬೋಧಕೇತರ ಸಿಬ್ಬಂದಿಗಳಿಗೆ ರೂ.13,56,563/– ವೇತನವನ್ನು ಪಾವತಿಸಲಾಗಿದೆ ಕರ್ನಾಟಕ ವಿಶ್ವವಿದ್ಯಾನಿಲಯ ಅದಿನಿಯಲ 56,57 ರ ನಿಯಮಗಳನುಸಾರ ಮಂಜೂರಾದ ಹುದ್ದೆಗಳಿಗೆ ಎದುರಾಗಿ ಖಾಲಿಯಿರುವ ಹುದ್ದೆಗಳಿಗೆ ಮಾತ್ರವೇ ನೇಮಕಾತಿ ಮಾಡಿಕೊಳ್ಳುವುದು ಕ್ರಮವಾಗಿರುತ್ತದೆ ಈ ಸಂಬಂಧ ಸದರಿ ಹುದ್ದೆಗಳ ನೇಮಕಾತಿ ಕಡತ ಹಾಗೂ ಕರ್ನಾಟಕ ಖಲಾನೆ ಸಂಹಿತೆ 29 (4) ರ ಅನ್ವಯ ನಿರ್ವಹಿಸಲಾದ ಶ್ರೇಣಿ ವಹಿಯನ್ನು ಲೆಕ್ಕ ತಪಾಸಣೆಗೆ ಹಾಜರುಪಡಿಸುವಂತೆ ಲೆಕ್ಕ ತನಿಖಾ ವಿಚಾರಣಾ ಪತ್ರಗಳ ಸಂಖ್ಯೆ: 1) ಸಂ.08, ದಿನಾಂಕ: 02.05.2019 ಮತ್ತು 2) ಸಂ.44, ದಿನಾಂಕ:21.05.2019 ರ ಮೂಲಕ ಕೋರಲಾಗಿರುತ್ತದೆ ಆದರೆ ಯಾವುದೇ ದಾಖಲಾತಿಗಳನ್ನು ಲೆಕ್ಕ ತಪಾಸಣೆಗೆ ಹಾಜರುಪಡಿಸಿರುವುದಿಲ್ಲ ಇದರಿಂದಾಗಿ ಸದರಿ ಅಧ್ಯಾಪಕರುಗಳ ನೇಮಕಾತಿಯ ಅಗತ್ಯತೆಯನ್ನು ಖಚಿತಪಡಿಸಿಕೊಳ್ಳಲು ಸಾಧ್ಯವಾಗಿರುವುದಿಲ್ಲ ಆದ್ದರಿಂದ ವಿವರಗಳನ್ನು ಲೆಕ್ಕ ತನಿಖೆಗೆ ಹಾಜರುಪಡಿಸುವವರೆಗೆ ಸದರಿ ತಾತ್ಕಾಲಿಕ/ ಅತಿಥಿ ಉಪನ್ಯಾಸಕರುಗಳು ಹಾಗೂ ತಾತ್ಕಾಲಿಕ ಬೋಧಕೇತರ ಸಿಬ್ಬಂದಿಗಳಿಗೆ 2017–18ನೇ ಸಾಲಿನಲ್ಲಿ ಪಾವತಿಸಲಾಗಿರುವ ಒಟ್ಟು ವೇತನ ಮೊಬಲಗು **ರೂ.44,23,144/– ಗಳನ್ನು (ರೂ.30,66,581/– + ರೂ.13,56,563/– = ರೂ.44,23,144/–) ಆಕ್ಷೇಪಣೆಗೆ ಸೂಚಿಸಲಾಗಿದೆ.** | ಕುಲಾಧಿಪತಿಯವರಿಂದ ಅನುಮೋದನೆಯನ್ನು ಪಡೆಯಲಾಗಿದೆ. ಈ ಅಧಿನಿಯಮದಲ್ಲಿ ಸ್ಕೂಲ್ ಆಫ್ ಪ್ಲಾನಿಂಗ್ ವಿಭಾಗದ ವೇತನ/ಇತರೆ ಖರ್ಚು ವೆಚ್ಚಗಳನ್ನು SPA (Self Financing) ಫಂಡ್‌ನಿಂದಲೇ ಭರಿಸಲಾಗುತ್ತದೆ.<br><br>ನಿರ್ದೇಶಕರು, ಸ್ಕೂಲ್ ಆಫ್ ಪ್ಲಾನಿಂಗ್ ಅಂಡ್ ಆರ್ಕಿಟೆಕ್ಚರ್ ಇವರು CoA ನಿಯಮದ ಪ್ರಕಾರ ಅರ್ಹ ಅಭ್ಯರ್ಥಿಗಳನ್ನು ಶಿಫಾರಸ್ಸು ಮಾಡಿ ಅತಿಥಿ ಉಪನ್ಯಾಸಕರಾಗಿ ಆಹ್ವಾನಿಸಲು ವಿಶ್ವವಿದ್ಯಾನಿಲಯಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ. ಪ್ರಸ್ತಾವನೆಯ ವಿವರ ಇದರೊಂದಿಗೆ ಲಗತ್ತಿಸಿದೆ. ನಿರ್ದೇಶಕರು ಸಲ್ಲಿಸುವ ಪ್ರಸ್ತಾವನೆಗಳನ್ನು ಮಾನ್ಯ ಕುಲಪತಿಯವರ ಅನುಮೋದನೆ ಪಡೆದು ಅತಿಥಿ ಉಪನ್ಯಾಸಕರಾಗಿ ಆಹ್ವಾನಿಸಲು ವಿಶ್ವವಿದ್ಯಾನಿಲಯದಿಂದ ಅನುಮತಿಯನ್ನು ನೀಡಲಾಗುತ್ತದೆ ಮತ್ತು ಈ ಸಂಬಂಧದ ವೆಚ್ಚವನ್ನು SPA Fund ನಿಂದಲೇ ಭರಿಸಲಾಗುವುದು. ಹಾಗೂ CoA ನಿಯಮದ ಪ್ರಕಾರ 10 ವಿದ್ಯಾರ್ಥಿಗಳಿಗೆ ಒಬ್ಬರು ಅಧ್ಯಾಪಕರು ಕಾರ್ಯನಿರ್ವಹಿಸಬೇಕು ಎಂಬ ಅಂಶವನ್ನು ಅವಗಾಹನೆಗೆ ತರಲಾಗಿದೆ.<br><br>ನಿರ್ದೇಶಕರ ಕೋರಿಕೆಯಂತೆ ಬೋಧಕೇತರ ಉದ್ಯೋಗಿಗಳನ್ನು ತಾತ್ಕಾಲಿಕವಾಗಿ ಒಂದು ವರ್ಷದ ಅವಧಿಗೆ ನೇಮಕ ಮಾಡಿಕೊಳ್ಳಲು ವಿಶ್ವವಿದ್ಯಾನಿಲಯದಿಂದ ಅನುಮತಿಯನ್ನು ನೀಡಲಾಗುತ್ತದೆ. ಈ ಸಂಬಂಧದ ವೆಚ್ಚವನ್ನು ಸಹ SPA Fund ನಿಂದಲೇ ಭರಿಸಲಾಗುವುದು. ಅತಿಥಿ ಉಪನ್ಯಾಸಕರ ಹಾಗೂ ಬೋಧಕೇತರ ಉದ್ಯೋಗಿಗಳ ವೇತನವನ್ನು ಹಣಕಾಸು ಅಧಿಕಾರಿಗಳು SPA Fund ನಿಂದ ಪಾವತಿಸುತ್ತಾರೆ ಎಂಬ ಅಂಶವನ್ನು ಅವಗಾಹನೆಗೆ ತರಲಾಗಿದೆ.<br><br>SPA ವ್ಯಾಸಂಗ ಮಾಡುವ ವಿಧ್ಯಾರ್ಥಿಗಳಿಗೆ ಪಾಠ ಪ್ರವಚನ/ ಪ್ರಾಯೋಗಿಕ ತರಗತಿಗಳಿಗೆ ಅನುಕೂಲವಾಗುವಂತೆ ಅತಿಥಿ ಉಪನ್ಯಾಸಕರನ್ನು ಹಾಗೂ ಬೋಧಕೇತರ ಉದ್ಯೋಗಿಗಳನ್ನು ನೇಮಕ ಮಾಡಿಕೊಂಡು, ವೆಚ್ಚವನ್ನು ಭರಿಸಲಾಗಿರುತ್ತದೆ. ಈ ನಿಟ್ಟನಲ್ಲಿ ಪಾವತಿಸಲಾಗಿರುವ ಮೊತ್ತ ರೂ.30,66,581/– ಮತ್ತು ರೂ.13,56,563/–. ಒಟ್ಟು ಮೊತ್ತ ರೂ.44,23,144/–ಗಳನ್ನು ಆಕ್ಷೇಪಣೆಯಿಂದ ಕೈಬಿಡುವಂತೆ ನಿವೇದಿಸಲಾಗಿದೆ. |
| **85. ವೈದ್ಯಕೀಯ ವೆಚ್ಚ ದ ಮರುಭರಿಕೆ ಬಿಲ್ಲುಗಳ ನ್ಯೂನ್ಯತೆಗಳು :– (ಪರೀಕ್ಷಾ ವಿಭಾಗ)**<br><br>2017–18ನೇ ಸಾಲಿನ ಮೈಸೂರು ವಿಶ್ವವಿದ್ಯಾನಿಲಯದ ಪರೀಕ್ಷಾ ವಿಭಾಗದ ಸಿಬ್ಬಂದಿಗಳ ವೈದ್ಯಕೀಯ ವೆಚ್ಚದ ಮರುಭರಿಕೆ ಬಿಲ್ಲುಗಳ/ಹುಂಡಿಗಳನ್ನು ಪರಿಶೀಲಿಸಲಾಗಿ ಈ ಕೆಳಗಿನಂತೆ ನ್ಯೂನ್ಯತೆಗಳು ಕಂಡು ಬಂದಿರುತ್ತದೆ.<br><br>1) ಬೀರೆಗೌಡ ದ್ವೀತಿಯ ದರ್ಜೆ ಸಹಾಯಕ ರವರ ಪತ್ನಿಯ ವೈದ್ಯಕೀಯ ವೆಚ್ಚದ | ಪ್ರಸ್ಥಾವಿಕ ಕಂಡಿಕೆಯಲ್ಲಿ ಸೂಚಿತವಾಗಿರುವ<br><br>1. ಬೀರೆಗೌಡ ದ್ವಿತೀಯ ದರ್ಜೆ ಸಹಾಯಕ ರವರ ಪತ್ನಿಯ ವೈದ್ಯಕೀಯ ವೆಚ್ಚದ ಮರು ಪಾವತಿ ಬಿಲ್‌ನಲ್ಲಿ ಹೆಚ್ಚುವರಿಯಾಗಿ ಪಾವತಿಯಾಗಿರುವ ಸಮಲೋಚನಾ ಶುಲ್ಕ ಪಾವತಿ ರೂ.345(115*3)=345/– ಸದರಿ ನೌಕರರು ನಿವೃತ್ತಿಯಾಗಿರುವುದರಿಂದ ಪಿಂಚಣಿ ಪಾವತಿ ಬಿಲ್ಲಿನಲ್ಲಿ ಕಟಾವಣೆ ಮಾಡಿ ಸಂಬಂಧಿಸಿದ ಲೆಕ್ಕ ಶೀರ್ಷಿಕೆಗೆ ಪುನರ್ ಜಮೆ ಮಾಡಲು ಕ್ರಮವಹಿಸಲಾಗಿದೆ.( ಈ |

ಮರುಭರಿಕೆ ಬಿಲ್ಲುಗಳನ್ನು ಸಲ್ಲಿಸುವಾಗ ಸಮಲೋಚನಾ ಶುಲ್ಕ (Consultation Fee) 350*3 ಎಂದು ಪಾವತಿಸಿದೆ ಆದರೆ ಕರ್ನಾಟಕ ಮೆಡಿಕಲ್ ಅಟೆಂಡೆನ್ಸ್ ರೂಲ್ಸ್ 1963 ಪ್ರಕಾರ ರೂ.235/–ರಂತೆ ಪಾವತಿಸಬೇಕಾಗಿರುತ್ತದೆ.

| ಕ್ರ ಸಂ | ಬಿಲ್ಲು ಸಂಖ್ಯೆ | ಪಾವತಿಸಲಾದ ಮೊತ (ರೂ.ಗಳಲ್ಲಿ) |
|---|---|---|
| 1 | AHMYS-OCS-780209 ದಿ.21.04.2017 | 350 |
| 2 | AHMYS-OCS-780209 ದಿ.17.03.2017 | 350 |
| 3 | AHMYS-OCS-780209 ದಿ.25.06.2017 | 350 |
| | **ಒಟ್ಟು ಮೊತ್ತ** | **1050** |

ಕರ್ನಾಟಕ ಮೆಡಿಕಲ್ ಅಟೆಂಡೆನ್ಸ್ ರೂಲ್ಸ್ 1963 ಪ್ರಕಾರ ಪ್ರತಿ ಬಿಲ್ಲಿಗೆ ರೂ.235*3=705 ಪಾವತಿಸಬೇಕಾಗಿದ್ದು ಉಳಿಕೆ ಹಣವನ್ನು ಸಂಬಂಧಪಟ್ಟವರಿಂದ ವಸೂಲಿಸಿ ವಿಶ್ವವಿದ್ಯಾನಿಲಯ ಖಾತೆಗೆ ಜಮಾ ಮಾಡಬೇಕಾಗಿ ಸೂಚಿಸಿದೆ ಜಮಾ ಮಾಡಬೇಕಾಗಿರುವ ಮೊತ್ತ ರೂ.345/–

ಬಿ.ಆರ್ ನಂ 121/20.03.2017 ಬಿಲ್ಲು ನಂ. AHMYS-ICS-22045 ಮೊತ್ತ ರೂ.1200/– ಸಮಾಲೋಚನಾ ಶುಲ್ಕ ಪಾವತಿಸಲಾಗಿದೆ ಕರ್ನಾಟಕ ಮೆಡಿಕಲ್ ಅಟೆಂಡೆನ್ಸ್ ರೂಲ್ಸ್ 1963 ಪ್ರಕಾರ 235/– ರೂ ಗಳನ್ನು ಪಾವತಿಸಬೇಕಾಗಿದ್ದು ಉಳಿಕೆ ವ್ಯತ್ಯಾಸದ ಮೊತ್ತ ರೂ.965/–ಗಳನ್ನು ಸಂಬಂಧಪಟ್ಟವರಿಂದ ವಸೂಲಿಸಬೇಕಾಗಿರುತ್ತದೆ ಒಟ್ಟು ಮೊತ್ತ ರೂ.345+965=1310ಗಳನ್ನು ವಸೂಲಾತಿಗೆ ಸೂಚಿಸಿದೆ.

ಕೆಲವು ವೈದ್ಯಕೀಯ ವೆಚ್ಚದ ಮರುಭರಿಕೆ ಹುಂಡಿಗಳನ್ನು ಹಾಗೂ ಕಡತಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸಿರುವುದಿಲ್ಲ ವಿವರಗಳನ್ನು ಅನುಬಂಧ–40 ರಲ್ಲಿ ನೀಡಲಾಗಿದೆ ಅವುಗಳ **ಮೊತ್ತ ರೂ.1,16,096/–ಗಳಿಗೆ ವಿವರಗಳನ್ನು ಹಾಜರುಪಡಿಸುವವರೆಗೆ ಆಕ್ಷೇಪಣೆಯಲ್ಲಿಡಲಾಗಿದೆ.**

ಬಟವಾಡೆ ಪುಸ್ತಕದಲ್ಲಿ ಹಣಕಾಸು ವಿಭಾಗದಿಂದ ಅಂಗೀಕರಿಸಿದ ಮೊತ್ತ ಅಂದರೆ ಸಿಬ್ಬಂದಿಗಳು ಸಲ್ಲಿಸಿರುವ ವೈದ್ಯಕೀಯ ವೆಚ್ಚದ ಮರುಪಾವತಿಗೆ ಎಷ್ಟು ಅರ್ಹತಾ ಹಣವನ್ನು

ಸಂಬಂಧ ಸದರಿ ವಿಭಾಗದಿಂದ ನೀಡಿರುವ ಪತ್ರದ ಪ್ರತಿ ಲಗತ್ತಿಸಿದೆ).

2. ಬಿ.ಆರ್ ನಂ 121/20.03.2017 ರಲ್ಲಿ ಸಮಾಲೋಚನಾ ಶುಲ್ಕ ಹೆಚ್ಚುವರಿಯಾಗಿ ಪಾವತಿಯಾಗಿರುವ ಪ್ರಕರಣದಲ್ಲಿಯೂ ಹೆಚ್ಚುವರಿಯಾಗಿ ಪಾವತಿಯಾಗಿರುವ ಮೊತ್ತ ರೂ.965/–ರ ವಸೂಲಾತಿಗೆ ಕ್ರಮವಹಿಸಲಾಗಿದೆ.(ಈ ಸಂಬಂಧ ಪಿಂಚಣಿ ವಿಭಾಗದಲ್ಲಿ ರೂ.965/–ನ್ನು ಕಟಾವಣೆ ಮಾಡಿರುವ ದೃಢೀಕೃತ ಪ್ರತಿ ಲಗತ್ತಿಸಿದೆ).
3. 2017–18ನೇ ಸಾಲಿನ ಲೆಕ್ಕ ಪರಿಶೋಧನೆಗೆ ಹಾಜರುಪಡಿಸದೆ ಉಳಿದಿರುವ ವೈದ್ಯಕೀಯ ವೆಚ್ಚದ ಮರುಪಾವತಿ ಬಿಲ್ಲುಗಳನ್ನು ಕ್ರಮವಾಗಿ

| ಕ್ರಮ ಸಂಖ್ಯೆ | ಬಿ.ಆರ್.ನಂ | ಬಿಲ್ಲಿನ ಸ್ವರೂಪ | ಬಿಲ್ಲಿನ ಮೊತ್ತ |
|---|---|---|---|
| 1 | 32/27.04.2017 | ಸಿಬ್ಬಂದಿಗಳ ವೈದ್ಯಕೀಯ ವೆಚ್ಚದ ಮರುಪಾವತಿ ಬಿಲ್ಲ್ | 9,691/– |
| 2 | 118/3117/2017 | ಸಿಬ್ಬಂದಿಗಳ ವೈದ್ಯಕೀಯ ವೆಚ್ಚದ ಮರುಪಾವತಿ ಬಿಲ್ಲ್ | 832/– |
| 3 | 160/04.09.2017 | ಸಿಬ್ಬಂದಿಗಳ ವೈದ್ಯಕೀಯ ವೆಚ್ಚದ ಮರುಪಾವತಿ ಬಿಲ್ಲ್ | 14,171/– |
| 4 | 218/15.12.2017 | ಸಿಬ್ಬಂದಿಗಳ ವೈದ್ಯಕೀಯ ವೆಚ್ಚದ ಮರುಪಾವತಿ ಬಿಲ್ಲ್ | 52,308/– |
| 5 | 264/13.03.2018 | ಸಿಬ್ಬಂದಿಗಳ ವೈದ್ಯಕೀಯ ವೆಚ್ಚದ ಮರುಪಾವತಿ ಬಿಲ್ಲ್ | 8,677/– |
| 6 | 269/20.07.2018 | ಸಿಬ್ಬಂದಿಗಳ ವೈದ್ಯಕೀಯ ವೆಚ್ಚದ ಮರುಪಾವತಿ ಬಿಲ್ಲ್ | 30,417/– |
| | | ಒಟ್ಟು ಮೊತ್ತ | 1,16,096/– |

ಸದರಿ ಬಿಲ್ಲುಗಳನ್ನು ಮುಂದಿನ ಲೆಕ್ಕ ತನಿಖೆಗೆ ಹಾಜರುಪಡಿಸಲು ಕ್ರಮವಹಿಸಲಾಗಿದೆ. ಆದ ಕಾರಣ ಸೂಚಿತ ಆಕ್ಷೇಪಣೆ ಮತ್ತು ವಸೂಲಾತಿ ಕಂಡಿಕೆ ಕೈ ಬಿಡಲು ಕೋರಿದೆ.

| | |
|---|---|
| ಪಾವತಿಸಬೇಕೆಂದು ನೀಡಿರುವ ತಾಳೆಪಟ್ಟಿಯನ್ನು ಸೇರಿಸಿರುವುದಿಲ್ಲ ಆದ್ದರಿಂದ ಸಲ್ಲಿಸಿರುವ ಎಲ್ಲಾ ವೈದ್ಯಕೀಯ ವೆಚ್ಚದ ಮರುಭರಿಕೆ ಬಿಲ್ಲುಗಳಿಗೆ ಹಣಕಾಸು ವಿಭಾಗದಿಂದ ಅಂಗೀಕರಿಸಿದ ಮೊತ್ತದ ತಾಳೆಪಟ್ಟಿಯನ್ನು /ಬಟವಾಟೆ ಪುಸ್ತಕದಲ್ಲಿ ದಾಖಲಿಸುವಂತೆ ಸುಚಿಸಿದೆ ಈ ಸಂಬಂಧ ವಿಚಾರಣಾ ಪತ್ರ ಸಂಖ್ಯೆ:17/2019–20 ದಿನಾಂಕ:03.05.2019 ನ್ನು ನೀಡಲಾಗಿದೆ. | |
| **86. ಪರೀಕ್ಷಾ ವಿಭಾಗದಲ್ಲಿ ಕಾರ್ಯನಿರ್ವಹಿಸುತ್ತಿದ್ದ ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗದವರಿಗೆ ಸಾಮಾನ್ಯ ವಾರ್ಷಿಕ ಸಂಭಾವನೆಯನ್ನು ನಿಯಮಬಾಹಿರವಾಗಿ ಪಾವತಿಸಿರುವುದರ ಕುರಿತು :– (ಪರೀಕ್ಷಾ ವಿಭಾಗ)**<br><br>2017–18 ಸಾಲಿನ ಲೆಕ್ಕಪರಿಶೋಧನೆಗೆ ಹಾಜರುಪಡಿಸಿದ ವೋಚರ್‌ಗಳನ್ನು ಪರಿಶೀಲಿಸಲಾಗಿ ಬಿ.ಆರ್.ಸಂಖ್ಯೆ:15/2017–18 ದಿನಾಂಕ:21.04.2018 ರಲ್ಲಿ ಪರೀಕ್ಷಾ ವಿಭಾಗದಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ಎಲ್ಲಾ ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗದವರಿಗೆ ರೂ.3000/– ರೂ.1200/– ಹಾಗೂ ರೂ.1000/– ಗಳು ಹೀಗೆ ವಿವಿಧ ಹಂತಗಳಲ್ಲಿ ಒಟ್ಟು ರೂ.1,54,500/–ಗಳನ್ನು ಸಾಮಾನ್ಯ ಸಂಭಾವನೆ ಎಂದು ಪಾವತಿ ಮಾಡಲಾಗಿರುತ್ತದೆ, (ಮೇ/ಜೂನ್–2017 ಹಾಗೂ ನವೆಂಬರ್/ಡಿಸೆಂಬರ್–2017 ಯು.ಜಿ/ಪಿ.ಜಿ ಪರೀಕ್ಷೆ) ಹೀಗೆ ಪ್ರತಿ ವರ್ಷ ವಿಶ್ವವಿದ್ಯಾನಿಲಯವು ನಡಸುವ ಪರೀಕ್ಷಾ ಕಾರ್ಯಗಳ ಸಂಬಂಧವಾಗಿ ಎಲ್ಲಾ ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗದವರಿಗೆ ಸಾಮಾನ್ಯ ಸಂಭಾವನೆ ಎಂದು ದಿನಾಂಕ:21.01.1999 ರಂದು ಜರುಗಿದ ಸಿಂಡಿಕೇಟ್ ಸಭೆಯ ನಿರ್ಣಯದಂತೆ ವಿಶ್ವವಿದ್ಯಾನಿಲಯದ ಆದೇಶ ಸಂಖ್ಯೆ:ಇಫಿ8.6/98–99 ದಿನಾಂಕ:20.03.1999 ರ ಆದೇಶದನ್ವಯ ಪ್ರತಿ ವರ್ಷದ ಘಟಿಕೋತ್ಸವದ ನಂತರ ಪಾವತಿಸಲಾಗುತ್ತಿದೆ.<br><br>2017–18ನೇ ಸಾಲಿನಲ್ಲಿ ಸದರಿ ಅಧಿಕಾರಿ ಮತ್ತು ನೌಕರರನ್ನು ಪರೀಕ್ಷಾ ಕಾರ್ಯಕ್ಕೆ ನಿಯೋಜನೆ ಮಾಡಿರುವುದರ ಕುರಿತು ಯಾವುದೇ ಆದೇಶಗಳಿರುವುದಿಲ್ಲ ಅಧಿಕಾರಿಗಳು ಮತ್ತು ಸಿಬ್ಬಂದಿ ವರ್ಗದವರು ಪರೀಕ್ಷಾ ಕಾರ್ಯ ನಿರ್ವಹಿಸಿರುವುದಕ್ಕೆ ಕಾರ್ಯ ನಿರ್ವಹಣಾ ತಃಖ್ತೆಯಾಗಲೀ ಕಾರ್ಯ ನಿರ್ವಹಣೆಯ ವಿವರಗಳು ಲಭ್ಯವಿರುವುದಿಲ್ಲ ಸದರಿ ಅಧಿಕಾರಿ ಮತ್ತು ಸಿಬ್ಬಂದಿ ವರ್ಗದವರಿಗೆ ಸಾಮಾನ್ಯ ಸಂಭಾವನೆಯನ್ನು ಪಾವತಿಸಿರುವುದಕ್ಕೆ ಸ್ಪಷ್ಟೀಕರಣ ಹಾಗೂ ಸಂಬಂಧಪಟ್ಟ ಪೂರಕ ಲೆಕ್ಕಪತ್ರದಾಖಲೆಗಳನ್ನು ಹಾಜರುಪಡಿಸುವಂತೆ ಕೋರಿ ಲೆಕ್ಕಪರಿಶೋಧನಾ ವಿಚಾರಣಾ ಪತ್ರ ಸಂಖ್ಯೆ:20/2019–20 ದಿನಾಂಕ:04.05.2019 ಹಾಗೂ 28/2019–20 ದಿನಾಂಕ:14.05.2019 ಗಳನ್ನು ನೀಡಲಾಗಿತ್ತಾದರೂ ಯಾವುದೇ ಉತ್ತರ ನೀಡಿರುವುದಿಲ್ಲ. ಪರೀಕ್ಷಾ ವಿಭಾಗದಲ್ಲಿ ಕಾರ್ಯ ನಿರ್ವಹಿಸಲು ಸದರಿ ಅಧಿಕಾರಿ/ನೌಕರರುಗಳನ್ನು ನೇಮಕ ಮಾಡಿಕೊಂಡಿರುವುದರಿಂದ ಪರೀಕ್ಷಾ ಕರ್ತವ್ಯವು ಅವರ ದಿನನಿತ್ಯ ಕರ್ತವ್ಯದ ಒಂದು ಭಾಗವಾಗಿರುವುದರಿಂದ ಕೆಸಿಎಸ್‌ಆರ್ ನಿಯಮ 28(ಸಿ) 5ರನ್ವಯ ವಿಶೇಷ ಕರ್ತವ್ಯಗಳಿಗೆ ಸರ್ಕಾರದ ವಿಶೇಷ ಆದೇಶದ ಮೂಲಕ ಅನ್ಯತಾ ಉಪಬಂಧಿಸಿದ್ದನ್ನು ಬಿಟ್ಟು ವಿಶೇಷ ಅನುಮತಿಯಿಲ್ಲದೇ ಯಾವುದೇ ಸಂಭಾವನೆಯನ್ನು ಪಾವತಿಸುವಂತಿಲ್ಲ ಹಾಗೂ ಸರ್ಕಾರಿ ನೌಕರರು ದಿನದ 24 ಗಂಟೆಯು ಸರ್ಕಾರಿ ನೌಕರರಾಗಿರುವುದರಿಂದ ಕಛೇರಿಯ ಕರ್ತವ್ಯದ ನಂತರ ಹೆಚ್ಚು ಸಮಯ ಕರ್ತವ್ಯ ನಿರ್ವಹಿಸುವುದು ಆತನ ಆದ್ಯ ಕರ್ತವ್ಯವಾಗಿರುತ್ತದೆ. | ಪ್ರಸ್ತಾವಿತ ಕಂಡಿಕೆಯಲ್ಲಿ ಸೂಚಿತವಾಗಿರುವ ವಿಷಯಕ್ಕೆ ಸಂಬಂಧಿಸಿದಂತೆ ವಿಶ್ವವಿದ್ಯಾನಿಲಯದ ಪರೀಕ್ಷಾ ಪ್ರಕ್ರಿಯೆಯು ದೊಡ್ಡ ಪ್ರಮಾಣದಲ್ಲಿ ವಿವಿಧ ವಿಭಾಗಗಳ ನೌಕರರ ಸಾಮೂಹಿಕ ಭಾಗವಹಿಸುವಿಕೆ ಕಾರ್ಯವನ್ನು ಒಳಗೊಂಡ ವಿವಿಧ ಹಂತದ ಕಾರ್ಯಕ್ರಮವಾಗಿರುತ್ತದೆ. ಈ ಪ್ರಕ್ರಿಯೆಯಲ್ಲಿ ಕೇವಲ ಶೈಕ್ಷಣಿಕ ವಿಭಾಗದ ಸಿಬ್ಬಂದಿಗಳೆ ಅಲ್ಲದೆ ಇತರೆ ಸಿಬ್ಬಂದಿಗಳ ಭಾಗವಹಿಸುವಿಕೆ/ಕೆಲಸವು ಅವಶ್ಯಕವಾಗಿರುತ್ತದೆ.<br><br>ಈ ಅಂಶವನ್ನು ಮನಗಂಡು ಸದರಿ ವಿಷಯವು ದಿನಾಂಕ:30.05.2014ರ ಸಿಂಡಿಕೇಟ್ ಸಭೆಯಲ್ಲಿ ಚರ್ಚಿತವಾಗಿ ಅನುಮೋದಿತವಾಗಿರುತ್ತದೆ. (ಸಿಂಡಿಕೇಟ್ ಸಭೆಯ ನಿರ್ಣಯದ ಪ್ರತಿ ಲಗತ್ತಿಸಿದೆ).<br><br>ಈ ಆದೇಶದನ್ವಯವೇ ಅಧಿಕಾರಿಗಳು ಸಂಖ್ಯಾ ತಜ್ಞರು, ಅಧೀಕ್ಷಕರು, ಕಾರ್ಯನಿರ್ವಹಕರು ಇವರುಗಳಿಗೆ ಪರಿಷ್ಕೃತ ಸಂಭಾವನೆಯನ್ನು ಒಟ್ಟು ರೂ.1,54,500/– ಗಳನ್ನು ಪಾವತಿಸಲು ಕ್ರಮವಹಿಸಲಾಗಿದೆ.<br><br>ಮೇ/ಜೂನ್–2017 ಮತ್ತು ನವೆಂಬರ್/ಡಿಸೆಂಬರ್–2017 ವಾರ್ಷಿಕ ಸಂಭಾವನೆಯ ಬಟವಾಡೆ ವಿವರವನ್ನು ಅವಗಾಹನೆಗೆ ಸಲ್ಲಿಸಲಾಗಿದೆ. ಆದ್ದರಿಂದ ಸೂಚಿತ ವಸೂಲಾತಿ ಮೊತ್ತ ರೂ.1,54,500/–ಗಳ ಕಂಡಿಕೆ ಕೈ ಬಿಡಲು ಕೋರಿದೆ. |

| | |
|---|---|
| ಮುಂದುವರಿದಂತೆ, ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯಿದೆ 2000ರ ನಿಯಮ 41(5),(6)(7) ರನ್ವಯ ಯಾವುದೇ ಆದೇಶಗಳನ್ನು ಮಾಡುವಾಗ ಸಿಂಡಿಕೇಟ್ ಸಭೆಯ ಅನುಮೋದನೆಯೊಂದಿಗೆ ಸರ್ಕಾರ ಗೌರವಾನ್ವಿತ ಕುಲಾಧಿಪತಿಗಳ ಅನುಮೋದನೆ ಪಡೆಯಬೇಕಾಗಿರುತ್ತದೆ ಹೀಗೆ ನಿಯಮಬಾಹಿರವಾಗಿ ಪಾವತಿಸಲಾಗಿರುವ ಸಾಮಾನ್ಯ ಸಂಭಾವನೆಯ ಒಟ್ಟು ಮೊತ್ತ ರೂ.1,54,500/–ಗಳನ್ನು ಸಂಬಂಧಪಟ್ಟವರಿಂದ ವಸೂಲಿ ಮಾಡಿ ವಿಶ್ವವಿದ್ಯಾನಿಲಯ ಖಾತೆಗೆ ಜಮೆ ಮಾಡಿ ವರದಿಸಲ್ಲಿಸಲು ಸೂಚಿಸಿದೆ. ವಿವರಗಳನ್ನು ಅನುಬಂಧ–41 ರಲ್ಲಿ ನೀಡಿದೆ. | |
| **<u>87. ಪರೀಕ್ಷಾ ವಿಭಾಗದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಖಾಯಂ ನೌಕರರನ್ನು ಜಾಗೃತದಳದ ಸದಸ್ಯರನ್ನಾಗಿ ನೇಮಕ ಮಾಡಿಕೊಂಡು ನಿಯಮಬಾಹಿರವಾಗಿ ಸಂಭಾವನೆಯನ್ನು ಪಾವತಿ ಮಾಡಿರುವುದು:– (ಪರೀಕ್ಷಾ ವಿಭಾಗ)</u>**<br><br>2017–18ನೇ ಸಾಲಿನ ಲೆಕ್ಕಪರಿಶೋಧನೆಗೆ ಹಾಜರುಪಡಿಸಲಾದ ಓಚರ್‌ಗಳು ಹಾಗೂ ಬಿ ಆರ್ ವಹಿಯನ್ನು ಪರಿಶೀಲಿಸಿಸಲಾಗಿ ಪರೀಕ್ಷಾ ವಿಭಾಗದಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ಖಾಯಂ ಅಧಿಕಾರಿಗಳು ಹಾಗೂ ನೌಕರರನ್ನು ಪರೀಕ್ಷಾ ಕಾರ್ಯಗಳಿಗೆಂದು ಜಾಗೃತದಳದ ಸದಸ್ಯರುಗಳನ್ನಾಗಿ ನಿಯೋಜಿಸಿ ದಿನವೊಂದಕ್ಕೆ ರೂ.700/– ರಂತೆ ಒಟ್ಟು ರೂ.9,28,384/–ಗಳನ್ನು ಸಂಭಾವನೆಯಾಗಿ ನೀಡಿರುವುದು ಕಂಡುಬಂದಿದ್ದು ವಿವರಗಳನ್ನು ಅನುಬಂಧ–42 ರಲ್ಲಿ ನೀಡಿದೆ KCSR ನಿಯಮ 28(ಸಿ) 5 ರ ಉಲ್ಲಂಘನೆ ಯಾಗಿರುವುದರಿಂದ ಈ ಬಗ್ಗೆ ಸೂಕ್ತ ವಿವರಣೆ ಸ್ಪಷ್ಟೀಕರಣ ನೀಡುವುದರೊಂದಿಗೆ ಸದರಿ ಪಾವತಿಗಳಿಗೆ ಸಂಬಂಧಿಸಿದಂತೆ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000ರ ನಿಯಮ 41(5)(6)(7) ರನ್ವಯ ಆದೇಶಗಳನ್ನು ಮಾಡುವಾಗ ಸಿಂಡಿಕೇಟ್ ಸಭೆಯ ಅನುಮೋದನೆಯೋದಿಗೆ ಸರ್ಕಾರ ಗೌರವಾನಿತ್ವ ಕುಲಾಧಿಪತಿಗಳ ಅನುಮೋದನೆ ಪಡೆದಿರುವ ಪರಿನಿಯಮ ಮಾಡಿಕೊಂಡಿರುವ ಆದೇಶದ ಪ್ರತಿಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸುವಂತೆ ಕೋರಿ ವಿಚಾರಣಾ ಪತ್ರ ಸಂಖ್ಯೆ:29/2019–20 ದಿನಾಂಕ:14.05.2019 ನೀಡಲಾಗಿತ್ತಾದರೂ ಸೂಕ್ತ ಸ್ಪಷ್ಟೀಕರಣ ನೀಡಿರುವುದಿಲ್ಲ ಹಾಗೂ ಸದರಿ ಆದೇಶದ ಪ್ರತಿಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸಿರುವುದಿಲ್ಲವಾದ ಕಾರಣ ಪಾವತಿಸಲಾಗಿರುವ ಸಂಭಾವನೆಯ ಒಟ್ಟು ಮೊತ್ತ ರೂ.9,28,384/–ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ. | ಕಂಡಿಕೆಯಲ್ಲಿ ಪ್ರಸ್ಥಾವಿತ ವಿಷಯಕ್ಕೆ ಸಂಬಂಧಿಸಿದಂತೆ ವಿಶ್ವವಿದ್ಯಾನಿಲಯದ 2017–18ನೇ ಸಾಲಿನ ಪರೀಕ್ಷೆಗಳಲ್ಲಿ ಸಂಭವನಿಯವಾದ ಪರೀಕ್ಷಾ ಅಕ್ರಮಗಳನ್ನು ತಡೆಯುವ ಸಲುವಾಗಿ ಮೈಸೂರು ವಿಶ್ವವಿದ್ಯಾನಿಲಯದ ಅಧೀನಕ್ಕೆ ಒಳಪಟ್ಟ ಕಾಲೇಜುಗಳಿಗೆ ಅನಿರೀಕ್ಷಿತ ಭೇಟಿ ನೀಡಿ ಪರೀಕ್ಷಾ ನಿಯಮಗಳು ಕ್ರಮಬದ್ಧವಾಗಿ ಅನುಷ್ಠಾನಗೊಂಡಿದೆಯೇ ಎಂದು ಪರಿಶೀಲಿಸಲು KSU ACT 2000 (Article No.74(1) ಮತ್ತು CONDUCT OF EXAMINATIONS ಪ್ರಕಾರ ಅಧಿಕಾರಿಗಳು ಮತ್ತು ನೌಕರರನ್ನು ಒಳಗೊಂಡ "ಜಾಗೃತ ದಳ" ವನ್ನು ಕುಲಸಚಿವರು (ಪರೀಕ್ಷಾಂಗ) ರವರ ವಿವೇಚನೆ ಅಡಿಯಲ್ಲಿ ಸೂಚಿತವಾದ ಕಾರ್ಯಕ್ಕೆ ನಿಯೋಜಿಸಲಾಗಿತ್ತು (ಈ ಸಂಬಂಧ ವಿಶ್ವವಿದ್ಯಾನಿಲಯದ ಕಾಯ್ದೆ 2000 ಭಾಗದ ಪ್ರತಿ ಲಗತ್ತಿಸಿದೆ).<br><br>ಅಧ್ಯಾಪಕರುಗಳು ಕಾಲೇಜುಗಳಲ್ಲಿ ಪರೀಕ್ಷಾ ಕಾರ್ಯ ಮತ್ತು ಮೌಲ್ಯಮಾಪನ ಕಾರ್ಯದಲ್ಲಿ ತೊಡಗಿಸಿಕೊಳ್ಳುವುದರಿಂದ ಅವರನ್ನು ಹೋರತುಪಡಿಸಿ ಪರೀಕ್ಷಾ ವಿಭಾಗದಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ಅಧಿಕಾರಿಗಳು ಮತ್ತು ನೌಕರರನ್ನು ಒಳಗೊಂಡ "ಜಾಗೃತ ದಳ" ತಂಡವನ್ನು ರಚಿಸಲಾಗಿದೆ.<br><br>ಈ ರೀತಿ ನೇಮಕಗೊಂಡ "ಜಾಗೃತ ದಳ"ದ ನೌಕರರಿಗೆ ಪ್ರತಿ ದಿನಕ್ಕೆ ರೂ.700/– ದರದಲ್ಲಿ ಸಂಭಾವನೆ ಪಾವತಿಸಲಾಗಿದೆ.<br><br>ಈ ಸಂಬಂಧ ಪಾವತಿಯಾಗಿರುವ ಒಟ್ಟು ಮೊತ್ತ ರೂ.9,28,384/–ಗಳಿಗೆ ಸಂಬಂಧಿಸಿದಂತೆ ಬಟವಾಡೆ ಪಡೆದಿರುವ ಸಿಬ್ಬಂದಿ ವಿವರ ಮತ್ತು ಆದೇಶದ ಪ್ರತಿ ಲಗತ್ತಿಸಿದೆ.<br><br>ಈ ಸಂಬಂಧ ಎಲ್ಲಾ ವಿವರಗಳನ್ನು ಮುಂದಿನ ಲೆಕ್ಕ ಪರಿಶೋಧನೆಗೆ ಹಾಜರುಪಡಿಸಲು ಕ್ರಮವಹಿಸಲಾಗಿದೆ. ಆದ್ದರಿಂದ ಪ್ರಸ್ಥಾವಿತ ವಸೂಲಾತಿ ಕಂಡಿಕೆ ಕೈ ಬಿಡಲು ಕೋರಿದೆ. |

| | |
|---|---|
| **<u>88. ಪರೀಕ್ಷಾ ವಿಭಾಗದ ಖಾಯಂ ಅಧಿಕಾರಿನೌಕರ ವರ್ಗದವರಿಗೆ ಪರೀಕ್ಷಾ ಕಾರ್ಯ ನಿರ್ವಹಿಸಿದ್ದಕ್ಕಾಗಿ ಪ್ರವಾಸ ಭತ್ಯೆ ಹಾಗೂ ಸಂಭಾವನೆ ಪಾವತಿಸಿರುವುದರ ಕುರಿತು:– (ಪರೀಕ್ಷಾ ವಿಭಾಗ)</u>**<br><br>ಮೈಸೂರು ವಿಶ್ವವಿದ್ಯಾನಿಲಯದ ಪರೀಕ್ಷಾ ವಿಭಾಗದ 2017–18 ನೇ ಸಾಲಿನ ಹಾಜರುಪಡಿಸಲಾದ ಪಾವತಿ ವೋಚರ್‌ಗಳನ್ನು ಪರಿಶೀಲಿಸಲಾಗಿ ಪರೀಕ್ಷಾ ವಿಭಾಗದ ಖಾಯಂ ಅಧಿಕಾರಿ ನೌಕರ ವರ್ಗದವರಿಗೆ ಪ್ರಶ್ನೆಪತ್ರಿಕೆ ಅಂಕಪಟ್ಟಿ ಅರ್ಜಿ ವಿತರಣೆ ಉತ್ತರಪತ್ರಿಕೆ ಸ್ವೀಕೃತಿ ಹಾಗೂ ಇನ್ನಿತರೆ ಪರೀಕ್ಷಾ ಕಾರ್ಯಗಳನ್ನು ನಿರ್ವಹಿಸಿದ್ದಕ್ಕಾಗಿ ಪ್ರವಾಸ ಭತ್ಯೆ ಹಾಗೂ ಸಂಭಾವನೆ ಪಾವತಿಸಲಾಗಿರುತ್ತದೆ.<br><br>KCSR ನಿಯಮ 28(ಎ)(ಬಿ)(ಸಿ) ಮತ್ತು (ಇ)ಗಳನ್ವಯ ಪರೀಕ್ಷಾ ಕರ್ತವ್ಯವು ಪರೀಕ್ಷಾಂಗ ವಿಭಾಗದ ನೌಕರರುಗಳ ಆದ್ಯ ಕರ್ತವ್ಯವಾಗಿರುವುದರಿಂದ ನಿಯಮಾನುಸಾರ ಸಂಭಾವನೆ ಮತ್ತು ಸಹಾಯಧನವನ್ನು ಪಡೆಯಲು ಅವಕಾಶವಿರುವುದಿಲ್ಲ ಹಾಗೂ KCSR ನಿಯಮ 514 ರನ್ವಯ ಕರ್ತವ್ಯ ನಿರ್ವಹಿಸುವ ಕೇಂದ್ರಸ್ಥಾನದಿಂದ 08 ಕಿ ಮೀ ಮೀರುವ ವ್ಯಾಪ್ತಿಯಲ್ಲಿ ಕರ್ತವ್ಯ ನಿರ್ವಹಿಸಿದ್ದಲ್ಲಿ ಮಾತ್ರ ದಿನ ಭತ್ಯೆಯನ್ನು ಪಾವತಿಸಲು ನಿಯಮಗಳಲ್ಲಿ ಅವಕಾಶವಿದೆ. ಹಾಗೂ KCSR ನಿಯಮ 28(ಸಿ) 5 ರನ್ವಯ ವಿಶೇಷವಾದ ಕರ್ತವ್ಯಗಳಿಗೆ ಸರ್ಕಾರದ ವಿಶೇಷ ಆದೇಶದ ಮೂಲಕ ಅನ್ಯತಾ ಉಪಬಂಧಿಸಿದನ್ನು ಬಿಟ್ಟು ವಿಶೇಷ ಅನುಮತಿ ಇಲ್ಲದೇ ಯಾವುದೇ ಸಂಭಾವನೆಯನ್ನು ಪಡೆಯುವಂತಿಲ್ಲ<br><br>28(ಎ)(ಬಿ)(ಸಿ) ಮತ್ತು (ಇ)ಗಳನ್ವಯ ಸರ್ಕಾರಿ ನೌಕರರು ಕಛೇರಿ ಕರ್ತವ್ಯದ ಹೆಚ್ಚು ಹೊತ್ತು ಕರ್ತವ್ಯ ನಿರ್ವಹಿಸುವುದು ಅವರ ಹೊಣೆಗಾರಿಕೆಯಾಗಿರುವುದರಿಂದ ಯಾವುದೇ ಸಂಭಾವನೆಯನ್ನು ಪಡೆಯುವುದಕ್ಕೆ ಅವಕಾಶವಿಲ್ಲದಿರುವುದರಿಂದ ಹಾಗೂ ಕರ್ನಾಟಕ ವಿಶ್ವವಿದ್ಯಾನಿಲಯದ ಕಾಯಿದೆ ನಿಯಮ 2000 ರ ನಿಯಮ 41(5)(6) ಮತ್ತು (7) ಗಳನ್ವಯ ಯಾವುದೇ ಆದೇಶಗಳು ಆದ್ಯಾದೇಶಗಳನ್ನು ಮಾಡುವಾಗ ಸಿಂಡಿಕೇಟ್ ಸಭೆಯ ಅನುಮೋದನೆಯೊಂದಿಗೆ ಸರ್ಕಾರ ಗೌರವಾನ್ವಿತ ಕುಲಾಧಿಪತಿಗಳ ಅನುಮೋದನೆ ಪಡೆಯದೆ ಇರುವುದರಿಂದ ಸದರಿ ನೌಕರರಿಗೆ ಅನುಬಂಧ–43 ರಲ್ಲಿ ನೀಡಲಾಗಿರುವ ವಿವರಗಳಂತೆ ಪಾವತಿಸಲಾಗಿರುವ ಒಟ್ಟು ಸಂಭಾವನೆ ಮೊತ್ತ ರೂ.4,17,680/–ಗಳನ್ನು ವಸೂಲಿ ಮಾಡಿ ವಿಶ್ವವಿದ್ಯಾನಿಲಯದ ಖಾತೆಗೆ ಜಮೆ ಮಾಡಿ ವರದಿ ಸಲ್ಲಿಸಲು ಸೂಚಿಸಲಾಗಿದೆ. | ಪ್ರಸ್ಥಾವಿತ ಕಂಡಿಕೆಯಲ್ಲಿ ವಿಷಯಕ್ಕೆ ಸಂಬಂಧಿಸಿದಂತೆ ಪರೀಕ್ಷಾ ಕಾರ್ಯವು ವಿಶ್ವವಿದ್ಯಾನಿಲಯದ ಆದ್ಯತೆ ಮತ್ತು ಗೌಪ್ಯತೆಯೊಂದಿಗೆ ನಿರ್ವಹಿಸಬೇಕಾದ ಕಾರ್ಯವಾಗಿರುತ್ತದೆ. ಅಲ್ಲದೆ ಸದರಿ ಕರ್ತವ್ಯದ ನಿರ್ವಹಣೆಯು ದಿನನಿತ್ಯದ ಕಛೇರಿಯ ಅವಧಿಯನ್ನು ಮೀರಿ ಸೇವೆ ನಿರ್ವಹಣೆಯ ಜವಾಬ್ದಾರಿ ಹೊಂದಿರುತ್ತಾರೆ.<br><br>ವಿಶ್ವವಿದ್ಯಾನಿಲಯದ ಕಾರ್ಯವ್ಯಾಪ್ತಿಯು, ಮೈಸೂರು ನಗರ ಮತ್ತು ಗ್ರಾಮಾಂತರ, ಮಂಡ್ಯ, ಹಾಸನ, ಚಾಮರಾಜನಗರ ಜಿಲ್ಲೆಗಳಲ್ಲಿ ಕಾರ್ಯವ್ಯಾಪ್ತಿಯನ್ನು ಹೊಂದಿದೆ. ಈ ವ್ಯಾಪ್ತಿಯಲ್ಲಿ ಬರುವ ಕಾಲೇಜುಗಳಿಗೆ ಪ್ರಶ್ನೆ ಪತ್ರಿಕೆ, ಅಂಕಪಟ್ಟಿ ಅರ್ಜಿ ವಿತರಣೆ, ಉತ್ತರ ಪ್ರತಿಕೆಗಳ ಸ್ವೀಕೃತಿ ಕಾರ್ಯಗಳ ನಿರ್ವಹಣೆಯ ಸೇವೆ ಮತ್ತು ಜವಾಬ್ದಾರಿಯನ್ನು ಒಳಗೊಂಡಿದೆ ಮತ್ತು ಮೇಲಿನ ಕರ್ತವ್ಯದ ಅವಧಿಯು ಬೆಳ್ಳಿಗೆ 6:00 ಗಂಟೆಗೆ ಮೈಸೂರು ಕೇಂದ್ರ ಸ್ಥಾನವನ್ನು ಬಿಟ್ಟು ಮರಳಿ ಕೇಂದ್ರ ಸ್ಥಾನಕ್ಕೆ ವಾಪಸ್ಸಾಗಲು ರಾತ್ರಿ 8:00 ಅಥವ 9:00 ಆಗುವ ಸಂಭವಗಳು ಇವೆ.<br><br>ಈ ಸಂದರ್ಭಗಳಲ್ಲಿ ನಿಯೋಜಿತ ಪರೀಕ್ಷಾ ಕಾರ್ಯದ ಸಿಬ್ಬಂದಿಯ ಉಪಹಾರ, ಊಟ ಮತ್ತು ಕಾಫಿ/ಟೀ ವೆಚ್ಚಗಳನ್ನು ಪರಿಗಣಿಸಿ ಈ ಅವಧಿಯ ಸೇವೆಯನ್ನು ವಿಶೇಷ ಕರ್ತವ್ಯಗಳು ಮತ್ತು ಗೌಪ್ಯ ಕರ್ತವ್ಯಗಳು ಎಂದು ಪರಿಗಣಿಸಿ ಸಿಂಡಿಕೇಟ್ ಸಭೆಯ ಅನುಮೋದಿತ ನಿರ್ಣಯದ ಮೇರೆಗೆ ಸದರಿ ಪಾವತಿ ರೂ.4,17,680/–ಗಳನ್ನು ಮಾಡಲಾಗಿದೆ.<br><br>ಈ ಸಂಬಂಧದ ಸಿಂಡಿಕೇಟ್ ಆದೇಶ ಮತ್ತು ಕಛೇರಿ ಆದೇಶದ ಪ್ರತಿಯನ್ನು ಲಗತ್ತಿಸಲಾಗಿದೆ.<br><br>ಆದ ಕಾರಣ ಸೂಚಿತ ವಸೂಲಾತಿ ಕಂಡಿಕೆ ಕೈ ಬಿಡಲು ಕೋರಿದೆ. |
| **<u>89. ಉತ್ತರ ಪತ್ರಿಕೆಗಳ ಕೇಂದ್ರ ಮೌಲ್ಯಮಾಪನ ಕಾರ್ಯಕ್ಕಾಗಿ ಪರೀಕ್ಷಾ ವಿಭಾಗದ ಹಾಗೂ ನೌಕರರಿಗೆ ಸ್ಥಳೀಯ ಭತ್ಯೆ ಮತ್ತು ಸಂಭಾವನೆ ಪಾವತಿ ಮಾಡಿರುವುದು:– (ಪರೀಕ್ಷಾ ವಿಭಾಗ)</u>** | |

2017–18ನೇ ಸಾಲಿನಲ್ಲಿ ನಡೆದ ಪರೀಕ್ಷೇಗಳ ಉತ್ತರ ಪತ್ರಿಕೆಗಳ ಕೇಂದ್ರ ಮೌಲ್ಯಮಾಪನ ಕಾರ್ಯಕ್ಕೆ ಪರೀಕ್ಷಾ ವಿಭಾಗದ ಖಾಯಂ ನೌಕರರನ್ನು ಸಂಯೋಜಕರು ಸಹಾಯಕರು ಹಾಗೂ ಸಮನ್ವಯ ಸಮಿತಿ ಅಧಿಕಾರಿಗಳನ್ನಾಗಿ ನೇಮಕ ಮಾಡಿಕೊಂಡು ಸ್ಥಳೀಯ ಭತ್ಯೆ ದಿನ ಭತ್ಯೆ ಹಾಗೂ ಸಂಭಾವನೆಯನ್ನು ಪಾವತಿ ಮಾಡಲಾಗಿರುತ್ತದೆ.

KCSR ನಿಯಮ 28(ಎ)(ಬಿ)(ಸಿ) ಮತ್ತು (ಇ)ಗಳನ್ವಯ ಸಂಭಾವನೆಯನ್ನು ಪಾವತಿಸಲು ಅವಕಾಶವಿರುವುದಿಲ್ಲ KCSR ನಿಯಮ 498(ಎ) ರನ್ವಯ ದಿನಭತ್ಯೆಯು ಕೇಂದ್ರ ಕಾರ್ಯಸ್ಥಳದಿಂದ ಗೈರುಹಾಜರಾಗುವ ಪ್ರತಿ ದಿನಕ್ಕೆ ಕೊಡುವ ಒಂದು ಏಕರೂಪ ಭತ್ಯೆಯಾಗಿರುತ್ತದೆ ಹಾಗೂ ಕೇಂದ್ರ ಕಾರ್ಯಸ್ಥಾನದಲ್ಲಿ ಮಾಡುವ ಕೆಲಸಕ್ಕೆ ಯಾವುದೇ ಸ್ಥಳೀಯ ಭತ್ಯೆ ದಿನ ಭತ್ಯೆ ಹಾಗೂ ಸಂಭಾವನೆಯನ್ನು ಪಾವತಿಸಲು ಅವಕಾಶವಿರುವುದಿಲ್ಲ ಆದರೆ ಪರೀಕ್ಷಾ ವಿಭಾಗದ ಅಧಿಕಾರಿ ಮತ್ತು ನೌಕರರಿಗೆ ಕೇಂದ್ರ ಸ್ಥಾನದಲ್ಲಿ ನಿರ್ವಹಿಸುವ ಕರ್ತವ್ಯಕ್ಕೆ ಸಂಭಾವನೆಯನ್ನು ಪಾವತಿಸಿದ್ದು ಈ ಸಂಬಂಧ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000ರ ನಿಯಮ 41(5)(6) ಮತ್ತು (7) ರನ್ವಯ ಯಾವುದೇ ಆದೇಶಗಳು ಆಧ್ಯಾದೇಶಗಳನ್ನು ಮಾಡುವಾಗ ಸಿಂಡಿಕೇಟ್ ಸಭೆಯ ಹಾಗೂ KCSR ನಿಯಮ ಉಲ್ಲಂಘನೆ ಸ್ಥಳೀಯಭತ್ಯೆ ದಿನಭತ್ಯೆಯನ್ನು ಪಾವತಿಸಿರುವ ಒಟ್ಟು ಮೊತ್ತ ರೂ.48,658/–ಗಳನ್ನು ಸಂಬಂಧಪಟ್ಟವರಿಂದ ವಸೂಲಾತಿಗೆ ಸೂಚಿಸಿದೆ ವಿವರಗಳನ್ನು ಅನುಬಂಧ–44ರಲ್ಲಿ ವಿವರಿಸಿದೆ.

ಪ್ರಸ್ಥಾವಿತ ಕಂಡಿಕೆಯಲ್ಲಿನ ವಿಷಯಕ್ಕೆ ಸಂಬಂಧಿಸಿದಂತೆ ಉತ್ತರ ಪತ್ರಿಕೆಗಳ ಕೇಂದ್ರ ಮೌಲ್ಯಮಾಪನ ಕಾರ್ಯವು ಕೇಂದ್ರ ಸ್ಥಾನದಲ್ಲಿಯೇ ಕರ್ತವ್ಯದ ನಿರ್ವಹಣೆಯಿಂದ ಕೂಡಿದ್ದರೂ ಕರ್ತವ್ಯದ ಗೌಪ್ಯತೆ ಮತ್ತು ವಿಶೇಷ ಜವಾಬ್ದಾರಿಯನ್ನು ಪರಿಗಣಿಸಿ ವಿಶ್ವವಿದ್ಯಾನಿಲಯದ ಆದೇಶದನ್ವಯ ಒಟ್ಟು **ರೂ.48,658/–** ಪಾವತಿಸಲಾಗಿದೆ. ಈ ಸಂಬಂಧ ವಿಶ್ವವಿದ್ಯಾನಿಲಯದ ಆದೇಶದ ಪ್ರತಿ ಲಗತ್ತಿಸಲಾಗಿದೆ.

ಸದರಿ ಮೊತ್ತವು ಪರೀಕ್ಷಾ ಕಾರ್ಯದಲ್ಲಿ ಸಿಬ್ಬಂದಿಯು ತೊಡಗಿಸಿಕೊಳ್ಳಲು ನೀಡಲಾಗಿರುವ ಉತ್ತೇಜನಾ ಭತ್ಯೆ/ಪ್ರೊತ್ಸಾಹ ಧನ ಆಗಿರುತ್ತದೆ.

ಆದ ಕಾರಣ ಸೂಚಿತ ಆಕ್ಷೇಪಣಾ ಕಂಡಿಕೆ ಕೈ ಬಿಡಲು ಕೋರಿದೆ.

**90. Challenging Valuation ಉತ್ತರ ಪತ್ರಿಕೆಗಳನ್ನು ಮರುಮೌಲ್ಯಮಾಪನ ಮಾಡಿದ ಪ್ರಾಧ್ಯಾಪಕರುಗಳಿಗೆ ಸಂಭಾವನೆ ಪಾವತಿಸಿರುವ ಕುರಿತು :– (ಪರೀಕ್ಷಾ ವಿಭಾಗ)**

2017–18ನೇ ಸಾಲಿನಲ್ಲಿ ಉತ್ತರ ಪತ್ರಿಕೆಗಳನ್ನು ಮರುಮೌಲ್ಯಮಾಪನ ಮಾಡಿರುವ (ಬಾಹ್ಯ) ಪ್ರಾಧ್ಯಾಪಕರಿಗೆ ಒಟ್ಟು ರೂ.3,30,955/–ಗಳನ್ನು ಇ–ಪೇಮೆಂಟ್ ಮೂಲಕ ಸಂಭಾವನೆಯನ್ನು ಪಾವತಿ ಮಾಡಲಾಗಿದ್ದು ಈ ಸಂಬಂಧ ಪೂರಕ ಲೆಕ್ಕ ಪತ್ರದಾಖಲೆಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸಲು ವಿಚಾರಣಾ ಪತ್ರ ಸಂಖ್ಯೆ:21/18–19 ದಿನಾಂಕ:04.05.2019 ರಂದು ವಿಚಾರಣಾ ಕೋರಿ ದಿನಾಂಕ: 10.05.2019 ರಲ್ಲಿ ವಿಚಾರಣೆಗೆ ಉತ್ತರವನ್ನು ಅಂದರೆ ಸಂಬಂಧ ಪಟ್ಟ ಲೆಕ್ಕಪತ್ರದಾಖಲೆಗಳು ಹಣಕಾಸು ವಿಭಾಗದಲ್ಲಿ ಲಭ್ಯವಿರುತ್ತದೆ ಎಂದು ನೀಡಿರುತ್ತಾರೆ ನೀಡಿರುವ ಉತ್ತರವು ಸಮಂಜಸವಲ್ಲದಿರುವುದರಿಂದ ಪೂರಕ ಲೆಕ್ಕಪತ್ರ ದಾಖಲೆಗಳನ್ನು ಹಾಜರುಪಡಿಸುವವರೆಗೆ ರೂ.3,30,955/–ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.

ಪ್ರಸ್ತಾವಿತ ಕಂಡಿಕೆಯಲ್ಲಿ ಸೂಚಿತವಾಗಿರುವ ವಿಷಯಕ್ಕೆ ಸಂಬಂಧಿಸಿದಂತೆ 2017–18ನೇ ಸಾಲಿನಲ್ಲಿನ ಉತ್ತರ ಪತ್ರಿಕೆಗಳ ಮರು ಮೌಲ್ಯಮಾಪನ ಮಾಡಿರುವ ಬಾಹ್ಯ ಪ್ರಾಧ್ಯಾಪಕರುಗಳಿಗೆ ವಿಶ್ವವಿದ್ಯಾನಿಲಯದ ಆದೇಶದಲ್ಲಿ ಸೂಚಿತವಾಗಿರುವ ದರದಲ್ಲಿಯೇ ಸಂಭಾವನೆಯನ್ನು ಪಾವತಿಸಲಾಗಿದ್ದು ಇ–ಪೇಮೆಂಟ್ ಮೂಲಕ ಸಂಬಂಧಿಸಿದ ಪ್ರಾಧ್ಯಾಪಕರ ಖಾತೆಗೆ ಮೊತ್ತಗಳು ಒಟ್ಟು ರೂ.3,30,955/–ಗಳು ಹೊಂದಾಣಿಕೆಯಾಗಿರುತ್ತದೆ. (ಈ ಸಂಬಂಧದ ವಿಶ್ವವಿದ್ಯಾನಿಲಯದ ಆದೇಶದ ಪ್ರತಿ ಮತ್ತು ಬಟವಾಡೆ ವಿವರದ ಪ್ರತಿ ಲಗತ್ತಿಸಲಾಗಿದೆ. ಆದೇಶ ಸಂಖ್ಯೆ:ಜಿ.ಎಲ್5/142/12–13, ದಿನಾಂಕ:20.12.2013)

| ಕ್ರ.ಸಂ | ಮೊತ್ತ |
|---|---|
| 1 | 2,504/– |
| 2 | 41,844/– |
| 3 | 1,07,510/– |
| 4 | 3,240/– + 135/– |
| 5 | 3,375/– |

<table>
<tr>
<td></td>
<td>

| | |
|---|---|
| 6 | 80,347/– |
| 7 | 20,662/– |
| 8 | 4,504/– |
| 9 | 2,700/– |
| 10 | 64,208/– |
| ಒಟ್ಟು | 3,30,955/– |

ಆದ ಕಾರಣ ಸೂಚಿತ ಆಕ್ಷೇಪಣಾ ಕಂಡಿಕೆ ಕೈ ಬಿಡಲು ಕೋರಿದೆ.
</td>
</tr>
<tr>
<td>

**91. ಚರ – ಸ್ಥಿರಾಸ್ಥಿ ವಹಿ ನಿರ್ವಹಿಸದಿರುವುದು :– (ಪರೀಕ್ಷಾ ವಿಭಾಗ)**

2017–18ನೇ ಸಾಲಿನಲ್ಲಿ ವಿಶ್ವವಿದ್ಯಾನಿಲಯದಲ್ಲಿ ನಿರ್ವಹಿಸಿರುವ ಚರ–ಸ್ಥಿರಾಸ್ಥಿಗಳ ವಿವರಗಳ ವಹಿಯನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸುವಂತೆ ಕೋರಿ ವಿಚಾರಣಾ ಪತ್ರ ಸಂಖ್ಯೆ:31/2019–20 ದಿನಾಂಕ;14.05.2019 ನೀಡಲಾಗಿತ್ತು ಕರ್ನಾಟಕ ಆರ್ಥಿಕ ಸಂಹಿತೆ ಅನುಚ್ಛೇಧ 165 ಪ್ರಪತ್ರ 33 ರಲ್ಲಿ ಚರ ಸ್ಥಿರಾಸ್ಥಿಗಳ ವಿವರವನ್ನು ಬರೆದು ಇಲಾಖಾ ಮೂಖ್ಯಸ್ಥರಿಂದ ದೃಢೀಕರಿಸಿ ಹಾಜರುಪಡಿಸಬೇಕಿದ್ದು ಆಸ್ತಿ ವಹಿ ನಿರ್ವಹಿಸಿಲ್ಲ ಹಾಜರುಪಡಿಸಿಲ್ಲ ಈ ಬಗ್ಗೆ ಸೂಕ್ತ ಆಡಳಿತಾತ್ಮಕ ಸೂಕ್ತ ಕ್ರಮ ಅಗತ್ಯವಿದೆ.
</td>
<td>

ಪ್ರಸ್ತಾವಿತ ಕಂಡಿಕೆಯಲ್ಲಿನ ವಿಷಯಕ್ಕೆ ಸಂಬಂಧಿಸಿದಂತೆ 2017–18ನೇ ಸಾಲಿನ ಅಂತ್ಯಕ್ಕೆ ವಿಶ್ವವಿದ್ಯಾನಿಲಯದ ವಿವಿಧ ವಿಭಾಗಳ ಕಟ್ಟಡಗಳು, ಜಮೀನುಗಳು ಸೇರಿದಂತೆ ಸಮಗ್ರವಾದ ಚರ ಮತ್ತು ಸ್ಥಿರ ಆಸ್ತಿಯ ಪಟ್ಟಿಯನ್ನು ವಿಶ್ವವಿದ್ಯಾನಿಲಯದ ಎಸ್ಟೇಟ್ ಆಫೀಸರ್ ರವರು ದೃಢೀಕರಿಸಿರುವ ವಿವರವನ್ನು ಲೆಕ್ಕ ಪರಿಶೋಧನೆ ಅವಗಾಹನೆಗೆ ಸಲ್ಲಿಸಲಾಗಿದೆ.

ಆದ ಕಾರಣ ಸೂಚಿತ ಕಂಡಿಕೆಯನ್ನು ಕೈ ಬಿಡಲು ಕೋರಿದೆ.

ಅಡಕ:–ಚರ ಮತ್ತು ಸ್ಥಿರ ಆಸ್ತಿಯ ಪಟ್ಟಿ ವಹಿ.
</td>
</tr>
<tr>
<td>

**92. 2017–18ನೇ ಸಾಲಿನಲ್ಲಿ ಇಂಜಿನಿಯರಿಂಗ್ ವಿಭಾಗದ ವ್ಯಾಪ್ತಿಯಲ್ಲಿ ಬರುವ ವಾಣಿಜ್ಯ ಮಳಿಗೆಯ ಬಾಡಿಗೆಯ ಬೇಡಿಕೆ ವಸೂಲಾತಿ ಹಾಗೂ ಬಾಕಿ ಬರಬೇಕಾದ ಬಾಡಿಗೆಯ ವಿವರಗಳು :– (ಇಂಜಿನಿಯರಿಂಗ್ ವಿಭಾಗ)**

ವಿಶ್ವವಿದ್ಯಾನಿಲಯದ ಅಧೀನದಲ್ಲಿರುವ ವಾಣಿಜ್ಯ ಮಳಿಗೆಗಳನ್ನು ಬಾಡಿಗೆಗೆ ನೀಡಲಾಗಿದ್ದು ಹಾಜರುಪಡಿಸಿದ ರಶೀದಿ ಪುಸ್ತಕಗಳು ಬೇಡಿಕೆ ವಸೂಲಾತಿ ಹಾಗೂ ಬಾಕಿ ವಹಿಯನ್ನು ಪರಿಶೀಲಿಸಲಾಗಿ ಒಟ್ಟು 30 ಮಳಿಗೆಗಳಿಂದ (19 ವಾಣಿಜ್ಯ ಮಳಿಗೆ ಸಂಕೀರ್ಣಗಳು 04 ಕ್ಯಾಂಡೀನ್‌ಗಳು ಹಾಗೂ 07 ಎಸ್ ಟಿ ಡಿ ಬೂತ್‌ಗಳಿಂದ) 2017–18ನೇ ಸಾಲಿಗೆ ಬೇಡಿಕೆ ರೂ.13,40,031/– ಹಾಗೂ ಹಿಂದಿನ ವರ್ಷದ ಬಾಕಿ ರೂ.4,15,649/– ಸೇರಿದಂತೆ ಒಟ್ಟು ಮೊತ್ತ ರೂ.17,55,681/–ಗಳು ವಸೂಲಾಗಬೇಕಾಗಿದ್ದು 2017–18ನೇ ಸಾಲಿನಲ್ಲಿ ರೂ.10,74,382/–ಗಳು ವಸೂಲಾತಿಯಗಿದ್ದು ದಿನಾಂಕ:31.03.2018ರ ಅಂತ್ಯಕ್ಕೆ ರೂ.6,81,298/–ಗಳು ಬಾಕಿಯುಳಿದಿರುತ್ತದೆ.

ವಾಣಿಜ್ಯ ಮಳಿಗೆಗಳ ಬಾಡಿಗೆಗೆ ಸಂಬಂಧಿಸಿದಂತೆ ಅನುಬಂಧ–45ರ ಕ್ರಮಸಂಖ್ಯೆ(11) (15) (17) (18) (19) ಹಾಗೂ ಕ್ಯಾಂಟಿನ್‌ಗಳಿಗೆ ಸಂಬಂಧಿಸಿದಂತೆ ಅನುಬಂಧ–46 ಕ್ರಮ ಸಮಖ್ಯೆ (1) ಹಾಗೂ (3) ಮತ್ತು ಎಸ್ ಟಿ ಡಿ ಬೂತ್‌ಗಳ ಅನುಬಂಧ–47ರ ಕ್ರಮ ಸಂಖ್ಯೆ (1) ರಿಂದ (7)ರವರೆಗೆ ಒಟ್ಟು ಮೊತ್ತ ರೂ.2,69,426/–ಗಳನ್ನು ಮುಂದಿನ ಸಾಲುಗಳಲ್ಲಿ ವಿಳಂಬವಾಗಿ ಸ್ವೀಕರಿಸಿರುವುದರಿಂದ ವಿಶ್ವವಿದ್ಯಾನಿಲಯಕ್ಕೆ ಆರ್ಥಿಕ ನಷ್ಟವುಂಟಾಗಿರುತ್ತದೆ ಬಾಡಿಗೆ ಮೊತ್ತವನ್ನು ಆಯಾ ಮಾಹೆಯ ನಂತರ ಪಾವತಿಸದಿದ್ದಲ್ಲಿ ವಿಳಂಬದ ಅವಧಿಗೆ ಬಡ್ಡಿ ವಿಧಿಸಿ ವಸೂಲಿಸಲು ಸಹ ಕ್ರಮವಹಿಸುವುದು ಹಾಗೂ ಅನುಬಂಧ–48ರ ಕ್ರಮ ಸಂಖ್ಯೆ (1) ರಿಂದ (9)ರ ಬಾಡಿಗೆದಾರರಿಂದ
</td>
<td>

ವಿಶ್ವವಿದ್ಯಾನಿಲಯದ ವ್ಯಾಪ್ತಿಯ ವಾಣಿಜ್ಯ ಮಳಿಗೆ/ಸಂಕೀರ್ಣಗಳು ಹಾಗೂ 04 ಕ್ಯಾಂಟೀನ್‌ಗಳು ಮತ್ತು ಎಸ್.ಟಿ.ಡಿ. ಬೂತ್‌ಗಳಿಂದ ಬಾಕಿ ಉಳಿದಿರುವ ಲೈಸೆನ್ಸ್ ಶುಲ್ಕದ ಮೊತ್ತ ರೂ.4,11,872/–ಗಳಲ್ಲಿ ಪ್ರಸ್ತುತ ರೂ.126,812/–ಗಳನ್ನು ಸಂಬಂಧಪಟ್ಟವರಿಂದ ವಸೂಲಿಸಿ ಸದರಿ ಮೊತ್ತವನ್ನು ಬ್ಯಾಂಕಿಗೆ ಜಮೆ ಮಾಡಲಾಗಿರುತ್ತದೆ. ಈ ಸಂಬಂಧ ವಸೂಲಾತಿಯಾದ ಮೊತ್ತದ ರಶೀದಿ ಹಾಗೂ ಬ್ಯಾಂಕಿಗೆ ಜಮೆ ಮಾಡಲಾದ ವಿವರಗಳನ್ನು ಇದರೊಂದಿಗೆ ಲಗತ್ತಿಸಲಾಗಿದೆ.

ಮುಂದುವರೆದು ಉಳಿಕೆ ಮೊತ್ತ ರೂ.2,85,060/–ಗಳನ್ನು ಸಂಬಂಧ ಪಟ್ಟವರಿಂದ ವಸೂಲಿಸಲು ಸೂಕ್ತ ಕ್ರಮಕೈಗೊಳ್ಳುವಂತೆ ಮಾನ್ಯ ಕುಲಸಚಿವರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ರವರಿಗೆ ಪತ್ರ ಬರೆಯಲಾಗಿದ್ದು. ಸದರಿ ಪತ್ರದ ಜೆರಾಕ್ಸ್ ಪ್ರತಿಯನ್ನು ತಮ್ಮ ಅವಗಾಹನೆಗೆ ತರಲಾಗಿದೆ.

ರೂ.1,26,812/–ಗಳ ವಸೂಲಾತಿಗೆ ರಶೀದಿ ವಿವರ ಹಾಗೂ ಬ್ಯಾಂಕಿಗೆ ಪಾವತಿಸಿದ ವಿವರಗಳು ಹಾಗೂ ಬ್ಯಾಂಕ್ ಸ್ವೀಕೃತಿಗಳನ್ನು ಮಾಹಿತಿಗಾಗಿ ಇದರೊಂದಿಗೆ ಲಗತ್ತಿಸಿದೆ.
</td>
</tr>
</table>

ವಸೂಲಾಗದೆ ಬಾಕಿಯುಳಿದಿರುವ ಲೈಸನ್ಸ್ ಶುಲ್ಕಗಳ ಒಟ್ಟು ಮೊತ್ತ ರೂ.4,11,872/–ಗಳನ್ನು ಬಾಕಿ ಇರುವ ದಿನಾಂಕದಿಂದ ಬಡ್ಡಿ ಸಹಿತ ವಸೂಲಿಸಲು ಆಡಳಿತಾತ್ಮಕ ಕ್ರಮವಹಿಸಿ ವಿಶ್ವವಿದ್ಯಾನಿಲಯದ ಸಂಬಂಧಪಟ್ಟ ಖಾತೆಗಳಿಗೆ ಜಮಾ ಮಾಡಲು ಹಾಗೂ ಬಾಡಿಗೆಯನ್ನು ಕಾಲಕಾಲಕ್ಕೆ ವಿಳಂಬವಿಲ್ಲದೆ ವಸೂಲಿ ಮಾಡಲು ಸೂಚಿಸಿದೆ.

ಈ ನಿಟ್ಟಿನಲ್ಲಿ ಸದರಿ ಕಂಡಿಕೆಯ ಆಕ್ಷೇಪಣೆಯನ್ನು ಕೈ ಬಿಡುವಂತೆ ನಿವೇದಿಸಲಾಗಿದೆ.

**93. ವಿಶ್ವವಿದ್ಯಾನಿಲಯದ ಆವರಣದಲ್ಲಿರುವ ಎಸ್,ಟಿ,ಡಿ ಬೂತ್‌ಗಳ ಲೈಸನ್ಸ್ ಶುಲ್ಕಗಳನ್ನು ನವೀಕರಣ ಮಾಡದೇ ಹಿಂದಿನ ದರದಲ್ಲಿಯೇ ಸ್ವೀಕರಿಸುತ್ತಿರುವುದು :– (ಇಂಜಿನಿಯರಿಂಗ್ ವಿಭಾಗ)**

2017–18ನೇ ಸಾಲಿನ ಲೆಕ್ಕಪತ್ರಗಳನ್ನು ಹಾಗೂ ರಶೀದಿ ಪುಸ್ತಕಗಳನ್ನು ಪರಿಶೀಸಲಾಗಿ ವಿಶ್ವವಿದ್ಯಾನಿಲಯದ ವಿವಿಧ ಆವರಣದಲ್ಲಿರುವ ಹಾಗೂ ಇಂಜಿನಿಯರಿಂಗ್ ವಿಭಾಗದ ವ್ಯಾಪ್ತಿಗೆ ಒಳಪಡುವ ಎಸ್,ಟಿ,ಡಿ ಬೂತ್‌ಗಳ ಮಾಹೆಯಾನ ಲೈಸನ್ಸ್ ಶುಲ್ಕವನ್ನು ನವೀಕರಣಗೊಳಿಸದೇ ಹಿಂದಿನದರದಲ್ಲಿಯೇ ಸ್ವೀಕರಿಸುತ್ತಿರುವುದು ಕಂಡುಬಂದಿರುತ್ತದೆ.

ಲೈಸನ್ಸ್ ಶುಲ್ಕವನ್ನು ನವೀಕರಣಗೊಳಿಸದೇ ಮಾಹೆಯಾನ ರೂ.400/–ರಂತೆ ಲೈಸನ್ಸ್ ಶುಲ್ಕವನ್ನು ಸ್ವೀಕರಿಸುತ್ತಿರುವುದು ಕಂಡುಬಂದಿರುತ್ತದೆ ಆದರೆ ವಿಶ್ವವಿದ್ಯಾನಿಲಯದ ಆದೇಶ ಸಂಖ್ಯೆ:ಜಿ,ಎಲ್7/ಎಸ್,ಟಿ,ಡಿ/97–98 ದಿನಾಂಕ:18.02.2003 ಹಾಗೂ ವಿಶ್ವವಿದ್ಯಾನಿಲಯ ಆದೇಶ ಸಂಖ್ಯೆ:ಜಿ,ಎಲ್/ಎಸ್,ಟಿ,ಡಿ/97–98 ದಿನಾಂಕ:08.07.2003ರ ರೀತ್ಯಾ ಲೈಸನ್ಸ್ ಶುಲ್ಕವನ್ನು ಪ್ರತಿ ಎರಡು ವರ್ಷಕ್ಕೊಮ್ಮೆ ನವೀಕರಣ ವಿವರಗಳನ್ನು ಕೆಳಕಂಡ ಕೋಷ್ಠಕದಲ್ಲಿ ವಿವರಿಸಲಾಗಿದೆ.

| ಕ್ರ ಸಂ | ಎಸ್,ಟಿ,ಡಿ ಬೂತ್‌ದಾರರ ಮಾಲೀಕರ ಹೆಸರು | ನಿಗದಿಪಡಿಸಿದ ಮಾಹೆಯನ್ನು ಶುಲ್ಕ | ವಿಶ್ವವಿದ್ಯಾನಿಲಯ ಆದೇಶ |
|---|---|---|---|
| 1 | ಶ್ರೀ ಚಂದ್ರಶೇಖರಯ್ಯ | 400 | ಜಿ,ಎಲ್7/ಎಸ್,ಟಿ,ಡಿ/97–98 ದಿನಾಂಕ:18.02.2003 |
| 2 | ಶ್ರೀ ವಿನೋದ್‌ಕುಮಾರ್ | 400 | |
| 3 | ಶ್ರೀ ಮತಿ ಎಂ ರುಕ್ಮಿಣಿ | 400 | |
| 4 | ಶ್ರೀ ಪ್ರಶಾಂತ್ ಕುಮಾರ್ | 400 | |
| 5 | ಶ್ರೀ ಎಂ ಎಸ್ ಶಂಕರ್ | 400 | ಜಿ,ಎಲ್4/ಎಸ್,ಟಿ,ಡಿ/97–98 ದಿನಾಂಕ:08.07.2003 |
| 6 | ಶ್ರೀ ಮಹದೇವಸ್ವಾಮಿ | 400 | |

ಲೈಸನ್ಸ್ ಶುಲ್ಕವನ್ನು ನವೀಕರಣಗೊಳಿಸದಿರುವುದಕ್ಕೆ ಸೂಕ್ತ ಸ್ಪಷ್ಟೀಕರಣವನ್ನು ಲೆಕ್ಕಪರಿಶೋಧನೆಗೆ ನೀಡುವಂತೆ ಲೆಕ್ಕಪರಿಶೋಧನಾ ವಿಚಾರಣಾ ಪತ್ರ ಸಂಖ್ಯೆ:04/2019–20 ದಿನಾಂಕ:24.4.2019ರಲ್ಲಿ ನೀಡಲಾಗಿ ಲೈಸನ್ಸ್ ಶುಲ್ಕ ನವೀರಣಕ್ಕೆ ಸಂಬಂಧಿಸಿದಂತೆ ಇಂಜಿನಿಯರ್ ವಿಭಾಗದಿಂದ ಮಾನ್ಯ ಕುಲಸಚಿವರಿಗೆ ಎಸಿ–/2739/0405 ದಿನಾಂಕ:27.01.2005 ಹಾಗೂ ಯು,ಇ,ಡಿ/ಎಸಿ3/1955–56/10–11 ದಿನಾಂಕ:13.09.2010 ರಲ್ಲಿ ಬರೆದಿರುವ ಪತ್ರಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸಿರುವುದು ಸರಿಯಷ್ಟೇ ಪ್ರತಿ ಎರಡು ವರ್ಷಕ್ಕೊಮ್ಮೆ ಲೈಸನ್ಸ್ ಶುಲ್ಕ ನವೀಕರಣ

ವಿಶ್ವವಿದ್ಯಾನಿಲಯದ ಆವರಣದಲ್ಲಿರುವ ಎಸ್.ಟಿ.ಡಿ. ಬೂತ್‌ಗಳನ್ನು 1)ಶ್ರೀ ಚಂದ್ರಶೇಖರಯ್ಯ 2) ಶ್ರೀ ವಿನೋದ್‌ಕುಮಾರ್ 3) ಶ್ರೀಮತಿ ಎಂ. ರುಕ್ಮಿಣಿ 4) ಶ್ರೀ ಪ್ರಶಾಂತ್‌ಕುಮಾರ್ 5) ಶ್ರೀ ಎಂ. ಎಸ್. ಶಂಕರ್ 6) ಶ್ರೀ ಮಹದೇವಸ್ವಾಮಿ ಎಂಬುವರಿಗೆ ಮಾಸಿಕ ರೂ.400/–ಗಳಂತೆ ನಿಗದಿ ಪಡಿಸಿದ್ದು. ಅದರಂತೆ ಸದರಿ ಎಸ್.ಟಿ.ಡಿ. ಬೂತ್ ಪಡೆದ ಮಾಲಿಕರು ವಿಶ್ವವಿದ್ಯಾನಿಲಯದ ಖಾತೆಗೆ ಮಾಸಿಕ ಹಣವನ್ನು ಸಂದಾಯ ಮಾಡಿರುತ್ತಾರೆ. ಮುಂದುವರಿದು ಕಂಡಿಕೆ ಸಂಖ್ಯೆ 94 ರಲ್ಲಿ ನೀಡಿರುವ ನಿರ್ದೇಶನ ಮತ್ತು ಸೂಚನೆಯನ್ವಯ ಎಸ್.ಟಿ.ಡಿ ಬೂತ್‌ಗಳ ನವೀಕರಣ ಹಾಗೂ ಶುಲ್ಕವನ್ನು ಹೆಚ್ಚಿಸುವ ಸಂಬಂಧ, ಸಂಬಂಧಪಟ್ಟ ಮೇಲಾಧಿಕಾರಿಗಳಿಗೆ ಈ ಕಛೇರಿಯ ಪತ್ರ ಹಾಗೂ ಜ್ಞಾಪನಾ ಪತ್ರಗಳಲ್ಲಿ ಮನವಿ ಮಾಡಲಾಗಿದ್ದು. ಈ ಮನವಿ ಪತ್ರದ ಅನುಸಾರ ಕುಲಸಚಿವರಿಂದ ಆದೇಶ ಬಂದಿದ್ದು ಮೇಲ್ಕಂಡ ಎಲ್ಲಾ ಎಸ್.ಟಿ.ಡಿ ಬೂತ್‌ಗಳನ್ನು ತೆರವುಗೊಳಿಸಲು ಆದೇಶಿಸಲಾಗಿರುವುದರಿಂದ ಹಾಗೂ ಈ ಸಂಬಂಧ ಸದರಿ ಆದೇಶದ ಪತ್ರದ ಜೆರಾಕ್ಸ್ ಪ್ರತಿಯನ್ನು ಲಗತ್ತಿಸಲಾಗಿದೆ. ಹಾಗೂ ಇದರ ಬಗ್ಗೆ ಸೂಕ್ತ ಕ್ರಮವಹಿಸಲಾಗುವುದೆಂಬ ಅಂಶವನ್ನು ಅವಗಾಹನೆಗೆ ತರಲಾಗಿದೆ.

ಹಾಗೂ ಈ ಸಂಬಂಧ ಉನ್ನತಾಧಿಕಾರಿಗಳಿಗೆ ಬರೆಯಲಾದ ಪತ್ರದ ನಕಲನ್ನು ಮಾಹಿತಿಗಾಗಿ ವರದಿಸುತ್ತ ಸದರಿ ಆಕ್ಷೇಪಣೆ ಕಂಡಿಕೆಯನ್ನು ಕೈಬಿಡುವಂತೆ ನಿವೇದಿಸಲಾಗಿದೆ.

| | |
|---|---|
| ಮಾಡದಿರುವುದರಿಂದ ವಿಶ್ವವಿದ್ಯಾನಿಲಯದ ಆದಾಯಕ್ಕೆ ನಷ್ಟವುಂಟಾಗಿರುತ್ತದೆ ಆದುದರಿಂದ ಈ ಸಂಬಂಧ ಸೂಕ್ತ ಆಡಳಿತಾತ್ಮಕ ಕ್ರಮ ಕೈಗೊಳ್ಳುವಂತೆ ಮತ್ತು ವಿಶ್ವವಿದ್ಯಾನಿಲಯದ ವತಿಯಿಂದ ನವೀಕರಣ ಮಾಡಿ ದರವನ್ನು ನಗದಿಪಡಿಸಿಕೊಂಡು ವ್ಯತ್ಯಾಸದ ಮೊತ್ತವನ್ನು ವಸೂಲಿಸಲು ಅಗತ್ಯ ಕ್ರಮ ಕೈಗೊಳ್ಳಲು ಸೂಚಿಸಿದೆ. | |
| **94. ತಾತ್ಕಾಲಿಕ ಸ್ವಚ್ಛತಾ ಸಿಬ್ಬಂದಿಗಳು/ ಸಫಾಯಿ ಕರ್ಮಚಾರಿಗಳ ವೇತನದಲ್ಲಿ ಕಟಾಯಿಸಲಾಗಿರುವ ESI & EPF ಮೊತ್ತವನ್ನು ಸಂಬಂಧಪಟ್ಟ ಲೆಕ್ಕ ಶೀರ್ಷಿಕೆಗೆ ಜಮೆ ಮಾಡದಿರುವುದು:-(ಇಂಜಿನಿಯರಿಂಗ್ ವಿಭಾಗ)**<br><br>ಮೈಸೂರು ವಿಶ್ವವಿದ್ಯಾನಿಲಯ ಇಂಜಿನಿಯರಿಂಗ್ ವಿಭಾಗದ 2017-18ನೇ ಸಾಲಿನ ಲೆಕ್ಕಪರಿಶೋಧನೆಯಲ್ಲಿ ಹಾಜರುಪಡಿಸಿದ ತಾತ್ಕಾಲಿಕ ಸಫಾಯಿ ಕರ್ಮಚಾರಿಗಳ/ಸ್ವಚ್ಛತಾ ಸಿಬ್ಬಂದಿಗಳ ವೇತನ ಪಾವತಿ ವೋಚರ್‌ಗಳನ್ನು ಪರಿಶೀಲಿಸಲಾಗಿ ಕರ್ನಾಟಕ ಸರ್ಕಾರದ ಕಾರ್ಮಿಕ ಇಲಾಖೆಯ ಅಧಿಸೂಚನೆ ಸಂಖ್ಯೆ:ಕಾಇ/82ಎಲ್‌ಡಬ್ಲ್ಯೂಎ/2015/ಬೆಂಗಳೂರು ದಿನಾಂಕ:04.08.2016ರನ್ವಯ ಹಾಗೂ ವಿಶ್ವವಿದ್ಯಾನಿಲಯ ಆದೇಶ ಸಂಖ್ಯೆ:ಇಟಿ1/130/2010-11 ದಿನಾಂಕ:29.08.2017 ರನ್ವಯ ಸಿಬ್ಬಂದಿಗಳ ವೇತನದಲ್ಲಿ ಸೆಪ್ಟೆಂಬರ್ 2017 ರ ಮಾಹೆಯಿಂದ ಒಟ್ಟು ESI ಮೊತ್ತ ರೂ.7,68,334/- ಮತ್ತು EPF ಮೊತ್ತ ರೂ.29,73,199/-ಗಳು ಒಟ್ಟು ರೂ,37,41,53/-ಗಳನ್ನು ಕಡಿತಗೊಳಿಸಲಾಗಿರುವುದನ್ನು ಗಮನಿಸಲಾಗಿದೆ ಈ ಸಂಬಂಧ ಕಡಿತಗೊಳಿಸಲಾದ ESI ಮತ್ತು EPF ಮೊತ್ತಗಳನ್ನು ಸಂಬಂಧಪಟ್ಟ ಲೆಕ್ಕಶೀರ್ಷಿಕೆಗಳಿಗೆ ಜಮೆ ಮಾಡಬೇಕಾಗಿದ್ದು ಜಮೆ ಮಾಡಲಾದ ವಿವರಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸುವಂತೆ ವಿಚಾರಣಾ ಪತ್ರ ಸಂಖ್ಯೆ:02/2019-20/ದಿನಾಂಕ;22.04.2019ರಲ್ಲಿ ಕೋರಲಾಗಿ ಯಾವುದೇ ರೀತಿಯ ದಾಖಲಾತಿಗಳನ್ನು ನೀಡಿರುವುದಿಲ್ಲ ಈ ಸಂಬಂಧ ಕಡಿತಗೊಳಸಲಾಗಿರುವ ESI ಮತ್ತು EPF ಮೊತ್ತಗಳನ್ನು ಸಂಬಂಧಪಟ್ಟ ಲೆಕ್ಕಶೀರ್ಷಿಕೆಗಳಿಗೆ ಜಮೆ ಮಾಡಲು ಶೀಘ್ರ ಕ್ರಮಕೈಗೊಳ್ಳುವಂತೆ ಸೂಚಿಸುತ್ತಾ ರೂ.37,41,533/-ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ. | ವಿಶ್ವವಿದ್ಯಾನಿಲಯದ ವ್ಯಾಪ್ತಿಯ ವಿವಿಧ ವಿಭಾಗ/ಕಛೇರಿಗಳಲ್ಲಿ ಒಳಚರಂಡಿ, ಶೌಚಾಲಯ, ವಿದ್ಯಾರ್ಥಿನಿಲಯಗಳಲ್ಲಿ ಸ್ನಾನದಗೃಹ ಮತ್ತು ಶೌಚಾಲಯಗಳನ್ನು ಸ್ವಚ್ಛಗೊಳಿಸುವ ಕಾರ್ಯಕ್ಕೆ ತಾತ್ಕಾಲಿಕ ಸಫಾಯಿ ಕರ್ಮಚಾರಿಗಳು/ತಾತ್ಕಾಲಿಕ ಸ್ವಚ್ಛತಾ ಸಿಬ್ಬಂದಿಗಳ ಅವಶ್ಯಕತೆಯಿದ್ದು, ಆ ಮೇರೆಗೆ ಸದರಿ ತಾತ್ಕಾಲಿಕ ಸ್ವಚ್ಛತಾ ಸಿಬ್ಬಂದಿಗಳನ್ನು ವಿಶ್ವವಿದ್ಯಾನಿಲಯದ ವತಿಯಿಂದ ನೇಮಕಗೊಂಡು ಪ್ರಸ್ತುತ 212 ಮಂದಿ ವಿವಿಧ ವಿಭಾಗ/ಕಛೇರಿಗಳಲ್ಲಿ ಕಾರ್ಯ ನಿರ್ವಹಿಸುತ್ತಿರುತ್ತಾರೆ. ಈ ಸಿಬ್ಬಂದಿಗಳಿಗೆ ಇ.ಎಸ್.ಐ ಮತ್ತು ಇ.ಪಿ.ಎಫ್ ಸೌಲಭ್ಯವು ಅನ್ವಯವಾಗುವಂತೆ ವಿಶ್ವವಿದ್ಯಾನಿಲಯದ ಮುಂದುವರಿದ ಆದೇಶ ಸಂಖ್ಯೆ:ಇಟಿ1/130/2010-11, ದಿನಾಂಕ 29.08.2017ರ ಆದೇಶದಲ್ಲಿ ಆದೇಶಿಸಲಾಗಿದ್ದು. ತಾತ್ಕಾಲಿಕ ಸ್ವಚ್ಛತಾ ಸಿಬ್ಬಂದಿಗಳು/ಸಫಾಯಿ ಕಾರ್ಮಚಾರಿಗಳ ಮಾಸಿಕ ವೇತನದಲ್ಲಿ ಇ.ಎಸ್.ಐ ಮತ್ತು ಇ.ಪಿ.ಎಫ್ ಮೊತ್ತ ಕ್ರಮವಾಗಿ ರೂ.7,68,334 ಮತ್ತು ರೂ.2,97,3199/- ಒಟ್ಟು ಮೊತ್ತ ರೂ.37,41,533/-ಗಳನ್ನು ಕಡಿತಗೊಳಿಸಿ ಸಂಬಂಧಪಟ್ಟ ಖಾತೆಗೆ ಜಮೆ ಮಾಡಲಾಗಿದೆ. ಇವುಗಳ ವಿವರಗಳನ್ನು ಇದರೊಂದಿಗೆ ಲಗತ್ತಿಸುತ್ತ ಸದರಿ ಆಕ್ಷೇಪಿತ ಕಂಡಿಕೆಯನ್ನು ಕೈಬಿಡುವಂತೆ ನಿವೇದಿಸಲಾಗಿದೆ. |
| **95. ಗ್ರಂಥಾಲಯ ವಿಭಾಗಕ್ಕೆ ಯೋಜನಾ ಸಕಾಯಕರು (Porject Assistants) ಗಳನ್ನು ನಿಯಮಬಾಹಿರವಾಗಿ ನೇಮಕ ಮಾಡಿಕೊಂಡು ವೇತನ ಪಾವತಿಸಿರುವುದು:- (ಸ್ನಾತಕೋತ್ತರ ಗ್ರಂಥಾಲಯ ಮಾನಸಗಂಗೋತ್ರಿ)**<br><br>2017-18ನೇ ಸಾಲಿನ ಸ್ನಾತಕೋತ್ತರ ಗ್ರಂಥಾಲಯ ವಿಭಾಗದ ಲೆಕ್ಕತಪಾಸಣೆಯಲ್ಲಿ ಯೋಜನಾ ಸಹಾಯಕರುಗಳನ್ನು ಹಿಂದಿನ ಸಾಲುಗಳಲ್ಲಿ ನೇಮಕ ಮಾಡಿಕೊಂಡು ವೇತನ ಪಾವತಿಸಿರುವುದನ್ನು ಪರಿಶೀಲಿಸಲಾಗಿದ್ದು ಗ್ರಂಥಾಲಯಕ್ಕೆ ಯೋಜನಾ ಸಹಾಯಕರನ್ನು ನೇಮಕಾತಿ ಮಾಡಿಕೊಳ್ಳುವ ಮೊದಲು ವೃಂದ ಮತ್ತು ನೇಮಕಾತಿ ನಿಯಮಗಳನ್ವಯ ಸರ್ಕಾರದಿಂದ ಹುದ್ದೆ ಸೃಜಿಸಿಕೊಂಡು ನೇಮಕಾತಿ ಪ್ರಕ್ರಿಯೆ ಕೈಗೊಳ್ಳಬೇಕಾಗಿರುತ್ತದೆ ಆದರೆ ಗ್ರಂಥಾಲಯ ಯೋಜನಾ ಸಹಾಯಕರಗಳ ಹುದ್ದೆಗಳು ಮಂಜೂರಾಗದಿದ್ದರೂ ತಾತ್ಕಾಲಿಕವಾಗಿ ನೇಮಕಾತಿ ಮಾಡಿಕೊಂಡು | ಸನ್ಮಾನ್ಯ ಕುಲಪತಿಗಳ ಅನುಮೋದನೆ ಮೇರೆಗೆ ಕುಲಸಚಿವರು ನೀಡಿರುವ ವಿಶ್ವವಿದ್ಯಾನಿಲಯದ ಆದೇಶದ ಅನ್ವಯ ಸದರಿ ಗ್ರಂಥಾಲಯ ಯೋಜನಾ ಸಹಾಯಕರುಗಳನ್ನು ನೇಮಕ ಮಾಡಿಕೊಂಡು **"ತಾತ್ಕಾಲಿಕ ಅಧ್ಯಾಪಕೇತರ ನೌಕರರ ವೇತನ-229"** ಶೀರ್ಷಿಕೆಯಿಂದ ವೇತನವನ್ನು ಪಾವತಿಸಲಾಗುತ್ತಿದೆ.<br><br>ಇವರಗಳ ನೇಮಕಾತಿಗೆ ಸಂಬಂಧಪಟ್ಟಂತೆ, ಈ ಹಿಂದೆ ಮೈಸೂರು ವಿಶ್ವವಿದ್ಯಾನಿಲಯ |

ವೇತನ ಪಾವತಿಸಿರುವುದು ವಿಶ್ವವಿದ್ಯಾನಿಲಯಕ್ಕೆ ಆರ್ಥಿಕ ನಷ್ಟ ಉಂಟುಮಾಡಿದಂತಾಗುತ್ತದೆ ಹಾಗೂ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000ರ ನಿಯಮ 56ರನ್ವಯ ಮಂಜೂರಾತಿ ಹುದ್ದೆಗಳಿಗೆ ಎದುರಾಗಿ 1 ವರ್ಷದ ಅವಧಿಗೆ ತಾತ್ಕಾಲಿಕವಾಗಿ ನಿಯಮಾನುಸಾರ ನೇಮಕಾತಿ ಮಾಡಿಕೊಳ್ಳಲು ಅವಕಾಶವಿರುತ್ತದೆ ಆದರೆ ಸರ್ಕಾರದಿಂದ ಹುದ್ದೆಗಳ ಸೃಜನೆಯಾಗದೆ ತಾತ್ಕಾಲಿಕವಾಗಿ ಯೋಜನಾ ಸಹಾಯಕರುಗಳನ್ನು ನೇಮಕಾತಿ ಮಾಡಿಕೊಂಡಿರುವುದು ನಿಯಮ ಬಾಹಿರವಾಗಿರುವುದರಿಂದ ವೇತನ ಪಾವತಿಸಿರುವ **ಮೊತ್ತ ರೂ.24,77,463/-ಗಳನ್ನು** ಆಕ್ಷೇಪಣೆಗೆ ಸೂಚಿಸಿದೆ ವಿವರಗಳನ್ನು **ಅನುಬಂಧ-50** ರಲ್ಲಿ ಲಗತ್ತಿಸಿದೆ.

ಗ್ರಂಥಾಲಯದಲ್ಲಿ 8 ರಿಂದ 10 ಸಿಬ್ಬಂದಿಗಳು ಮಾತ್ರ ವೃತ್ತಿಪರ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿ ಹನ್ನೆರಡು ಮಂದಿ ಗ್ರಂಥಾಲಯ ಸಹಾಯಕರಾಗಿ ವಿವಿಧ ವಿಭಾಗಗಳಲ್ಲಿ ಕೆಲಸ ನಿರ್ವಹಿಸುತ್ತಿದ್ದು ತದನಂತರ, ಮೈಸೂರು ವಿಶ್ವವಿದ್ಯಾನಿಲಯವು ವಿಸ್ತಾರಗೊಂಡು ಹಲವು ಹೊಸ ಕೇಂದ್ರಗಳನ್ನು(ಹಾಸನ, ಮಂಡ್ಯ, ಚಾಮರಾಜನಗರ ಪಿಜಿ ಸೆಂಟರ್) ಹೊಂದಿರುತ್ತದೆ, ಹಾಗೂ ಇದರ ಜೊತೆಗೆ ಮೈಸೂರು ವಿಶ್ವವಿದ್ಯಾನಿಲಯದಲ್ಲಿಯೂ ಹಲವು ಹೊಸ ಅಧ್ಯಯನ ಕೇಂದ್ರಗಳನ್ನು (ಅಂಬೇಡ್ಕರ್ ಸಂಶೋಧನಾ ಕೇಂದ್ರ, ಕನ್ನಡ ಅಧ್ಯಯನ ಸಂಸ್ಥೆ, ರಾಧಾಕೃಷ್ಣ ಕೇಂದ್ರ, ಲಲಿತ ಕಲಾ ಕಾಲೇಜು)ತೆರೆದಿದ್ದು, ಈ ಅಧ್ಯಯನ ಕೇಂದ್ರಗಳಿಗೂ ಹಾಗೂ ಗ್ರಂಥಾಲಯಕ್ಕೂ ವೃತ್ತಿಪರ ಸಿಬ್ಬಂದಿಗಳ ಕೊರತೆ ಇದ್ದುದರಿಂದಲೂ ಹಾಗೂ ಮೈಸೂರು ವಿಶ್ವವಿದ್ಯಾನಿಲಯ ಸ್ನಾತಕೋತ್ತರ ಗ್ರಂಥಾಲಯದಲ್ಲಿಯೂ ಕೂಡ ಹೊಸದಾಗಿ ಹಲವು CIRC, DIRC, LRCVC, READING HALL ಎಂಬ ವಿಭಾಗಗಳು ಸೇರ್ಪಡೆಗೊಂಡಿರುವುದರಿಂದ, ಈ ಎಲ್ಲಾ ವಿಭಾಗ ಮತ್ತು ಕೇಂದ್ರಗಳಲ್ಲಿ ವೃತ್ತಿಪರ ಸಿಬ್ಬಂದಿಗಳ ಕೊರತೆ ಉಂಟಾಗಿದ್ದುದರಿಂದ, ಗ್ರಂಥಾಲಯ ಯೋಜನ ಸಹಾಯಕರುಗಳನ್ನು ನೇಮಕ ಮಾಡಿಕೊಂಡು ಎಲ್ಲಾ ಗ್ರಂಥಾಲಯಗಳಿಗೂ ಮತ್ತು ಸ್ನಾತಕೋತ್ತರ ಗ್ರಂಥಾಲಯಕ್ಕೂ ಕೆಲಸಕ್ಕೆ ನಿಯೋಜಿಸಲಾಗಿದೆ.

ಮುಂದುವರೆದು, ಸರ್ಕಾರವು ಸುಮಾರು 40 ವರ್ಷಗಳಿಂದ ವಿಶ್ವವಿದ್ಯಾನಿಲಯಕ್ಕೆ ಹುದ್ದೆಗಳನ್ನು ಭರ್ತಿ ಮಾಡಲು ಅನುಮತಿ ನೀಡದ ಕಾರಣ ನಿಯಮಾನುಸಾರ ಹುದ್ದೆಗಳು ಭರ್ತಿಯಾಗಿರುವುದಿಲ್ಲ.

ಮೈಸೂರು ವಿಶ್ವವಿದ್ಯಾನಿಲಯ ಗ್ರಂಥಾಲಯದಲ್ಲಿ 1977 ಮತ್ತು 1980ರಲ್ಲಿ ಸಹಾಯಕ ಗ್ರಂಥಪಾಲಕರನ್ನು ನೇಮಕ ಮಾಡಲಾಗಿರುತ್ತದೆ. 1980ರಲ್ಲಿ ಮೈಸೂರು ವಿಶ್ವವಿದ್ಯಾನಿಲಯ ಪ್ರಾಚೀನ ವಿದ್ಯಾಸಂಶೋಧನದಲ್ಲಿ ಮಾತ್ರ ಒಬ್ಬ ಸಹಾಯಕ ಗ್ರಂಥಪಾಲಕರನ್ನು ನೇಮಕ ಮಾಡಲಾಗಿರುತ್ತದೆ. ಸತತವಾಗಿ 45 ವರ್ಷಗಳಿಂದಲೂ ಮೈಸೂರು ವಿಶ್ವವಿದ್ಯಾನಿಲಯ ಸ್ನಾತಕೋತ್ತರ ಗ್ರಂಥಾಲಯಕ್ಕೆ ವೃತ್ತಿಪರ ಸಿಬ್ಬಂದಿಯನ್ನು ನೇಮಕ ಮಾಡಿರುವುದಿಲ್ಲ. **Library Review Committee**ಯಲ್ಲಿ ಸನ್ಮಾನ್ಯ ಕುಲಪತಿಯವರ ಅಧ್ಯಕ್ಷತೆಯಲ್ಲಿ ಗ್ರಂಥಾಲಯ ಯೋಜನಾ ಸಹಾಯಕರುಗಳನ್ನು ಒಂದು ವರ್ಷದ ಅವಧಿಗೆ ನೇಮಕ ಮಾಡಿ ಮೈಸೂರು ವಿಶ್ವವಿದ್ಯಾನಿಲಯದ ಗ್ರಂಥಾಲಯಕ್ಕೆ ಒಳಪಡುವ ಸ್ನಾತಕೋತ್ತರ ಅಧ್ಯಯನ ವಿಭಾಗಗಳು, ಸಂಶೋಧನಾ ಕೇಂದ್ರಗಳು, ರಾಧಾಕೃಷ್ಣ ಕೇಂದ್ರ, ಪಿ.ಜಿ. ಕೇಂದ್ರಗಳಿಗೆ ವೃತ್ತಿಪರ ಕಾರ್ಯವನ್ನು ನಿರ್ವಹಿಸಲು ನೇಮಕಮಾಡಿ, ಪ್ರತಿ ವರ್ಷ ಒಂದು ವರ್ಷದ ಅವಧಿಗೆಂದು ಪುನರಾವರ್ತನೆ ಮಾಡಿ ಕೆಲಸಕ್ಕೆ ತೆಗೆದುಕೊಳ್ಳಲಾಗಿತ್ತಿದೆ.

ದಿನಪತ್ರಿಕೆಯಲ್ಲಿ ಜಾಹಿರಾತು ನೀಡಿ, ಕುಲಸಚಿವರು ಹಾಗೂ ಗ್ರಂಥಾಲಯ ವಿಷಯ

| | |
|---|---|
| | ತಜ್ಞರನ್ನು ಒಳಗೊಂಡ ಸಮಿತಿಯು ಸಂದರ್ಶನಕ್ಕೆ ಬಂದ ಅಭ್ಯರ್ಥಿಗಳಿಗೆ ಲಿಖಿತ ಪರೀಕ್ಷೆ ಹಾಗೂ ಪ್ರಾಯೋಗಿಕ ಪರೀಕ್ಷೆಯನ್ನು ಮಾಡಿ, ಸಂದರ್ಶನ ಮೂಲಕ ಅಂಕಗಳನ್ನು ನೀಡಿ ಲೈಬ್ರರಿ ಪ್ರಾಜೆಕ್ಟ್ ಅಸಿಸ್ಟೆಂಟ್‌ಗಳನ್ನು ಆಯ್ಕೆ ಮಾಡಲಾಗಿರುತ್ತದೆ. ದಿನಪತ್ರಿಕೆಯ ಜಾಹಿರಾತು ನಕಲು ಪ್ರತಿ, ಅಭ್ಯರ್ಥಿಗಳಿಗೆ ಲಿಖಿತ ಪರೀಕ್ಷೆ ಮತ್ತು ಪ್ರಾಯೋಗಿಕ ಪರೀಕ್ಷೆಯನ್ನು ಮಾಡಿ ಸಂದರ್ಶನದ ಮೂಲಕ ಅಂಕಗಳನ್ನು ನೀಡಿ ಆಯ್ಕೆ ಮಾಡಿರುವ ಲೈಬ್ರರಿ ಪ್ರಾಜೆಕ್ಟ್ ಅಸಿಸ್ಟೆಂಟ್‌ಗಳ ಪಟ್ಟಿಯನ್ನು ಹಾಗೂ ಇದಕ್ಕೆ ಸಂಬಂಧಿಸಿದ ದಾಖಲಾತಿಗಳನ್ನು ಲಗತ್ತಿಸಿದ್ದು ವಿಶ್ವವಿದ್ಯಾನಿಲಯ ಇವರುಗಳಿಗೆ ನೀಡಿರುವ ಆದೇಶದ ಪ್ರತಿಗಳನ್ನು ಲೆಕ್ಕಪರಿಶೋಧನೆಗೆ ಒದಗಿಸಿದ್ದು ನೇಮಕಾತಿಗೆ ಸಂಬಂಧಿಸಿದ ಕಡತಗಳು ಕುಲಸಚಿವರ ಕಛೇರಿಲಭ್ಯವಿರುವುದಾಗಿ ಹಾಗೂ ಗ್ರಂಥಾಲಯ ಯೋಜನಾ ಸಹಾಯಕರನ್ನು ಪ್ರತಿ ವರ್ಷವೂ ಒಂದು ವರ್ಷದ ಅವಧಿಗೆ ಮಾತ್ರ ನೇಮಕಾತಿ ಮಾಡಿಕೊಂಡು ಕಾರ್ಯನಿರ್ವಹಿಸುತ್ತಿರುವುದಾಗಿ ನಿವೇದಿಸುತ್ತಾ, **2017–18ನೇ ಸಾಲಿನಲ್ಲಿ ತಾತ್ಕಾಲಿಕ ಗ್ರಂಥಾಲಯ ಯೋಜನಾ ಸಹಾಯಕರುಗಳ ವೇತನದ ಆಕ್ಷೇಪಣೆ ಮೊತ್ತ ರೂ.24,77,463/–ಗಳನ್ನು ತೀರುವಳಿಗೊಳಿಸುವಂತೆ ಕೋರಿದೆ.** |
| **<u>96. ಖಾಯಂ ನೌಕರರಿಗೆ ಪರೀಕ್ಷಾ ಸಂಭಾವನೆಯನ್ನು ಪಾವತಿಮಾಡಿರುವುದು ಬಗ್ಗೆ: (ಲಲಿತ ಕಲಾ ಕಾಲೇಜು)</u>**<br><br>2017–18 ನೇ ಸಾಲಿನ ಪಾವತಿ ಓಚರ್‌ಗಳನ್ನು ಪರಿಶೀಲಿಸಲಾಗಿ ರೂ.5,745/–ಗಳ ಸಂಭಾವನೆಯನ್ನು ಪರೀಕ್ಷಾ ಕಾರ್ಯ ನಿರ್ವಹಿಸಿದ್ದಕ್ಕಾಗಿ ಲಲಿತ ಕಲಾ ಕಾಲೇಜಿನ ಖಾಯಂ ಅಧಿಕಾರಿ ಸಿಬ್ಬಂದಿಗೆ ಪಾವತಿಸಿರುವುದು ಕಂಡುಬಂದಿರುತ್ತದೆ ಆದರೆ ಕೆ,ಸಿ,ಎಸ್,ಆರ್ ನಿಯಮ 28(ಎ),(ಬಿ),(ಸಿ) ಮತ್ತು (ಇ) ರನ್ವಯ ಪರೀಕ್ಷಾ ಕರ್ತವ್ಯವು ಸದರಿ ಖಾಯಂ ಉದ್ಯೋಗಿಗಳ ದಿನನಿತ್ಯದ ಕೆಲಸದ ಒಂದು ಭಾಗವೇ ಆಗಿರುವುದರಿಂದ ಈ ಸಂಬಂಧ ಪ್ರತ್ಯೇಕವಾಗಿ ಸಂಭಾವನೆ ಪಾವತಿಸಲು ಅವಕಾಶ ವಿರುವುದಿಲ್ಲವಾದ ಕಾರಣ ಸದರಿ ಪಾವತಿಯ ನಿಯಮ ಬಹಿರವಾಗಿದ್ದು ಈ ಕುರಿತು ವಿಚಾರಣಾ ಪತ್ರ ಸಂಖ್ಯೆ:05/03.04.2019 ನೀಡಲಾಗಿದ್ದರೂ ಯಾವುದೇ ಸೂಕ್ತ ವಿವರಣೆ ನೀಡದಿರುವುದರಿಂದ ಪರೀಕ್ಷಾ ಸಂಭಾವನೆ ಪಾವತಿ **ಮೊತ್ತ ರೂ.5,745/–ಗಳನ್ನು** ಸಂಬಂಧಿಸಿದವರಿಂದ ವಸೂಲಿಸಿ ವಿಶ್ವವಿದ್ಯಾನಿಲಯ ಖಾತೆಗೆ ಜಮೆ ಮಾಡಿ ವರದಿ ಸಲ್ಲಿಸಲು ಸೂಚಿಸಿದೆ ವಿವರಗಳನ್ನು **ಅನುಬಂಧ–51ರಲ್ಲಿ** ವಿವರಿಸಲಾಗಿದೆ. | 2017–18ನೇ ಸಾಲಿನಲ್ಲಿ ಪರೀಕ್ಷಾ ಕಾರ್ಯಗಳನ್ನು ನಿರ್ವಹಿಸಿದ್ದಕ್ಕಾಗಿ ಖಾಯಂ ಅಧಿಕಾರಿ ಮತ್ತು ಸಿಬ್ಬಂದಿ ಸಂಭಾವನೆ ಪಡೆದಿರುವ ಬಗ್ಗೆ ಪ್ರಸ್ತಾಪಿಸಿ ರೂ.5,745/–ಗಳನ್ನು ಸಂಬಂಧಿಸಿದವರಿಂದ ವಸೂಲಿಸಿ ವಿಶ್ವವಿದ್ಯಾನಿಲಯದ ಖಾತೆಗೆ ಜಮಾ ಮಾಡಿ ವರದಿ ಸಲ್ಲಿಸುವ ಬಗ್ಗೆ ಕಂಡಿಕೆಯಲ್ಲಿ ಪ್ರಸ್ತಾಪಿಸಲಾಗಿದೆ.<br><br>ವಿಶ್ವವಿದ್ಯಾನಿಲಯದ ಆದೇಶದ ಸಂಖ್ಯೆ:ಜಿಎಲ್5/ಯುಎ1/318/1992–93 ದಿನಾಂಕ:27.03.2010ರಲ್ಲಿ ದಿನಾಂಕ:03.02.2010ರ ಸಿಂಡಿಕೇಟ್ ಸಭಾ ನಿರ್ಣಯದಂತೆ ಮಾನ್ಯಕುಲಪತಿಗಳ ಅನುಮೋದನೆ ಪಡೆದು ಪರೀಕ್ಷಾ ಕಾರ್ಯ ಚಟುವಟಿಕೆಗಳಲ್ಲಿ ಭಾಗವಹಿಸಿರುವ ಖಾಯಂ ಅಧಿಕಾರಿ ಮತ್ತು ಸಿಬ್ಬಂದಿ ವರ್ಗದವರಿಗೆ ಸಂಭಾವನೆ ಪಾವತಿಸಲಾಗಿರುತ್ತದೆ. ಆದ್ದರಿಂದ **ಕಂಡಿಕೆಯಲ್ಲಿ ಪ್ರಸ್ತಾಪಿಸಿರುವ ಮೊತ್ತ ರೂ.5,745/–ಗಳನ್ನು ತೀರುವಳಿಗೊಳಿಸುವಂತೆ ಕೋರಲಾಗಿದೆ.** |
| **<u>97. ಶ್ರೇಣಿ ವಹಿಯನ್ನು (Scale Register) ಹಾಜರುಪಡಿಸದಿರುವುದು :– (ಯುವರಾಜ ಕಾಲೇಜು)</u>** | |

| | |
|---|---|
| ಯುವರಾಜ ಕಾಲೇಜಿನ ವೇತನ ಬಟವಾಟೆ ವಹಿ/ನಗದು ಪುಸ್ತಕ ಹಾಗೂ ಬ್ಯಾಂಕ್ ಪಾಸ್ ಪುಸ್ತಕಗಳನ್ನು ಪರಿಶೀಲಿಸಲಾಗಿ ಯುವರಾಜ ಕಾಲೇಜಿಗೆ ಮಂಜೂರಾದ ಬೋಧಕ/ಬೋಧಕೇತರ ವಿವಿಧ ವೃಂದಗಳ ಹುದ್ದೆಗಳು ವೇತನ ಶ್ರೇಣಿಗಳು ವಿವರಗಳನ್ನೊಳಗೊಂಡ ಶ್ರೇಣಿ ವಹಿಯನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸುವಂತೆ ಲೆಕ್ಕ ತನಿಖಾ ವಿಚಾರಣಾ ಸಂಖ್ಯೆ:28/26.04.2019ರಲ್ಲಿ ದಾಖಲೆಗಳನ್ನು ಹಾಜರುಪಡಿಸುವಂತೆ ಕೋರಲಾಗಿದ್ದು ಮಾಹಿತಿಯನ್ನು ಒದಗಿಸಿರುವುದಿಲ್ಲ.<br><br>ಯುವರಾಜ ಕಾಲೇಜಿನ ಬೋಧಕ/ಬೋಧಕೇತರ ವಿವಿಧ ವೃಂದಗಳ ವೇತನ ಶ್ರೇಣಿಗಳನ್ನುಳ್ಳ ಮಂಜೂರಾದ ಹುದ್ದೆಗಳ ವಿವರಗಳು ಮಂಜೂರಾತಿ ಹುದ್ದೆಗಳಿಗೆ ಎದುರಾಗಿ ಖಾಯಂ ಬೋಧಕ/ಬೋಧಕೇತರ ಹುದ್ದೆಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ವಿವರಗಳು ವಿವಿಧ ವೃಂದ ಅಥವಾ ಶ್ರೇಣಿಗಳಲ್ಲಿ ಖಾಲಿ ಹುದ್ದೆಗಳ ವಿವರಗಳು ಖಾಲಿ ಹುದ್ದೆಗಳಿಗೆ ಎದುರಾಗಿ ಬೋಧಕ/ಬೋಧಕೇತರ ಹುದ್ದೆಗಳನ್ನು ತಾತ್ಕಾಲಿಕ ಸಂಚಿತ ವೇತನದಡಿಯಲ್ಲಿ ನೇಮಕ ಮಾಡಿಕೊಂಡಿರುವ ವಿವರಗಳನ್ನು ಲೆಕ್ಕ ತನಿಖೆಯಲ್ಲಿ ಪರಿಶೀಲಿಸಲು ಸಾಧ್ಯವಾದೆ ಇರುವುದರಿಂದ ಸಿಬ್ಬಂದಿ ವಿವರಗಳ ಬಗ್ಗೆ ಸ್ಪಷ್ಠತೆ ಇರುವುದಿಲ್ಲ ಕಛೇರಿ ಮುಖ್ಯಸ್ಥರು ಸೂಕ್ತ ಕ್ರಮವಹಿಸಿ ಶ್ರೇಣಿ ವಹಿಯನ್ನು ನಿರ್ವಹಿಸಿ ಹಾಜರುಪಡಿಸಲು ಸೂಚಿಸಿದೆ. | ಪ್ರಸ್ಥಾವಿತ ಕಂಡಿಕೆಯಲ್ಲಿನ ವಿಷಯಕ್ಕೆ ಸಂಬಂಧಿಸಿದಂತೆ, ಯುವರಾಜ ಕಾಲೇಜು, ಮೈಸೂರು ಇಲ್ಲಿಗೆ ಸರ್ಕಾರದಿಂದ ಅನುಮೋದಿತವಾಗಿರುವ ಭೋದಕ ಮತ್ತು ಭೋದಕೇತರ ಸಿಬ್ಬಂದಿಗಳ ಹುದ್ದೆಗಳ ಸಂಖ್ಯೆ, ವೇತನಶ್ರೇಣಿ, ಹಾಲೀ ಕಾರ್ಯನಿರ್ವಹಿಸುತ್ತಿರುವ ಹುದ್ದೆಗಳ ಸಂಖ್ಯೆ, ಖಾಲಿ ಇರುವ ಹುದ್ದೆಗಳ ಸಂಖ್ಯೆ ವಿವರಗಳನ್ನೊಳಗೊಂಡ ಶ್ರೇಣಿವಹಿ (Scale Register) ಯನ್ನು ಕರ್ನಾಟಕ ಆರ್ಥಿಕ ಸಂಹಿತೆ 1958 ರ ಅನುಚ್ಛೇದ–19 ರಲ್ಲಿ ಸೂಚಿಸಿರುವಂತೆ ನಿರ್ವಹಿಸಿ 2018–19 ನೇ ಸಾಲಿನ ಲೆಕ್ಕಪರಿಶೋಧನೆಗೆ ಹಾಜರುಪಡಿಸಲು ಕ್ರಮವಹಿಸಲಾಗಿದೆ.<br><br>ಆದಕಾರಣ ಪ್ರಸ್ಥಾವಿತ ಕಂಡಿಕೆ ಕೈಬಿಡಲು ಕೋರಿದೆ. |
| **98.ತಾತ್ಕಾಲಿಕ ಸಂಚಿತ ವೇತನದಡಿಯಲ್ಲಿ ನೌಕರರನ್ನು ನೇಮಕಾತಿ ಮಾಡಿಕೊಂಡಿರುವ ನೇಮಕಾತಿ ಕಡತಗಳನ್ನು ಹಾಜರುಪಡಿಸದಿರುವುದು:– (ಯುವರಾಜ ಕಾಲೇಜು)**<br><br>2017–18ನೇ ಸಾಲಿನ ಯುವರಾಜ ಕಾಲೇಜಿನ ಲೆಕ್ಕತನಿಖೆಯಲ್ಲಿ ತಾತ್ಕಾಲಿಕ ಸಂಚಿತ ವೇತನದಡಿ ನೌಕರರುಗಳನ್ನು ನೇಮಕ ಮಾಡಿಕೊಂಡು ವೇತನ ಭತ್ಯೆಗಳನ್ನು ಪಾವತಿಸಿರುವ ವೇತನ ಬಟವಾಡೆ ವಹಿಯನ್ನು ಪರಿಶೀಲಿಸಲಾಗಿ 2017–18ನೇ ಸಾಲಿಗೆ ರೂ.55,79,049/–ಗಳನ್ನು ಪಾವತಿಸಿದ್ದು ನೇಮಕಾತಿ ಪ್ರಕ್ರಿಯೆ ಕಡತಗಳನ್ನು ಲೆಕ್ಕ ತನಿಖೆಗೆ ಹಾಜರುಪಡಿಸುವಂತೆ ಲೆಕ್ಕ ತನಿಖಾ ವಿಚರಣಾ ಪತ್ರ ಸಂಖ್ಯೆ:09/2019–20 ದಿನಾಂಕ:05.04.2017 ರಲ್ಲಿ ಕೋರಲಾಗಿದ್ದರೂ ಸಹ ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ<br><br>ಕರ್ನಾಟಕ ವಿಶ್ವವಿದ್ಯಾನಿಲಯಗಳ ಕಾಯ್ದೆ 2000 ನಿಯಮ 56, 57ರನ್ವಯ ನೇಮಕಾತಿ ಪ್ರಕ್ರಿಯೆ ಕೈಗೊಂಡಿರುವ ಕಡತಗಳನ್ನು ಹಾಗೂ ಮಂಜೂರಾತಿ ಹುದ್ದೆಗಳಲ್ಲಿ ಖಾಯಂ ನೌಕರರನ್ನು ಬಿಟ್ಟು ಉಳಿದ ಖಾಲಿ ಹುದ್ದೆಗಳಿಗೆ ಎದುರಾಗಿ ನಿಯಮಾನುಸಾರ ನೇಮಕಾತಿ ಪ್ರಕ್ರಿಯೆ ಕೈಗೊಂಡಿರುವ ಕಡತಗಳನ್ನು ಲೆಕ್ಕ ತನಿಖೆಗೆ ಹಾಜರುಪಡಿಸದಿರುವುದರಿಂದ ರೂ.55,79,049/–ಗಳನ್ನು ಆಕ್ಷೇಪಣೆಗೆ ಸೂಚಿಸಲಾಗಿರುತ್ತದೆ ವಿವರಗಳನ್ನು ಅನುಬಂಧ–52ರಲ್ಲಿ ಲಗತ್ತಿಸಿದೆ. | ಪ್ರಸ್ಥಾವಿತ ಕಂಡಿಕೆಯಲ್ಲಿ ಸದರಿ ಸಂಸ್ಥೆಯಲ್ಲಿ 2017–18ನೇ ಸಾಲಿನಲ್ಲಿ ತಾತ್ಕಾಲಿಕ\ಸಂಚಿತವೇತನ ಅಡಿಯಲ್ಲಿ ಭೋದಕೇತರ ನೌಕರರಗಳನ್ನು ನೇಮಕ ಮಾಡಿಕೊಂಡಿರುವ ಕ್ರಮವನ್ನು ಸಮರ್ಥಿಸುವ ದಾಖಲೆಗಳನ್ನು ಹಾಜರುಪಡಿಸದೆ ಇರುವುದನ್ನು ಉಲ್ಲೇಖಿಸಿ ಈ ಸಂಬಂಧ ಪಾವತಿಸಿರುವ ಒಟ್ಟು ಮೊತ್ತ ರೂ.55,79,049/–ಗಳನ್ನು ಆಕ್ಷೇಪಿಸಲಾಗಿದೆ ಈ ಸಂಬಂಧದ ವಿವರಣೆ ಈ ರೀತಿ ಇದೆ.<br><br>ಉಲ್ಲೇಖಿತವಾಗಿರುವ 61 ಸಂಖ್ಯೆಯ ಭೋದಕೇತರ ಸಿಬ್ಬಂಧಿಯು ತಾತ್ಕಾಲಿಕ ನೌಕರರಾಗಿ ಕಾರ್ಯ ನಿರ್ವಹಿಸುತ್ತಿರುವ ವಿವಿಧ ಹುದ್ದೆಯ, ವಿವಿಧ ದರ್ಜೆಯ,(ಸಂಚಿತ ವೇತನ ಪಾವತಿ) ನೌಕರರು ಆಗಿದ್ದು ಈ ಹಿಂದಿನ ಸಾಲಿನಲ್ಲಿಯೇ ನೇಮಕವಾಗಿ ಮುಂದುವರಿದವರಾಗಿರುತ್ತಾರೆ, 2017–18ನೇ ಸಾಲಿನಲ್ಲಿ ಹೊಸದಾಗಿ ನೇಮಕಾತಿಯಾಗಿರುವುದಿಲ್ಲ<br><br>ಅಡಕಗೊಳಿಸಿರುವ ಪತ್ರದಲ್ಲಿನ ಉಲ್ಲೇಖ 1 ಮತ್ತು 2ರಲ್ಲಿ ಸದರಿ ನೌಕರರನ್ನು ವಿಶ್ವವಿದ್ಯಾನಿಲಯದ ಆದೇಶದನ್ವಯ ನೇಮಕಾತಿ ಮಾಡಲಾಗಿತ್ತು, ಪ್ರಸ್ತುತ ಪತ್ರದ ಉಲ್ಲೇಖ |

| | |
|---|---|
| | 3ರನ್ವಯ ಪ್ರಸ್ಥಾವಿತ 61 ಸಂಖ್ಯೆ ಸಂಚಿತವೇತನ ಸಿಬ್ಬಂಧಿಯ ಸೇವೆಯನ್ನು ಯುವರಾಜ ಕಾಲೇಜು ಮೈಸೂರು ಇಲ್ಲಿಯೇ ಮುಂದುವರಿಸಿ ಇವರುಗಳ ವೇತನವನ್ನು ಯುವರಾಜ ಕಾಲೇಜು ಮೈಸೂರು ನಿಧಿಯಿಂದಲೇ ಪಾವತಿಸಲು ಸೂಚಿಸಲಾಗಿದೆ.<br><br>ಅದರನ್ವಯ 2017–18ನೇ ಸಾಲಿನಲ್ಲಿ ಒಟ್ಟು 61 ಸಿಬ್ಬಂಧಿಗಳಿಗೆ ಒಟ್ಟು ರೂ.55,79,049/– ಪಾವತಿಸಲಾಗಿದೆ<br><br>ಪ್ರಸ್ಥಾವಿತ ನೌಕರರ ನೇಮಕಾತಿಯೂ ಸಕ್ಷಮ ಪ್ರಾಧಿಕಾರವಾದ ಮಾನ್ಯ ಕುಲಪತಿಗಳು ಮೈಸೂರು ವಿಶ್ವವಿದ್ಯಾನಿಲಯ ಮೈಸೂರು ಇವರಿಂದ ಅನುಮೋದನೆ ಮೇರೆಗೆ ಆಗಿರುವುದರಿಂದ ಸೂಚಿತ ಆಕ್ಷೇಪಣೆ ಕಂಡಿಕೆ ಕೈ ಬಿಡಲು ಕೋರಿದೆ. (ಪ್ರಾಂಶುಪಾಲರು ಯುವರಾಜ ಕಾಲೇಜು ಮೈಸೂರು ರವರ ಕಛೇರಿ ಆದೇಶದ ಪ್ರತಿ ಲಗತ್ತಿಸಿದೆ.) |
| **99. ಸಂಚಿತ/ತಾತ್ಕಾಲಿಕ/ಅತಿಥಿ ಉಪನ್ಯಾಸಕರುಗಳನ್ನು ನೇಮಕ ಮಾಡಿಕೊಂಡಿರುವ ನೇಮಕಾತಿ ಪ್ರಕ್ರಿಯೆ ಕಡತಗಳನ್ನು ಹಾಜರುಪಡಿಸದಿರುವುದು:– (ಯುವರಾಜ ಕಾಲೇಜು)**<br><br>2017–18ನೇ ಸಾಲಿನ ಶೈಕ್ಷಣಿಕ ವರ್ಷಕ್ಕೆ ಸಂಚಿತ/ತಾತ್ಕಾಲಿಕ/ಅತಿಥಿ ಉಪನ್ಯಾಸಕರುಗಳನ್ನು ಹಿಂದಿನ ಸಾಲಿನಲ್ಲಿ ನೇಮಕ ಮಾಡಿಕೊಂಡು ವೇತನ ಭತ್ಯೆಗಳನ್ನು ಪಾವತಿಸಿರುವುದು ಹಾಗೂ ಮುಂದುವರೆಸಿರುವುದು ಕಂಡುಬಂದಿರುತ್ತದೆ ಸಂಚಿತ/ತಾತ್ಕಾಲಿಕ/ಅತಿಥಿ ಉಪನ್ಯಾಸಕರುಗಳ ನೇಮಕಾತಿ ಪ್ರಕ್ರಿಯೆ ಕಡತಗಳನ್ನು ಲೆಕ್ಕ ಪರಿಶೋಧನೆಗೆ ಹಾಜರುಪಡಿಸುವಂತೆ ಲೆಕ್ಕಪರಿಶೋಧನಾ ವಿಚಾರಣಾ ಪತ್ರ ಸಂಖ್ಯೆ:10/2019–20 ದಿನಾಂಕ:08.04.2019ರಲ್ಲಿ ಕೋರಲಾಗಿ ಯಾವುದೇ ಕಡತಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸಿರುವುದಿಲ್ಲ.<br><br>ಕನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯಿದೆ 2000ರ ನಿಯಮ 55.56ರನ್ವಯ ನೇಮಕಾತಿ ಪ್ರಕ್ರಿಯೆ ಕೈಗೊಳ್ಳಲಾಗಿರುವ ಬಗ್ಗೆ ಪರಿಶೀಲಿಸಲು ಸಾಧ್ಯವಾಗಿರುವುದಿಲ್ಲ ಹಾಗೂ ಯುವರಾಜ ಕಾಲೇಜಿಗೆ ವಿಷಯವಾರು ಮಂಜೂರಾಗಿರುವ ಬೋದಕ ಹುದ್ದೆಗಳಲ್ಲಿ ಖಾಯಂ ಬೋಧಕ ವರ್ಗದವರು ಕರ್ತವ್ಯ ನಿರ್ವಹಿಸುತ್ತಿರುವ ಹುದ್ದೆಗಳನ್ನು ಬಿಟ್ಟು ಉಳಿಕೆ ಖಾಲಿ ಇರುವ ಹುದ್ದೆಗಳಿಗೆ ಎದುರಾಗಿ ಸಂಚಿತ/ತಾತ್ಕಾಲಿಕ/ಅತಿಥಿ ಉಪನ್ಯಾಸಕರುಗಳನ್ನು ಯು.ಜಿ.ಸಿ ನಿಯಮಾವಳಿಗಳ ಅನುಸಾರ ಹಾಗೂ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯಿದೆ 2000 ನಿಯಮ 41(5) (6) (7) ರನ್ವಯ ಸರ್ಕಾರದಿಂದ ಹಾಗೂ ಗೌರವಾನ್ವಿತ ಕುಲಾಧಿಪತಿಗಳಿಂದ ಅನುಮೋಧನೆ ಪಡೆದು ನೇಮಕ ಮಾಡಿಕೊಂಡಿರುವ ಕಡತಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸದಿರುವುದರಿಂದ ಇವರುಗಳಿಗೆ 2017–18ರಲ್ಲಿ ಪಾವತಿಸಿರುವ ಮೊತ್ತ ರೂ.2,98,57,409/–ಗಳನ್ನು ಆಕ್ಷೇಪಣೆಗೆ ಸುಚಿಸಿದೆ ವಿವರ ಅನುಬಂಧ–53ರಲ್ಲಿ ನೀಡಲಾಗಿದೆ.<br><br>ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಹಾಜರುಪಡಿಸಲಾದ ಆದೇಶದ ಪ್ರತಿಯನ್ನು ಪರಿಶೀಲಿಸಿದಾಗ ಮೈಸೂರು ವಿಶ್ವವಿದ್ಯಾನಿಲಯದ ಕುಲಸಚಿವರ ಆದೇಶದ | ಸದರಿ ಕಂಡಿಕೆಯಲ್ಲಿನ ಪ್ರಸ್ತಾವಿತ ವಿಷಯಕ್ಕೆ ಸಂಬಂಧಿಸಿದಂತೆ, ವಿಶ್ವವಿದ್ಯಾನಿಲಯದ ಆಡಳಿತಾತ್ಮಕ ಅಧೀನ ಸಂಸ್ಥೆಯಾದ ಯುವರಾಜ ಕಾಲೇಜು, ಮೈಸೂರು ಇಲ್ಲಿಗೆ ಅನುಮೋದಿತವಾಗಿರುವ ವಿವಿಧ ವಿಭಾಗಗಳಲ್ಲಿ ಮಂಜೂರಾಗಿರುವ ಉಪನ್ಯಾಸಕರ ಹುದ್ದೆಗಳ ಸಂಖ್ಯೆ 79 ಆಗಿರುತ್ತದೆ (ಅಡಕ ಪತ್ರ ಸಂಖ್ಯೆ/No.ET12/3/450/2009-10, ದಿನಾಂಕ/25/6/2018) ಆದರೆ ಕಾರ್ಯನಿರ್ವಹಿಸುತ್ತಿರುವ ಸಂಖ್ಯೆ 59 ಆಗಿರುತ್ತದೆ (ಅಡಕ ಪತ್ರ–ಪ್ರಾಂಶುಪಾಲರು ಮತ್ತು ವಿಷಯವಾರು ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಯ ಪತ್ರ ಅಡಕಗೊಳಿಸಿದೆ).<br><br>ಈ ಹಿನ್ನೆಲೆಯಲ್ಲಿ 2017–18ನೇ ಸಾಲಿನಲ್ಲಿ ವಿವಿಧ ವಿಷಯಗಳಲ್ಲಿ ಅಧ್ಯಯನ ನಡೆಸುತ್ತಿರುವ ವಿದ್ಯಾರ್ಥಿಗಳ ಶೈಕ್ಷಣಿಕ ಚಟುವಟಿಕೆಗಳಿಗೆ, ಪಾಠಪ್ರವಚನಗಳಿಗೆ ಅಡ್ಡಿಯಾಗಬಾರದು ಎಂಬ ಹಿನ್ನೆಲೆಯಲ್ಲಿ ಖಾಲೀ ಇರುವ ವಿವಿಧ ವಿಭಾಗದ ಹುದ್ದೆಗಳು ಮತ್ತು ಹೊಸದಾಗಿ ಪ್ರಾರಂಭಿಸಲಾಗಿರುವ ಕೋರ್ಸುಗಳ ವಿದ್ಯಾರ್ಥಿಗಳ ಶೈಕ್ಷಣಿಕ ಬೇಡಿಕೆಯನ್ನು ಪರಿಗಣಿಸಿ, ಸಹಾಯಕ ಪ್ರಾಧ್ಯಾಪಕರನ್ನು 5 ವರ್ಷಗಳ ಅವಧಿಗೆ ತಾತ್ಕಾಲಿಕವಾಗಿ ನೇಮಕಾತಿ ಮಾಡಿಕೊಳ್ಳುವ ಸಲುವಾಗಿ ಕ್ರೋಢೀಕೃತ ಸಂಭಾವನೆ ಆಧಾರದಲ್ಲಿ ಸ್ನಾತಕ ಕೋರ್ಸುಗಳಿಗೆ ಮಾಹೆಯಾನ ರೂ.45,000/– ದರದಲ್ಲಿ ಮತ್ತು ಸ್ನಾತಕೋತ್ತರ ಕೋರ್ಸುಗಳಿಗೆ ಮಾಹೆಯಾನ ಕ್ರೋಢೀಕೃತ ಸಂಭಾವನೆ ರೂ.50,000/– ದರದಲ್ಲಿ ನೇಮಕಾತಿ ಪ್ರಕಟಣೆಯನ್ನು ವಿಶ್ವವಿದ್ಯಾನಿಲಯದ ಅನುಮೋದನೆಯೊಂದಿಗೆ ಹೊರಡಿಸಲಾಗಿದೆ. ಈ ಸಂಬಂಧ ನಿಬಂಧನೆಗಳನ್ನೊಳಗೊಂಡ ಪತ್ರದ ಪ್ರತಿಯನ್ನು |

| | |
|---|---|
| ಸಂಖ್ಯೆ:ಇಟಿ12/3/450/2009–10 ದಿನಾಂಕ:25.06.2018ರಲ್ಲಿ ಯುವರಾಜ ಕಾಲೇಜಿಗೆ ಮಂಜೂರಾದ ಹುದ್ದೆಗಳ ಸಂಖ್ಯೆ–79 (Sanctioned Post) ಇರುತ್ತದೆ ಅಂದರೆ 16 ಅಧ್ಯಾಪಕರುಗಳ ಹುದ್ದೆ ಖಾಲಿ ಇರುತ್ತದೆ ಆದರೆ ಯುವರಾಜ ಕಾಲೇಜಿನಲ್ಲಿ ಅತಿಥಿ ಉಪನ್ಯಾಸಕರುಗಳನ್ನು ಶೇಕಡಾ 10 ಕ್ಕಿಂತಲೂ ಹೆಚ್ಚು ಅತಿಥಿ ಉಪನ್ಯಾಸಕರುಗಳನ್ನು ನೇಮಕ ಮಾಡಿಕೊಂಡಿರುತ್ತಾರೆ ಈ ಬಗ್ಗೆ ವಿವರಗಳನ್ನು ಹಾಜರುಪಡಿಸಲು ಸೂಚಿಸಿದೆ. | ಅಡಕಗೊಳಿಸಿದೆ ಮತ್ತು ಈ ವಿವರಗಳು ವಿಶ್ವವಿದ್ಯಾನಿಲಯದ ಅಧಿಕೃತ Website- www.ycm.uni.mysore.ac.in ರಲ್ಲಿ ಪ್ರಕಟಿಸಲಾಗಿದೆ.<br><br>ಈ ಪ್ರಕಟಣೆಗೆ ಸ್ಪಂದಿಸಿ ಅರ್ಜಿ ಸಲ್ಲಿಸಿದ ಅಭ್ಯರ್ಥಿಗಳನ್ನು ಶೈಕ್ಷಣಿಕ ಆಧಾರದಲ್ಲಿ ಮತ್ತು ಸಂಬಂಧಿಸಿದ ವಿಷಯಗಳಲ್ಲಿ ಗಳಿಸಿರುವ ಗರಿಷ್ಠ ಅಂಕಗಳ ಆಧಾರದಲ್ಲಿ ಸರ್ಕಾರದಿಂದ ನಿಗದಿಪಡಿಸಿರುವ ಮೀಸಲಾತಿ (ರೋಸ್ಟರ್) ಅನ್ವಯ 48 ಅಭ್ಯರ್ಥಿಗಳ ನೇಮಕಾತಿಯನ್ನು ಈ ಸಂಬಂಧದ ರಚಿತವಾಗಿರುವ ಆಯ್ಕೆ ಸಮಿತಿಯ (ದಿನಾಂಕ: 17–09–2016), ದಿನಾಂಕ: 24–09–2016 ರಂದು ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಹಾಲ್‌ನಲ್ಲಿ ನಡೆದ ಸಮಿತಿ ಸಭೆಯಲ್ಲಿ ಅನುಮೋದಿಸಲಾಗಿದೆ. (ಪ್ರತಿಯೊಂದು ವಿಭಾಗಕ್ಕೂ ಆಯ್ಕೆಸಮಿತಿ ನಿರ್ಣಯದ ಆಧಾರದ ಮೇಲೆಯೇ ಸಂಚಿತವೇತನ ಆಧಾರದಲ್ಲಿ ತಾತ್ಕಾಲಿಕ/ಅತಿಥಿ ಉಪನ್ಯಾಸಕರನ್ನು (ಯುವರಾಜ ಕಾಲೇಜಿನ) ನೇಮಕ ಮಾಡಿಸಿಕೊಳ್ಳಲು ಕ್ರಮವಹಿಸಲಾಗಿದೆ. ಈ ರೀತಿಯಾಗಿ ನೇಮಕಗೊಂಡಿರುವ ಉಪನ್ಯಾಸಕರುಗಳಿಗೆ (ಸ್ನಾತಕ ಕೋರ್ಸು) ಮಾಹೆಯಾನ ವೇತನ ರೂ.45,000/– ಮತ್ತು ಉಪನ್ಯಾಸಕರುಗಳಿಗೆ (ಸ್ನಾತಕೋತ್ತರ ಕೋರ್ಸು) ವೇತನ ರೂ.50,000/– ದರದಲ್ಲಿ ಸಂಚಿತವೇತನ ಪಾವತಿಸಲಾಗಿದೆ.<br><br>ಪಾವತಿಯಾಗಿರುವ ಒಟ್ಟು ಮೊತ್ತ ರೂ.2,98,57,409/– ಗಳಿಗೆ ಸಂಬಂಧಿಸಿದ ಬಟವಾಡೆ ವಿವರವನ್ನು ದೃಢೀಕೃತ ಪ್ರತಿ ಲಗತ್ತಿಸಿದೆ.<br><br>ಆದ್ದರಿಂದ ಪ್ರಸ್ತಾವಿತ ಆಕ್ಷೇಪಿತ ಮೊತ್ತ ರೂ.2,98,57,409/– ಕೈಬಿಡಲು ಕೋರಿದೆ. |
| **100. ಶ್ರೀ ಪ್ರಕಾಶ್.ಹೆಚ್,ಆರ್, ದ್ವಿ.ದ.ಸ ಇವರಿಗೆ ನಿಯಮ ಉಲ್ಲಂಘಿಸಿ ಹೊಸ ಪಿಂಚಣಿ ಯೋಜನೆಗೆ ಬದಲಾಗಿ ಹಳೆಯ ಪಿಂಚಣಿ ಯೋಜನೆ ಜಾರಿಗೊಳಿಸಿರುವುದು:– (ಯುವರಾಜ ಕಾಲೇಜು)**<br><br>2017–18ನೇ ಸಾಲಿನ ಲೆಕ್ಕ ತಪಾಸಣೆಯಲ್ಲಿ ಶ್ರೀ ಪ್ರಕಾಶ್.ಹೆಚ್,ಆರ್,ದ್ವಿ ದ.ಸ ಇವರ ಸೇವಾವಹಿಯನ್ನು ಪರಿಶೀಲಿಸಲಾಗಿ ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ:FD/(SPL)04/PET/2005 ದಿನಾಂಕ:31.03.2006ರ ಆದೇಶದನ್ವಯ ದಿನಾಂಕ:01.04.2006ರ ನಂತರ ಕೆಲಸಕ್ಕೆ ವರದಿ ಮಾಡಿಕೊಳ್ಳುವ ನೌಕರರು ಮತ್ತು ಖಾಯಂ ನೇಮಕಾತಿ ಹೊಂದುವ ನೌಕರರುಗಳಿಗೆ ನೂತನ ಪಿಂಚಣಿ ಯೋಜನೆಯನ್ನು ಜಾರಿಗೊಳಿಸಬೇಕಾಗಿರುತ್ತದೆ.<br>ಶ್ರೀ ಪ್ರಕಾಶ್.ಹೆಚ್,ಆರ್,ದ್ವಿ ದ.ಸ ಇವರ ಸೇವಾ ವಹಿಯನ್ನು ಪರಿಶೀಲಿಸಲಾಗಿ ವಿಶ್ವವಿದ್ಯಾನಿಲಯ ಆದೇಶ ಸಂಖ್ಯೆ:ET1/355/(01 TO35) 2003-04 ದಿನಾಂಕ:01.08.2000 ಆದೇಶದನ್ವಯ ದಿನಾಂಕ:01.08.2006 ರಂದು ನೇಮಕಾತಿ ಹೊಂದಿ ಕೆಲಸಕ್ಕೆ ವರದಿ ಮಾಡಿಕೊಂಡಿರುತ್ತಾರೆ ಇವರಿಗೆ ನೂತನ ಪಿಂಚಣಿ ಯೋಜನೆಯನ್ನು ಜಾರಿಗೊಳಿಸಿದ್ದು ತದನಂತರ | ಪ್ರಸ್ತಾವಿತ ಕಂಡಿಕೆಯಲ್ಲಿ ಸದರಿ ಕಾಲೇಜಿನಲ್ಲಿ 2017–18ನೇ ಸಾಲಿನಲ್ಲಿ ದ್ವಿತೀಯ ದರ್ಜೆ ಸಹಾಯಕರಾಗಿ ಕಾರ್ಯನಿರ್ವಹಿಸುತ್ತಿದ್ದ ಪ್ರಕಾಶ್,ಎಚ್,ಆರ್ ರವರು 01.08.2006ರಂದು ನೇಮಕಗೊಂಡಿದ್ದ ಕಾರಣ ಸದರಿ ನೌಕರರನ್ನು ಸರ್ಕಾರಿ ಆದೇಶ ಸಂಖ್ಯೆ:ಎಫ್‌ಡಿ/ಎಸ್‌ಪಿಎಲ್/04/ಪಿಇಟಿ/2005 ಬೆಂಗಳೂರು ದಿನಾಂಕ:31.03.2006ರ ಆದೇಶದನ್ವಯ (National pension sehem) NPS ಗೆ ಸೇರ್ಪಡೆಗೊಳಿಸಿದ್ದು – ತದನಂತರ ಇವರನ್ನು ಹಳೆ ಪಿಂಚಣಿ ಯೋಜನೆ ವ್ಯಾಪ್ತಿಗೆ ಪರಿಗಣಿಸಿ ಸದರಿ ನೌಕರರಿಂದ ಕಟಾಯಿಸಲಾಗಿದ್ದ ಪಿಂಚಣಿ ವಂತಿಗೆ ಬಾಬ್ತು ಮೊತ್ತ ರೂ.106667/–ನ್ನು ಸಂಬಂಧಿಸಿದ ನೌಕರರಿಂದ ವಸೂಲಾತಿಗೆ ಕ್ರಮವಹಿಸಲು ಸೂಚಿತವಾಗಿದೆ.<br><br>ಆದರೆ ಸದರಿ ನೌಕರರನ್ನು (ಪ್ರಕಾಶ್,ಎಚ್,ಆರ್ ದ್ವಿತೀಯ ದರ್ಜೆ ಸಹಾಯಕರಾಗಿ) |

| | |
|---|---|
| ವಿಶ್ವವಿದ್ಯಾನಿಲಯ ಆದೇಶ ಸಂಖ್ಯೆ:ಇಡಿ–1/355, 2003–04 ದಿನಾಂಕ:04.07.2017ರ ಆದೇಶಗಳನ್ವಯ ಸದರಿ ಉದ್ಯೋಗಿಯನ್ನು ನೂತನ ಪಿಂಚಣಿ ಯೋಜನೆಯಿಂದ ಹಳೆಯ ಪಿಂಚಣಿಯೋಜನೆಗೆ ಮಾರ್ಪಡಿಸಿ ನೂತನ ಪಿಂಚಣಿ ಯೋಜನೆಯನ್ವಯ ಪ್ರತಿ ಮಾಹೆಯನ ಎನ್.ಪಿ.ಎಸ್ ವಂತಿಗೆ ಕಟಾಯಿಸಿರುವ ಮೊತ್ತ ರೂ.1,06,667/–ಗಳನ್ನು ಸದರಿ ನೌಕರರಿಗೆ ಹಿಂತಿರುಗಿಸಿರುವುದನ್ನು ಲೆಕ್ಕ ತಪಾಸಣೆಯಲ್ಲಿ ಗಮನಿಸಲಾಗಿದೆ ಸರ್ಕಾರಿ ಆದೇಶ ಸಂಖ್ಯೆ:FD/SPL/04/PET/2005 ಬೆಂಗಳೂರು ದಿನಾಂಕ:31.03.2006ರ ಆದೇಶವನ್ನು ಉಲ್ಲಂಘಿಸಿ ಹಳೆಯ ಪಿಂಚಣಿ ಯೋಜನೆಗೆ ಒಳಪಡಿಸಿರುವ ಬಗ್ಗೆ ಸಿಂಡಿಕೇಟ್ ಸಭೆಯಲ್ಲಿ ಕೈಗೊಂಡಿರುವ ನಿರ್ಣಯಗಳನ್ನು ಸರ್ಕಾರಕ್ಕೆ ಸಲ್ಲಿಸಿ ನಿಯಮ 41(6) ರನ್ವಯ ಸಿಂಡಿಕೇಟ್ ಸಭೆಯ ನಿರ್ಣಯದ ಪರಿನಿಯಮಾವಳಿಗೆ ಸರ್ಕಾರ ತಿದ್ದುಪಡಿಗಳೊಂದಿಗೆ ಮಾನ್ಯ ಕುಲಾಧಿಪತಿಗಳಿಗೆ ಸಲ್ಲಿಸಬೇಕಾಗಿರುತ್ತದೆ ನಿಯಮ 41(7)ರನ್ವಯ ಸರ್ಕಾರದ ತಿದ್ದುಪಡಿಗಳೊಂದಿಗೆ ಸಲ್ಲಿಸಲಾದ ಸಿಂಡಿಕೇಟ್ ಸಭೆಯ ನಿರ್ಣಯಗಳು ಪರಿನಿಯಮಗಳಿಗೆ ಘನತವೆತ್ತ ಸನ್ಮಾನ್ಯ ಕುಲಾಧಿಪತಿಯಿಂದ ಅನುಮೋದನೆ ಪಡೆದು ಸಿಂಡಿಕೇಟ್ ಸಭೆಯ ನಿರ್ಣಯವನ್ನು ಜಾರಿಗೊಳಿಸಬೇಕಾಗಿರುತ್ತದೆ ಆದರೆ ಸದರಿ ನೌಕರರು ಹಾಗೂ ಇನ್ನಿತರೆ ನೌಕರರುಗಳಿಗೆ ದಿನಾಂಕ:01.08.2006ರಲ್ಲಿ ಖಾಯಂ ನೌಕರರಾಗಿ ನೇಮಕಾತಿ ಹೊಂದಿದ್ದುಇವರಿಗೆ ಸರ್ಕಾರಿ ಆದೇಶ ಮತ್ತು ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯ ಕಾಯ್ದೆ 2000 ನಿಯಮ 41(5) 41(6) 41(7) ನ್ನು ಉಲ್ಲಂಘಿಸಿ ಹಳೆಯ ಪಿಂಚಣಿ ಯೋಜನೆಯನ್ನು ಜಾರಿಗೊಳಿಸಿರುವುದಕ್ಕೆ ಸರ್ಕಾರದ ಆದೇಶ ಮತ್ತು ಘನತವೆತ್ತ ಕುಲಾಧಿಪತಿಯಿಂದ ಅನುಮೋಧನೆಯಾಗಿರುವ ಆದೇಶಗಳನ್ನು ಹಾಜರುಪಡಿಸುವಂತೆ ಲೆಕ್ಕತಪಾಸಣಾ ವಿಚಾರಣೆ ಪತ್ರ ಸಂಖ್ಯೆ:07/2019–20 ದಿನಾಂಕ:08.04.2019ರಲ್ಲಿ ಕೋರಲಾಗಿ ಆದೇಶಗಳನ್ನು ಲೆಕ್ಕತಪಾಸಣೆಗೆ ಹಾಜರುಪಡಿಸದಿರುವುದರಿಂದ ನೂತನ ಪಿಂಚಣಿಯೋಜನೆಯಿಂದ (NPS) ಹಳೆಯ ಪಿಂಚಣಿ ಯೋಜನೆಗೆ (OPS) ಒಳಪಡಿಸಿರುವುದನ್ನು ಆಕ್ಷೇಪಿಸಲಾಗಿದ್ದು ಸದರಿ ಉದ್ಯೋಗಿಯನ್ನು ಹಾಗೂ ಇನ್ನಿತರೆ ಉದ್ಯೋಗಿಗಳಿಗೆ ಜಾರಿ ಮಾಡಿದ್ದಲ್ಲಿ ಹಳೆ ಪಿಂಚಣಿ ಯೋಜನೆಯನ್ನು ರದ್ದುಗೊಳಿಸಿ ನೂತನ ಪಿಂಚಣಿ ಯೋಜನೆಗೆ ಒಳಪಡಿಸುವಂತೆ ಸೂಚಿಸಿದೆ ಹಾಗೂ ಎನ್.ಪಿ.ಎಸ್ ವಂತಿಗೆ ಹಿಂದಿರುಗಿಸಿರುವ ಮೊತ್ತ ರೂ.1,06,667/–ಗಳನ್ನು ನೌಕರರಿಂದ ವಸೂಲಿಸಿ ಎನ್.ಪಿ.ಎಸ್ ನಿಧಿಗೆ ಜಮಾ ಮಾಡಲು ಸೂಚಿಸಿದೆ. | NPS ಯೋಜನೆಯಿಂದ ಹಳೆ ಪಿಂಚಣಿ ಯೋಜನೆ ವ್ಯಾಪ್ತಿಗೆ ಒಳಪಡಿಸಿರುವ ಕಾರಣಗಳ ವಿವರ ಈ ರೀತಿ ಇದೆ<br><br>1. ಈ ಪತ್ರದೊಂದಿಗೆ ಅಡಕಗೊಳಿಸಿರುವ 35 ಸಂಖ್ಯೆ ಸಿಬ್ಬಂಧಿಯ ಕಛೇರಿಯ ಆದೇಶದ ಪ್ರತಿ.<br>2. ದಿನಾಂಕ:10.01.2013ರ ಕರ್ನಾಟಕ ಅಪಲೇಟ್ ಟ್ರೀಬ್ಯೂನಲ್ ನ್ಯಾಯಾಲಯದ 10.01.2013ರ ತೀರ್ಪಿನ ಪ್ರತಿ.<br>3. ದಿನಾಂಕ:03.07.2013ರ ಉಚ್ಛನ್ಯಾಯಾಲಯ ಬೆಂಗಳೂರುರವರ ಆದೇಶ.<br>4. ದಿನಾಂಕ:25.11.2013ರ ಸರ್ವೂಚ್ಛ ನ್ಯಾಯಾಲಯದ ತೀರ್ಪಿನ ಹಿನ್ನಲೆಯಲ್ಲಿ ವಿಶ್ವವಿದ್ಯಾನಿಲಯದ 35 ನೌಕರರ ದಿನಾಂಕ:11.09.2013ರ ಮನವಿಯನ್ನು ಸಮಗ್ರವಾಗಿ ಪರಿಗಣಿಸಿ ಆದೇಶ ಸಂಖ್ಯೆ:ಇಟಿ/01/355/2003–04 ದಿನಾಂಕ:05.06.2014 ಅನ್ವಯ ಸದರಿ ನೌಕರರು ಸೇರಿದಂತೆ ಈ ರೀತಿ ಸೌಲಭ್ಯಕ್ಕೆ (ಹಳೆ ಪಿಂಚಣಿ) ಒಳಪಡುವ 35 ನೌಕರರ ಪಟ್ಟಿಯನ್ನು ಕುಲಸಚಿವರ ಆದೇಶದೊಂದಿಗೆ ಹೊರಡಿಸಲಾಗಿದೆ.<br><br>ಈ ಪ್ರಕರಣದಲ್ಲಿ ನೌಕಕರ ಸೇವೆಗೆ ಸೇರಿದ ದಿನಾಂಕ:18.05.1994 ಆಗಿದ್ದು 10 ವರ್ಷಗಳ ಸೇವೆಯು 17.05.2004ಕ್ಕೆ ಪೂರ್ಣವಾಗಿರುತ್ತದೆ ಆದ ಕಾರಣ ದಿನಾಂಕ:18.05.2004ರಿಂದಲೆ ಖಾಯಂ ಆಗಿದ್ದ ನೌಕರರಿಗೆ ಲಭ್ಯವಾಗಬೇಕಾಗಿದ್ದ ಹಳೆ ಪಿಂಚಣಿ ಯೋಜನೆಗೆ ಸೇರ್ಪಡೆಯಾಗಲು ಆರ್ಹರಾಗಿರುತ್ತಾರೆ ಅಲ್ಲದೇ ಸದರಿ ನೌಕರರ ನೇಮಕಾತಿಯೂ 18.05.2004ರಿಂದಲೆ ಪೂರ್ವಾನ್ವಯವಾಗುವಂತೆ ಜಾರಿಗೆ ನೀಡಿರುವುದರಿಂದ ಸಂಬಂಧಿಸಿದ ನೌಕರರಿಗೆ ಪುನರ್ ಪಾವತಿಯಾಗಿರುವ ಪಿಂಚಣಿ ವಂತಿಗೆ ಬಾಬ್ತು ರೂ.1,06,667/– ಕ್ರಮ ಬದ್ದವಾಗಿರುತ್ತದೆ. (ಅಡಕ ಈ ಸಂಬಂಧದ ಆದೇಶದ ಪ್ರತಿ )<br><br>ಆದ ಕಾರಣ ಅಡಿಟ್‌ವರದಿಯಲ್ಲಿ ಸೂಚಿತವಾದ ವಸೂಲಾತಿ ಕಂಡಿಕೆ ಕೈ ಬಿಡಲು ಕೋರಿದೆ. |
| **101. 2017–18ನೇ ಸಾಲಿಗೆ ಜಿ.ಆರ್.ಎ ಖಾತೆಯ ಪಾವತಿ ಓಚರ್‌ಗಳಲ್ಲಿ ಕಂಡು ಬಂದಿರುವ ನ್ಯೂನತೆಗಳು:– (ಯುವರಾಜ ಕಾಲೇಜು)**<br><br>2017–18ನೇ ಸಾಲಿನಲ್ಲಿನ ಜಿ.ಆರ್.ಎ ಕಾತೆಯ ಪಾವತಿ ಓಚರ್‌ಗಳನ್ನು ಪರಶೀಲನೆ ಮಾಡಿದ ಸಂದರ್ಭದಲ್ಲಿ ಓಚರ್‌ಗಳನ್ನು ಕ್ರಮಬದ್ಧವಾಗಿ ನಿರ್ವಹಿಸದಿದ್ದು ಹಲವಾರು ನ್ಯೂನತೆಗಳು ಕಂಡುಬಂದಿರುತ್ತದೆ ವಿವರಗಳನ್ನು ಅನುಬಂಧ–54 ರಲ್ಲಿ ನೀಡಲಾಗಿದೆ ನಿಯಮಾನುಸಾರ | 2017–18ನೇ ಸಾಲಿನಲ್ಲಿ ಸದರಿ ಕಾಲೇಜಿನಲ್ಲಿ ಜಿ.ಆರ್ ಸಾಮಾನ್ಯ ರೆವಿನ್ಯೂ ಖಾತೆಯಲ್ಲಿ ಭರಿಸಿರುವ ವೆಚ್ಚಕ್ಕೆ ಸಂಬಂಧಿಸದ ವೋಚರ್‌ಗಳಲ್ಲಿ– ಓಚರ್ ವಿವರಗಳನ್ನು, ಬಿ.ಆರ್ ಸಂಖ್ಯೆ ನಮೂದಿಸಿರುವುದು ಬಿ.ಆರ್ ವಹಿಯಲ್ಲಿ ದಾಖಲಿಸಿರುವುದು ಸರಬರಾಜು ಬಿಲ್ಲುಗಳ |

ಪ್ರತಿಯೊಂದು ಪಾವತಿ ಓಚರ್‌ಗಳಿಗೆ ಬಿ,ಆರ್ ಸಂಖ್ಯೆಯನ್ನು ಬಿ,ಆರ್ ವಹಿಯಲ್ಲಿ ನಮೂದಿಸಿ ನಿರ್ವಃಇಸುವುದು ಮುಖ್ಯವಾಗಿರುತ್ತದೆ ಹಾಗೂ ವಿಭಾಗದಲ್ಲಿ ಖರೀದಿಸಲಾದ ಸಾಮಗ್ರಿಗಳನ್ನು ದಾಸ್ತಾನು ಸ್ವೀಕೃತಿ ವಹಿಯಲ್ಲಿ ತೆಗೆದುಕೊಂಡು ದೃಢೀಕರಿಸಬೇಕಾಗಿರುತ್ತದೆಪಾವತಿ ಓಚರ್‌ಗಳ ಪರಿಶೀಲನೆ ಸಂದರ್ಭದಲ್ಲಿ ಮೇಲ್ಕಂಡ ವಿವರದಲ್ಲಿರುವಂತೆ ವಿವರ/ದಾಖಲಾತಿಗಳು ಲಭ್ಯವಿಲ್ಲದಾಗಿರುತ್ತದೆ ಈ ಕುರಿತು ವಿಚಾರಣೆ ಸಂಖ್ಯೆ:24 ದಿನಾಂಕ:04.04.2017ರಲ್ಲಿ ಸೂಕ್ತ ವಿವರಣೆಯೊಂದಿಗೆ ಕೋರಿರುವ ಮಾಹಿತಿಯನ್ನು ಲೆಕ್ಕ ತಪಾಸಣೆಗೆ ಹಾಜರುಪಡಿಸಲು ಕೋರಲಾಗಿತ್ತು ಯಾವುದೇ ವಿವರಗಳನ್ನು ಹಾಜರುಪಡಿಸದಿರುವುದರಿಂದ ಪವತಿಸಲಾಗಿರುವ ಒಟ್ಟು ಮೊತ್ತ ರೂ.1,64,383/–ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.

ಮೂಲಕ ಸರಬರಾಜು ಪಡೆದ ಸಾಮಗ್ರಿಗಳ ದಾಸ್ತಾನು ಧೃಢೀಕರಣ ದಾಖಲಿಸಿರುವುದು ಮತ್ತು ಸರಬರಾಜಾದ ವಸ್ತುಗಳ ವಿವರವನ್ನು ದಾಸ್ತನು ಮತ್ತು ವಿತರಣೆ ವಹಿಯಲ್ಲಿ ದಾಖಲಿಸದೆ ಇರುವ ಅಂಶವನ್ನು ಉಲ್ಲೇಖಿಸಿ ಈ ಸಂಬಂಧದ 20 ಬಿಲ್ಲುಗಳ ಒಟ್ಟು ಮೊತ್ತ ರೂ.164383/–ನ್ನು ಆಕ್ಷೇಪಿಸಲಾಗಿದೆ.

ಪ್ರಸ್ತುತ ಲೆಕ್ಕಪರಿಶೋಧನಾವರದಿಯಲ್ಲಿ ಸೂಚಿತವಾಗಿರುವ ಎಲ್ಲಾ ನ್ಯೂನ್ಯತೆಗಳನ್ನು ಸರಿಪಡಿಸಿ 2018–19ನೇ ಸಾಲಿನ ಲೆಕ್ಕಪರಿಶೋಧನೆಗೆ ಹಾಜರು ಪಡಿಸಲು ಕ್ರಮವಹಿಸಲಾಗಿದೆ ಅವುಗಳ ವಿವರ ಈ ರೀತಿ ಇದೆ.

| ಕ್ರ ಸಂ | ಬಿಲ್ಲು ವಿವರ | ಧನಾದೇಶ ಸಂಖ್ಯೆ | ದಿನಾಂಕ | ಬಿಲ್ಲಿನ ಮೊತ್ತ |
|---|---|---|---|---|
| 1 | Unique solutions mysore | 497029 | 14.06.2017 | 10068 |
| 2 | AC bill | – | – | 8000 |
| 3 | System Net work solutions mysore | 497013 | 28.04.2017 | 30060 |
| 4 | Venus Gas services mysore | 497012 | 26.04.2017 | 2244 |
| 5 | M\|S Global enter prises mysore | 497010 | 26.04.2017 | 4456 |
| 6 | Ramesh my&co charted Accountanants mysore | 497009 | 24.04.2017 | 1725 |
| 7 | G,R info systems mysore | 497008 | 24.04.2017 | 4950 |
| 8 | janatha bazaar mysore | 497004 | 24.04.2017 | 8680 |
| 9 | sri vijiyalakshmi printers mysore | 497003 | 24.04.2017 | 17717 |
| 10 | m\s annpurn caters mysore | – | – | 20000 |
| 11 | garnier creatins mysore | 497044 | 29.07.2017 | 7789 |
| 12 | santhosh pipe centre mysore | – | – | 2700 |
| 13 | m\s system network solutions | – | – | 3000 |
| 14 | m\s system network solutions | – | – | 3712 |
| 15 | shree panchamukhi enterprises mysore | 117130 | 28.09.2017 | 31590 |
| 16 | system net work sloution mysore | – | – | 14692 |

| | | | | |
|---|---|---|---|---|
| 17 | NDC bill | 497043 | 24.07.2017 | 5000 |
| 18 | NDC bill | 981681 | 29.01.2018 | 5000 |
| 19 | AC bill | 117104 | 06.09.2017 | 5000 |
| 20 | AC bill | 497020 | 19.05.2017 | 5000 |
| | | | **ಒಟ್ಟು** | **164383** |

ಸದರಿ ಆಕ್ಷೇಪಣೆಯಲ್ಲಿ ಸೂಚಿತವಾಗಿರುವ ಬಿಲ್ಲುಗಳ ಪ್ರತಿಗಳನ್ನು ಲಗತ್ತಿಸಿದೆ.

ಆದ ಕಾರಣ ಪ್ರಸ್ಥಾವಿತ ಕಂಡಿಕೆಯ ಆಕ್ಷೇಪಣೆ ಮೊತ್ತವನ್ನು ಕೈ ಬಿಡಲು ಕೋರಿದೆ.

**102. ಶ್ರೀಮತಿ ಭಾನುಮತಿ, ಪರಿಚಾರಕರು ಇವರ ಸೇವಾವಹಿ ಅಪೂರ್ಣಗೊಂಡಿರುವ ಬಗ್ಗೆ :– (ಯುವರಾಜ ಕಾಲೇಜು)**

ಯುವರಾಜ ಕಾಲೇಜಿನ 2017–18ನೇ ಸಾಲಿನ ಲೆಕ್ಕಪರಿಶೋಧನೆಯಲ್ಲಿ ಅಧ್ಯಾಪಕೇತರ ನೌಕೆರರ ಸೇವಾವಹಿಗಳನ್ನು ಪರಿಶೀಲಿಸಲಾಗಿ ಶ್ರೀಮತಿ ಭಾನುಮತಿ ಪರಿಚಾರಕರು ಇವರ ಸೇವಾವಹಿಯು ಅಪೂರ್ಣಗೊಂಡಿರುತ್ತದೆ ದಿನಾಂಕ:08.02.2016ರವರಗೆ ಮಾತ್ರ ವಿವರಗಳನ್ನು ನಮೂದಿಸಲಾಗಿದೆ ಗಳಿಕೆ ರಜೆ ವಿವರಗಳನ್ನು 2014 ರವರೆಗೆ ಹಾಗೂ ಅವರ ಸಂಬಳ ರಜೆ ವಿವರಗಳನ್ನು 2016ರವರೆಗೆ ಮಾತ್ರ ನಮೂದಿಸಲಾಗಿದೆ ಈ ಸಂಬಂಧ ಲೆಕ್ಕತಪಾಸಣಾ ಪತ್ರ ಸಂಖ್ಯೆ:17/2019–20 ದಿನಾಂಕ:11.04.2019ರಲ್ಲಿ ವಿವರಣೆಯನ್ನು ಕೋರಲಾಗಿ ವಿವರಗಳನ್ನು ನೀಡಿರುವುದಿಲ್ಲ ಸದರಿಯವರ ಸೇವಾವಹಿಯಲ್ಲಿ ಅಪೂರ್ಣಗೊಂಡಿರುವ ವಿವರಗಳನ್ನು ಪೂರ್ಣಗೊಳಿಸಲು ಸೂಚಿಸಿದೆ.

ಪ್ರಸ್ಥಾವಿಕ ಕಂಡಿಕೆಯಲ್ಲಿನ ವಿಷಯಕ್ಕೆ ಸಂಬಂಧಿಸಿದಂತೆ 2017–18ನೇ ಸಾಲಿನ ಲೆಕ್ಕಪರಿಶೋಧನೆ ವರದಿಯಲ್ಲಿ ಸೂಚಿತವಾಗಿರುವ ಶ್ರೀಮತಿ ಭಾನುಮತಿ, ಪರಿಚಾರಕರು ಇವರ ಸೇವಾವಹಿಯನ್ನು ರಜೆ ವಿವರಗಳೊಂದಿಗೆ ಪೂರ್ಣಗೊಳಿಸಲಾಗಿದೆ ಮತ್ತು ಸದರಿಯವರು ನಿವೃತ್ತಿ ಹೊಂದಿದ ಹಿನ್ನೆಲೆಯಲ್ಲಿ ಸೇವಾವಹಿಯಲ್ಲಿ ದಾಖಲಿಸಬೇಕಾದ ಎಲ್ಲಾ ವಿವರಗಳನ್ನು ಪೂರ್ಣವಾಗಿ ದಾಖಲಿಸಲಾಗಿದೆ. ಸದರಿಯವರ ಪಿಂಚಣಿ ಇತ್ಯರ್ಥವಾಗಿದೆ ಎಂಬ ಅಂಶವನ್ನು ಲೆಕ್ಕ ಪರಿಶೋಧನೆ ಅವಗಾಹನೆಗೆ ತರಲಾಗಿದೆ. ಆದ್ದರಿಂದ ಕಂಡಿಕೆ ಕೈ ಬಿಡಲು ಕೋರಿದೆ.

**103. ರಶೀದಿ ಪುಸ್ತಕಗಳ ಪರಿಶೀಲನೆ ಹಾಗೂ ಸ್ವೀಕೃತಿಯಾದ ಮೊಬಲಗಿನ ವಿವರ:– (ಪ್ರಸಾರಾಂಗ) ಸಾಲದ ರಶೀದಿ ಪುಸ್ತಕಗಳಿಂದ ವಸೂಲಾಗಿರುವ ಹಣದ ವಿವರ:–**

2017–18ನೇ ಸಾಲಿನಲ್ಲಿ ಪ್ರಸಾರಾಂಗದ ಕಛೇರಿಯಿಂದ ಕೆಲವು ಪುಸ್ತಕಗಳನ್ನು ಸಾಲದ ರೂಪದಲ್ಲಿ ಮಾರಾಟ ಮಾಡಲಾಗಿದ್ದು ಸಾಲದ ರೂಪದಲ್ಲಿ ಮರಾಟ ಮಾಡಲಾಗಿರುವ ಪುಸ್ತಕಗಳ ಒಟ್ಟು ಮೌಲ್ಯ ರೂ.17,85,837/–ಗಳಾಗಿದ್ದು ಮಾರಾಟ ಮಾಡಲಾದ ಪುಸ್ತಕಗಳ ಒಟ್ಟು ಮೊತ್ತವು ವಸೂಲಾಗಿರುವುದು ಕಂಡುಬಂದಿಲ್ಲವಾದ್ದರಿಂದ ಸಾಲದ ರೂಪದಲ್ಲಿ ನೀಡಲಾದ ಪುಸ್ತಕಗಳ ಒಟ್ಟು ಮೌಲ್ಯ ರೂ.17,85,837/–ಗಳನ್ನು ವಸೂಲಿಸಿ ಕ್ರಮಕೈಗೊಂಡು ವಿಶ್ವವಿದ್ಯಾನಿಲಯದ ನಿಧಿಗೆ ಜಮೆ ಮಾಡಿ ವಿವರವನ್ನು ಒದಗಿಸುವುದು ವಿವರವನ್ನು **ಅನುಬಂಧ–55 ರಲ್ಲಿ ಒದಗಿಸಲಾಗಿದೆ.**

2017–18ನೇ ಸಾಲಿನಲ್ಲಿ ಪ್ರಸಾರಾಂಗದ ವತಿಯಿಂದ ಸಾಲದ ರೂಪದಲ್ಲಿ ಮಾರಾಟ ಮಾಡಿದ್ದ ಪುಸ್ತಕಗಳ ಒಟ್ಟು ಮೌಲ್ಯ **ರೂ.17,85,837/–ಗಳು** (ಅನುಬಂಧ–55) ಸ್ವೀಕೃತಗೊಂಡ ಮೊತ್ತದ ವಿವರ ಮತ್ತು ಸದರಿ ಮೊತ್ತವನ್ನು ಸಂಬಂಧಪಟ್ಟ ನಿಧಿಗಳಿಗೆ ಜಮಾ ಮಾಡಿರುವ ವಿವರಗಳನ್ನು ಕೆಳಗೆ ವಿವರಿಸಿರುವಂತೆ ಒದಗಿಸಲಾಗಿರುತ್ತದೆ.

2017–18ನೇ ಸಾಲಿನಲ್ಲಿ ಸಾಲದ ರೂಪದಲ್ಲಿ ಮಾರಾಟ ಮಾಡಲಾಗಿರುವ ಪುಸ್ತಕಗಳು ದಿನಾಂಕ;07.04.2017 ರಿಂದ 29.12.2017 ರವರೆಗೆ **ರಶೀದಿ ಪುಸ್ತಕ ಸಂಖ್ಯೆ:–17ರ** ರಶೀದಿ ಸಂಖ್ಯೆ:–818 ರಿಂದ 850 ರವರೆಗೆ **ರೂ.17,35,107/–ಗಳು** ಮತ್ತು ದಿನಾಂಕ:17.02.2018 ರಿಂದ 16.03.2018 ರವರೆಗೆ ರಶೀದಿ ಪುಸ್ತಕ ಸಂಖ್ಯೆ:–18ರ ರಶೀದಿ ಸಂಖ್ಯೆ:856 ರಿಂದ 859ರವರೆಗೆ **ರೂ.50,730/–ಗಳು** ಸೇರಿದಂತೆ ಒಟ್ಟು ಮೊತ್ತ **ರೂ.17,85,837/–ಗಳು** ಸ್ವೀಕೃತಿಗೊಂಡಿದ್ದು ಸದರಿ ಮೊತ್ತವನ್ನು ವಸೂಲಾದಂತೆ ವಿವಿಧ ದಿನಾಂಕಗಳಲ್ಲಿ ಅಂದರೆ

| | |
|---|---|
| | **17.04.2017 ರಿಂದ ದಿನಾಂಕ:10.07.2018 ರವರೆಗೆ ಒಟ್ಟು ಮೊತ್ತ ರೂ.17,85,837/–ಗಳನ್ನು ವಿಶ್ವವಿದ್ಯಾನಿಲಯದ ಆವರ್ತನಾ ನಿಧಿ, ಕನ್ನಡ ವಿಶ್ವಕೋಶ ಮತ್ತು ಶತಮಾನೋತ್ಸವ ನಿಧಿಯ** ಲೆಕ್ಕಕ್ಕೆ ಚಲನ್ ಮೂಲಕ ಸಂದಾಯ ಮಾಡಲಾಗಿರುತ್ತದೆ. ಸ್ವೀಕೃತಿ ಮೊತ್ತದ ರಶೀದಿ ಸಂಖ್ಯೆ ಮತ್ತು ದಿನಾಂಕ ಹಾಗೂ ಚಲನ್ ನಂಬರ್ ದಿನಾಂಕದ ವಿವರಗಳ ಪಟ್ಟಿ ಮತ್ತು ಖಾತೆಗೆ ಜಮೆಯಾಗಿರುವ ಬ್ಯಾಂಕ್ ಸ್ಟ್ರೋಲ್ ಪ್ರತಿ ಲಗತ್ತಿಸಿ ಸಲ್ಲಿಸುತ್ತಾ **ಕಂಡಿಕೆಯಲ್ಲಿನ ವಸೂಲಾತಿ ಮೊತ್ತ ರೂ.17,85,837/–ಗಳನ್ನು ತೀರುವಳಿಗೊಳಿಸುವಂತೆ ಕೋರಿದೆ.** |
| **104. ಶ್ರೀಮತಿ /ಕುಮಾರಿ ನಗೀನ್ ತಾಜ್ ಗ್ರೂಪ್ ಹೆಡ್ ಇವರಿಗೆ ನಿಯಮ ಉಲ್ಲಂಘಿಸಿ ಹೊಸ ಪಿಂಚಣಿ ಯೋಜನೆ (ಎನ್,ಪಿ,ಎಸ್) ಗೆ ಬದಲಾಗಿ ಹಳೆ ಪಿಂಚಣಿ ಯೋಜನೆ ಜಾರಿಗೊಳಿಸಿರುವುದು :– (ಮುದ್ರಣಾಲಯ ಮತ್ತು ಲೇಖನ ಸಾಮಗ್ರಿ)**<br><br>2017–18ನೇ ಸಾಲಿನ ಲೆಕ್ಕಪರಿಶೋಧನೆಯಲ್ಲಿ ಶ್ರೀಮತಿ/ಕುಮಾರಿ ನಗೀನ್ ತಾಜ್ ಗ್ರೂಪ್ ಹೆಡ್ ಇವರ ಸೇವಾವಹಿಯನ್ನು ಪರಿಶೀಲಿಸಲಾಗಿ ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ:FD(SPL)/04/PET/2005 ದಿನಾಂಕ:31.03.2006ರ ಆದೇಶದನ್ವಯ ದಿನಾಂಕ;01.04.2006ರ ನಂತರ ಕೆಲಸಕ್ಕೆ ವರದಿ ಮಾಡಿಕೊಳ್ಳುವ ನೌಕರರು ಮತ್ತು ಖಾಯಂ ನೇಮಕಾತಿ ಹೊಂದುವ ನೌಕರರುಗಳಿಗೆ ನೂತನ ಪಿಂಚಣಿ ಯೋಜನೆಯನ್ನು ಜಾರಿಗೊಳಿಸಬೇಕಾಗಿರುತ್ತದೆ.<br><br>ನಗೀನ್ ತಾಜ್ ಗ್ರೂಪ್ ಹೆಡ್ ಇವರ ಸೇವಾ ವಹಿಯನ್ನು ಪರಿಶೀಲಿಸಲಾಗಿ ವಿಶ್ವವಿದ್ಯಾನಿಲಯ ಆದೇಶ ಸಂಖ್ಯೆ:ಇಟಿ/355(01 ಟು 35)/200–04 ದಿನಾಂಕ:01.08.2000 ರ ಆದೇಶದನ್ವಯ ದಿನಾಂಕ:01.08.2006 ರಂದು ನೇಮಕಾತಿ ಹೊಂದಿ ಕೆಲಸಕ್ಕೆ ವರದಿ ಮಾಡಿಕೊಂಡಿರುತ್ತಾರೆ ಇವರಿಗೆ ನೂತನ ಪಿಂಚಣಿ ಯೋಜನೆಯನ್ನು ಜಾರಿಗೊಳಿಸಿದ್ದು ತದನಂತರ ವಿಶ್ವವಿದ್ಯಾನಿಲಯ ಆದೇಶ ಸಂಖ್ಯೆ: ಇಟಿ/355/2003–04 ದಿನಾಂಕ:04.072017 ರ ಆದೇಶಗಳನ್ವಯ ಸದರಿ ಉದ್ಯೋಗಿಯನಗನು ನೂತನ ಪಿಂಚಣಿ ಯೋಜನೆಯಿಂದ ಹಳೆಯ ಪಿಂಚಣಿ ಯೋಜನೆಗೆ ಮಾರ್ಪಾಡಿಸಿ ನೂತನ ಪಿಂಚಣಿ ಯೋಜನೆಯನ್ವಯ ಪ್ರತಿ ಮಾಹೆಯನ್ನು ಎನ್,ಪಿ,ಎಸ್ ವಂತಿಗೆ ಕಟಾಯಿಸಿರುವ ಮೊತ್ತ ರೂ.1,05,708/–ಗಳನ್ನು ಸದರಿ ನೌಕರರಿಗೆ ಹಿಂದಿರುಗಿಸಿರುವುದನ್ನು ಲೆಕ್ಕ ತಪಾಸಣೆಯಲ್ಲಿ ಪರಿಶೀಲಿಸಲಾಗಿದ್ದು ಸರ್ಕಾರಿ ಆದೇಶ ಸಂಖ್ಯೆ: FD(SPL)/04/PET/2005 ಬೆಂಗಳೂರು ದಿನಾಂಕ:31.03.2006 ರ ಆದೇಶವನ್ನು ಉಲ್ಲಂಘಿಸಿ ಹಳೆಯ ಪಿಂಚಣಿ ಯೋಜನೆಗೆ ಒಳಪಡಿಸಿರುವ ಬಗ್ಗೆ ಸಿಂಡಿಕೇಟ್ ಸಭೆಯ ನಿರ್ಣಯ ಕೈಗೊಂಡು ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯಿದೆ–2000ರ ನಿಯಮ 41(5) ರನ್ವಯ ಸಿಂಡಿಕೇಟ್ ಸಭೆಯಲ್ಲಿ ಕೈಗೊಂಡಿರುವ ನಿರ್ಣಯಗಳನ್ನು ಸಲ್ಲಿಸಿ ನಿಯಮ (6) ರನ್ವಯ ಸಿಂಡಿಕೇಟ್ ಸಭೆಯ ನಿರ್ಣಯದ ಪರಿನಿಯಮಾವಳಿಗಳಿಗೆ ಸರ್ಕಾರ ತಿದ್ದುಪಡಿಗಳೊಂದಿಗೆ ಸಲ್ಲಿಸಲಾದ ಸಿಂಡಿಕೇಟ್ | ಶ್ರೀಮತಿ/ಕುಮಾರಿ ನಗೀನ್ ತಾಜ್ ರವರು ಮೈಸೂರು ವಿಶ್ವವಿದ್ಯಾನಿಲಯದ ಮುದ್ರಣಾಲಯಲ್ಲಿ **ಪ್ರಿಂಟರ್ ಗ್ರೇಡ್–2 ಹುದ್ದೆಯಲ್ಲಿ ತಾತ್ಕಾಲಿಕ ನೌಕರರಾಗಿ ದಿನಾಂಕ:28.06.1992ರಲ್ಲಿ** ನೇಮಕಗೊಂಡು ತಾತ್ಕಾಲಿಕ ನೌಕರರಾಗಿ 10 ವರ್ಷಗಳ ಸೇವೆಯನ್ನು **ದಿನಾಂಕ:27.06.2002ರಂದು** ಪೂರೈಸಿರುತ್ತಾರೆ<br><br>ದಿನಾಂಕ:15.04.2014ರ ಸಿಂಡಿಕೇಟ್ ಸಭೆಯ ತೀರ್ಮಾನ ಹಾಗೂ ಮಾನ್ಯ ಕುಲಪತಿಗಳ ಅನುಮೋದನೆ ಮೇರೆಗೆ ವಿಶ್ವವಿದ್ಯಾನಿಲಯದ **ಆದೇಶ ಸಂಖ್ಯೆ:ಇಡಿ/355/ 2003–04 ದಿನಾಂಕ:18.01.2019ರ ಉಲ್ಲೇಖ (2ರ)** ದಿನಾಂಕ: 10.01.2013ರ ಬೆಂಗಳೂರಿನ ಕರ್ನಾಟಕ ಆಡಳಿತ ಟ್ರಿಬ್ಯೂನಲ್ ನ್ಯಾಯಾಲಯದ ತೀರ್ಪು **ಉಲ್ಲೇಖ (3ರ) ದಿನಾಂಕ:03.07.2013 ಬೆಂಗಳೂರಿನ ಉಚ್ಛ ನ್ಯಾಯಾಲಯದ ತೀರ್ಪು** ಮತ್ತು **ಉಲ್ಲೇಖ(4) ರ ದಿನಾಂಕ:25.11.2013ರ** ಸರ್ವೋಚ್ಛ ನ್ಯಾಯಲಯದ ತೀರ್ಪುಗಳ ಅನ್ವಯ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ವಿವಿಧ ಹುದ್ದೆಗಳ ಎದುರಾಗಿ ತಾತ್ಕಾಲಿಕ ನೌಕರರುಗಳಾಗಿ ಕಾರ್ಯ ನಿರ್ವಹಿಸುತ್ತಿದ್ದ ಹಾಗೂ ಸರ್ವೋಚ್ಛ ನ್ಯಾಯಾಲಯದ ತೀರ್ಪಿನಂತೆ 10 ವರ್ಷಗಳ ಸೇವೆಯನ್ನು **ಪೂರ್ಣಗೊಳಿಸಿದ ದಿನಾಂಕದಿಂದಲೇ 31 ಮಂದಿ** ಉದ್ಯೋಗಿಗಳಿಗೆ ಕಾಲ್ಪನಿಕವಾಗಿ ವೇತನ ನಿಗದಿಪಡಿಸಲಾಗಿದ್ದು **(ಸದರಿಯವರ ಕ್ರಮ ಸಂಖ್ಯೆ–21)** ಆ ದಿನಾಂಕದಿಂದಲೇ ಅವರುಗಳಿಗೆ ಹಳೆಯ ಪಿಂಚಣಿ ಸೌಲಭ್ಯವನ್ನು ಹಾಗೂ ರಜೆ ಸೌಲಭ್ಯವನ್ನು ವಿಸ್ತರಿಸಲಾಗಿದ್ದು ಇವರುಗಳ ಸೇವಾ ಹಿರಿತವನ್ನು ಖಾಯಂಗೊಂಡ ದಿನಾಂಕದಿಂದ ಪರಿಗಣಿಸಿರುವುದಾಗಿ ನಿವೇದಿಸುತ್ತಾ **ಕಂಡಿಕೆಯಲ್ಲಿನ ವಸೂಲಾತಿ ಮೊತ್ತ ರೂ.1,05,708/–ಗಳನ್ನು ತೀರುವಳಿಗೊಳಿಸುವಂತೆ ಕೋರಿದೆ.** |

| | |
|---|---|
| ಸಭೆಯ ನಿಯಮಗಳು/ಪರಿನಿಯಮಗಳಿಗೆ ಘನತವೆತ್ತ ಸನ್ಮಾನ್ಯ ಕುಲಾಧಿಪತಿಗಳಿಂದ ಅನುಮೋದನೆ ಪಡೆದು ಸಿಂಡಿಕೇಟ್ ಸಭೆಯ ನಿರ್ಣಯಗಳನ್ನು ಜಾರಿಗೊಳಿಸಬೇಕಾಗಿರುತ್ತದೆ ಆದರೆ ಸದರಿ ನೌಕರರು ಹಾಗೂ ಇನ್ನಿತರೆ ನೌಕರರುಗಳಿಗೆ ದಿನಾಂಕ:01.08.2006 ರಲ್ಲಿ ಖಾಯಂ ನೌಕರರಾಗಿ ನೇಮಕ ಹೊಂದಿದ್ದು ಇವರಿಗೆ ಸರ್ಕಾರಿ ಆದೇಶ ಮತ್ತು ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯ ಕಾಯಿದೆ–2000 ನಿಯಮ–2000 ರ ನಿಯಮ 41(5) 41(6) 41(6) 41(7) ನ್ನು ಉಲ್ಲಂಘಿಸಿ ಹಳೆಯ ಪಿಂಚಣಿ ಯೋಜನೆಯನ್ನು ಜಾರಿಗೊಳಿಸಿರುವುದಕ್ಕೆ ಸರ್ಕಾರದ ಆದೇಶ ಮತ್ತು ಮಾನ್ಯ ಘನತವೆತ್ತ ಕುಲಾಧಿಪತಿಯವರಿಂದ ಅನುಮೋದನೆಯಾಗಿರುವ ಆದೇಶಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸುವಂತೆ ಲೆಕ್ಕತಪಾಸಣಾ ವಿಚಾರಣಾ ಪತ್ರ ಸಂಖ್ಯೆ:6/2018–19 ದಿನಾಂಕ:27.03.2019 ರಲ್ಲಿ ಕೋರಲಾಗಿ ಆದೇಶಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸದಿರುವುದರಿಂದ ನೂತನ ಪಿಂಚಣಿ ಯೋಜನೆಯಿಂದ (ಎನ್,ಪಿ,ಎಸ್) ಹಳೆಯ ಪಿಂಚಣಿ ಯೋಜನೆ ಒಳಪಡಿಸಿರುವುದನ್ನು ಆಕ್ಷೇಪಿಸಲಾಗಿದ್ದು ಸದರಿ ಉದ್ಯೋಗಿಯನ್ನು ಹಾಗೂ ಇನ್ನಿತರೇ ಉದ್ಯೋಗಿಗಳಿಗೆ ಜಾರಿ ಮಾಡಿದ್ದಲ್ಲಿ ಹಳೆಯ ಪಿಂಚಣಿ ಯೋಜನೆಯನ್ನು ರದ್ದುಗೊಳಿಸಿ ನೂತನ ಪಿಂಚಣಿ ಯೋಜನೆಗೆ ಒಳಪಡಿಸುವಂತೆ ಸೂಚಿಸಿದೆ ಹಾಗೂ ಎನ್,ಪಿ,ಎಸ್ ವಂತಿಗೆ ಹಿಂದಿರುಗಿಸಿರುವ ಮೊತ್ತ ರೂ.1,05,708/–ಗಳನ್ನು ನೌಕರರಿಂದ ಎನ್,ಪಿ,ಎಸ್ ನಿಧಿಗೆ ಜಮಾ ಮಾಡುವುದು. | |
| **<u>105. ಯು,ಜಿ,ಸಿ ವೇತನ ಪಡೆಯುತ್ತಿರುವ ಖಾಯಂ ಬೋಧಕ ವರ್ಗದವರಿಗೆ ಗೌರವ ಸಂಭಾವನೆ ಪಾವತಿಸಿರುವುದು (ವಿದ್ಯಾರ್ಥಿ ಕ್ಷೇಮಪಾಲನ ವಿಭಾಗ)</u>**<br>2017–18ನೇ ಸಾಲಿನ ಲೆಕ್ಕಪರಿಶೋಧನೆಯಲ್ಲಿ ಎ,ಸಿ ಬಿಲ್ಲಿನಲ್ಲಿ ವೆಚ್ಚ ಭರಿಸಲಾದ ದಾಖಲಾತಿಗಳನ್ನು ಪರಿಶೀಲಿಸಲಾಗಿ ಬಿ,ಆರ್ ಸಂಖ್ಯೆ:88/2017–18 ದಿನಾಂಕ:05.02.2018 ಚೆಕ್ ಸಂಖ್ಯೆ:952572 ದಿನಾಂಕ:07.02.2018ರ ಹೊಂದಾಣಿಕೆ ಬಿಲ್ಲುಗಳಲ್ಲಿ ವಿಶ್ವವಿದ್ಯಾನಿಲಯ ಕಾಲೇಜುಗಳ ವಾರ್ಷಿಕ ಸಂಚಿಕೆಗಳ ಮೌಲ್ಯಮಾಪನ ಮತ್ತು ಬಹುಮಾನ ಆಯ್ಕೆ ಪ್ರಕ್ರಿಯೆಯ ಸಭೆಯಲ್ಲಿ ಭಾಗವಹಿಸಿದ ವಿಶ್ವವಿದ್ಯಾನಿಲಯ ಯು,ಜಿ,ಸಿ ವೇತನ ಪಡೆಯುತ್ತಿರುವ ಖಾಯಂ ಬೋಧಕ ಸಿಬ್ಬಂದಿಗೆ ಗೌರವ ಸಂಭಾವನೆಯನ್ನು ಪಾವತಿಸಿರುವುದನ್ನು ಗಮನಿಸಲಾಗಿದೆ ಆರನೇ ಪರಿಷ್ಕೃತ ಯು,ಜಿ,ಸಿ ನಿಯಮಾವಳಿಯನ್ವಯ ಹಾಗೂ ಕೆ,ಸಿ,ಎಸ್,ಆರ್ ನಿಯಾವಳಿ 28(ಎ) (ಬಿ) (ಸಿ) ಹಾಗೂ (ಇ) ಗಳನ್ವಯ ಸಭೆ, ಸಮಿತಿಗಳಿಗೆ ಹಾಜರಾಗುವುದು ಖಾಯಂ ಬೋಧಕ ಸಿಬ್ಬಂದಿಯ ದಿನ ನಿತ್ಯದ ಕರ್ತವ್ಯದ ಒಂದು ಭಾಗವಾಗಿರುವುದರಿಂದ ಸಂಭಾವನೆ/ಭತ್ಯೆಗಳನ್ನು ಪಡೆಯಲು ಅವಕಾಶವಿರುವುದಿಲ್ಲ ಆದರೆ ಮಾನ್ಯ ಕುಲಪತಿಗಳು ಮತ್ತು ಕುಲಸಚಿವರು ಯಾವುದೇ ಆದೇಶಗಳನ್ನು/ಆದ್ಯಾದೇಶಗಳನ್ನು ಜಾರಿಗೆ ತರುವ ಮುನ್ನ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000ರ ನಿಯಮ 41(5) (6) (7) ರನ್ವಯ ಸರ್ಕಾರದಿಂದ ಹಾಗೂ ಗೌರವಾನ್ವಿತ ಕುಲಾಧಿಪತಿಗಳಿಂದ ಅನುಮೋಧನೆಯನ್ನು ಪಡೆಯಬೇಕಾಗಿರುತ್ತದೆ ಆದರೆ ಯಾವುದೇ ಅನುಮೋದನೆಯನ್ನು ಪಡೆಯದೆ ಕುಲಸಚಿವರ ಆದೇಶದನ್ವಯ ಗೌರವ ಸಂಭಾವನೆಯನ್ನು ಪಾವತಿಸಿರುವುದು ಈ ಮೇಲೆ ತಿಳಿಸಿರುವ ನಿಯಮಗಳ ಉಲ್ಲಂಘನೆಯಾಗಿರುವುದರಿಂದ ರೂ.3,000/–ಗಳನ್ನು ಸಂಬಂಧಪಟ್ಟ ಬೋಧಕರಿಂದ ವಸೂಲಿಸಿ ಸಂಬಂಧಪಟ್ಟ ಖಾತೆಗೆ ಜಮಾ ಮಾಡಿ ವಿವರಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸುವಂತೆ ಸೂಚಿಸಿದೆ. ವಿವರಗಳು ಈ | ಮೈಸೂರು ವಿಶ್ವವಿದ್ಯಾನಿಲಯದ ಅಂಗ ಮತ್ತು ಸಂಯೋಜಿತ ಕಾಲೇಜುಗಳಲ್ಲಿ 2016–17 ನೇ ಸಾಲಿನಲ್ಲಿ ಪ್ರಕಟಗೊಂಡ ವಾರ್ಷಿಕ ಸಂಚಿಕೆಗಳ ಪೈಕಿ ಉತ್ತಮ ವಾರ್ಷಿಕ ಸಂಚಿಕೆಗಳಿಗೆ ಬಹುಮಾನವನ್ನು ನೀಡುವ ಸಂಬಂಧವಾಗಿ ತಜ್ಞರ ಸಮಿತಿಯನ್ನು ರಚಿಸಿದ್ದು ಉತ್ತಮ ವಾರ್ಷಿಕ ಸಂಚಿಕೆಗಳಿಗೆ ಬಹುಮಾನ ನೀಡಲು ಬಹುಮಾನದ ಮೊತ್ತ ರೂ.22000/–ಗಳು ಹಾಗೂ ತಜ್ಞರ ಸಂಭಾವನೆ ರೂ.3,000/–ಗಳು ಸೇರಿದಂತೆ ಒಟ್ಟು ರೂ.25,000/–ಗಳನ್ನು ಮುಂಗಡ ಹುಂಡಿಯ ಮೂಲಕ ಪಡೆಯಲು ವಿಶ್ವವಿದ್ಯಾನಿಲಯದ ಆದೇಶ ಸಂಖ್ಯೆ:ವಿಕ್ಷೇಪಾ7/2617/2017–18 ದಿನಾಂಕ: 30.01.2018 ರಂದು ಅನುಮೋದನೆ ನೀಡಿರುವ ಹಿನ್ನಲೆಯಲ್ಲಿ ಆಯ್ಕೆ ಸಮಿತಿಯ ಸದಸ್ಯರು ಹಾಗೂ ತೀರ್ಪುಗಾರರಾಗಿ ಭಾಗವಹಿಸಿದ ಮೂರು ಮಂದಿ ತಜ್ಞರುಗಳಿಗೆ ತಲಾ ರೂ.1000/–ಗಳಂತೆ ಒಟ್ಟು ರೂ.3000/–ಗಳನ್ನು ಗೌರವ ಧನವಾಗಿ ನೀಡಲಾಗಿರುತ್ತದೆ, ಬಿ.ಆರ್ ಸಂಖ್ಯೆ:88/2017–18 ದಿನಾಮಕ:05.02.2018ರ ಮುಂಗಡ ಬಿಲ್ಲಿನ ಮೊತ್ತ ರೂ.25,000/–ಗಳನ್ನು ಎನ್.ಡಿ.ಸಿ ಬಿಲ್ಲಿನ ಮೂಲಕ ಹೊಂದಾಣಿಕೆ ಮಾಡಲಾಗಿರುತ್ತದೆ. ಮುಂಗಡ ಲೆಕ್ಕಪತ್ರದ ಹೊಂದಾಣಿಕೆಯ ಓಚರ್‌ಗಳ ಪ್ರತಿ ಮತ್ತು ಹೊಂದಾಣಿಕೆ ಪ್ರಪತ್ರದ ಪ್ರತಿಗಳನ್ನು ಲಗತ್ತಿಸಿ ಸಲ್ಲಿಸುತ್ತಾ **ಕಂಡಿಕೆಯಲ್ಲಿನ ವಸೂಲಾತಿ ಮೊತ್ತ ರೂ.3000/–ಗಳನ್ನು ತೀರುವಳಿಗೊಳಿಸುವಂತೆ ಕೋರಿದೆ.** |

ಕೆಳಕಂಡಂತಿದೆ.

| ಕ್ರ ಸಂ | ಬೋಧಕ ಸಿಬ್ಬಂದಿಯ ಹೆಸರು | ಸಂಭಾವನೆ ಮೊಬಲಗು (ರೂ.ಗಳಲ್ಲಿ) | ಷರಾ |
|---|---|---|---|
| 1 | ಪ್ರೊ॥ ಗಂಗಾನಾಯ್ಕ್ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸ ಗಂಗೋತ್ರಿ | 1000 | |
| 2 | ಪ್ರೊ॥ ಎನ್ ಉಷಾರಾಣಿ ಪತ್ರಿಕೋದ್ಯಮ ವಿಭಾಗ ಮಾನಸ ಗಂಗೋತ್ರಿ | 1000 | |
| 3 | ಪ್ರೊ॥ ಎಂ,ಹೆಚ್ ರುದ್ರಮುನಿ ಇಂಗ್ಲೀಷ್ ಅಧ್ಯಯನ ಸಂಸ್ಥೆ ಮಾನಸ ಗಂಗೋತ್ರಿ | 1000 | |
| | ಒಟ್ಟು | **3000** | |

**106. ಸಂಭಾವನೆಯನ್ನು ನಿಯಮಬಾಹಿರವಾಗಿ ಪಾವತಿ ಮಾಡಿರುವುದು:–(ಕಾಲೇಜು ಅಭಿವೃದ್ಧಿ ಮಂಡಳಿ)**

2017–18ನೇ ಸಾಲಿನ ಲೆಕ್ಕಪರಿಶೋಧನೆಯಲ್ಲಿ ಹಾಜರುಪಡಿಸಿದ ವೋಚರ್‌ಗಳನ್ನು ಪರಿಶೀಲಿಸಲಾಗಿ ಸಂಕ್ಷಿಪ್ತ ಸಾದಿಲ್ವಾರು/ಸವಿವರ ಸಾದಿಲ್ವಾರು ಬಿಲ್ಲುಗಳ ಮೂಲಕ ಹಣ ಡ್ರಾ ಮಾಡಿ ವಿವಿಧ ಕಾಲೇಜುಗಳಿಗೆ ಭೇಟಿ ನೀಡುವ ಸಲುವಾಗಿ ಯು,ಜಿ,ಸಿ ವೇತನ ಪಡೆಯುತ್ತಿರುವ ಅಧ್ಯಾಪಕರುಗಳಿಗೆ ಸಂಭಾವನೆ ಪಾವತಿಸಲಾಗಿದೆ

ಯು,ಜಿ,ಸಿ ವೇತನವನ್ನು ಪಡೆಯುತ್ತಿರುವ ಅಧ್ಯಾಪಕರುಗಳು ವಿವಿಧ ಕಾಲೇಜುಗಳಿಗೆ ಭೇಟಿ ನೀಡುವ ಕಾರ್ಯಕ್ರಮವೂ ಸಹ ಕರ್ತವ್ಯದ ಒಂದು ಭಾಗವಾಗಿರುವುದರಿಂದ ಕೆ,ಸಿಎಸ್,ಆರ್ ನಿಯಮ 28 (ಸಿ) ರನ್ವಯ ವಿಶೇಷ ಕರ್ತವ್ಯಗಳಿಗೆ ಸರ್ಕಾರದ ವಿಶೇಷ ಆದೇಶದ ಮೂಲಕ ಅನ್ಯತಾ ಉಪಬಂದಿಸಿದ್ದನ್ನು ಬಿಟ್ಟು ವಿಶೇಷ ಅನುಮತಿಯಿಲ್ಲದೆ ಯಾವುದೇ ಸಂಭಾವನೆಯನ್ನು ಪಾವತಿಸುವಂತಿಲ್ಲ

ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000 ರ ನಿಯಮ 41(5) (6) 97) ರನ್ವಯ ಯಾವುದೇ ಆದೇಶಗಳನ್ನು ಮಾಡುವಾಗ ಸಿಂಡಿಕೇಟ್ ಸಭೆಯ ಅನುಮೋದನೆಯೊಂದಿಗೆ ಸರ್ಕಾರ ಗೌರವಾನ್ವಿತ ಕುಲಾಧಿಪತಿಗಳ ಅನುಮೋದನೆ ಪಡೆಯಬೇಕಾಗಿರುತ್ತದೆ

ಈ ರೀತಿ ಸಂಭಾವನೆ ನೀಡಿರುವುದಕ್ಕೆ ವಿಚಾರಣೆ ಪತ್ರ ಸಂಖ್ಯೆ:08/01.03.2019 ಯಾವುದೇ ಸ್ಪಷ್ಟೀಕರಣ ನೀಡಿರುವುದಿಲ್ಲ ಹಾಗೂ ಯು,ಜಿ,ಸಿ ವೇತನ ಪಡೆಯುತ್ತಿರುವ ಅಧ್ಯಾಪಕರಿಗೆ ನಿಯಮ ಉಲ್ಲಂಘನೆ ಮಾಡಿ ನಿಯಮಬಾಹಿರವಾಗಿ ರೂ.10,23,000/– ಪಾವತಿಸಲಾಗಿದೆ ಇದರ ಬಗ್ಗೆ ಸೂಕ್ತ ಸ್ಪಷ್ಟೀಕರಣ ನೀಡುವವರಿಗೆ ರೂ.10,23,000/–ಗಳನ್ನು ಆಕ್ಷೇಪಣೆಗೆ ಸೂಚಿಸಿದೆ ವಿವರವನ್ನು **ಅನುಬಂಧ–56**ರಲ್ಲಿ ಲಗತ್ತಿಸಿದೆ.

ವಿಶ್ವವಿದ್ಯಾನಿಲಯದ ವ್ಯಾಪ್ತಿಗೆ ಬರುವ ಒಟ್ಟು 225 ಸ್ನಾತಕ ಮತ್ತು ಸ್ನಾತಕೋತ್ತರ ಪದವಿ ಕಾಲೇಜುಗಳು ಹೊಂದಿರುವ ವಿಷಯವಾರು 108 ಸ್ನಾತಕೋತ್ತರ ಕೋರ್ಸ್‌ಗಳಿಗೆ ಪ್ರತಿ ಶೈಕ್ಷಣಿಕ ಸಾಲಿಗೆ ಸಂಯೋಜನೆ ಮುಂದುವರಿಸಿ ಪ್ರವೇಶಾತಿ ಸಂಖ್ಯೆ ನಿಗದಿಗೊಳಿಸಿ ಮೂಲಭೂತ ಸೌಲಭ್ಯಗಳನ್ನು ಪರಿಶೀಲಿನೆ ನಡೆಸಿ ಸಮಿತಿಯು ವರದಿಯನ್ನು ನೀಡಬೇಕಾಗಿರುತ್ತದೆ. ಸಮಿತಿಯು ನೀಡುವ ವರದಿಯ ಆಧಾರದ ಮೇರೆಗೆ ವಿಶ್ವವಿದ್ಯಾನಿಲಯ ಸಂಯೋಜನಾ ಆದೇಶ ಹೊರಡಿಸಲಾಗುವುದು ಈ ಪ್ರಕ್ರಿಯೆಯು ಶೈಕ್ಷಣಿಕವಾಗಿ ಬಹು ಮುಖ್ಯ ಕಾರ್ಯವಾಗಿರುತ್ತದೆ

ಸಿಂಡಿಕೇಟ್ ಪ್ರಾಧಿಕಾರದ ಹಾಗೂ ಮಾನ್ಯ ಕುಲಪತಿಗಳ ಅನುಮೋದನೆ ಮೇರೆಗೆ ಕಾಲೇಜುಗಳ ಸಂಯೋಜನೆ ಮುಂದುವರಿಸುವ ಹಾಗೂ ಕಾಲೇಜುಗಳ ಸಂಯೋಜನೆ ಪರಿಶೀಲನೆಗೆ ಸ್ಥಳೀಯ ತನಿಖಾ ಸಮಿತಿಯನ್ನು ರಚಿಸಿ ಸಮಿತಿಯ ಅಧ್ಯಕ್ಷರು ಮತ್ತು ಸದಸ್ಯರುಗಳಿಗೆ ಗೌರವ ಧನವನ್ನು ನೀಡಲಾಗುತ್ತಿದೆ ದಿನಾಂಕ:12.05.2016 ರಂದು ನಡೆದ ಸಿಂಡಿಕೇಟ್ ಸಭೆಯ ತೀರ್ಮಾನದನ್ವಯ ವಿಶ್ವವಿದ್ಯಾನಿಲಯದ ಆದೇಶ ಸಂಖ್ಯೆ:ಯುಎ2/119/2003–04 ದಿನಾಂಕ:07.06.2016 ಮತ್ತು ದಿನಾಂಕ:27.07.2016ರ ಪ್ರಕಾರ ಸಮಿತಿಯ ಅಧ್ಯಕ್ಷರು ಮತ್ತು ಸದಸ್ಯರುಗಳಿಗೆ ಗೌರವ ಧನ ರೂ.1000/– ರಂತೆ ವಿಶ್ವವಿದ್ಯಾನಿಲಯದ ವ್ಯಾಪ್ತಿಗೊಳಪಡುವ ಎಲ್ಲಾಸ್ನಾತಕ ಮತ್ತು ಸ್ನಾತಕೋತ್ತರ ಪದವಿ ಕಾಲೇಜುಗಳ ಸಂಯೋಜನೆ ಮುಂದುವರಿಸುವ ಸಂಬಂಧವಾಗಿ 2017–18ನೇ ಸಾಲಿನಲ್ಲಿ ಒಟ್ಟು ರೂ.10,23,000/–ಗಳನ್ನು ಪಾವತಿಸಲಾಗಿರುತ್ತದೆ.

ದಿನಾಂಕ:12.05.2016 ಸಿಂಡಿಕೇಟ್ ಸಭಾ ನಿರ್ಣಯ ಮತ್ತು ವಿಶ್ವವಿದ್ಯಾನಿಲಯದ ಆದೇಶದ ಪ್ರತಿಗಳನ್ನು ಈ ಕೂಡ ಲಗ್ತತಿಸಿ ಸಲ್ಲಿಸುತ್ತಾ ಕಂಡಿಕೆಯಲ್ಲಿನ **ಆಕ್ಷೇಪಣೆ ಮೊತ್ತ ರೂ.10,23,000/–ಗಳನ್ನು ತೀರುವಳಿಗೊಳಿಸುವಂತೆ ಕೋರಿದೆ.**

**107. ಶ್ರೀ ರವೀಂದ್ರಬಾಬು ಸಹಾಯಕ ಪ್ರಾಧ್ಯಾಪಕರು ಇವರಿಗೆ ಯು.ಜಿ.ಸಿ ನಿಯಮಾವಳಿ ಉಲ್ಲಂಘಿಸಿ ಖಾಯಂಗೊಳಿಸಿರುವುದು :– (ಸ್ನಾತಕೋತ್ತರ ಅಧ್ಯಯನ ಕೇಂದ್ರ ಹೇಮಗಂಗೋತ್ರಿ ಹಾಸನ)**

2017–18ನೇ ಸಾಲಿನ ಲೆಕ್ಕಪರಿಶೋಧನೆಯಲ್ಲಿ ಶ್ರೀ ರವೀಂದ್ರಬಾಬು ಸಹಾಯಕ ಪ್ರಾಧ್ಯಾಪಕರು ಸ್ನಾತಕೋತ್ತರ ಕೇಂದ್ರ ಹೇಮಗಂಗೋತ್ರಿ ಹಾಸನ ಇವರ ಸೇವಾ ವಹಿಯನ್ನು ಪರಿಶೀಲಿಸಲಾಗಿ ಸದರಿಯವರು ತಾತ್ಕಾಲಿಕ ಉಪನ್ಯಾಸಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದು ಸಹಾಯಕ ಪ್ರಾಧ್ಯಾಪಕರಾಗಿ ಖಾಯಂಗೊಳಿಸಬೇಕೆಂದು ಘನ ಉಚ್ಚನ್ಯಾಯಾಲಯದಲ್ಲಿ ದಾವೆ ಹೂಡಿದ್ದು ಘನ ಉಚ್ಚ ನ್ಯಾಯಾಲಯವು ವಾದ ಪ್ರತಿವಾದವನ್ನು ಆಲಿಸಿ ನೀಡಿರುವ ತೀರ್ಪಿನನ್ವಯ ವಿಶ್ವವಿದ್ಯಾನಿಲಯ ಆದೇಶ ಸಂಖ್ಯೆ:ಇಡಿ/2/39/2003 ದಿನಾಂಕ:07.02.2007ರ ಆದೇಶದಲ್ಲಿ ವೇತನ ಶ್ರೇಣಿ ರೂ.8,000/–ಗಳನ್ನು ನಿಗದಿಪಡಿಸಿ ಖಾಯಂಗೊಳಿಸಿ 3 ವರ್ಷಗಳ ಷರತ್ತು ಮತ್ತು ನಿಬಂಧನೆ ಮೇರೆಗೆ 3 ವರ್ಷಗಳ ಒಳಗೆ NET/SLET ಅಥವಾ Phd ಪದವಿಯನ್ನು ಹೊಂದುವಂತೆ ಷರತ್ತಿಗೊಳಪಟ್ಟು ಖಾಯಂಗೊಳಿಸಲಾಗಿರುತ್ತದೆ 1999ರ ಯು.ಜಿ.ಸಿ ಅಧಿನಿಯಮದಲ್ಲಿ ಸಹಾಯಕ ಪ್ರಾಧ್ಯಾಪಕರ ಹುದ್ದೆಗೆ NET/SLET ಅಥವಾ Phd ವಿದ್ಯಾರ್ಹತೆಯು ಅವಶ್ಯವಾಗಿರುತ್ತದೆ ಹಾಗೂ 6ನೇ ಯು.ಜಿ.ಸಿ ವೇತನ ಪರಿಷ್ಕರಣೆಯಲ್ಲಿ (ದಿನಾಂಕ:30.06.2010ರ ಆದೇಶದಂತೆ) ಸಹಾಯಕ ಪ್ರಾಧ್ಯಾಪಕರ ಹುದ್ದೆಗೆ ಸ್ನಾತಕೊತ್ತರ ಪದವಿಯಲ್ಲಿ ಶೇ 55ರ ಶ್ರೇಣಿಯಲ್ಲಿ ತೇರ್ಗಡೆ ಹೊಂದಬೇಕಾಗಿರುತ್ತದೆ ಹಾಗೂ NET/SLET ಅಥವಾ Phd ಪದವಿಗಳ ಅತ್ಯವಶ್ಯವಾಗಿರುತ್ತದೆ.

ಆದರೆ ಶ್ರೀ ರವೀಂದ್ರಬಾಬು,ಎ,ಎಸ್ ಇವರಿಗೆ ವಿಶ್ವವಿದ್ಯಾನಿಲಯದ ಆದೇಶ ಸಂಖ್ಯೆ:ಇಡಿ2/39/2003 ದಿನಾಂಕ:07.02.2007 ಆದೇಶದಲ್ಲಿನ ಷರತ್ತನ್ನು ಇದುವರೆನಿಗೂ ಪೂರ್ಣಗೊಳಿಸದಿರುವುದನ್ನು ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾಗಿದ್ದು ಸದರಿಯವರಯ 2010ರ ಒಳಗೆ ವಿಶ್ವವಿದ್ಯಾನಿಲಯದ ವಿದ್ಯಾರ್ಹತೆಯನ್ನು ಪಡೆಯಬೇಕಾಗಿರುತ್ತದೆ. NET/SLET ಅಥವಾ Phd ಪದವಿಯನ್ನು ಪಡೆಯದಿರುವುದರಿಂದ ಶ್ರೀ ರವೀಂದ್ರಬಾಬು,ಎ,ಎಸ್ ರವರ ಮೇಲೆ ನಿಯಮಾನುಸಾರ ಆಡಳಿತಾತ್ಮಕ ಕ್ರಮವಹಿಸಿ ತೆಗೆದುಕೊಂಡ ಕ್ರಮದ ಬಗ್ಗೆ ವರದಿಯನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸುವಂತೆ 2016–17ನೇ ಸಾಲಿನ ವರದಿಯಲ್ಲಿ ಸೂಚಿಸಿದ್ದರೂ ಸಹ ಇದುವರೆಗೂ ಯಾವುದೇ ಕ್ರಮ ವಹಿಸಿದ ಬಗ್ಗೆ ಮಾಹಿತಿ ಇರುವುದಿಲ್ಲ ಆದ್ದರಿಂದ ಈ ಸಂಬಂಧ ಕೂಡಲೇ ಕ್ರಮವಹಿಸುವಂತೆ ಸೂಚಿಸಿದೆ.

ಶ್ರೀ ರವೀಂದ್ರ ಬಾಬು ಎ ಎಸ್ ಇವರು 2017–18 ನೇ ಸಾಲಿನ ಅವಧಿಯವರೆಗೆ ಯಾವುದೇ NET/SLET/Ph.d ಪದವಿಯನ್ನು ಪಡೆಯದಿರುವುದರಿಂದ 2017–18 ನೇ ಸಾಲಿನ ಲೆಕ್ಕ ಪರಿಶೋಧನಾ ವರದಿಯ ಆಕ್ಷೆಪಣೆಯಂತೆ ವಿಶ್ವವಿದ್ಯಾನಿಲಯದ ಗಮನಕ್ಕೆ ತಂದು ವಿಶ್ವವಿದ್ಯಾನಿಲಯದಲ್ಲಿ ವಿ.ವಿ.ಆದೇಶ ಸಂಖ್ಯೆ ಇಟಿ10(2)334/2016–17 ದಿನಾಂಕ 29–05–2019 ರ ಆದೇಶದಂತೆ ಶ್ರೀ ರವೀಂದ್ರ ಬಾಬು ಎ ಎಸ್ ಸಹಾಯಕ ಪ್ರಾಧ್ಯಾಪಕರು ಇಂಗ್ಲೀಷ್ ವಿಭಾಗ ಸ್ನಾತಕೋತ್ತರ ಕೇಂದ್ರ ಹಾಸನ ನಿಯತಗೊಂಡ ಮೂರು ವರ್ಷದ ಅವಧಿಯೊಳಗೆ ಯುಜಿಸಿ ನಿಗದಿಪಡಿಸಿರುವ ನೇಮಕಾತಿ ಅರ್ಹತೆಗಳ ನಿಯಮಗಳ ಪ್ರಕಾರ NET/SLET/Ph.d ಅರ್ಹತೆ ಪಡೆಯದಿರುವ ಹಿನ್ನೆಲೆಯಲ್ಲಿ ಸರ್ಕಾರದ ಆದೇಶ ಸಂಖ್ಯೆ ಇಡಿ 37 ಯು.ಎನ್.ಇ 2009 ಬೆಂಗಳೂರು ದಿನಾಂಕ 24–12–2009 ಸೆಕ್ಷನ್ 7(VIII) ರಲ್ಲಿನ ನಿಯಮದ ಪ್ರಕಾರ ಇವರಿಗೆ 1996 ರ ಯುಜಿಸಿ ವೇತನ ಶ್ರೇಣಿ (Pre Revised Scale) ನಿಗದಿಪಡಿಸಲಾಗಿದೆ. ಆದೇಶದ ಪ್ರತಿ ಲಗತ್ತಿಸಿದೆ.

ಹಾಲಿ ನೀಡುತ್ತಿದ್ದ **ವೇತನ ಶ್ರೇಣಿ 15600–39100+ಎಜಿಪಿ 6000** ರೂಗಳಿಂದ ಪರಿಷ್ಕರಿಸಿ **1996 ರ ವೇತನ ಶ್ರೇಣಿ ರೂ8000–275–13500ಗಳಿಗೆ** ನಿಗದಿಪಡಿಸಿ ಈ ಕೆಳಕಂಡಂತೆ ವೇತನ ನೀಡಲಾಗುತ್ತಿದೆ.

| | | |
|---|---|---|
| 01 | ತಾತ್ಕಾಲಿಕವಾಗಿ ಉಪನ್ಯಾಸಕರಾಗಿ ಸೇವೆಗೆ ಸೇರಿದ ದಿನಾಂಕ | 09–05–2003 |
| 02 | ತಾತ್ಕಾಲಿಕ ಸೇವೆಯನ್ನು ಪರಿಗಣಿಸಿ ದಿನಾಂಕ:09–05–2003 ರಿಂದ ಜಾರಿಗೆ ಬಂದಂತೆ ನಿಗದಿಪಡಿಸಿರುವ ವೇತನ (ವೇತನ ಶ್ರೇಣಿ ರೂ.8000–275–13500) (ಕಾಲ್ಪನಿಕ) | 8000/– |
| 03 | ವಾರ್ಷಿಕ ವೇತನ ಬಡ್ತಿ ದಿನಾಂಕ 01–05–2004 | 8275/– |
| 04 | ವಾರ್ಷಿಕ ವೇತನ ಬಡ್ತಿ ದಿನಾಂಕ 01–05–2005 | 8550/– |

| | | |
|---|---|---|
| 05 | ವಾರ್ಷಿಕ ವೇತನ ಬಡ್ತಿ ದಿನಾಂಕ 01–05–2006 | 8825/– |
| 06 | ಅಧಿನಿಯಮದ ಅನುಸಾರ ಖಾಯಂ ಉಪನ್ಯಾಸಕರಾಗಿ ಸೇವೆಯಲ್ಲಿ ನಿಯತಗೊಂಡ ದಿನಾಂಕ | 07–02–2007 |
| 07 | ವಾರ್ಷಿಕ ವೇತನ ಬಡ್ತಿ ದಿನಾಂಕ 01–05–2007 | 9100/– |
| 08 | ವಾರ್ಷಿಕ ವೇತನ ಬಡ್ತಿ ದಿನಾಂಕ 01–05–2008 | 9375/– |
| 09 | ವಾರ್ಷಿಕ ವೇತನ ಬಡ್ತಿ ದಿನಾಂಕ 01–05–2009 | 9650/– |
| 10 | ವಾರ್ಷಿಕ ವೇತನ ಬಡ್ತಿ ದಿನಾಂಕ 01–05–2010 | 9925/– |
| 11 | ವಾರ್ಷಿಕ ವೇತನ ಬಡ್ತಿ ದಿನಾಂಕ 01–05–2011 | 10200/– |
| 12 | ವಾರ್ಷಿಕ ವೇತನ ಬಡ್ತಿ ದಿನಾಂಕ 01–05–2012 | 10475/– |
| 13 | ವಾರ್ಷಿಕ ವೇತನ ಬಡ್ತಿ ದಿನಾಂಕ 01–05–2013 | 10750/– |
| 14 | ವಾರ್ಷಿಕ ವೇತನ ಬಡ್ತಿ ದಿನಾಂಕ 01–05–2014 | 11025/– |
| 15 | ವಾರ್ಷಿಕ ವೇತನ ಬಡ್ತಿ ದಿನಾಂಕ 01–05–2015 | 11300/– |
| 16 | ವಾರ್ಷಿಕ ವೇತನ ಬಡ್ತಿ ದಿನಾಂಕ 01–05–2016 | 11575/– |
| 17 | ವಾರ್ಷಿಕ ವೇತನ ಬಡ್ತಿ ದಿನಾಂಕ 01–05–2017 | 11850/– |
| 18 | ವಾರ್ಷಿಕ ವೇತನ ಬಡ್ತಿ ದಿನಾಂಕ 01–05–2018 | 12125/– |
| 19 | ವಾರ್ಷಿಕ ವೇತನ ಬಡ್ತಿ ದಿನಾಂಕ 01–05–2019 | 12400/– |
| 20 | ಮುಂದಿನ ವಾರ್ಷಿಕ ವೇತನ ಬಡ್ತಿ ದಿನಾಂಕ 01–05–2019 | 12675/– |

ಸೇವಾ ಪುಸ್ತಕದಲ್ಲಿ ದಾಖಲಿಸಿರುವ ಪ್ರತಿ ಲಗತ್ತಿಸಿದ್ದು 2016–17 ಮತ್ತು 2017–18 ನೇ ಸಾಲಿನ ವರದಿಯಲ್ಲಿ ತಾವು ಸೂಚಿಸಿರುವಂತೆ ಕ್ರಮ ವಹಿಸಿ ಸದರಿಯವರ ವೇತನವನ್ನು ಪರಿಷ್ಕರಿಸಿ ತಿದ್ದುಪಡಿ ಮಾಡಿರುವುದಾಗಿ ವರದಿ ಸಲ್ಲಿಸಿದೆ.

**108. ಪ್ರವೇಶಾತಿ ವಹಿಯಲ್ಲಿ ದಾಖಲು ಇರುವಂತೆ 246 ವಿದ್ಯಾರ್ಥಿಗಳಿಗೆ ಪಾವತಿಸುವ ಬದಲು 247 ವಿದ್ಯಾರ್ಥಿಗಳಿಗೆ ಪಾವತಿಸಿ ಹೆಚ್ಚುವರಿ ಒಬ್ಬ ವಿದ್ಯಾರ್ಥಿಯ ಮೆಸ್ ಬಿಲ್ಲು ಪಾವತಿಸಿರುವುದು :– (ಗೌತಮ ವಿದ್ಯಾರ್ಥಿನಿಲಯ)**

2017–18ನೇ ಸಾಲಿನ ಗೌತಮ ವಿದ್ಯಾರ್ಥಿನಿಲಯದ SC/ST ಪ್ರವೇಶಾತಿ ವಹಿ ಹಾಗೂ ಹಾಜರಾತಿಯನ್ನು ಪರಿಶೀಲಿಸಿದಾಗ ವಹಿ ಪ್ರಕಾರ SC ವಿದ್ಯಾರ್ಥಿಗಳ ಸಂಖ್ಯೆ:190 ಹಾಗೂ ST ವಿದ್ಯಾರ್ಥಿಗಳ ಸಂಖ್ಯೆ:56 ಒಟ್ಟು 246 ಎಂದು ನಮೂದಿಸಿದೆ. ಆದರೆ ಹಾಜರಾತಿಯಲ್ಲಿ 247 ವಿದ್ಯಾರ್ಥಿಗಳಿಗೆ ಹಾಜರಾತಿ ನೀಡಿ ಹೆಚ್ಚುವರಿ ಮೆಸ್ ಬಿಲ್ಲು ಪಾವತಿಸಿರುವುದು ನಿಯಮಬಾಹಿರವಾಗಿರುತ್ತದೆ ಹೆಚ್ಚುವರಿ ಬಿಲ್ಲು ಪಾವತಿಗೆ ಸಂಬಂಧಿಸಿದಂತೆ (ವಿದ್ಯಾರ್ಥಿಕ್ಷೇಮಪಾಲನಾ ವಿಭಾಗದ) ನಿರ್ದೇಶಕರು ಕುಲಸಚಿವರಿಂದ ಅನುಮತಿ ಪಡೆದಿರುವ

2017–18ನೇ ಸಾಲಿನ ಗೌತಮ ವಿದ್ಯಾರ್ಥಿನಿಲಯದ ಪ್ರವೇಶಾತಿ ವಹಿಯಲ್ಲಿ ಒಟ್ಟು 246 ವಿದ್ಯಾರ್ಥಿಗಳು ಎಂದು ನಮೂದಿಸಿ ಹಾಜರಾತಿ ವಹಿಯಯಲ್ಲಿ 247 ವಿದ್ಯಾರ್ಥಿಗಳಿಗೆ ಹಾಜರಾತಿ ನೀಡಿ ಹೆಚ್ಚುವರಿ ಮೆಸ್ ಬಿಲ್ಲು ಪಾವತಿಸಿರುವ ಬಗ್ಗೆ ಪ್ರಸ್ತಾಪಿಸಿ ರೂ.20,400/– ಗಳನ್ನು ವಸೂಲಾತಿಗೆ ಸೂಚಿಸಲಾಗಿರುತ್ತದೆ.

2017–18ನೇ ಸಾಲಿನಲ್ಲಿ ಗೌತಮ ವಿದ್ಯಾರ್ಥಿನಿಲಯಕ್ಕೆ SC/ST ವರ್ಗಕ್ಕೆ ಸೇರಿದಂತೆ

ಯಾವುದೇ ಆದೇಶವನ್ನು ಹಾಜರುಪಡಿಸದೆ ಹಾಗೂ ಹಾಜರಾತಿಯಲ್ಲಿ ವಾರಕೊಮ್ಮೆ ಶಿಕ್ಷಕ ಸಲಹೆಗಾರರು ಪರಿಶೀಲಿಸಿ ಸಹಿ ಮಾಡದೆ ಇರುವುದರಿಂದ ಈ ಬಗ್ಗೆ ಸೂಕ್ತ ವಿವರಣೆ ನೀಡುವ ತನಕ ಹಾಗೂ ಹೆಚ್ಚುವರಿ ಬಿಲ್ಲು ಪಾವತಿಸಿರುವ ಬಿಲ್ಲಿನ ಮೊಬಲಗು ರೂ.20,400/–ಗಳನ್ನು ವಸೂಲಾತಿಗೆ ಸೂಚಿಸಿದೆ.

| ಕ್ರ ಸಂ | ಮಾಹೆ | ಪ್ರವೇಶಾತಿ ವಹಿ ಪ್ರಕಾರ ಒಟ್ಟು ವಿದ್ಯಾರ್ಥಿಗಳು | ಒಟ್ಟು ಪಾವತಿ | ಮೆಸ್ ಬಿಲ್ಲು ಹಾಜರಾತಿಯಲ್ಲಿ ಒಟ್ಟು ವಿದ್ಯಾರ್ಥಿಗಳು | ಹೆಚ್ಚು ವಿದ್ಯಾರ್ಥಿ ಮೆಸ್ ಬಿಲ್ಲು ಮೊತ್ತ (ರೂ.ಗಳಲ್ಲಿ) |
|---|---|---|---|---|---|
| 1 | ನವೆಂಬರ್2017 | 246 | 418200 | 247 419900 | 1*1700 |
| 2 | ಡಿಸೆಂಬರ್2017 | 246 | 418200 | 247 419900 | 1*1700 |
| 3 | ಅಕ್ಟೋಬರ್ 2017 | 246 | 418200 | 247 419900 | 1*1700 |
| 4 | ಸೆಪ್ಟಂಬರ್2017 | 246 | 418200 | 247 419900 | 1*1700 |
| 5 | ಏಪ್ರಿಲ್2017 | 246 | 418200 | 247 419900 | 1*1700 |
| 6 | ಮೇ 2017 | 246 | 418200 | 247 419900 | 1*1700 |
| 7 | ಮಾರ್ಚ್ 2017 | 246 | 418200 | 252 428400 | 6*1700 |
| | | | | **ಒಟ್ಟು** | **20,400** |

ಮೇಲ್ಕಂಡ ವಿವರದಲ್ಲಿ ತಿಳಿಸಿರುವಂತೆ ಹೆಚ್ಚುವರಿ ವಿದ್ಯಾರ್ಥಿಗಳ ಮೆಸ್ ಬಿಲ್ ಪಾವತಿಸಿರುವ ವಿಚಾರದಲ್ಲಿ ಶಿಕ್ಷಕ ಸಲಹೆಗಾರರು ಸೂಕ್ತ ವಿವರಣೆ ನೀಡಬೇಕಾಗಿ ಸೂಚಿಸಿದೆ.

**ಒಟ್ಟು 252 ವಿದ್ಯಾರ್ಥಿಗಳು** ಪ್ರವೇಶಾತಿ ಪಡೆದಿದ್ದು ಪ್ರವೇಶಾತಿ ವಹಿ ಪುಟ ಸಂಖ್ಯೆ 01 ರಿಂದ 127 ರಲ್ಲಿ ವಿದ್ಯಾರ್ಥಿಗಳ ಕ್ರಮ ಸಂಖ್ಯೆ 01 ರಿಂದ 252 ಗಳಾಗಿರುತ್ತದೆ. ಆದರೆ ಇದರಲ್ಲಿ ವಿದ್ಯಾರ್ಥಿಗಳ ಪ್ರವೇಶಾತಿ **ಕ್ರಮ ಸಂಖ್ಯೆ: 91, 148, 180, 198 ಮತ್ತು 220ರ ಒಟ್ಟು 05 ಮಂದಿ ವಿದ್ಯಾರ್ಥಿಗಳು** ಪ್ರವೇಶಾತಿ ರದ್ದುಪಡಿಸಿಕೊಂಡಿದ್ದು 2017–18ನೇ ಸಾಲಿನ ಪ್ರವೇಶಾತಿ ವಹಿಯಲ್ಲಿ **SC ವಿದ್ಯಾರ್ಥಿಗಳ ಸಂಖ್ಯೆ:191** ಹಾಗೂ **ST ವಿದ್ಯಾರ್ಥಿಗಳು 56 ಸೇರಿದಂತೆ ಒಟ್ಟು 247 ಮಂದಿ ವಿದ್ಯಾರ್ಥಿಗಳಿದ್ದು** ಹಾಜರಾತಿ ವಹಿಯಲ್ಲಿಯೂ **ಸಹ 247** ಮಂದಿ ವಿದ್ಯಾರ್ಥಿಗಳ ಹಾಜರಾತಿ ನಿರ್ವಹಿಸಲಾಗಿರುತ್ತದೆ. ಹಾಜರಾತಿ ವಹಿಯ ಅಂಕಣ (01) ರಲ್ಲಿ ವಿದ್ಯಾರ್ಥಿಗಳ ಕ್ರಮ ಸಂಖ್ಯೆ (ಒಟ್ಟು 247) ಹಾಗೂ ಅಂಕಣ (02)ರಲ್ಲಿ ವಿದ್ಯಾರ್ಥಿಗಳ ಪ್ರವೇಶಾತಿಯ ಕ್ರಮ ಸಂಖ್ಯೆಗಳನ್ನು ನಮೂದಿಸಲಾಗಿದ್ದು ಪ್ರತಿ ವಿದ್ಯಾರ್ಥಿಗೆ 1700/–ರಂತೆ **247 ವಿದ್ಯಾರ್ಥಿಗಳಿಗೆ ಒಟ್ಟು ರೂ.4,19,900/–ಗಳನ್ನು** ಪಾವತಿಸಲಾಗಿರುತ್ತದೆ. 2017–18ನೇ ಸಾಲಿನಲ್ಲಿ ಹೆಚ್ಚುವರಿಯಾಗಿ ರೂ.20,400/–ಗಳ ಮೆಸ್ ಬಿಲ್ಲು ಪಾವತಿಸಿರುವುದಿಲ್ಲವಾಗಿ ತಮ್ಮಲ್ಲಿ ನಿವೇದಿಸುತ್ತಾ 2017–18ನೇ ಸಾಲಿನ ಪ್ರವೇಶಾತಿಯ ಘೋಷ್ವಾರೆ ಪುಟ, ಪ್ರವೇಶಾತಿ ವಹಿ ಪುಟ ಸಂಖ್ಯೆ 01 ಮತ್ತು 127 ಹಾಗೂ ರದ್ದು ಪಡಿಸಿರುವ ವಿದ್ಯಾರ್ಥಿಗಳ ಪುಟ ಮತ್ತು 2017ರ ಡಿಸೆಂಬರ್ ಮಾಹೆಯ ಹಾಜರಾತಿ ವಹಿಯ ಜೆರಾಕ್ಸ್ ಪ್ರತಿಗಳನ್ನು ಲಗತ್ತಿಸಿ ಸಲ್ಲಿಸುತ್ತಾ **ವಸೂಲಾತಿ ಮೊತ್ತ ರೂ.20,400/–ಗಳನ್ನು ತೀರುವಳಿಗೊಳಿಸುವಂತೆ ಕೋರಿದೆ.**

**109. 2017–18ನೇ ಸಾಲಿನಲ್ಲಿ ವಿಭಾಗದ ಅಧ್ಯಕ್ಷರ ಬ್ಯಾಂಕ್ ಖಾತೆಗೆ ಜಮೆಯಾದ ಮೊತ್ತಕ್ಕೆ ಎದುರಾಗಿ ಬಿಲ್ಲುಗಳನ್ನು ಪಾವತಿಸದಿರುವುದು:– (ಸಸ್ಯಶಾಸ್ತ್ರ ಸ್ನಾತಕೊತ್ತರ ಅಧ್ಯಯನ ಮತ್ತು ಸಂಶೋಧನಾ ವಿಭಾಗ)**

ಈ ವಿಭಾಗದ ಅಧ್ಯಕ್ಷರ ಬ್ಯಾಂಕ್ ಖಾತೆ ಸಂಖ್ಯೆ:6414891654ರಲ್ಲಿನ 2017–18ನೇ ಸಾಲಿನ ಆರ್ಥಿಕ ವಹಿವಾಟನ್ನು ಪರಿಶೋಧಿಸಲಾಗಿ, ಬ್ಯಾಂಕ್ ಖಾತೆಗೆ ವಿವಿಧ ದಿನಾಂಕಗಳಂದು ಹಣ ಜಮೆಯಾಗಿರುತ್ತದೆ ವಿವರಗಳು ಕೆಳಕಂಡಂತಿದೆ.

| ಕ್ರ ಸಂ | ಬಿ,ಆರ್,ಸಂಖ್ಯೆ & ದಿನಾಂಕ | ಮೊತ್ತ (ರೂ ಗಳಲ್ಲಿ) | ಬ್ಯಾಂಕ್ ಖಾತೆಗೆ ಜಮೆಯಾಗಿರುವ ದಿನಾಂಕ |
|---|---|---|---|
| 1 | **07/15.12.2017** | 1652 | **25.01.2017** |
| 2 | 08/19.12.2017 | 30000 | 08.03.2018 |
| 3 | 29/15.03.2018 | 2845 | 31.03.2018 |
| 4 | 32/15.03.2018 | 3000 | 31.03.2018 |
| 5 | ಬಿಆರ್ ವಿವರಗಳಿರುವುದಿಲ್ಲ | 237 | 26.03.2018 |
| | **ಒಟ್ಟು** | **37707** | |

ಕಂಡಿಕೆಯಲ್ಲಿ ಪ್ರಸ್ತಾಪಿಸಿರುವ ಕ್ರಮ ಸಂಖ್ಯೆಯ ಬಿ,ಆರ್ ಬಿಲ್ಲುಗಳು ಸಾದಿಲ್ವಾರು ವೆಚ್ಚ ಮತ್ತು ಬ್ಯಾಂಕಿನಿಂದ ಸ್ವೀಕೃತವಾದ ಬಡ್ಡಿಗೆ ಸಂಬಂಧಿಸಿದವುಗಳಾಗಿದ್ದು ಹಣಕಾಸು ಅಧಿಕಾರಿಗಳಿಂದ ಧನಾದೇಶದ ಮೂಲಕ ಹಣ ಬಿಡುಗಡೆಯಾಗಿದ್ದು ಅಧ್ಯಕ್ಷರ ಬ್ಯಾಂಕ್ ಖಾತೆಗೆ ಜಮೆಯಾಗಿರುವ ಮತ್ತು ಖಾತೆಯಿಂದ ಸಂಬಂಧಪಟ್ಟವರಿಗೆ ಪಾವತಿಸಿರುವ ದಿನಾಂಕಗಳನ್ನು ಕೆಳಗಿನಂತೆ ವಿವರಿಸಲಾಗಿದೆ.

| ಕ್ರಮ ಸಂಖ್ಯೆ | ಹಣಕಾಸು ಅಧಿಕಾರಿಯವರಿಂದ ಸ್ವೀಕೃತದ ದಿನಾಂಕ | ಮೊತ್ತ (ರೂ.ಗಳಲ್ಲಿ) | ಸಂಬಂಧಪಟ್ಟವರಿಗೆ ಪಾವತಿ ದಿನಾಂಕ |
|---|---|---|---|
| 1 | 25.01.2018 | 1652 | 06.04.2018 |
| 2 | 06.03.2018 | 30,000 | 06.04.2018 |
| 3 | 26.03.2018 | 2845 | 07.04.2018 |
| 4 | 31.03.2018 | 3000 | 06.04.2018 |

2017–18ನೇ ಸಾಲಿನಲ್ಲಿ ಬ್ಯಾಂಕ್ ಖಾತೆಗೆ ಹಣ ಜಮೆಯಾಗಿರುವುದಕ್ಕೆ ಸಂಬಂಧಿಸಿದಂತೆ ಸದರಿ ಸಾಲಿನಲ್ಲಿಯೇ ಬಿಲ್ಲುಗಳನ್ನು ಪಾವತಿಸಬೇಕಾಗಿದ್ದು ಧನಾದೇಶ ಕೌಂಟರ್‌ಫೈಲ್‌ನ ದಾಖಲೆಗಳು ಹಾಗೂ ಬ್ಯಾಂಕ್ ಪಾಸ್ ಪುಸ್ತಕದ ದಾಖಲೆಗಳನ್ವಯ ಬಿಲ್ಲುಗಳನ್ನು ಪಾವತಿಸಿರುವುದಿಲ್ಲ

ವಿಶ್ವವಿದ್ಯಾನಿಲಯವು ಬಿಲ್ಲುಗಳನ್ನು ಪಾವತಿಸಲು ನೀಡುವ ಧನಾದೇಶಗಳಿಗೆ ಬ್ಯಾಂಕ್ ಖಾತೆಗೆ ಜಮೆಯಾಗಿರುವುದಕ್ಕೆ ಎದುರಾಗಿ ಶೀಘ್ರವೇ ಕ್ರಮವಹಿಸಿ ಬಿಲ್ಲುಗಳನ್ನು ಪಾವತಿಸದಿರುವುದು ಅಧ್ಯಕ್ಷರ ಹಣ ಸೆಳೆಯುವ ಅಧಿಕಾರಿಯವರ ಕರ್ತವ್ಯ ಹಾಗೂ ಜವಾಬ್ದಾರಿಯ ಲೋಪವಾಗಿರುತ್ತದೆ ಹಾಗೂ ಕರ್ನಾಟಕ ಆರ್ಥಿಕ ಸಂಹಿತೆ 1958 ಅಧ್ಯಾಯ–2, ಸಾಮಾನ್ಯ ತತ್ವಗಳು ಮತ್ತು ನಿಯಮಗಳಡಿ ಲೆಕ್ಕಪತ್ರಗಳಿಗೆ ಸಂಬಂಧಿಸಿದ ಕರ್ತವ್ಯಗಳು ಅನುಚ್ಛೇದ–03ರ ಉಲ್ಲಂಘನೆಯಾಗಿರುತ್ತದೆ.

ಈ ಸ್ವೀಕೃತಿಗಳಿಗೆ ಲೆಕ್ಕಪತ್ರ ದಾಖಲೆಗಳನ್ನು ಹಾಜರುಪಡಿಸುವಂತೆ ವಿಚಾರಣಾ ಪತ್ರ ಸಂಖ್ಯೆ:07/2019–20ನ್ನು ದಿನಾಂಕ:12.06.2019 ರಂದು ನೀಡಿದರೂ ಸಹ ಹಾಜರುಪಡಿಸದ ಕಾರಣ **ಒಟ್ಟು ಮೊತ್ತ ರೂ.37,707/–ಗಳನ್ನು ಅಕ್ಷೇಪಣೆಗೆ ಸೂಚಿಸಿದೆ.**

| | | | |
|---|---|---|---|
| 5 | ಎಸ್.ಬಿ ಖಾತೆಗೆ ಬ್ಯಾಂಕ್‌ನಿಂದ ಜಮೆಯಾದ ಬಡ್ಡಿ | 237 | 25.03.2018 |
| | **ಒಟ್ಟು** | **37,707** | |

ವಿಷಯ ನಿರ್ವಾಹಕರು ಬದಲಾವಣೆಗೊಂಡು ಹೊಸ ವಿಷಯ ನಿರ್ವಾಹಕರು ಕಾರ್ಯ ನಿರ್ವಹಿಸುವುದರಲ್ಲಿ ಹಾಗೂ ಬ್ಯಾಂಕ್‌ನಲ್ಲಿ ಪಾಸ್ ಪುಸ್ತಕದ ದಾಖಲಾತಿಗಳನ್ನು ನೀಡುವ ವಿಳಂಬದಿಂದಾ ಹಾಗೂ ಆರ್ಥಿಕ ವರ್ಷದ ಆರಂಭವಾದರಿಂದ ಖಾತೆಗೆ ಹಣ ಜಮಾ ಆದ ನಂತರದಲ್ಲಿ ಸಂಬಂಧಪಟ್ಟವರಿಗೆ ಹಣ ಸಂದಾಯ ಮಾಡುವುದು ಸಹ ವಿಳಂಬವಾಗಿರುತ್ತದೆ ಇನ್ನು ಮುಂದೆ ರೀತಿ ಆಗದಂತೆ ಅಗತ್ಯಕ್ರಮವಹಿಸುತ್ತಾ ಸಂಬಂಧಪಟ್ಟ ಲೆಕ್ಕಪತ್ರಗಳನ್ನು ಲೆಕ್ಕಪರಿಶೋಧನೆಗೆ ಹಾಜರು ಪಡಿಸುವುದಾಗಿ ನಿವೇದಿಸುತ್ತಾ ಬ್ಯಾಂಕ್‌ಸ್ಟೋಲ್ ಪ್ರತಿ (ಸ್ವೀಕೃತಿ ಮತ್ತು ವೆಚ್ಚ)ಯನ್ನು ಲಗತ್ತಿಸಿದ್ದು **ಕಂಡಿಕೆಯಲ್ಲಿನ ಆಕ್ಷೇಪಣೆ ಮೊತ್ತ ರೂ.37,707/–ಗಳನ್ನು ತೀರುವಳಿಗೊಳಿಸುವಂತೆ ಕೋರಿದೆ.**

**110. <u>ಡಿಸೆಂಬರ್–2017 ಮಾಹೆಯಲ್ಲಿನ ಹಾಜರಾತಿ ವಹಿಯಲ್ಲಿ ಅತಿಥಿ ಉಪನ್ಯಾಸಕರುಗಳ ಸಹಿ ಇಲ್ಲದೆ ವೇತನ ಡ್ರಾ ಮಾಡಿ ಪಾವತಿಸಿರುವುದು :– (ವಿದೇಶಿ ಭಾಷೆ ಸ್ನಾತಕೊತ್ತರ ಅಧ್ಯಯನ ಮತ್ತು ಸಂಶೋಧನಾ ವಿಭಾಗ)</u>**

2017–18ನೇ ವರ್ಷದ ಲೆಕ್ಕಪರಿಶೋಧನೆಯಲ್ಲಿ ಹಾಜರುಪಡಿಸಿರುವ ವೇತನ ಬಿಲ್ಲು ಹಾಗೂ ಹಾಜರಾತಿಯನ್ನು ಪರಿಶೀಲಿಸಿದಾಗ ಹಾಜರಾತಿಯಲ್ಲಿ ಡಿಸೆಂಬರ್–2017ರ ಮಾಹೆಯಲ್ಲಿ ಪೂರ್ಣ ದಿನಗಳಲ್ಲಿ ಸಹಿ ಹಾಕದೆ ಹಾಗೂ ಬೋಧನಾ ಕಾರ್ಯ ಹಂಚಿಕೆಯ ಪ್ರಗತಿ ವಿವರ ಮತ್ತು ನೇಮಕಾತಿ ಮಾಡಿಕೊಂಡಿರುವ ನಿಬಂಧನೆಗಳ ಕಡತವನ್ನು ಹಾಜರುಪಡಿಸದೆ ಇರುವುದರಿಂದ ವಿಚಾರಣೆ ಸಂಖ್ಯೆ:02/2018–19 ದಿನಾಂಕ:14.03.2019 ರಂದು ವಿವರಗಳನ್ನು ನೀಡುವಂತೆ ವಿಚಾರಣೆ ನೀಡಲಾಗಿದ್ದು ವಿವರಣೆ ನೀಡಿರುವುದಿಲ್ಲ ಹಾಗೂ ವೇತನ ಪಾವತಿಯ ಮೂಲ ಬಿಲ್ಲಿನ ಹಾಜರುಪಡಿಸಿರುವುದಿಲ್ಲ

| ಕ್ರ ಸಂ | ಅತಿಥಿ ಉಪನ್ಯಾಸಕರವರ ಹೆಸರು | ವೇತನ ಪಾವತಿ ಮೊತ್ತ (ರೂ ಗಳಲ್ಲಿ) |
|---|---|---|
| 1 | Chacka uiattils | 19500 |
| 2 | Janet j. Chacka | 19500 |
| 3 | Dr,Kanchan | 22500 |

ವಿದೇಶಿ ಭಾಷೆ ಸ್ನಾತಕೋತ್ತರ ಅಧ್ಯಯನ ವಿಭಾಗವು ಎಫ್.ಸಿ.ಬಿ.ಎಸ್ ಪದ್ಧತಿಯನ್ನು ಅಳವಡಿಸಿಕೊಂಡಿದ್ದು ವಿಶ್ವವಿದ್ಯಾನಿಲಯದಡಿಯಲ್ಲಿ ಆಡಳಿತಾತ್ಮಕ ವ್ಯವಸ್ಥೆ (ಪರೀಕ್ಷಾ ಕಾರ್ಯ ವೇಳಾ ಪಟ್ಟಿ ಮತ್ತು ದಾಖಲಾತಿ)ಯನ್ನು ವಿಭಾಗದಲೇ ನಿಗದಿಪಡಿಸಿಕೊಳ್ಳಲಾಗಿದ್ದು 2017ರ ಡಿಸೆಂಬರ್ ಮಾಹೆಯಲ್ಲಿ ಮಧ್ಯಂತರ ರಜೆಯನ್ನು ಅತಿಥಿ ಉಪನ್ಯಾಸಕರುಗಳಿಗೆ ನೀಡಲಾಗಿರುತ್ತದೆ ಆದ್ದುದರಿಂದ ಡಿಸೆಂಬರ್ 2017ರ ಮಾಹೆಯಲ್ಲಿ ಅತಿಥಿ ಉಪನ್ಯಾಸಕರುಗಳು ಹಾಜರಾತಿ ಪುಸ್ತಕದಲ್ಲಿ ಸಹಿ ಮಾಡಿರುವುದಿಲ್ಲ 2017ರ ಡಿಸೆಂಬರ್ ಮಾಹೆಯ ವೇತನ ಡ್ರಾ ಮಾಡಲಾಗಿರುತ್ತದೆ ವೇತನ ಪಾವತಿಯು ಮೂಲ ಬಿಲ್‌ನ್ನು ಧೃಢೀಕರಿಸಿ ಪಾವತಿಗಾಗಿ ಹಣಕಾಸು ಅಧಿಕಾರಿಗಳಿಗೆ ಸಲ್ಲಿಸಿರುವುದಾಗಿ ನಿವೇದಿಸುತ್ತಾ (ಜೆರಾಕ್ಸ್ ಪ್ರತಿ ಲಗತ್ತಿಸಿದೆ)

ವಿಶ್ವವಿದ್ಯಾನಿಲಯದ ಅತಿಥಿ ಉಪನ್ಯಾಸಕರ ಆಯ್ಕೆಯ ಸಂಬಂಧ ದಿನಾಂಕ:25.07.2017 ರಂದು ನಡೆದ ಆಯ್ಕೆ ಸಮಿತಿ ಸಭೆಯ ಶಿಫಾರಸ್ಸು (ನಿರ್ಣಯ)

| | | |
|---|---|---|
| 4 | Bhima nayaka | 13000 |
| | **ಒಟ್ಟು** | **74500** |

ಹಾಜರಾತಿಯಲ್ಲಿ ಪೂರ್ಣ ಪ್ರಮಾಣದಲ್ಲಿ ಸಹಿ ಇಲ್ಲದೆ ವಿಭಾಗದ ಮುಖ್ಯಸ್ಥರು ದೃಢೀಕರಿಸದೆ ಯಾವುದೇ ಕ್ರಮ ಕೈಗೊಳ್ಳದೆ ವೇತನ ಬಿಲ್ಲು ಪಾವತಿಸಿರುವುದು ನಿಯಮಬಾಹಿರವಾಗಿರುತ್ತದೆ

ವಾರಕ್ಕೆ 8 ಗಂಟೆ ಕಾರ್ಯಭಾರಗಳೊಂದಿಗೆ ಅತಿಥಿ ಉಪನ್ಯಾಸಕರಾಗಿ ಆಹ್ವಾನಿತವಾಗಿರುವವರು ವಿಭಾಗದ ವೇಳಾಪಟ್ಟಿಯಂತೆ ಹಂಚಿಕೆಯಾಗಿರುವ ಬೋಧನಾ ತರಗತಿ ವಿವರವನ್ನು ಪರಿಶೀಲನೆಗೆ ಹಾಜರುಪಡಿಸದೆ ಇರುವುದರಿಂದ ಪರಿಶೀಲಿಸಲು ಸಾಧ್ಯವಾಗದ ಕಾರಣ ಕಂಡಿಕೆಗೆ ಸೂಕ್ತ ವಿವರಣೆ ನೀಡಲು ಸೂಚಿಸಿದೆ ಅದುವರೆವಿಗೆ **ರೂ.74,500/–ಗಳನ್ನು ಆಕ್ಷೇಪಣೆಯಲ್ಲಿಟ್ಟಿದೆ.**

ಹಾಗೂ ಮಾನ್ಯ ಕುಲಪತಿಯವರ ಅನುಮೋದನೆಯ ಮೇರೆಗೆ ವಿಶ್ವವಿದ್ಯಾನಿಲಯದ ಆದೇಶ ಸಂಖ್ಯೆ:ಇಡಿ11/195/2017–18 ದಿನಾಂಕ:07.08.2017 ರಲ್ಲಿ ಈ ವಿಭಾಗಕ್ಕೆ ಸಂಬಂಧಿಸಿದಂತೆ **4 ಮಂದಿ ಅತಿಥಿ ಉಪನ್ಯಾಸಕರುಗಳನ್ನು ವಾರಕ್ಕೆ 12 ಮತ್ತು 08 ಗಂಟೆ ಬೋಧಾನಾ ಅವಧಿ** ನಿಗದಿಪಡಿಸಿ ಆದೇಶ ಹೊರಡಿಸಲಾಗಿರುತ್ತದೆ. ಅತಿಥಿ ಉಪನ್ಯಾಸಕರುಗಳ ನೇಮಕಾತಿ ಆದೇಶದ ಪ್ರತಿಯನ್ನು ಲಗತ್ತಿಸಿ ಸಲ್ಲಿಸುತ್ತಾ **ಕಂಡಿಕೆಯಲ್ಲಿನ ಆಕ್ಷೇಪಿತ ಮೊತ್ತ ರೂ.74,500/–ಗಳನ್ನು ತೀರುವಳಿಗೊಳಿಸುವಂತೆ ಕೋರಿದೆ.**

**111. ರಶೀದಿ ಪುಸ್ತಕಗಳಿಂದ ಸ್ವೀಕರಿಸಿದ ಮೊತ್ತವನ್ನು ಕಡಿಮೆ ಜಮೆ (ಇರಸಾಲು) ಮಾಡಿರುವುದು :– (ಸ್ನಾತಕೊತ್ತರ ಮಹಿಳಾ ವಿದ್ಯಾರ್ಥಿನಿಲಯ ಬ್ಲಾಕ್–1)**

ಮೈಸೂರು ವಿಶ್ವವಿದ್ಯಾನಿಲಯದ ಬ್ಲಾಕ್–01, ಮಹಿಳಾ ವಿದ್ಯಾರ್ಥಿನಿಲಯದ 2017–18ನೇ ಸಾಲಿನ ಲೆಕ್ಕಪರಿಶೋಧನೆಯಲ್ಲಿ ರಶೀದಿ ಪುಸ್ತಕಗಳನ್ನು ಪರಿಶೋಧಿಸಲಾಗಿದ್ದು ಸ್ವೀಕೃತಿಯಾದ ಮೊತ್ತಕ್ಕಿಂತ ಕಡಿಮೆ ಜಮೆ (ಇರಸಾಲು) ಮಾಡಿರುವುದು ಕಂಡುಬಂದಿರುತ್ತದೆ.

ಸದರಿ ಸಾಲಿನಲ್ಲಿ ರಶೀದಿ ಮೂಲಕ ಸ್ವೀಕೃತಿಯಾದ ಒಟ್ಟು ಮೊತ್ತ ರೂ.28,23,746/–ಗಳಾಗಿರುತ್ತದೆ ವಿವರ ಈ ಕೆಳಕಂಡಂತಿದೆ

| | **ಮೊತ್ತ (ರೂ ಗಳಲ್ಲಿ)** |
|---|---|
| 2017–18ನೇ ಸಾಲಿನಲ್ಲಿ ರಶೀದಿ ಪುಸ್ತಕದ ಮೂಲಕ ಸ್ವೀಕೃತವಾದ ಒಟ್ಟು ಸ್ವೀಕೃತಿ ಮೊತ್ತ | 28,23,746 |
| 2017–18ನೇ ಸಾಲಿನಲ್ಲಿ ಜಮೆ ಮಾಡಿರುವುದು<br>1. ಜಿ,ಆರ್,ಎ (ಸಾಮಾನ್ಯ ರೆವಿನ್ಯೂ) ಖಾತೆ ಸಂಖ್ಯೆ:54007591471 ಕ್ಕೆ –16,10,245/–<br>2. ನಿಲಯದ ಖಾತೆ ಸಂಖ್ಯೆ:54035421360ಕ್ಕೆ –10,31,176/– | 26,41,421 |
| ಕಡಿಮೆ ಇರಸಾಲು ಮಾಡಿರುವುದು | 1,82,325 |

ಮೇಲ್ಕಂಡ ವಿವರದಂತೆ ವಿದ್ಯಾರ್ಥಿಗಳಿಂದ ಪ್ರವೇಶಾತಿ ಶುಲ್ಕ ಹಾಗೂ ಮೆಸ್ ಬಾಬ್ತಿನ ಮೂಲಕ ಸ್ವೀಕೃತವಾದ ಒಟ್ಟು ಮೊತ್ತ ರೂ.28,23,746/–ಗಳಾಗಿರುತ್ತದೆ ಇದರಲ್ಲಿ ಎರಡು ಖಾತೆಗಳಿಗೆ ರೂ.26,41,421/–ಗಳನ್ನು ಜಮೆ ಮಾಡಲಾಗಿರುತ್ತದೆ ಕಡಿಮೆ ಇರಸಾಲು ಮಾಡಿರುವ ಮೊತ್ತ ರೂ.1,82,325/–ಗಳಿಗೆ ವಿವರಗಳನ್ನು ಒದಗಿಸಲು ವಿಚಾರಣಾ ಪತ್ರ ಸಂಖ್ಯೆ:07/2019–20 ದಿನಾಂಕ:26.06.2019 ರಂದು ನೀಡಲಾಗಿದ್ದು ಯಾವುದೇ ದಾಖಲಾತಿಗಳನ್ನು

2017–18ನೇ ಸಾಲಿನ ಲೆಕ್ಕಪರಿಶೋಧನಾ ವರದಿಯಲ್ಲಿ ಪ್ರಸ್ಥಾಪಿತವಾಗಿರುವಂತೆ ವಿದ್ಯಾರ್ಥಿಗಳಿಂದ ವಸೂಲಿಸಿರುವ ಪ್ರವೇಶಾತಿ ಶುಲ್ಕ ಮತ್ತು ಮೆಸ್ ಬಿಲ್ಲಿನ ಮೊತ್ತದಲ್ಲಿನ ಕಡಿಮೆ ಇರಸಾಲಿನ ರೂ.1,82,325/–ಮೊತ್ತವನ್ನು ಸಂಬಂಧಪಟ್ಟವರಿಂದ ವಸೂಲಾತಿ ಮಾಡಿ ಜಿ,ಆರ್,ಎ ಖಾತೆಗೆ ಮತ್ತು ಹಾಸ್ಟೆಲ್ ಖಾತೆಗೆ ಜಮೆ ಮಾಡಿ ಈ ವಿವರವನ್ನು ಮುಂದಿನ ಲೆಕ್ಕತನಿಖೆಗೆ ಹಾಜರುಪಡಿಸಲಾಗುವುದು ಎಂದು ವಸತಿ ನಿಲಯ ಸಹಾಯಕರು ಸ್ನಾತಕೋತ್ತರ ಮಹಿಳಾ ವಿದ್ಯಾರ್ಥಿನಿಲಯ ಬ್ಲಾಕ್–1 ವರದಿ ಮಾಡಿರುವದರಿಂದ ಈ ಸಂಬಂಧದ ವಿವರಗಳನ್ನು ಮುಂದಿನ ಲೆಕ್ಕಪರಿಶೋಧನೆಗೆ ಹಾಜರು ಪಡಿಸಲು ಕ್ರಮವಹಿಸಲಾಗುವುದು ಎಂಬ ವಿಷಯವನ್ನು ತಮ್ಮ ಅವಗಾಹನೆಗೆ ತರಲಾಗಿದೆ.

| | |
|---|---|
| ಹಾಜರುಪಡಿಸಿರುವುದಿಲ್ಲ ಕಡಿಮೆ ಜಮೆ ಮಾಡಿರುವ ಶುಲ್ಕವನ್ನು ಬ್ಯಾಂಕ್ ಖಾತೆಗೆ ಜಮೆ ಮಾಡಿ ಮೂಲ ಜಮೆ ಚಲನ್‌ಗಳನ್ನು ಹಾಜರುಪಡಿಸಬೇಕೆಂದು ಹಾಗೂ ಈ ಹಣ ದುರುಪಯೋಗದ ಬಗ್ಗೆ ಸಂಬಂಧಿಸಿದವರ ಮೇಲೆ ಆಡಳಿತಾತ್ಮಕ ಕ್ರಮ ಕೈಗೊಳ್ಳಲು ಸೂಚಿಸಿದೆ ಹಾಗೂ ರೂ.1,82,325/– ಗಳನ್ನು ಸಂಬಂಧಿಸಿದ ಶಿಕ್ಷಣ ಸಲಹೆಗಾರರಿಂದ ವಸೂಲಿ ಮಾಡಲ ಸೂಚಿಸಿದೆ ಸ್ವೀಕೃತಿ ಮತ್ತು ಜಮೆಯ ವಿವರವನ್ನು ಅನುಬಂಧ–57ರಲ್ಲಿ ಲಗತ್ತಿಸಿದೆ. | |

**112. ಸಂಶೋಧನಾ ವಿದ್ಯಾರ್ಥಿಗಳಿಂದ ಮನೆ ಬಾಡಿಗೆ ವಸೂಲಿಯಾಗದಿರುವುದು :– (ಸ್ನಾತಕೋತ್ತರ ಮಹಿಳಾ ವಿದ್ಯಾರ್ಥಿನಿಲಯ ಬ್ಲಾಕ್–1)**

ಮಹಿಳಾ ವಿದ್ಯಾರ್ಥಿನಿಲಯದಲ್ಲಿ ವಾಸವಿರುವ ಸಂಶೋಧನಾ ವಿದ್ಯಾರ್ಥಿಗಳಿಂದ ಮನೆ ಬಾಡಿಗೆಯನ್ನು ಸಂಶೋಧನಾ ಶಿಷ್ಯವೇತನದ 10% ರಂತೆ ಕೊಠಡಿ ಬಾಡಿಗೆ ಪಡೆಯಲು ವಿಶ್ವವಿದ್ಯಾನಿಲಯ ಆದೇಶ ಸಂಖ್ಯೆ:ವಿಕ್ಷೇಪಾ/01/01/2017–18 ದಿನಾಂಕ:11.04.2017 ರಂತೆ ಆದೇಶವಿದ್ದರೂ ಸಹ ಸಂಶೋಧನಾ ವಿದ್ಯಾರ್ಥಿಗಳಿಂದ ಮನೆ ಬಾಡಿಗೆಯನ್ನು ಕಡಿತಗೊಳಿಸಿರುವುದಿಲ್ಲ ಬಾಡಿಗೆ ಕಟಾಯಿಸದ ಸಂಶೋಧನಾ ವಿದ್ಯಾರ್ಥಿಗಳಿಂದ ಮನೆ ಬಾಡಿಗೆಯನ್ನು ವಸೂಲು ಮಾಡಲು ಸೂಚಿಸಿದೆ ವಿವರ ಈ ಕೆಳಕಂಡಂತಿದೆ.

| ಕ್ರ ಸಂ | ಸಂಶೋಧನಾ ವಿದ್ಯಾರ್ಥಿಗಳ ಹೆಸರು | ಅಧ್ಯಯನ ವಿಭಾಗ | ಮನೆಬಾಡಿಗೆ ವಸೂಲಿಯಾಗಬೇಕಾಗಿರುವ ಮೊತ್ತ (ರೂ.ಗಳಲ್ಲಿ) |
|---|---|---|---|
| 1 | ಆಶಾ.ಪಿ | ಗ್ರಂಥಾಲಯ ವಿಜ್ಞಾನ | 80000 |
| 2 | ಶಿಲ್ಪಶ್ರೀ.ಕೆ.ಎಸ್ | ಸಸ್ಯಶಾಸ್ತ್ರ | 3750 |
| 3 | ಕಲಾವತಿ | ಅಂಬೇಡ್ಕರ್ ಸ್ಟಡೀಸ್ | 25707 |
| 4 | ಸೌಭಾಗ್ಯ | ಅರ್ಥಶಾಸ್ತ್ರ | 32500 |
| 5 | ವಿಶಾಲಾಕ್ಷಿ | ಸಸ್ಯಶಾಸ್ತ್ರ | 21250 |
| 6 | ನಾಗರತ್ನಮ್ಮ | ಸಮಾಜ ಶಾಸ್ತ್ರ | 8750 |
| 7 | ರಮೀಜಾಬಿ | ಇತಿಹಾಸ | 9583 |
| 8 | ಮಂಜುಳಾ ಬಿ.ಆರ್ | ಕನ್ನಡ | 8750 |
| 9 | ಸವಿತಾ ಬಿ.ಎಸ್ | ಇತಿಹಾಸ | 20000 |
| | | **ಒಟ್ಟು** | **210290** |

ಸಂಶೋಧನಾ ವಿದ್ಯಾರ್ಥಿಗಳಿಂದ ವಸೂಲಿಯಾಗದೆ ಬಾಕಿ ಉಳಿದಿರುವ ಮನೆ ಬಾಡಿಗೆ ಮೊತ್ತ ರೂ.1,10,290/–ಗಳನ್ನು ಸಂಬಂಧಿಸಿದ ಸಂಶೋಧನಾ ವಿದ್ಯಾರ್ಥಿಗಳಿಂದ ವಸೂಲಾತಿಗೆ ಸೂಚಿಸಿಲಾಗಿದೆ.

ಪ್ರಸ್ತಾವಿತ ಕಂಡಿಕೆಯಲ್ಲಿನ ವಿಷಯಕ್ಕೆ ಸಂಬಂಧಿಸಿದಂತೆ ಮಹಿಳಾ ವಿದ್ಯಾರ್ಥಿನಿಲಯದಲ್ಲಿ ವಾಸವಿದ್ದ ಹಾಗೂ ವರದಿಯಲ್ಲಿ ಸೂಚಿತವಾಗಿರುವ ಸಂಶೋಧನಾ ವಿದ್ಯಾರ್ಥಿಗಳಿಗೆ ನೋಟಿಸ್ ಜಾರಿಮಾಡುವುದೇ ಮುಂತಾದ ಇತರ ಆಡಳಿತಾತ್ಮಕ ಕ್ರಮಗಳನ್ನು ವಹಿಸುವ ಮೂಲಕ ಸೂಚಿತವಾಗಿರುವ ವಸೂಲಾತಿ ಮೊತ್ತ ರೂ.2,10,290/–ಗಳನ್ನು ಸಂಬಂಧಿಸಿದ ಸಂಶೋಧನಾ ವಿದ್ಯಾರ್ಥಿಗಳಿಂದ ವಸೂಲಾತಿ ಮಾಡಿ ಜಮಾ ವಿವರವನ್ನು ಸಲ್ಲಿಸುವುದಾಗಿ ವಸತಿನಿಲಯ ಸಹಾಯಕರು, ಸ್ನಾತಕೋತ್ತರ ಮಹಿಳಾ ವಿದ್ಯಾರ್ಥಿನಿಲಯ ಬ್ಲಾಕ್–1 ರವರು ವರದಿಮಾಡಿರುತ್ತಾರೆ.

ಆದ್ದರಿಂದ ಈ ಸಂಬಂಧದ ವಿವರಗಳನ್ನು ಮುಂದಿನ ಲೆಕ್ಕ ಪರಿಶೋಧನೆಗೆ ಹಾಜರುಪಡಿಲಾಗುವುದು ಎಂಬ ವಿಷಯವನ್ನು ತಮ್ಮ ಅವಗಾಹನೆಗೆ ತರಲಾಗಿದೆ.

| | |
|---|---|
| **113. ವಿದ್ಯಾರ್ಥಿನಿಲಯದಲ್ಲಿ ಪ್ರವೇಶಾತಿ ಪಡೆದಿರುವ ಸಂಶೋಧನಾ ವಿದ್ಯಾರ್ಥಿಗಳಿಂದ ಮನೆ ಬಾಡಿಗೆ ಭತ್ಯೆ (ಎಚ್.ಆರ್ ಎ) ಯನ್ನು ಮಾಡಿಕೊಳ್ಳುವ ಕುರಿತು :– (ಪುರುಷ ವಿದ್ಯಾರ್ಥಿನಿಲಯ ಬ್ಲಾಕ್–2)**<br>2017–18ನೇ ಸಾಲಿನ ಲೆಕ್ಕ ಪರಿಶೋಧನೆಯಲ್ಲಿ ಗಮನಿಸಿದಂತೆ ವಿವಿಧ ಸ್ನಾತಕೋತ್ತರ ವಿಭಾಗದಲ್ಲಿ ಅಧ್ಯಯನ ಮಡೆಸುತ್ತಿರುವ ಸಂಶೋಧನಾ ವಿದ್ಯಾರ್ಥಿ (Research Scholars) ಗಳು ವಿದ್ಯಾರ್ಥಿನಿಲಯದಲ್ಲಿ ಪ್ರವೇಶಾತಿ ಪಡೆದಿರುತ್ತಾರೆ ಹಾಜರುಪಡಿಸಿರುವ ದಾಖಲೆಗಳ ಪ್ರಕಾರ ಒಟ್ಟು ಏಳು ಸಂಶೋಧನಾ ವಿದ್ಯಾರ್ಥಿಗಳು ಸದರಿ ಸಾಲಿನಲ್ಲಿ ಪ್ರವೇಶಾತಿ ಪಡೆದಿದ್ದು ವಿವಿಧ ರೀತಿಯ ಸಂಶೋಧನಾ ಕಾರ್ಯದಲ್ಲಿ ತೊಡಗಿಸಿಕೊಂಡು ಪ್ರತಿಮಾಹೆ ಶಿಷ್ಯ ವೇತನವನ್ನು ಪಡೆದಿದ್ದಾರೆ ವಿಶ್ವವಿದ್ಯಾನಿಲಯ ಅನುದಾನ ಆಯೋಗವು (ಯು.ಜಿ.ಸಿ) ರೂಪಿಸಿರುವ ಶಿಷ್ಯ ವೇತನ ನಿಯಾಮಾಳಿಯ ಪ್ರಕಾರ ಮನೆ ಬಾಡಿಗೆ ಭತ್ಯೆಗೆ ಸಂಬಂಧಿಸಿದಂತೆ ಸಂಶೊಧನಾ ವಿದ್ಯಾರ್ಥಿಯು ಒಂದು ವೇಳೆ ವಿಶ್ವವಿದ್ಯಾನಿಲಯದ ವಿದ್ಯಾರ್ಥಿನಿಲಯದಲ್ಲಿ ವಾಸ್ತವ್ಯವನ್ನು ಹೂಡಿದರೆ ಶಿಷ್ಯ ವೇತನದಲ್ಲಿ ಮನೆ ಬಾಡಿಗೆ ಭತ್ಯೆಯನ್ನು ಪಡೆಯುವ ಅವಕಾಶವಿಲ್ಲ ಎಂದು ಸ್ಪಷ್ಟಪಡಿಸಿರುವುದರಿಂದ ವಿದ್ಯಾರ್ಥಿನಿಲಯದಲ್ಲಿ ವಾಸವಿರುವ ಸಂಶೋಧನಾ ವಿದ್ಯಾರ್ಥಿಗಳ ಬಗ್ಗೆ ವಿವರ/ಮಾಹಿತಿ ನೀಡುವಂತೆ ವಿಚಾರಣೆ ಪತ್ರದ ಸಂಖ್ಯೆ:04/2018–19/15.03.2019 ರಲ್ಲಿ ಕೋರಲಾಗಿ ಒದಗಿಸಿರುವ ದಾಖಲೆ/ಮಾಹಿತಿಗಳ ಪ್ರಕಾರ ಸಂಶೋಧನಾ ವಿದ್ಯಾರ್ಥಿಗಳಿಂದ ಮನೆ ಬಾಡಿಗೆ ಭತ್ಯೆ ವಸೂಲಾಗದಿರುವುದು ಕಂಡುಬಂದಿದ್ದು ವಿವರವನ್ನು ಅನುಬಂಧ–58 ರಲ್ಲಿ ಒದಗಿಸಲಾಗಿದೆ ಸಂಶೋಧನಾ ವಿದ್ಯಾರ್ಥಿಗಳಿಂದ ಬಾಕಿ ಇರುವ ಮನೆ ಬಾಡಿಗೆ ಭತ್ಯೆಯ ಒಟ್ಟು ಮೊತ್ತ ರೂ.1,29,000/–ಗಳನ್ನು ಕೂಡಲೇ ಸಂಬಂಧಪಟ್ಟ ವಿದ್ಯಾರ್ಥಿಗಳಿಂದ ಮನೆ ಬಾಡಿಗೆ ಭತ್ಯೆಯನ್ನು ವಸೂಲು ಮಾಡಿ ವಿಶ್ವವಿದ್ಯಾನಿಲಯದ ಖಾತೆಗೆ ಜಮೆ ಮಾಡಿ ವಿವರವನ್ನು ಲೆಕ್ಕ ಪರಿಶೋಧನೆಗೆ ಹಾಜರುಪಡಿಸಲು ಸೂಚಿಸಿದೆ ಹಾಗೂ ಶಿಷ್ಯ ವೇತನ ಪಾವತಿಸುವಾಗ ಮನೆ ಬಾಡಿಗೆ ಕಟಾಯಿಸದ ಅಧಿಕಾರಿಗಳ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಲು ಸೂಚಿಸಿದೆ. | ವಿಷಯ:– ವಿಶ್ವವಿದ್ಯಾನಿಲಯದ ವಿದ್ಯಾರ್ಥಿನಿಲಯಗಳಲ್ಲಿನ ಸಂಶೋಧನಾರ್ಥಿಗಳ ಹೆಚ್,ಆರ್,ಎ ಕಡಿತಗೊಳಿಸುವ ಕುರಿತು<br><br>ಉಲ್ಲೇಖ:– 1. ವಿ,ವಿ ಆದೇಶ ಸಂಖ್ಯೆ:ವಿಕ್ಷೇಪಾ1/01/2017–18 ದಿನಾಂಕ:11.04.2017<br>1. ವಿ,ವಿ ಆದೇಶ ಸಂಖ್ಯೆ:ವಿಕ್ಷೇಪಾ1/988/2014–15 ದಿನಾಂಕ:21.10.2017<br>2. ವಿ,ವಿ ಆದೇಶ ಸಂಖ್ಯೆ:ಡಿವಿ8/166/ಸುತ್ತೋಲೆ/2018–19 ದಿನಾಂಕ:14.06.2018<br>3. ವಿ,ವಿ ಆದೇಶ ಸಂಖ್ಯೆ:ವಿಕ್ಷೇಪಾ01/01/329/2017–18 ದಿನಾಂಕ:03.06.2019<br>4. ವಿ,ವಿ ಆದೇಶ ಸಂಖ್ಯೆ:ವಿಕ್ಷೇಪಾ1/01/611/2017–18 ದಿನಾಂಕಳ:05.08.2019<br>5. ಸಂಶೋಧಕರು ಸ್ನಾತಕೊತ್ತರ ವಿದ್ಯಾರ್ಥಿನಿಲಯ ಬ್ಲಾಕ್–2 ಮಾನಸ ಗಂಗೋತ್ರಿ ಇವರು ಕುಲಪತಿಗಳೀಗೆ ಸಲ್ಲಿಸಿರುವ ಮನವಿ ಪತ್ರದ ದಿನಾಂಕ:17.10.2019<br>6. ಅಧ್ಯಕ್ಷರು ಮೈಸೂರು ವಿಶ್ವವಿದ್ಯಾನಿಲಯ ಸಂಶೋಧಕರ ಸಂಘ(ರಿ) ಮಾನಸ ಗಂಗೋತ್ರಿ ಮೈಸೂರು ಇವರು ಕುಲಪತಿಗಳಿಗೆ ಸಲ್ಲಿಸಿರುವ ಮನವಿ ಪತ್ರದ ದಿನಾಂಕ:22.10.2019<br>7. ವಿ,ವಿ ಆದೇಶ ಸಂಖ್ಯೆ:ವಿಕ್ಷೇಪಾ1/1062/2017–18 ದಿನಾಂಕ:07.11.2019<br>ಮಾನ್ಯ ಕುಲಪತಿಗಳ ಅನುಮೋದನೆಯ ಮೇರೆಗೆ ಹಾಗೂ ಮುಂಬರುವ ವಿಶ್ವವಿದ್ಯಾನಿಲಯದ ವಿದ್ಯಾರ್ಥಿನಿಲಯಗಳ ಆಡಳಿತ ನಿರ್ವಹಣೆ ಹಾಗೂ ವಿದ್ಯಾರ್ಥಿಗಳ ಕ್ಷೇಮಾಭಿವೃದ್ಧಿ ಸಲಹಾ ಸಮಿತಿ ಸಭೆ ಮತ್ತು ಸಿಂಡಿಕೇಟ್ ಸಭೆಯ ನಿರ್ಣಯವನ್ನು ಕಾಯ್ದಿರಿಸಿ ವಿಶ್ವವಿದ್ಯಾನಿಲಯದ ವಿದ್ಯಾರ್ಥಿ ನಿಲಯಗಳಲ್ಲಿ ಹಾಲಿ ವಾಸ್ತವ್ಯವಿರುವ ಸಂಶೋಧನಾರ್ಥಿಗಳಿಗೆ ಅನ್ವಯಿಸುವಂತೆ ಮನೆ ಬಾಡಿಗೆ ಭತ್ಯೆಯ ಸಂಬಂಧ ಈ ಹಿಂದೆ ವಿಶ್ವವಿದ್ಯಾನಿಲಯದ ವತಿಯಿಂದ ಹೊರಡಿಸಲಾಗಿದ್ದು ಎಲ್ಲಾ ಆದೇಶಗಳನ್ನು ಈ ತಕ್ಷಣದಿಂದ ಜಾರಿಗೆ ಬಂದಂತೆ ರದ್ದುಪಡಿಸಿ ಹೆಚ್,ಆರ್,ಎ ಕಟಾವಣೆಗೆ ವಿನಾಯಿತಿಯನ್ನು ನೀಡಲು ಅನುಮತಿಯನ್ನು ನೀಡಲಾಗಿದೆ ಎಂಬ ಆದೇಶವನ್ನು ಉಲ್ಲೇಖ (8) ರ ಆದೇಶದ ಪತ್ರದಲ್ಲಿ ಹೊರಡಿಸಿರುವ ಸಂಬಂಧ ವಿದ್ಯಾರ್ಥಿನಿಲಯದ ಸಂಶೋಧನಾರ್ಥಿಗಳಿಂದ ಹೆಚ್,ಆರ್,ಎ ಕಡಿತಗೊಳಿಸುವುದನ್ನು ರದ್ದು ಪಡಿಸಲಾಗಿದ್ದು ಈ ಆದೇಶದನ್ವಯ ಮನೆ ಬಾಡಿಗೆ ಭತ್ಯೆಯನ್ನು ಕಡಿತಗೊಳಿಸುವುದನ್ನು ಕೈ ಬಿಡಲಾಗಿದೆ ಸದರಿ ಆದೇಶದ ಪ್ರತಿಯನ್ನು ಮಾಹಿತಿಗಾಗಿ ಲಗತ್ತಿಸಿದೆ.<br><br>ಈ ಸಂಬಂಧ ಕಂಡಿಕೆ 113 ರ ವಸೂಲಾತಿ ಕಂಡಿಕೆಯನ್ನು ಕೈ ಬಿಡುವಂತೆ ನಿವೇದಿಸಲಾಗಿದೆ. |

**114.ಖಾಯಂ ಅಧಿಕಾರಿ ಹಾಗೂ ನೌಕರ ವರ್ಗದವರಿಗೆ ನಿಯಮಬಾಹಿರವಾಗಿ ಪರೀಕ್ಷಾ ಸಂಭಾವನೆ ಪಾವತಿಸಿರುವುದುರ ಕುರಿತು :– (ಸರ್ ಎಂ ವಿಶ್ವೇಶ್ವರಯ್ಯ ಸ್ನಾತಕೋತ್ತರ ಕೇಂದ್ರ ಮಂಡ್ಯ)**

2016–17 ಹಾಗೂ 2017–18ನೇ ಸಾಲುಗಳ ಲೆಕ್ಕಪರಿಶೋಧನೆಗೆ ಹಾಜರುಪಡಿಸಲಾದ ಪಾವತಿ ಓಚರ್‌ಗಳನ್ನು ಪರಿಶೀಲಿಸಲಾಗಿ ಸದರಿ ಶೈಕ್ಷಣಿಕ ಸಾಲುಗಳಲ್ಲಿ ಜರುಗಿದ ವಿವಿಧ ವಿಷಯಗಳ ಪರೀಕ್ಷೆಗಳಲ್ಲಿ ಪರೀಕ್ಷಾಧಿಕಾರಿ ಹಾಗೂ ಸಹಾಯಕರಾಗಿ ಕರ್ತವ್ಯ ನಿರ್ವಹಿಸಿದ ಕೇಂದ್ರದ ಖಾಯಂ ಅಧಿಕಾರಿ/ನೌಕರರಿಗೆ ಒಟ್ಟು ರೂ.10,285/–ಗಳನ್ನು ಪರೀಕ್ಷಾ ಸಂಭಾವನೆಯಾಗಿ ಪಾವತಿಸಿರುವುದು ಕಂಡುಬಂದಿದ್ದು (ವಿವರಗಳನ್ನು **ಅನುಬಂಧ–59**ರಲ್ಲಿ ನೀಡಿದೆ) ಕರ್ನಾಟಕ ರಾಜ್ಯ ನಾಗರೀಕ ಸೇವಾ ನಿಯಮಾವಳಿ (KCSR)ಗಳ ನಿಯಮ 28 (a) (b) (c) ಹಾಗೂ (e)ರನ್ವಯ ಪರೀಕ್ಷಾ ಕಾರ್ಯವು ಕೇಂದ್ರದ ಖಾಯಂ ಅಧಿಕಾರಿ/ನೌಕರರ ಆದ್ಯ ಕರ್ತವ್ಯವಾಗಿದ್ದು ಈ ಸಂಬಂಧ ಯಾವುದೇ ಸಂಭಾವನೆ ಪಡೆಯಲು ಅವಕಾಶವಿರುವುದಿಲ್ಲವಾದರೂ, ನಿಯಮಬಾಹಿರವಾಗಿ ಪಾವತಿಸಲಾಗಿರುವ ಪರೀಕ್ಷಾ ಸಂಭಾವನೆಯ ಒಟ್ಟು ಮೊತ್ತ **ರೂ.10,285/–ಗಳನ್ನು** ಸಂಬಂಧಿಸಿದವರಿಂದ ವಸೂಲಿಸಿ ವಿಶ್ವವಿದ್ಯಾನಿಲಯದ ಖಾತೆಗೆ ಜಮೆ ಮಾಡಿ ವರದಿ ಸಲ್ಲಿಸಲು ಸೂಚಿಸಿದೆ (ವಿಚಾರಣ ಪತ್ರ ಸಂಖ್ಯೆ:03/2019–20ದಿನಾಂಕ:26.06.2019).

ಪ್ರಸ್ಥಾವಿತ ಕಂಡಿಕೆಯಲ್ಲಿ 2016–17 ಮತ್ತು 2017–18ನೇ ಸಾಲಿನಲ್ಲಿ ಸರ್ ಎಂ ವಿಶ್ವೇಶ್ವರಯ್ಯ ಸ್ನಾತಕೋತ್ತರ ಕೇಂದ್ರ ಮಂಡ್ಯ ಇಲ್ಲಿನ ಶಿಕ್ಷಕರು ಸೇರಿದಂತೆ ದ್ವಿ.ದ.ಸ ಗ್ರೂಪ್ ಡಿ ನೌಕರರು ಪರೀಕ್ಷಾ ಕರ್ತವ್ಯದಲ್ಲಿ ಭಾಗವಹಿಸಿರುವ ಸಲುವಾಗಿ ಪಾವತಿಸಿರುವ ಪರೀಕ್ಷಾ ಸಂಭಾವನೆ ಒಟ್ಟು ಮೊತ್ತ ರೂ.10,285/–ಗಳ ಪಾವತಿಯನ್ನು ಆಕ್ಷೇಪಿಸಲಾಗಿದೆ.

ಪರೀಕ್ಷಾ ಕಾರ್ಯಗಳು ವಿಶ್ವವಿದ್ಯಾನಿಲಯದ ಆದ್ಯತೆ, ಗೌಪ್ಯತೆ ಮತ್ತು ಹೆಚ್ಚು ಜವಾಬ್ದಾರಿಯುತ ಕಾರ್ಯಗಳಾಗಿರುತ್ತದೆ ಅಲ್ಲದೆ ಪರೀಕ್ಷಾ ಕಾರ್ಯದಲ್ಲಿನ ನಿಯೋಜಿತ ಅಧ್ಯಾಪಕ ಮತ್ತು ಅಧ್ಯಾಪಕೇತರ ಸಿಬ್ಬಂದಿಗೆ ಸಂಭಾವನೆಯನ್ನು ಪಾವತಿಸಲು ದಿನಾಂಕ:12.11.2013ರಲ್ಲಿ ಸಿಂಡಿಕೇಟ್ ನಿರ್ಣಯವಾಗಿರುತ್ತದೆ ಮತ್ತು ಸಿಂಡಿಕೇಟ್ ನಿರ್ಣಯವನ್ನು ಅನುಸರಿಸಿ ಕಛೇರಿ ಆದೇಶ ಸಂಖ್ಯೆ:ಜಿ.ಎಲ್.5/142/2012–13, ದಿನಾಂಕ:20.12.2013ರಲ್ಲಿ ಕಛೇರಿ ಆದೇಶ ಜಾರಿಯಾಗಿದೆ.

ಇದರನ್ವಯ ಉಲ್ಲೇಖಿತ ಪಾವತಿ ಮಾಡಲಾಗಿದೆ (ಈ ಸಂಬಂಧ ಕಛೇರಿ ಆದೇಶದ ಪ್ರತಿ ಲಗತ್ತಿಸಿದೆ).

ಆದ ಕಾರಣ ಸೂಚಿತ ವಸೂಲಾತಿ ಕಂಡಿಕೆ ಕೈ ಬಿಡಲು ಕೋರಿದೆ.

**115. ಸ್ವಂತಕ್ಕೆ ಹಣ ಡ್ರಾ ಮಾಡಿ ವೋಚರ್‌ಗಳನ್ನು ಲೆಕ್ಕಪರಿಶೋಧನಗೆ ಹಾಜರುಪಡಿಸದಿರುವುದು :– (ರಾಜ್ಯಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ)**

ಈ ವಿಭಾಗದಿಂದ ನಿರ್ವಹಿಸುತ್ತಿರುವ ಉಳಿತಾಯ ಬ್ಯಾಂಕ್ ಖಾತೆ ಸಂಖ್ಯೆ:6416033253 ರಲ್ಲಿ 2017–18ನೇ ಸಾಲಿನಲ್ಲಿ ಒಟ್ಟು ರೂ.2,00,240/–ಗಳನ್ನು ಸ್ವಂತಕ್ಕೆ ಹಣ ಡ್ರಾ ಮಾಡಲಾಗಿದೆ ವಿವರಗಳು ಈ ಕೆಳಕಂಡಂತಿದೆ.

| ಕ್ರಸಂ | ಧನಾದೇಶ ಸಂಖ್ಯೆ | ಧನಾದೇಶ ದಿನಾಂಕ | ಮೊತ್ತ ರೂ.ಗಳಲ್ಲಿ |
|---|---|---|---|
| 1 | 242328 | 10.04.2017 | 6,000 |
| 2 | 242329 | 26.04.2017 | 50,000 |
| 3 | 242336 | 03.05.2017 | 7,200 |
| 4 | 242338 | 03.05.2017 | 20,400 |
| 5 | 242339 | 15.05.2017 | 39,000 |
| 6 | 242340 | 04.05.2017 | 22,965 |
| 7 | 242342 | 22.05.2017 | 50,000 |
| 8 | 242345 | 06.06.2017 | 2,180 |
| 9 | 242347 | 27.03.2018 | 2,495 |
| | | ಒಟ್ಟು | 2,00,240 |

ಮೇಲ್ಕಂಡ ವಿವರಗಳಂತೆ ಹೀಗೆ ಸ್ವಂತಕ್ಕೆ ಡ್ರಾ ಮಾಡಲಾದ ರೂ.2,00,240/–ಗಳಿಗೆ ಸಂಬಂಧಿಸಿದ ವೋಚರ್‌ಗಳನ್ನು ಮತ್ತು ಪೂರಕ ಲೆಕ್ಕಪತ್ರ ದಾಖಲೆಗಳನ್ನು ಲೆಕ್ಕಪರಿಶೋಧನೆಗೆ

ರಾಜ್ಯಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗದ ಉಳಿತಾಯ ಖಾತೆಯಲ್ಲಿ ಸ್ವಂತಕ್ಕೆ ಹಣ ಡ್ರಾ ಮಾಡಿರುವ ಒಟ್ಟು ಮೊತ್ತ **ರೂ.2,00,240/–ಗಳಿಗೆ** ಸಂಬಂಧಿಸಿದ ವೋಚರ್‌ಗಳು ಮತ್ತು ಪೂರಕ ಲೆಕ್ಕಪತ್ರಗಳು ಹಾಗೂ ನ್ಯೂನತೆಗಳ ಬಗ್ಗೆ ಕಂಡಿಕೆಯಲ್ಲಿ ಪ್ರಸ್ತಾಪಿಸಲಾಗಿರುತ್ತದೆ.

ಕಂಡಿಕೆಯಲ್ಲಿ ಪ್ರಸ್ತಾಪಿಸಿರುವ ವೋಚರ್‌ಗಳು ಮತ್ತು ಪೂರಕ ಲೆಕ್ಕಪತ್ರ ದಾಖಲೆಗಳು ಅಧ್ಯಯನ ವಿಭಾಗದಲ್ಲಿ ತತಕ್ಷಣಕ್ಕೆ ಸಿಗುತ್ತಿಲ್ಲವಾದ್ದರಿಂದ ಮುಂದಿನ ಲೆಕ್ಕಪರಿಶೋಧನೆಯಲ್ಲಿ ಸಲ್ಲಿಸುವುದಕ್ಕೆ ಕಾಲಾವಕಾಶ ಮಾಡಿಕೊಡಬೇಕಾಗಿ ಅಂದಿನ ಅಧ್ಯಕ್ಷರಾದ ಶ್ರೀ ಡಾ॥ ಜಿ.ಟಿ ರಾಮಚಂದ್ರಪ್ಪ ಹಾಗೂ ಪ್ರಸುತ್ತ ಅಧ್ಯಕ್ಷರುಗಳು ಕೋರಿಕೊಂಡಿರುವ ಅಂಶವನ್ನು ತಮ್ಮ ಅವಗಾಹನೆಗೆ ಸಲ್ಲಿಸುತ್ತಾ ಪತ್ರಿ ಲಗತ್ತಿಸಿದೆ.

| | |
|---|---|
| ಹಾಜರುಪಡಿಸುವಂತೆ ಮೌಖಿಕವಾಗಿ ಹಾಗೂ ವಿಚಾರಣಾ ಪತ್ರ ಸಂಖ್ಯೆ:02/2019–20ನ್ನು ದಿನಾಂಕ:03.06.2019 ವಿಚಾರಣಾ ಪತ್ರ ಸಂಖ್ಯೆ:03/2019–20 ನ್ನು ದಿನಾಂಕ:04.06.2019 ಮತ್ತು ವಿಚಾರಣಾ ಪತ್ರ ಸಂಖ್ಯೆ:06/2019–20 ನ್ನು ದಿನಾಂಕ:04.06.2019 ರಂದು ನೀಡಿದರೂ ಹಾಜರುಪಡಿಸಿರುವುದಿಲ್ಲ.<br><br>ಸ್ವಂತಕ್ಕೆ ಹಣ ಡ್ರಾ ಮಾಡಿರುವುದಕ್ಕೆ ಈ ಕೆಳಕಂಡ ನ್ಯೂನ್ಯತೆಗಳ ಅಂಶಗಳಿರುವುದನ್ನು ಗಮನಿಸಲಾಗಿದೆ.<br><br>ಅ) ಕರ್ನಾಟಕ ಆರ್ಥಿಕ ಸಂಹಿತೆ ಅನುಚ್ಛೇಧ–70 ರ ರೀತ್ಯಾ ಎಲ್ಲಾ ಪಾವತಿಗಳನ್ನು ಧನಾದೇಶದ ಮೂಲಕವೇ ಸಂದಾಯ ಮಾಡಬೇಕಾಗಿದ್ದು ಇಷ್ಟು ದೊಡ್ಡ ಮೊತ್ತದ ಹಣವನ್ನು ಸ್ವಂತಕ್ಕೆ ಡ್ರಾ ಮಾಡಿರುವುದು ನಿಯಮಗಳ ಉಲ್ಲಂಘನೆಯಾಗಿರುತ್ತದೆ.<br><br>ಆ) ವಿಭಾಗದ/ಕಛೇರಿಯ ವೆಚ್ಚಗಳ ಪಾವತಿಗಳನ್ನು ಆದಷ್ಟು ನಗದು ರಹಿತವಾಗಿ ಪಾವತಿಸಬೇಕಾಗಿದ್ದು ಹಾಗೂ ಸೇವಾದಾರರು ಮತ್ತು ಸರಬರಾಜುದಾರರುಗಳಿಗೆ ನಿಯಮಾನುಸಾರ ಧನಾದೇಶ/RTGS/NEFT ಮುಖಾಂತರ ಪಾವತಿಸಲು ಕ್ರಮ ವಹಿಸದಿರುವುದು ಹಣ ಸೆಳೆವ ಅಧಿಕಾರಿಯ ಕರ್ತವ್ಯಲೋಪವಾಗಿರುತ್ತದೆ.<br><br>ಮೇಲ್ಕಂಡ ನ್ಯೂನತೆಗಳೊಂದಿಗೆ ವಿಚಾರಣಾ ಪತ್ರಗಳನ್ನು ನೀಡಿದರೂ ಸಹ ಲೆಕ್ಕಪತ್ರ ದಾಖಲೆಗಳನ್ನು ಹಾಜರುಪಡಿಸದಿರುವುದನ್ನು ಲೆಕ್ಕಪರಿಶೋಧನೆಯಲ್ಲಿ ಗಂಭೀರವಾಘಿ ಪರಿಗಣಿಸುತ್ತಾ ಕಛೇರಿಯ ಅಂದಿನ ಅಧ್ಯಕ್ಷರಾದ ಶ್ರೀ.ಡಾ॥ ಜಿ,ಟಿ ರಾಮಚಂದ್ರಪ್ಪ ರವರಿಂದ ಸ್ವಂತಕ್ಕೆ ಡ್ರಾ ಮಾಡಿದ ಹಣ ಒಟ್ಟು ರೂ.2,00,240/–ಗಳನ್ನು ವಸೂಲಿಸಲು ಹಾಗೂ ಸಂಬಂಧಿಸಿದ ಅಧಿಕಾರಿ ಮತ್ತು ಸಿಬ್ಬಂದಿಗಳ ಮೇಲೆ ನಿಯಮಾನುಸಾರ ಕ್ರಮ ಕೈಗೊಳ್ಳಲು ಸೂಚಿಸಿದೆ. | |
| **<u>116. ಪರೀಕ್ಷಾ/ಇನ್ನಿತರೆ ಕಾರ್ಯ ನಿರ್ವಹಿಸಿರುವುದಕ್ಕೆ ಖಾಯಂ ನೌಕರರುಗಳಿಗೆ/ಯು.ಜಿ.ಸಿ ವೇತನ ಪಡೆಯುವವರಿಗೆ ಪರೀಕ್ಷಾ ಭತ್ಯೆ, ಸಭಾ ಭತ್ಯೆ ಮತ್ತು ಆಸನ ಭತ್ಯೆಗಳನ್ನು ಪಾವತಿಸಿರುವುದು :– (ಆಹಾರ ವಿಜ್ಞಾನ ಮತ್ತು ಪೊಷಕಾಂಶ ಸ್ನಾತಕೋತ್ತರ ಅಧ್ಯಯನ ವಿಭಾಗ)</u>**<br>ಆಹಾರ ವಿಜ್ಞಾನ ಮತ್ತು ಪೋಷಕಾಂಶ ಅಧ್ಯಯನ ವಿಭಾಗದ 2017–18ನೇ ಸಾಲಿನ ಲೆಕ್ಕಪರಿಶೋಧನೆಯಲ್ಲಿ ಹಾಜರುಪಡಿಸಿದ ವೋಚರ್‌ಗಳನ್ನು ಪರಿಶೀಲಿಸಲಾಗಿ ಪರೀಕ್ಷಾ ಕಾರ್ಯ ಹಾಗೂ ಇನ್ನಿತರೆ ಕಾರ್ಯ ನಿರ್ವಹಿಸಿರುವುದಕ್ಕೆ ಸಭೆಗಳಿಗೆ ಹಾಜರಾಗಿರುವುದಕ್ಕೆ ಖಾಯಂ ನೌಕರರುಗಳಿಗೆ ಯು,ಜಿ,ಸಿ ವೇತನ ಪಡೆಯವವರಿಗೆ ಸಭಾ ಭತ್ಯೆ ಪರೀಕ್ಷಾ ಭತ್ಯೆ ಮತ್ತು ಆಸನ ಭತ್ಯೆಗಳನ್ನು ಪಾವತಿಸಿರುವುದನ್ನು ಗಮನಿಸಲಾಗಿದ್ದು ಪಾವತಿ ವಿವರಗಳನ್ನು ಅನುಬಂಧ–60 ರಲ್ಲಿ ವಿವರಿಸಲಾಗಿದೆ ಕೆ,ಸಿ,ಎಸ್ ನಿಯಮಾಳಿಗಳಲ್ಲಿ ಖಾಯಂ ನೌಕರರಿಗೆ ಸದರಿ ಭತ್ಯೆಗಳನ್ನು ಪಾವತಿಸಲು ಅವಕಾಶವಿರುವುದಿಲ್ಲ ಈ ಕುರಿತು ಪೂರಕ ದಾಖಲಾತಿಗಳೊಂದಿಗೆ ವಿವರಣೆ ನೀಡುವಂತೆ ವಿಚಾರಣಾ ಪತ್ರ ಸಂಖ್ಯೆ:05/2019/19.06.2019ನ ರಲ್ಲಿ ಕೋರಲಾಗಿ ಯಾವುದೇ ಉತ್ತರ ನೀಡುರುವುದಿಲ್ಲ ಆದ್ದರಿಂದ ಖಾಯಂ ನೌಕರರಿಗೆ ಪಾವತಿಸಲಾತಿರುವ ಪರೀಕ್ಷಾ ಭತ್ಯೆ ಆಸನ ಭತ್ಯೆ ಮತ್ತು ಸಭಾ ಭತ್ಯೆಗಳ ಒಟ್ಟು ಮೊತ್ತ ರೂ.5,870/–ಗಳನ್ನು ವಸೂಲಿಸಲು ಸೂಚಿಸಿದೆ. | ಪ್ರಸ್ತಾವಿತ ಕಂಡಿಕೆಯ ವಿಷಯಕ್ಕೆ ಸಂಬಂಧಿಸಿದಂತೆ ವಿಶ್ವವಿದ್ಯಾನಿಲಯದ ನಿಗದಿತವಾದ ಪರೀಕ್ಷಾ ಕಾರ್ಯದಲ್ಲಿ ಭಾಗವಹಿಸಿರುವ ಸದರಿ ವಿಭಾಗದ ಸಿಬ್ಬಂದಿಗೆ ಪರೀಕ್ಷಾ ಭತ್ಯೆಗಳನ್ನು ಪಾವತಿಸಿರುವ ಬಗ್ಗೆ ಉಲ್ಲೇಖಿಸಲಾಗಿದೆ.<br><br>ಆದರೆ ದಿನಾಂಕ:12.11.2013ರ ಸಿಂಡಿಕೇಟ್ ನಿರ್ಣಯ ಮತ್ತು ಇದನ್ನು ಉಲ್ಲೇಖಿಸಿ ಹೊರಡಿಸಿರುವ ಕಛೇರಿ ಆದೇಶ ಸಂಖ್ಯೆ:ಜಿ.ಎಲ್.5/142/2012–13,ದಿನಾಂಕ:20.12.2013 ರನ್ವಯ ಉಲ್ಲೇಖಿತ ಹುದ್ದೆಯ ಸಿಬ್ಬಂದಿಯು ಪರೀಕ್ಷಾ ಭತ್ಯೆಯನ್ನು ಪಡೆಯಬಹುದಾಗಿದೆ (ಆದೇಶದ ಪ್ರತಿ ಲಗತ್ತಿಸಿದೆ).<br><br>ಆದ ಕಾರಣ ಸೂಚಿತ ವಸೂಲಾತಿ ಕಂಡಿಕೆ ಕೈ ಬಿಡಲು ಕೋರಿದೆ. |

**117.ಸ್ವಂತಕ್ಕೆ ಹಣ ಡ್ರಾ ಮಾಡಿದಕ್ಕೆ ಸಂಬಂಧಿಸಿದ ವೋಚರ್‌ಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸದಿರುವುದು;– (ಜೀವರಸಾಯನಶಾಸ್ತ್ರ ಸ್ನಾತಕೋತ್ತರ ಅಧ್ಯಯನ ವಿಭಾಗ)**

ಈ ವಿಭಾಗದಿಂದ ನಿರ್ವಹಿಸುತ್ತಿರುವ ಉಳಿತಾಯ ಖಾತೆ ಸಂಖ್ಯೆ: 64059418479 ರಲ್ಲಿ 2017–18 ನೇ ಸಾಲಿನಲ್ಲಿ ಸ್ವಂತಕ್ಕೆ ಹಣ ಡ್ರಾ ಮಾಡಿದಕ್ಕೆ ವೋಚರ್‌ಗಳನ್ನು ಹಾಜರುಪಡಿಸಿರುವುದಿಲ್ಲ ವಿವರಗಳು ಈ ಕೆಳಲಂಡಂತಿದೆ.

| ಕ್ರ.ಸಂ | ಧನಾದೇಶ ಸಂಖ್ಯೆ | ಧನಾದೇಶ ದಿನಾಂಕ | ಮೊತ್ತ ರೂ.ಗಳಲ್ಲಿ |
|---|---|---|---|
| 1 | 868734 | 26.05.2017 | 18,000 |
| 2 | 868735 | 03.06.2017 | 810 |
| 3 | 868736 | 05.06.2017 | 3,000 |
| 4 | 868737 | 05.06.2017 | 1,071 |
| 5 | 317698 | 07.11.2017 | 1,902 |
| 6 | 317699 | 10.11.2017 | 3,545 |
| 7 | 317703 | 15.12.2017 | 280 |
| | | ಒಟ್ಟು | **28,608** |

ಮೇಲ್ಕಂಡ ವಿವರಗಳಂತೆ ಹೀಗೆ ಸ್ವಂತಕ್ಕೆ ಹಣ ಡ್ರಾ ಮಾಡಲಾದ ಒಟ್ಟು ರೂ.28,608/–ಗಳಿಗೆ ಸಂಬಂಧಿಸಿದ ವೋಚರ್‌ಗಳನ್ನು ಮತ್ತು ಪೂರಕ ಲೆಕ್ಕಪತ್ರ ದಾಖಲೆಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸುವಂತೆ ಮೌಖಿಕವಾಗಿ ಹಾಗೂ ವಿಚಾರಣಾ ಪತ್ರ ಸಂಖ್ಯೆ:02/2019–20ನ್ನು ದಿನಾಂಕ:21.06.2019 ರಂದು ಮತ್ತು ವಿಚಾರಣಾ ಪತ್ರ ಸಂಖ್ಯೆ;05/2019–20 ರಂದು ನೀಡಿದರೂ ಸಹ ಹಾಜರುಪಡಿಸಿರುವುದಿಲ್ಲ.

ಸ್ವಂತಕ್ಕೆ ಹಣ ಡ್ರಾ ಮಾಡಿರುವುದಕ್ಕೆ ಈ ಕೆಳಕಂಡ ನ್ಯೂನ್ಯತೆಗಳ ಅಂಶಗಳಿರುವುದನ್ನು ಗಮನಿಸಲಾಗಿದೆ.

ಅ) ಕರ್ನಾಟಕ ಆರ್ಥಿಕ ಸಂಹಿತೆ 1958 ಅನುಚ್ಛೇಧ–70 ರ ರೀತ್ಯಾ ಎಲ್ಲಾ ಪಾವತಿಗಳನ್ನು ಧನಾದೇಶದ ಮೂಲಕವೇ ಸಂದಾಯ ಮಾಡಬೇಕಾಗಿದ್ದು ಇಷ್ಟು ದೊಡ್ಡ ಮೊತ್ತದ ಹಣವನ್ನು ಸ್ವಂತಕ್ಕೆ ಡ್ರಾ ಮಾಡಿರುವುದು ನಿಯಮಗಳ ಉಲ್ಲಂಘನೆಯಾಗಿರುತ್ತದೆ.

ಆ) ವಿಭಾಗದ/ಕಛೇರಿಯ ವೆಚ್ಚಗಳ ಪಾವತಿಗಳನ್ನು ಆದಷ್ಟು ನಗದು ರಹಿತವಾಗಿ ಪಾವತಿಸಬೇಕಾಗಿದ್ದು ಹಾಗೂ ಸೇವಾದಾರರು ಮತ್ತು ಸರಬರಾಜುದಾರರುಗಳಿಗೆ ನಿಯಮಾನುಸಾರ ನೇರ ಧನಾದೇಶ/RTGS/NEFT ಮುಖಾಂತರ ಪಾವತಿಸಲು ಕ್ರಮ ವಹಿಸದಿರುವುದು ಹಣ

ಕಂಡಿಕೆ ಸಂಖ್ಯೆ 117ರಲ್ಲಿ ಪ್ರಸ್ತಾಪಿಸಿ ಆಕ್ಷೇಪಿಸಲಾದ ರೂ.28,608/–ಗಳಿಗೆ ಸಂಬಂಧಪಟ್ಟ ಬಿಲ್ಲಿನೊಂದಿಗೆ ಪೂರಕ ದಾಖಲಾತಿಗಳನ್ನು ಒದಗಿಸಲಾಗಿರುತ್ತದೆ ಸದರಿ ಮೊತ್ತವನ್ನು 1. ವಿದ್ಯಾರ್ಥಿ ವೇತನ 2, ಗ್ಯಾಸ್ ರೀ–ಫೀಲಿಂಗ್ 3.ಯುಪಿಎಸ್ ಸರ್ವಿಸ್ 4.ಗೌರವಧನ 5.ಸೇವಾದಾರರು ಹಾಗೂ ಸರಬರಾಜುದಾರರಿಗೆ 6.ಆಯುಧಾ ಪೂಜೆ ಖರ್ಚಿಗೆ 7.ಸ್ನಾತಕಪೂರ್ವ ವಾರ್ಷಿಕ ಅಧ್ಯಯನ ಮಂಡಳಿಯ ಸಭೆಯ ಸದ್ಯಸರುಗಳಿಗೆ ಲಘು ಉಪಹಾರದ ಖರ್ಚಿಗೆ ಬಳಸಿಕೊಳ್ಳಲಾಗಿರುತ್ತದೆ ಇದರ ಓಚರ್ ಮತ್ತು ಬಿಲ್‌ಗಳನ್ನು ಲಗತ್ತಿಸಿ ತಮ್ಮ ಮುಂದಿನ ಸೂಕ್ತ ಕ್ರಮಕ್ಕಾಗಿ ಕಳುಹಿಸಿಕೊಡಲಾಗಿದೆ. ಆದ್ದರಿಂದ ಕಂಡಿಕೆ 117ರ ಆಕ್ಷೇಪಣೆಯನ್ನು ಕೈಬಿಡಬೇಕೆಂದು ಕೋರಲಾಗಿದೆ.

ಬಿಲ್ಲುಗಳ ವಿವರ ಈ ಕೆಳಕಂಡಂತಿರುತ್ತದೆ.

| ಕ್ರ. ಸಂ | ಧನಾದೇಶ ಸಂಖ್ಯೆ | ಧನಾದೇಶ ದಿನಾಂಕ | ಮೊತ್ತ ರೂ.ಗಳಲ್ಲಿ | ಖರ್ಚಿನ ವಿವರ |
|---|---|---|---|---|
| 1 | 868734 | 26.05.2017 | 18,000 | ವಿದ್ಯಾರ್ಥಿ ವೇತನ |
| 2 | 868735 | 03.06.2017 | 810 | ಗ್ಯಾಸ್ ರೀ–ಫೀಲಿಂಗ್ |
| 3 | 868736 | 05.06.2017 | 3,000 | ಯುಪಿಎಸ್ ಸರ್ವಿಸ್ |
| 4 | 868737 | 05.06.2017 | 1,071 | ಗೌರವಧನ |
| 5 | 317698 | 07.11.2017 | 1,902 | ಸೇವಾದಾರರು ಹಾಗೂ ಸರಬರಾಜುದಾರರಿಗೆ ಆಯುಧ ಪೂಜೆಗಾಗಿ |
| 6 | 317699 | 10.11.2017 | 3,545 | ಗೌರವಧನ |
| 7 | 317703 | 15.12.2017 | 280 | ಸ್ನಾತಕಪೂರ್ವ ವಾರ್ಷಿಕ ಅಧ್ಯಯನ ಮಂಡಳಿಯ ಸಭೆಯ ಸದ್ಯಸರುಗಳಿಗೆ ಲಘು ಉಪಹಾರದ ಖರ್ಚು |
| | | ಒಟ್ಟು | **28,608** | |

| | |
|---|---|
| ಸೆಳೆವ ಅಧಿಕಾರಿಯ ಕರ್ತವ್ಯಲೋಪವಾಗಿರುತ್ತದೆ.<br><br>ಮೇಲ್ಕಂಡ ನ್ಯೂನತೆಗಳೊಂದಿಗೆ ವಿಚಾರಣಾ ಪತ್ರಗಳನ್ನು ನೀಡಿದರೂ ಸಹ ಲೆಕ್ಕಪತ್ರ ದಾಖಲೆಗಳನ್ನು ಹಜರುಪಡಿಸದಿರುವುದನ್ನು ಲೆಕ್ಕಪರಿಶೋಧನೆಯಲ್ಲಿ ಗಂಭೀರವಾಗಿ ಪರಿಗಣಿಸುತ್ತಾ ಕಛೇರಿಯ ಅಧ್ಯಕ್ಷರಾದ ಪ್ರೊ॥ಕೆ.ಕೆಂಪರಾಜು ರವರಿಂದ ಸ್ವಂತಕ್ಕೆ ಡ್ರಾ ಮಾಡಿದ ಹಣ ಒಟ್ಟು ರೂ.28,608/–ಗಳನ್ನು ವಸೂಲಿಸಲು ಹಾಗೂ ನಿಯಮಗಳನ್ನು ಉಲ್ಲಂಘಿಸಿರುವುದಕ್ಕೆ ಸೂಕ್ತ ಕ್ರಮ ಕೈಗೊಳ್ಳಲು ಸೂಚಿಸಿದೆ. | |
| **ಪರೀಕ್ಷಾ ವಿಭಾಗ**<br>**118. ಚಿನ್ನದ ಪದಕ ಸರಬರಾಜು Viable Diamonds ರವರಿಗೆ ಹೆಚ್ಚುವರಿ ಪಾವತಿ ನೀಡಿರುವ ಬಗ್ಗೆ :– (ಪರೀಕ್ಷಾ ವಿಭಾಗ)**<br><br>2017–18ನೇ ಸಾಲಿನ 98ನೇ ಘಟಿಕೋತ್ಸವಕ್ಕೆ ಚಿನ್ನದ ಪದಕ ತಯಾರಿಸಿ ಸರಬರಾಜು ಮಾಡಿದ **Viable Diamonds** ರವರಿಗೆ ಮುಂಗಡ ಪಾವತಿಯನ್ನು ಹೊರತುಪಡಿಸಿ ಒಟ್ಟು ಮೊತ್ತ ರೂ.1,96,565/–ಗಳನ್ನು ಪಾವತಿಸಬೇಕಾಗಿದ್ದು ಸದರಿ ಮೊತ್ತದಲ್ಲಿ ಶೇಕಡ 2.3% ರಷ್ಟು ಆದಾಯ ತೆರಿಗೆ ಕಡಿತಗೊಳಿಸಿ ಅಂದರೆ ರೂ.4,520/–ಗಳನ್ನು ಎಸ್‌ಬಿಐ ಮ್ಯಾನೇಜರ್ ರವರ ಹೆಸರಿಗೆ ಧನಾದೇಶ ಸಂಖ್ಯೆ:908153 ದಿನಾಂಕ:29.05.2018ರಲ್ಲಿ ಧನಾದೇಶವನ್ನು ನೀಡಲಾಗಿದ್ದು ಉಳಿಕೆ ಮೊತ್ತ ರೂ.1,92,045/–ಗಳನ್ನು ಚಿನ್ನದ ಪದಕ ಸರಬರಾಜುದಾರರಿಗೆ ಪಾವತಿಬೇಕಾಗಿರುತ್ತದೆ. ಆದರೆ ಆದಾಯ ತೆರಿಗೆ ಮೊತ್ತವನ್ನು ಸೇರಿಸಿ **Viable Diamonds** ರವರಿಗೆ ಧನಾದೇಶ ಸಂಖ್ಯೆ:908154 ದಿನಾಂಕ:29.05.2018 ರಲ್ಲಿ ರೂ.1,96,565/–ಗಳಿಗೆ ಧನಾದೇಶವನ್ನು ನೀಡಿದ್ದು ಹೆಚ್ಚುವರಿಯಾಗಿ ಪಾವತಿಸಿರುವ ರೂ.4,520/–ಗಳ ವಿವರ ನೀಡಲು ವಿಚಾರಣೆ ಪತ್ರ ಸಂಖ್ಯೆ;07/2019–20 ದಿನಾಂಕ:25.04.2019 ರಲ್ಲಿ ಮಾಹಿತಿ ಕೋರಿದ್ದು ಯಾವುದೆ ವಿವರಣೆ ನೀಡದಿರುವುದರಿಂದ ಹೆಚ್ಚುವರಿಯಾಗಿ ಪಾವತಿಯಾಗಿರುವ **ರೂ.4,520/–ಗಳನ್ನು Viable Diamonds ರವರಿಂದ ವಸೂಲಾತಿಗೆ ಸೂಚಿಸಿದೆ.** | ಪ್ರಸ್ಥಾವಿತ ಕಂಡಿಕೆಯಲ್ಲಿನ ವಿಷಯಕ್ಕೆ ಸಂಬಂಧಿಸಿದಂತೆ 98ನೇ ಘಟಿಕೋತ್ಸವಕ್ಕೆ ಚಿನ್ನದ ಪದಕ ಸರಬರಾಜು ಮಾಡಿರುವ ಏಜೆನ್ಸಿಯಾದ ಮೆ॥ Viable Diamonds ರವರಿಗೆ ಹೆಚ್ಚುವರಿಯಾಗಿ ಪಾವತಿಯಾಗಿದ್ದ ಆದಾಯ ತೆರಿಗೆ ಬಾಬ್ತು ಮೊತ್ತ **ರೂ.4,520/–ಗಳನ್ನು** ಸಂಬಂಧಪಟ್ಟ ಏಜೆನ್ಸಿಯಿಂದ ವಸೂಲಿಸಲು ವಹಿಸಿದ ಕ್ರಮದಿಂದಾಗಿ ದಿನಾಂಕ:09.04.2021ರಂದು ವಿಶ್ವವಿದ್ಯಾನಿಲಯದ Enodoment Fund ಖಾತೆ ಸಂಖ್ಯೆ:54007591299ಗೆ ಹೊಂದಾಣಿಕೆ ಆಗಿರುತ್ತದೆ.(ಈ ಸಂಬಂಧ ಬ್ಯಾಂಕ್ ವಹಿವಾಟು ವಿವರದ ಪ್ರತಿ ಲಗತ್ತಿಸಿದೆ).<br><br>ಆದ್ದರಿಂದ ಸೂಚಿತ ವಸೂಲಾತಿ ಕಂಡಿಕೆ ಕೈ ಬಿಡಲು ಕೋರಿದೆ. |
| **119. ಚಿನ್ನದ ಪದಕಗಳ ಖರೀದಿ ಬಗ್ಗೆ ನ್ಯೂನ್ಯತೆಗಳು :– (ಪರೀಕ್ಷಾ ವಿಭಾಗ)**<br><br>2017–18ನೇ ಸಾಲಿನಲ್ಲಿಮೈಸೂರು ವಿಶ್ವವಿದ್ಯಾನಿಲಯದ 98ನೇ ಘಟಿಕೋತ್ಸವ ಕಾರ್ಯಕ್ರಮಕ್ಕೆ ಸಂಬಂಧಪಟ್ಟಂತೆ ವಿವಿಧ ವಿಷಯಗಳಲ್ಲಿ ವಿದ್ಯಾರ್ಥಿಗಳು ರ್‍ಯಾಂಕ್ ಪಡೆದ ವಿದ್ಯಾರ್ಥಿಗಳಿಗೆ ಚಿನ್ನದ ಪದಕಗಳನ್ನು ವಿತರಿಸುವುದಕ್ಕಾಗಿ ಒಟ್ಟು ರೂ.8,00,052/–ಗಳನ್ನು ಪಾವತಿಸಿ 348 ಚಿನ್ನದ ಪದಕಗಳನ್ನು ಟೆಂಡರ್ ಪ್ರಕ್ರಿಯೆ ಮೂಲಕ M/s **Viable Diamonds Indore** ರವರಿಂದ | ಪ್ರಸ್ಥಾವಿತ ಕಂಡಿಕೆಯಲ್ಲಿ 2017–18ನೇ ಸಾಲಿನಲ್ಲಿನ 98ನೇ ವಾರ್ಷಿಕ ಘಟಿಕೋತ್ಸವದಲ್ಲಿ ಚಿನ್ನದ ಪದಕ ವಿಜೇತ ವಿದ್ಯಾರ್ಥಿಗಳಿಗೆ ಚಿನ್ನದ ಪದಕವನ್ನು ಸರಬರಾಜು ಮಾಡಲು ವಿಶ್ವವಿದ್ಯಾನಿಲಯದ ಇ–ಟೆಂಡರ್ ಪ್ರಕಟಣೆ ಹೊರಡಿಸಿದ್ದು ಸದರಿ ಟೆಂಡರ್‌ನಲ್ಲಿ ತಾಂತ್ರಿಕ ಬಿಡ್ ಮತ್ತು ಆರ್ಥಿಕ ಬಿಡ್‌ನಲ್ಲಿ ಮೆ॥ Viable Diamonds, Indore ಏಜೆನ್ಸಿಯಿಂದ ಸೂಚಿಲ್ಪಟ್ಟ L-1 ದರದ ಆಧಾರದಲ್ಲಿ ಚಿನ್ನದ ಪದಕ ಸರಬರಾಜಿಗೆ |

| | |
|---|---|
| ಖರೀದಿಸಲಾಗಿದ್ದು ಸರಬರಾಜುದಾರರಿಗೆ ಶೇ.75% ರಷ್ಟು ಮೊಬಲಗು ರೂ.6,03,487/- ಗಳನ್ನು ಮುಂಗಡ ರೂಪದಲ್ಲಿ ಪಾವತಿಸಿದ್ದು ಈ ಮುಂಗವನ್ನು ಪಾವತಿಸುವ ಕುರಿತು ತಮ್ಮ ಟೆಮಡರ್ ಪ್ರಕಟಣೆಯಲ್ಲಿ ಪ್ರಕಟಿಸಲಾಗಿರುವ ನಿಬಂಧನೆಗಳಲ್ಲಿ ಮುಂಗಡ ನೀಡಲಾಗುವುದು ಎಂದು ಎಲ್ಲಿಯೂ ನಮೂದಿಸಿರುವುದಿಲ್ಲ ಅಥವಾ ಣಂವು ಮಾಡಿಕೊಳ್ಳಲಾಗಿರುವ ಟೆಂಡರ್ ಕರಾರಿನಲ್ಲಿಯೂ ಸಹ ಮುಂಗಡ ನೀಡುವ ಕುರಿತು ಉಲ್ಲೇಖಿಸಲಾಗಿರುವುದಿಲ್ಲ ಹಾಗೂ ಇಂತಹ ಕಾರ್ಯಗಳಿಗೆ ಎ.ಸಿ ಬಿಲ್ಲುಗಳ ಮೂಲಕ ಮುಂಗಡ ನೀಡಲು ಅವಶ್ಯಕವಿರುವುದಿಲ್ಲ ಈ ಸಂಬಂಧ ಹಿಂದಿನ ಸಾಲುಗಳ ಲೆಕ್ಕಪರಿಶೋಧನ ವರದಿಯಲ್ಲಿ ಸೂಕ್ತ ಕ್ರಮ ಕೈಗೊಳ್ಳಲು ಸೂಚಿಸಿದ್ದರು, ಯಾವುದೇ ಕ್ರಮ ಕೈಗೊಳ್ಳದೆ, ಬಿಆರ್‌ವಹಿಯಲ್ಲಿ ನಮೂದಿಸದಿರುವುದು ಮತ್ತು ಸದರಿ ಸಾಲಿನಲ್ಲಿಯೂ ಎ.ಸಿ ಬಿಲ್ಲಿನ ಮೂಲಕ ಮುಂಗಡ ಹಣವನ್ನು ಪಾವತಿಸಿದ್ದು ನಿಯಮಬಾಹಿರವಾಗಿರುವುದರಿಂದ **ಮುಂಗಡ ಪಾವತಿಸಿರುವ ಒಟ್ಟು ರೂ.6,03,487/-ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.** | ನಿರ್ಧಾರಿತವಾಗಿದೆ.<br><br>ಯಶಸ್ವಿ ಬಿಡ್‌ದಾರರಾದ ಮೆ॥ Viable Diamonds, Indore ರವರಿಗೆ ದಿನಾಂಕ:01.01.2018ರ ಕಾರ್ಯದೇಶ (Work Order) ಕ್ರಮ ಸಂಖ್ಯೆ 4ರಲ್ಲಿಯೂ ಟೆಂಡರ್‌ನಲ್ಲಿ ನಿರ್ಧರಿತವಾಗಿರುವ ಮೊತ್ತದ ಶೇ 75% ರಷ್ಟು ಮೊತ್ತವನ್ನು ಏಜೆನ್ಸಿಗೆ ಮುಂಗಡವಾಗಿ ನೀಡುವುದಾಗಿ ಸೂಚಿಸಲಾಗಿದೆ.<br><br>ಅಲ್ಲದೇ ಈ ಸಂಬಂಧ ವಿಶ್ವವಿದ್ಯಾನಿಲಯವು ಮೆ॥ Viable Diamonds, Indore ರವರೊಂದಿಗೆ ದಿನಾಂಕ;-25.01.2018 ರಂದು ಮಾಡಿಕೊಂಡಿರುವ ಕರಾರು ಪತ್ರದ ಕರಾರು ಸಂಖ್ಯೆ:08ರಲ್ಲಿಯೂ ಟೆಂಡರ್‌ನಲ್ಲಿ ನಿರ್ಧರಿತವಾಗಿರುವ ಮೊತ್ತದ ಶೇ 75% ರಷ್ಟು ಮೊತ್ತವನ್ನು ಏಜೆನ್ಸಿಗೆ ಮುಂಗಡವಾಗಿ ನೀಡುವುದಾಗಿ ಸೂಚಿಸಲಾಗಿದೆ.<br><br>ಆದ ಕಾರಣ ಟೆಂಡರ್ ಮೊತ್ತ ರೂ.8,52,000/-ರ ಶೇ 75% ಮೊತ್ತ ಅಂದರೆ 6,03,487/- ಗಳನ್ನು ಪಾವತಿಸಲಾಗಿದೆ. (ಈ ಸಂಬಂಧ ಸರಬರಾಜು/ಕಾರ್ಯದೇಶ ಮತ್ತು ಕರಾರು ಪತ್ರದ ಪ್ರತಿ ಲಗತ್ತಿಸಿದೆ)<br><br>ಆದ ಕಾರಣ ಸೂಚಿತ ಕಂಡಿಕೆ ಕೈ ಬಿಡಲು ಕೋರಿದೆ. |
| **120. ಮುದ್ದಾಲ ಇಂಡಸ್ಟ್ರೀಸ್ ರವರಿಂದ ಖರೀದಿಸಿ ಖಾಲಿ ಅಂಕಪಟ್ಟಿಗಳಲ್ಲಿ ಕಂಡುಬಂದ ನ್ಯೂನ್ಯತೆಗಳ ಕುರಿತು:- (ಪರೀಕ್ಷ ವಿಭಾಗ)**<br><br>2017-18ನೇ ಸಾಲಿನ ಲೆಕ್ಕಪರಿಶೋಧನೆಗೆ ಹಾಜರುಪಡಿಸಲಾದ ಪರೀಕ್ಷಾ ವಿಭಾಗದ ಖಾಲಿ ಅಂಕಪಟ್ಟಿಗಳ ಮುಖ್ಯ ದಾಸ್ತಾನುವಹಿಯನ್ನು ಪರಿಶೀಲಿಸಲಾಗಿ ಮುದ್ದಾಲ ಇಂಡಸ್ಟ್ರೀಸ್ ರವರಿಂದ ದಿನಾಂಕ:19.01.2018 ರಂದು (inv.no 427) ಖಾಲಿಅಂಕಪಟ್ಟಿ ಕ್ರಮ ಸಂಖ್ಯೆ:11,18,001 ರಿಂದ 11,26,000 ದವರೆಗಿನ ಒಟ್ಟಿ 8000 ಖಾಲಿ ಅಂಕಪಟ್ಟಿಗಳ ದಾಸ್ತಾನು ಸ್ವೀಕೃತಿ/ವಿತರಣೆ ವಿವರಗಳನ್ನು ಮುಖ್ಯ ದಾಸ್ತಾನು ವಹಿಯಲ್ಲಿ ನಮೂದಾಗಿರುವುದಿಲ್ಲ.<br><br>ಈ ಕುರಿತು ಸೂಕ್ತ ವಿವರಣೆ ಕೋರಿ ಆಡಿಟ್ ವಿಚಾರಣಾ ಪತ್ರ ಸಂಖ್ಯೆ:37/2019-20 ದಿನಾಂಕ:14.05.2019 ನೀಡಲಾಗಿ ಕ್ರ.ಸಂ 11,18,001 ರಿಂದ 11,26,000 ದ ಬದಲಿಗೆ 11,27,001 ರಿಂದ 11,35,000 ದವರೆವಿಗಿನ ಕ್ರಮಸಂಖ್ಯೆ ಪುನರ್ ಮುದ್ರಣಗೊಂಡಿರುವುದಾಗಿ ತಿಳಿಸಿರುತ್ತಾರೆ ಹಾಗು ಈ ಪುನರ್ ಮುದ್ರಣಗೊಂಡಿರುವ 8000 ಖಾಲಿ ಅಂಕಪಟ್ಟಿಗಳ ವಿಚಾರವನ್ನು ಮುದ್ದಾಲ ಇಂಡಸ್ಟ್ರೀಸ್‌ರವರ ಗಮನಕ್ಕೆ ತರಲಾಗಿ ಅವರು ಬದಲಿ ಅಂಕಪಟ್ಟಿಗಳನ್ನು ಮುದ್ರಿಸಿ ಕೊಡುವುದಾಗಿ ಒಪ್ಪಿ ಕ್ರ.ಸಂ 10,89,001 ರಿಂದ 11,05,000 ದವರೆವಿಗೆ 8000 ಕಾಲಿ ಅಂಕಪಟ್ಟಿಗಳನ್ನು | ಮೈಸೂರು ವಿಶ್ವವಿದ್ಯಾನಿಲಯದ 2017-18ನೇ ಲೆಕ್ಕಪರಿಶೋಧನೆಯಲ್ಲಿ ಪರೀಕ್ಷೆಗಳ ಅಂಕಪಟ್ಟಿಗಳ ಮುದ್ರಣಕ್ಕೆ ಸಂಬಂಧಿಸಿದಂತೆ ಪರೀಕ್ಷಾ ವಿಭಾಗದಿಂದ ಖಾಲಿ ಅಂಕಪಟ್ಟಿಗಳನ್ನು (ಪೂರ್ವ ಮುದ್ರಿತ) ಸರಬರಾಜು ಮಾಡಲು ಇ-ಟೆಂಡರ್‌ನಲ್ಲಿ ನಿರ್ಧರಿಸಲಾಗಿರುವ ಮೆ:ಮುದ್ದಾಲ ಇಂಡಸ್ಟ್ರೀಸ್, ಗುಂಟೂರು, ರವರಿಗೆ ಇನ್‌ಡೆಂಟ್‌ನ 427/17/01/2018ರಲ್ಲಿ ಬಾಬ್ತು 90,000 ಖಾಲಿ ಅಂಕಪಟ್ಟಿಗಳು (ಪ್ರಮಾಣಪತ್ರ) ಅಂಕಪಟ್ಟಿಯನ್ನು ಸರಬರಾಜು ಮಾಡಲು ಪರೀಕ್ಷಾ ವಿಭಾಗದಿಂದ ಏಜೆನ್ಸಿಗೆ ಬೇಡಿಕೆ ಸಲ್ಲಿಸಲಾಗುತ್ತದೆ. ಅದರ ಅನ್ವಯ ಮೆ: ಮುದ್ದಾಲ ಇಂಡಸ್ಟ್ರೀಸ್, ಗುಂಟೂರು ರವರಿಗೆ ನಂ:1105001 ರಿಂದ 1195000ರ ವರೆಗೆ 90,000 ಖಾಲಿ ಅಂಕಪಟ್ಟಿಗಳನ್ನು ಸರಬರಾಜು ಮಾಡಿರುತ್ತಾರೆ.<br><br>ಈ ರೀತಿ ಸರಬರಾಜಾದ 90 ಸಾವಿರ ಮುದ್ರಿತ ಅಂಕಪಟ್ಟಿಗಳನ್ನು ಮುಖ್ಯ ದಾಸ್ತಾನುವಹಿಗೆ ತೆಗೆದುಕೊಂಡು ಸಂಬಂಧಿಸಿದ ಅಧಿಕಾರಿಗಳಿಂದ ದೃಢೀಕರಿಸಲಾಗಿದೆ. |

ಮುದ್ರಿಸಿಕೊಟ್ಟಿರುತ್ತಾರೆ ಮತ್ತು ಈ ಬದಲಿ ಅಂಕಪಟ್ಟಿಗಳನ್ನು ದಾಸ್ತಾನುವಿಗೆ ಪಡೆದರೆ ಲೆಕ್ಕ ದ್ವಗುಣಗೊಳ್ಳುವುದರಿಂದ ಕೇವಲ ಭೌತಿಕವಾಗಿ ಮಾತ್ರ ದಾಸ್ತಾನುವಿಗೆ ಪಡೆದುಕೊಡಿರುವುದಾಗಿ ತಿಳಿಸಿರುತ್ತಾರೆ ಅಲ್ಲದೇ ಪುನರ್ ಮುದ್ರಣಗೊಂಡಿರುವ ಖಾಲಿ ಅಂಕಪಟ್ಟಿಗಳನ್ನು ಮದ್ದಾಲ ಇಂಡಸ್ಟ್ರೀಸ್ ರವರಿಗೆ ಹಿಂತಿರುಗಿಸಿದರೆ ದುರುಪಯೋಗವಾಗುವ ಸಾಧ್ಯತೆಯಿರುತ್ತದೆಯಾದ್ದರಿಂದ ಅವುಗಳನ್ನು ನಮ್ಮಲ್ಲಿಯೇ ಉಳಿಸಿಕೊಂಡಿರುವುದಾಗಿಯೂ ತಿಳಿಸಿರುತ್ತಾರೆ.

ಇದರಿಂದಾಗಿ ದಾಸ್ತಾನು ಲೆಕ್ಕ ತಾಳೆ ಹೊಂದಿರುತ್ತದೆಯಾದರೂ ಸದರಿ ಖಾಲಿ ಅಂಕಪಟ್ಟಿಗಳು ಕ್ರ.ಸಂ 11,18,001 ರಿಂದ 11,26,000 ದವರೆಗಿನ ಮುದ್ರಣವಾಗದೇ ಬಿಟ್ಟು ಹೋಗಿರುವುದು ಅಂಕಪಟ್ಟಿಗಳ ಕ್ರಮ ಸಂಖ್ಯೆಗಳ ನಿರಂತರತೆ ಕಾಯ್ದುಕೊಳ್ಳದಿರುವುದು ಹಲವು ಸಂಶಯಗಳಿಗೆ ಎಡೆ ಮಾಡಿಕೊಟ್ಟಿರುತ್ತದೆ.

ವಾಸ್ತಾವವಾಗಿ ಅಂಕಪಟ್ಟಿಗಳಂತಹ ಯಾವುದೇ ಪ್ರಮುಖ ದಾಖಲೆ ಪತ್ರಗಳ ದಾಸ್ತಾನು ನಿರ್ವಹಿಸುವುವಾಗ ಈ ಕೆಳಕಂಡ ಅಂಶಗಳತ್ತ ಹೆಚ್ಚುಗಮನ ನೀಡಬೇಕಾಗಿರುತ್ತದೆ. ಅವು

1) ಖಾಲಿ ಅಂಕಪಟ್ಟಿ ಹಾಗೂ ಇತರೆ ಯಾವುದೇ ಪ್ರಮಾಣ ಪತ್ರಗಳನ್ನು ಸರವರಾಜುದಾರರಿಂದ ಸ್ವೀಕರಿಸುವಾಗ ಪ್ರತಿಯೊಂದು ಅಂಕಪಟ್ಟಿ/ಪ್ರಮಾಣ ಪತ್ರಗಳನ್ನು ಭೌತಿಕ ಸಂಖ್ಯೆ ಕ್ರಮ ಸಂಖ್ಯೆ ನಮೂನೆ, ಗುಣಮಟ್ಟ, ಮುದ್ರೆ ಹಾಗೂ ಇನ್ನಿತರೆ ಅಂಶಗಳನ್ನು ಕೊಲಂಕಷವಾಗಿ ಪರಿಶೀಲಿಸಿ ಸರಿಯಾಗಿದೆ ಎಂದು ಖಚಿತಪಡಿಸಿಕೊಂಡ ನಂತರವಷ್ಟೆ ಈ ಬಗ್ಗೆ ದೃಢೀಕರಿಸಿ ಮುಖ್ಯ ದಾಸ್ತಾನುವಿಗೆ ಪಡೆದುಕೊಳ್ಳಬೇಕು.
2) ಮುಖ್ಯ ದಾಸ್ತಾನಿಗೆ ಬಂದ ನಂತರ ಬೇಡಿಕೆ ಪತ್ರಗಳನ್ನು ಪಡೆದು ಉಪದಾಸ್ತಾನಿಗೆ ವಿತರಿಸುವಾಗ ಯಾರಿಗೆ ಮತ್ತು ಎಷ್ಟು ಯಾವಾಗ ವಿತರಿಸಿದೆ ಎಂಬುವುದನ್ನು ಕ್ರಮ ಸಂಖ್ಯೆ ಸಹಿತ ಮುಖ್ಯ ದಾಸ್ತಾನಿನ ವಿತರಣೆ ಭಾಗದಲ್ಲಿ ನಮೂದಿಸಿ ಸ್ವೀಕೃತಿದಾರರ ಸಹಿ ಪಡೆದುಕೊಳ್ಳಬೇಕು.
3) ಉಪದಾಸ್ತಾನಿಗೆ ಪಡೆದ ನಂತರ ಆ ವಿವರಗಳನ್ನು ಉಪದಾಸ್ತಾನುವಹಿಯ "ಸ್ವೀಕೃತಿ" ಭಾಗದಲ್ಲಿ ನಮೂದಿಸಿ ದೃಢೀಕರಿಸಬೇಕು ನಂತರ ಕಾಲೇಜು/ವಿದ್ಯಾರ್ಥಿಗಳಿಗೆ ವಿತರಿಸುವಾಗ "ವಿತರಣೆ" ಭಗದಲ್ಲಿ ವಿತರಣೆ ದಿನಾಂಕ ವಿತರಿಸಲಾದ ಅಂಕಪಟ್ಟಿ/ಪ್ರಮಾಣ ಪತ್ರಗಳ ಕ್ರಮ ಸಂಖ್ಯೆ ಸ್ವೀಕೃತಿದಾದದ ಹೆಸರು ನಮೂದಿಸಿ ಸ್ವೀಕೃತಿದಾರರಿಂದ ಸಹಿ ಪಡೆದು ಈ ಬಗ್ಗೆ ದೃಢೀಕರಿಸಬೇಕು.

ಹೀಗೆ ಖಾಲಿ ಅಂಕಪಟ್ಟಿ/ಪ್ರಮಾಣ ಪತ್ರಗಳನ್ನು ಸರಬರಾಜುದಾರರಿಂದ ಮುಖ್ಯದಾಸ್ತಾನುವಿಗೆ,

ಆದರೆ, ಈ ರೀತಿ ಸರಬರಾಜು ಪಡೆದ ಮುದ್ರಣ ಪೂರ್ವ ಅಂಕಪಟ್ಟಿಗಳನ್ನು

ಕ್ರಮಸಂಖ್ಯೆವಾರು ಪರಿಶೀಲನೆ ಸಂದರ್ಭದಲ್ಲಿ ಅಂಕಪಟ್ಟಿಗಳ ಕ್ರಮ ಸಂಖ್ಯೆ ಮೇಲೆ ಸಂಬಂಧಿಸಿದಂತೆ 1105001 ರಿಂದ 1195000 ನಿರಂತರತೆ ಇಲ್ಲದೆ ಮಧ್ಯದಲ್ಲಿ 1118001 ರಿಂದ 1126000 ವರೆಗಿನ ಕ್ರಮಸಂಖ್ಯೆಗಳು ಬಿಟ್ಟು ಹೋಗಿರುವುದು ಭೌತಿಕ ಪರಿಶೀಲನೆ ಸಂದರ್ಭದಲ್ಲಿ ಕಂಡುಬಂದಿರುತ್ತದೆ.

ಈ ರೀತಿ ಬಿಟ್ಟು ಹೋದ 1118001 ರಿಂದ 1126000, 8000 ಸಂಖ್ಯೆಯ ಪೂರ್ವ ಮುದ್ರಿತ ಅಂಕಪಟ್ಟಿಗಳ ಬಾಬ್ತು 1127001 ರಿಂದ 1135000 ಸಂಖ್ಯೆಗಳು ಪುನರಾವರ್ತನೆಗೊಂಡಿದೆ.

ಈ ರೀತಿಯ ಪುನರ್ ಮುದ್ರಣಗೊಂಡಿರುವ 1127001 ರಿಂದ 1135000, 8000 ಸಂಖ್ಯೆಯ ಪೂರ್ವ ಮುದ್ರಿತವಾಗಿರುವ ಅಂಕಪಟ್ಟಿಗಳ ಬದಲಾಗಿ ಹೊಸದಾಗಿ 1089001 ರಿಂದ 1105000ರ ವರೆಗೂ 8000 ಪೂರ್ವಮುದ್ರಿತ ಅಂಕಪಟ್ಟಿಗಳನ್ನು ಸರಬರಾಜು ಮಾಡಲು ವಿಶ್ವವಿದ್ಯಾನಿಲಯ ಕೋರಲಾಗಿದೆ.

ಅದರ ಅನ್ವಯ ಮೆ:ಮದ್ದಾಲ ಇಂಡಸ್ಟ್ರೀಸ್, ಗುಂಟೂರು ರವರು ಕ್ರಮ ಸಂಖ್ಯೆ: 1089001 ರಿಂದ 1105000, 8000 ಸಂಖ್ಯೆ ಪೂರ್ವಮುದ್ರಿತ ಅಂಕಪಟ್ಟಿಗಳನ್ನು ಸರಬರಾಜು ಮಾಡಿರುತ್ತಾರೆ. ಇದರಿಂದಾಗಿ ಮುದ್ರಣ ಏಜೆನ್ಸಿಯು ಪೂರ್ವಮುದ್ರಿತ ಅಂಕಪಟ್ಟಿಗಳ ಮುದ್ರಣ ಸಂದರ್ಭದಲ್ಲಿ ಉಂಟಾಗಿರುವ ವ್ಯತ್ಯಾಸವನ್ನು ಒಪ್ಪಿಕೊಂಡು ವಿಶ್ವವಿದ್ಯಾನಿಲಯದ ಸೂಚನೆಯನ್ವಯ ಕ್ರಮಸಂಖ್ಯೆ: 1089001 ರಿಂದ 1105000, 8000 ಹೊಸ ಮುದ್ರಿತ ಅಂಕಪಟ್ಟಿಗಳನ್ನು ವಿಶ್ವವಿದ್ಯಾನಿಲಯದ ಸೂಚನೆಯನ್ವಯ ಸರಬರಾಜು ಮಾಡಿದೆ. (ಈ ಸಂಬಂಧದ ಮೆ: ಮದ್ದಾಲ ಇಂಡಸ್ಟ್ರೀಸ್, ಗುಂಟೂರು ರವರ ರಿಜಿಸ್ಟಾರ್ ಮೌಲ್ಯಮಾಪನ ವಿಭಾಗ, ಮೈಸೂರು, ಇವರಿಗೆ ಬರೆಯಲು 27-04-2018ರ ಪತ್ರದ ಪ್ರತಿ ಅಡಕಗಳೊಂದಿಗೆ) ಅಲ್ಲದೇ ಮುದ್ರಣ ಏಜೆನ್ಸಿಯ ಮುದ್ರಣ ದೋಷದಿಂದ ಉಂಟಾದ 8000 ಸಂಖ್ಯೆ (1127001 ರಿಂದ 1135000) ಬದಲಾಗಿ 1089001 ರಿಂದ 1105000 ಸರಬರಾಜು ಮಾಡಿದೆ ಸರಬರಾಜು ವಿವರ ಈ ರೀತಿಯಿದೆ.

1089001 ರಿಂದ 1090000 = 1 ಸಾವಿರ (1 Box)

1090001 ರಿಂದ 1091000 = 1 ಸಾವಿರ (1 Box)

1091001 ರಿಂದ 1092000 = 1 ಸಾವಿರ (10)

ಮುಖ್ಯದಾಸ್ತಾನುವಿನಿಂದ ಉಪದಾಸ್ತಾನುವಿಗೆ ಹಾಗೂ ಅಂತಿಮವಾಗಿ ಸಂಬಂಧಪಟ್ಟ ಕಾಲೇಜಿ/ವಿದ್ಯಾರ್ಥಿಗಳಿಗೆ ವಿತರಿಸುವವರೆಗಿನ ಪ್ರತಿಯೊಂದು ವಿವರಗಳನ್ನು ನಮೂದಿಸಿ ದೃಢಿಕರಿಸುವುದು ಕಛೇರಿ ಮುಖ್ಯಸ್ಥರ ಆದ್ಯ ಕರ್ತವ್ಯವಾಗಿರುತ್ತದೆ.

ಅಂಕಪಟ್ಟಿ ಹಾಗೂ ಇತರೆ ಪ್ರಮಾಣ ಪತ್ರಗಳು ವಿಶ್ವವಿದ್ಯಾನಿಲಯದ ಪರೀಕ್ಷಾ ವಿಭಾಗದ ಅತ್ಯಂತ ಪ್ರಮುಖ ದಾಸ್ತಾವೇಜು/ದಾಖಲೆಪತ್ರಗಳಾಗಿದ್ದು ಇವುಗಳಿಗೆ ಸಂಬಂಧಿಸಿದಂತೆ ಶೇ.100 ರಷ್ಟು ಲೆಕ್ಕಪರಿಶೋಧನೆಯಾಗಬೇಕಾಗಿದ್ದು ಭಾಗಶಃ ಲೆಕ್ಕಪತ್ರದಾಖಲೆಗಳನ್ನು ಮಾತ್ರ ಹಾಜರುಪಡಿಸಿರುವುದರಿಂದ ಸಂಪೂರ್ಣ ಲೆಕ್ಕಪರಿಶೋಧಿಸಲು ಸಾಧ್ಯವಾಗಿರುವುರಿಲ್ಲ.

ಮುದ್ರಣವಾಗದೇ ಬಿಟ್ಟು ಹೋಗಿರುವ ಖಾಲಿ ಅಂಕಪಟ್ಟಿಗಳು ಕ್ರ.ಸಂ:11,18,001 ರಿಂದ 11,26,000 ಪುನರ್ ಮುದ್ರಾಣಗೊಂಡಿರುವ ಖಾಲಿ ಅಂಕಪಟ್ಟಿಗಳು ಕ್ರ.ಸಂ:11,27,001 ರಿಂದ 11,35,000 ಮುದ್ರಣವಾಗದೇ ಬಿಟ್ಟು ಹೋದ ಖಾಲಿ ಅಂಕಪಟ್ಟಿಗಳಿಗೆ ಬದಲಾಗಿ ಮುದ್ರಣಗೊಂಡಿರು ಬದಲಿ ಅಂಕಪಟ್ಟಿಗಳ ಕ್ರ.ಸಂ:10,89,001 ರಿಂದ 11,05,000 ಅತ್ಯಾಸತ್ಯತೆಯನ್ನು ಪರಿಶೀಲಿಸಲು ಅಗತ್ಯವಿರುವ ಲೆಕ್ಕಪತ್ರ ದಾಖಲೆಗಳನ್ನು ಸಂಪೂರ್ಣ ಪ್ರಮಾಣದಲ್ಲಿ ಹಾಜರುಪಡಿಸಿರುವುದಿಲ್ಲ.

ಈ ಎಲ್ಲ ನ್ಯೂನ್ಯತೆಗಳನ್ನು ಲೆಕ್ಕಪರಿಶೋಧನೆಯಲ್ಲಿ ಗಂಭೀರವಾಗಿ ಪರಿಗಣಿಸುತ್ತಾ ಈ ವಿಚಾರಕ್ಕೆ ಸಂಬಂಧಿಸಿದಂತೆ ಸೂಕ್ತ ಸ್ಪಷ್ಟೀಕರಣದೊಂದಿಗೆ ಸಂಪೂರ್ಣ ಲೆಕ್ಕಪತ್ರದಾಖಲೆಗಳನ್ನು ಲೆಕ್ಕಪರಿಶೋಧನೆಗೆ ಹಾಜರುಡಿಸುವಂತೆ ಹಲವು ಬಾರಿ ಮೌಖಿಕವಾಗಿ ಹಾಗೂ ವಿಚಾರಣೆ ಪತ್ರ (ಸಂಖ್ಯೆ: 1/19–20/16.04.19, 2/20.04.19, 5/24.04.19, 23/09.05.19, 34/14.05.19, 36/14.05.19 ಹಾಗೂ 37/14.05.19) ಗಳನ್ನು ನೀಡಲಾಗಿದ್ದರೂ ಸಹ ಕೋರಲಾದ ಯಾವುದೇ ಲೆಕ್ಕಪತ್ರದಾಖಲೆಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸದೆ ನಿರ್ಲಕ್ಷಿಸಿರುವ ಕಾರಣ ಸದರಿ ಸಾಲಿನಲ್ಲಿ ಖರೀದಿಸಿರುವ ಅಂಕಪಟ್ಟಿಗಳು ಹಾಗೂ ಅವುಗಳ ದಾಸ್ತಾನು ಸ್ವೀಕೃತಿ (ಮೂಲ ದಾಸ್ತಾನು ಮತ್ತು ಉಪದಸ್ತಾನು) ಮತ್ತು ವಿರರಣೆ ಬಗ್ಗೆ ಲೆಕ್ಕಪರಿಶೋಧನೆಯಲ್ಲಿ ಪೂರ್ಣವಾಗಿ ಪರಿಶೋಧಿಸಿ ದೃಢಪಡಿಸಿಕೊಳ್ಳಲು ಸಾಧ್ಯವಾಗದ ಕಾರಣ ಹಾಗೂ ಈ ವಿಚಾರವಾಗಿ ಮುಂದಿನ ದಿನಗಳಲ್ಲಿ ಯಾವುದೇ ಲೋಪದೋಷಗಳು/ದುರುಪಯೋಗವಾಗುವ ಸಾಧ್ಯತೆ ಇರುವುದರಿಂದ ಸಂಬಂಧಿಸಿದವರೆಲ್ಲರ ಹೊಣೆಗಾರಿಕೆಯ ಮೇಲೆ ಖಾಲಿ ಅಂಕಪಟ್ಟಿ ಖರೀದಿಗೆ ಸಂಬಂಧಿಸಿದಂತೆ (1) inv.no14/ದಿನಾಂಕ:06.07.2017, 1,30,000 ಖಾಲಿ ಅಂಕಪಟ್ಟಿ (ಕ್ರ.ಸಂ:97,5001 ರಿಂದ 11,05,000) ಗಳ ಖರೀದಿ ಮೊತ್ತ ರೂ.47,29,400/–ಗಳು ಹಾಗೂ (2) inv.no42/ದಿನಾಂಕ:17.01.2018, 90,000 ಖಾಲಿ ಅಂಕಪಟ್ಟಿ (ಕ್ರ.ಸಂ:11,05,001 ರಿಂದ

1092001 ರಿಂದ 1093000 = 1 ಸಾವಿರ (10)

1093001 ರಿಂದ 1094000 = 1 ಸಾವಿರ (10)

1094001 ರಿಂದ 1095000 = 1 Box

1095001 ರಿಂದ 1096000 = 1 Box

1104001 ರಿಂದ 1105000 = 1 Box

ಒಟ್ಟು = 08 Box ಪುನರ್ ಮುದ್ರಿತ ಖಾಲಿ ಅಂಕಪಟ್ಟಿಗಳು

ಅಲ್ಲದೇ ಈ ರೀತಿಯ ಸರಬರಾಜಿಗೆ ವಿಶ್ವವಿದ್ಯಾನಿಲಯದಿಂದ ಹೆಚ್ಚುವರಿಯಾಗಿ ಯಾವುದೇ ಮೊತ್ತ ಪಾವತಿ ಮಾಡಿರುವುದಿಲ್ಲ.

ಕ್ರಮಸಂಖ್ಯೆ: 1127001 ರಿಂದ 1135000ರ ವರೆಗಿನ ಪೂರ್ವಮುದ್ರಿತ ಅಂಕಪಟ್ಟಿಗಳನ್ನು (ರಿಪೀಟರ್) ಮುದ್ರಿತ ಏಜೆನ್ಸಿಗೆ ಹಿಂತಿರುಗಿಸಿದ ಪಕ್ಷದಲ್ಲಿ ದುರುಪಯೋಗ/ಅಕ್ರಮ ಆಗುವ ಸಂಭವ/ಸಾಧ್ಯತೆ ಹಿನ್ನೆಲೆಯಲ್ಲಿ ಪ್ರತ್ಯೇಕವಾಗಿ ಬಂಡಲ್ ಮಾಡಿ ಉಗ್ರಾಣದ ಭದ್ರತೆಯಲ್ಲಿ ಇಡಲಾಗಿದೆ. ಈ ರೀತಿಯಾಗಿ ದಾಸ್ತಾನಲ್ಲಿ ಪುನರ್ ಮುದ್ರಿತ ಅಂಕಪಟ್ಟಿಗಳನ್ನು ಮುಂದಿನ ದಿನಗಳಲ್ಲಿ ಸಕ್ಷಮ ಆದೇಶದೊಂದಿಗೆ ಪುನರ್ ಬಳಕೆ/ದುರುಪಯೋಗವಾಗದಂತೆ ವಿಲೇ ಮಾಡಲು ಕ್ರಮವಹಿಸಲಾಗುವುದು.

ಒಟ್ಟಾರೆಯಾಗಿ ವಿಶ್ವವಿದ್ಯಾನಿಲಯದಲ್ಲಿ ಪೂರ್ವಮುದ್ರಿತ ಅಂಕಪಟ್ಟಿಗಳ ಮುದ್ರಣಕ್ಕೆ ನಿರ್ಧರಿತವಾಗಿರುವ ಏಜೆನ್ಸಿಯ ಮುದ್ರಣ ದೋಷದಿಂದ (ಕ್ರಮ ಸಂಖ್ಯೆ: 1118001 ರಿಂದ 1126000) ರಿಪೀಟ್ ಪ್ರಿಂಟ್ ಆಗಿರುವ ಮುದ್ರಿತ ಅಂಕಪಟ್ಟಿಗಳನ್ನು 8000 ಸಂಖ್ಯೆ ಹೆಚ್ಚುವರಿ ಮುದ್ರಣ ಚಾರ್ಜಸ್ ಇಲ್ಲದೆ ಪಡೆದಿರುವ ಕ್ರಮ ಸಮರ್ಥನಿಯವಾಗಿದೆ.

ದಾಸ್ತಾನು ಸ್ವೀಕೃತಿ ಸಂದರ್ಭದಲ್ಲಿ ಈ ರಿಪೀಟೆಡ್ ಪೂರ್ವಮುದ್ರಿತ ಅಂಕಪಟ್ಟಿಗಳನ್ನು ಪ್ರತ್ಯೇಕವಾಗಿ ಭದ್ರತೆಯಲ್ಲಿ ಕಾಯ್ದಿರಿಸಿರುವ ಕ್ರಮವಹಿಸಲಾಗಿದೆ. (ಖಾಲಿ ಅಂಕಪಟ್ಟಿ ಹಾಗೂ ಇತರೆ ಪ್ರಮಾಣಪತ್ರ ಸರಬರಾಜಿನ) ಪ್ರತಿಯೊಂದು ಅಂಕಪಟ್ಟಿ ಪ್ರಮಾಣ ಪತ್ರಗಳನ್ನು ಭೌತಿಕವಾಗಿ ಸಂಖ್ಯೆ ಕ್ರಮ ಸಂಖ್ಯೆ ನಮೂನೆ, ಮುದ್ರೆ ಹಾಗೂ ಇನ್ನಿತರ ಅಂಶಗಳನ್ನು ಕೂಲಂಕುಶವಾಗಿ ಪರಿಶೀಲಿಸಿ ದಾಸ್ತಾನಿಗೆ ಸ್ವೀಕರಿಸಲು ಕ್ರಮವಹಿಸಲಾಗಿದೆ.

ಆಡಿಟ್ ವರದಿ ಸೂಚನೆಯಂತೆ ಖಾಲಿ ಅಂಕಪಟ್ಟಿ ಹಾಗೂ ಇತರೆ ಪ್ರಮಾಣ ಪತ್ರಗಳ ಸರಬರಾಜಿನ ದಾಸ್ತಾನು ಸ್ವೀಕರಿಸುವಾಗ ಪ್ರತಿಯೊಂದು ಅಂಕಪಟ್ಟಿ / ಪ್ರಮಾಣ ಪತ್ರಗಳನ್ನು

| | |
|---|---|
| 11,95,000) ಗಳ ಖರೀದಿ ಮೊತ್ತ ರೂ.30,60,000/– ಗಳ ಹೀಗೆ ಒಟ್ಟು ಪಾವತಿಸಿರುವ **ಮೊತ್ತ ರೂ.77,89,400/–ಗಳನ್ನು ಆಕ್ಷೇಪಣೆಗೆ ಸುಚಿಸಲಾಗಿದೆ** ಹಾಗೂ ಈ ನ್ಯೂನ್ಯತೆಗಳಿಗೆ ಸಂಬಂಧಿಸಿದಂತೆ ಸೂಕ್ತ ಲೆಕ್ಕಪತ್ರದಾಖಲೆಗಳೊಂದಿಗೆ ಅನುಸರಣಾ ವರದಿಯನ್ನು ಸಲ್ಲಿಸಲು ಲೆಕ್ಕಪರಿಶೋಧನಾ ವರದಿಯಲ್ಲಿ ಸೂಚಿಸಲಾಗಿದೆ. | ಭೌತಿಕವಾಗಿ ಸಂಖ್ಯೆ, ಕ್ರಮ ಸಂಖ್ಯೆ ನಮೂನೆ ಗುಣಮಟ್ಟ, ಮುದ್ರೆ ಹಾಗೂ ಇನ್ನಿತರೆ ಅಂಶಗಳನ್ನು ಕೂಲಂಕುಶವಾಗಿ ಪರಿಶೀಲಿಸಿ ದಾಸ್ತಾನಿಗೆ ಸ್ವೀಕರಿಸಲು ಕ್ರಮ ವಹಿಸಲಾಗಿದೆ.<br><br>1. ಮುಖ್ಯ ದಾಸ್ತಾನಿಂದ ವಿತರಣೆ ಸಂದರ್ಭದಲ್ಲಿ ಸಂಬಂಧಿಸಿದ ಉಪ ವಿಭಾಗಗಳಿಂದ ಬರುವ ಬೇಡಿಕೆ ಪತ್ರ, (ಇಂಡೆಂಟ್ ಫೈಲಿಂಗ್ ಸಿಸ್ಟಮ್) ಮತ್ತು ವಿತರಣೆಯನ್ನು ಪಡೆದ ಸಂಬಂಧಿಸಿದ ಉಪವಿಭಾಗದ ನೌಕರರಿಂದ ಸ್ವೀಕೃತಿ ಪಡೆಯಲು ಕಡ್ಡಾಯವಾಗಿ ಕ್ರಮವಹಿಸಲಾಗಿದೆ.<br>2. ಉಪ ದಾಸ್ತಾನಿಂದ ಅಂಕಪಟ್ಟಿ ವಿತರಣೆಯ ಸಂದರ್ಭದಲ್ಲಿಯೂ ದಾಸ್ತಾನು ಮತ್ತು ವಿರತಣೆ ಪುಸ್ತಕದಲ್ಲಿ ವಿತರಣೆ ದಿನಾಂಕ ವಿತರಿಸಿಲಾದ ಅಂಕಪಟ್ಟಿಗಳ ಪ್ರಮಾಣ ಪತ್ರಗಳ ಸಂಖ್ಯೆ ಸ್ವೀಕೃತಿದಾರರ ಹೆಸರು, ದೃಢೀಕರಣ ಪಡೆಯಲು ಕ್ರಮವಹಿಸಲಾಗಿದೆ.<br>1. ಇನ್‌ವಾಯ್ಸ್ ನಂ:14/06–07–2017 130000 (ಖಾಲಿ ಅಂಕಪಟ್ಟಿಗಳು) ಕ್ರಮ ಸಂಖ್ಯೆ: 175001 ರಿಂದ 1105000 ಬಿಲ್ ಮೊತ್ತ ರೂ.47,29,400–00.<br>2. ಇನ್‌ವಾಯ್ಸ್ ನಂ:427/17–01–2018 90000 (ಖಾಲಿ ಅಂಕಪಟ್ಟಿಗಳು) ಕ್ರಮ ಸಂಖ್ಯೆ: 1105001 ರಿಂದ 1195000 ಬಿಲ್ ಮೊತ್ತ ರೂ. 30,60,000–00.<br><br>ಒಟ್ಟು ಸರಬರಾಜು ಪಡೆದ ಖಾಲಿ ಅಂಕಪಟ್ಟಿಗಳ ಸಂಖ್ಯೆ: 220000<br>ಒಟ್ಟು ಪಾವತಿ ಮೊತ್ತ ರೂ.77,89,400–00<br><br>ಈ ಎಲ್ಲಾ ಅಂಶಗಳನ್ನು ಸಮಗ್ರವಾಗಿ ಪರಿಗಣಿಸಿ ಸೂಚಿತ ಆಕ್ಷೇಪಣೆಯನ್ನು ಕೈ ಬಿಡಲು ಕೋರಿದೆ. |
| **121. ಪರೀಕ್ಷಾ ಕಾರ್ಯಗಳಿಗಾಗಿ ಮುದ್ರಣದ ವೆಚ್ಚ ಮತ್ತು ದಾಸ್ತಾನು ವಹಿಯಲ್ಲಿನ ನ್ಯೂನ್ಯತೆಗಳ ಕುರಿತು :– (ಯುವರಾಜ ಕಾಲೇಜು)**<br><br>ಯುವರಾಜ ಕಾಲೇಜಿನ UG/PG ಸ್ನಾತಕ ಮತ್ತು ಸ್ನಾತಕೋತ್ತರ ವಿಭಾಗಗಳ ಏಪ್ರಿಲ್/ಮೇ–2017 ಮತ್ತು ಅಕ್ಟೋಬರ್/ನವೆಂಬರ್–2017ರ ಅಧಿವೇಶನದ ಪರೀಕ್ಷೆಗಳಿಗೆ ಸಂಬಂಧಿಸಿದಂತೆ ಪ್ರಶ್ನೆ ಪತ್ರಿಕೆಗಳ ಮುದ್ರಣ, Admission & Exam Process, valuation of results process(UG/PG) Question paper setting, facing sheets, continuation sheet ಪರೀಕ್ಷಾ ಕಾರ್ಯದ ಮುದ್ರಣ ಹಾಗೂ ಇತರೆ ವೆಚ್ಚಗಳಿಗಾಗಿ ವಿವಿಧ ಸಂಸ್ಥೆಯವರುಗಳಿಗೆ ವಹಿಸಲಾಗಿದ್ದು ಒಟ್ಟು ರೂ.21,86,651/–ಗಳ ವೆಚ್ಚವನ್ನು ಭರಿಸಲಾಗಿದೆ ವಿವರಗಳನ್ನು ಅನುಬಂಧ– | ಪ್ರಸ್ಥಾವಿಕ ಕಂಡಿಕೆಯಲ್ಲಿ, ಯುವರಾಜ ಕಾಲೇಜು, ಮೈಸೂರು ಇಲ್ಲಿ ದೈವಾರ್ಷಿಕವಾಗಿ ನಡೆಸಿರುವ ಪರೀಕ್ಷೆಗಳಿಗೆ ಪ್ರಶ್ನೆಪತ್ರಿಕೆಗಳನ್ನು ಸರಬರಾಜು ಮಾಡಿರುವ M/s Manipal Technologies, Mysuru ರವರು ಪ್ರಶ್ನೆಪತ್ರಿಕೆಗಳಿಗೂ (ಸರಬರಾಜು ಬಿಲ್‌ನಲ್ಲಿ ಉಲ್ಲೇಖಿಸಿರುವ ಸಂಖ್ಯೆ.:–632 ಆಗಿದ್ದು) ಪ್ರಶ್ನೆಪತ್ರಿಕೆಗಳ ವಿತರಣೆ ಸಂಬಂಧ ನಿರ್ವಹಿಸಿರುವ (ದಾಸ್ತಾನು ಪುಸ್ತಕದ ಪುಟ ಸಂ. 94 ರಿಂದ 111 ಆಗಿರುತ್ತದೆ) ವಹಿಯಲ್ಲಿ ಸಂಖ್ಯೆ 1027 ಆಗಿರುತ್ತದೆ (ಆದರೆ ವರದಿಯಲ್ಲಿ 889 ಎಂದು ಉಲ್ಲೇಖಿಸಲಾಗಿದೆ) ಆದರೆ ವಾಸ್ತವವಾಗಿ ಮುದ್ರಣ ಏಜೆನ್ಸಿಯಿಂದ ಸರಬರಾಜು ಪಡೆದಿರುವ ಮತ್ತು ಬಿಲ್ ಪಾವತಿಗೆ 632 |

| | |
|---|---|
| 61ರಲ್ಲಿ ನೀಡಿದೆ<br><br>ಪ್ರಶ್ನೆಪತ್ರಿಕೆಗಳ ದಾಸ್ತಾನಿನ ವಿವರ ಪರಿಶೀಲಿಸಿದಾಗ ಪರೀಕ್ಷಾ ಸಂದರ್ಭದಲ್ಲಿ ಒಟ್ಟು ಪ್ರಶ್ನೆಪತ್ರಿಕೆಗಳ 889 ಐಟಂ 2017–18ನೇ ಸಾಲಿಗೆ ವಿತರಣೆಯಾಗಿರುವುದು ದಾಸ್ತಾನು ವಹಿಯಲ್ಲಿ ಕಂಡುಬಂದಿರುತ್ತದೆ. ಆದರೆ ಸಂಸ್ಥೆಯವರ ಖರೀದಿ ಬಿಲ್ಲುಗಳನ್ನು ಪರಿಶೀಲಿಸಿದಾಗ ಮೇಲಿನ ಪ್ರಶ್ನೆಪತ್ರಿಕೆಗಳ ಪರೀಕ್ಷಾ ಕಾರ್ಯಕ್ಕಾಗಿ 632 ಐಟಂ Exam Process ವೆಚ್ಚದ ಬಿಲ್ಲುಗಳಿಗೆ ಪಾವತಿಯಾಗಿರುತ್ತದೆ. ಹೆಚ್ಚುವರಿ ವಿತರಣೆಯಾಗಿರುವ ಕುರಿತು ಸೂಕ್ತ ಕಾರಣವನ್ನು ನೀಡುವಂತೆ ಹಾಗೂ ದಾಸ್ತಾನು ವಹಿಯಲ್ಲಿ ಪ್ರಶ್ನೆಪತ್ರಿಕೆಗಳ ಪರಿಮಾಣ ಪರೀಕ್ಷಾ ಸಂದರ್ಭದಲ್ಲಿ ಎಷ್ಟು ಪ್ರಶ್ನೆಪತ್ರಿಕೆಗಳನ್ನು ಪರೀಕ್ಷಾ ಮೇಲ್ವಿಚಾರಕರಿಗೆ ನೀಡಿರುವ ಬಗ್ಗೆ ದಿನಾಂಕವಾರು/ಸಂಖ್ಯಾವಾರು/ಬಂಡಲ್‌ಗಳ ಸಂಖ್ಯೆ/ವಿತರಣಾ ಪ್ರಮಾಣ ಹಾಗೂ ಉಳಿಕೆ ವಿವರಗಳನ್ನು ದಾಖಲಿಸಿ ಕಛೇರಿ ಮುಖ್ಯಸ್ಥರಿಂದ ದೃಢೀಕರಿಸಿ ವಹಿಯನ್ನು ಹಾಜರುಪಡಿಸುವಂತೆ ಸೂಚಿಸಿದೆ ಹಾಗೂ ಅಲ್ಲಿಯವರೆಗೆ ಪ್ರಶ್ನೆಪತ್ರಿಕೆಗಳ ಮುದ್ರಣ ಹಾಗೂ ಇನ್ನಿತರೆ ಪರೀಕ್ಷಾ ತಾಂತ್ರಿಕ ಪದ್ಧತಿ ಅನುಸರಿಸುವ ವಿಧಾನಗಳ ವೆಚ್ಚಗಳನ್ನು ಭರಿಸಲು ಪಾರದರ್ಶಕ ನಿಯಮಗಳಿಗೆ ಸರ್ಕಾರದಿಂದ ವಿನಾಯಿತಿ ಪಡೆದಿರುವ 4 (ಜಿ) ಆದೇಶ ಪ್ರತಿಯನ್ನು ಹಾಜರುಪಡಿಸುವುದು ಅಲ್ಲಿಯವರೆಗೆ ಸಂಬಂಧಿಸಿದ ಸಂಸ್ಥೆಗೆ ಪಾತಿಸಿರುವ ವೆಚ್ಚ **ರೂ.21,86,651/–ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.** | ಸಂಖ್ಯೆಯನ್ನು ಪರಿಗಣಿಸಿ ಪಾವತಿಗೆ ಕ್ರಮವಹಿಸಿದೆ.<br><br>2017–18ನೇ ಸಾಲಿನ ದ್ವೈವಾರ್ಷಿಕ ಪರೀಕ್ಷೆಗಳಿಗೆ 2005ನೇ ವರ್ಷದ ವಿದ್ಯಾರ್ಥಿಗಳು ಸೇರಿದಂತೆ ವಿವಿಧ ವಿಷಯಗಳಿಗೆ 27ಕ್ಕೂ ಹೆಚ್ಚು ವಿಷಯದಲ್ಲಿ ನಾಪಾಸಾದ/ರಿಪೀಟರ್ಸ್ ವಿದ್ಯಾರ್ಥಿಗಳ ತಮ್ಮ ಪದವಿಯನ್ನು ಪೂರ್ಣಗೊಳಿಸಲು ಪರೀಕ್ಷೆಗೆ ಹಾಜರಾಗುತ್ತಾರೆ. ಇಂತಹವರ ಸಂಖ್ಯೆ. 5, 10, 15, 20, 25 ಹೀಗೆ ಇರುತ್ತದೆ. ಆದರೆ ಏಜೆನ್ಸಿಗೆ ಪರೀಕ್ಷಾ ಪ್ರಶ್ನೆಗಳ ಸರಬರಾಜಿಗೆ ಸರಬರಾಜು ಆದೇಶ ನೀಡಲು interms of hundreds ನಲ್ಲಿ ನೀಡಬೇಕಾಗಿರುತ್ತದೆ. ಬಿಡಿ ಬಿಡಿಯಾಗಿ 5, 10, 15, 20, 25 ಸಂಖ್ಯೆ ಪ್ರಶ್ನೆಪತ್ರಿಕೆಗಳ ಸರಬರಾಜು ಆದೇಶವನ್ನು ಸರಬರಾಜು ಏಜೆನ್ಸಿ ಸ್ವೀಕರಿಸುವುದಿಲ್ಲ.<br><br>ಈ ಹಿನ್ನೆಲೆಯಲ್ಲಿ 100 ರ ಪ್ರಮಾಣದಲ್ಲಿ ಪ್ರಶ್ನೆಪತ್ರಿಕೆಗಳನ್ನು ಸರಬರಾಜು ಪಡೆದರೆ ಅವು ವ್ಯರ್ಥವಾಗುತ್ತದೆ. ಅಲ್ಲದೆ, ಇದರಿಂದಾಗಿ ಕಾಲೇಜಿನಿಂದ ಹೆಚ್ಚುವರಿ ಮೊತ್ತ ಪಾವತಿಸಿದಂತಾಗುತ್ತದೆ. ಆದ್ದರಿಂದ ಈ ರೀತಿಯ ಪ್ರಕರಣಗಳಲ್ಲಿ ನಿರ್ಧಿಷ್ಟವಾಗಿ ಅವಶ್ಯಕತೆ ಇರುವಷ್ಟೇ ಪ್ರಶ್ನೆಪತ್ರಿಕೆಗಳನ್ನು Xerox (ನಕಲು) ಮಾಡಿಸಿ ಪರೀಕ್ಷಾ ಪ್ರಕ್ರಿಯೆಯನ್ನು ವ್ಯವಸ್ಥಿತವಾಗಿ ನಡೆಸಲು ಕ್ರಮವಹಿಸಲಾಗಿದೆ ಎಂಬ ವಿವರವನ್ನು ಲೆಕ್ಕಪರಿಶೋಧನೆ ಅವಗಾಹನೆಗೆ ತರಲಾಗಿದೆ.<br><br>(2) ಸದರಿ ಕಾಲೇಜಿನಲ್ಲಿ 2017–18ನೇ ಸಾಲಿನ ವಿವಿಧ ವಿಷಯಗಳ ಪ್ರಶ್ನೆಪತ್ರಿಗಳ ಸರಬರಾಜು Outsourcing of Admission and Exam process, Valuation, Result process (UG & PG) 04/2017 to 08/2017. UG Exams Result process Nov/Dec-2017 and PG Exams process Bill, Confidential Bill, Facing Sheet Continuation Sheet ಗಳಿಗೆ ಒಟ್ಟು ಪರೀಕ್ಷಾ ಪ್ರಕ್ರಿಯೆ ನಿರ್ವಹಣೆ ಸಲುವಾಗಿ ಪಾವತಿಸಿರುವ ಮೊತ್ತ 21,86,651/–ಗಳು ಪರೀಕ್ಷಾ ಪ್ರಕ್ರಿಯೆ ಅಂಕಪಟ್ಟಿಗಳ ಮುದ್ರಣಕ್ಕೆ ನಿರ್ಧರಿತವಾಗಿರುವ ಏಜೆನ್ಸಿಯ ಕಾರ್ಯ ನಿರ್ವಹಣೆಯು ಟೆಂಡರ್ ಪ್ರಕ್ರಿಯೆಯ ಮೂಲಕ ನಿರ್ಧರಿತವಾಗಬೇಕೆಂದು ಅಥವಾ ಈ ರೀತಿಯ ಪರೀಕ್ಷಾ ಪ್ರಕ್ರಿಯೆಯಲ್ಲಿ ಬೇರೆ ಬೇರೆ ಸರ್ಕಾರಿ ಸಂಸ್ಥೆಗಳಲ್ಲಿ ಪರೀಕ್ಷಾ ಕಾರ್ಯದ ಸೇವೆಯನ್ನು ಪೂರ್ಣ ಪ್ರಮಾಣದಲ್ಲಿ ಒದಗಿಸಿ ಉತ್ತಮ ಸೇವೆ ಆಧಾರದಲ್ಲಿ 4(G) ವಿನಾಯಿತಿ ಪಡೆದಿರುವ ಏಜೆನ್ಸಿಯಿಂದ ಸೇವೆಯನ್ನು ಪಡೆಯಲು ಮುಂದಿನ ಸಾಲುಗಳಲ್ಲಿ ಕ್ರಮವಹಿಸಲಾಗಿದೆ. ಆದ್ದರಿಂದ ಪರೀಕ್ಷಾ ಕಾರ್ಯಗಳ ತುರ್ತು ಅವಶ್ಯಕತೆ ಹಿನ್ನೆಲೆಯಲ್ಲಿ ಪ್ರಸ್ಥಾವಿತವಾಗಿರುವ ಏಜೆನ್ಸಿಗಳಿಂದ ಸೇವೆಗಳನ್ನು ಪಡೆದು ಬಿಲ್ ಪಾವತಿಸಲಾಗಿದೆ.<br><br>ಈ ಹಿನ್ನಲೆಯಲ್ಲಿ ಸೂಚಿತ ರೂ.21,86,651/–ಗಳ ಆಕ್ಷೇಪಣೆಯನ್ನು ಕೈ ಬಿಡಲು ಕೋರಿದೆ. |

| | |
|---|---|
| ಈ ಸಂಬಂಧ ರೂ.50,000/–ಗಳ ಎ.ಸಿ ಬಿಲ್ಲು ತಯಾರಿಸಿ (ಬಿ ಆರ್ ಸಂಖ್ಯೆ ನಮೂದಿಸಿರುವುದಿಲ್ಲ) ಹಣಕಾಸು ಅಧಿಕಾರಿಗಳಿಗೆ ದಿನಾಂಕ:26.02.2018 ರಂಉ ಸಲ್ಲಿಸಲಾಗಿ ಈ ಸಂಬಂಧ ಧನಾದೇಶ ಸಂಖ್ಯೆ:952608/03.03.2018ರಲ್ಲಿ ರೂ.50,000/–ಗಳನ್ನು ಸ್ವೀಕರಿಸಲಾಗಿದೆ. ಹೀಗೆ ಸ್ವೀಕರಿಸಲಾದ ರೂ.50,000/–ಗಳಿಗೆ ಸಲ್ಲಿಸಿದ ಎನ್.ಡಿ.ಸಿ ವೋಚರ್‌ಗಳನ್ನು (ಬಿ.ಆರ್ ಸಂಖ್ಯೆ:36/28.03.2018) ಪರಿಶೋಧಿಸಲಾಗಿ, ಕೆಳಕಂಡ ಲೋಪದೋಷಗಳು ಕಂಡುಬಂದಿರುತ್ತದೆ. | ಕಛೇರಿ ಕಾರ್ಯನಿರ್ವಹಕರು ಹೊಸಬರಾದ್ದರಿಂದ ಕಣ್ತಪ್ಪಿನಿಂದ ಈ ಸಂಬಂಧ ರೂ. 50,000/– ಗಳ ಎ.ಸಿ. ಬಿಲ್ಲಿಗೆ ಬಿ.ಆರ್ ಸಂಖ್ಯೆ ನಮೂದಿಸಿರುವುದಿಲ್ಲ ಇನ್ನು ಮುಂದೆ ಹೀಗಾಗದಂತೆ ಎಚ್ಚರವಹಿಸಲಾಗುವುದು. ಹಣಕಾಸು ಅಧಿಕಾರಿಗಳಿಗೆ ದಿನಾಂಕ 26.02.2018 ರಂದು ಸಲ್ಲಿಸಲಾಗಿ, ಈ ಸಂಬಂಧ ಧನಾದೇಶ ಸಂಖ್ಯೆ: 952608/03.03.2018ರಲ್ಲಿ ರೂ. 50,000/– ಗಳನ್ನು ಸ್ವೀಕರಿಸಲಾಗಿದೆ. ಹಾಗೂ ಸದರಿ ಸಾಮಾಗ್ರಿಗಳನ್ನು ತಂದ ಮೇಲೆ ಎನ್.ಡಿ.ಸಿ ವೋಚರ್‌ಗಳನ್ನು (ಬಿ.ಆರ್. ಸಂಖ್ಯೆ:36/28.03.2018) ರಂದು ಸಲ್ಲಿಸಲಾಗಿದೆ. |
| ಅ) Shree Renuka Sugar Limlted Belagavi ರವರಲ್ಲಿ ಕ್ರಮವಾಗಿ Invoice ಸಂಖ್ಯೆ SR:1001008629/ದಿನಾಂಕ:16.03.2018ರಲ್ಲಿ 300 ಲೀಟರ್ Absolute Alcohol ಮತ್ತು Invoice ಸಂಖ್ಯೆ SR:1001008629/ದಿನಾಂಕ:16.03.2018ರಲ್ಲಿ Rectified Spirit ಖರೀದಿಸಿ ಅನುಕ್ರಮವಾಗಹಿ ಬಿಲ್ಲಿನ ಮೊತ್ತ ರೂ.15,930/– ಮತ್ತು ರೂ.9,912/–ಗಳ ಒಟ್ಟು ಮೊತ್ತ ರೂ.25,842/–ಗಳನ್ನು ಧನಾದೇಶ ಸಂಖ್ಯೆ:742150/ದಿನಾಂಕ:13.03.2018ರಲ್ಲಿ ಪಾವತಿಸಿದೆ ಈ ಖರೀದಿ ಸಂಬಂಧ ಕೆ.ಟಿ.ಪಿ.ಪಿ ಕಾಯ್ದೆ 1999, ನಿಯಮ–2000ರಂತೆ ಖರೀದಿ ನಿಯಮಗಳನ್ನು ಪಾಲಿಸಿರುವ ಬಗ್ಗೆ (tender or Quotation) ಪೂರಕ ಲೆಕ್ಕಪತ್ರ ದಾಖಲೆಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸಿರುವುದಿಲ್ಲ. | ಅ) Shree Renuka Sugar limited Belagavi ಇವರುಗಳು ಸರ್ಕಾರದಿಂದ ಅನುಮೋದಿಸಲ್ಪಟ್ಟಿರುವುದರಿಂದ ವಿಶ್ವವಿದ್ಯಾನಿಲಯವು ಇವರಿಂದ ನೇರವಾಗಿ ಖರೀದಿಸಲು ಆದೇಶವನ್ನು ನೀಡಿರುತ್ತದೆ ಬಣ್ಣಾರಿ ಅಮ್ಮನ್, ನಂಜನಗೂಡು, ಹಾಗೂ ಮೈ ಶುಗರ್, ಮಂಡ್ಯ ಇವರನ್ನು ವಿಚಾರಿಸಿದಾಗ 94 % concentrate Absolute Alcohol&Rectified spirit ಇರುವುದು ಎಂದು ತಿಳಿಸಿರುತ್ತಾರೆ ಆದರೆ ಅದು ನಮ್ಮ ಪ್ರಯೋಗಾಲಯಗಳಿಗೆ ಉಪಯೋಗವಾಗುವುದಿಲ್ಲ ನಮಗೆ 97% Absolute Alcohol& 99% Rectified spirit concentrate ಬೇಕಾಗಿರುವುದರಿಂದ ಅದು ಇವರ ಬಳಿ ಲಭ್ಯವಿದೆ ಎಂದು ತಿಳಿಯಿತು ಹಾಗು ನಾವು ವಿಚಾರಿಸಿದ ಸರಬರಾಜುದಾರರಲ್ಲಿ ಇವರ ಅಂತರ (Distance) ಕಡಿಮೆಯಲ್ಲಿತ್ತು ಆದ್ದರಿಂದ Shree Renuka Sugar limited Belagavi ಇವರಿಂದ ನೇರವಾಗಿ ಖರೀದಿಸಲಾಗಿದೆ. |
| ಆ) ಮೇಲ್ಕಂಡ ಸಾಮಗ್ರಿಗಳ ಸಾಗಾಣಿಕೆ ಸಂಬಂಧ (ಮೈಸೂರಿನಿಂದ ಬೆಳಗಾವಿ ಮತ್ತು ಬೆಳಗಾವಿಯಿಂದ ಮೈಸೂರಿಗೆ) ವಿಶ್ವವಿದ್ಯಾನಿಲಯದ ವಾಹನ ಸಂಖ್ಯೆ:KA-09B 8540 ರಲ್ಲಿ ಪ್ರಯಾಣ ಕೈಗೊಂಡು ಒಟ್ಟು 160 ಲೀಟರ್ ಡೀಸೆಲ್ ಖರೀದಿಸಿ ರೂ.10,052/–ಗಳ ವೆಚ್ಚ ಭರಿಸಲಾಗಿದೆ ಹಾಗೆಯೇ Cora Drill Cloth ಗಾಗಿ ರೂ.496/– Cass ಗಳ ಖರೀದಿಗಾಗಿ ರೂ.2,855/– Toll Fee ಗಾಗಿ ರೂ.624/– Room rent ಗಾಗಿ (ವಾಸ್ತವ್ಯ) ರೂ.775/– ಮತ್ತು ವಿಭಾಗದ ಬೋಧಕ ವರ್ಗದವರಾದ ಶ್ರೀ ಡಾ॥ ಕೆ.ಎನ್ ಅಮೂತೇಶ್, ಸಹಾಯಕ ಪ್ರಾಧ್ಯಾಪಕರು | ಆ) ಮೇಲ್ಕಂಡ ಸಾಮಗ್ರಿಗಳ ಸಾಗಾಣಿಕೆ ಸಂಬಂಧ (ಮೈಸೂರಿನಿಂದ ಬೆಳಗಾವಿಗೆ ಮತ್ತು ಬೆಳಗಾವಿಯಿಂದ ಮೈಸೂರಿಗೆ) ವಿಶ್ವವಿದ್ಯಾನಿಲಯದ ವಾಹನ ಸಂಖ್ಯೆ: KA-09B 8540 ರಲ್ಲಿ ಪ್ರಯಾಣ ಕೈಗೊಂಡು ಒಟ್ಟು 160 ಲೀಟರ್ ಡೀಸೆಲ್ ಖರೀದಿಸಿ, ರೂ. 10,052/– |

ಶ್ರೀ ಡಾ॥ ರಾಜಕುಮಾರ್ ಹೆಚ್ ಗರಂಪಳ್ಳಿ ಸಹಾಯಕ ಪ್ರಾಧ್ಯಪಕರು, ಶ್ರೀ ಡಾ॥ ಹೆಚ್.ವಿ, ಗಿರೀಶ್ ಅತಿಥಿ ಉಪನ್ಯಾಸಕರು ಮತ್ತು ಬೋಧಕೇತರ ಸಿಬ್ಬಂದಿಗಳಾದ ಶ್ರೀ ಎನ್ ಮಲ್ಲೇಶಯ್ಯ ಅಟೆಂಡರ್ ಶ್ರೀ ನಾಗ, ಗಾರ್ಡನರ್ ಹಾಗೂ ಶ್ರೀ ಕೆ.ಹನುಮಂತು ವಾಹನಚಾಲಕರು ಈ ಎಲ್ಲರಿಗೂ ಸೇರಿ ಒಟ್ಟು ರೂ.2,130/-ಗಳ ದಿನಭತ್ಯೆ ಪಾವತಿಸಿ ಒಟ್ಟಾರೆ ರೂ.16,932/-ಗಳ ವೆಚ್ಚ ಭರಿಸಲಾಗಿದೆ. (ಸ್ವಂತಕ್ಕೆ ಬರೆದ ಧನಾದೇಶ ಸಂಖ್ಯೆ:7412149/ದಿನಾಂಕ:13.03.2018)

ಇ) ಖರೀದಿಸಲಾಗಿರುವ Absolute Alcohol & Rectified Spirit ಈ ಎರಡೂ ವಸ್ತುಗಳು ಸಹ ಸ್ಫೋಟಗೊಳ್ಳುವ ಗುಣ ಹೊಂದಿದ್ದು, ಸಾಗಾಣಿಕಾ ಅವಧಿಯಲ್ಲಿ ಸ್ಫೋಟಗೊಂಡಲ್ಲಿ ವಿಶ್ವವಿದ್ಯಾನಿಲಯದ ಲಕ್ಷಾಂತರ ರೂ.ಗಳ ಬೆಲೆಬಾಳುವ ವಾಹನ ಹಾಗೂ ವಿಶ್ವವಿದ್ಯಾನಿಲಯದ ಮೌಲ್ಯಾಧಾರಿತ ಆಸ್ತಿಗಳಾದ (ಅಮೂಲ್ಯವಾದ ಜೀವಗಳು ಬೋಧಕರು ಮತ್ತು ಬೋಧಕೇತರ ಸಿಬ್ಬಂದಿಯವರಿಗೆ ಪ್ರಾಣಾಪಾಯವಾಗುವ ಸಂಭವವಿದ್ದು ಇದರ ಪರಿಣಾಮ ವಿಶ್ವವಿದ್ಯಾನಿಲಯಕ್ಕೆ ನಷ್ಟ ಉಂಟಾಗುವ ಸಂಭವವಿರುತ್ತದೆ.

ಈ) ಸರಬರಾಜುದಾರ ಸಂಸ್ಥೆಗೆ "ಸಾಗಾಣಿಕೆ ವೆಚ್ಚ" ಭರಿಸಿ ಖರೀದಿಸುವ ಬದಲು ಹೀಗೆ ವಿಶ್ವವಿದ್ಯಾನಿಲಯದ ವಾಹನ ಬಳಸಿಕೊಂಡು ಇಂಧನ ಖರೀದಿಸಿ ಟೋಲ್ ಫೀ ಪಾವತಿಸಿ ವಾಸ್ತವ್ಯ ಹಾಗೂ ದಿನಭತ್ಯೆ ಮತ್ತು ಇತರೆ ಸಾಮಗ್ರಿಗಳ ಖರೀದಿಗಾಗಿ ಒಟ್ಟು ರೂ.16,932/-ಗಳನ್ನು ಪಾವತಿಸಿರುವುದನ್ನು 'ಅನಗತ್ಯ ವೆಚ್ಚ' ವೆಂದು ಲೆಕ್ಕಪರಿಶೋಧನೆಯಲ್ಲಿ ಪರಿಗಣಿಸಲಾಗಿದೆ ಹಾಗೂ ಸರಬರಾಜು ಸಂಸ್ಥೆಯೊಂದಿಗೆ ಸಾಗಾಣಿಕೆಗಾಗಿ MOU ಮಾಡಿಕೊಳ್ಳುವ ಮೂಲಕ ಸೇವೆ ಪಡೆಯಬಹುದಾಗಿತ್ತೆಂದು ಮತ್ತು ಈ ಮೂಲಕ ಮೇಲ್ಕಂಡ ಎಲ್ಲಾ ಅನಗತ್ಯ ವೆಚ್ಚಗಳನ್ನು ತಡೆಗಟ್ಟಬಹುದಾಗಿತ್ತೆಂದು ಲೆಕ್ಕಪರಿಶೋಧನೆಯಲ್ಲಿ ಅಭಿಪ್ರಾಯಪಡಲಾಗಿದೆ ಮುಂದೆ ಈ ರೀತಿ ಆಗದಂತೆ ಕ್ರಮವಹಿಸಲು ಮತ್ತು ಸ್ಥಳಿಯವಾಗಿ ಖರೀದಿಸಲು ಕ್ರಮಕೈಗೊಳ್ಳಲು ಸೂಚಿಸಿದೆ ಅನಗತ್ಯ ವೆಚ್ಚವೆಂದು ಪರಿಗಣಿಸದ **ರೂ.16,932/-ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.**

ಗಳ ವೆಚ್ಚ ಭರಿಸಲಾಗಿದೆ. ಹಾಗೆಯೇ Cora drill cloth ಗಾಗಿ ರೂ. 496/- Cass ಗಳ ಖರೀದಿಗಾಗಿ ರೂ. 2,855/- Toll fee ಗಾಗಿ 624/- Room rent ಗಾಗಿ (ವಾಸ್ತವ್ಯ) ರೂ. 775/- ಮತ್ತು ವಿಶ್ವವಿದ್ಯಾನಿಲಯದ ನಿಯಮಾನುಸಾರ ವಿಭಾಗದ ಬೋಧಕ ವರ್ಗದವರಾದ ಶ್ರೀ. ಡಾ.ಕೆ.ಎನ್. ಅಮೃತೇಶ್, ಸಹಾಯಕ ಪ್ರಾಧ್ಯಾಪಕರು, ಶ್ರೀ. ಡಾ. ರಾಜಕುಮಾರ್, ಹೆಚ್ ಗಾರಂಪಳ್ಳಿ, ಸಹಾಯಕ ಪ್ರಾಧ್ಯಾಪಕರು, ಶ್ರೀ. ಡಾ. ಹೆಚ್.ವಿ. ಗಿರೀಶ್, ಅತಿಥಿ ಉಪನ್ಯಾಸಕರು ಮತ್ತು ಬೋಧಕೇತರ ಸಿಬ್ಬಂದಿಗಳಾದ ಶ್ರೀ. ಎನ್. ಮಲ್ಲೇಶಯ್ಯ, ಅಟೆಂಡರ್, ಶ್ರೀ. ನಾಗ, ಗಾರ್ಡನರ್ ಹಾಗೂ ಶ್ರೀ ಕೆ. ಹನುಮಂತು, ವಾಹನಚಾಲಕರು ಈ ಎಲ್ಲರಿಗೂ ಸೇರಿ ಒಟ್ಟು ರೂ. 2,130/- ಗಳ ದಿನಭತ್ಯೆ ಪಾವತಿಸಿ ಒಟ್ಟಾರೆ ರೂ. 16,932/- ಗಳ ವೆಚ್ಚ ಭರಿಸಲಾಗಿದೆ.

ಇ) ವಿಭಾಗದ ಎಂ.ಎಸ್ಸಿ ವಿದ್ಯಾರ್ಥಿಗಳಿಗೆ Absolute Alcohol&Rectified spirit ಗಳು ಅತ್ಯಾವಶ್ಯಕವಾಗಿರುತ್ತದೆ ಇವುಗಳನ್ನು ಹೊರತುಪಡಿಸಿ ಹಲವು ಪ್ರಯೋಗಗಳನ್ನು ಮಾಡಲು ಅಸಾಧ್ಯವಾಗಿರುತ್ತದೆ. ಆದರೆ ಇವುಗಳನ್ನು ಸರಬರಾಜು ಮಾಡಲು ಯಾವ ಸರಬರಾಜುದಾರರು ಮುಂದೆ ಬರುವುದಿಲ್ಲ ಹಾಗೂ ಇವುಗಳನ್ನು ಖರೀದಿಸಲು ಸರಬರಾಜುದಾರರು ತಮ್ಮ Quotation ನಲ್ಲಿ ಕೆಲವೊಂದು ಷರತ್ತುಗಳನ್ನು ತಿಳಿಸಿರುತ್ತಾರೆ ಅದರಂತೆ ಇವುಗಳನ್ನು ಸ್ವತ: ನಾವೇ ಖುದ್ದಾಗಿ ಹೋಗಿ ಖರೀದಿಸಬೇಕಾಗಿರುತ್ತದೆ. ವಿದ್ಯಾರ್ಥಿಗಳ ಹಿತದೃಷ್ಠಿಯಿಂದ, ಕಠಿಣವಾದರೂ ಈ ಕೆಲಸಗಳನ್ನು ಮಾಡಬೇಕಾಗಿರುತ್ತದೆ.

Shree Renuka Sugar limited Belagavi ಸರ್ಕಾರದಿಂದ ಅನುಮೋದಿಸಲ್ಪಟ್ಟಿರುವ ಸರಬರಾಜುದಾರರಾಗಿರುವುದರಿಂದ ತನ್ನದೇ ಆದ ಹಲವಾರು ನಿಯಮಗಳನ್ನು ಇಟ್ಟುಕೊಂಡಿದೆ ಅದರಂತೆ, ಅವರ ಷರತ್ತುಗಳಿಗನುಗುಣವಾಗಿ, ಸ್ವಂತ ಖರ್ಚು ಮತ್ತು ಅಪಾಯದ (our own cost & risk) ಹೊಣೆಗಾರಿಕೆ ಪತ್ರವನ್ನು ನೀಡಬೇಕಾಗಿರುತ್ತದೆ.

(ಈ) ಸರಬರಾಜುದಾರರು ತಮ್ಮ Quotation ನಲ್ಲಿ ಕೆಲವೊಂದು ಷರತ್ತುಗಳನ್ನು ತಿಳಿಸಿರುತ್ತಾರೆ ಅದರಂತೆ "ಸಾಗಾಣಿಕೆ ವೆಚ್ಚ" ಭರಿಸಿ ಖರೀದಿಸಬೇಕಾಗಿರುತ್ತದೆ ಹಾಗು ಮೇಲೆ (ಇ) ಗೆ ಸಂಬಂಧಿಸಿದಂತೆ ತಿಳಿಸಿರುವ ಅಂಶಗಳಂತೆ, ವಿದ್ಯಾರ್ಥಿಗಳ ಪ್ರಯೋಗಗಳಿಗಾಗಿ ಖರೀದಿಸಬೇಕಾಗಿರುವುದರಿಂದ ವಿಶ್ವವಿದ್ಯಾನಿಲಯದ ನಿಯಮಾನುಸಾರ **ವಿಶ್ವವಿದ್ಯಾನಿಲಯದ ವಾಹನ ಬಳಸಿಕೊಂಡು, ಇಂಧನ ಖರೀದಿಸಿ, ಟೋಲ್ ಫೀ ಪಾವತಿಸಿ, ವಾಸ್ತವ್ಯ ಹಾಗೂ ದಿನಭತ್ಯೆ ಮತ್ತು ಇತರೆ ಸಾಮಗ್ರಿಗಳ ಖರೀದಿಗಾಗಿ ಒಟ್ಟು ರೂ. 16,932/-ಗಳನ್ನು ಪಾವತಿಸಿರುವುದನ್ನು ಪರಿಗಣಿಸಬೇಕಾಗಿ ಕೋರಲಾಗಿದೆ.** ಹಾಗೂ ಇವುಗಳನ್ನು ಸರಬರಾಜು ಮಾಡಲು ಯಾವ ಸರಬರಾಜುದಾರರು ಮುಂದೆ ಬರುವುದಿಲ್ಲ ಇವುಗಳನ್ನು ಸ್ವತ: ನಾವೇ ಖುದ್ದಾಗಿ ಹೋಗಿ ಖರೀದಿಸಬೇಕಾಗಿರುತ್ತದೆ ಎಂದು ತಿಳಿಸುತ್ತಾ ದಯವಿಟ್ಟು ಆಕ್ಷೇಪಣೆಯನ್ನು ಕೈ ಬಿಡಬೇಕಾಗಿ ಕೋರಲಾಗಿದೆ.

<table>
<tr>
<td></td>
<td>

ಉ) ನಮ್ಮ ವಿಭಾಗಕ್ಕೆ ಅವಶ್ಯಕವಿರುವ Absolute Alcohol&Rectified spirit (97%+99%) ಗಳು ಬೆಳಗಾವಿಯಲ್ಲಿ ಮಾತ್ರ ಲಭ್ಯವಿರುವುದು. ಹತ್ತಿರವಿರುವ ಪ್ರದೇಶಗಳಲ್ಲಿ ವಿಚಾರಿಸಲಾಗಿ ಅವರ ಹತ್ತಿರ (94%) ಇರುವುದಾಗಿ ತಿಳಿಸಿರುತ್ತಾರೆ ಇದು ನಮ್ಮ ವಿಭಾಗದ ಪ್ರಯೋಗಾಲಯಗಳಿಗೆ ಉಪಯೋಗವಾಗುವುದಿಲ್ಲ

ಸದರಿ Absolute Alcohol&Rectified spirit ಖರೀದಿಸಿರುವ ಬಿಲ್ಲುಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸಿದ್ದು ಮೇಲೆ ವಿವರಿಸಿರುವ ಎಲ್ಲಾ ಅಂಶಗಳನ್ನು ಲೆಕ್ಕತಪಾಸಣಾ ಅವಧಿಯಲ್ಲಿ ಲೆಕ್ಕಾಧಿಕಾರಿಗಳಿಗೆ ವಿವರಿಸಲಾಗಿದೆ. ಈ ಮೇಲಿನ ಅಂಶಗಳನ್ನು ಪರಿಗಣಿಸಿ **ಸಾಗಾಣಿಕೆ ವೆಚ್ಚ ರೂ.16,932/–ಗಳ** ಆಕ್ಷೇಪಣೆಯನ್ನು ತೀರುವಳಿಗೊಳಿಸುವಂತೆ ಕೋರಿದೆ.

</td>
</tr>
<tr>
<td>

**139. ಟೆಂಡರ್ ಕರೆಯದೆ ಬಿಡಿ ಬಿಡಿ ಬಿಲ್ಲುಗಳಲ್ಲಿ ಒಂದೇ ದಿನಾಂಕದಲ್ಲಿ ಒಂದೇ ಸಂಸ್ಥೆಯಿಂದ ಒಬ್ಬರೇ ಸರಬರಾಜುದಾರರಿಂದ ಬ್ಯಾಟರಿ ಖರೀದಿಸಿರುವುದು:– (ದೈಹಿಕ ಶಿಕ್ಷಣ ಮತ್ತು ಕ್ರೀಡಾ ಅಧ್ಯಯನ ವಿಭಾಗ).**

2017–18ನೇ ಸಾಲಿನಲ್ಲಿ ದೈಹಿಕ ಶಿಕ್ಷಣ ಮತ್ತು ಕ್ರೀಡಾ ಅಧ್ಯಯನ ವಿಭಾಗದಲ್ಲಿ M/s Guru Computers, Mysore ಹಾಗೂ M/s Computer Shoppe Triveni Complex Mysore ರವರಿಂದ ಬಿಡಿ ಬಿಡಿ ಬಿಲ್ಲು ಮೂಲಕ ಒಂದೇ ದಿನಾಂಕದಂದು ಕಂಪ್ಯೂಟರ್ ಉಪಕರಣಗಳ ಖರೀದಿ ಹಾಗೂ ಬ್ಯಾಟರಿ ಖರೀದಿಸಲಾಗಿದೆ ಟೆಂಡರ್ ಕರೆಯದೆ ಒಂದು ಲಕ್ಷಗಿಂತ ಹೆಚ್ಚಾಗಿ ಪಾವತಿಸಿರುವುದರಿಂದ KTTP ನಿಯಮ KQI ರಲ್ಲಿ ನಿಗದಿತ ನಮೂನೆಯಲ್ಲಿ ಟೆಂಡರ್ ಕರೆಯದೇ ಖರೀದಿಸಲಾಗಿದೆ ಹಾಗೂ ಖರೀದಿಸಿದ ಸಾಮಾಗ್ರಿಗಳನ್ನು ದಾಸ್ತಾನು ಪಡೆಯದೇ ವಿತರಣೆ ಬಳಕೆ ಕ್ರಮಬದ್ಧವಾಗಿ ತೋರಿಸದೆ ಪಾರದರ್ಶಕತೆ ಅಧಿನಿಯಮ ಉಲ್ಲಂಘಿಸಿ, ಖರೀದಿಸಿರುವುದರಿಂದ ಹಾಗೂ ದಾಸ್ತಾನು ಲೆಕ್ಕದಲ್ಲಿ ಕ್ರಮಬದ್ಧವಾಗಿ ಬಳಕೆ ಮಾಡಿರುವ ಬಗ್ಗೆ ವಿವರ ತೋರಿಸದೆ ಇರುವುದರಿಂದ ಟೆಂಡರ್ ಕರೆಯದೆ KTTP ನಿಯಮ ಉಲ್ಲಂಘನೆಯಾಗಿರುವುದರಿಂದ ಮೇಲ್ಕಂಡ 2 ಸಂಸ್ಥೆಗಳಿಗೆ ಪಾವತಿಸಿರುವ ಮೊಬಲಗು **ರೂ.6,20,889/–ಆಕ್ಷೇಪಣೆಯಲ್ಲಿಡಲಾಗಿದೆ** ವಿವರ ಕೆಳಕಂಡಂತಿದೆ.

1) **M/s Guru Computers, Mysore** ಬ್ಯಾಟರಿ ಖರೀದಿ :–

| | ಮೊತ್ತ (ರೂ.ಗಳಲ್ಲಿ) |
|---|---|
| Invoice No 348/31.05.2017 Ch No 227377/03.06.2017 | 90,400 |
| Invoice No 349/31.05.2017 Ch No 227373/03.06.2017 | 92,600 |
| Invoice No 347/31.06.2017 | 92,600 |

</td>
<td>

ಪ್ರಸ್ಥಾವಿತ ಕಂಡಿಕೆಯಲ್ಲಿ 2017–18ನೇ ಸಾಲಿನಲ್ಲಿ ಸದರಿ ಸಂಸ್ಥೆಯಲ್ಲಿ ದೈಹಿಕ ಶಿಕ್ಷಣ ಮತ್ತು ಕ್ರೀಡಾ ವಿಜ್ಞಾನ ವಿಭಾಗಕ್ಕೆ ಸರಬರಾಜು ಪಡೆದಿರುವ ಕಂಪ್ಯೂಟರ್‌ಗೆ ಸಂಬಂಧಿಸಿದ ಯು.ಪಿ.ಎಸ್ ಬ್ಯಾಟರಿ ಮತ್ತು ವೈರಿಂಗ್ ಸೇರಿದಂತೆ Pojector and wall mount screen with wairing ಇತರ ಅತ್ಯಾವಕಾಶ ಉಪಕರಣಗಳ ಖರೀದಿ ಪ್ರಸ್ಥಾವನೆ ಮಾನ್ಯ ಕುಲಸಚಿವರು (ಸಾಮಾನ್ಯ) ಇವರಿಂದ ಆದೇಶ ಸಂಖ್ಯೆ:–ಜಿಎಲ್/03/40/2017–18 ದಿನಾಂಕ:10.05.2017ರಲ್ಲಿ ಅನುಮೋದಿತವಾಗಿದೆ (ಆದೇಶದ ಪ್ರತಿ ಲಗ್ತತಿಸಿದೆ)

ಪ್ರಸ್ಥಾವಿತ ಬಿಡಿ ಉಪಕರಣಗಳ ಸರಬರಾಜಿಗೆ ದರಪಟ್ಟಿ ಆಧಾರದಲ್ಲಿ ಏಜೆನ್ಸಿಯು ನಿರ್ಧಾರವಾಗಿದೆ. ದರಪಟ್ಟಿ ಪ್ರಕ್ರಿಯೆಯಲ್ಲಿ ಭಾಗವಹಿಸಿದ್ದ 3 ಏಜೆನ್ಸಿಗಳು ಸರಬರಾಜಿಗೆ ಸೂಚಿಸಿದ ಒಪ್ಪಿತ ದರಗಳಲ್ಲಿ ಕಡಿಮೆ ದರವನ್ನು ಸೂಚಿಸಿರುವ ಏಜೆನ್ಸಿಯಿಂದ ಸರಬರಾಜು ಪಡೆಯಲು ಕ್ರಮವಹಿಸಲಾಗಿದೆ.

**ದರ ಪಟ್ಟಿ ಪ್ರಕ್ರಿಯೆಯಲ್ಲಿ ಭಾಗವಹಿಸಿದ್ದ ಏಜೆನ್ಸಿಗಳ ವಿವರ**

1. M/s Guru Computers Mysuru
2. M/s Computers shopee Mysuru
3. M/s Shree Computers shopee Mysuru

ಮೇಲಿನ 3 ಏಜೆನ್ಸಿಗಳಲ್ಲಿ M/s Guru Computers Mysuru ರವರು ಸೂಚಿಸಿದ

</td>
</tr>
</table>

| | |
|---|---|
| Ch No 227373/03.06.2017 | |
| **Total** | **2,70,552** |

**2) M/s Computer Shoppe Triveni Complex Mysore ಕಂಪ್ಯೂಟರ್ ಉಪಕರಣಗಳ ಖರೀದಿ**

| | **ಮೊತ್ತ (ರೂ.ಗಳಲ್ಲಿ)** |
|---|---|
| Invoice No 303/27.05.2017 | 74,002 |
| Ch No 227374/03.06.2017 | 80,210 |
| Invoice No 1058/26.05.2017 Ch No 227378/03.06.2017 | 98,643 |
| Invoice No 301/03.06.2017 Invoice No 302/27.05.2017 | 97,482 |
| **Total** | **3,50,337** |

ಮೇಲಿನ ವಿವರದಲ್ಲಿ ತಿಳಿಸಿರುವಂತೆ ತಮ್ಮ ಅಧ್ಯಯನ ವಿಭಾಗದಲ್ಲಿ ಅಳವಡಿಸಿರುವ ಒಟ್ಟು ಕಂಪ್ಯೂಟರ್‌ಗಳಲ್ಲಿ ದುರಸ್ಥಿಯಾಗಿರುವ ಬಿಡಿ ಭಾಗ ಅಳವಡಿಸಿರುವ ಕಂಪ್ಯೂಟರ್ ಬಿಡಿ ಭಾಗಗಳ ದಾಸ್ತಾನು ಲೆಕ್ಕ ಹಾಗೂ ತಾಂತ್ರಿಕ ವರದಿ, ದಾಸ್ತಾನು ವಿತರಣೆ ತೋರಿಸಿರುವ ವಿವರ ಹಳೆ ದಾಸ್ತಾನು ಲೆಕ್ಕ ಕಡತ ಇತ್ಯಾದಿ ದಾಖಲಾತಿಗಳನ್ನು ಹಾಜರುಪಡಿಸಬೇಕಾಗಿ ವಿಚಾರಣೆ ಸಂಖ್ಯೆ:10/2018–2019 ದಿನಾಂಕ:11.03.2019 ರಂದು ನೀಡಲಾಗಿದ್ದು ವಿಚಾರಣೆಗೆ ಯಾವುದೇ ದಾಖಲಾತಿ ಟೆಂಡರ್ ಕಡತ ಹಾಜರುಪಡಿಸದೆ ಪಾರದರ್ಶಕತೆ ನಿಯಮ ಉಲ್ಲಂಘಿಸಿ ಪಾವತಿಸಿರುವುದರಿಂದ ಈ ಬಗ್ಗೆ ಕಛೇರಿಯ ಮುಖ್ಯಸ್ಥರು ವಿವರಣೆ ನೀಡಬೇಕಾಗಿ ತಿಳಿಸಿದೆ.

ಪಾವತಿಸಿರುವ ಬಿಲ್ಲುಗಳಲ್ಲಿ ಜಿ.ಎಸ್.ಟಿ ತೆರಿಗೆ ಕಟಾಯಿಸಿರುವ ಬಗ್ಗೆ ವಿವರವನ್ನು ಹಾಜರುಪಡಿಸಿರುವುದಿಲ್ಲ ಈ ಬಗ್ಗೆ ವಿಚಾರಣೆ ಸಂಖ್ಯೆ:7/07.03.2019 ರಂದು ನೀಡಲಾಗಿದ್ದು ವಿಚಾರಣೆಗೆ ವಿವರಣೆ ನೀಡದೆ ಬಿ.ಆರ್ ರಿಜಿಸ್ಟರ್‌ನಲ್ಲಿ ದಾಖಲು ಮಾಡದೇ ನೇರವಾಗಿ ಹಣಕಾಸು ವಿಭಾಗಕ್ಕೆ ಸಲ್ಲಿಸಿ ಬಿಲ್ ಪಾಸ್ ಮಾಡಿರುವುದು ಕ್ರಮಬದ್ಧವಾಗಿರುವುದಿಲ್ಲ.

ದರವು ತುಲನಾತ್ಮಕ ದರಪಟ್ಟಿ ರೀತ್ಯಾ ಎಲ್1 ಆಗಿರುವ ಹಿನ್ನಲೆಯಲ್ಲಿ ಸದರಿ ಏಜೆನ್ಸಿಯಿಂದ ಅವಶ್ಯಕ ಉಪಕರಣಗಳನ್ನು ಸರಬರಾಜು ಪಡೆಯಲು ಕ್ರಮವಹಿಸಲಾಗಿದೆ (M/s Guru Computers Mysuru ರವರಿಂದ ಸರಬರಾಜು ಪಡೆದಿರುವ ಬಿಲ್ಲುಗಳ ಪ್ರತಿ ಅಡಕಗೊಳಿಸಿದೆ)

| ಕ್ರ ಸಂ | **Invoice No** | ದಿನಾಂಕ | ಧನಾದೇಶ ಸಂಖ್ಯೆ | ದಿನಾಂಕ | ಬಿಲ್ಲು ಮೊತ್ತ |
|---|---|---|---|---|---|
| 1 | 348 | 31.05.2017 | 227377 | 03.06.2017 | 90400 |
| 2 | 349 | 31.05.2017 | 227373 | 03.06.2017 | 92600 |
| 3 | 347 | 31.05.2017 | 227380 ಆಡಿಟ್ ವರದಿಯಲ್ಲಿ ಧನಾದೇಶ ಸಂಖ್ಯೆ ತಪ್ಪಾಗಿ ವರದಿಯಾಗಿದೆ. | 03.06.2017 | 87552 |
| | | | | **ಒಟ್ಟು** | **270552** |

**II.** Computer shopee triveni compelx mysuru ಇವರಿಂದ ಸರಬರಾಜು ಪಡೆದಿರುವ ಪ್ರಕಾರಣದಲ್ಲಿಯೂ ದರಪಟ್ಟಿ ಆದಾರದಲ್ಲಿ ಸರಬರಾಜಿಗೆ ಕ್ರಮವಹಿಸಲಾಗಿದೆ (ಸರಬರಾಜು ಬಿಲ್ಲುಗಳೊಂದಿಗೆ ತುಲನಾತ್ಮಕ ದರಪಟ್ಟಿ ಪ್ರತಿ ಲಗತ್ತಿಸಿದೆ,)

| ಕ್ರ ಸಂ | **Invoice No** | ದಿನಾಂಕ | ಧನಾದೇಶ ಸಂಖ್ಯೆ | ದಿನಾಂಕ | ಬಿಲ್ಲು ಮೊತ್ತ |
|---|---|---|---|---|---|
| 1 | 303 | 27.05.2017 | 227372 | 03.06.2017 | 74002 |
| 2 | 1058 | 26.05.2017 | 227374 | 03.06.2017 | 80210 |
| 3 | 301 | 27.05.2017 | 227378 | 03.06.2017 | 98643 |
| 4 | 302 | 27.05.2017 | 227375 | 03.06.2017 | 97482 |
| | | | | **ಒಟ್ಟು** | **350337** |

**I + II (270552+350337=620889)**

ಸರಬರಾಜು ಪಡೆದಿರುವ ಪ್ರತಿ ವಸ್ತುಗಳ ದಾಸ್ತಾನಿಗೆ ಸಂಬಂಧಿಸಿದಂತೆ ಪ್ರತಿ ಸರಬರಾಜು ಬಿಲ್ ಹಿಂಬಾಗದಲ್ಲಿಯೂ ದಾಸ್ತಾನು ವಿವರ ದೃಢಿಕರಿಸಲಾಗಿದೆ ಮತ್ತು ಸರಬರಾಜು ಆದ

| | |
|---|---|
| | ವಸ್ತುಗಳ/ಬಿಡಿಭಾಗಗಳ/ಉಪಕರಣಗಳ ದಾಸ್ತಾನು ಮತ್ತು ವಿತರಣೆ ವಿವರವನ್ನು ದಾಸ್ತಾನು ಮತ್ತು ವಿತರಣೆ ವಹಿಯಲ್ಲಿ ಸವಿವರವಾಗಿ ದಾಖಲಿಸಲಾಗಿದೆ ಸಕ್ಷಮ ಅಧಿಕಾರಿಗಳು ಧೃಢೀಕರಿಸಿರುತ್ತಾರೆ,<br><br>ಪಸ್ತುತ ಸರಬರಾಜು ಪಡೆದಿರುವ ವಸ್ತುಗಳ ಸರಬರಾಜು ಪ್ರಥಮ ಸರಬರಾಜು ಆಗಿದೆ ಆದ್ದರಿಂದ ಅನುಪಯುಕ್ತ ಹಳೇ ದಾಸ್ತಾನು ಪ್ರಶ್ನೆ ಇರುವುದಿಲ್ಲ.<br><br>ಸರಬರಾಜು ಆದೇಶ ಪಡೆದಿರುವ 2 ಏಜೆನ್ಸಿಗಳು ಅಧಿಕೃತವಾದ VAT/TIN ನೊಂದಣಿಯನ್ನು ಹೊಂದಿರುತ್ತಾರೆ.<br><br>ಸದರಿ ಪ್ರಕರಣದಲ್ಲಿ ಸರಬರಾಜು ಪಡೆದಿರುವ ವಸ್ತುಗಳ ಒಟ್ಟು ಮೊತ್ತವನ್ನು ಪರಿಗಣಿಸಿದರೆ KTPP ನಿಯಮಗಳನ್ವಯ ಟೆಂಡರ್ ಪ್ರಕ್ರಿಯೆ ಮೂಲಕ ಸರಬರಾಜು ಏಜೆನ್ಸಿಗಳ ನಿರ್ಧರಣೆ ಆಗಬೇಕಿತ್ತು,<br><br>ಆದರೆ ಸರಬರಾಜು ಪಡೆದಿರುವ ಉಪಕರಣಗಳು ಪರೀಕ್ಷಾ ಪ್ರಕ್ರಿಯೆಗೆ ಅತಿ ಅವಶ್ಯಕವಾದ ಉಪಕರಣಗಳಾಗಿದ್ದ ಕಾರಣ ಟೆಂಡರ್ ಪ್ರಕ್ರಿಯೆಗೆ ಹೆಚ್ಚಿನ ಸಮಯವಕಾಶ ಇಲ್ಲದ ಹಿನ್ನಲೆಯಲ್ಲಿ ದರಪಟ್ಟಿ ಆದಾರದಲ್ಲಿ ಸರಬರಾಜಿಗೆ ಕ್ರಮ ವಹಿಸಲಾಗಿದೆ ಎಂಬ ಅಂಶವನ್ನು ಆಡಿಟ್ ಅವಗಾಹನೆಗೆ ತರಲಾಗಿದೆ.<br><br>ಅಲ್ಲದೇ ಮುಂದಿನ ದಿನಗಳಲ್ಲಿ ಈ ರೀತಿ ಪ್ರಕರಣಗಳಲ್ಲಿ KTPP ನಿಯಮಾನುಸಾರವೆ ಸರಬರಾಜು/ಖರೀದಿಗೆ ಕ್ರಮವಹಿಸಲಾಗುವುದು.<br><br>ಆದ ಕಾರಣ ಸೂಚಿತ ಆಕ್ಷೇಪಣೆಯನ್ನು ಕೈ ಬಿಡಲು ಕೋರಿದೆ. |
| **140. ಬೋರ್‌ವೆಲ್ ದುರಸ್ಥಿಗೊಳಿಸದೆ ನೀರಿನ ಸರಬರಾಜುನ್ನು ಟೆಂಡರ್ ಪ್ರಕ್ರಯೆ ಕೈಗೊಳ್ಳದೆ ಖಾಸಗಿಯವರಿಂದ ಮಾಡಿಸಿಕೊಂಡಿರುವುದರ ಕುರಿತು:–(ಸ್ನಾತಕೋತ್ತರ ಪುರುಷ ವಿದ್ಯಾರ್ಥಿನಿಲಯ ಬ್ಲಾಕ್ –2)**<br><br>2017–18ನೇ ಸಾಲಿನ ಲೆಕ್ಕಪರಿಶೋಧನೆಯಲ್ಲಿ ಹಾಜರುಪಡಿಸಲಾದ ಓಚರ್‌ಗಳ ಬಿಲ್ಲುಗಳ ಪರಿಶೀಲನೆಯಲ್ಲಿ ಕಂಡು ಬಂದಂತೆ ಸದರಿ ಸಾಳಿನಲ್ಲಿ ವಿದ್ಯಾರ್ಥಿನಿಲಯಕ್ಕೆ ಮೆ॥ ಲಕ್ಷ್ಮೀರಂಗನಾಥ ಸ್ವಾಮಿ ಕೃಪ ಮೈಸೂರು ಹಾಗೂ ಮೆ॥ ಎಸ್,ಎಲ್,ವಿ ಎಂಟರ್‌ಪ್ರೈಸಸ್, ಮೈಸೂರು ರವರುಗಳಿಂದ ನೀರು ಸರಬರಾಜು ಮಾಡಿಸಿಕೊಂಡು ರೂ.1,14,000/–ಗಳನ್ನು ಪಾವತಿಸಲಾಗಿದೆ ವಿದ್ಯಾರ್ಥಿನಿಲಯದ ಬೋರ್‌ವೆಲ್ ಯಂತ್ರದ ದುರಸ್ಥಿ ಕಾರ್ಯವನ್ನು ಕೈಗೊಳ್ಳದೆ, ಹೊರಗಿನ ನೀರು ಸರಬರಾಜುದಾರರಿಂದ ನೀರನ್ನು 2016–17ನೇ ಸಾಲಿನಿಂದ ಇಲ್ಲಿಯವರೆಗೂ ಪೂರೈಸಿಕೊಳ್ಳುತ್ತಿರುವುದು ವಿಶ್ವವಿದ್ಯಾನಿಲಯಕ್ಕೆ ಆರ್ಥಿಕ ಹೊರೆಯಾಗಿದೆ ವಿಶ್ವವಿದ್ಯಾನಿಲಯದ | ಸ್ನಾತಕೋತ್ತರ ಪುರುಷ ವಿದ್ಯಾರ್ಥಿನಿಲಯ ಬ್ಲಾಕ್–2 ರಲ್ಲಿ 2017–18ನೇ ಸಾಲಿನ ಅವಧಿಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ಬೋರ್‌ವೆಲ್ ಹಠಾತ್ತಾಗಿ ಕೆಟ್ಟು ಹೋಯಿತು ಈ ಸಂದರ್ಭದಲ್ಲಿ ತಕ್ಷಣಕ್ಕೆ ಬೋರ್‌ವೆಲ್ ದುರಸ್ಥಿಗಾರರು ಲಭ್ಯವಾಗದ ಕಾರಣ ವಿದ್ಯಾರ್ಥಿನಿಲಯಕ್ಕೆ ನೀರು ಸರಬರಾಜಿನ ವ್ಯತ್ಯಯವಾದುದರಿಂದ ವಿದ್ಯಾರ್ಥಿ ನಿಲಯಕ್ಕೆ ನೀರಿನ ಅತ್ಯಾವಶ್ಯಕವಾದ್ದರಿಂದ ಕೊಟೇಷನ್ ಮೂಲಕ ಮೇ॥ ಲಕ್ಷ್ಮಿ ರಂಗನಾಥ ಸ್ವಾಮಿ ಕೃಪ ಮೈಸೂರು ಹಾಗೂ ಮೆ॥ ಎಸ್,ಎಲ್,ವಿ ಎಂಟರ್ ಪ್ರೈಸಸ್ ಮೈಸೂರು ಇವರಿಂದ ನೀರು ಸರಬರಾಜು ಪಡೆದು ಈ ಸಂಬಂಧ ಒಟ್ಟು ರೂ.1,14,000/–ಗಳ ಮೊತ್ತವನ್ನು |

| | |
|---|---|
| ತೋಟಗಾರಿಕೆ ವಿಭಾಗದಲ್ಲಿ ಲಭ್ಯವಿರುವ ನೀರಿನ ಆಕರಗಳಿಂದ ನೀರು ಸರಬರಾಜಿನ ಸೌಲಭ್ಯವನ್ನು ಪಡೆಯದಿರುವುದನ್ನು ಗಮನಿಸಲಾಗಿದೆ ಈ ಸಂಬಂಧ ಸೂಕ್ತ ವಿವರಣೆಯನ್ನು ನೀಡುವಂತೆ ವಿಚಾರಣಾ ಪತ್ರದ ಸಂಖ್ಯೆ:02/2018–19/14.03.2019 ರಲ್ಲಿ ಕೋರಲಾಗಿ ಯಾವುದೇ ಸಮಂಜಸ ಉತ್ತರ ದೊರೆಯದ ಕಾರಣ ಹಾಗೂ ನೀರು ಸರಬರಾಜು ಪ್ರಕ್ರಿಯೆಯಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮ–1999ರ ನಿಯಮದಂತೆ ಟೆಂಡರ್ ಪ್ರಕ್ರಿಯೆ ಕೈಗೊಳ್ಳದೆ ನೇರವಾಗಿ ನೀರು ಸರಬರಾಜು ಮಾಡಿಸಿಕೊಂಡಿರುವುದರಿಂದ ನಿಯಮ ಉಲ್ಲಂಘನೆಯಾಗಿರುತ್ತದೆ ಆದ್ದರಿಂದ ಸದರಿ ಮೊತ್ತ ರೂ.1,14,000/–ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ ವಿವರವನ್ನು ಅನುಬಂಧ–71ರಲ್ಲಿ ಲಗತ್ತಿಸಿದೆ. | ಪಾವತಿಸಲಾಗಿರುತ್ತದೆ ಈ ಸಮಯದಲ್ಲಿ ಸದರಿ ಸರಬರಾಜುದಾರರಿಂದ ನೀರಿನ ವ್ಯವಸ್ಥೆ ಕೈಗೊಳ್ಳದಿದ್ದಲ್ಲಿ ವಿದ್ಯಾರ್ಥಿನಿಲಯಕ್ಕೆ ಹಾಗೂ ವಿದ್ಯಾರ್ಥಿಗಳಿಗೆ ತುಂಬಾ ತೊದರೆಯಾಗುತ್ತಿತ್ತು ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ಖಾಸಗಿಯವರಿಂದ ನೀರಿನ ವ್ಯವಸ್ಥೆ ಪಡೆಯಲಾಗಿರುತ್ತದೆಂಬ ಅಂಶವನ್ನು ಅವಗಾಹನೆಗೆ ತರಲಾಗಿದೆ<br><br>ಈ ನಿಟ್ಟಿನಲ್ಲಿ ಸದರಿ ಕಂಡಿಕೆ 140 ರಲ್ಲಿ ಆಕ್ಷೇಪಿಸಿ ಆಕ್ಷೇಪಣೆಯಲ್ಲಿಟ್ಟಿರುವ ಮೊತ್ತ ರೂ.1,14,000/–ಗಳನ್ನು ಆಕ್ಷೇಪಣೆಯಿಂದ ಕೈ ಬಿಡುವಂತೆ ನಿವೇದಿಸಲಾಗಿದೆ, |
| **141. ಪರಿಶಿಷ್ಟ ಜಾತಿ ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳಿಗೆ ಮೆಸ್‌ಬಿಲ್ ಮೊತ್ತವು ಸರ್ಕಾರದಿಂದ ಮರುಭರಿಕೆಯಾಗದಿರುವುದು:– (ಸ್ನಾತಕೋತ್ತರ ಪರುಷ ವಿದ್ಯಾರ್ಥಿನಿಲಯ ಬ್ಲಾಕ್–3)**<br><br>2017–18ನೇ ಸಾಲಿನ ಲೆಕ್ಕಪರಿಶೋಧನೆಯಲ್ಲಿ ಸ್ನಾತಕೋತ್ತರ ವಿದ್ಯಾರ್ಥಿನಿಲಯಕ್ಕೆ ಉಚಿತವಾಗಿ ನೊಂದಣಿಯಾಗಿರುವ ವಿದ್ಯಾರ್ಥಿಗಳಿಗೆ ಸರ್ಕಾರದಿಂದ ಮೆಸ್‌ಬಿಲ್ ಹುಂಡಿಯು ಮರುಭರಿಕೆಯಾಗಿರುವ ಕಡತಗಳನ್ನು ಪರಿಶೀಲಿಸಲಾಗಿ ವಿದ್ಯಾರ್ಥಿನಿಲಯಕ್ಕೆ 145 ವಿದ್ಯಾರ್ಥಿಗಳು ನೊಂದಣಿಯಾಗಿದ್ದು ಸದರಿ ವಿದ್ಯಾರ್ಥಿಗಳಲ್ಲಿ 121 ವಿದ್ಯಾರ್ಥಿಗಳಿಗೆ ತಲಾ ರೂ.8,200/–ಗಳಂತೆ ಒಟ್ಟು ರೂ.9,92,200/–ಗಳು ಮರುಭರಿಕೆಯಾಗಿದ್ದು ಉಳಿಕೆ 24 ವಿದ್ಯಾರ್ಥಿಗಲೀಗೆ ತಲಾ ರೂ.8,200/–ಗಳಂತೆ ರೂ.1,96,800/–ಗಳು ಸರ್ಕಾರದಿಂದ ಈ ತಹಲ್‌ವರೆಗೂ ಸರ್ಕಾರದಿಂದ/ವಿದ್ಯಾರ್ಥಿಗಳಿಂದ ಮರುಭರಿಕೆಯಾಗದಿರುವ ಬಗ್ಗೆ ವಿವರಣೆ ನೀಡುವಂತೆ ಲೆಕ್ಕಪರಿಶೋಧನೆ ವಿಚಾರಣೆ ಪತ್ರ ಸಂಖ್ಯೆ:03/2019–20, 2019 ರಲ್ಲಿ ಕೋರಲಾಗಿದ್ದು ಯಾವುದೇ ಕಡತಗಳನ್ನು ಹಾಜರುಪಡಿಸಿರುವುದಿಲ್ಲ ಸರ್ಕಾರದಿಂದ ಮರುಭರಿಕೆ ಮಾಡಿಕೊಳ್ಳುವುದು ಇಲ್ಲವೇ **24** ವಿದ್ಯಾರ್ಥಿಗಳೀಂದ **ತಲಾ ರೂ.8,200/– ರಂತೆ ಒಟ್ಟು ರೂ.1,96,800/–ಗಳನ್ನು ವಸೂಲಿಸಿ** ವಿಶ್ವವಿದ್ಯಾನಿಲಯದ ಸಂಬಂಧಿಸಿದ ಲೆಕ್ಕ ಶೀರ್ಷಿಕೆಗೆ ಜಮಾ ಮಾಡಲು ಸೂಚಿಸಿದೆ. | 2017–18ನೇ ಸಾಲಿನಲ್ಲಿ ಸಾತ್ನಕೋತ್ತರ ಪರುಷ ವಿದ್ಯಾರ್ಥಿನಿಲಯ ಬ್ಲಾಕ್–3 ರಲ್ಲಿ ಉಚಿತವಾಗಿ ನೊಂದಣಿಯಾಗಿರುವ ವಿದ್ಯಾರ್ಥಿಗಳ ಒಟ್ಟು ಸಂಖ್ಯೆ:145 ಸದರಿ ವಿದ್ಯಾರ್ಥಿಗಳಲ್ಲಿ 121 ವಿದ್ಯಾರ್ಥಿಗಳಿಂದ ತಲಾ ರೂ.8,200/–ಗಳಂತೆ ಒಟ್ಟು ರೂ.9,92,200/–ಗಳು ಮರುಭರಿಕೆಯಾಗಿದ್ದು ಉಳಿಕೆ 24 ವಿದ್ಯಾರ್ಥಿಗಳಿಂದ ತಲಾ ರೂ.8,200/–ಗಳಂತೆ ಒಟ್ಟು ರೂ.1,96,800/–ಗಳು ಮರುಭರಿಕೆಯಾಗದಿರುವ ಬಗ್ಗೆ ಪ್ರಸ್ತಾಪಿಸಲಾಗಿರುತ್ತದೆ.<br><br>2017–18ನೇ ಸಾಲಿನಲ್ಲಿ ಪ್ರವೇಶಾತಿ ಪಡೆದ ವಿದ್ಯಾರ್ಥಿಗಳ **ಒಟ್ಟು ಸಂಖ್ಯೆ:145ರಲ್ಲಿ ಕ್ರಮ ಸಂಖ್ಯೆ:119ರ ಒಬ್ಬ ವಿದ್ಯಾರ್ಥಿ ಪೇ ಬೋರ್ಡ್** ಆಗಿದ್ದು ಹಾಗೂ ವಿದ್ಯಾರ್ಥಿಗಳ ಪ್ರವೇಶಾತಿ **ಕ್ರಮ ಸಂಖ್ಯೆ:03, 13, 28, 42, 47 ಮತ್ತು 156ರ ಒಟ್ಟು 06 ಮಂದಿ** ವಿದ್ಯಾರ್ಥಿಗಳು ಪ್ರವೇಶಾತಿಯನ್ನು ರದ್ದುಪಡಿಸಿಕೊಂಡಿರುತ್ತಾರೆ ಇದರಿಂದಾಗಿ **(1+6)=07** ವಿದ್ಯಾರ್ಥಿಗಳ ಪ್ರವೇಶಾತಿ ಕಡಿಮೆಯಾಗಿದ್ದು 2017–18ನೇ ಸಾಲಿಗೆ ಉಚಿತವಾಗಿ ನೊಂದಣಿಯಾಗಿರುವ ವಿದ್ಯಾರ್ಥಿಗಳ **ಒಟ್ಟು ಸಂಖ್ಯೆ:138 ತಲಾ ರೂ.8,200/–ಗಳಂತೆ ಒಟ್ಟು ರೂ.11,31,600/–ಗಳ** ಇದರಲ್ಲಿ ಈ ತಹಲ್‌ವರೆವಿಗೆ **126** ವಿದ್ಯಾರ್ಥಿಗಳು ತಲಾ ರೂ.8,200/–ರಂತೆ **ಒಟ್ಟು ರೂ.10,33,200/–ಗಳು** ಮರುಭರಿಕೆಯಾಗಿರುತ್ತದೆ **ಅನುಬಂಧ–01 ರಲ್ಲಿ** ವಿವರಿಸಿರುವ ಉಳಿಕೆ **12 ವಿದ್ಯಾರ್ಥಿಗಳಿಗೆ** ತಲಾ **ರೂ.8,200/–ರಂತೆ ರೂ.98,400/–ಗಳು** ಮಾತ್ರ ಸರ್ಕಾರದಿಂದ ಮರುಭರಿಕೆಯಾಗಬೇಕಾಗಿರುತ್ತದೆ. ಸರ್ಕಾರದಿಂದ ಮರುಭರಿಕೆಯಾಗದಿದ್ದ ಪಕ್ಷದಲ್ಲಿ ವಿದ್ಯಾರ್ಥಿಗಳಿಂದ ವಸೂಲಿಸಿ ಮರುಭರಿಕೆ ಮಾಡಿಕೊಳ್ಳಲಾಗುವುದು ಈ ಸಂಬಂಧವಾಗಿ ಆಯಾಯ ಅಧ್ಯಯನ ವಿಭಾಗದ ಮುಖ್ಯಸ್ಥರುಗಳಿಗೆ ವಿದ್ಯಾರ್ಥಿಗಳ ಮೂಲ |

| | |
|---|---|
| | ಅಂಕಪಟ್ಟಿ ಮತ್ತು ಇತರೆ ದಾಖಲಾತಿಗಳನ್ನು ವಿದ್ಯಾರ್ಥಿ ನಿಲಯದಿಂದ ಬೇಬಾಕಿ ಪ್ರಮಾಣ ಪತ್ರ ನೀಡುವವರೆಗೆ ತಡೆಹಿಡಿಯುವಂತೆ ಪತ್ರ ವ್ಯವಹಾರ ನಡೆಸಲಾಗಿರುತ್ತದೆ ಎಂಬ ವಿಷಯವನ್ನು ತಮ್ಮ ಅವಗಾಹನೆಗೆ ತರುತ್ತಾ **ಕಂಡಿಕೆಯಲ್ಲಿ ವಸೂಲಾತಿಗೆ ಸೂಚಿಸಿರುವ ಮೊತ್ತ ರೂ.1,96,800/– ಗಳಲ್ಲಿ ರೂ.98,400/–ಗಳನ್ನು ತೀರುವಳಿಗೊಳಿಸಬೇಕಾಗಿ ಕೋರಿದೆ.** |
| **142. ಹಾಸ್ಟೆಲ್ ಮೆಸ್ ಗುತ್ತಿಗೆ ನೀಡಲು ಇ –ಪ್ರಕ್ಯೂರ್‌ಮೆಂಟ್ ಮೂಲಕ ಟೆಂಡರ್ ಕರೆಯಲಾಗಿರುವ ಟೆಂಡರ್ ಕಡತಗಳನ್ನು ಮತ್ತು ಗುತ್ತಿಗೆದಾರರು ಸಲ್ಲಿಸುವ ಮೆಸ್ ಬಿಲ್‌ಗಳೊಂದಿಗೆ ಹಾಸ್ಟೆಲ್ ವಿದ್ಯಾರ್ಥಿಗಳ ಸಹಿಗಳಿರುವ ಹಾಜರಾತಿಯ ಪ್ರತಿಗಳನ್ನು ದಾಖಲಾತಿಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸದಿರುವುದು :– (ಮಹಾರಾಜ ಕಾಲೇಜು ವಿದ್ಯಾರ್ಥಿನಿಲಯ)**<br><br>2017–18ನೇ ಸಾಲಿನ ಮಹಾರಾಜ ಕಾಲೇಜು ವಿದ್ಯಾರ್ಥಿನಿಲಯದ ಮೆಸ್‌ಬಿಲ್ಲುಗಳ ಪರಿಶೋಧನೆಯಲ್ಲಿ ಮೆಸ್ ಗುತ್ತಿಗೆದಾರರಿಗೆ ರೂ.37,88,019/– ಪಾವತಿಸಿರುವುದು ಕಂಡುಬಂದಿರುತ್ತದೆ ಆದರೆ ಮೆಸ್‌ಗುತ್ತಿಗೆ ನೀಡಲು ಪ್ರತಿ ವರ್ಷ ಕೆ.ಟಿ.ಪಿ.ಪಿ ಕಾಯ್ದೆ 2000ರನ್ವಯ 1 ಲಕ್ಷಕ್ಕಿಂತ ಹೆಚ್ಚಿನ ಮೊತ್ತಕ್ಕೆ ಟೆಂಡರ್ ಪ್ರಕ್ರಿಯೆಯನ್ನು 5 ಲಕ್ಷಕ್ಕಿಂತ ಹೆಚ್ಚಿನ ಮೊತ್ತಕ್ಕೆ ಇ–ಪ್ರಕ್ಯೂರ್‌ಮೆಂಟ್ ಪ್ರಕ್ರಿಯೆ ಮೂಲಕ ಮೆಸ್ ಗುತ್ತಿಗೆಯನ್ನು ನೀಡಿರುವ ಕುರಿತು ಕೈಗೊಳ್ಳಲಾಗಿರುವ ಟೆಂಡರ್ ಪ್ರಕ್ರಿಯೆ ಕಡತಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸುವಂತೆ ಕೋರಿ ಲೆಕ್ಕಪರಿಶೋಧನಾ ವಿಚಾರಣಾ ಪತ್ರ ಸಂಖ್ಯೆ:3/28.03.2019 ವಿಚಾರಣೆಯನ್ನು ನೀಡಿದ್ದರೂ ಸಹ ತಪಾಸಣೆಗೆ ಕಡತಗಳನ್ನು ಹಾಜರುಪಡಿಸಿರುವುದಿಲ್ಲ.<br><br>ಮೆಸ್ ಗುತ್ತಿಗೆದಾರರು ಮೆಸ್ ಬಿಲ್ಲುಗಳನ್ನು ಪಾವತಿಗಾಗಿ ಸಲ್ಲಿಸಲಾಗಿರುವ ಬಿಲ್ಲುಗಳನ್ನು ಪರಿಶೀಲಿಸಲಾಗಿ ಹಾಸ್ಟೆಲ್‌ನಲ್ಲಿ ವಾಸಿಸುವ ವಿದ್ಯಾರ್ಥಿಗಳ ಸಹಿ ಇರುವ ಮಾಹೆವಾರು ಹಾಜರಾತಿ ಪಟ್ಟಿಯನ್ನು ಹಾಸ್ಟೆಲ್‌ನ ಶಿಕ್ಷಕ ಸಲಹೆಗಾರರು ದೃಢೀಕರಿಸಿ ಮೆಸ್ ಬಿಲ್ಲುಗಳೊಂದಿಗೆ ಲಗತ್ತಿಸಿ ಹಾಜರುಪಡಿಸಿರುವುದಿಲ್ಲ ಆದರೆ ನಿಯಮಗಳ ಅನುಸಾರ ಮೆಸ್ ಬಿಲ್‌ಗಳೊಂದಿಗೆ ಲಗತ್ತಿಸಲಾಗುವ ವಿದ್ಯಾರ್ಥಿಗಳ ಸಹಿಗಳಿರುವ ಹಾಜರಾತಿಯ ಆಧಾರದ ಮೇಲೆ ಮೆಸ್ ಬಿಲ್ಲು ಅಂಗಿಕರಿಸಬೇಕಾಗಿದ್ದು ಇಲ್ಲಿ ಗುತ್ತಿಗೆದಾರರು ಸಲ್ಲಿಸಲಾಗಿರುವ ಬಿಲ್ಲುಗಳನ್ನು ಪಾವತಿಗೆ ಅಂಗೀಕರಿಸಿರುವ ಕ್ರಮವು ಅಕ್ಷೇಪರ್ಹಾವಾಗಿದೆ ಹಾಗೂ ಸಂಶಯಾಸ್ಪದವಾಗಿರುತ್ತದೆ.<br><br>ಮುಂದುವರೆದು 2017–18ನೇ ಸಾಲಿನ ಮೆಸ್ ಬಿಲ್ಲುಗಳಲ್ಲಿ ವರ್ಷದಲ್ಲಿ ಬರುವ ಅನೇಕ ರಾಷ್ಟ್ರೀಯ ಹಬ್ಬ ಹರಿದಿನಗಳು ಸ್ಥಳೀಯ ಹಬ್ಬ ಹರಿದಿನಗಳಂದು ಹಾಗೂ ಸಾರ್ವತ್ರಿಕ ರಜೆ ದಿನಗಳಂದ ಸಹ ಎಲ್ಲಾ ವಿದ್ಯಾರ್ಥಿಗಳು ಮೆಸ್‌ಗೆ ಹಾಜರಾಗಿರುತ್ತಾರೆ ಎಂದು ಬಿಲ್ಲುಗಳನ್ನು ಸಲ್ಲಿಸಿರುವುದನ್ನು ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾಗಿದ್ದು ಈ ಬಗ್ಗೆ ಶಿಕ್ಷಕ ಸಲಹೆಗಾರರು | ಕಂಡಿಕೆಯ ಮೊದಲ ಪ್ಯಾರಾದಲ್ಲಿ ಮೆಸ್ ಗುತ್ತಿಗೆ ನೀಡಲು ಇ–ಪ್ರಕ್ಯೂರ್‌ಮೆಂಟ್ ಪ್ರಕ್ರಿಯೆ ಮೂಲಕ ಕೈಗೊಳ್ಳಲು ಟೆಂಡರ್ ಪ್ರಕ್ರಿಯೆ ಕಡತಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸುವಂತೆ ಕೋರಲಾಗಿದ್ದು ಮೈಸೂರು ವಿಶ್ವವಿದ್ಯಾನಿಲಯದ ವ್ಯಾಪ್ತಿಗೊಳಪಡುವ ಎಲ್ಲಾ ವಿದ್ಯಾರ್ಥಿನಿಲಯಗಳ ಮೆಸ್ ಗುತ್ತಿಗೆ ಇ–ಪ್ರಕ್ಯೂರ್‌ಮೆಂಟ್ ಮೂಲಕ ಟೆಂಡರ್ ಪ್ರಕ್ರಿಯೆಯ ಕಾರ್ಯವನ್ನು ವಿದ್ಯಾರ್ಥಿ ಕ್ಷೇಮಪಾಲನಾ ವಿಭಾಗ ಮೂಲಕ ಕೈಗೊಳ್ಳುತ್ತಿರುವುದಾಗಿ ನಿವೇದಿಸಲಾಗಿದೆ.**(ಕಂಡಿಕೆ ಸಂಖ್ಯೆ:132ರಲ್ಲಿ ಪ್ರಸ್ಥಾಪಿಸಿದೆ)**<br><br>ಕಂಡಿಕೆಯಲ್ಲಿ ತಾವು ನೀಡಿರುವ ಸಲಹೆ ಮತ್ತು ಸೂಚನೆಗಳನ್ನು ಇನ್ನು ಮುಂದೆ ಪಾಲಿಸುವುದಾಗಿ ನಿವೇದಿಸುತ್ತಾ 2018ರ ಜನವರಿ ಮಾಹೆಯಿಂದ ವಿದ್ಯಾರ್ಥಿನಿಲಯದಲ್ಲಿ ವಾಸಿಸುವ ವಿದ್ಯಾರ್ಥಿಗಳ ಸಹಿ ಇರುವ ಮಾಹೆವಾರು ಹಾಜರಾತಿ ಪಟ್ಟಿಯನ್ನು ಶಿಕ್ಷಕ ಸಲಹೆಗಾರರು ಧೃಢೀಕರಿಸಿ ಮೆಸ್ ಬಿಲ್ಲುಗಳೊಂದಿಗೆ ಲಗತ್ತಿಸಿ ಸಲ್ಲಿಸಲಾಗುತ್ತಿದೆ.<br><br>2017–18ನೇ ಸಾಲಿನಲ್ಲಿ ಸಾರ್ವತ್ರಿಕ ರಜಾ ದಿನಗಳಲ್ಲಿ ಒಂದು ದಿನ ರಜೆ ಇರುವುದರಿಂದ ವ್ಯಾಸಂಗದ ದೃಷ್ಟಿಯಿಂದ ವಿದ್ಯಾರ್ಥಿಗಳು ವಿದ್ಯಾರ್ಥಿನಿಲಯಗಳಲ್ಲಿಯೇ ವಾಸಿಸುತ್ತಿದ್ದು ಮೆಸ್‌ಗೆ ಹಾಜರಾಗಿರುವುದರಿಂದ ಪೂರ್ಣ ಮಾಹೆ ಮೆಸ್ ಬಿಲ್ಲು ಪಾವತಿ ಬಗ್ಗೆ ಕ್ರಮವಹಿಸಿರುವುದಾಗಿ ನಿವೇದಿಸುತ್ತಾ **ಆಕ್ಷೇಪಣೆಯ ಮೊತ್ತ ರೂ.37,88,019/–ಗಳನ್ನು ತೀರುವಳಿಗೊಳಿಸುವಂತೆ ಕೋರಿದೆ.** |

| | |
|---|---|
| ವಿದ್ಯಾರ್ಥಿಗಳ ಹಾಜರಾತಿಗಳನ್ನು ದೃಢೀಕರಿಸದೇ ಇರುವುದರಿಂದ ಈ ಕ್ರಮ ಸಂದೇಹಾಸ್ಪದವಾಗಿದ್ದು ವಿಶ್ವವಿದ್ಯಾನಿಲಯಕ್ಕೆ ಆರ್ಥಿಕ ನಷ್ಟ ಉಂಟಾಗಿರುತ್ತದೆ ಆದುದರಿಂದ ವರ್ಷಗಳಲ್ಲಿ ಬರುವ ರಾಷ್ಟ್ರೀಯ ಹಬ್ಬ ಹರಿದಿನಗಳು ಇತರೆ ಧಾರ್ಮಿಕ ಹಬ್ಬ ಹರಿದಿಗಳಿಗೆ ಹಾಗೂ ಸಾರ್ವತ್ರಿಕ ರಜಾ ದಿನಗಳಂದು ಹಾಜರಾಗಿರುವ ವಿದ್ಯಾರ್ಥಿಗಳಿಗೆ ಮಾತ್ರ ಮೆಸ್‌ಬಿಲ್‌ಗಳನ್ನು ಪಾವತಿಸಬೇಕಾಗಿದ್ದು ಈ ಕ್ರಮವನ್ನು ಅನುಸರಿಸಿರುವುದಿಲ್ಲ ಇದರಿಂದಾಗಿ ರಜಾ ದಿನಗಳಿಗೂ ಸೇರಿ ಗುತ್ತಿಗೆದಾರರಿಗೆ ಅಧಿಕ ಹಣಪಾವತಿಸಿದಂತಾಗಿದ್ದು ಈ ಬಗ್ಗೆ ಕ್ರಮಕೈಗೊಳ್ಳಲು ಸೂಚಿಸಿದೆ.<br><br>ವಿಶ್ವವಿದ್ಯಾನಿಲಯದ ಎಲ್ಲಾ ವಿದ್ಯಾರ್ಥಿನಿಲಯಗಳಲ್ಲಿ ವಿದ್ಯಾರ್ಥಿಗಳು ಭೋಜನಕ್ಕೆ ಹಾಜರಾಗುವ ಬಗ್ಗೆ ಕರ್ನಾಟಕ ಸರ್ಕಾರದ ಸಮಾಜ ಕಲ್ಯಾಣ ಇಲಾಖೆಯ ಆದೇಶ ಸಂಖ್ಯೆ:ಉನಿಸಕ/ಮಂ/ಸಿಬ್ಬಂದಿ/ಸಿಆರ್.2016–17 ದಿನಾಂಕ:17.02.2017ರ ಆದೇಶದನ್ವಯ ವಿದ್ಯಾರ್ಥಿಗಳ ಬಯೋಮೆಟ್ರಿಕ್ ಸಹಿ ಪದ್ಧತಿಯನ್ನು ಅಳವಡಿಸಿಕೊಂಡು ಮೆಸ್ ಬಿಲ್ಲುಗಳನ್ನು ಪಾವತಿ ಮಾಡಿದ್ದಲ್ಲಿ ವಿಶ್ವವಿದ್ಯಾನಿಲಯಕ್ಕೆ ಆರ್ಥಿಕ ಮಿತವ್ಯಯವನ್ನು ಕಾಪಾಡಿಕೊಳ್ಳಬಹುದಾಗಿದೆ ಮತ್ತು ವಿಶ್ವವಿದ್ಯಾನಿಲಯಕ್ಕೆ ಉಂಟಾಗುವ ಆರ್ಥಿಕ ಹೊರೆಯನ್ನು ತಡೆಯಬಹುದಾಗಿತ್ತು ಆದರೆ ಬಯೋಮೆಟ್ರಿಕ್ ಹಾಜರಾತಿ ಪದ್ಧತಿಯನ್ನು ಅಳವಡಿಸಿಕೊಳ್ಳದೆ ಇರುವುದನ್ನು ಲೆಕ್ಕತಪಾಸಣೆಯಲ್ಲಿ ಆಕ್ಷೇಪಿಸಲಾಗಿದೆ ಲೆಕ್ಕಪರಿಶೋಧನೆಗೆ ಇ–ಪ್ರಕ್ಯೂರ್‌ಮೆಂಟ್ ಟೆಂಡರ್ ಪ್ರಕ್ರಿಯೆ ಕಡತಗಳನ್ನು ಹಾಗೂ ಮೆಸ್ ಬಿಲ್ಲುಗಳೊಂದಿಗೆ ವಿದ್ಯಾರ್ಥಿಗಳ ಸಹಿಗಳಿರುವ ಹಾಜರಾತಿ ಪ್ರತಿಗಳನ್ನು ಶಿಕ್ಷಕ ಸಲಹೆಗಾರರು ದೃಢೀಕರಿಸಿ ಹಾಜರುಪಡಿಸಿರುವುದಿಲ್ಲ ಆದ್ದ ರಿಂದ ಸದರಿ ವಿದ್ಯಾರ್ಥಿನಿಲಯದಲ್ಲಿ ಮೆಸ್ ಬಿಲ್ಲುಗಳನ್ನು ಪಾವತಿಸಲಾಗಿರುವ ಮೊತ್ತ **ರೂ.37,88,019/–ಗಳನ್ನು** ಸೂಕ್ತ ದಾಖಲೆಗಳನ್ನು ಲೆಕ್ಕತಪಾಸಣೆಗೆ ಹಾಜರುಪಡಿಸುವವರೆಗೆ ಆಕ್ಷೇಪಣೆಯಲ್ಲಿಡಲಾಗಿದೆ ಮೆಸ್‌ಬಿಲ್ಲು ವಿವರಗಳನ್ನು **ಅನುಬಂಧ–72**ರಲ್ಲಿ ವಿವರಿಸಲಾಗಿದೆ. | |
| **ಸಿವಿಲ್ ವರ್ಕ್ಸ್ (Civil Works)**<br><br>**143. ಭದ್ರತಾ ಠೇವಣಿ ಸ್ವೀಕರಿಸದೆ ಸಿಂಡಿಕೇಟ್ ನಿರ್ಣಯಗಳನ್ನು ಕುಲಪತಿಯವರ ಮತ್ತು ಕುಲಸಚಿವರ ಹಾಗೂ ಸಹಾಯಕ ಕುಲಸಚಿವ (ಸಾಮಾನ್ಯ) ರವರ ಆದೇಶಗಳನ್ನು ಉಲ್ಲಂಘಿಸಿರುವುದು:– (ಆಡಳಿತ ವಿಭಾಗ)**<br>ವಿಶ್ವವಿದ್ಯಾನಿಲಯದಲ್ಲಿ ದಿನಾಂಕ:19.08.2015ರಂದು ನಡೆದ ಸಿಂಡಿಕೇಟ್‌ನ ಎಳನೇ ಸಾಮಾನ್ಯ ಸಭೆಯ ನಡಾವಳಿಗಳಲ್ಲಿ ವಿಷಯ ಸಂಖ್ಯೆ:2015/8.40ರಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ವಿವಿಧ ಸಭಾಂಗಣ ಮೈದಾನ ಹಾಗೂ ಇತರೇ ಸ್ಥಳಗಳ ನಿರ್ವಹಣಾ ಶುಲ್ಕ ಹಾಗೂ ಭದ್ರತಾ ಠೇವಣಿ ಶುಲ್ಕಗಳನ್ನು ಪರಿಷ್ಕರಿಸಿ ನಿಗದಿಪಡಿಸಿದ್ದು ಇದರನ್ವಯ ನಿಗದಿಗೊಳಿಸಿದ ನಿರ್ವಹಣಾ ಶುಲ್ಕ ಮತ್ತು ಭದ್ರತಾ ಠೇವಣಿ ಶುಲ್ಕಗಳನ್ನು ಮುಂಗಡವಾಗಿ ಸ್ವೀಕರಿಸಬೇಕಾಗಿರುತ್ತದೆ ಈ ನಡಾವಳಿಯನ್ನು | ಕಂಡಿಕೆಯ ಅನುಬಂಧ–73ರಲ್ಲಿ ಭದ್ರತಾ ಠೇವಣಿಯ ಒಟ್ಟು ಮೊತ್ತ ರೂ.18,56,000/–ಗಳಲ್ಲಿ ರೂ.4,86,000/–ಗಳನ್ನು ಮಾತ್ರ ಕೆಲವು ವ್ಯಕ್ತಿಗಳಿಂದ ಮತ್ತು ಸಂಸ್ಥೆಗಳಿಂದ ಸ್ವೀಕರಿಸಿದ್ದು ಉಳಿಕೆ ಮೊತ್ತ ರೂ.13,70,000/–ಗಳನ್ನು ಸ್ವೀಕರಿಸದೇ ವಿಶ್ವವಿದ್ಯಾನಿಲಯದ ಆದೇಶ ಉಲ್ಲಂಘನೆಯಾಗಿರುವ ಬಗ್ಗೆ ಪ್ರಸ್ತಾಪಿಸಲಾಗಿರುತ್ತದೆ. |

ಕುಲಸಚಿವರ ಕರಡು ಅನುಮೋದನೆ ಮೇರೆಗೆ ಸಹಾಯಕ ಕುಲಸಚಿವ (ಸಾಮಾನ್ಯ) ರವರು ತಮ್ಮ ಕಛೇರಿ ಆದೇಶ ಸಂಖ್ಯೆ:ಜಿಎಲ್1/726/2012–13/ದಿನಾಂಕ:29.08.2015ರಲ್ಲಿ ಆದೇಶಿಸಿದ್ದು ಪರಿಷ್ಕೃತ ಹಾಗೂ ನಿಗದಿಪಡಿಸಿದ ಶುಲ್ಕಗಳು ದಿನಾಂಕ:29.08.2015 ರಿಂದ ಜಾರಿಯಲ್ಲಿರುತ್ತದೆ.

ಈ ಸಂಬಂಧ 2017–18ನೇ ಸಾಲಿನ ರಶೀದಿ ಪುಸ್ತಕಗಳು ಹಾಗೂ ಪೂರಕ ಲೆಕ್ಕಪತ್ರ ದಾಖಲೆಗಳನ್ನು ಪರಿಶೋಧಿಸಲಾಗಿ ಕೆಲವು ಸಂಸ್ಥೆಗಳಿಂದ ಮತ್ತು ವ್ಯಕ್ತಿಗಳಿಂದ ನಿರ್ವಹಣಾ ಶುಲ್ಕಗಳನ್ನು ಮಾತ್ರ ಸ್ವೀಕರಿಸಿದ್ದು ಭದ್ರತಾ ಠೇವಣಿಯನ್ನು ಸ್ವೀಕರಿಸಿರುವುದಿಲ್ಲ

ಹಾಜರುಪಡಿಸಿದ ಲೆಕ್ಕಪತ್ರ ದಾಖಲೆಗಳನ್ವಯ 2017–18ನೇ ಸಾಲಿನಲ್ಲಿ (ಅನುಬಂಧ–73) ರಲ್ಲಿ ವಿವರಿಸಿರುವಂತೆ ಭದ್ರತಾ ಠೇವಣಿ ಒಟ್ಟು ರೂ.18,56,000/–ಗಳನ್ನು ಸ್ವೀಕರಿಸಬೇಕಾಗಿದ್ದು ಈ ಪೈಕಿ ರೂ.4,86,000/–ಗಳನ್ನು ಮಾತ್ರ ಸ್ವೀಕರಿಸಿರುವುದರಿಂದ ರೂ.13,70,000/–ಗಳ ಭದ್ರತಾ ಠೇವಣಿ ಸ್ವೀಕರಿಸಿರುವುದಿಲ್ಲ ಭದ್ರತಾ ಠೆವಣಿ ಸ್ವೀಕರಿಸದೇ ಸಿಂಡಿಕೇಟ್ ನಿರ್ಣಯಗಳನ್ನು ಕುಲಪತಿಯವರ ಕುಲಸಚಿವರ ಹಾಗೂ ಸಾಮಾನ್ಯ ಕುಲಸಚಿವ (ಸಾಮಾನ್ಯ) ರವರ ಆದೇಶಗಳನ್ನು ಉಲ್ಲಂಘಿಸಿರುವ ಕಾರಣ ಹಾಗೂ ಭದ್ರತಾ ಠೇವಣಿಯನ್ನು ಪಡೆಯದಿರುವುದರಿಂದ ಆ ಸಮಯದಲ್ಲಿ ವಿಶ್ವವಿದ್ಯಾನಿಲಯ ಆಸ್ತಿಗಳಿಗೆ ಏನಾದರೂ ಧಕ್ಕೆಯಾಗಿದ್ದರೇ/ನಷ್ಟವಾಗಿದ್ದರೆ ಸಂಬಂಧಿಸಿದ ಆಯೋಜಕರಿಂದ ಈ ಧಕ್ಕೆಯಿಂದಾಗಿರುವ ನಷ್ಟವನ್ನು ಭರ್ತಿಮಾಡಿಕೊಳ್ಳಲು ಸಾಧ್ಯವಾಗುತ್ತಿರಲಿಲ್ಲ ಆದ್ದರಿಂದ ಭದ್ರತಾ ಠೇವಣಿ ಸ್ವೀಕರಿಸದಿರುವ ಸಂಬಂಧಿಸಿದವರ ಮೇಲೆ ಸೂಕ್ತ ಆಡಳಿತಾತ್ಮಕ ಕ್ರಮ ಕೈಗೊಳ್ಳಲು ಸೂಚಿಸಿದೆ ಈ ಕುರಿತು ಅನುಪಾಲನಾ ವರದಿ ಸಲ್ಲಿಸಲು ತಿಳಿಸಿದೆ.

2017–18ನೇ ಸಾಲಿನಲ್ಲಿ ಕಾರ್ಯನಿರ್ವಹಿಸುತ್ತಿದ್ದ ವಿಷಯ ನಿರ್ವಾಹಕರು ಈ ರೀತಿ ಲೋಪ ಮಾಡಿರುವುದನ್ನು ಪರಿಗಣಿಸಿ ಸದರಿಯವರಿಗೆ ಸೂಕ್ತ ಎಚ್ಚರಿಕೆ ನೀಡಿ ಅವರ ಕಾರ್ಯ ಭಾರವನ್ನು ಬದಲಾಯಿಸಿ ಬೇರೆ ವಿಷಯ ನಿರ್ವಾಹಕರಿಗೆ ವಹಿಸಿಲಾಗಿದೆ ಹಾಗೂ ಮುಂದಿನ ಸಾಲುಗಳಲ್ಲಿ ಕಟ್ಟುನಿಟ್ಟಾಗಿ ವಿಶ್ವವಿದ್ಯಾನಿಲಯದ ಆದೇಶದನ್ವಯ ಭದ್ರತಾ ಠೇವಣಿಯನ್ನು ರಶೀದಿ ಮೂಲಕ ದಾಖಲಿಸಿ ಸಂಬಂಧಪಟ್ಟ ಖಾತೆಗೆ ಜಮಾ ಮಾಡಿ ಕಾರ್ಯಕ್ರಮ ಮುಗಿದ ನಂತರ ಅಯೋಜಕರಿಂದ ವಿಶ್ವವಿದ್ಯಾನಿಯದ ಆಸ್ತಿಗೆ ಯಾವುದೇ ರೀತಿಯ ಹಾನಿಯಾಗದೇ ಇರುವುದನ್ನು ಸಂಬಂಧಪಟ್ಟ ಅಧಿಕಾರಿಗಳಿಂದ ಧೃಢೀಕರಣ ಪಡೆದ ನಂತರ ಭದ್ರತಾ ಠೇವಣಿಯನ್ನು ಕಡತದ ಮೂಲಕ ಅನುಮೋದನೆ ಪಡೆದು ಅಯೋಜಕರಿಗೆ ಹಿಂದಿರುಗಿಸುವ ಕ್ರಮವಹಿಸುತ್ತಿರುವುದಾಗಿ ನಿವೇದಿಸಿದೆ.

**144. ಕಾಮಗಾರಿ ಬಿಲ್ಲುಗಳಲ್ಲಿ ಹೆಚ್ಚುವರಿ ಮೊತ್ತವನ್ನು ಪಾವತಿಸಿರುವ ಕುರಿತು :– (ಇಂಜಿನಿಯರಿಂಗ್ ವಿಭಾಗ)**

2017–18ನೇ ಸಾಲಿನ ಕಾಮಗಾರಿ ಬಿಲ್ಲುಗಳನ್ನು ಪರಿಶೀಲಿಸಲಾಗಿ ಷೆಡ್ಯೂಲ್ 'ಬಿ' ಮೊತ್ತಕ್ಕಿಂತ ಬಿಲ್ಲಿನ ಮೊತ್ತ ಹೆಚ್ಚವರಿಯಾಗಿ ಪಾವತಿಯಾಗಿರುತ್ತದೆ. ಹಾಗೂ ಅಳತೆ ಪುಸ್ತಕಗಳಲ್ಲಿ Quantity ಯಲ್ಲಿ ಹೆಚ್ಚವರಿ ಮೊತ್ತವನ್ನು ಹುತ್ತಿಗೆದಾರರಿಗೆ ಪಾವತಿಸಿರುವುದು ಕಂಡುಬಂದಿರುತ್ತದೆ ಇದಕ್ಕೆ ಸಂಬಂಧಿಸಿದಂತೆ ವಿಚಾರನಾ ಪತ್ರ ಸಂಖ್ಯೆ:27/2019–20 ದಿನಾಂಕ:31.05.2019ರಲ್ಲಿ ವಿವರವನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸಬೇಕೆಂದು ಕೋರಲಾಗಿತ್ತು ಯಾವುದೇ ಉತ್ತರ ಹಾಗೂ ಹೆಚ್ಚವರಿ ಪರಿಣಾಮಗಳ ಪಾವತಿಗೆ ಸಕ್ಷಮ ಪ್ರಾಧಿಕಾರದ ಅನುಮೋದನೆ ಪಡೆದ ಆದೇಶಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸದೇ ಇರುವುದರಿಂದ ಹೆಚ್ಚವರಿ ಪಾವತಿ ಮೊತ್ತ ರೂ.10,383/–ಗಳನ್ನು ಗುತ್ತಿಗೆದಾರರಿಗೆ ವಸೂಲಾತಿಗೆ ಸೂಚಿಸಲಾಗಿದೆ ವಿವರವನ್ನು ಅನುಬಂಧ–74ರಲ್ಲಿ ಲಗತ್ತಿಸಿದೆ.

2017–18ನೇ ಸಾಲಿನ ಲೆಕ್ಕ ಪರಿಶೋಧನೆಯಲ್ಲಿ ಗಮನಿಸಿ ಕಂಡಿಕೆ: 146ರಲ್ಲಿ ವಸೂಲಾತಿಗೆ ಸೂಚಿಸಿರುವ ಮೇರೆಗೆ ಹೆಚ್ಚುವರಿ ಪಾವತಿ ಮೊತ್ತ ರೂ.10,383/–ಗಳನ್ನು **ಮೆ॥ ಬಿ.ಎಸ್.ಆರ್ ಇನ್‌ಫ್ರಾಟೆಕ್ ಇಂಡಿಯಾ ಲಿ, ಬೆಂಗಳೂರು** ಇವರ ಕಾಮಗಾರಿ ಬಿಲ್ಲಿನಲ್ಲಿ ಕಟಾಯಿಸಿ ಸಂಬಂಧಪಟ್ಟ ಖಾತೆಗೆ ಜಮ ಮಾಡಲಾಗಿದೆ ವಿವರ ಈ ಕೆಳಕಂಡಂತಿರುತ್ತದೆ.

| ಕ್ರ. ಸಂ. | ಬಿ.ಆರ್.ಸಂಖ್ಯೆ ದಿನಾಂಕ | ಚೆಕ್ ಸಂಖ್ಯೆ ದಿನಾಂಕ | ಮೊಬಲ ಗು | ಷರಾ |
|---|---|---|---|---|
| 1 | 170/26.06.2018 | 746405/31.3.21 | 10,383 | ವಸೂಲಿಸಿದ ಬಿಲ್ಲಿನ |

| | | | | |
|---|---|---|---|---|
| | | | | ವಿವರ ಮತ್ತು ಜಮಾ ಮಾಡಲಾದ ವಿವರಗಳನ್ನು ಇದರೊಂದಿಗೆ ಲಗತ್ತಿಸಿದೆ. |

ಹಾಗೂ ಈ ನಿಟ್ಟಿನಲ್ಲಿ ಸದರಿ ವಸೂಲಾತಿ ಮೊತ್ತ ರೂ.10,383/–ಗಳ ವಸೂಲಾತಿಕಂಡಿಕೆಯನ್ನು ಕೈ ಬಿಡುವಂತೆ ನಿವೇದಿಸಿದೆ.

**<u>145. ಅಳತೆ ಪುಸ್ತಕದಲಿ ದಾಖಲಿಸಿದ ಪರಿಮಾಣಕ್ಕಿಂತ ಹೆಚ್ಚವರಿ ಪರಿಮಾಣಕ್ಕೆ ಬಿಲ್ಲುನ್ನು ಪಾವತಿಸಿರುವ ಬಗ್ಗೆ:– (ಇಂಜಿನಿಯರಿಂಗ್ ವಿಭಾಗ)</u>**

ಯುವರಾಜ ಕಾಲೇಜು, ಮೈಸೂರು ಇಲ್ಲಿ ಸಿಬ್ಬಂದಿ ವರ್ಗದವರಿಗೆ ಕೊಠಡಿ ನಿರ್ಮಾಣ ಕಾಮಗಾರಿಯ 6ನೇ ಮತ್ತು ಅಂತಿಮ ಬಿಲ್ಲುನ್ನು ರೂ.2,11,586/– ಕ್ಕೆ ಧನಾದೇಶ ಸಂಖ್ಯೆ:142168/31.03.2018ರಲ್ಲಿ ಪಾವತಿಸಿದೆ ಸದರಿ ಬಿಲ್ಲಿನ ಐಟಂ ಸಂ.11 ಮತ್ತು 14ರಲ್ಲಿ ಅಳತೆ ಪುಸ್ತಕದಲ್ಲಿ ದಾಖಲಿಸಿದ ಪರಿಮಾಣಕ್ಕಿಂತ ಹೆಚ್ಚುವರಿ ಪರಿಮಾಣವನ್ನು ನೀಡಿ ಹೆಚ್ಚುವರಿಯಾಗಿ ರೂ.11,973/–ಗಳನ್ನು ಪಾವತಿಸಲಾಗಿರುತ್ತದೆ ಹೆಚ್ಚುವರಿ ಮೊಬಲಗನ್ನು ಗುತ್ತಿಗೆದಾರರಿಂದ ವಸೂಲಿಸಿ ಲೆಕ್ಕಪರಿಶೋಧನೆಗೆ ಮಾಹಿತಿ ನೀಡಲು ವಿಚಾರಣೆ ಸಂಖ್ಯೆ:19/15.05.2019ರಲ್ಲಿ ಕೋರಲಾಗಿತ್ತು ಆದರೆ ಯಾವುದೇ ಮಾಹಿತಿ ನೀಡದ ಕಾರಣ ರೂ.11,973/–ಗಳನ್ನು ಸಂಬಂಧಿಸಿದ ಗುತ್ತಿಗೆದಾರರಿಂದ ವಸೂಲಿಸಲು ಸೂಚಿಸಿದೆ ಅಳತೆ ಪುಸ್ತಕದಲ್ಲಿ ದಾಖಲಿಸಿದ ಪರಿಮಾಣ ಹಾಗೂ ಗುತ್ತಿಗೆದಾರರಿಗೆ ಪಾವತಿಸಿದ ಪರಿಮಾಣದ ವಿವರಗಳನ್ನು ಅನುಬಂಧ–75ರಲ್ಲಿ ನೀಡಲಾಗಿದೆ.

ಯುವರಾಜ ಕಾಲೇಜು, ಮೈಸೂರು ಈ ಕಾಮಗಾರಿಗೆ ಸಂಬಂಧಿಸಿದ ಗುತ್ತಿಗೆದಾರರ 6ನೇ ಅಚಿತಿಮ ಬಿಲ್ಲಿನ ಮೊತ್ತವನ್ನು ಪಾವತಿಸುವಾಗ ಅಳತೆ ಪುಸ್ತಕದಲ್ಲಿ ದಾಖಲಿಸಲಾದ ಪರಿಮಾಣಕ್ಕಿಂತ ಅಧಿಕ ಪರಿಮಾಣವನ್ನು ಕೈತಪ್ಪಿನಿಂದ ಪಾವತಿಸಲಾಗಿದ್ದು. ಸದರಿ ತಪ್ಪನ್ನು 2017–18ನೇ ಸಾಲಿನ ಲೆಕ್ಕ ಪರಿಶೋಧನಾ ವರದಿಯಲ್ಲಿ ಗಮನಿಸಿ ಕಂಡಿಕೆ: 147 ರಲ್ಲಿ ವಸೂಲಾತಿಗೆ ಸೂಚಿಸಿರುವಂತೆ ರೂ.11,973/–ಗಳನ್ನು **ಮೆ॥ ಬಿ.ಎಸ್.ಆರ್ ಇನ್‌ಫ್ರಾಟೆಕ್ ಇಂಡಿಯಾ ಲಿ, ಬೆಂಗಳೂರು** ಇವರ ಕಾಮಗಾರಿ ಬಿಲ್ಲಿನಲ್ಲಿ ಕಟಾಯಿಸಿ ಸಂಬಂಧಪಟ್ಟ ಖಾತೆಗೆ ಜಮ ಮಾಡಲಾಗಿದೆ ವಿವರ ಈ ಕೆಳಕಂಡಂತಿರುತ್ತದೆ.

| ಕ್ರ. ಸಂ. | ಬಿ.ಆರ್.ಸಂಖ್ಯೆ ದಿನಾಂಕ | ಚೆಕ್ ಸಂಖ್ಯೆ ದಿನಾಂಕ | ಮೊಬಲಗು | ಷರಾ |
|---|---|---|---|---|
| 1 | 170/26.06.2018 | 746405/31.3.21 | 11,973 | ರೂ.11,973/–ಗಳನ್ನು ಕಟಾಯಿಸಿದ ಬಿಲ್ಲಿನ ವಿವರ ಮತ್ತು ಜಮಾ ವಿವರಗಳನ್ನು ಇದರೊಂದಿಗೆ ಲಗತ್ತಿಸಿದೆ. |

ಈ ನಿಟ್ಟಿನಲ್ಲಿ ಆಕ್ಷೇಪಿಸಲಾದ ವಸೂಲಾತಿ ಮೊತ್ತ ರೂ. 11,973/–ಗಳನ್ನು ವಸೂಲಿಸಿ ಸಂಬಂಧಪಟ್ಟ ಖಾತೆಗೆ ಜಮ ಮಾಡಿರುವುದರಿಂದ ಸದರಿ ವಸೂಲಾತಿ ಕಂಡಿಕೆಯನ್ನು ಕೈ ಬಿಡುವಂತೆ ನಿವೇದಿಸಲಾಗಿದೆ.

**146. ಟೆಂಡರ್ ಕರಾರಿನಲ್ಲಿರುವ ದರಕ್ಕಿಂತ ಹೆಚ್ಚುವರಿ ದರದಲ್ಲಿ ಪಾವತಿಸಿರುವ ಬಗ್ಗೆ:– (ಇಂಜಿನಿಯರಿಂಗ್ ವಿಭಾಗ)**

ಜಯಚಾಮರಾಜೇಂದ್ರ ಕಾಲೇಜ್ ಆಫ್ ಇಂಜಿನಿಯರಿಂಗ್ ಎದುರು ಕ್ಯಾಂಟೀನ್ ಕಾಂಪ್ಲೆಕ್ಸ್ ನಿರ್ಮಾಣ ಕಾಮಗಾರಿಯ ಎರಡನೇ ಮತ್ತು ಭಾಗಶಃ ಬಿಲ್ಲನ್ನು ಮೆ॥ ಬಿ,ಎಸ್,ಆರ್ ಇನ್‌ಫ್ರಾಟೆಕ್ ಇಂಡಿಯಾ ಲಿ, ಬೆಂಗಳೂರು ಇವರಿಗೆ ರೂ.32,36,592/–ಕ್ಕೆ ದಿನಾಂಕ:31.03.2018ರಲ್ಲಿ ಆರ್‌ಟಿಜಿಎಸ್ ಮೂಲಕ ಪಾವತಿಸಿದೆ Transaction ID C 031837785499 ರಲ್ಲಿ ಸದರಿ ಬಿಲ್ಲಿನ ಟೆಂಡರ್ ಐಟಂ ನಂ,45 ರಲ್ಲಿ ಅಳತೆ ಪುಸ್ತಕದಲ್ಲಿ ದಾಖಲಿಸಿದ ಪರಿಮಾಣ 493.20 ಘ.ಮೀ ಗೆ ಟೆಂಡರ್ ದರ ರೂ.55.00 ರಂತೆ ರೂ.27,126/ಗಳನ್ನು ಪಾವತಿಸಬೇಕಾಗಿತ್ತು ಆದರೆ 55.00 ಘ.ಮೀ ಗೆ ರೂ.1,220.85 ರಂತೆ ರೂ.67,147.25/– ಪಾವತಿಸಿದ್ದು ಹೆಚ್ಚುವರಿಯಾಗಿ ರೂ.40,021/–ಗಳನ್ನು ಪಾವತಿಸಲಾಗಿದೆ ಹೆಚ್ಚುವರಿ ಪಾವತಿಸಿದ ಬಗ್ಗೆ ಲೆಕ್ಕ ಪರಿಶೋಧನೆಗೆ ಮಾಹಿತಿ ಒದಗಿಸುವಂತೆ ವಿಚಾರಣೆ ಸಂಖ್ಯೆ:26/30.05.2019ರಲ್ಲಿ ಕೋರಲಾಗಿತ್ತು ಆದರೆ ಮಾಹಿತಿ ಒದಗಿಸದ ಕಾರಣ ಹೆಚ್ಚುವರಿಯಾಗಿ ಪಾವತಿಸಿರುವ ಮೊಬಲಗು ರೂ.40,021/–ಗಳನ್ನು ಮೆ॥ ಬಿ,ಎಸ್,ಆರ್ ಇನ್‌ಫ್ರಾಟೆಕ್ ಇಂಡಿಯಾ ಲಿ, ಗುತ್ತಿಗೆದಾರರಿಂದ ವಸೂಲಿಸಿ ವಿಶ್ವವಿದ್ಯಾನಿಲಯ ಕಾತೆಗೆ ಜಮೆ ಮಾಡಲು ಸೂಚಿಸಿದೆ.

| ಕ್ರ,ಸಂ | ವಿವರ | ಟೆಂಡರ್ ಷೆಡ್ಯೂಲ್ 'ಬಿ' ಐಟಂ ನಂ. ಪುಟ ಸಂಖ್ಯೆ | ಅಳತೆ ಪುಸ್ತಕ ಸಂಖ್ಯೆ ಮತ್ತು ಪುಟ ಸಂಖ್ಯೆ | ಅಳತೆ ಪುಸ್ತಕದಲ್ಲಿ ದಾಖಲಿಸಿದ ಪರಿಮಾಣ (ಘ,ಮೀ) | ಟೆಂಡರ್ ದರ | ಹೆಚ್ಚುವರಿ ಮೊಬಲಗು (ರೂ.ಗಳಲ್ಲಿ) |
|---|---|---|---|---|---|---|
| 1 | ಟೆಂಡರ್‌ನಂತೆ ಪಾವತಿಸಬೇಕಾಗಿದ್ದ ಮೊಬಲಗು | 45/ಪಿ–10 | ಇ.ಎಂ.ಬಿ ನಂ.2/ಪಿ–9 | 493.20 | 55.00 | 27,126 |
| 2 | ಗುತ್ತಿಗೆದಾರರಿಗೆ ಬಿಲ್ಲಿನಲ್ಲಿ ವಾಸ್ತವವಾಗಿ ಪಾವತಿಸಿರುವುದು | – | – | 1220.85 | 55.00 | 67,147 |
| | | | | | **ಹೆಚ್ಚುವರಿ** | **40,021** |

2017–18ನೇ ಸಾಲಿನ ಲೆಕ್ಕ ಪರಿಶೋಧನಾ ವರದಿಯಲ್ಲಿ ಗಮನಿಸಿ ಕಂಡಿಕೆ ಸಂಖ್ಯೆ:148ರಲ್ಲಿ ರೂ.40,021/–ಗಳನ್ನು ಹೆಚ್ಚುವರಿ ಪಾವತಿಯ ವಸೂಲಾತಿಗೆ ಸೂಚಿಸಿರುವ ಮೇರೆಗೆ **ಮೆ॥ ಬಿ.ಎಸ್.ಆರ್ ಇನ್‌ಫ್ರಾಟೆಕ್ ಇಂಡಿಯಾ ಲಿ, ಬೆಂಗಳೂರು** ಇವರ ಬಿಲ್ಲಿನಲ್ಲಿ ಸದರಿ ಮೊತ್ತ ರೂ.40,021/–ಗಳನ್ನು ಕಟಾಯಿಸಿ ಸಂಬಂಧಪಟ್ಟ ಖಾತೆಗೆ ಜಮ ಮಾಡಲಾಗಿದೆ ವಿವರ ಈ ಕೆಳಕಂಡಂತಿರುತ್ತದೆ. ಹಾಗೂ ಈ ಸಂಬಂಧ ವಸೂಲಾತಿಗೆ ಸೂಚಿಸಿರುವ ಮೊತ್ತ ರೂ.40,021/–ಗಳ ವಸೂಲಾತಿ ಕಂಡಿಕೆಯನ್ನು ಕೈ ಬಿಡುವಂತೆ ನಿವೇದಿಸಲಾಗಿದೆ.

| ಕ್ರ. ಸಂ. | ಬಿ.ಆರ್.ಸಂಖ್ಯೆ ದಿನಾಂಕ | ಚೆಕ್ ಸಂಖ್ಯೆ ದಿನಾಂಕ | ಮೊಬಲಗು | ಷರಾ |
|---|---|---|---|---|
| 1 | 170/26.06.2018 | 746405/31.3.21 | 40,021 | ರೂ.40,021/–ಗಳನ್ನು ಕಟಾಯಿಸಿದ ಬಿಲ್ಲಿನ ವಿವರ ಮತ್ತು ಜಮಾ ವಿವರಗಳನ್ನು ಇದರೊಂದಿಗೆ ಲಗತ್ತಿಸಿದೆ. |

**147. ಅನುಮೋದಿತ ದರಗಳಿಗಿಂತ ಹೆಚ್ಚಿನ ದರದಲ್ಲಿ ಪಾವತಿಸಿರುವ ಬಗ್ಗೆ:– (ಇಂಜಿನಿಯರಿಂಗ್ ವಿಭಾಗ)**

ಮೈಸೂರು ವಿಶ್ವವಿದ್ಯಾನಿಲಯದ ಮಾನಸ ಗಂಗೋತ್ರಿ ಆವರಣದಲ್ಲಿ ಮೌಲ್ಯ ಭವನ ನಿರ್ಮಾಣ ಕಾಮಗಾರಿಯ ಅಂದಾಜು ಮೊಬಲಗು ರೂ.2300.00 ಲಕ್ಷಕ್ಕೆ ಮಂಜೂರಾಗಿರುತ್ತದೆ. ಈ ಕಾಮಗಾರಿಯನ್ನು ಟೆಂಡರ್ ಆಧಾರದ ಮೇಲೆ ಮೆ॥ಬಿ.ಎಸ್.ಆರ್ ಇನ್‌ಫ್ರಾಟೆಕ್ ಇಂಡಿಯಾ ಲಿ, ಬೆಂಗಳೂರು ಇವರಿಗೆ ವಹಿಸಿಕೊಡಲಗಿದೆ ಟೆಂಡರ್ ಮೊಬಲಗು ರೂ.2747.47 ಲಕ್ಷಗಳಾಗಿರುತ್ತದೆ ಸದರಿ ಕಾಮಗಾರಿಯ 12ನೇ ಹಾಗೂ ಅಂತಿಮ ಬಿಲ್ಲನ್ನು ತೂ.25,06,455/–ಕ್ಕೆ ಚೆಕ್ ಸಂ:142168/31.03.2018ರಲ್ಲಿ ಪಾವತಿಸಲಾಗಿದೆ ಅಂತಿಮ ಬಿಲ್ಲಿನಂತೆ ಈ ಕಾಮಗಾರಿಗೆ ಒಟ್ಟಾರೆಯಾಗಿ ರೂ.3073.08 ಲಕ್ಷ ಪಾವತಿಯಾಗಿರುವುದು ಓಚರ್‌ಗಳನ್ನು ಪರಿಶೀಲಿಸಿದಾಗ ಕಂಡುಬಂದಿರುತ್ತದೆ.

(ಅ) ಲೆಕ್ಕ ಪರಿಶೋಧನೆಗೆ ಹಾಜರುಪಡಿಸಿದ 'ಇ' ಎಂ,ಬಿ ಪಾವತಿಸಿದ ಓಚರ್ ಟೆಂಡರ್ ಷೆಡಲ್ 'ಬಿ' ಮತ್ತು ವರ್ಕ್ ಸ್ಲಿಪ್‌ಗಳನ್ನು ಪರಿಶೀಲಿಸಲಾಗಿ ಬಿಲ್ಲಿನಲ್ಲಿ ಅನುಮೋದಿತ ದರ ಮತ್ತು ಪರಿಮಾಣಗಳಿಗಿಂತ ಹೆಚ್ಚುವರಿಯಾಗಿ ಪಾವತಿಸಲಾಗಿರುವುದು ಕಂಡುಬಂದಿದೆ ವರ್ಕ್‌ಸ್ಲಿಪ್‌ನಲ್ಲಿ ಅನುಮೋದಿತ ದರಗಳಂತೆ ಒಟ್ಟು 4 ಐಟಂಗಳಿಗೆ ರೂ.17,84,421/–ಗಳನ್ನು ಪಾವಿತಿಸಬೇಕಾಗಿತ್ತು ಆದರೆ ಮಂಜೂರಾತಿ ದರಕ್ಕಿಂತ ಹೆಚ್ಚಿನ ದರ ನೀಡಿ ರೂ.51,90,013/ ಗಳನ್ನು ಪಾವತಿಸಿದ್ದು ರೂ.4,05,589/– ಹೆಚ್ಚುವರಿಯಾಗಿರುತ್ತದೆ ಈ ಹೆಚ್ಚುವರಿ ಪಾವತಿಗೆ ವಿವರಣೆ ನೀಡುವಂತೆ ವಿಚಾರಣಾ ಪತ್ರ ಸಂಖ್ಯೆ:39/07.06.2019ರಲ್ಲಿ ಕಾರ್ಯಪಾಲಕ ಇಂಜಿನಿಯರ್‌ರವರನ್ನು ಕೋರಲಾಗಿತ್ತು ವಿವರಣೆ ನೀಡದೆ ಇರುವುದರಿಂದ ರೂ.4,05,589/–ಗಳನ್ನು ಗುತ್ತಿಗೆದಾರರಿಂದ ವಸೂಲಿಸಿ ಮೂಲಭೂತ ಸೌಕರ್ಯ ಅಭಿವೃದ್ಧಿ ಖಾತೆಗೆ ಜಮೆ ಮಾಡಲು ಸೂಚಿಸಿದೆ ಹೆಚ್ಚುವರಿ ವಿವರಗಳನ್ನು ಅನುಬಂಧ–76ರಲ್ಲಿ ಲಗತ್ತಿಸಿದೆ.

(ಆ) ಸದರಿ ಕಾಮಗಾರಿಯ ವರ್ಕ್‌ಸ್ಲಿಪ್‌ನಲ್ಲಿ ಅನುಮೊದಿಸಲಾದ ಪರಿಮಾಣ ಮತ್ತು ಮೊಬಲಗಿಗಿಂರ ಒಟ್ಟು 25 ಟಂಗಳಿಗೆ ರೂ.3,43,83,050/– ಪಾವತಿಸಬೇಕಾಗಿತ್ತು ಆದರೆ ಹೆಚ್ಚುವರಿಯಾಗಿರುತ್ತದೆ ಕಾಮಗಾರಿ ನಿರ್ವಹಿಸಿ ರೂ.3,73,13,151/– ಗಳನ್ನು ಪಾವತಿಯಾಗಿದ್ದು ರೂ.29,30,101/– ಹೆಚ್ಚುವರಿಯಾಗಿರುತ್ತದೆ. ಈ ಹೆಚ್ಚುವರಿ ಪಾವತಿಗೆ ವಿವರಣೆ ನೀಡುವಂತೆ ವಿಚಾರಣ ಪತ್ರ ಸಂಖ್ಯೆ:39/07.06.2019 ರಲ್ಲಿ ಕಾರ್ಯಪಾಲಕ ಇಂಜಿನಿಯರ್‌ರವನ್ನು ಕೋರಲಾಗಿತ್ತು ಆದರೆ ವಿವರಣೆ ನೀಡದಿರುವುದರಿಂದ ಹೆಚ್ಚುವರಿ ಪರಿಮಾಣಕ್ಕೆ ಅನುಮೋದನೆ ಪಡೆಯುವವರೆಗೆ ರೂ.29,30,101/–ನ್ನು ಆಕ್ಷೇಪಣೆಯಲ್ಲಿಡಲಾಗಿದೆ ವಿವರಗಳನ್ನು ಅನುಬಂಧ–77

ಮೇ॥ ಬಿ.ಎಸ್.ಆರ್. ಇನ್‌ಫ್ರಾಟೆಕ್, ಬೆಂಗಳೂರು ಇವರ ಕಾಮಗಾರಿ ಬಿಲ್ಲಿನಲ್ಲಿ ರೂ.4,05,589/–ಗಳನ್ನು ಹೆಚ್ಚುವರಿಯಾಗಿ ಪಾವತಿಮಾಡಲಾಗಿದ್ದು. ಈ ಹೆಚ್ಚುವರಿ ಮೊತ್ತವನ್ನು ಸಂಬಂಧಪಟ್ಟ ಗುತ್ತಿಗೆದಾರರಿಂದ ವಸೂಲಿಸಿ/ಕಟಾಯಿಸಿ ಸಂಬಂಧಪಟ್ಟ ಕಾತೆಗೆ ಜಮೆ ಮಾಡುವಂತೆ ಕಂಡಿಕೆ ಸಂಖ್ಯೆ: 149ರಲ್ಲಿ ಸೂಚಿಸಿರುವ ಮೇರೆಗೆ ಸದರಿ ಮೊತ್ತ ರೂ.4,05,589/–ಗಳನ್ನು ಮೇ॥ ಬಿ.ಎಸ್.ಆರ್. ಇನ್‌ಫ್ರಾಟೆಕ್, ಬೆಂಗಳೂರು ಇವರ ಬಿಲ್ಲ್‌ನ ಬಿ.ಆರ.ಸಂಖ್ಯೆ:170, ದಿನಾಂಕ 26.06.2018. ಚೆಕ್ ಸಂಖ್ಯೆ:746405, ದಿನಾಂಕ 31.03.2021ರಲ್ಲಿ ಕಟಾಯಿಸಿ ಸಂಬಂಧಪಟ್ಟ ಖಾತೆಗೆ ಜಮೆ ಮಾಡಲಾಗಿದೆ ಹಾಗೂ ಇದರ ಮಾಹಿತಿಯನ್ನು ಇದರೊಂದಿಗೆ ಲಗತ್ತಿಸುತ್ತಾ, ಸದರಿ ವಸೂಲಾತಿ ಮೊತ್ತ ರೂ.4,05,589/– ಗಳನ್ನು ತಿರುವಳಿಗೊಳಿಸುವಂತೆ ನಿವೇದಿಸಲಾಗಿದೆ.

ಮುಂದುವರೆದು ಸದರಿ ಕಂಡಿಕೆಯಲ್ಲಿ ಹೆಚ್ಚುವರಿ ಪರಿಮಾಣದ ಮೊತ್ತ ರೂ.2930101/– ಹಾಗೂ ರೂ.33,40,280/–ಗಳನ್ನು ಒಟ್ಟು ಮೊತ್ತ ರೂ.62,70,381/–ಗಳ ಹೆಚ್ಚುವರಿ ಪರಿಮಾಣದ ಮೊತ್ತಕ್ಕೆ ಸಂಬಂಧಪಟ್ಟವರಿಂದ ಅನುಮೋಧನೆ ಪಡೆಯಲಾಗಿದ್ದು. ಸದರಿ ವಿವರವನ್ನು ಇದರೊಂದಿಗೆ ಲಗತ್ತಿಸಲಾಗಿದೆ. ಈ ನಿಟ್ಟಿನಲ್ಲಿ ಸದರಿ ಆಕ್ಷೇಪಿತ ಮೊತ್ತ ರೂ.29,30,101/– ಮತ್ತು ರೂ.33,40,280/–ಗಳ ಒಟ್ಟು ಮೊತ್ತ ರೂ.62,70,381/–ಗಳ ಆಕ್ಷೇಪಣೆಯ ಕಂಡಿಕೆಯನ್ನು ಕೈಬಿಡುವಂತೆ ನಿವೇದಿಸಲಾಗಿದೆ.

ರಲ್ಲಿ ಲಗತ್ತಿಸಿದೆ.

(ಇ) ಈ ಕಾಮಗಾರಿಯನ್ನು ನಿರ್ವಹಿಸುವಾಗ ಕೆಲವು ಐಟಂಗಳಲ್ಲಿ ಟೆಂಡರ್ ಪರಿಮಾಣದ ಶೇ 125% ಕ್ಕಿಂತ ಹೆಚ್ಚುವರಿ ಪರಿಮಾಣ ನಿರ್ವಹಿಸಿರುವುದು ಕಂಡುಬಂದಿದೆ ಈ ಪರಿಮಾಣಕ್ಕೆ ಟೆಂಡರ್ ಕ್ಲಾಸ್ 35.2 ರಂತೆ ದರ ವಿಶ್ಲೇಷಣೆ ಮಾಡಿ ಸಕ್ಷಮ ಅಧಿಕಾರಿಗಳಿಂದ ಅನುಮೋದನೆ ಪಡೆದು ನಂತರ ವರ್ಕ್‌ಸ್ಲಿಪ್‌ನಲ್ಲಿ ಅಳವಡಿಸಿಕೊಳ್ಳಬೇಕಾಗಿತ್ತು ದರ ವಿಶ್ಲೇಷಣ ಪಟ್ಟಿಗೆ ಅನುಮೋದನೆ ಪಡೆದ ಮಾಹಿತಿಯನ್ನು ಲೆಕ್ಕ ಪರಿಶೋಧನೆಗೆ ಹಾಜರುಪಡಿಸುವಂತೆ ಕೋರಿ ವಿಚಾರಣಾ ಪತ್ರ ಸಂಖ್ಯೆ:39/07.06.2019 ರಲ್ಲಿ ಕಾರ್ಯಪಾಲಕ ಇಂಜಿನಿಯರ್‌ರವರನ್ನು ಕೋರಲಾಗಿತ್ತು ಆದರೆ ವಿವರಣೆ ನೀಡಿರುವುದಿಲ್ಲವಾದ್ದರಿಂದ ವರ್ಕ್‌ಸ್ಲಿಪ್‌ನಲ್ಲಿ ಅನುಮೊದಿಸಿರು ದರಗಳನ್ನು ಲೆಕ್ಕಪರಿಶೋಧನೆಯಲಲಿ ಒಪ್ಪಲು ಬರುವುದಿಲ್ಲ ದರ ವಿಶ್ಲೇಷಣೆಗೆ ಅನುಮೋದನೆ ಪಡೆದು ಲೆಕ್ಕ ಪರಿಶೋಧನೆಗೆ ಹಾಜರುಪಡಿಸುವವರೆಗೆ ಟೆಂಡರ್ ರದಗಳಿಗಿಂತ ಹೆಚ್ಚಿನ ದರದಲ್ಲಿ ಪಾವತಿಸಿರುವ 10ಐಟಂಗಳ ಮೊತ್ತ ರೂ.33,40,280/–ಗಳನ್ನು ವಿವರಗಳನ್ನು ಅನುಬಂಧ–78ರಲ್ಲಿ ಲಗತ್ತಿಸಿದೆ.

**ಆಕ್ಷೇಪಣೆ ಮೊತ್ತ ರೂ.29,30,101+33,40,280=62,70,381/–**

---

**<u>148. ಕಾನಗಾರಿ ಬಿಲ್ಲುಗಳಲ್ಲಿ ರಾಜಧನ ಕಟಾಯಿಸದೆ/ಕಡಿಮೆ ಕಟಾಯಿಸಿರುವುದು :–(ಇಂಜಿನಿಯರಿಂಗ್ ವಿಭಾಗ)</u>**

2017–18ನೇ ಸಾಲಿನಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಇಂಜಿನಿಯರಿಂಗ್ ವಿಭಾಗದಿಂದ ನಿರ್ವಹಿಸಲಾದ ಕಮಗಾರಿಗಳಲ್ಲಿ ಬಳಸಲಾದ ಉಪಖನಿಜಗಳಿಗೆ ನಿಗದಿತ ದರದಲ್ಲಿ ರಾಜಧನವನ್ನು ಕಟಾಯಿಸದೇ ಅಥವಾ ಕಡಿಮೆ ಕಟಾಯಿಸಿ ಕೆಲವು ಬಿಲ್ಲುಗಳನ್ನು ಗುತ್ತಿಗೆದಾರರಿಗೆ ಪಾವತಿಸಿರುವುದನ್ನು ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾಗಿತ್ತು ಈ ಸಂಬಂಧ ವ್ಯತ್ಯಾಸದ ರಾಜಧನ ಮೊತ್ತವನ್ನು ಸಂಬಂಧಿಸಿದವರಿಂದ ವಸೂಲಿಸಿ ಗಣಿ ಮತ್ತು ಭೂ ವಿಜ್ಞಾನ ಇಲಾಖೆಯ ಸಂಬಂಧಿತ ಲೆಕ್ಕ ಶೀರ್ಷಿಕೆಗೆ ಜಮಾ ಮಾಡಿ ವಿವರಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸುವಂತೆ ವಿಚಾರಣಾ ಪತ್ರ ಸಂಖ್ಯೆ:30/2019–20 ದಿನಾಂಕ:01.06.2019ರಲ್ಲಿ ಕೋರಲಾಗಿತ್ತು.

ಆದರೆ ಈ ಸಂಬಂಧ ಯಾವುದೇ ದಾಖಲಾತಿಗಳನ್ನು ಹಾಜರುಪಡಿಸದೆ ಇರುವುದರಿಂದ ರಾಜದನ ವ್ಯತ್ಯಾಸದ ಒಟ್ಟು ಬಾಬ್ತು ರೂ.10,498/–ಗಳನ್ನು ಸಂಬಂಧಿಸಿದ ಗುತ್ತಿಗೆದಾರರಿಂದ ವಸೂಲಿಸಿ ಸರ್ಕಾರದ ಖಾತೆಗೆ ಜಮಾ ಮಾಡಿ ವಿವರಗಳನ್ನು ಹಾಜರುಪಡಿಸುವಂತೆ ಹಾಗೂ ಕಡಿಮೆ ವಸೂಲು ಮಾಡಲು ಕಾರಣರಾದವರ ಮೇಲೆ ಆಡಳಿತಾತ್ಮಕ ಕ್ರಮ ಕಯಗೊಳ್ಳವಂತೆ ಸೂಚಿಸಿದೆ ವಿವರಗಳನ್ನು ಅನುಬಂಧ–79ರಲ್ಲಿ ನೀಡಿದೆ.

2017–18ನೇ ಸಾಲಿನ ಲೆಕ್ಕ ಪರಿಶೋಧನಾ ವರದಿಯಲ್ಲಿ ಗಮನಿಸಿ ಕಂಡಿಕೆ 150 ರಲ್ಲಿ ವಸೂಲಾತಿಗೆ ಸೂಚಿಸಲಾದ ಮೊತ್ತ ರೂ.10498/–ಗಳನ್ನು ಮೇ॥ ಬಿ.ಎಸ್.ಆರ್. ಇನ್‌ಫ್ರಾಟೆಕ್, ಬೆಂಗಳೂರು ಇವರ ಬಿಲ್ಲಿನಲ್ಲಿ ಅನುಬಂಧ–79ರಲ್ಲಿ ಸೂಚಿಸಿರುವಂತೆ ಕಟಾಯಿಸಿ ಸಂಬಂಧ ಪಟ್ಟ ಖಾತೆಗೆ ಜಮಾ ಮಾಡಲಾಗಿದ್ದು ವಿವರ ಕೆಳಕಂಡಂತಿರುತ್ತದೆ.

| ಕ್ರ. ಸಂ. | ಬಿ.ಆರ್.ಸಂಖ್ಯೆ ದಿನಾಂಕ | ಚೆಕ್ ಸಂಖ್ಯೆ ದಿನಾಂಕ | ಮೊಬಲಗು | ಷರಾ |
|---|---|---|---|---|
| 1 | 170/26.06.2018 | 746405/31.3.21 | 10498 | ವಸೂಲಿಸಿದ ಬಿಲ್ಲಿನ ವಿವರ ಮತ್ತು ಜಮಾ ವಿವರಗಳನ್ನು ಇದರೊಂದಿಗೆ ಲಗತ್ತಿಸಿದೆ. |

ಈ ಸಂಬಂಧ ವಸೂಲಿಗೆ ಸೂಚಿಸಿರುವ ಮೊತ್ತ ರೂ.10498/–ಗಳನ್ನು ವಸೂಲಾತಿ ಕಂಡಿಕೆಯಿಂದ ಕೈ ಬಿಡುವಂತೆ ನಿವೇದಿಸಲಾಗಿದೆ.

| | |
|---|---|
| **149. ಟೆಂಡರ್ ಕರಾರಿನಲ್ಲಿ ನಿಗದಿಪಡಿಸಿರುವ ಪರಿಮಾಣಕ್ಕಿಂತ ಹೆಚ್ಚಿನ ಪರಿಮಾಣ ನಿರ್ವಹಿಸಿ ಗುತ್ತಿಗೆದಾರರಿಗೆ ಹೆಚ್ಚುವರಿ ಪರಿಮಾಣಕ್ಕೆ ಪಾವತಿ ಮಾಡಿರುವುದು:– (ಇಂಜಿನಿಯರಿಂಗ್ ವಿಭಾಗ)**<br><br>ಮೈಸೂರಿನ ಮಹಾರಾಜ ಕಾಲೇಜಿನಾವರಣದಲ್ಲಿ ಆರೋಗ್ಯ ಕೇಂದ್ರದ ಮುಂಭಾಗ ಪೋರ್ಟಿಕೋ ಮತ್ತು ಒಂದನೇ ಅಂತಸ್ತು ನಿರ್ಮಾಣ ಕಾಮಗಾರಿಯನ್ನು ಟೆಂಡರ್ ಆಧಾರದ ಮೇಲೆ ಕೈಗೊಳ್ಳಲಾಗಿರುವುದನ್ನು ಹಾಜರುಪಡಿಸಿದ ದಾಖಲೆಗಳನ್ನು ಪರಿಶೀಲಿಸಿದಾಗ ಕಂಡುಬಂದಿರುತ್ತದೆ ಸದರಿ ಕಾಮಗಾರಿಯ ಮೊದಲನೆ ಮತ್ತು ಭಾಗಶಃ ಬಿಲ್ಲನ್ನು ಬಿ.ಆರ್ ಸಂಖ್ಯೆ:339/ದಿನಾಂಕ:01.08.2017ರಲ್ಲಿ ಸ್ವೀಕರಿಸಿ ಧನಾದೇಶ ಸಂಖ್ಯೆ:952888/ದಿನಾಂಕ:25.03.2018ರಲ್ಲಿ ರೂ.10.39.971/–ನ್ನು ಪಾವತಿಸಲಾಗಿದೆ ಎರಡನೆ ಮತ್ತು ಭಾಗಶಃ ಬಿಲ್ಲನ್ನು ಬಿ.ಆರ್ ಸಂಖ್ಯೆ:837/ದಿನಾಂಕ:15.03.2018ರಲ್ಲಿ ಸ್ವೀಕರಿಸಿ ಧನಾದೇಶ ಸಂಖ್ಯೆ:953020 ದಿನಾಂಕ;31.03.2018ರಲ್ಲಿ ರೂ.14,93,393/– ಪಾವತಿಸಲಾಗಿದೆ ಪಾವತಿಸಿದ ಓಚರ್‌ಗಳನ್ನು ಪರಿಶೀಲಿಸಿದಾಗ ಕಾಮಗಾರಿಯಲ್ಲಿನ ಕೆಲವು ಐಟಂಗಳನ್ನು ಟೆಂಡರ್‌ನಲ್ಲಿ ನಿಗದಿಪಡಿಸಿದ ಪರಮಾಣಕ್ಕಿಂತ ಹೆಚ್ಚುವರಿಯಾಗಿ ನಿರ್ವಹಿಸಿ ಬಿಲ್ಲುನ್ನು ಪಾವತಿಸಲಾಗಿರುತ್ತದೆ ಹೆಚ್ಚುವರಿ ಪರಿಮಾಣ ನಿರ್ವಹಿಸಲು ಅನುಮೋದನೆ ಪಡೆದ ಬಗೆಗಿನ ದಾಖಲೆಗಳನ್ನು ಹಾಜರುಪಡಿಸುವಂತೆ ವಿಚಾರಣಾ ಪತ್ರ ಸಂಖ್ಯೆ:31 ದಿನಾಂಕ:03.06.2019ರಲ್ಲಿ ಕೋರಲಾಗಿತ್ತು ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ ಆದ್ದರಿಂದ ಹೆಚ್ಚುವರಿ ಪಾವತಿಸಲಾದ ಮೊಬಲಗು ರೂ.2,15,816/–ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ. ವಿವರಗಳನ್ನು ಅನುಬಂಧ–80ರಲ್ಲಿ ಲಗತ್ತಿಸಿದೆ. | ಮೈಸೂರಿನ ಮಹಾರಾಜ ಕಾಲೇಜಿನ ಆವರಣದಲ್ಲಿ ಆರೋಗ್ಯ ಕೇಂದ್ರದ ಮುಂಭಾಗ ಪೋರ್ಟಿಕೊ ಮತ್ತು ಒಂದನೇ ಅಂತಸ್ತು ನಿರ್ಮಾಣ ಕಾಮಗಾರಿಯನ್ನು 2017–18ನೇ ಸಾಲಿನಲ್ಲಿ ಅಂದಾಜು ಮೊತ್ತ ರೂ.31.00 ಲಕ್ಷಗಳಲ್ಲಿಆದೇಶ ಸಂಖ್ಯೆ:47/2017–18/19.07.2017ರಲ್ಲಿ ಮಂಜೂರಾತಿ ದೊರೆತಿದ್ದು ಈ ಕಾಮಗಾರಿಯನ್ನು ಟೆಂಡರ್ ಆಧಾರದ ಮೇಲೆ ಶ್ರೀ ಪುಟ್ಟಸ್ವಾಮಿ, ಗುತ್ತಿಗೆದಾರರು ಇವರಿಗೆ ವಹಿಸಿದ್ದು, ಕಾಮಗಾರಿಯನ್ನು ನಿರ್ವಹಿಸಿದ ಮೊದಲನೆ ಮತ್ತು ಭಾಗಶಃ ಬಿಲ್ಲಿನ ಮೊತ್ತ ರೂ.10,39,971/– ಹಾಗೂ ಎರಡನೇ ಹಾಗು ಭಾಗಶಃ ಬಿಲ್ಲಿನ ಮೊತ್ತ ರೂ.14,93,393/– ಒಟ್ಟು ಮೊತ್ತ ರೂ.25,33,364/–ಗಳನ್ನು ಗುತ್ತಿಗೆದಾರರಿಗೆ ಪಾವತಿಸಲಾಗಿದೆ. ಈ ನಿಟ್ಟಿನಲ್ಲಿ ಕಾಮಗಾರಿಯನ್ನು ಭೌತಿಕವಾಗಿ ನಿರ್ವಹಿಸುವ ಸಂದರ್ಭದಲ್ಲಿ ಹಲವು ಐಟಂಗಳಟೆಂಡರ್‌ನಲ್ಲಿ ಮಂಜೂರಾತಿಯಾದ ಪರಿಮಾಣಕ್ಕಿಂತ ಹೆಚ್ಚುವರಿ ಪರಿಮಾಣವಾಗಿದ್ದು ಹಾಗೂ ಹೆಚ್ಚುವರಿ ಐಟಂ(EIRL) ಗಳನ್ನು ನಿರ್ವಹಿಸಿದ್ದು. ಸದರಿ ಹೆಚ್ಚುವರಿ ಪರಿಮಾಣ ಹಾಗೂ ಹೆಚ್ಚುವರಿ ಐಟಂಗಳಿಗೆ ಹಾಗೂ ಅಂತಿಮ ಹುಂಡಿಯ ಮೊತ್ತ ರೂ.2,30,206/–ಗಳನ್ನು ಪಾವತಿಸುವ ಸಂಬಂಧ, ಸಂಬಂಧಪಟ್ಟ ಪ್ರಾಧಿಕಾರದಿಂದ ಪರಿಷ್ಕೃತ ಆದೇಶ ಸಂಖ್ಯೆ:ಜಿಎಲ್7/28/2014–15, ದಿನಾಂಕ.01.02.2020ರಲ್ಲಿ ಆದೇಶ ಮತ್ತು ಅನುಮತಿಯನ್ನು ಪಡೆಯಲಾಗಿದ್ದು ಅದರಂತೆ ಕಾಮಗಾರಿಯನ್ನು ಅವಶ್ಯಕತೆಗನುಗುಣವಾಗಿ ಕಾರ್ಯನಿರ್ವಹಿಸಲಾಗಿರುತ್ತದೆ. ಈ ನಿಟ್ಟಿನಲ್ಲಿ ಸದರಿ ಆದೇಶದ ಪ್ರತಿ ಹಾಗೂ ಹೆಚ್ಚುವರಿ ಪರಿಮಾಣ ಮತ್ತು ಹೆಚ್ಚುವರಿ ಐಟಂ(EIRL)ಗಳ ಪಟ್ಟಿಯನ್ನು ಮಾಹಿತಿಗೆ ಹಾಗೂ ಲೆಕ್ಕ ಪರಿಶೋಧನೆಗೆ ಇದರೊಂದಿಗೆ ಲಗತ್ತಿಸುತ್ತ ಸದರಿ ಆಕ್ಷೇಪಣೆಯ ಮೊತ್ತ ರೂ.2,15,816/–ಗಳನ್ನು ಆಕ್ಷೇಪಣೆಯಿಂದ ಕೈ ಬಿಡುವಂತೆ ನಿವೇದಿಸಲಾಗಿದೆ. |
| **150. ಪೀಠೋಪಕರಣಗಳನ್ನು ಹಾಗೂ ಇನ್ನಿತರೆ ಸಾಮಾಗ್ರಿಗಳನ್ನು ಅಧಿಕೃತ ಸರಬರಾಜುದಾರರಿಂದ ಖರೀದಿಸದೆ ಸಿವಿಲ್/ಎಲೆಕ್ಟ್ರಿಕಲ್ ಗುತ್ತಿಗೆದಾರರಿಂದ ಖರೀದಿಸಿರುವುದು:– (ಇಂಜಿನಿಯರಿಂಗ್ ವಿಭಾಗ)**<br><br>2017–18ನೇ ಸಾಲಿನ ಲೆಕ್ಕಪರಿಶೋಧನೆಯಲ್ಲಿ ಇಂಜಿನಿಯರಿಂಗ್ ವಿಭಾಗ ನಿಯಂತ್ರಣದಲ್ಲಿರುವ ಅತಿಥಿ ಗೃಹದಲ್ಲಿ ವೆಚ್ಚ ಭರಿಸಲಾದ ವೋಚರ್‌ಗಳನ್ನು ಪರಿಶೀಲಿಸಲಾಗಿ ಪೀಠೋಪಕರಣಗಳನ್ನು (ಮಂಚ, ಟೇಬಲ್, ವಾರ್ಡ್‌ರೋಬ್, ಚೇರ್, ಸೈಡ್ ಟೇಬಲ್) ಹಾಗೂ ಇನ್ನಿತರೆ ಸಾಮಾಗ್ರಿಗಳನ್ನು ಅಧಿಕ್ರತ ಸರಬರಾಜುದಾರರಿಂದ ದರಪಟ್ಟಿ ಕರೆದು ಖರೀದಿಸದೆ ಸಿವಿಲ್/ಎಲೆಕ್ಟ್ರಿಕಲ್ ಗುತ್ತಿಗೆದಾರರಿಂದ ದರಪಟ್ಟಿ ಆಹ್ವಾನಿಸಿ ಖರೀದಿಸಿರುವುದನ್ನು ಗಮನಿಸಲಾಗಿದೆ. ಗುತ್ತಿಗೆದಾರರಿಂದ ಖರೀದಿಸಲಾಗಿರುವ ವಿವರಗಳನ್ನು ಅನುಬಂಧ–82ರಲ್ಲಿ ವಿವರಸಲಾಗಿದ್ದು ಈ ಸಂಬಂಧ ಅಧಿಕೃತ ಸರಬರಾಜುದಾರರಿಂದ ಖರೀದಿಸದೆ ಗುತ್ತಿಗೆದಾರರಿಂದ ಖರೀದಿಸಿರುದಕ್ಕೆ ಸೂಕ್ತ | ವಿಶ್ವವಿದ್ಯಾನಿಲಯದ ಅಧೀನದಲ್ಲಿರುವ ಅತಿಥಿಗೃಹಕ್ಕೆ ಬೇಕಾದಂತಹ ಸಾಮಾಗ್ರಿಗಳಾದ ಕುರ್ಚಿ, ಮಂಚ, ಟೇಬಲ್, ಸೈಡ್ ಟೇಬಲ್ ವಾರ್ಡ್‌ರೋಬ್ ಮುಂತಾದವುಗಳನ್ನು ದರಪಟ್ಟಿಯ ಆಧಾರದ ಮೇಲೆ ಖರೀದಿಸಿ ಅವಶ್ಯಕತೆಯಿದ್ದಂತಹ ಸ್ಥಳಗಳಲ್ಲಿ ಪರಿಕರಗಳನ್ನು ವ್ಯವಸ್ಥೆಗೊಳಿಸಿ ನಿರ್ವಹಿಸಲಾಗಿರುತ್ತದೆ. ಸದರಿ ಪರಿಕರಗಳು ಅತ್ಯಾವಶ್ಯಕವಾಗಿರುವುದರಿಂದ ಇವುಗಳ ವ್ಯವಸ್ಥೆ ಮಾಡಬೇಕೆಂದು ಸಂಬಂಧ ಪಟ್ಟ ಅಧಿಕಾರಿಗಳು ಪ್ರಸ್ತಾವನೆಯ ಮೂಲಕ ಬೇಡಿಕೆ ಸಲ್ಲಿಸಿರುವುದರ ಮೇರೆಗೆ ತುರ್ತು ಹಾಗೂ ಅವಶ್ಯಕತೆಯನ್ನು ಪರಿಗಣಿಸಿ ದರಪಟ್ಟಿ ಆಧಾರದ ಮೇಲೆ ಸದರಿ ಪರಿಕರಗಳನ್ನು ಖರೀದಿಸಿ ಕಾರ್ಯನಿರ್ವಹಿಸಲಾಗಿರುತ್ತದೆ. ಈ |

ಸ್ಪಷ್ಟೀಕರಣ ನೀಡುವಂತೆ ವಿಚಾರಣಾ ಪತ್ರ ಸಂಖ್ಯೆ:16/201920 ದಿನಾಂಕ:06.05.2019ರಲ್ಲಿ ಕೋರಲಾಗಿ ಯಾವಿದೇ ಉತ್ತರ ನೀಡಿರುವುದಿಲ್ಲ

ಸಿವಿಲ್/ಎಲೆಕ್ಟ್ರಿಕಲ್ ಗುತ್ತಿಗೆದಾರು ಅಧಿಕೃತ ಪೀಠೋಪರಣ ಸರಬರಾಜುದಾರರೆ/ತೆರಿಗೆ ಪಾವತಿದಾರರೆ ಎಂಬುದನ್ನು ಹಾಗೂ ಸ್ಪರ್ಧಾತ್ಮಕ ದರದಲ್ಲಿ ಖರೀದಿಸಿರುವುದನ್ನು ಲೆಕ್ಕಪರಿಶೋಧನೆಯ್ಲಲಿ ತಿಳಿಯಲು ಸಾಧ್ಯವಾಗಿರುವುದಿಲ್ಲ ಪೂರಕ ದಾಖಲತಿಗಳೊಂದಿಗೆ ಸ್ಪಷ್ಟೀಕರಣ ನೀಡುವವರೆಗೂ ಗುತ್ತಿಗೆದಾರರಿಗೆ ಪಾವತಿಸಲಾಗಿರುವ **ರೂ.4,76,600/–ಗಳನ್ನು ಆಕ್ಷೇಪಣೆಗೆ ಸೂಸಲಾಗಿದೆ.**

ನಿಟ್ಟಿನಲ್ಲಿ ಪೀಠೋಪಕರಣಗಳ ಅವಶ್ಯಕತೆಗಳನ್ನು ಪರಿಗಣಿಸಿ ಆಕ್ಷೇಪಿತ ಮೊತ್ತ ರೂ.4,76,600/–ಗಳನ್ನು ಆಕ್ಷೇಪಣೆಯಿಂದ ಕೈಬಿಡುವಂತೆ ನಿವೇದಿಸಲಾಗಿದೆ.

**151. ವೋಚರ್‌ಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸದಿರುವುದು:– (ಇಂಜಿನಿಯರಿಂಗ್ ವಿಭಾಗ)**

2017–18ನೇ ಸಾಲಿನಲ್ಲಿ ವಿ.ವಿ ಇಂಜಿನಿರಿಂಗ್ ವಿಭಾಗಕ್ಕೆ ಸಂಬಂಧಿಸಿದಂತೆ ಪಾವತಿಯಾದ ಓಚರ್‌ಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸುವಂತೆ ಲೆಕ್ಕಪರಿಶೋಧನಾ ವಿಚಾರಣಾ ಸಂಖ್ಯೆ:1/15.04.2019 23(ಎ)2019–20 ದಿನಾಂಕ:25.05.2019 ಮತ್ತು 36/2019–20 ದಿನಾಂಕ:07.06.2019ರಲ್ಲಿ ಕೋರಲಾಗಿತ್ತು ಹಾಜರುಪಡಿಸಿದ ಓಚರ್‌ಗಳನ್ನು ಲೆಕ್ಕ ಪರಿಶೋಧನೆ ಮಾಡಲಾಗಿದ್ದು ಹಾಝುರುಪಡಿಸದಿರುವ ಓಚರ್‌ಗಳ ಮೊಬಲಗು **ರೂ.7,24,490/– ಆಕ್ಷೇಪಣೆಯಲ್ಲಿಡಲಾಗಿದೆ** ಓಚರ್‌ಗಳ ವಿವರಗಳನ್ನು ಅನುಬಂಧ–83ರಲ್ಲಿ ಲಗತ್ತಿಸಿದೆ.

ಈ ಕೆಳಗೆ ನಮೂದಿಸಲಾಗಿರುವ ಪಾವತಿ ಮೊತ್ತದ ಓಚರುಗಳನ್ನು ಲೆಕ್ಕ ಪರಿಶೋಧನಾ ಸಮಯದಲ್ಲಿ ಲೆಕ್ಕ ಪರಿಶೋಧನೆಗೆ ಹಾಜರುಪಡಿಸಲಾಗಿತ್ತು. ಆದಾಗ್ಯೂ ರೂ.7,24,490/–ಗಳಿಗೆ ಹಣ ಪಾವತಿ ಮಾಡಲಾದ ಕಾಮಗಾರಿಗಳ (ಬಿಲ್ಲುಗಳು) ಓಚರುಗಳನ್ನು ಲೆಕ್ಕ ಪರಿಶೋಧನೆಗೆ ಹಾಜರುಪಡಿಸಿಲ್ಲವೆಂದು ಕಂಡಿಕೆ ಸಂಖ್ಯೆ:154ರಲ್ಲಿ ಆಕ್ಷೇಪಿಸಲಾಗಿದ್ದು. ಸದರಿ ಓಚರುಗಳನ್ನು ಪ್ರಸ್ತುತ ಲೆಕ್ಕ ಪರಿಶೋಧನೆಗೆ ಒದಗಿಸಲಾಗಿದ್ದು ವಿವರ ಈ ಕೆಳಕಂಡಂತಿರುತ್ತದೆ. ಹಾಗೂ ಸದರಿ ಮೊತ್ತ ರೂ.7,24,490/–ಗಳ ಆಕ್ಷೇಪಣೆಯನ್ನು ಕೈಬಿಡಬೇಕೆಂದು ನಿವೇದಿಸಲಾಗಿದೆ.

| ಕ್ರ. ಸಂ | ಬಿ.ಆರ್. ಸಂ./ದಿನಾಂಕ | ಚೆಕ್ ಸಂಖ್ಯೆ/ದಿನಾಂಕ | ಕಾಮಗಾರಿಗಳ ವಿವರ | ಬಿಲ್ಲಿನ ಮೊತ್ತ | ಷರಾ |
|---|---|---|---|---|---|
| 1 | 471/2017-18/16.9.2017 | 950732/28.9.2017 | DC Bill. ADV. Paper(Marketing Communication) | 271966 | |
| 2 | 679/2017-18/4.2.2017 | 142230/4.11.2017 | DC Bill. ADV. Paper(Marketing Communication) | 190327 | |
| 3 | 06/2017-18/7.4.2017 | 951498/22.11.2017 | DC Bill. Paper Bill | 8507 | |
| 4 | 849/2017-18/15.3.2017 | 953108/31.3.2018 | M/s:Pooja Furniture Supply Bill | 75000 | |
| 5 | 832/2017-18/15.3.2017 | 953026/31.3.2018 | Sri Siddaraju, Supply Bill | 29940 | |
| 6 | 851/2017-18/15.3.2017 | 953108/31.3.2018 | M/s:Pooja Furniture Supply Bill | 75500 | |
| 7 | 850/2017-18/15.3.2017 | 953111/31.3.2018 | M/s:BS Electrical Supply Bill | 73750 | |
| | | | | **724490** | |

**152. ಭದ್ರತಾ ಠೇವಣಿ ವಹಿ ಪರಿಶೀಲನೆ:– (ಇಂಜಿನಿಯರಿಂಗ್ ವಿಭಾಗ)**

ಇಂಜಿನಿಯರಿಂಗ್ ವಿಭಾಗದಲ್ಲಿ ಗುತ್ತಿಗೆದಾರರಿಂದ ಕಾಮಗಾರಿ ನಿರ್ವಹಿಸುವ ಸಂಬಂಧ ಕರಾರು ಮಾಡಿಕೊಳ್ಳುವ ಪೂರ್ವದಲ್ಲಿ ಹುತ್ತಿಗೆ ವಹಿಸಲಾದ ಮೊಬಲಗಿನ ಶೇ 5.00 ರಷ್ಟು ಮೊಬಲಗಿಗೆ ಭದ್ರತಾ ಠೇವಣಿ ಪಡೆದುಕೊಂಡು ವಿವರಗಳನ್ನು ಭದ್ರತಾ ಠೇವಣಿ ವಹಿಯಲ್ಲಿ ದಾಖಲಿಸಲಾಗಿರುತ್ತದೆ ಠೇವಣಿ ವಹಿಯನ್ನು ಪರಿಶೀಲಿಸಿದಾಗ ಬೃಹತ್ ಕಾಮಗಾರಿಗಳನ್ನು ಪ್ಯಾಕೇಜ್ ಮೂಲಕ ವಹಿಸಿಕೊಟ್ಟ ಸಂದರ್ಭದಲ್ಲಿ ಗುತ್ತಿಗೆದಾರರು ನೀಡಿದ ಕೆಲವು ಬ್ಯಾಂಕ್ ಗ್ಯಾರಂಟಿಗಳು ನವೀಕರಣವಾಗಿರುವುದಿಲ್ಲ ವಿವರಗಳು ಕೆಳಕಂಡಂತಿದೆ.

| ಕ್ರ.ಸಂ | ಕಾಮಗಾರಿ ಹೆಸರು ಪ್ಯಾಕೇಜ್ ಸಂಖ್ಯೆ | ಗುತ್ತಿಗೆದಾರರ ಹೆಸರು | ಭದ್ರತಾ ಠೇವಣಿ ವಿವರ | ಮೊಬಲಗು (ರೂ.ಗಳಲ್ಲಿ) | ಬ್ಯಾಂಕ್ ಗ್ಯಾರಂಟಿ ಸಿಂಧುತ್ವದ ದಿನಾಂಕ |
|---|---|---|---|---|---|
| 1 | ಪ್ಯಾಕೇಜ್–2 | ಮೆ॥ ಬಿ.ಎಸ್.ಆರ್ ಇನ್‌ಫ್ರಾಟೆಕ್ ಇಂಡಿಯಾ ಲಿಮಿಟೆಡ್, ಬೆಂಗಳೂರು | ಬ್ಯಾಂಕ್ ಗ್ಯಾರಂಟಿ ಸಂಖ್ಯೆ:0006941 G 150000016 ಇಂಡಿಯನ್ ಬ್ಯಾಂಕ್ ಶ್ರೀ ನಗರ ಕಾಲೋನಿ ಶಾಖೆ, ಹೈದರ್‌ಬಾದ್ | 2,24,95,000 | 12.03.2018 |
| 2 | ಪ್ಯಾಕೇಜ್–3 | | ಬ್ಯಾಂಕ್ ಗ್ಯಾರಂಟಿ ಸಂಖ್ಯೆ:022GM0116 0530003 ಯಸ್ ಬ್ಯಾಂಕ್ ಲಿ.,#22, ಕಸ್ತೂರಬಾ ರಸ್ತೆ ಶಾಖೆ, ಬೆಂಗಳೂರು | 1,21,10,000 | 21.05.2018 |
| 3 | ಪ್ಯಾಕೇಜ್–2 | | ಬ್ಯಾಂಕ್ ಗ್ಯಾರಂಟಿ ಸಂಖ್ಯೆ:PSBG75/20 14 ದಿನಾಂಕ:09.04.2014 ಕಾರ್ಪೋರೇಷನ್ ಬ್ಯಾಂಕ್, ಸಂಪಿಗೆ ರಸ್ತೆ ಶಾಖೆ, ಮಲ್ಲೇಸ್ವರಂ ಬೆಂಗಳೂರು | 2,20,60,000 | 7.07.2017 |

ವಿಶ್ವವಿದ್ಯಾನಿಲಯದ ವ್ಯಾಪ್ತಿಯ ಪ್ಯಾಕೇಜ್–2 ಮತ್ತು ಪ್ಯಾಕೇಜ್–3 ರಲ್ಲಿನ ಮೇ॥ ಬಿ.ಎಸ್.ಆರ್. ಇನ್‌ಫ್ಲಾಟೆಕ್ ಲಿ., ಬೆಂಗಳೂರು ಇವರು ನಿರ್ವಹಿಸಿರುವ ಪ್ಯಾಕೇಜ್‌ಗಳ ಹಲವು ಕಾಮಗಾರಿಗಳ ಅಂತಿಮ ಬಿಲ್ಲು ಪಾವತಿಯಾಗಿರುವುದಿಲವೆಂದು 2017–18ನೇ ಸಾಲಿನ ಲೆಕ್ಕ ಪರಿಶೋಧನಾ ವರದಿಯ ಕಂಡಿಕೆ ಸಂಖ್ಯೆ:155ರಲ್ಲಿ ಗಮನಿಸಿ ಪ್ರಸ್ತಾಪಿಸಲಾಗಿರುತ್ತದೆ. ಈ ಬಗ್ಗೆ ಪ್ಯಾಕೇಜ್–1, ಪ್ಯಾಕೇಜ್–2 ಹಾಗೂ ಪ್ಯಾಕೇಜ್–3ರ ಕಾಮಗಾರಿಗಳು ಪೂರ್ಣಗೊಂಡಿದ್ದು ಸದರಿ ಕಾಮಗಾರಿಗಳ ಅಂತಿಮ ಬಿಲ್ಲುಗಳನ್ನು ಪಾವತಿಸಿದ್ದು ಇವುಗಳ ವಿವರದ ಪಟ್ಟಿಯನ್ನು ಇದರೊಂದಿಗೆ ಲಗತ್ತಿಸಲಾಗಿದೆ ಹಾಗೂ ಈ ಪ್ಯಾಕೇಜ್‌ಗಳ ಮೊತ್ತ ವಿವರಗಳು ಈ ಕೆಳಕಂಡಂತಿರುತ್ತದೆ.

| ಕ್ರ. ಸಂ. | ಪ್ಯಾಕೇಜ್ ವಿವರ | ಗುತ್ತಿಗೆದಾರರ ವಿವರ | ಮೊತ್ತ ರೂ.ಗಳಲ್ಲಿ |
|---|---|---|---|
| 1 | **ಪ್ಯಾಕೇಜ್ – 2** | ಮೇ॥ ಬಿ.ಎಸ್.ಆರ್. ಇನ್‌ಫ್ಲಾಟೆಕ್ ಇಂಡಿಯಾ, ಲಿ., ಬೆಂಗಳೂರು | 2,24,95,000 |
| 2 | **ಪ್ಯಾಕೇಜ್ – 3** | ಮೇ॥ ಬಿ.ಎಸ್.ಆರ್. ಇನ್‌ಫ್ಲಾಟೆಕ್ ಇಂಡಿಯಾ, ಲಿ., ಬೆಂಗಳೂರು | 1,21,10,000 |
| 3 | **ಪ್ಯಾಕೇಜ್ – 1** | ಮೇ॥ ಬಿ.ಎಸ್.ಆರ್. ಇನ್‌ಫ್ಲಾಟೆಕ್ ಇಂಡಿಯಾ, ಲಿ., ಬೆಂಗಳೂರು | 2,20,60,000 |

ಈ ನಿಟ್ಟಿನಲ್ಲಿ ಕಂಡಿಕೆ ಸಂಖ್ಯೆ:155ರಲ್ಲಿ ಆಕ್ಷೇಪಿಸಲಾದ ಕಂಡಿಕೆಯ ಮೊತ್ತಗಳನ್ನು ಆಕ್ಷೇಪಣೆಯಿಂದ ಕೈಬಿಡುವಂತೆ ನಿವೇದಿಸಿದೆ.

| | |
|---|---|
| ಮೇಲ್ಕಂಡ ಪ್ಯಾಕೇಜ್ ಕಾಮಗಾರಿಗಳಿಗೆ ಕೆಲವು ಕಾಮಗಾರಿಗಳ ಸಂಬಂಧಿಸಿದ ಅಂತಿಮ ಬಿಲ್ಲು ಪಾವತಿಯಾಗಿರುವುದಿಲ್ಲ ಬ್ಯಾಂಕ್ ಗ್ಯಾರಂಟಿಗಳನ್ನು ನವೀಕರಿಸುವಂತೆ ಸಂಬಂಧಿಸಿದ ಬ್ಯಾಂಕುಗಳೀಗೆ ಪತ್ರ ಬರೆದಿರುವುದನ್ನು ಕಡತಗಳಲ್ಲಿ ಗಮನಿಸಲಾಗಿದೆ ಆದಾಗ್ಯೂ ಲೆಕ್ಕಪರಿಶೋಧನಾ ಅವಧಿ ಮುಕ್ತಾಯದವರೆಗೂ ನವೀಕರಣವಾದ ಬಗ್ಗೆ ಮಾಹಿತಿಯನ್ನು ಹಾಜರುಪಡಿಸಿರುವುದಿಲ್ಲ ಕಾಮಗಾರಿ ನಿರ್ವಹಣಾ ಅವಧಿಯಲ್ಲಿ ಯಾವುದಾದರೂ ಲೋಪ ಕಂಡುಬಂದಲ್ಲಿ ಅದರ ಮೊಬಲನ್ನು ಭದ್ರತಾ ಠೇವಣಿ ಮೊಬಲಗಿನಿಂದ ಕಡಿತಗೊಳಿಸಬೇಕಾಗಿರುತ್ತದೆ ಇ ಹಿನ್ನಲೆಯಲ್ಲಿ ಮೇಲ್ಕಂಡ ಬ್ಯಾಂಕ್ ಗ್ಯಾರಂಟಿಗಳನ್ನು ನವೀರಿಸಲು ತುರ್ತು ಕ್ರಮ ವಹಿಸಲು ಸೂಚಿಸಿದೆ ಇಲ್ಲದಿದ್ದಲ್ಲಿ ಇದರಿಂದಾಗೆ ವಿಶ್ವವಿದ್ಯಾನಿಯಕ್ಕೆ ನಷ್ಟವೇನಾದರು ಉಂಟಾದಲ್ಲಿ ಇದಕ್ಕೆ ಸಂಬಂಧಿಸಿದ ಅಧಿಕಾರಿ/ಸಿಬ್ಬಂದಿಗಳನ್ನು ಹೊಣೆಗಾರರನ್ನಾಗಿ ಮಾಡಲಾಗುವುದು. | |
| **ಆದಾಯ ತೆರಿಗೆ/ಮಾರಾಟ ತೆರಿಗೆ/ಆಸ್ತಿ ತೆರಿಗೆ/ಆಸ್ತಿ ವಹಿ**<br>**(Income Tax/VAT/Asset Tax/Asset register)**<br><br>**153. ರಾಷ್ಟ್ರೀಯ ಉಚ್ಛತಮ ಶಿಕ್ಷಾ ಅಭಿಯಾನ (RUSA) ಅನುದಾನ ಕುರಿತು:– (ಹಣಕಾಸು ವಿಭಾಗ)**<br><br>**I. ಉಪಕರಣಗಳ ಖರೀದಿ ಹಾಗೂ ಕಟ್ಟಡ ನಿರ್ಮಾಣ ಕಾಮಗಾರಿ ಬಿಲ್ಲುಗಳಲ್ಲಿ ಕಟಾಯಿಸಲಾದ ಆದಾಯ ತೆರಿಗೆ ಮೊಬಲಗನ್ನು ಆದಾಯ ತೆರಿಗೆ ಇಲಾಖೆಗೆ ಜಮೆ ಮಾಡಿದ ವಿವರ (ಚಲನ್, ಫಾರಂ16 ಎ, ಐಟಿಆರ್ ಇತ್ಯಾದಿ ವಿವರಗಳು) ಹಾಗೂ ಇತರೆ ಶಾಸನ ಬದ್ಧ ಕಟಾವಣೆಗಳನ್ನು ಸಂಬಂಧಿಸಿದ ಆಯಾಯ ಇಲಾಖೆಗೆ/ಲೆಕ್ಕ ಶೀರ್ಷಿಕೆಗೆ ನೇರವಾಗಿ ಜಮೆ ಮಾಡದಿರುವ ಕುರಿತು:–**<br><br>2017-18ನೇ ಸಾಲಿನ ಲೆಕ್ಕ ತನಿಖೆಯಲ್ಲಿ ಪರಿಶೀಲಿಸಿದಂತೆ ರಾಷ್ಟ್ರೀಯ ಉಚ್ಛತಮ ಶಿಕ್ಷಾ ಅಭಿಯಾನ (RUSA) ಯೋಜನೆಯಡಿಯಲ್ಲಿ ಉಪಕರಣಗಳ ಖರೀದಿಗಾಗಿ ಹಾಗೂ ಕಟ್ಟಡ ನಿರ್ಮಾಣ ಕಾಮಗಾರಿಗಾಗಿ ವೆಚ್ಚವನ್ನು ಭರಿಸಲಾಗಿದೆ ಈ ವೆಚ್ಚದಲ್ಲಿ ರು.5,52,86,001/–ಗಳಲಲಿ ಆದಾಯ ತೆರಿಗೆ ಮತ್ತು ಶಾಸನ ಬದ್ಧ ಕಟಾವಣೆಗಳ ಮೊಬಲಗು ಒಟ್ಟು ರೂ.30,58,124/–ಗಳನ್ನು ಕಾರ್ಯಪಾಲಕ ಅಭಿಯಂತರು ವಿಶ್ವವಿದ್ಯಾನಿಲಯ ಇಂಜಿನಿಯರಿಂಗ್ ವಿಭಾಗ ಮೈಸೂರು ವಿಶ್ವವಿದ್ಯಾನಿಲಯ, ಮೈಸೂರುರವರಿಗೆ ಪಾವತಿಸಲಾಗಿರುತ್ತದೆ ಸದರಿ ಮೊಬಲಗನ್ನು ನೇರವಾಗಿ ಸಂಬಂಧಿಸಿದ ಇಲಾಖೆಗಳಿಗೆ/ಲೆಕ್ಕ ಶೀಷಿಕೆಗಳಿಗೆ ಜಮೆ ಮಾಡದೇ ಕಾರ್ಯಪಾಲಕ ಅಭಿಯಂತರರವರಿಗೆ ಪಾವತಿಸಿರುವ ಬಗ್ಗೆ ಸೂಕ್ತ ಸ್ಪಷ್ಟೀಕರನ ನೀಡುವಂತೆ ನ್ಯೂನತೆಗಳ ಪಟ್ಟಿಯ | ಕಟ್ಟಡ ನಿರ್ಮಾಣ ಕಾಮಗಾರಿಗಳ ಬಿಲ್ಲುಗಳು ಸಾಮಗ್ರಿ ಸರಬರಾಜು ಬಿಲ್ಲುಗಳು ಹಾಗೂ ಇನ್ನಿತರೆ ಶಾಸನ ಬದ್ಧ ತೆರಿಗೆಗಳಾದ ಆದಾಯ ತೆರಿಗೆ, ಮಾರಾಟ ತೆರಿಗೆ, ಜಿ.ಎಸ್.ಟಿ ಮುಂತಾದ ತೆರಿಗೆಗಳನ್ನು ಆಯಾಯ ಸಂಬಂಧ ಪಟ್ಟ ಬಿಲ್ಲುಗಳನ್ನು ಪಾಸು ಮಾಡಿ ಪಾವತಿಸುವ ಸಂದರ್ಭದಲ್ಲಿ ಮೇಲಿನ ಎಲ್ಲಾ ಶಾಸನ ಬದ್ಧ ತೆರಿಗೆಳನ್ನು ಆಯಾಯ ಬಿಲ್ಲಿನ ಮೊತ್ತಕ್ಕೆ ಅನುಗುಣವಾಗಿ ಕಟಾಯಿಸಿ ಸರ್ಕಾರದ ಖಾತೆಗಳಿಗೆ ಜಮೆ ಮಾಡಲಾಗುತ್ತಿದೆ. ಹಲವು ಸಂದರ್ಭಗಳಲ್ಲಿ ಕಾರ್ಯಪಾಲಕ ಅಭಿಯಂತರರು ತಾಂತ್ರಿಕ ವಿಭಾಗ ಇವರ ಹೆಸರಿನಲ್ಲಿ ಅಥವ ಇವರ ಮುಖಾಂತರ ಪಾವತಿಯಾದರೂ ಸಹ ಕೂಡಲೆ ಸಂಬಂಧ ಪಟ್ಟ ಖಾತೆಗಳಿಗೆ ಆಯಾಯ ತಿಂಗಳಿನಲ್ಲಿ ಜಮೆ ಮಾಡಲಾಗುತ್ತಿರುತ್ತದೆ ಸದರಿ ವಿಷಯವನ್ನು |

| | |
|---|---|
| ಕ್ರಮ ಸಂಖ್ಯೆ:10, 11 ಮತ್ತು 12 ರಲ್ಲಿ ವಿವರಸಿ ಲೆಕ್ಕ ತನಿಖಾ ವಿಚಾರಣಾ ಪತ್ರಗಳ ಸಂಖ್ಯೆ: 1) 02/22.04.2019 2) 7/30.04.2019 ಮತ್ತು 3) 21/16.05.2019ರ ಮೂಲಕ ಕೋರಲಗಿರುತ್ತದೆ ಸದರಿ ವಿಚಾರಣಾ ಪತ್ರಗಳಿಗೆ ಸಂಬಂಧಿಸಿದಂತೆ ಕಾರ್ಯಪಾಲಕ ಅಭಿಯಂತರು ವಿಶ್ವವಿದ್ಯಾನಿಲಯ ಇಂಜಿನಿಯರಿಂಗ್ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ರವರು ತಮ್ಮ ವಿವರಣೆ ಸಂಖ್ಯೆ:45/2019–20, ದಿನಾಂಕ:25.05.2019ರ ಮೂಲಕ ವಿವರಗಳನ್ನು ಲೆಕ್ಕ ತನಿಖೆಗೆ ಹಾಜರುಪಡಿಸಿದ್ದು ಆಪ್ರಕಾರ ಕಟಾವಣೆಗಳನ್ನು ನಿರ್ದಿಷ್ಟಪಡಿಸಿದ ಅವಧಿಯೊಳಗೆ ಆಯಾಯ ಇಲಾಖೆಗಳಿಗೆ/ಲೆಕ್ಕ ಶೀರ್ಷಿಕೆಗಳೀಗೆ ಜಮೆ ಮಾಡಿವಿದಿ ಕಟಾವಣೆ ಮಾಡಿದ ಹಾಗೂ ಹಣಪಾವತಿಸುವ ಅಧಿಕಾರಿಗಳ ಜವಾಬ್ದಾರಿಯಾಗಿರುತ್ತದೆ. ಬಿಲ್ಲುಗಳ ನಿವ್ವಳ ಮೊಬಲಗನ್ನು ಗುತ್ತಿಗೆದಾರರಿಗೆ ಹಣಕಾಸು ಅಧಿಕಾರಿಯವರು ಪಾವತಿಸಿ ಆಸನ ಬದ್ಧ ಕಟಾವಣೆಗಳ ಮೊಬಲಗನ್ನು ಕಾರ್ಯಪಾಲಕ ಅಭಿಯಂತರರವರ ಮೂಲಕ ಸಂಬಂಧಿಸಿದ ಇಲಾಖೆಗಳಿಗೆ/ಲೆಕ್ಕ ಶೀರ್ಷಿಕೆಗಳಿಗೆ ಜಮೆ ಮಾಡುವುದು ನಿಯಮಗಳಿಗೆ ವಿರುದ್ಧವಾಗಿರುತ್ತದೆ ಹಾಗೂ ಅನಗತ್ಯ ವಿಳಂಬಕ್ಕೆ ಆಸ್ಪದ ಮಾಡಿಕೊಟ್ಟಂತಾಗುತ್ತದೆ. ಇದರಿಂದ ಆಯಾಯ ಇಲಾಖೆಗಳು/ಸರ್ಕಾರವು ವಿಧಿಸುವ ದಂಡ ಶುಲ್ಕಕ್ಕೆ ಒಳಗಾಗಬೇಕಾಗುತ್ತದೆ. ಇದು ವಿಶ್ವವಿದ್ಯಾನಿಲಯಕ್ಕೆ ಅನಗತ್ಯ ಆರ್ಥಿಕ ಹೊರೆಯನ್ನುಂಟು ಮಾಡಿದಂತಾಗುತ್ತದೆ ಹಾಗೂ ಅನಗತ್ಯವಾಗಿ ಹಣ ದುರುಪಯೋಗಪಡಿಸಿಕೊಳ್ಳಲು ಅವಕಾಶ ಕಲ್ಪಿಸಿಕೊಟ್ಟಂತಾಗುತ್ತದೆ ಆದದರಿಂದ ಇಂತಹ ಅನಗತ್ಯ ವಿಳಂಬ/ದಂಡ ಶುಲ್ಕ ತಪ್ಪಿಸುವ ಸಲುವಾಗಿ ಬಿಲ್ಲುಗಳಲ್ಲಿ ಕಟಾಯಿಸಲಾದ ಆಸನಬದ್ಧ ಕಟಾವಣೆಗಳನ್ನು ಹಣ ಬಟವಾಡೆ ಅಧಿಕಾರಿಗಳಾದ ಹಣಕಾಸು ಅಧಿಕಾರಿಯವರೇ ನೇರವಾಗಿ ಅಯಾಯ ಇಲಾಖೆ/ಲೆಕ್ಕ ಶೀರ್ಷಿಕೆಗಳಿಗೆ ಜಮೆ ಮಾಡಲು ಸೂಚಿಸಿದೆ. | ಲೆಕ್ಕಪರಿಶೋಧನೆಯಲ್ಲಿ ಗಮನಿಸಿ ಪ್ರಸ್ತಾಪಿಸಿ ಸೂಚಿಸಿರುವುದನ್ನು ಸ್ವೀಕರಿಸಿ ಆ ನಿರ್ದೇಶನದಂತೆ ಕಾರ್ಯ ನಿರ್ವಹಿಸಲಾಗುವುದೆಂಬ ಅಂಶವನ್ನು ಆದ್ಯ ಗಮನಕ್ಕೆ ತರಲಾಗಿದೆ, ಆ ಮೇರೆಗೆ ಸದರಿ ಆಕ್ಷೇಪಿತ ಕಂಡಿಕೆಯನ್ನು ಕೈ ಬಿಡುವಂತೆ ನಿವೇದಿಸಲಾಗಿದೆ. |
| **II. ಕಾಮಗಾರಿ ಬಿಲ್ಲುಗಳಲ್ಲಿ ನಿಯಮಾನುಸಾರ 'ಜಿಎಸ್‌ಟಿ' ಮೊಬಲಗನ್ನು ಕಟಾವಣೆ ಮಾಡದಿರುವ ಬಗೆ:–**<br><br>ರಾಷ್ಟ್ರೀಯ ಉಚ್ಛತಮ ಶಿಕ್ಷಾ ಅಭಿಯಾನ (RUSA) ಯೋಜನೆಯಡಿಯಲ್ಲಿ ಮೆ॥ ಬಿ.ಎಸ್.ಆರ್ ಇನ್ಫ್ರಾಟೆಕ್ ಇಂಡಿಯಾ ಲಿಮಿಟೆಡ್, ಬೆಂಗಳೂರುವರ ಮೂಲಕ ಕಟ್ಟಡ ನಿರ್ಮಾಣ ಕಾಮಗಾರಿಯನ್ನು ಕೈಗೊಳ್ಳಲಾಗಿದ್ದು 2017–18ನೇ ಸಾಲಿಗೆ ಒಟ್ಟು ರೂ.5,52,86,001/–ಗಳ ವೆಚ್ಚವನ್ನು ಭರಿಸಲಾಗಿದೆ ಕೇಂದ್ರ ಸರ್ಕಾರದ ಜಿ.ಎಸ್.ಟಿ ನಿಯಮಾವಳಿಗಳನ್ವಯ ಶೇಕಡಾ 1+1=2% ರಂತೆ ಕಾಮಗಾರಿಯ ಮೂಲ ಬಿಲ್ಲುಗಳಲ್ಲಿ ಜಿ.ಎಸ್.ಟಿ ಮೊಬಲಗು ರೂ.11,05,720/–ಗಳನ್ನು ಕಟಾಯಿಸಿ ವಾಣಿಜ್ಯ ತೆರಿಗೆ ಇಲಾಖೆಗೆ/ತತ್ಸಂಬಂಧ ಲೆಕ್ಕ ಶೀರ್ಷಿಕೆಗೆ ಜಮೆ ಮಾಡಬೇಕಾಗಿರುತ್ತದೆ ಆದರೆ ಯಾವುದೇ ಜಿ.ಎಸ್.ಟಿ ಮೊಬಲಗನ್ನು ಕಟಾಯಿಸಿರುವುದು ಲೆಕ್ಕ ತನಿಖೆಯಲ್ಲಿ ಕಂಡುಬಂದಿರುವುದಿಲ್ಲ ಈ ಸಂಬಂಧ ನ್ಯೂನತೆಗಳ ಪಟ್ಟಿಯ ಕ್ರಮ ಸಂಖ್ಯೆ:17ರಲ್ಲಿ | 2017–18 ನೇ ಸಾಲಿನ ಲೆಕ್ಕ ಪರಿಶೋಧನಾ ವರದಿಯ ಕಂಡಿಕೆ 153 ರಲ್ಲಿ ಜಿ.ಎಸ್.ಟಿ ಮೊತ್ತ ರೂ.11,05,720/–ಗಳನ್ನು ವಸೂಲಾತಿಗೆ ಸೂಚಿಸಿರುವ ಮೇರೆಗೆ ಮೆ॥ ಬಿ.ಎಸ್.ಆರ್ ಇನ್ಫ್ರಾಟೆಕ್ ಇಂಡಿಯಾ ಲಿಮಿಟೆಡ್, ಬೆಂಗಳೂರು ಇವರಿಂದ ಈ ಕೆಳಕಂಡ ವಿವರಗಳಲ್ಲಿ ರೂ.11,05,720/–ಗಳನ್ನು ವಸೂಲಿಸಿ ಸಂಬಂಧ ಪಟ್ಟ ಖಾತೆಗೆ ಜಮಾ ಮಾಡಲಾಗಿದೆ<br><br>ವಿವರ ಈ ಕೆಳಕಂಡಂತಿರುತ್ತದೆ<br><br>ಕ್ರ ಸಂ / ಕಟಾಯಿಸಿದ ವಿವರ / central Tax / State Tax / Total<br>1 / ಚೆಕ್ ಸಂ:907977 / 552860 / 552860 / 1105720 |

| | | | | |
|---|---|---|---|---|
| ವಿವರಿಸಿ ಲೆಕ್ಕ ತನಿಖಾ ವಿಚಾರಣಾ ಪತ್ರಗಳ ಸಂಖ್ಯೆ: 1) 02/22.04.2019 2) 7/30.04.2019 ಮತ್ತು 3) 21/16.05.2019ರ ಮೂಲಕ ಕೋರಲಗಿರುತ್ತದೆ ಸದರಿ ವಿಚಾರಣಾ ಪತ್ರಗಳಿಗೆ ಸಂಬಂಧಿಸಿದಂತೆ ಹಣಕಾಸು ಅಧಿಕಾರಿಯವರು ಯಾವುದೇ ವಿವರಗಳನ್ನು ಹಾಜರುಪಡಿಸಿರುವುದಿಲ್ಲ ಸರ್ಕಾರಕ್ಕೆ ಸಲ್ಲಬೇಕಾದ ಶಾಸನಬದ್ಧ ಕಟಾವಣೆಗಳನ್ನು ಕಟಾಯಿಸಿ ಸರ್ಕಾರಕ್ಕೆ ಜಮಾ ಮಾಡಬೇಕಾಗಿದ್ದು ಹಣ ಪಾವತಿಸುವ ಅಧಿಕಾರಿಯವರ ಜವಾಬ್ದಾರಿ/ಹೊಣೆಗಾರಿಕೆಯಾಗಿರುತ್ತದೆ. ಅಂದರೆ ಹಣಕಾಸು ಅಧಿಕಾರಿಯವರ ಜವಾಬ್ದಾರಿಯಾಗಿರುತ್ತದೆ ಆದ್ದರಿಂದ ಮೂಲ ಬಿಲ್ಲುಗಳಲ್ಲಿ ಕಟಾಯಿಸದೇ ಇರುವ ಜಿಎಸ್‌ಟಿ ಮೊಬಲಗನ್ನು ಗುತ್ತಿಗರದಾರರಾದ ಮೆ॥ ಬಿ.ಎಸ್.ಆರ್ ಇನ್ಫ್ರಾಟೆಕ್ ಇಂಡಿಯಾ ಲಿಮಿಟೆಡ್, ಬೆಂಗಳೂರುರವರಿಂದ ಜಿ.ಎಸ್.ಟಿ ಮೊಬಲಗು ರೂ.11,05,720/–ಗಳನ್ನು ಹುತ್ತಿಗೆದಾರಿಂದ ವಸೂಲಿಸಿ ಸರ್ಕಾರದ ಲೆಕ್ಕ ಶೀರ್ಷಿಕೆಗೆ ಜಮೆ ಮಾಡಿ ವಿವರಗಳನ್ನು ಲೆಕ್ಕ ತನಿಖೆಗೆ ಹಾಜರುಪಡಿಸಲು ಸೂಚಿಸಿದೆ. | | ದಿನಾಂಕ:25.09.2020 | | |

**III. ಕಾಮಗಾರಿ ಬಿಲ್ಲುಗಳಲ್ಲಿ ನಿಯಮಾನುಸಾರ ಖಾಲಿ ಜಾಗ , ಸಂಕುಚಿತತೆ ಮತ್ತು ವಾಟರ್ ಛಾರ್ಜಸ್ ಮೊಬಲಗನ್ನು ಕಟಾವಣೆ ಮಾಡದಿರುವ ಬಗ್ಗೆ:–**

ರಾಷ್ಟ್ರೀಯ ಉಚ್ಚತಮ ಶಿಕ್ಷಾ ಅಭಿಯಾನ (RUSA) ಯೋಜನೆಯಡಿಯಲ್ಲಿ ಮೆ॥ ಬಿ.ಎಸ್.ಆರ್ ಇನ್ಫ್ರಾಟೆಕ್ ಇಂಡಿಯಾ ಲಿಮಿಟೆಡ್, ಬೆಂಗಳೂರುವರ ಮೂಲಕ ಕಟ್ಟಡ ನಿರ್ಮಾಣ ಕಾಮಗಾರಿಯನ್ನು ಕೈಗೊಳ್ಳಲಾಗಿದ್ದು ಕರ್ನಾಟಕ ಲೋಕೋಪಯೋಗಿ ಇಲಾಖಾ ದರಪಟ್ಟಿಯಲ್ಲಿ ನಿರ್ದಿಷ್ಟಪಡಿಸಿರುವಂತೆ ನಿಯಮಾನುಸಾರ ಖಾಲಿ ಜಾಗ ಸಂಕುಚಿತ ಮತ್ತು ವಾಟರ್ ಛಾರ್ಜಸ್ ಮೊಬಲಗನ್ನು ಕಟಾವಣೆ ಮಾಡಬೇಕಾಗಿರುತ್ತದೆ, ಈ ಸಂಬಂಧ ನ್ಯೂನತೆಗಳ ಪಟ್ಟಿಯ ಕ್ರಮ ಸಂಖ್ಯೆ:19ರಲ್ಲಿ ವಿವರಸಿ ವಿಚಾರಣಾ ಪತ್ರಗಳ ಸಂಖ್ಯೆ: 1) 02/22.04.2019 2) 7/30.04.2019 ಮತ್ತು 3) 21/16.05.2019ರ ಮೂಲಕ ಕೋರಲಗಿರುತ್ತದೆ ವಿವರಗಳನ್ನು/ದಾಖಲಾತಿಗಳನ್ನು (ಗುತ್ತಿಗೆ ಕರಾರು ಒಪ್ಪಂದದ ಪ್ರತಿ, ಟೆಂಡರ್ ಕಡತ, ಅಳತೆ ಪುಸ್ತಕ/ಇ–ಅಳತೆ ಪುಸ್ತಕಗಳನ್ನು) ಲೆಕ್ಕ ತನಿಖೆಗೆ ಹಾಜರುಪಡಿಸದೇ ಇರುವುದರಿಂದ ಸದರಿ ಕಟಾವಣೆಗಳ ಬಗ್ಗೆ ಅಗತ್ಯ ಕ್ರಮವಹಿಸುಂತೆ ಸೂಚಿಸಲಾಗಿದೆ.

ಈ ಸಂಬಂಧ ಸದರಿ ವಸೂಲಾತಿ ಮೊತ್ತ ರೂ.11,05,720/–ಗಳನ್ನು ಇತ್ಯರ್ಥಗೊಳಿಸಲು ನಿವೇದಿಸಲಾಗಿದೆ.

ಮೆ॥ ಬಿ.ಎಸ್.ಆರ್ ಇನ್ಫ್ರಾಟೆಕ್ ಇಂಡಿಯಾ ಲಿಮಿಟೆಡ್, ಬೆಂಗಳೂರು ಇವರ ಮೂಲಕ ಕಟ್ಟಡ ನಿರ್ಮಾಣ ಕಾಮಗಾರಿ ಕೈಗೊಂಡಿರುವ ಸಂಬಂಧ 2017–18ನೇ ಸಾಲಿನ ವಾರ್ಷಿಕ ಲೆಕ್ಕಪರಿಶೋಧನಾ ವರದಿಯ ಕಂಡಿಕೆ ಸಂಖ್ಯೆ:153(III) ರ ಕಾಮಗಾರಿ ಬಿಲ್ಲುಗಳಲ್ಲಿ ನಿಯಮಾನುಸಾರ ಖಾಲಿ ಜಾಗ (viods) ಸಂಕುಚಿತತೆ (shrinkage) ಮತ್ತು ವಾಟರ್ ಛಾರ್ಜಸ್ ಮೊಬಲಗು ಯಾವುದು ಅನ್ವಯಿಸುವುದಿಲ್ಲ ಹಾಗೂ ಗುತ್ತಿಗೆ ಕರಾರು ಒಪ್ಪಂದದ ಪ್ರತಿ ಟೆಂಡರ್ ಕಡತ ಅಳತೆ ಪುಸ್ತಕ/ಇ–ಅಳತೆ ಪುಸ್ತಕಗಳ ವಿವರಗಳನ್ನು ಮಾಹಿತಿಗಾಗಿ ಇದರೊಂದಿಗೆ ಲಗತ್ತಿಸಿಲಾಗಿದೆ, ಹಾಗೂ ಸದರಿ ಆಕ್ಷೇಪಿತ ಕಂಡಿಕೆಯನ್ನು ಕೈ ಬಿಡುವಂತೆ ನಿವೇದಿಸಲಾಗಿದೆ.

**154. ಸಾದಿಲ್ವಾರು ವೆಚ್ಚಗಳ ವೋಚರ್‌ಗಳ ಪರಿಶೀಲನೆಯಲ್ಲಿ ಜಿ,ಎಸ್,ಟಿ ಮತ್ತು ಆದಾಯ ತೆರಿಗೆ ಕಟಾಯಿಸದಿರುವ ಬಗ್ಗೆ:– (ಬಹದ್ದೂರ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಸ್ಟಡೀಸ್)**

ಬಿ,ಎನ್,ಬಹದ್ದೂರ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್‌ನಲ್ಲಿ ಪಾವತಿಸಿರುವ ಓಚರ್‌ಗಳನ್ನು ಪರಿಶೀಲಿಸಿದೆ ಪಾವಿತಿಸಿರುವ ಓಚರ್‌ಗಳಲ್ಲಿ ಈ ಕೆಳಕಂಡಂತೆ ಶಾಸನಬದ್ಧ ಕಟಾವಣೆಗಳನ್ನು ಮಾಡಿರುವುದಿಲ್ಲ

**(Partial self finance system) PSFS**

| ಮೊತ್ತ (ರೂ.ಗಳಲ್ಲಿ) | | | | | | |
|---|---|---|---|---|---|---|
| ಕ್ರ ಸಂ | ಬಿ,ಆರ್,ನಂ ದಿನಾಂಕ | ಪಾವತಿಸಬೇಕಾದ ಮೊತ್ತ | ಪಾವತಿಸಿರುವುದು | ಜಿ,ಎಸ್,ಟಿ ಕಟಾಯಿಸದಿರುವುದು | ಪಾವತಿಸಬೇಕಾದ್ದು | ಪಾವತಿದಾರರ ವಿವರ |
| 1 | 31/17–18 | 5600 | 5488 | 112 | 5376 | Global copier toner |
| 2 | 32/17–18 | 5600 | 5488 | 112 | 5376 | Global copier |
| 3 | 33/17–18 | 17552 | 17201 | 351 | 16850 | Creative solution |
| 4 | 34/17–18 | 27140 | 26597 | 543 | 26054 | Gentile electricals |
| 5 | 36/17–18 | 30090 | 29488 | 602 | 28886 | Silicam contrals |
| 6 | 40/10.3.18 | 45430 | 44521 | 903 | 44112 | M/S tech systems |
| 7 | 43/15.3.18 | 84301 | 83203 | 1698 | 81505 | Adithya electrical |
| 8 | 44/15.3.18 | 15918 | 15918 | – | 15918 | Fuel |
| 9 | 45/26.3.18 | 92773 | 90198 | 1855 | 89063 | Stationary bill |
| 10 | 48/26.3.18 | 122995 | 120535 | 2460 | 118075 | National coference |
| 11 | 49/26.3.18 | 925300 | 906794 | 18506 | 888288 | National coference |
| 12 | 50/28.3.18 | 935370 | 916663 | 18707 | 897956 | National coference |
| 13 | 51/28.3.18 | 620420 | 608012 | 1248 | 595604 | National coference |
| | | | ಒಟ್ಟು | **58,263** | | |

ಬಿಲ್ಲುಗಳಲ್ಲಿ ಕಟಾಯಿಸದಿರುವ ಜಿ,ಎಸ್,ಟಿ ಮೊಬಲಗು **ರೂ.58,263/–ಗಳನ್ನು ವಸೂಲಾತಿಗೆ ಸೂಚಿಸಿದೆ**

2017–18ನೇ ಸಾಲಿನಲ್ಲಿ ಜಿ,ಎಸ್,ಟಿ ಅನುಷ್ಠಾನಗೊಂಡಿದ್ದು ಬಿಲ್ಲುಗಳಲ್ಲಿ ಜಿ,ಎಸ್,ಟಿ ಕಡಿತಗೊಳಿಸುವ ಬಗ್ಗೆ ಸ್ಪಷ್ಟ ಮಾಹಿತಿ ಲಭ್ಯವಿಲದ ಕಾರಣದಿಂದಾಗಿ ಸದರಿ ಬಿಲ್ಲುಗಳಲ್ಲಿ ಜಿ,ಎಸ್,ಟಿ ಕಡಿತಗೊಳಿಸಿರುವುದಿಲ್ಲವಾಗಿ ನಿವೇದಿಸುತ್ತಾ ಕಂಡಿಕೆಯಲ್ಲಿ ಪ್ರಸ್ತಾಪಿಸಿರುವ ಬಿ,ಆರ್,ನಂ ಗಳ ಸಂಬಂಧಪಟ್ಟ ಸಂಸ್ಥೆಗಳಿಗೆ ವಿಭಾಗದ ಪತ್ರಸಂಖ್ಯೆ:–ಎಂ.ಜಿ/ಎಂ,ಬಿ,ಎ/492/2019–20 ದಿನಾಂಕ:02.01.2020ರಲ್ಲಿ ಪತ್ರ ವ್ಯವಹಾರ ನಡೆಸಿ ಜಿ,ಎಸ್,ಟಿ ಮೊತ್ತವನ್ನು ಸರ್ಕಾರಕ್ಕೆ ಪಾವತಿಸಿರುವ ಬಗ್ಗೆ ಮಾಹಿತಿಯನ್ನು ಕೋರಲಾಗಿ **ಕಂಡಿಕೆಯಲ್ಲಿನ ಕ್ರಮ ಸಂಖ್ಯೆ:–01 ರಿಂದ 07 ಮತ್ತು ಕ್ರಮ ಸಂಖ್ಯೆ:–09 ರಿಂದ 13** ರವರೆಗಿನ ಪಾವತಿದಾರರು ಜಿ,ಎಸ್,ಟಿ ಸಂಖ್ಯೆಯನ್ನು ಹೊಂದಿದ್ದು ಅವರು ಸಲ್ಲಿಸಿರುವ ವಾರ್ಷಿಕ ಆದಾಯ ತೆರಿಗೆ ರಿಟರ್ನ್ಸ್‌ನಲ್ಲಿ ತೆರಿಗೆ ಪಾವತಿಸಿರುವ ವಿವರಗಳ ಪ್ರತಿ ಲಗ್ತತಿಸಿ ಸಲ್ಲಿಸಿದೆ **ಕ್ರಮ ಸಂಖ್ಯೆ:–08ರ ರೂ.15,918/–ಗಳು ಇಂಧನ ವೆಚ್ಚದ ಬಿಲ್ಲು** ಆಗಿರುವುದಾಗಿ ನಿವೇದಿಸುತ್ತಾ **ಕಂಡಿಕೆಯಲ್ಲಿನ ವಸೂಲಾತಿ** ಮೊತ್ತ **ರೂ.58,263/ಗಳನ್ನು** ತೀರುವಳಿಗೊಳಿಸುವಂತೆ ಕೋರಿದೆ.

**155. ಔಷಧಿ ಖರೀದಿ ಬಿಲ್ಲುಗಳಲ್ಲಿ ಅಂಗೀಕೃತ ದರದಲ್ಲಿ ಮೌಲ್ಯವರ್ಧಿತ ತೆರಿಗೆಯನ್ನು ಸೇರಿಸಿದ್ದರೂ ಸಹ ಮತ್ತೊಮ್ಮೆ ಸರಕು ಸೇವಾ ತೆರಿಗೆಯನ್ನು ಪಾವತಿಸಿರುವುದು:– (ಆರೋಗ್ಯ ಕೇಂದ್ರ ಮಾನಸ ಗಂಗೋತ್ರಿ)**

ಆರೋಗ್ಯ ಕೇಂದ್ರ ಮಾನಸ ಗಂಗೋತ್ರಿ ಮೈಸೂರು ವಿಶ್ವವಿದ್ಯಾನಿಲಯ ಇಲ್ಲಿನ 2017–18ನೇ ಸಾಲಿನ ಲೆಕ್ಕಪರಿಶೋಧನೆಯಲ್ಲಿ ಹಾಜರುಪಡಿಸಿದ ಔಷಧಿ ಖರೀದಿ ವೋಚರ್‌ಗಳನ್ನು ಪರಿಶೀಲಿಸಲಾಗಿ ಡಿಸೆಂಬರ್–2017ರ ಮಾಹೆಯವರೆಗೂ 2016–17ನೇ ಸಾಲಿನಲ್ಲಿ ಮಾಡಿಕೊಂಡ ದರ ಒಪ್ಪಂದದ ಅಮಗಿಕೃತ ದರದಲ್ಲಿ ಔಷಧಿಗಳನ್ನು ಖರೀದಿಸಲಾಗಿದೆ (ಆದೇಶ

ಆರೋಗ್ಯ ಕೇಂದ್ರ ಮಾನಸ ಗಂಗೋತ್ರಿಯ ಔಷಧಿ ಖರೀದಿ ಬಿಲ್ಲುಗಳಲ್ಲಿ ಅಂಗೀಕೃತ ದರದಲ್ಲಿ ಮೌಲ್ಯವರ್ಧಿತ ತೆರಿಗೆಯನ್ನು ಸೇರಿಸಿದ್ದರೂ ಸಹ ಮತ್ತೊಮ್ಮೆ ಸರಕು ಸೇವಾ ತೆರಿಗೆಯನ್ನು ಸೇರಿಸಿ ಪಾವತಿಸಿರುವುದರಿಂದ ಶೇ.5.5 ರಷ್ಟು ಹೆಚ್ಚುವರಿಯಾಗಿ ಪಾವತಿಸಿರುವ ಮೊತ್ತವನ್ನು ಸಂಬಂಧಿಸಿದ ಸರಬರಾಜುದಾರರಿಂದ ವಸೂಲಾತಿಗೆ ಸೂಚಿಸಲಾಗಿರುತ್ತದೆ

ಸಂ.ಜಿಎಲ್6/162/2007–08, ದಿನಾಂಕ:07.06.2016) ಆದರೆ ಅಂಗೀಕೃತ ದರದಲ್ಲಿ ಮೌಲ್ಯವರ್ಧಿತ ತೆರಿಗೆಯು ಸೇರಿದ್ದು ಜುಲೈ–2017ರ ಮಾಹೆಯಲ್ಲಿ ಸರಕು ಸೇವಾ ತೆರಿಗೆಯನ್ನು ಶೇ 12 ರಂತೆ ಸೇರಿಸಿ ಪಾವತಿಸಲಾಗಿದೆ ಈಗಾಗಲೇ ಶೇ 5.5% ರಷ್ಟು ಮೌಲ್ಯವರ್ಧಿತ ತೆರಿಗೆಯು ಸೇರಿದ್ದರೂ ಸಹ ಮೌಲ್ಯವರ್ಧಿತ ತೆರಿಗೆ ಕಳೆಯದೆ ಮತ್ತೊಮ್ಮೆ ಶೇ 12% ರಂತೆ ಜಿ.ಎಸ್.ಟಿ ಯನ್ನು ಸೇರಿಸಿ ಪಾವತಿಸಿರುವುದರಿಂದ ಬಿಲ್ಲಿನ ಮೊತ್ತದ ಶೇ 5.5% ರಷ್ಟು ಹೆಚ್ಚುವರಿಯಾಗಿ ಪಾವತಿಸಿದ್ದಂತಾಗಿದ್ದು ವಿಶ್ವವಿದ್ಯಾನಿಲಯಕ್ಕೆ ನಷ್ಟ ಉಂಟಾಗಿರುತ್ತದೆ ವಿವರ ಕೆಳಗಿನಂತಿದೆ,

ಹೆಚ್ಚುವರಿಯಾಗಿ ಪಾವತಿಸಲಾಗಿರುವ **ಮೊತ್ತ ರೂ.11,418/–ಗಳನ್ನು ಸಂಬಂಧಿಸಿದ ಸರಬರಾಜುದಾರರಿಂದ ವಸೂಲಾತಿಗೆ ಸೂಚಿಸಿದೆ.**

| ಕ್ರ ಸಂ | ಓಚರ್ ಸಂಖ್ಯೆ | ಬಿಲ್ ಸಂಖ್ಯೆ | ಸರಬರಾಜುದಾರರು | ವಾಸ್ತವಿಕವಾಗಿ ಪಾವತಿಸಬೇಕಾದ ಮೊತ್ತ (ರೂ.ಗಳಲ್ಲಿ) | ಪಾವತಿಸಲಾಗಿರುವ ಮೊತ್ತ | ಹೆಚ್ಚುವರಿಯಾಗಿ ಪಾವತಿಸಿರುವ ಮೊತ್ತ (ರೂ.ಗಳಲ್ಲಿ) |
|---|---|---|---|---|---|---|
| 1 | 13/17–18 | 000954 24.7.17 | Vinay Associates | 93088 | 98506 | 5418 |
| 2 | 12/17–18 | 129 29.7.17 | Manoj pharma | 103054 | 109054 | 6000 |
| | | | | | **ಒಟ್ಟು** | **11418** |

ಕಂಡಿಕೆಯಲ್ಲಿ ಪ್ರಸ್ತಾಪಿಸಿರುವಂತೆ **ಕ್ರಮ ಸಂಖ್ಯೆ:–1 ರ ಮೆ॥ ವಿನಯ್ ಅಸೋಸಿಯೇಟ್ಸ್‌ರವರಿಂದ** ಧನಾದೇಶ ಸಂಖ್ಯೆ:340785 ದಿನಾಂಕ:10.04.2021 ರಲ್ಲಿ ರೂ.5,418/–ಗಳು ಮತ್ತು **ಕ್ರಮ ಸಂಖ್ಯೆ:2ರ ಮೆ॥ ಮನೋಜ್ ಫಾರ್ಮ್‌ರವರಿಂದ ನಗದು ರೂ.6,000/–ಗಳನ್ನು** ವಸೂಲಿಸಿ ಕ್ರಮವಾಗಿ ಚಲನ್ ನಂ:3158 ದಿನಾಂಕ:16.04.2021 ರಂದು ರೂ.5418/–ಗಳು ಮತ್ತು ಚಲನ್ ನಂ:3158 ದಿನಾಂಕ:–16.04.2021 ರಂದು ರೂ.5418/–ಗಳು ಮತ್ತು ಚಲನ್ ನಂ:31578 ದಿನಾಂಕ:16.04.2021 ರಂದು ರೂ.6000/–ಗಳು ಒಟ್ಟು ಸೇರಿದಂತೆ ಒಟ್ಟು **ಮೊತ್ತ ರೂ.11,418/–ಗಳನ್ನು ಸಾಮಾನ್ಯ ರೆವಿನ್ಯೂ ಖಾತೆಗೆ** ಜಮೆ ಮಾಡಲಾಗಿರುತ್ತದೆ. ಜಮಾ ಮಾಡಿರುವ ಚಲನ್ ಪ್ರತಿಗಳು ಮತ್ತು ಬ್ಯಾಂಕ್‌ಸ್ಕ್ರೋಲ್ ಪ್ರತಿಗಳನ್ನು ಲಗತ್ತಿಸಿ ಸಲ್ಲಿಸುತ್ತಾ **ಕಂಡಿಕೆಯ ವಸೂಲಾತಿ ಮೊತ್ತ ರೂ.11,418/–ಗಳನ್ನು ತೀರುವಳಿಗೊಳಿಸಬೇಕಾಗಿ ಕೋರಿದೆ.**

**156. ಮೆಸ್ ಬಿಲ್ಲು ಪಾವತಿಯಲ್ಲಿ ಆದಾಯ ತೆರಿಗೆ ಕಟಾಯಿಸದಿರುವುದು:– (ಗೌತಮ ವಿದ್ಯಾರ್ಥಿನಿಲಯ)**

2017–18ನೇ ಸಾಲಿನಲ್ಲಿ ಈ ಕೆಳಕಂಡಂತೆ ಮೆಸ್ ಬಿಲ್ಲುಗಳನ್ನು ಪಾವತಿಸಲಾಗಿದ್ದು ಇವುಗಳಲ್ಲಿ ಜನವರಿ–2018 ರಿಂದ ಮಾರ್ಚ್–2018 ಮಾಹೆಯವರೆಗೆ ಆದಾಯ ತೆರಿಗೆ ಕಟಾಯಿಸಿರುವುದಿಲ್ಲ ವಿವರ ಈ ಕೆಳಕಂಡಂತಿದೆ.

**ಮೊತ್ತ (ರೂ.ಗಳಲ್ಲಿ)**

| ಕ್ರ ಸಂ | ಮಾಹೆ | ಮೆಸ್ ಬಿಲ್ಲಿನ ಮೊಬಲಗು | ಆದಾಯ ತೆರಿಗೆ ಮೊತ್ತ | | |
|---|---|---|---|---|---|
| | | | ಕಟಾಯಿಸಬೇಕಾಗಿರುವುದು | ಕಟಾಯಿಸಿರುವುದು | ಬಾಕಿ (ವ್ಯತ್ಯಾಸ) |
| 1 | ಏಪ್ರಿಲ್ 2017 | 368900 | 8263 | 8263 | – |
| 2 | ಮೇ 2017 | 368900 | 8263 | 8263 | – |
| 3 | ಜೂನ್ 2017 | – | – | – | – |
| 4 | ಜುಲೈ 2017 | 127634 | 2857 | 2857 | – |

2017–18ನೇ ಸಾಲಿನಲ್ಲಿ ಗೌತಮ ವಿದ್ಯಾರ್ಥಿನಿಲಯದ 2018ರ ಜನವರಿ ಮಾಹೆಯಿಂದ ಮಾರ್ಚ್ ಮಾಹೆಯವರೆಗೆ ಮೆಸ್ ಬಿಲ್ಲುನ ಮೊಬಲಗಿನಲ್ಲಿ ಆದಾಯ ತೆರಿಗೆ ಕಟಾಯಿಸದಿರುವ ಬಗ್ಗೆ ಪ್ರಸ್ಥಾಪಿಸಿ ರೂ.23,142/–ಗಳನ್ನು ವಸೂಲಾತಿಗೆ ಸೂಚಿಸಿದೆ.

ಜನವರಿ 2018ರಿಂದ ಮಾರ್ಚ್ 2018ರವರೆಗಿನ ಮೆಸ್ ಬಿಲ್ಲುಗಳು ಮುಂದಿನ ಆರ್ಥಿಕ ವರ್ಷದಲ್ಲಿ ಮಂಜೂರಾದ ಕಾರಣದಿಂದ ಆದಾಯ ತೆರಿಗೆಯನ್ನು 2018–19ನೇ ಸಾಲಿನಲ್ಲಿ ಕಡಿತಗೊಳಿಸಿ ಮ್ಯಾನೇಜರ್ ಎಸ್.ಬಿ.ಐ ವಿಶ್ವವಿದ್ಯಾನಿಲಯದ ಕ್ಯಾಂಪಸ್ ರವರ ಹೆಸರಿಗೆ ಧನಾದೇಶ ಬರೆದು ಸಂದಾಯ ಮಾಡಲಾಗಿದ್ದು 2018ರ ಜನವರಿ ಮಾಹೆಯಿಂದ ಮಾರ್ಚ್ ಮಾಹೆಯವರಗಿನ ಮೆಸ್ ಬಿಲ್ಲುನ ಮೊಬಲಗಿನಲ್ಲಿ ಆದಾಯ ತೆರಿಗೆ ಕಡಿತಗೊಳಿಸಿರುವುದಾಗಿ ತಮ್ಮಲ್ಲಿ ನಿವೇದಿಸಲಾಗಿದೆ. 2018ರ ಫೆಬ್ರವರಿ ಮತ್ತು ಮಾರ್ಚ್ ಮಾಹೆಯ ಮೆಸ್ ಬಿಲ್ಲುಗಳಲ್ಲಿ ಶೇ 2ರಷ್ಟು ಆದಾಯ ತೆರಿಗೆ ಕಡಿತಗೊಳಿಸಿ ಬರೆದಿರುವ ಧನಾದೇಶ ಸಂಖ್ಯೆ

| | | | | | |
|---|---|---|---|---|---|
| 5 | ಆಗಸ್ಟ್ 2017 | 351022 | 7863 | 7863 | – |
| 6 | ಸೆಪ್ಟಂಬರ್ 2017 | 409932 | 9182 | 9182 | – |
| 7 | ಅಕ್ಟೋಬರ್ 2017 | 419900 | 9406 | 9406 | – |
| 8 | ನವಂಬರ್ 2017 | 419900 | 9406 | 9406 | – |
| 9 | ಡಿಸೆಂಬರ್ 2018 | 419900 | 9406 | 9406 | – |
| 10 | ಜನವರಿ 2018 | 344400 | 7714 | – | 7714 |
| 11 | ಫಬ್ರವರಿ 2018 | 344400 | 7714 | – | 7714 |
| 12 | ಮಾರ್ಚ್ 2018 | 344400 | 7714 | – | 7714 |

ಏಪ್ರಿಲ್–2017 ರಿಂದ ಡಿಸೆಂಬರ್–2017ರವರೆಗಿನ ಮೊಬಲಗು ರೂ.64,646/– ಮಾತ್ರ ಕಟಾಯಿಸಲಾಗಿರುತ್ತದೆ ಜನವರಿ 2018 ರಿಂದ ಮಾರ್ಚ್ 2018 ರವರೆಗೆ ಆದಾಯ ತೆರಿಗೆ ರೂ.23,142/–ಗಳನ್ನು ಕಟಾಯಿಸದೆ ಇರುವುದರಿಂದ ಸದರಿ ಮೊಬಲಗು ರೂ.23,142/–ಗಳನ್ನು ವಸೂಲಾತಿಗೆ ಸೂಚಿಸಿದೆ.

ಮತ್ತು ಮೊತ್ತದ ವಿವರಗಳು. 1)ಧನಾದೇಶ ಸಂಖ್ಯೆ:623931, ದಿನಾಂಕ:22.05.2018 ರೂ.7,842/–ಗಳು ಮತ್ತು 2)ಧನಾದೇಶ ಸಂಖ್ಯೆ:623939 ದಿನಾಂಕ:27.07.2018 ರೂ.9,367/–ಗಳ ವಿವರಗಳನೊಳಗೊಂಡ ಜೆರಾಕ್ಸ್ ಪ್ರತಿಗಳನ್ನು ಲಗತ್ತಿಸಿ ಸಲ್ಲಿಸುತ್ತಾ **ವಸೂಲಾತಿ ಮೊತ್ತ ರೂ.23,142/–ಗಳನ್ನು ತೀರುವಳಿಗೊಳಿಸುವಂತೆ ಕೋರಿದೆ.**

**157. ಸಾದಿಲ್ವಾರು ವೆಚ್ಚಗಳ ಪಾವತಿಗಳಲ್ಲಿನ ನ್ಯೂನತೆಗಳ ಕುರಿತು :– (ಶೈಕ್ಷಣಿಕ ಬಹುಮಾಧ್ಯಮ ಸಂಶೋಧನಾ ಕೇಂದ್ರ)**

ಇ,ಎಂ,ಆರ್,ಸಿ ಕಛೇರಿಯಲ್ಲಿ ಸಾದಿಲ್ವಾರು ವೆಚ್ಚಗಳನ್ನು ಭರಿಸಲಾಗಿದ್ದು ಕೆಳಕಂಡ ಬಿಲ್ಲಿನಲ್ಲಿ ಆದಾಯ ತೆರಿಗೆ ಕಟಾಯಿಸಿರುವುದಿಲ್ಲ ವಿವರ ಇ ಕೆಳಕಂಡಂತಿವೆ.

| ವಿವರ | ಬಿಲ್ ಮೊತ್ತ (ರೂ.ಗಳಲ್ಲಿ) | ಆದಾಯ ತೆರಿಗೆ ಮೊಬಲಗು (ರೂ.ಗಳಲ್ಲಿ) |
|---|---|---|
| BR No 25/17-18 date:28.07.17 Rs 98000 Supply of HDD Seagate 2 tb backup plus 2.5 to EMRC from SV Info ways | 98000 | 1960.00 |
| **Total** | | **1960.00** |

ಸದರಿ ಮೊಬಲಗುನ್ನು **ರೂ.1,960/–ಗಳನ್ನು ಸರಬರಾಜುದಾರರಿಂದ ವಸೂಲಾತಿಗೆ ಸೂಚಿಸಿದೆ.**

ಕಂಡಿಕೆಯಲ್ಲಿ ಪ್ರಸ್ತಾಪಿಸಿರುವ ಸಾದಿಲ್ವಾರು ವೆಚ್ಚದ ಬಿಲ್ಲಿನ ಬಿ,ಆರ್,ನಂ:25/2017–18 ದಿನಾಂಕ:28.07.2017ರ ಒಟ್ಟು ಮೊತ್ತ ರೂ.98,000/–ಗಳಿಗೆ ಆದಾಯ ತೆರಿಗೆ ಬಾಬ್ತು **ರೂ.1960/–ಗಳನ್ನು** ಕಡಿತಗೊಳಿಸದಿರುವ ಬಗ್ಗೆ ಪ್ರಸ್ತಾಪಿಸಿ ಸರಬರಾಜುದಾರರಿಂದ ವಸೂಲಾತಿಗೆ ಸೂಚಿಸಲಾಗಿರುತ್ತದೆ.

ಈ ಸಂಬಂಧವಾಗಿ ದಿನಾಂಕ;13.07.2021 ರಂದು ಸದರಿ ಸರಬರಾಜುದಾರರಿಂದ **ರೂ.1960/–ಗಳನ್ನು** ವಸೂಲಿಸಿ ಇ.ಎಂ.ಆರ್.ಸಿ **ಕಛೇರಿಯ** ಮುಖ್ಯಾಂತರ ಆದಾಯ ತೆರಿಗೆ ಇಲಾಖೆಗೆ ಸಂದಾಯ ಮಾಡಲಾಗಿರುತ್ತದೆ ಜಮಾ ಮಾಡಿರುವ ಚಲನ್ ಪ್ರತಿ ಮತ್ತು ಗಣಕೀಕೃತ ರಶೀದಿಯ ಪ್ರತಿಯನ್ನು ಲಗತ್ತಿಸಿ ಸಲ್ಲಿಸುತ್ತಾ **ಕಂಡಿಕೆಯ ವಸೂಲಾತಿ ಮೊತ್ತ ರೂ.1960/–ಗಳನ್ನು ತೀರುವಳಿಗೊಳಿಸಬೇಕಾಗಿ ಕೋರಿದೆ.**

| | |
|---|---|
| **ಎ.ಸಿ/ಎನ್.ಡಿ.ಸಿ/ಡಿ.ಸಿ ಬಿಲ್ಲು (A.C/N.D.C/D.C Bill)**<br><br>**158. 2017–18ನೇ ಸಾಲಿನಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ವಿವಿಧ ವಿಭಾಗಗಳ ಅಧಿಕಾರಿಗಳು ಎ.ಸಿ ಬಿಲ್ಲುಗಳ ಮೂಲಕ ಪಡೆಯಲಾದ ಮುಂಗಡ ಹಣಕ್ಕೆ ಎನ್,ಡಿ,ಸಿ ಹೊಂದಾಣಿಕೆಯಾಗದಿರುವುದು :– (ಹಣಕಾಸು ವಿಭಾಗ)**<br><br>2017–18ನೇ ಸಾಲಿನಲ್ಲಿ ವಿಶ್ವವಿದ್ಯಾನಿಲಯದ ವಿವಿಧ ವಿಭಾಗಗಳ ಅಧಿಕಾರಿಗಳಿಗೆ ಎ,ಸಿ ಬಿಲ್ಲುಗಳ ಮೂಲಕ ಮುಂಗಡವನ್ನು ಪಾವತಿಸಲಾಗಿದೆ 2017–18ನೇ ಸಾಲಿನಿಂದ ಪ್ರಸ್ತುತ ಸಮಯದವರೆಗೂ ಮುಂಗಡ ಹಣಕ್ಕೆ ಎನ್,ಡಿ,ಸಿ ಬಿಲ್ಲುಗಳ ಹೊಂದಾಣಿಕೆಯಾಗದಿರುವುದನ್ನು ಲೆಕ್ಕ ತನಿಖೆಯಲ್ಲಿ ಗಮನಿಸಿದೆ. ಸಾದಿಲ್ವಾರು ವೆಚ್ಚದ ಕೈಪಿಡಿ ನಿಯಮ 36, 37ರಲ್ಲಿ ತಿಳಿಸಿದಂತೆ ಮುಂಗಡ ಪಡೆದ 1 ತಿಂಗಳೊಳಗಾಗಿ ಎನ್.ಡಿ.ಸಿ ಬಿಲ್ಲುಗಳನ್ನು ಸಲ್ಲಿಸಬೇಕಾಗಿರುತ್ತದೆ. ಇಲ್ಲವಾದಲ್ಲಿ ಮುಂಗಡ ಪಡೆದ ಅಧಿಕಾರಿಗಳ ವೇತನವನ್ನು ತಡೆಹಿಡಿದು ಆಡಳಿತಾತ್ಮಕ ಕ್ರಮ ತೆಗೆದುಕೊಂಡು ಮಡ್ಡಿಯೊಂದಿಗೆ ವಸೂಲಿಸಬೇಕಾಗಿರುತ್ತದೆ. ಸದರಿ ಪ್ರಕರಣಗಳಲ್ಲಿ ಹೊಂದಾಣಿಕೆ ಆಗದಿರುವುದರಿಂದ ಸಂಬಂಧಪಟ್ಟ ಅಧಿಕಾರಿಗಳನ್ನು ನೇರ ಜವಾಬ್ದಾರರನ್ನಾಗಿಸಿ ಮುಂಗಡ ಮೊತ್ತ ರೂ.9,87,597/– ಗಳನ್ನು ಬಡ್ಡಿ ಸಹಿತವಾಗಿ ವಸೂಲಿಸಿ ವಿಶ್ವವಿದ್ಯಾನಿಲಯದ ನಿಧಿಗೆ ಜಮೆ ಮಾಡಿ ವಿವರವನ್ನು ಲೆಕ್ಕ ಪರಿಶೋಧನೆಗೆ ಹಾಜರುಪಡಿಸಲು ಸೂಚಿಸಿದೆ ವಿವರವನ್ನು ಅನುಬಂಧ–84ರಲ್ಲಿ ನೀಡಿದೆ. | ರೂ.9,87,597/–ಗಳ ಮೊತ್ತವನ್ನು ಡ್ರಾ ಮಾಡಿ ಹೊಂದಾಣಿಕೆಯಾದ ಬಿಲ್ಲುಗಳನ್ನು (ಮಾಹಿತಿಯನ್ನು) ಪೂರಕ ದಾಖಲಾತಿಗಳೊಂದಿಗೆ ಲೆಕ್ಕಪರಿಶೋಧನೆಗೆ ಹಾಜರು ಪಡಿಸಿರುವುದಿಲ್ಲವೆಂಬುದಾಗಿ ಆಕ್ಷೇಪಿಸಿ ಬಡ್ಡಿ ಸಹಿತವಾಗಿ ಮುಂಗಡ ಮೊತ್ತ ರೂ. 9,87,597/–ಗಳನ್ನು ಸಂಬಂಧಪಟ್ಟವರಿಂದ ವಸೂಲಿಸುವಂತೆ ಕಂಡಿಕೆ 158ರಲ್ಲಿ ಪ್ರಸ್ತಾಪಿಸಲಾಗಿದೆ<br><br>ಸದರಿ ಮುಂಗಡ ಹಣವನ್ನು ವಿಶ್ವವಿದ್ಯಾನಿಲಯದ ತುರ್ತುಕಾರ್ಯ ಚಟುವಟಿಕೆಗಳಿಗೆ ಪಡೆದು ಸಂಬಂಧ ಪಟ್ಟ ಕಾರ್ಯ ನಿರ್ವಹಣೆಯನ್ನು ಅವಶ್ಯಕತೆಗನುಗುಣವಾಗಿ ನಿರ್ವಹಿಸಿ ವೆಚ್ಚವನ್ನು ಭರಿಸಿ ಸದರಿ ಮೊತ್ತಕ್ಕೆ ಹೊಂದಾಣಿಕೆ ಮಾಡಿ ಪೂರಕ ದಾಖಲಾತಿಗಳೊಂದಿಗೆ ಕಛೇರಿಗೆ ಸಲ್ಲಿಸಲಾಗಿರುತ್ತದೆ ಈ ಪೈಕಿ ಹಲವು ಎನ್,ಡಿ,ಸಿ ಬಿಲ್ಲುಗಳನ್ನು ಪೂರಕ ದಾಖಲಾತಿಯೊಂದಿಗೆ ಲೆಕ್ಕಪರಿಶೋಧನಾ ಸಮಯದಲ್ಲಿ ಲೆಕ್ಕಪರಿಶೋಧನಾ ತಂಡಕ್ಕೆ ಹಾಜರುಪಡಿಸಲಾಗಿತ್ತು ಆದರೂ ಲೆಕ್ಕ ಪರಿಶೋಧನಾ ತಂಡಕ್ಕೆ ಒದಗಿಸಲಾದ AC/NDC ಬಿಲ್ಲುಗಳ ವಿವರಗಳು ಮತ್ತೆ, ಲೆಕ್ಕಪರಿಶೋಧನಾ ಕಂಡಿಕೆಯಲ್ಲಿ ಪುನರಾವರ್ತನೆಯಾಗಿದ್ದು. ಪ್ರಸುತ್ತ ಸದರಿ ಮಾಹಿತಿಯನ್ನು ಸಹ ಇದರೊಂದಿಗೆ ಲಗತ್ತಿಸಲಾಗಿರುತ್ತದೆ.<br><br>ಮುಂದುವರಿದು ಕಂಡಿಕೆ 158ರ ಅನುಬಂಧದಲ್ಲಿ ಪ್ರಸ್ತಾಪಿಸಿರುವ ಮುಂಗಡ ಮೊತ್ತಕ್ಕೆ ಮಾಹಿತಿಯನ್ನು ಈ ಮೂಲಕ ಒದಗಿಸಲಾಗಿರುತ್ತದೆ.<br><br>ಈ ಹಿನ್ನೆಲೆಯಲ್ಲಿ ಸದರಿ ಮೊತ್ತ ರೂ. 9,87,597/–ಗಳ ವಸೂಲಾತಿಯನ್ನು ವಸೂಲಾತಿ ಕಂಡಿಕೆಯಿಂದ ಕೈ ಬಿಡುವಂತೆ ನಿವೇದಿಸಲಾಗಿದೆ. |

**159. ಮುಂಗಡ ಹಣವನ್ನು ಪಡೆದು ಖರ್ಚು ಮಾಡದೆ ಹಿಂದಿರುಗಿಸಿ ಲಭ್ಯವಾಗಿರುವ ಬ್ಯಾಂಕ್ ಬಡ್ಡಿ ಹಣವನ್ನು ಜಮೆ ಮಾಡದಿರುವುದು :-(ಹಣಕಾಸು ವಿಭಾಗ)**

2017-18ನೇ ಸಾಲಿನಲ್ಲಿ ಉಪಕುಲಸಚಿವರು ಎಸ್,ಸಿ/ಎಸ್,ಟಿ ಘಟಕ ಇವರು ಡಾ॥ ಬಿ,ಆರ್ ಅಂಬೇಡ್ಕರ್ ದಿನಾಚರಣೆ ನಡೆಸುವುದಕ್ಕಾಗಿ ಹಾಗೂ ವಿದ್ಯಾರ್ಥಿಗಳಿಗೆ ಭೋಜನ ವೆಚ್ಚಕ್ಕಾಗಿ ಒಟ್ಟು ರೂ.98,46,000/-ಗಳನ್ನು ಮುಂಗಡವಾಗಿ ಪಡೆದಿರುವ ವಿವರವನ್ನು ಅನುಬಂಧ-85ರಲ್ಲಿ ನೀಡಲಾಗಿದೆ ಮುಂಗಡವಾಗಿ ಪಡೆದ ಮೊತ್ತವನ್ನು ಉಪಕುಲಸಚಿವರು ಎಸ್,ಸಿ/ಎಸ್,ಟಿ ಘಟಕ ರವರ ಖಾತೆಗೆ ಜಮೆ ಮಾಡಿಕೊಂಡಿದ್ದು ಸುಮಾರು 4 ತಿಂಗಳ ನಂತರ ಖರ್ಚು ಮಾಡದೆ ಜಿ,ಆರ್,ಎ ಖಾತೆಗೆ ಹಿಂದಿರುಗಿಸಲಾಗಿರುತ್ತದೆ. ಆದರೆ ಉಪಕುಲಸಚಿವರ ಖಾತೆಯಲ್ಲಿ ಜಮೆ ಮಾಡಿಕೊಂಡಿರುವ ಅವಧಿಗೆ ಅರ್ಜಿಸಲಾದ ಬಡ್ಡಿಯ ಮೊತ್ತವನ್ನು ಜಿ,ಆರ್,ಎ ಖಾತೆಗೆ ಹಿಂದಿರುಗಿಸಬೇಕಾಗಿರುತ್ತದೆ ಆದರೆ ಮುಂಗಡ ಪಡೆದ ಮೊತ್ತವನ್ನು ಮಾತ್ರ ಹಿಂದಿರುಗಿಸದ್ದು, ಬ್ಯಾಂಕ್‌ನಿಂದ ನೀಡಿದ ಬಡ್ಡಿಯ ಮೊತ್ತವನ್ನು ಹಿಂದಿರುಗಿಸದೆ ಇರುವುದರಿಂದ ಕಛೇರಿಯ ಮುಖ್ಯಸ್ಥರು ಸೂಕ್ತ ಕ್ರಮವಹಿಸಿ ಬ್ಯಾಂಕ್‌ನಿಂದ ನೀಡಿದ ಬಡ್ಡಿಯನ್ನು ಜಿ,ಆರ್,ಎ ಖಾತೆಗೆ ಜಮಾ ಮಾಡಲಿ ಸೂಚಿಸಿದೆ.

2017-18ನೇ ಸಾಲಿನ ಲೆಕ್ಕ ಪರಿಶೋಧನಾವರದಿಯ ಕಂಡಿಕೆ 159ರಲ್ಲಿ ಪ್ರಸ್ತಾಪಿಸಿ ಆಕ್ಷೇಪಿಸಲಾದ ಈ ಕೆಳಕಂಡ ಮೊತ್ತಗಳಿಗೆ ಅರ್ಜಿಸಲಾದ ಬಡ್ಡಿಯ ಮೊತ್ತವನ್ನು ಬ್ಯಾಂಕಿಗೆ ಜಮೆ ಮಾಡಲಾದ ವಿವರ

| ಕ್ರ ಸಂ | ಧನಾದೇಶ ಸಂಖ್ಯೆ & ದಿನಾಂಕ | ಮೊಬಲಗು |
|---|---|---|
| 1 | 698947/13.04.2017 | 8,00,000 |
| 2 | 951735/08.12.2017 | 86,25,000 |
| 3 | 952289/31.01.2018 | 4,21,000 |
| | **ಒಟ್ಟು ರೂ** | **98,46,000** |

ಮೇಲ್ಕಂಡ ವಿವರಗಳಲ್ಲಿ ರೂ.98,46,000/-ಗಳನ್ನು ಮುಂಗಡ ಹಣವನ್ನು ಪಡೆದು ಡಾ॥ ಬಿ,ಆರ್ ಅಂಬೇಡ್ಕರ್‌ರವರ ದಿನಾಚರಣೆ ಹಾಗೂ ವಿದ್ಯಾರ್ಥಿಗಳ ಭೋಜನಾ ವೆಚ್ಚಕಾಗಿ ಹಣ ಪಡೆದು ಕಾರಣಾಂತರದಿಂದ ಖರ್ಚು ಮಾಡದೆ ಸದರಿ ಮೊತ್ತ ರೂ.98,46,000/-ಗಳನ್ನು ಜಿ,ಆರ್,ಎ ಖಾತೆಗೆ ಜಮೆ ಮಾಡಿದ್ದು ಈ ಅವಧಿಯಲ್ಲಿ ಅರ್ಜಿತವಾದ ಬಡ್ಡಿ ಮೊತ್ತ ರೂ.1,24,520/-ಗಳನ್ನು ಈ ಕೆಳಕಂಡ ವಿವರಗಳಲ್ಲಿ ವಿಶ್ವವಿದ್ಯಾನಿಲಯದ ಜಿ,ಆರ್,ಎ ಖಾತೆಗೆ ಜಮೆ ಮಾಡಲಾಗಿದೆ.

| ಕ್ರ ಸಂ | ಧನಾದೇಶ ಸಂಖ್ಯೆ & ದಿನಾಂಕ | ಮೊಬಲಗು |
|---|---|---|
| 1 | 432589/07.12.2018 | 1,12,255 |
| 2 | 432640/10.07.2020 | 300 |
| 3 | 104873/20.07.2021 | 11,965 |
| | **ಒಟ್ಟು ರೂ** | **1,24,520** |

ಈ ನಿಟ್ಟಿನಲ್ಲಿ ಸದರಿ ಕಂಡಿಕೆಯ ಆಕ್ಷೇಪಣೆಯನ್ನು ಕೈ ಬಿಡುವಂತೆ ನಿವೇದಿಸಲಾಗಿದೆ.

| | |
|---|---|
| **160. ಡಿ.ಸಿ ಬಿಲ್ಲುಗಳ ಮೂಲಕ ಭರಿಸಲಾದ ವೆಚ್ಚಗಳಿಗೆ ದರಪಟ್ಟಿಗಳನ್ನು ಹಾಜರುಪಡಿಸದಿರುವುದು :– (ಹಣಕಾಸು ವಿಭಾಗ)**<br><br>2017–18ನೇ ಸಾಲಿನ ಲೆಕ್ಕಪರಿಶೋಧನೆಯಲ್ಲಿ ಡಿ,ಸಿ ಬಿಲ್ಲುಗಳ ಮೂಲಕ ವಿವಿಧ ಉಪಕರಣಗಳು/ವಸ್ತುಗಳನ್ನು ರೂ.4,62,755/– ಮೊತ್ತಕ್ಕೆ ಖರೀಸಲಾಗಿರುವ ಕಡತಗಳನ್ನು ಪರಿಶೀಲಿಸಲಾಗಿ, ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ:ಆಇ/01/ಟಿಸಿಇ/2012, ಬೆಂಗಳೂರು ದಿನಾಂಕ:21.06.2012ರನ್ವಯ ರೂ.5000/–ಗಳಿಗೆ ಮೇಲ್ಪಟ್ಟು ರೂ.1,00,000/–ಗಳ ಮಿತಿಯೊಳಗೆ ದರಪಟ್ಟಿಯನ್ನು ಕರೆದು ಖರೀದಿ ಪ್ರಕ್ರಿಯೆ ಕೈಗೊಳ್ಳಬೇಕಾಗಿರುತ್ತದೆ ಈ ಸಂಬಂಧ ಕಡತಗಳನ್ನು ಹಾಜರುಪಡಿಸುವಂತೆ ಲೆಕ್ಕ ತಪಾಸಣಾ ವಿಚಾರಣೆ ಪತ್ರ ಸಂಖ್ಯೆ: (1) 64/19–20 ದಿನಾಂಕ:25.05.2019, (2) 119/2019–20 ದಿನಾಂಕ:27.06.2019 ಹಾಗೂ (3) 73/2019–20 ದಿನಾಂಕ:31.05.2019ರಲ್ಲಿ ಕೋರಲಾಗಿದ್ದು ಹಾಝುರುಪಡಿಸದಿರುವುದರಿಂದ ರೂ.4,62,755/–ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ ವಿವರಣೆಯನ್ನು ಅನುಬಂಧ–86ರಲ್ಲಿ ಲಗತ್ತಿಸಿದೆ. | ಡಿ ಸಿ ಬಿಲ್ಲುಗಳ ಮೂಲಕ ಭರಿಸಲಾದ ವೆಚ್ಚಗಳಿಗೆ ಸಂಬಂಧಿಸಿದ ಮೊತ್ತಕ್ಕೆ ದರ ಪಟ್ಟಿಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸಿರುವುದಿಲ್ಲವೆಂದು ಆಕ್ಷೇಪಿಸಿ ರೂ.4,62,755/–ಗಳನ್ನು ಕಂಡಿಕೆ 160 ರಲ್ಲಿ ಆಕ್ಷೇಪಣೆಯಲ್ಲಿಡಲಾಗಿದೆ ಹಾಗೂ ಸದರಿ ಕಂಡಿಕೆಗೆ ಸಂಬಂಧಿಸಿದಂತೆ ಅನುಬಂಧ–86ರಲ್ಲಿ ವಿವರ ನಿಡಲಾಗಿರುತ್ತದೆ. ಅನುಬಂಧ–86ರಲ್ಲಿ ಪ್ರಸ್ತಾಪಿಸಿರುವ ಬಿಲ್ಲುಗಳ ಮೊತ್ತಕ್ಕೆ ಸಂಬಂಧಿಸಿದ ಕೊಟೇಷನ್, ಲಾಗ್ ಬುಕ್ ಮುಂತಾದ ದಾಖಲಾತಿಗಳನ್ನು ಲೆಕ್ಕ ಪರಿಶೋಧನಾ ಸಂದರ್ಭದಲ್ಲಿ ಲೆಕ್ಕ ಪರಿಶೋಧನೆಗೆ ಹಾಜರು ಪಡಿಸಲಾಗಿತ್ತು ಆದಾಗ್ಯೂ ಕೆಲವು ಮೊತ್ತದ ಐಟಂಗಳಿಗೆ Original (ಮೂಲ ದಾಖಲು) ದಾಖಲಾತಿಗಳನ್ನು ಒದಗಿಸಿರುವುದಿಲ್ಲವೆಂದು ಆಕ್ಷೇಪಿಸಿ ರೂ.4,62,755/–ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ ಈ ಸಂಬಂಧ ಅನುಬಂಧ 86 ರಲ್ಲಿನ ಬಿಲ್ಲುಗಳಿಗೆ ಕಂಡಿಕೆಯಲ್ಲಿ ಕೇಳಲಾದ ಮಾಹಿತಿಯನ್ನು ಒದಗಿಸಲಾಗಿರುತ್ತದೆ ಹಾಗೂ ಸದರಿ ವಿವರವನ್ನು ಇದರೊಂದಿಗೆ ಲಗತ್ತಿಸಲಾಗಿದೆ.<br><br>ಈ ಹಿನ್ನಲೆಯಲ್ಲಿ ಕಂಡಿಕೆ 160 ರಲ್ಲಿ ಆಕ್ಷೇಪಿಸಿ, ಆಕ್ಷೇಪಣೆಯಲ್ಲಿಟ್ಟಿರುವ ಮೊತ್ತ ರೂ.4,62,775/–ಗಳನ್ನು ಆಕ್ಷೇಪಣೆಯಿಂದ ಕೈ ಬಿಡುವಂತೆ ನಿವೇದಿಸಲಾಗಿದೆ. |
| **161. 2017–18ನೇ ಸಾಲಿನಲ್ಲಿ ಎ.ಸಿ ಬಿಲ್ಲುಗಳ ಮೂಲಕ ಮುಂಗಡ ಪಡೆದ ಮೊತ್ತಕ್ಕೆ ವಿಳಂಬವಾಗಿ ಎನ್,ಡಿ,ಸಿ ಬಿಲ್ಲುಗಳ ಹೊಂದಾಣಿಕೆ ಮಾಡಿರುವುದು :– (ಹಣಕಾಸು ವಿಭಾಗ)**<br><br>2017–18ನೇ ಸಾಲಿನಲ್ಲಿ ವಿವಿಧ ವಿಭಾಗಗಳಲ್ಲಿನ ಅಧಿಕಾರಿಗಳಿಗೆ ಎ,ಸಿ ಬಿಲ್ಲುಗಳ ಮೂಲಕ ಮುಂಗಡ ಹಣ ರೂ.3,15,14,999/–ಗಳನ್ನು ಡ್ರಾ ಮಾಡಲಾಗಿದೆ ಸದರಿ ಮುಂಗಡ ಹಣಕ್ಕೆ ಹಣ ಪಡೆದ ಅಧಿಕಾರಿಗಳು ವಿಳಂಬವಾಗಿ ಎನ್,ಡಿ,ಸಿ ಬಿಲ್ಲುಗಳನ್ನು ಸಕ್ಷಮ ಪ್ರಾಧಿಕಾರಕ್ಕೆ ಸಲ್ಲಿಸಿರುತ್ತಾರೆ ವಿವರ ಅನುಬಂಧ–87ರಲ್ಲಿಇ ನೀಡಲಾಗಿದೆ ಸಾದಿಲ್ವಾರು ವೆಚ್ಚ ಕೈಪಿಡಿ ನಿಯಮ 36,37ರ ಪ್ರಕಾರ ಮುಂಗಡ ಪಡೆದ 1 ತಿಂಗಳೊಳಗಾಗಿ ಹೊಂದಾನಿಕೆ ಬಿಲ್ಲುಗಳನ್ನು ಸಲ್ಲಿಸಬೇಕಾಗಿರುತ್ತದೆ ಸದರಿ ಪ್ರಕಣಗಳಲ್ಲಿ ವಿಳಂಬವಾಗಿ ಸಲ್ಲಿಸಿರುವುದು ನಿಯಮಬಾಹಿರವಾದ ಕ್ರಮವಾಗಿರುತ್ತದೆ ವಿಳಂಬದ ಅವಧಿಗೆ ಸಂಬಂಧಿಸಿದ ಅಧಿಕಾರಿಗಳಿಂದ ಬಡ್ಡಿ ಹಣ ರೂ.4,99,462/–ಗಳನ್ನು ವಸೂಲಾತಿಗೆ ಸೂಚಿಸಿದೆ | ಅನುಬಂಧ–87 ಕಂಡಿಕೆ 161ರಲ್ಲಿ ಪ್ರಸ್ತಾಪಿಸಿರುವ ರೂ.3,15,14,999/–ಗಳ ಎಸಿ/ಎನ್,ಡಿ,ಸಿ ಬಿಲ್ಲುಗಳಿಗೆ ಸಂಬಂಧಿಸಿದಂತೆ ಮುಂಗಡ ಹಣ ಡ್ರಾ ಮಾಡಿ ನಿಗಧಿತ ಅವಧಿಯಲ್ಲಿ ಅಂದರೆ ಹಣ ಡ್ರಾ ಮಾಡಿದ ಒಂದು ತಿಂಗಳ ತರುವಾಯದಲ್ಲಿ ಹೊಂದಾಣಿಕೆ ಬಿಲ್ಲನ್ನು ಸಂಬಂಧ ಪಟ್ಟ ಖಾತೆ/ಶೀರ್ಷಿಕೆಗಳಿಗೆ ನಿರ್ವಹಣೆ ಮಾಡಬೇಕಾಗಿದ್ದು ಅವಧಿಯನ್ನು ಮೀರಿ ಬಿಲ್ಲುಗಳನ್ನು ಸಲ್ಲಿಸಿರುವುದರಿಂದ ವಿಳಂಬ ಅವಧಿಗೆ ದಂಡ ರೂಪದಲ್ಲಿ ಅನುಬಂಧ–87ರಲ್ಲಿ ನಮೂದಿಸಿರುವಂತೆ ರೂ.4,99,462/– ವಸೂಲಾತಿಗೆ ಸೂಚಿಸಲಾಗಿದೆ ಆದರೆ 2017–18ನೇ ಸಾಲಿನಲ್ಲಿ ಡ್ರಾ ಮಾಡಿದ ಮೊತ್ತ ರೂ.3,15,14,999/–ಗಳಿಗೆ ಸರಿಯಾದ ಅವಧಿಯೊಳಗೆ ಹೊಂದಾಣಿಕೆ ಮಾಡಲಾಗಿದೆ ಆದರೆ ಕೆಲವು ಸಂದರ್ಭಗಳಲ್ಲಿ ಬಿಲ್ಲುಗಳಿಗೆ ಕಾರಣಾಂತರದಿಂದ ಅಂದರೆ ಸಂಬಂಧಪಟ್ಟ ಇಲಾಖಾ ಮುಖ್ಯಸ್ಥರು ನಿಗಧಿತ ಅವಧಿಯಲ್ಲಿ |

ಬೇರೆ ಸ್ಥಳದಲ್ಲಿ ಕಾರ್ಯೋನ್ಮುಖರಾಗಿದ್ದ ಕಾರಣ ಹಾಗೂ ಬೇರೆ ಬೇರೆ ಇಲಾಖೆಗೆ ವರ್ಗಾವಣೆಯಾದ ಕಾರಣ ಹಾಗೂ ಇನ್ನಿತರೆ ಬೇರೆ ಕಾರ್ಯದಲ್ಲಿ ತೊಡಗಿಸಿಕೊಂಡಿದ್ದ ಕಾರಣ ಮತ್ತು ಬಿಲ್ಲಿಗೆ ಸಂಬಂಧಿಸಿದ ದರಪಟ್ಟಿ ಕರಾರು ಪತ್ರ, ದೃಢೀಕರಣಪತ್ರ, ಮತ್ತು ದಾಸ್ತಾನು ವಹಿಯ ನಿರ್ವಹಣೆಯ ಕಾರ್ಯಗಳಲ್ಲಿ ವಿಳಂಬವಾಗಿರುತ್ತದೆ ಅವಶ್ಯಕತೆಯ ಮೇರೆಗೆ ಪಡೆದ ಹಣಕ್ಕೆ ನಿಗಧಿತ ಅವಧಿಯಲ್ಲಿಯೇ ಮಾಡಬೇಕಾಗಿದ್ದರೂ ಸಹ ಹಲವು ತಾಂತ್ರಿಕ ಕಾರಣಗಳಿಂದ ಕೆಲವು ಬಿಲ್ಲುಗಳ ಮೊತ್ತದ ಹೊಂದಾಣಿಕೆ ವಿಳಂಬವಾಗಿರುತ್ತದೆ ಇದು ಕಛೇರಿಯ ಕೆಲಸ ಕಾರ್ಯಗಳ ಒತ್ತಡದಿಂದ ಹಾಗೂ ಕೆಲವು ಅಧಿಕಾರಿ ವರ್ಗದವರ ಅಲಭ್ಯತೆಯ ಕಾರಣಗಳಿಂದ ವಿಳಂಬವಾಗಿರುತ್ತದೆಯೇ ವಿನಹ, ಉದ್ದೇಶ ಪೂರ್ವಕವಾಗಿ ವಿಳಂಬಮಾಡಿದಂತದ್ದಲ್ಲ ಆದ್ದರಿಂದ ಸದರಿ ವಿಷಯದಲ್ಲಿ ಪ್ರಸ್ತುತ ಪ್ರಸ್ತಾಪಿಸಲಾಗಿರುವ ವಿನಯ ಪೂರ್ವಕ ಮನವಿಯನ್ನು ಪರಿಗಣಿಸಿ ರೂ.4,99,462/–ಗಳ ವಸೂಲಾತಿಯನ್ನು ವಸೂಲಾತಿ ಕಂಡಿಕೆಯಿಂದ ಕೈ ಬಿಡುವಂತೆ ನಿವೇದಿಸಲಾಗಿದೆ.

**162. ವಿದ್ಯಾರ್ಥಿನಿಲಯಗಳ ವಿದ್ಯಾರ್ಥಿಗಳಿಗೆ ಊಟದ ವೆಚ್ಚಕ್ಕಾಗಿ ಎ.ಸಿ ಬಿಲ್ಲಿನ ಮೂಲಕ ಪಡೆದ ಮುಂಗಡ ಹಣಕ್ಕೆ ಎನ್,ಡಿ,ಸಿ ಬಿಲ್ಲಿನಲ್ಲಿ ಪಾವತಿ ಓಚರ್‌ಗಳು ಲಭ್ಯವಿಲ್ಲದಿರುವುದು :– (ಹಣಕಾಸು ವಿಭಾಗ)**

2017–18ನೇ ಸಾಲಿನಲ್ಲಿ ವಿದ್ಯಾರ್ಥಿನಿಲಯಗಳ ವಿದ್ಯಾರ್ಥಿಗಳ ಊಟದ ವೆಚ್ಚಕ್ಕಾಗಿ ಧನಾದೇಶ ಸಂಖ್ಯೆ:952308/01.02.2018 ರಂದು ರೂ.63,95,200/–ಗಳನ್ನು ಎ.ಸಿ ಬಿಲ್ಲು ಮುಖಾಂತರ ಹಣ ಡ್ರಾ ಮಾಡಲಾಗಿದ್ದು ಈ ಬಗ್ಗೆ ಕ್ರ,ಸಂ19/20/31.05.2018ರಲ್ಲಿ ಸಲ್ಲಿಸಿದ ಎನ್,ಡಿ,ಸಿ ಬಿಲ್‌ನ್ನು ಪರಿಶೀಲಿಸಲಾಗಿ ಎ,ಸಿ ಬಿಲ್‌ನಲ್ಲಿ ಡ್ರಾ ಮಾಡಲಾಗಿರುವ ರೂ.63,95,200/–ಗೆ ಯಾವ ಯಾವ ಬಾಬ್ತಿಗೆ ಖರ್ಚಾಗಿರುತ್ತದೆ ಪಾವತಿ ಮಾಡಿರುವ ಓಚರ್‌ಗಳು/ದಾಸ್ತಾನು ಲೆಕ್ಕಗಳು ಇರದೆ ಕರ್ನಾಟಕ ಸರ್ಕಾರದಿಂದ ಬಿಡುಗಡೆಯಾಗಿರುವ ರೂ.63,95,000/– ಅನುಮೋದನಾ ನೀಡಿರುವುದು ನಿಯಮಬಾಹಿರವಾಗಿರುತ್ತದೆ ಇದರ ಬಗ್ಗೆ ಲೆಕ್ಕ ತನಿಖಾ ವಿಚಾರಣೆ ಸಂಖ್ಯೆ:6/ದಿನಾಂಕ:30.04.2019ರಲ್ಲಿ ಸೂಕ್ತ ಸ್ಪಷ್ಟೀಕರನ ನೀಡುವಂತೆ ಸೂಚಿಸಿ ನೀಡಲಾಗಿದ್ದರೂ ಈವರೆವಿಗೆ ಯಾವುದೇ ಉತ್ತರ ನೀಡಿರುವುದಿಲ್ಲ ಎನ್,ಡಿ,ಸಿ ಬಿಲ್ ಅಂದರೆ ಎ,ಸಿ ಬಿಲ್ಲಿನಲ್ಲಿ ಡ್ರಾ ಮಾಡಿರುವ ಮೊತ್ತ ರೂ.63,95,200/–ಗಳಿಗೆ ವಿದ್ಯಾರ್ಥಿಗಳ ಊಟದ ವೆಚ್ಚ ದಿನಸಿ ಖರೀದಿ ತರಕಾರಿ ಹಾಲು ಮೊಸರು ಸರಬರಾಜುದಾರರಿಗೆ ಯಾವಾಗ ಎಷ್ಟು ಪ್ರಮಾಣದಲ್ಲಿ ಸರಬರಾಜು ಆಗಿದ್ದು ಇದಕ್ಕೆ ಪ್ರತಿಯಾಗಿ ಪಾವತಿ ವಿವರಗಳನ್ನು ಎನ್,ಡಿ,ಸಿ ಬಿಲ್ಲಿಗೆ ಲಗತ್ತಿಸಿ ವೆಚ್ಚವಾಗದೆ ಉಳಿಕೆ ಹಣ ಜಮೆ ಬಗ್ಗೆ ಪೂರ್ಣ ವಿವರವನ್ನು ಸಲ್ಲಿಸಬೇಕಾಗಿರುತ್ತದೆ. ಆದರೆ ಸರ್ಕಾರದಿಂದ ಬಂದ ಅನುಮೋದನಾ ಪತ್ರವನ್ನು ಎನ್,ಡಿ,ಸಿ ಎಂದು ಪರಿಗಣಿಸಿರುವುದು ನಿಯಮಬಾಹಿರವಾಗಿರುತ್ತದೆ ಈ ಬಗ್ಗೆ ಸ್ಪಷ್ಟೀಕರಣ ನೀಡುವವರೆಗೆ ರೂ.63,95,200/–ಗಳನ್ನು ಆಕ್ಷೇಪಣೆಗೆ ಸೂಚಿಸಿದೆ.

ಧನಾದೇಶ ಸಂಖ್ಯೆ:952308 ದಿನಾಂಕ:01.02.2018 ರಲ್ಲಿ ರೂ.6395200/–ಗಳನ್ನು ಎ.ಸಿ ಬಿಲ್ಲಿನ ಮುಖಾಂತರ ಡ್ರಾ ಮಾಡಿ 2017–18ನೇ ಸಾಲಿನ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಜನವರಿ, ಫೆಬ್ರವರಿ ಮಾಹೆಯಲ್ಲಿ ದಿನಸಿ, ದವಸಧಾನ್ಯ, ಹಾಲು ಮೊಸರು, ತರಕಾರಿ ಮುಂತಾದ ಅಗತ್ಯ ಆಹಾರ ಪದಾರ್ಥದ ವಸ್ತುಗಳನ್ನು ಖರೀದಿಸಿ ಉಪಯೋಸಲಾಗಿದ್ದು ಸದರಿ ಮೊತ್ತದ ಎಸಿ ಬಿಲ್ಲಿಗೆ, ಎನ್,ಡಿ,ಸಿ ಬಿಲ್ಲಗಳನ್ನು ಪೂರಕ ದಾಖಲಾತಿಗಳೊಂದಿಗೆ ಸಲ್ಲಿಸಲಾಗಿರುತ್ತದೆ. ಹಾಗೂ ಸದರಿ ಮೊತ್ತದ ಬಿಲ್ಲುಗಳನ್ನು ಲೆಕ್ಕಪರಿಶೋಧನೆಗೆ ಒದಗಿಸಲಾಗಿರುತ್ತದೆ.

**ವೆಚ್ಚದ ವಿವರ ಈ ಕೆಳಕಂಡಂತಿರುತ್ತದೆ.**

| Jan-18 | | | | | | |
|---|---|---|---|---|---|---|
| | | SC/ST STUDENTS | | | | |
| Sl No | HOSTELS | SC | ST | Total SC/ST Students | Mess Income Jan 2018 | Mess Exp Jan 2018 |
| 1 | PG Boys Hostel Block-1 | 223 | 52 | 275 | 385000 | 385000 |
| 2 | PG Boys Hostel Block-2 | 172 | 35 | 207 | 289800 | 289800 |
| 3 | PG Boys Hostel Block-3 | 114 | 24 | 138 | 193200 | 193200 |
| 4 | PG Ladies Hostel Block-1 | 121 | 27 | 148 | 207200 | 207200 |

| | | | | | | |
|---|---|---|---|---|---|---|
| 5 | PG Ladies Hostel Block-2 | 97 | 22 | 119 | 166600 | 166600 |
| 6 | PG Ladies Hostel Block-3 | 93 | 16 | 109 | 152600 | 152600 |
| 7 | Yuvaraja boys Hostel | 135 | 28 | 163 | 228200 | 228200 |
| 8 | Maharaja boys Hostel | 201 | 98 | 299 | 418600 | 418600 |
| 9 | University Hostel-II | 89 | 20 | 109 | 152600 | 152600 |
| 10 | Maharaja/yuvaraja Ladies | 72 | 18 | 90 | 126000 | 126000 |
| 11 | U G Village Hostel | 148 | 22 | 170 | 238000 | 238000 |
| 12 | Physical Education Hostel | 48 | 12 | 60 | 84000 | 84000 |
| 13 | Gotham Hostel | 189 | 58 | 247 | 345800 | 345800 |
| 14 | Dr.B,R Ambedkar Hostel | 126 | 24 | 150 | 210000 | 210000 |
| | Total | 1828 | 456 | 2284 | 3197600 | 3197600 |

| Feb-18 | | | | | | |
|---|---|---|---|---|---|---|
| | | SC/ST STUDENTS | | | | |
| Sl No | HOSTELS | SC | ST | Total SC/ST Students | Mess Income Feb 2018 | Mess Exp Feb 2018 |
| 1 | PG Boys Hostel Block-1 | 223 | 52 | 275 | 385000 | 385000 |
| 2 | PG Boys Hostel Block-2 | 172 | 35 | 207 | 289800 | 289800 |
| 3 | PG Boys Hostel Block-3 | 114 | 24 | 138 | 193200 | 193200 |
| 4 | PG Ladies Hostel Block-1 | 121 | 27 | 148 | 207200 | 207200 |
| 5 | PG Ladies Hostel Block-2 | 97 | 22 | 119 | 166600 | 166600 |
| 6 | PG Ladies Hostel Block-3 | 93 | 16 | 109 | 152600 | 152600 |
| 7 | Yuvaraja boys Hostel | 135 | 28 | 163 | 228200 | 228200 |
| 8 | Maharaja boys Hostel | 201 | 98 | 299 | 418600 | 418600 |
| 9 | University Hostel-II | 89 | 20 | 109 | 152600 | 152600 |
| 10 | Maharaja/yuvaraja Ladies | 72 | 18 | 90 | 126000 | 126000 |
| 11 | U G Village Hostel | 148 | 22 | 170 | 238000 | 238000 |
| 12 | Physical Education Hostel | 48 | 12 | 60 | 84000 | 84000 |
| 13 | Gotham Hostel | 189 | 58 | 247 | 345800 | 345800 |
| 14 | Dr.B,R Ambedkar Hostel | 126 | 24 | 150 | 210000 | 210000 |
| | Total | 1828 | 456 | 2284 | 3197600 | 3197600 |
| | Grand Total Jan & Feb2018 | 3656 | 912 | 4568 | 6395200 | 6395200 |

ಈ ನಿಟ್ಟಿನಲ್ಲಿ ರೂ.63,95,200/–ಗಳ ಮೊತ್ತದ ಆಕ್ಷೇಪಣೆಯನ್ನು ಕೈ ಬಿಡುವಂತೆ ನಿವೇದಿಸಲಾಗಿದೆ.

## ದಾಸ್ತಾನು (Stock)

**163. 2017–18ನೇ ಸಾಲಿನ ವರ್ಷಾಂತ್ಯಕ್ಕೆ ಪ್ರಸಾರಾಂಗದ ವತಿಯಿಂದ ಪ್ರಕಟಣೆ ಮಾಡಲಾದ/ಸ್ವೀಕರಿಸಲಾದ ಪುಸ್ತಕಗಳು ಮತ್ತು ಮಾರಾಟಕ್ಕೆ ಇಡಲಾಗಿರುವ ಪುಸ್ತಕಗಳ ದಾಸ್ತಾನು ಪರಿಶೀಲನೆ ಕೈಗೊಳ್ಳದಿರುವುದು:– (ಪ್ರಸಾರಾಂಗ)**

ಮೈಸೂರು ವಿಶ್ವವಿದ್ಯಾನಿಲಯ ಪ್ರಸಾರಾಂಗದ ವತಿಯಿಂದ 1962 ನೇ ಸಾಲಿನಿಂದ ಇಂದಿನವರೆವಿಗೂ ವಿವಿಧ ವಿಷಯಗಳ ವಿವಿಧ ಶೀರ್ಷಿಕೆಗಳ ಸುಮಾರು 2428 ಕ್ಕಿಂತಲೂ ಅಧಿಕ ಪುಸ್ತಕಗಳನ್ನು ಪ್ರಕಟಿಸಿ ಮಾರಾಟ ಮಾಡುತ್ತಿರುವುದನ್ನು ಲೆಕ್ಕಪರಿಶೋದನೆಯಲ್ಲಿ ಗಮನಿಸಲಾಗಿದ್ದು ಅತ್ಯಮೂಲ್ಯ ಮತ್ತು ಬೆಲೆ ಬಾಳುವ ಪುಸ್ತಕಗಳ ದಾಸ್ತಾನು ಮಳಿಗೆಗಳ ಭೌತಿಕ ದಾಸ್ತಾನಿನ ಪರಿಶೀಲನೆಯನ್ನು 2006 ರಿಂದಲೂ ಕೈಗೊಳ್ಳದಿರುವುದರ ಬಗ್ಗೆ ಹಿಂದಿನ ಲೆಕ್ಕತಪಾಸಣಾ ವರಿದಿಗಳಲ್ಲೂ ಆಕ್ಷೇಪಿಸಿದ್ದರೂ 2017–18ನೇ ಸಾಲಿನಲ್ಲಿಯೂ ಪುಸ್ತಕಗಳ ದಾಸ್ತಾನು ಮಳಿಗೆಗಳು ಮತ್ತು ಮಾರಾಟ ಮಳಿಗೆಗಳ ಭೌತಿಕ ದಾಸ್ತಾನು ಪರಿಶೀಲನಾ ಕಾರ್ಯ ಕೈಗೊಂಡಿರುವುದಿಲ್ಲ ಕೆ.ಎಫ್.ಸಿ–1958 ರ ಅನುಚ್ಛೇದ 169 ರನ್ವಯ ಪ್ರತಿ ವರ್ಷ ಪುಸ್ತಕಗಳ ಉಗ್ರಾಣಗಳು ಮತ್ತು ಮಾರಾಟ ಮಳಿಗೆಗಳ ದಾಸ್ತಾನು ಪರಿಶೀಲನೆಯನ್ನು ಕೈಗೊಂಡು ಸಕ್ಷಮ ಪ್ರಾಧಿಕಾರಕ್ಕೆ ವರದಿಯನ್ನು ಸಲ್ಲಿಸಬೇಕಾಗಿರುತ್ತದೆ. ಆದರೆ 2006 ರಿಂದಲೂ ವಾಸ್ತವ ದಾಸ್ತಾನು ಮತ್ತು ಮಾರಾಟವಾಗಿರುವ ಪುಸ್ತಕಗಳ ವಿವರಗಳನ್ನು ಹಾಗೂ ಹಾಲಿ ದಾಸ್ತಾನು ವಿವರ ಸರಿಯಾಗಿದೆಯೆಂದು ಲೆಕ್ಕತಪಾಸಣೆಯಲ್ಲಿ ದೃಢೀಕರಿಸಲು ಸಾಧ್ಯವಾಗಿರುವುದಿಲ್ಲ ಉಗ್ರಾಣದ 2017–18ನೇ ಸಾಲಿನ ಅಂತ್ಯಕ್ಕೆ ಅಂತಿಮ ಶಿಲ್ಕನ್ನು ಪರಿಶೀಲಿಸಲು ಸಾಧ್ಯವಾಗದಿರುವುದರಿಂದ ಮೂಲ ಉಗ್ರಾಣದಲ್ಲಿರುವ ಪುಸ್ತಕಗಳು ಮತ್ತು ಮಾರಾಟ ವಿವರಗಳ ನಿಖರವಾದ ವಾಸ್ತಾವಾಂಶವನ್ನು ತಿಳಿಯಲು ಸಾಧ್ಯವಾಗದಿರುವುದರಿಂದ ವಿಶ್ವವಿದ್ಯಾನಿಲಯಕ್ಕೆ ಆರ್ಥಿಕ ನಷ್ಟ ಉಂಟಾಗುವ ಸಂಭವವಿರುವುದರಿಂದ **ಪ್ರಸಾರಾಂಗದ ನಿರ್ದೇಶಕರು** ಹಾಗೂ **ವಿಶ್ವವಿದ್ಯಾನಿಲಯದ ಮುಖ್ಯಸ್ಥರು** ಸೂಕ್ತ ಕ್ರಮವಹಿಸಿ ಪುಸ್ತಕ ದಾಸ್ತಾನು ಪರಿಶೀಲನೆಗೆ ಪ್ರತ್ಯೇಕ ತಂಡ ರಚಿಸಿ ಅವರಿಂದ ಭೌತಿಕ ಪರಿಶೀಲನೆ ನಡೆಸಿ ವರದಿಯನ್ನು ಪಡೆದುಕೊಂಡು ಲೆಕ್ಕ ತಪಾಸಣೆಗೆ ಹಾಜರುಪಡಿಸುವಂತೆ ಸೂಚಿಸಿದೆ ದಾಸ್ತಾನು ವಿತರಣಾ ಶಿಲ್ಕಿನ ವಹಿ ಪುಸ್ತಕದಲ್ಲಿನ ಶಿಲ್ಕಿನ ಪುಸ್ತಕಗಳವಾರು ವಿವರವನ್ನು ನೀಡಲಾದ ಮಾಹಿತಿ ಆಧಾರದ ಮೇಲೆ ಅಂಕಿ ಅಂಶಗಳನ್ನು ನಮೂದಿಸಿ ಅನುಬಂಧ–87 ರಲ್ಲಿ ಲಗತ್ತಿಸಿದೆ.

ಪ್ರಸಾರಾಂಗದ ವಾರ್ಷಿಕ ದಾಸ್ತಾನು ಭೌತಿಕ ಪರಿಶೀಲನೆಯ ಕಾರ್ಯ ನಡೆಸದಿರುವ ಬಗ್ಗೆ ಹಿಂದಿನ ಲೆಕ್ಕ ಪರಿಶೋಧನಾ ವರದಿಯಲ್ಲಿ ಆಕ್ಷೇಪಿಸಲಾಗಿದ್ದು ದಾಸ್ತಾನು ಭೌತಿಕ ಪರಿಶೀಲನೆಯ ಬಗ್ಗೆ ಪ್ರತ್ಯೇಕ ತಂಡವನ್ನು ರಚಿಸಿಲಾಗಿತ್ತು. ಆದರೆ ಸದರಿ ತಂಡವು ಕಾರ್ಯಭಾರದ ಒತ್ತಡದಿಂದಾಗಿ ದಾಸ್ತಾನು ಭೌತಿಕ ಪರಿಶೀಲನಾ ಕಾರ್ಯವನ್ನು ಸಂಪೂರ್ಣವಾಗಿ ಪೂರ್ಣಗೊಳಿಸದೇ ಇರುವುದರಿಂದ 2017–18ನೇ ಸಾಲಿನ ವಾರ್ಷಿಕ ದಾಸ್ತಾನು ಭೌತಿಕ ಪರಿಶೀಲನೆ ಕಾರ್ಯವನ್ನು ನಮ್ಮ ವಿಭಾಗದ ವತಿಯಿಂದಲೇ ದಿನಾಂಕ:15.06.2018 ರಂದು ನಡೆಸಿರುವುದಾಗಿ ನಿವೇದಿಸುತ್ತಾ. (ಪ್ರತಿ ಲಗತ್ತಿಸಿದೆ) ಈ ಬಗೆಗೆ ಬೇರೆ ತಂಡವನ್ನು ರಚಿಸಿ ದಾಸ್ತಾನು ಭೌತಿಕ ಪರಿಶೀಲನಾ ಕಾರ್ಯವನ್ನು ನಡೆಸುವ ಬಗ್ಗೆ ಮಾನ್ಯ ಕುಲಸಚಿವರಲ್ಲಿ ಕೋರಲಾಗಿದ್ದು ವರದಿ ಪಡೆದುಕೊಂಡ ನಂತರ ಸಕ್ಷಮ ಪ್ರಾಧಿಕಾರ ಮತ್ತು ಲೆಕ್ಕ ಪರಿಶೋಧನೆಗೆ ಹಾಜರುಪಡಿಸುವುದಾಗಿ ನಿರ್ದೇಶಕರು ಮನವಿ ಮಾಡಿಕೊಂಡಿರುತ್ತಾರೆ.

| | |
|---|---|
| **164. ಪ್ರಸಾರಾಂಗ ವತಿಯಿಂದ ಪ್ರಕಟಣೆ ಮಾಡಲಾದ ಪುಸ್ತಕಗಳ ಕಾಯ್ದಿರಿಸಿದ ಪ್ರತಿಗಳ (Reserve books stock register) ವಹಿಯನ್ನು ಹಾಜರುಪಡಿಸದಿರುವುದು :– (ಪ್ರಸಾರಾಂಗ)**<br>ಪ್ರಸಾರಾಂಗದ ವತಿಯಿಂದ ಪುಸ್ತಕಗಳನ್ನು ಪ್ರಕಟಿಸಿ ಮಾರಾಟ ಮಾಡಲಾಗುತ್ತಿದ್ದು ಪ್ರಕಟಣೆ ಮತ್ತು ಮಾರಾಟ ಮಾಡಲು ಲಭ್ಯವಿರುವ ಪುಸ್ತಕಗಳಲ್ಲಿನ ದಾಸ್ತಾನು ವಹಿಯಲ್ಲಿ ಕಾಯ್ದಿರಿಸಲಾಗಿರುವ ಪ್ರತಿಗಳು ಎಂದು ನಮೂದಿಸಿ ಮಾರಾಟ ಮಾಡದಿರುವುದನ್ನು ಲೆಕ್ಕತಪಾಸಣೆಯಲ್ಲಿ ಗಮನಿಸಲಾಗಿದ್ದು ಪ್ರಸಾರಾಂಗದ ವತಿಯಿಂದ ಪುಸ್ತಕಗಳ ಪ್ರಕಟಣೆ ಮತ್ತು ಮಾರಾಟವನ್ನು 1962 ರಿಂದಲೂ ಕೈಗೊಂಡಿದ್ದು ಇದುವರೆವಿಗೂ ಸುಮಾರು 24 ವಿವಿಧ ಶೀರ್ಷಿಕೆ ಪುಸ್ತಕಗಳನ್ನು ಮಾರಾಟ ಮಾಡುತ್ತಿರುವುದಾಗಿ ಕಛೇರಿಯ ಸಹಾಯಕ ನಿರ್ದೇಶಕರು ಮೌಖಿಕವಾಗಿ ತಿಳಿಸಿದ್ದು 1962 ರಿಂದ ಇಂದಿನವರೆಗೆ ಪ್ರಕಟಿಸಿ ಮಾರಾಟ ಮಾಡಿರುವ ಪುಸ್ತಕಗಳಲ್ಲಿ ಎಷ್ಟು ಪ್ರತಿಗಳನ್ನು ಮೀಸಲು/ಕಾಯ್ದಿರಿಸಲು ಆದೇಶ ಮಾಡಿಕೊಂಡು ಅದರಂತೆ ಕಾಯ್ದಿರಿಸಿದ ಪ್ರತಿಗಳ ವಹಿ (Reserve books stock register) ಯನ್ನು ಲೆಕ್ಕತಪಾಸಣೆಗೆ ಹಾಜರುಪಡಿಸುವಂತೆ ಸೂಚಿಸಿದೆ ಈ ಹಿಂದಿನ ವರದಿಗಳಲ್ಲಿ ಉಲ್ಲೇಖಿಸಿದ್ದರೂ ಸಹಾ ಈ ಬಗ್ಗೆ ಕ್ರಮ ಕೈಗೊಂಡಿರುವುದಿಲ್ಲ ಯಾವ ಯಾವ ಶೀರ್ಷಿಕೆಯ ಎಷ್ಟು ಪುಸ್ತಕಗಳನ್ನು/ಪ್ರತಿಗಳನ್ನು ಕಾಯ್ದಿರಿಸಲಾಗಿದೆ ಎಂಬುದನ್ನು ನಿಖರವಾಗಿ ತಿಳಿಯಲು ಸಾಧ್ಯವಾಗದಿರುವುದರಿಂದ ಕಛೇರಿ ಮುಖ್ಯಸ್ಥರು ಸೂಕ್ತ ಕ್ರಮವಹಿಸಿ ಕಾಯ್ದಿರಿಸಿದ ಪುಸ್ತಕಗಳ ವಹಿಯನ್ನು ತುರ್ತಾಗಿ ಲೆಕ್ಕತಪಾಸಣೆಗೆ ಹಾಜರುಪಡಿಸುವಂತೆ ಹಾಜರುಪಡಿಸುವಂತೆ ಸೂಚಿಸಿದೆ. | ಪ್ರಸಾರಾಂಗದ ವತಿಯಿಂದ ಪುಸ್ತಕಗಳ ಪ್ರಕಟಣೆ ಮತ್ತು ಮಾರಾಟ ಮಾಡಲು ಲಭ್ಯವಿರುವ ದಾಸ್ತಾನು ವಹಿಯಲ್ಲಿ ಕಾಯ್ದಿರಿಸಲಾಗಿರುವ ಪ್ರತಿಗಳು ಎಂದು ನಮೂದಿಸಿ ಮಾರಾಟ ಮಾಡದಿರುವ ಬಗ್ಗೆ ಪರಿಶೀಲಿಸಿ ಕಾಯ್ದಿರಿಸಿದ ಪ್ರತಿಗಳ ವಹಿಯನ್ನು ಲೆಕ್ಕ ತಪಾಸಣೆಗೆ ಹಾಜರುಪಡಿಸುವಂತೆ ಸೂಚಿಸಿ ಕಂಡಿಕೆಯಲ್ಲಿ ಪ್ರಸ್ತಾಪಿಸಿದೆ.<br>ತಮ್ಮ ಸಲಹೆ ಮತ್ತು ಸೂಕ್ತ ನಿರ್ದೇಶನದಂತೆ 1962 ರಿಂದ ಈತಹಲ್‌ವರೆವಿಗೆ ಕಾಯ್ದಿರಿಸಿದ ಪುಸ್ತಕಗಳ ವಹಿಯನ್ನು ನಿರ್ವಹಿಸಿದ್ದು ವಹಿಯ **ಸಂಖ್ಯೆ:–11 ರಲ್ಲಿ ಪುಟಸಂಖ್ಯೆ 01 ರಿಂದ 42 ರವರೆಗೆ** ವಿವಿಧ ಶೀರ್ಷಿಕೆಗಳಲ್ಲಿ ಕೆಳಕಂಡಂತೆ ಕಾಯ್ದಿರಿಸಿದ ಪುಸ್ತಕಗಳಿರುತ್ತದೆ.<br>1).ಕನ್ನಡ ಮಾಧ್ಯಮದಲ್ಲಿ ಕ್ರಮ ಸಂಖ್ಯೆ 01 ರಿಂದ 830 ರವರೆಗೆ 830 ಪುಸ್ತಕಗಳು<br>2).ಅಂಗ್ಲ ಮಾಧ್ಯಮದಲ್ಲಿ ಕ್ರಮಸಂಖ್ಯೆ:– 831 ರಿಂದ 974 ರವರೆಗೆ 144 ಪುಸ್ತಕಗಳು<br>3).ಪ್ರಚಾರ ಪುಸ್ತಕಗಳ ಮಾಲೆಯಲ್ಲಿ ಕ್ರಮ ಸಂಖ್ಯೆ:–975 ರಿಂದ 1004 ರವರೆಗೆ 30 ಪುಸ್ತಕಗಳು<br>**1962 ರಿಂದ 2018–19ನೇ ಸಾಲಿನವರೆಗೆ ಒಟ್ಟು 1004 ಪುಸ್ತಕಗಳು** ಕಾಯ್ದಿರಿಸಿದ ಪುಸ್ತಕಗಳು ದಾಸ್ತಾನು ವಹಿಯಲ್ಲಿರುವುದಾಗಿ ಧೃಢೀಕರಿಸಲಾಗಿರುತ್ತದೆ ಹಾಗೂ **2018–19 ನೇ ಸಾಲಿನ ಲೆಕ್ಕ ತಪಾಸಣೆಗೆ ಸದರಿ ವಹಿಯನ್ನು ಹಾಜರು ಪಡಿಸಿದ್ದು** ಲೆಕ್ಕಪರಿಶೋಧಕರು ಪರಿಶೀಲಿಸಿರುವ ಬಗ್ಗೆ ತಮ್ಮ ಅವಗಾಹನೆಗಾಗಿ ತರಬಯಸುತ್ತಾ ವಹಿಯ ಜೆರಾಕ್ಸ್ ಪ್ರತಿಗಳನ್ನು ಲಗತ್ತಿಸಿ ಸಲ್ಲಿಸಿದೆ. |
| **165. ಹಿಂದಿನ ಸಾಲುಗಳ ಪುಸ್ತಕಗಳ ಶಿಲ್ಕು ಬಗ್ಗೆ ವಾರ್ಷಿಕ ಭೌತಿಕ ತಪಾಸಣಾ ವರದಿ/ ವಿವರ ನೀಡಿರುವುದಿಲ್ಲ :– (ಪ್ರಸಾರಾಂಗ)**<br>ಹಿಂದಿನ ಸಾಲುಗಳಿಂದ 2016ನೇ ಸಾಲಿನವರೆವಿಗೂ ವಿಶೇಷ ತಂಡ ನೇಮಿಸಿ ದಾಸ್ತಾನು ಶಿಲ್ಕುಗಳ ವಿವರವಾದ ವರದಿ ನೀಡಲು ಸೂಚಿಸಲಾಗಿದ್ದರೂ ಸಹಾ ಈ ಬಗ್ಗೆ ಈವರೆವಿಗೂ ವರದಿ ತಮ್ಮ ಕಛೇರಿಗೆ ನೀಡಿಲ್ಲವೆಂದು ನಿರ್ದೇಶಕರು ಪ್ರಸಾರಾಂಗ ರವರು ತಿಳಿಸಿದ್ದು ಈ ಬಗ್ಗೆ ಲೆಕ್ಕತಪಾಸಣಾ ಪತ್ರ ಸಂಖ್ಯೆ:5 ದಿನಾಂಕ:11.03.2019 ಕ್ಕೆ ನೀಡಲಾಗಿ ಉತ್ತರ ನೀಡಿರುವುದಿಲ್ಲ ಹಾಗೂ ವಾರ್ಷಿಕ ಭೌತಿಕ ತಪಾಸಣಾ ವರದಿ ಹಾಜರುಪಡಿಸಿರುವುದಿಲ್ಲ. ಕರ್ನಾಟಕ ಆರ್ಥಿಕ ಸಂಹಿತೆ ಅನಿಚ್ಛೇದ–169 ರಂತೆ ವಾರ್ಷಿಕ ಭೌತಿಕ ತಪಾಸಣಾ ವರದಿಯನ್ನು ಸಕ್ಷಮ ಪ್ರಾಧಿಕಾರಕ್ಕೆ ಸಲ್ಲಿಸಲು ಸೂಚಿಸಿದೆ. | ಈ ಹಿಂದೆ ಪ್ರಸಾರಾಂಗದ ವಾರ್ಷಿಕ ದಾಸ್ತಾನು ಭೌತಿಕ ಪರಿಶೀಲನೆಯ ಕಾರ್ಯ ಕೈಗೊಳ್ಳಲು ರಚಿಸಲಾದ ತಂಡದಿಂದ ಮಾರಾಟ ಮಳಿಗೆಗಳು ಮತ್ತು ದಾಸ್ತಾನು ಮಳಿಗೆಯ ದಾಸ್ತಾನು ಭೌತಿಕ ಪರಿಶೀಲನೆಯ ಕಾರ್ಯ ಕಾರಣಾಂತರದಿಂದ ಅಪೂರ್ಣಗೊಂಡಿದ್ದು ಸದರಿ ಸಾಲು ಸೇರಿದಂತೆ ದಾಸ್ತಾನು ಭೌತಿಕ ಪರಿಶೀಲನೆಯ ಕಾರ್ಯ ನಡೆಸುವ ಬಗ್ಗೆ ಬೇರೆ ತಂಡವನ್ನು ರಚಿಸಿ ಪ್ರಸಾರಾಂಗದ ವಾರ್ಷಿಕ ದಾಸ್ತಾನು ಭೌತಿಕ ಪರಿಶೀಲನೆ ನಡೆಸುವ ಬಗ್ಗೆ ಮಾನ್ಯ ಕುಲಸಚಿವರಲ್ಲಿ ಕೋರಲಾಗಿರುವುದು ಹಾಗೂ ಸದರಿ ತಂಡದಿಂದ ಪಡೆದ ವಾರ್ಷಿಕ ಭೌತಿಕ ತಪಸಣಾ ವರದಿಯನ್ನು ಸಕ್ಷಮ ಪ್ರಾಧಿಕಾರಕ್ಕೆ ಸಲ್ಲಿಸುವ ಬಗ್ಗೆ ಅಗತ್ಯ ಕ್ರಮವಹಿಸುವುದಾಗಿ ನಿರ್ದೇಶಕರು ವರದಿ ಮಾಡಿಕೊಂಡಿರುತ್ತಾರೆ. |

| | |
|---|---|
| **166. ಉತ್ತರ ಪತ್ರಿಕೆಗಳ ದಾಸ್ತಾನು ವಿವರಗಳನ್ನೊಳಗೊಂಡ ದಾಸ್ತಾನು ವಹಿಯನ್ನು ಹಾಗೂ ಪೂರಕ ದಾಖಲಾತಿಗಳನ್ನು ಹಾಜರುಪಡಿಸದಿರುವುದು:– (ಸ್ನಾತಕೋತ್ತರ ಅಧ್ಯಯನ ಕೇಂದ್ರ ಹೇಮಗಂಗೋತ್ರಿ ಹಾಸನ)**<br>ಮೈಸೂರು ವಿಶ್ವವಿದ್ಯಾನಿಲಯ ಸ್ನಾತಕೋತ್ತರ ಕೇಂದ್ರ ಹೇಮಗಂಗೋತ್ರಿ ವಿಭಾಗದಲ್ಲಿ ಉತ್ತರ ಪತ್ರಿಕೆ ದಾಸ್ತಾನು ವಿವರಗಳನ್ನೊಳಗೊಂಡ ದಾಸ್ತಾನು ವಹಿಯನ್ನುಪೂರಕ ದಾಖಲಾತಿಗಳೊಂದಿಗೆ ಹಾಜರುಪಡಿಸದಿರುವುದರಿಂದ ಉತ್ತರ ಪತ್ರಿಕೆಗಳ ದಾಸ್ತಾನಿನ ಬಗ್ಗೆ ನಿಖರವಾಗಿ ತಿಳಿಯಲು ಸಾಧ್ಯವಾಗಿರುವುದಿಲ್ಲ ಆದ್ದರಿಂದ ಈ ಕುರಿತು ಕಛೇರಿ ಮುಖ್ಯಸ್ಥರು ಸೂಕ್ತ ಕ್ರಮವಹಿಸಿ ಉತ್ತರ ಪತ್ರಿಕೆಗಳ ದಾಸ್ತಾನು ವಹಿಯನ್ನು ಪೂರಕ ದಾಖಲಾತಿಗಳೊಂದಿಗೆ ಹಾಜರುಪಡಿಸುವಂತೆ ಸೂಚಿಸಿದೆ. | ಮೈಸೂರು ವಿಶ್ವವಿದ್ಯಾನಿಲಯದ ಸ್ನಾತಕೋತ್ತ ಕೇಂದ್ರ ಹೇಮಗಂಗೋತ್ರಿ, ಹಾಸನ ವಿಭಾಗದಲ್ಲಿ 2017ರ ಜೂನ್ ಮತ್ತು ಡಿಸೆಂಬರ್ ಮಾಹೆ ಹಾಗೂ 2018ರ ಜೂನ್ ಮತ್ತು ಡಿಸೆಂಬರ್ ಮಾಹೆಯ ಉತ್ತರ ಪತ್ರಿಕೆಗಳ ದಾಸ್ತಾನು ವಹಿ (ಪುಟ ಸಂಖ್ಯೆ 2 ರಿಂದ 5) ಯನ್ನು ನಿರ್ವಹಿಸಲಾಗಿದ್ದು **ಉತ್ತರ ಪತ್ರಿಕೆಗಳ ದಾಸ್ತಾನು ವಹಿಯ ಜೆರಾಕ್ಸ್ ಪ್ರತಿಗಳನ್ನು** ಈ ಕೂಡ ಲಗತ್ತಿಸಿ ಸಲ್ಲಿಸುತ್ತಾ ಮುಂದಿನ ಲೆಕ್ಕ ಪರಿಶೋಧನಾ ವೇಳೆಯಲ್ಲಿ ಮೂಲ ಉತ್ತರ ಪತ್ರಿಕೆಗಳ ದಾಸ್ತಾನು ವಹಿಯನ್ನು ಪರಿಶೋಧನೆಗೆ ಹಾಜರುಪಡಿಸುವುದಾಗಿ ನಿವೇದಿಸಿದೆ. |
| **167. ದಿನಪತ್ರಿಕೆಗಳ ವಿಲೇವಾರಿ ಮಾಡದಿರುವುದರ ಬಗ್ಗೆ :– (ಮಹಾರಾಜ ಕಾಲೇಜು)**<br>2017–18ನೇ ಸಾಲಿನಲ್ಲಿ ಸಾಲಿನಲ್ಲಿ ರೀಡಿಂಗ್ ರೂಮ್‌ಗೆ ಬೇಕಾಗುವ ದಿನಪತ್ರಿಕೆಗಳನ್ನು ವಿ.ರವಿ ನ್ಯೂಸ್ ಪೇಪರ್ ಏಜೇಂಟ್ ರವರಿಂದ ಖರೀದಿಸಿದ್ದು 2017–18ರಲ್ಲಿ ರೂ.58,665/–ಗಳನ್ನು ದಿನಪತ್ರಿಕೆ ಬಾಬ್ತು ಎಂದು ಪಾವತಿಸಲಾಗಿದೆ. ಈ ದಿನ ಪತ್ರಿಕೆಗಳನ್ನು ಹರಾಜು ಪದ್ಧತಿಯಲ್ಲಿ/ವಿಲೇವಾರಿ ಮಾಡಿ ಬಂದ ಹಣವನ್ನು ಜಿ.ಆರ್.ಎ ನಿಧಿಗೆ ಕರ್ನಾಟಕ ಆರ್ಥಿಕ ಸಂಹಿತೆ (ಕೆ.ಎಫ್.ಸಿ) ಆರ್ಟಿಕಲ್–168ರ ಪ್ರಕಾರ ಜಮಾ ಮಾಡಬೇಕಾಗಿರುತ್ತದೆ ಇದರ ಬಗ್ಗೆ ಆಡಿಟ್ ವಿಚಾರಣ ಪತ್ರ:4/03.04.2019ರಂದು ನೀಡಲಾಗಿ ಕುಮಾರ್ ಟ್ರೇಡರ್ಸ್, ಮೈಸೂರು ಇವರಿಗೆ ಟೆಂಡರ್ ನೀಡಲಾಗಿದೆ ಆದರೆ ಟೆಂಡರ್‌ದಾರರು ವಿಲೇವಾರಿ ಮಾಡಿಕೊಳ್ಳಲು ಕಾಲೇಜಿಗೆ ಬಂದಿರುವುದಿಲ್ಲ ಎಂದು ಉತ್ತರ ನೀಡಿರುತ್ತಾರೆ ಆದ್ದರಿಂದ ವಿಲೇವಾರಿ ವಿಳಂಬವಾದಲ್ಲಿ ಸವಕಳಿ ಹೆಚ್ಚಾಗಿ ವಿಶ್ವವಿದ್ಯಾನಿಲಯಕ್ಕೆ ಬರುವ ನಿಗದಿತ ಮೊತ್ತ ನಷ್ಟವಾಗುವ ಸಂಭವ ಹೆಚ್ಚಾಗಿರುತ್ತದೆ ಆದ್ದರಿಂದ ತ್ವರಿತವಾಗಿ ವಿಲೇ ಮಾಡಿ ಬಂದಂತಹ ಹಣವನ್ನು ಜಿ.ಆರ್.ಎ ಗೆ ಜಮಾ ಮಾಡಲು ಸೂಚಿಸುತ್ತಾ ದಿನಪತ್ರಿಕೆಯ ಬಾಬ್ತು ರೂ.58,665/–ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ. | ಪ್ರಸ್ತಾವಿತ ಕಂಡಿಕೆಯಲ್ಲಿ ಮಹಾರಾಜ ಕಾಲೇಜು ಮೈಸೂರು ಇಲ್ಲಿಗೆ 2017–18ನೇ ಸಾಲಿನಲ್ಲಿ ವಿ.ರವಿ ನ್ಯೂಸ್ ಪೇಪರ್ ಏಜೇಂಟ್ ಮೈಸೂರು, ಇವರಿಗೆ ದಿನ ಪತ್ರಿಕೆ ವಿಭಾಗದಿಂದ ಪ್ರಜಾವಾಣಿ, ವಿಜಯಾಕರ್ನಾಟಕ, ಆಂದೋಲನ, ಮೈಸೂರು ಮಿತ್ರ ಮತ್ತು ವಾರ ಪತ್ರಿಕೆಗಳಾದ ಸುಧಾ, ತರಂಗ, ಉದ್ಯೋಗ ವಾರ್ತೆಗಳನ್ನು ಸರಬರಾಜು ಪಡೆದ ಬಾಬ್ತು ಎಂದು ರೂ.58,665/– ಪಾವತಿಸಲಾಗಿದೆ ಅದರೆ ಈ ರೀತಿ ಸರಬರಾಜು ಪಡೆದ ದಿನ ಪತ್ರಿಕೆಗಳನ್ನು (ಕೆ.ಎಫ್.ಸಿ) ಆರ್ಟಿಕಲ್–168ರ ಪ್ರಕಾರ ವಿಲೇವಾರಿ ಮಾಡದಿರುವ ಬಗ್ಗೆ ಪ್ರಸ್ತಾಪಿಸಲಾಗಿದೆ.<br>2017–18ನೇ ಸಾಲಿನಲ್ಲಿ, ಈ ಸಂಬಂಧ ವಿಲೇವಾರಿ ಪಡೆಯಲು ನಿರ್ಧರಿತವಾಗಿದ್ದ ಏಜೆನ್ಸಿಯಾದ ಮೆ॥ಕುಮಾರ್ ಟ್ರೇಡರ್ಸ್ ಮೈಸೂರು ರವರು ವಿಲೇವಾರಿ ಪಡೆಯದಿರುವುದರಿಂದ 2018–19ನೇ ಸಾಲಿನಲ್ಲಿ ಈ ರೀತಿಯ ಅನುಪಯುಕ್ತ ವಸ್ತುಗಳು ಮತ್ತು ಹಳೇ ಪೇಪರ್ ವಿಲೇವಾರಿ ಮಾಡಲು ವಿಶ್ವವಿದ್ಯಾನಿಯದಿಂದ ನಿರ್ಧರಿತವಾಗಿರುವ ಮೆ॥ ಪೂರ್ಣ ಟ್ರೇಡರ್ಸ್, ಮೈಸೂರು ಇವರಿಗೆ ಹಳೆ ಸಮಾಚಾರ ಪತ್ರಿಕೆಗಳು ಕೆ.ಜಿ 1ಕ್ಕೆ ರೂ.13 ದರದಲ್ಲಿ ವಿಲೇವಾರಿ ಮಾಡಲಾಗಿದೆ. ಮೆ॥ ಪೂರ್ಣ ಟ್ರೇಡರ್ಸ್ ಮೈಸೂರು ರವರು ವಿಶ್ವವಿದ್ಯಾನಿಲಯದ ಟೆಂಡರ್‌ನಲ್ಲಿ ನಿರ್ಧರಿತವಾಗಿರುವ ಏಜೆನ್ಸಿಯಾಗಿರುತ್ತದೆ.<br>ಸದರಿ ಏಜೆನ್ಸಿಗೆ ಹಳೇ ಸಮಾಚಾರ ಪತ್ರಕೆಗಳನ್ನು ವಿಲೇವಾರಿ ಮಾಡಲಾಗಿದೆ ಮತ್ತು ಈ ಸಂಬಂಧದ ಮೊತ್ತ ರೂ 4,933/–ನ್ನು ಸಾಮಾನ್ಯ ರೆವಿನ್ಯೂ ಖಾತೆಗೆ ಚಲನ್ ನಂ:–22660 ದಿನಾಂಕ:03.05.2019 ರಲ್ಲಿ ಜಮಾ ಮಾಡಲಾಗಿದೆ ಈ ಸಂಬಂಧ ಸುತ್ತೋಲೆ ಮತ್ತು ಚಲನ್ ಪ್ರತಿ ಲಗತ್ತಿಸಿದೆ.<br>ಆದ್ದರಿಂದ ಸೂಚಿತ ಆಕ್ಷೇಪಣೆ ಕಂಡಿಕೆಯನ್ನು ಕೈ ಬಿಡಲು ಕೋರಿದೆ. |

| | |
|---|---|
| **168. ಸ್ಟೇಷನರಿ ಸಾಮಾಗ್ರಿಗಳ ನೀಡಿಕೆ ವಹಿಯನ್ನು ನಿರ್ವಹಿಸದೆ ಇರುವುದು:– (ಮಹಾರಾಜ ಕಾಲೇಜು)**<br>2017–18ನೇ ಸಾಲಿನಲ್ಲಿ ಸ್ಟೇಷನರಿ ಸಾಮಾಗ್ರಿಗಳನ್ನು ಖರೀದಿಸಿದ್ದು ಸದರಿ ಸಾಮಾಗ್ರಿಗಳನ್ನು ಸ್ವೀಕೃತಿ ವಹಿಯಲ್ಲಿ ದಾಸ್ತಾನು ವಹಿಗೆ ಸ್ವೀಕೃತಿ ಲೆಕ್ಕ ತೆಗೆದುಕೊಂಡಿದ್ದು ಸ್ವೀಕೃತಿಗೆ ತೆಗೆದುಕೊಂಡ ಸಾಮಾಗ್ರಿಗಳನ್ನು ದಾಸ್ತಾನು ಪುಸ್ತಕದಲ್ಲಾಗಲಿ ಅಥವಾ ವಿತರಣಾ ವಹಿಯಲ್ಲಿ ಲೆಕ್ಕಕ್ಕೆ ತೆಗೆದುಕೊಂಡು ಸಹಿ ಪಡೆದ ನಂತರ ಸಾಮಾಗ್ರಿಗಳನ್ನು ನೀಡಬೇಕಾಗಿರುತ್ತದೆ ಆದರೆ 2017–18ನೇ ಸಾಲಿನಲ್ಲಿ ಸಾಮಾಗ್ರಿಗಳ ವಿತರಣೆ ಲೆಕ್ಕ ಲಭ್ಯವಿಲ್ಲದೆ ಇರುವುದರಿಂದ ಸ್ಟೇಷನರಿ ಸಾಮಾಗ್ರಿಗಳ ಲೆಕ್ಕ ತಾಳೆಹೊಂದುವುದಿಲ್ಲ ಆದ್ದರಿಂದ ಸ್ಟೇಷನರಿ ಸಾಮಾಗ್ರಿಗಳ ಸ್ವೀಕೃತಿ ಹಾಗೂ ವಿತರಣೆ ವಹಿಯನ್ನು ಕ್ರಮಬದ್ಧಗೊಳಿಸಿ ಲೆಕ್ಕ ಪರಿಶೋಧನೆಗೆ ಹಾಜರುಪಡಿಸಲು ಸೂಚಿಸಿದೆ. | ಪ್ರಸ್ತಾವಿತ ಕಂಡಿಕೆಯಲ್ಲಿ ಸೂಚಿತವಾಗಿರುವಂತೆ 2017–18ನೇ ಸಾಲಿನಲ್ಲಿ ಸದರಿ ಕಾಲೇಜಿನಲ್ಲಿ ಖರೀದಿಸಲಾದ ಸ್ಟೇಷನರಿ ಸಾಮಾಗ್ರಿಗಳ ಸ್ವೀಕೃತಿ ಮತ್ತು ಕಛೇರಿಯ ವಿವಿಧ ವಿಭಾಗಗಳ ಬೇಡಿಕೆ ಅವಶ್ಯಕತೆಗೆ ಅನುಗುಣವಾಗಿ ವಿತರಿಸಿರುವ, ವಿವರಗಳಿಗೆ ಸಂಬಂಧಿಸಿದಂತೆ ದಾಸ್ತಾನು ಮತ್ತು ವಿತರಣೆಯ ವಹಿಯನ್ನು ನಿರ್ವಹಿಸಿ 2018–19ನೇ ಸಾಲಿನ ಲೆಕ್ಕಪರಿಶೋಧನೆಗೆ ಹಾಜರುಪಡಿಸಲು ಕ್ರಮವಹಿಸಲಾಗಿದೆ. |
| **169. ವಾರ್ಷಿಕ ದಾಸ್ತಾನು ಪರಿಶೀಲನಾ ವರದಿ ಸಲ್ಲಿಸದಿರುವುದು:– (ಯುವರಾಜ ಕಾಲೇಜು)**<br>2017–18ನೇ ಸಾಲಿನ ಹಣಕಾಸು ವಿಭಾಗದ ವಾರ್ಷಿಕ ದಾಸ್ತಾನು ಪರಿಶೀಲನಾ ವರದಿಯನ್ನು ಸಕ್ಷಮ ಪ್ರಾಧಿಕಾರಕ್ಕೆ ಸಲ್ಲಿಸದಿರುವುದು ಕಂಡುಬಂದಿದೆ ಕರ್ನಾಟಕ ಆರ್ಥಿಕ ಸಂಹಿತೆ ಅನುಚ್ಛೇದ–169ರ ಪ್ರಕಾರ ದಾಸ್ತಾನು ಪರಿಶೀಲನೆ ನಡೆಸಿ ವಾರ್ಷಿಕ ದಾಸ್ತಾನು ಪರಿಶೀಲನಾ ವರದಿಯನ್ನು ಪ್ರಾಧಿಕಾರಕ್ಕೆ ಸಲ್ಲಿಸಿ ಪ್ರತಿಯನ್ನು ಲೆಕ್ಕ ಪರಿಶೋಧನೆಗೆ ಹಾಜರುಪಡಿಸುವಂತೆ ಸೂಚಿಸಿದೆ. | ಪ್ರಸ್ಥಾವಿತ ಕಂಡಿಕೆಯಲ್ಲಿನ ವಿಷಯಕ್ಕೆ ಸಂಬಂಧಿಸಿದಂತೆ, ಕರ್ನಾಟಕ ಆರ್ಥಿಕ ಸಂಹಿತೆಯ ಅನುಚ್ಛೇದ–169 ರಲ್ಲಿ ಸೂಚಿತವಾಗಿರುವಂತೆ ಸದರಿ ಕಾಲೇಜಿನ ಹಣಕಾಸು ವಿಭಾಗದಲ್ಲಿ ದಾಸ್ತಾನು ಪರಿಶೀಲನೆ ನಡೆಸಿ ವಾರ್ಷಿಕ ದಾಸ್ತಾನು ಪರಿಶೀಲನಾ ವರದಿಯನ್ನು ಸಕ್ಷಮ ಪ್ರಾಧಿಕಾರಕ್ಕೆ ಸಲ್ಲಿಸಲು ಕ್ರಮವಹಿಸಲಾಗಿದೆ ಎಂಬ ಅಂಶವನ್ನು ಲೆಕ್ಕ ಪರಿಶೋಧನೆ ಅವಗಾಹನೆಗೆ ತರಲಾಗಿದೆ. |
| **170. ವಾರ್ಷಿಕ ದಾಸ್ತಾನು ಭೌತಿಕ ಪರಿಶೀಲನಾ ವರದಿ ಹಾಗೂ ಅನುಪಯುಕ್ತ ವಸ್ತುಗಳ ವಿಲೇವಾರಿ ಮಾಡಿರುವ ವಿವರಗಳ ಹಾಜರುಪಡಿಸದಿರುವ ಕುರಿತು :– (ಯುವರಾಜ ಕಾಲೇಜು ಮಹಿಳಾ ವಿದ್ಯಾರ್ಥಿನಿಲಯ)**<br>ಯುವರಾಜ/ಮಹಾರಾಜ ಕಾಲೇಜು ಮಹಿಳಾ ವಿದ್ಯಾರ್ಥಿನಿಲಯ 2017–18ನೇ ಸಾಲಿನ ವಾರ್ಷಿಕ ದಾಸ್ತಾನು ಪರಿಶೀಲನಾ ವರದಿಯನ್ನು ಹಾಜರುಪಡಿಸಿರುವುದಿಲ್ಲ ಹಾಗೂ ಅನುಪಯುಕ್ತ ವಸ್ತುಗಳ ವಿಲೇವಾರಿ ಮಾಡದಿರುವುದು ಕಂಡು ಬಂದಿದ್ದು ಕರ್ನಾಟಕ ಆರ್ಥಿಕ ಸಂಹಿತೆ ಅನುಚ್ಛೇದ–169ರನ್ವಯ ಪ್ರತಿ ಆರ್ಥಿಕ ವರ್ಷ ಆಯಾಯ ವರ್ಷದ ದಾಸ್ತಾನುಗಳನ್ನು ಪರಿಶೀಲಿಸಿ ಸಕ್ಷಮ ಪ್ರಾಧಿಕಾರಕ್ಕೆ ವರದಿಯನ್ನು ಸಲ್ಲಿಸಬೇಕಾಗಿರುತ್ತದೆ ಹಾಗೂ ಅನುಪಯುಕ್ತ ವಸ್ತಗಳ ವಿಲೇವಾರಿ ಮಾಡಿ ಬಂದ ಆದಾಯವನ್ನು ವಿಶ್ವವಿದ್ಯಾನಿಲಯ ಸಾಮಾನ್ಯ ರೆವಿನ್ಯೂ ಖಾತೆಗೆ ಜಮೆ ಮಾಡಬೇಕಾಗಿರುತ್ತದೆ ಆದರೆ ವಿದ್ಯಾರ್ಥಿನಿಲಯದಲ್ಲಿ ಯಾವುದೇ ಪ್ರಕ್ರಿಯೆಗಳು ಕೈಗೊಂಡಿರುವುದಿಲ್ಲ ಈ ಬಗ್ಗೆ ವಿಚಾರಣಾ ಪತ್ರದ ಸಂಖ್ಯೆ:02/10.04.2019 ರಲ್ಲಿ ಕೋರಲಾಗಿ ಯಾವುದೇ ವಿವರಗಳನ್ನು ಹಾಜರುಪಡಿಸಿರುವುದಿಲ್ಲ ಆದ್ದರಿಂದ ನಿಯಮಾನುಸಾರ ಕ್ರಮ ಕೈಗೊಂಡು ಸಕ್ಷಮ ಪ್ರಾಧಿಕಾರಕ್ಕೆ ಸಲ್ಲಿಸಲು ಸೂಚಿಸಿದೆ. | ಕಂಡಿಕೆಯಲ್ಲಿ ವಾರ್ಷಿಕ ದಾಸ್ತಾನು ಭೌತಿಕ ಪರಿಶೀಲನಾ ವರದಿ ಹಾಗೂ ಅನುಪಯುಕ್ತ ವಸ್ತುಗಳ ವಿಲೇವಾರಿ ಮಾಡದಿರುವ ಬಗ್ಗೆ ಪ್ರಸ್ತಾಪಿಸಲಾಗಿರುತ್ತದೆ.<br>2017–18 ನೇ ಸಾಲಿನ ವಾರ್ಷಿಕ ದಾಸ್ತಾನು ವರದಿಯನ್ನು ಮುಂದಿನ ಲೆಕ್ಕಪರಿಶೋಧನಾ ವೇಳೆಯಲ್ಲಿ ಹಾಜರುಪಡಿಸುವುದಾಗಿ ನಿವೇದಿಸುತ್ತಾ ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿ ಬರುವ ವಿದ್ಯಾರ್ಥಿನಿಲಯಗಳ ಅನುಪಯುಕ್ತ ವಸ್ತುಗಳ ವಿಲೇವಾರಿಮಾಡುವ ಬಗ್ಗೆ ಮಾನ್ಯ ಕುಲಪತಿಗಳ ಅನುಮೋದನೆ ಮೇರೆಗೆ ವಿಶ್ವವಿದ್ಯಾನಿಲಯದ ಆದೇಶ ಸಂಖ್ಯೆ:ಜಿ,ಎಲ್6/124/1997–98 ದಿನಾಂಕ:29.09.2020 ರಲ್ಲಿ ಅನುಮತಿ ನೀಡಲಾಗಿದ್ದು ಅದರನ್ವಯ ಆದೇಶ ಸಂಖ್ಯೆ:ವಿಶೇಪಾ5/628/2020–21 ದಿನಾಂಕ:27.10.2020ರ ಕ್ರಮಸಂಖ್ಯೆ (14) ರಲ್ಲಿ ಯುವರಾಜ ಕಾಲೇಜು ಮಹಿಳಾ ವಿದ್ಯಾರ್ಥಿನಿಲಯದ ಅನುಪಯುಕ್ತ ವಸ್ತುಗಳನ್ನು ವಿಲೇವಾರಿ ಮಾಡಿ ಅದ್ದರಿಂದ **ಸಂದಾಯವಾದ ಮೊತ್ತ ರೂ.6166/–ಗಳನ್ನು ಚಲನ್ ನಂ:43106 ದಿನಾಂಕ:08.12.2020 ರಂದು ಸಾಮಾನ್ಯ ರೆವಿನ್ಯೂ ಖಾತೆಗೆ** ಜಮೆ ಮಾಡಲಾಗಿರುತ್ತದೆ ಜಮಾ ಮಾಡಿರುವ ಚಲನ್ ಪ್ರತಿ ಬ್ಯಾಂಕ್ ಸ್ಕ್ರೋಲ್ ಪ್ರತಿ ಹಾಗೂ ವಿಶ್ವವಿದ್ಯಾನಿಲಯದ ಆದೇಶದ ಪ್ರತಿಗಳನ್ನು ಲಗತ್ತಿಸಿ ತಮ್ಮ ಅವಗಾಹನೆಗಾಗಿ ಸಲ್ಲಿಸಿದೆ. |

**171. ಸಂಸ್ಥೆಯ ಸಾಲದ ಮೇಲಿನ ಬಿಲ್ಲುಗಳನ್ನು ನೇರವಾಗಿ ಸಂಸ್ಥೆಯ ಹೆಸರಿಗೆ ಧನಾದೇಶ ನೀಡಿ ಪಾವತಿಸುವ ಬದಲು ಸ್ವಂತಕ್ಕೆ ಹಣ ಡ್ರಾ ಮಾಡಿರುವುದು ಮತ್ತು ಖರೀದಿಸದೆ ಎನ್ನಲಾಗುವ ಸಾಮಾಗ್ರಿಯನ್ನು ದಾಸ್ತಾನು ಬಹಿಗೆ (ಸ್ವೀಕೃತಿ) ಕಡಿಮೆ ಸಂಖ್ಯೆ ದಾಖಲಿಸಿರುವುದು:– (ಪ್ರಾಣಿಶಾಸ್ತ್ರ ಅಧ್ಯಯನ ವಿಭಾಗ)**

1) ಬಿ.ಆರ್ ಸಂಖ್ಯೆ ದಾಖಲಿಸದೇ ಧನಾದೇಶ ಸಂಖ್ಯೆ:708430/02.03.2018 ರಲ್ಲಿ ರೂ.25,000/–ಗಳನ್ನು ಸ್ವಂತಕ್ಕೆ ಹಣ ಡ್ರಾ ಮಾಡಿದ್ದು ಈ ಸಂಬಂಧದ ವೋಚರ್‌ಗಳನ್ನು ಪರಿಶೀಲಿಸಲಾಗಿ ವೋಚರ್ ಸಂಖ್ಯೆ(1) ರಲ್ಲಿ Nidhi Agencies Mysore ರವರ ಸಾಲದ ಬಿಲ್ಲು ಸಂಖ್ಯೆ:17761/23.07.2015 (Cridit Bill) ರೂ.19,839/–ರಲ್ಲಿ ದಿನಾಂಕ:23.07.2015ರಂದು ಕೆಲವು ರಾಸಾಯನಿಕ ಸಾಮಾಗ್ರಿಗಳನ್ನು ಖರೀದಿಸಿದ್ದು ಸಾಲದ ಆಧಾರದ ಮೇಲೆ ಸಾಮಾಗ್ರಿಗಳನ್ನು ಖರೀದಿಸಿರುವುದರಿಂದ ಸಂಸ್ಥೆಯ ಹೆಸರಿಗೆ ಧನಾದೇಶ ಬರೆದು ಪಾವತಿಸದೇ ಸ್ವಂತಕ್ಕೆ ಹಣ ಡ್ರಾ ಮಾಡಿರುವುದು ಪಾವತಿ ನಿಯಮಗಳನ್ನು (ಕೆಎಫ್‌ಸಿ–70) ಉಲ್ಲಂಘಿಸಸಿದಂತಾಗಿರುತ್ತದೆ ಮತ್ತು ಸ್ವಂತಕ್ಕೆ ಡ್ರಾ ಮಾಡಿದ ಹಣದಿಂದಲೇ ಪಾವತಿಸಿದ್ದಲ್ಲಿ ಸಂಸ್ಥೆಯಿಂದ ಪಡೆದ ಹಣ ಸಂದ ರಶೀತಿಯನ್ನು (Cash Recepit) ಲೆಕ್ಕಪರಿಶೋಧನೆಗೆ ಹಾಜುರುಪಡಿಸಿರುವುದಿಲ್ಲ ಸ್ವಂತಕ್ಕೆ ಹಣ ಡ್ರಾ ಮಾಡಿರುವುದಕ್ಕೆ ಈ ಕೆಳಕಂಡ ನ್ಯೂನ್ಯತೆಗಳನ್ನು ಗಮನಿಸಲಾಗಿದೆ.

ಅ) ಕರ್ನಾಟಕ ಆರ್ಥಿಕ ಸಂಹಿತೆ 1958 ಅನುಚ್ಛೇದ–70ರ ರೀತ್ಯ ಎಲ್ಲಾ ಪಾವತಿಗಳನ್ನು ಧನಾದೇಶದ ಮೂಲಕವೇ ಸಂದಾಯ ಮಾಡಬೇಕಾಗಿದ್ದು ಅಧಿಕ ಮೊತ್ತದ ಹಣವನ್ನು ಸ್ವಂತಕ್ಕೆ ಡ್ರಾ ಮಾಡಿರುವುದು ನಿಯಮಗಳ ಉಲ್ಲಂಘನೆಯಾಗಿರುತ್ತದೆ.

ಆ) ವಿಭಾಗದ/ಕಛೇರಿಯ ಎಲ್ಲಾ ವೆಚ್ಚಗಳ ಪಾವತಿಗಳನ್ನು ಅದಷ್ಟು ನಗದು ರಹಿತವಾಗಿ ಪಾವತಿಸಬೇಕಾಗಿದ್ದು ಹಾಗೂ ಸೇವಾದಾರರು ಮತ್ತು ಸರಬರಾಜುದಾರರುಗಳಿಗೆ ನಿಯಮಾನುಸಾರ ಧನಾದೇಶ/RTGS/NEFT ಮುಂಖಾತರ ಪಾವತಿಸಲು ಕ್ರಮ ವಹಿಸದಿರುವುದು ಮತ್ತು ಪಾವತಿಗಳಲ್ಲಿ ಪಾರದರ್ಶಕತೆ ಕಾಯ್ದುಕೊಳ್ಳದಿರುವುದು ವಿಭಾಗದ ಅಧ್ಯಕ್ಷರ/ಹಣ ಸೆಳೆದ ಅಧಿಕಾರಿಯ ಕರ್ತವ್ಯಲೋಪವಾಗಿರುತ್ತದೆ.

2015–16ನೇ ಸಾಲಿನ ಬಿಲ್ಲುಗಳನ್ನು 2017–18ನೇ ಸಾಲಿನಲ್ಲಿ ವಿಳಂಬವಾಗಿ ಪಾವತಿಸಿರುವುದಕ್ಕೆ ಮೇಲಾಧಿಕಾರಿಗಳಿಂದ 'Delay of Condolence' ಮಂಜೂರಾದ ಬಗ್ಗೆ ಆದೇಶದ ಪ್ರತಿಯನ್ನು ಹಾಜರುಪಡಿಸಿರುವುದಿಲ್ಲ.

ಪ್ರಸ್ತಾವಿತ ಕಂಡಿಕೆಯಲ್ಲಿನ ವಿಷಯಕ್ಕೆ ಸಂಬಂಧಿಸಿದಂತೆ ಪ್ರಾಣಿಶಾಸ್ತ್ರ ಅಧ್ಯಯನ ವಿಭಾಗದಲ್ಲಿ 2017–18ನೇ ಸಾಲಿನಲ್ಲಿ ಧನಾದೇಶ ಸಂಖ್ಯೆ:708430/02.03.2018 ಡ್ರಾ ಮಾಡಿರುವ ಒಟ್ಟು ಮೊತ್ತ ರೂ.25,000ದಲ್ಲಿ M/s Nidhi Agencies Mysore ರವರಿಂದ ಸಾಲದ ಬಿಲ್ ಸಂಖ್ಯೆ:17761 ದಿನಾಂಕ:23.07.2015ರಲ್ಲಿ ಸರಬರಾಜು ಪಡೆದಿರುವ ರೂ.19,839/– (ರಸಾಯನಿಕ ಸಾಮಾಗ್ರಿಗಳ ಬಾಬ್ತು) ಸಂಬಂಧಿಸಿದ ಏಜೆನ್ಸಿಯು ನೀಡಿರುವ 'ಹಣ ಸಂದಾಯ ರಶೀದಿ' ಹಾಜರುಪಡಿಸದೆ ಇರುವುದನ್ನು ಉಲ್ಲೇಖಿಸಿ ರೂ.19,839/– ವಸೂಲಾತಿಗೆ ಸೂಚಿಸಲಾಗಿದೆ.

ಪ್ರಸ್ತುತ ಆಡಿಟ್ ವರದಿಯಲ್ಲಿ ಸೂಚಿತವಾಗಿರುವ ರೂ.19,839/– ಸಂಬಂಧಿಸಿದ ಏಜೆನ್ಸಿಗೆ ಸಂದಾಯವಾಗಿದೆ ಎಂಬುದನ್ನು ಧೃಢೀಕರಿಸುವ ಏಜೆನ್ಸಿ ನೀಡಿರುವ ಹಣ ಸಂದಾಯದ ಸ್ವೀಕೃತಿ ಪತ್ರ ಸಲ್ಲಿಸಿ (ಪತ್ರದ ಪ್ರತಿ ಅಡಕಗೊಳಿಸಿದೆ)

ಅಲ್ಲದೇ ವರದಿಯಲ್ಲಿ ಸೂಚಿತವಾಗಿರುವಂತೆ ಮುಂದಿನ ದಿನಗಳಲ್ಲಿ ಪಾವತಿಯನ್ನು **RTGS/NEFT** ಮುಖಾಂತರವೆ ಪಾವತಿ ಮಾಡಲು ಕ್ರಮವಹಿಸಲಾಗಿದೆ. ಮತ್ತು ವಿಳಂಬ ಪಾವತಿಯಗೆ ಅವಕಾಶ ಇಲ್ಲದಂತೆ ಪಾವತಿ ಬಿಲ್ಲುಗಳನ್ನು ನಿಗದಿತವಾದ ಅವಧಿಯಲ್ಲಿ ಸಲ್ಲಿಸಲು ಕ್ರಮವಹಿಸಲಾಗಿದೆ.

ಆದ ಕಾರಣ ಸೂಚಿತ ವಸೂಲಾತಿ ಕಂಡಿಕೆಯನ್ನು ಕೈ ಬಿಡಲು ಕೋರಿದೆ.

| | |
|---|---|
| ಮೇಲ್ಕಂಡ ಎಲ್ಲಾ ನ್ಯೂನ್ಯತೆಗಳನ್ನು ವಿಚಾರಣಾ ಪತ್ರ ಸಂಖ್ಯೆ:09/2019–20 ದಿನಾಂಕ:15.06.2019 ರಲ್ಲಿ ಪ್ರಸ್ತಾಪಿಸಿದರೂ ಸಹ ಯಾವುದೇ ಪ್ರತಿಕ್ರಿಯೆ ವ್ಯಕ್ತಪಡಿಸದ ಕಾರಣ ಹಾಗೂ (1) ಮತ್ತು (2) ರಲ್ಲಿನ ನಿಯಮಗಳ ಉಲ್ಲಂಘನೆಯನ್ನಾಧರಿಸಿ ಒಟ್ಟು ಮೊತ್ತ ರೂ.19,839/–ಗಳನ್ನು ವಸೂಲಾತಿಗೆ ಸೂಚಿಸಿದೆ. | |
| **172. 2017–18ನೇ ಸಾಲಿನಲ್ಲಿ ಖರೀದಿಸಲಾದ ಉಪಕರಣ/ಪೀಠೋಪಕರಣಗಳನ್ನು ವಾರ್ಷಿಕ ದಾಸ್ತಾನು ಪರಿಶೀಲನಾ ವರದಿ (Annual Stock Verification Report) ಯಲ್ಲಿ ಸೇರ್ಪಡೆಗೊಳಿಸದಿರುವದು:– (ಪ್ರಾಣಿಶಾಸ್ತ್ರ ಅಧ್ಯಯನ ವಿಭಾಗ)**<br><br>ಪ್ರಾಣಿಶಾಸ್ತ್ರ ಅಧ್ಯಯನ ವಿಭಾಗದಲ್ಲಿ ಲೆಕ್ಕಪರಿಶೋಧನೆಗೆ ಹಾಜರುಪಡಿಸಲಾದ ವೋಚರ್‌ಗಳನ್ನು ಪರಿಶೀಲಿಸಲಾಗಿ 2017–18ನೇ ಸಾಲಿನಲ್ಲಿ ಅಧ್ಯಯನ ವಿಭಾಗದ ವತಿಯಿಂದ ಹಾಗೂ ಯುಜಿಸಿ ಪ್ರಯೋಜಿತ ವಿವಿಧ ಕಾರ್ಯಕ್ರಮದಡಿಯಲ್ಲಿ ಖರೀದಿಸಿರುವ ವಿವಿಧ ಉಪಕರಣಗಳು/ಪೀಠೋಪಕರಣಗಳನ್ನು ವಿಭಾಗದ ವಾರ್ಷಿಕ ದಾಸ್ತಾನು ಪರಿಶೀಲನಾ ವರದಿಯಲ್ಲಿ ಸೇರ್ಪಡೆ/ಪರಿಗಣಿಸದಿರುವುದನ್ನು ಗಮನಿಸಲಾಗಿದೆ ವಿವರವನ್ನು ಅನುಬಂಧ–89 ರಲ್ಲಿ ನೀಡಲಾಗಿದೆ ಈ ಸಂಬಂಧ ಸೂಕ್ತ ವಿವರಣೆ ಕೋರಿ ವಿಚಾರಣಾ ಪತ್ರದ ಸಂಖ್ಯೆ:12/2019–20/15.06.2019 ಅನ್ನು ನೀಡಲಾಗಿದ್ದರೂ ಯಾವುದೇ ವಿವರಣೆಯನ್ನು ನೀಡಿರುವುದಿಲ್ಲ ಕರ್ನಾಟಕ ಆರ್ಥಿಕ ಸಂಹಿತೆ–1958 ರ ಅನಿಚ್ಛೇಧ 168 ರಿಂದ 172 ಪತ್ರಿ ಹೊಸ ಖರೀದಿಯನ್ನು ಸದರಿ ಸಾಲಿನ ವಾರ್ಷಿಕ ದಾಸ್ತಾನು ಪರಿಶೀಲನಾ ವರದಿಯಲ್ಲಿ ಸೇರ್ಪಡೆಗೊಳಿಸುವಂತೆ ವಿವರಿಸುತ್ತದೆ ಆದರೆ ಹೊಸ ಉಪಕರಣ/ಪೀಠೋಪಕರಣಗಳ ಖರೀದಿಯನ್ನು ಸೇರ್ಪಡೆಗೊಳಿಸದಿರುವುದು ನಿಯಮ ಉಲ್ಲಂಘಿಸಿದಂತಾಗಿದ್ದು ಖರೀದಿಸಿರುವ ಉಪಕರಣ/ಪೀಠೋಪಕರಣಗಳ **ಒಟ್ಟು ಮೊತ್ತ ರೂ.10,29,631/–ಗಳನ್ನು ಆಕ್ಷೇಪಣೆ ಸೂಚಿಸಲಾಗಿದೆ.** | ಪ್ರಸ್ಥಾವಿತ ಕಂಡಿಕೆಯಲ್ಲಿ 2017–18ನೇ ಸಾಲಿನಲ್ಲಿ ಪ್ರಾಣಿಶಾಸ್ತ್ರ ವಿಭಾಗಕ್ಕೆ ಸರಬರಾಜು ಪಡೆದಿರುವ ಉಪಕರಣಗಳು/ಪಿಠೋಪಕರಣಗಳು ವಾರ್ಷಿಕ ದಾಸ್ತಾನು ಪರಿಶೀಲನಾ ವರದಿಯಲ್ಲಿ ((Annual Stock Verification Report) ಯಲ್ಲಿ ಸೇರ್ಪಡೆಯಾಗದೆ ಇರುವ ಅಂಶವನ್ನು ಉಲ್ಲೇಖಿಸಿ ಈ ಸಂಬಂಧ ಬಿಲ್‌ಗಳ ಒಟ್ಟು ಮೊತ್ತ ರೂ.10,29,631/– ಆಕ್ಷೇಪಿಸಲಾಗಿದೆ. (ವಿವರ ಅನುಬಂಧ–89)<br><br>ಆಡಿಟ್ ವರದಿಯಲ್ಲಿನ ಸೂಚನೆ ಅನ್ವಯ 2017–18ನೇ ಸಾಲಿನಲ್ಲಿ ಪ್ರಾಣಿಶಾಸ್ತ್ರ ಅಧ್ಯಯನ ಮತ್ತು ಸಂಶೋಧನ ವಿಭಾಗಕ್ಕೆ ಸರಬರಾಜು ಪಡೆದಿದ್ದರೂ ವಾರ್ಷಿಕ ದಾಸ್ತಾನು ವರದಿಗೆ/ಪಟ್ಟಿಗೆ ಸೇರ್ಪಡೆಯಾಗದಿರುವ ವಸ್ತುಗಳನ್ನು/ಉಪಕರಣಗಳನ್ನು ಪಟ್ಟಿಗೆ ಸೇರ್ಪಡೆ ಮಾಡಲಾಗಿದೆ, ಮತ್ತು ಈ ಸಂಬಂಧ ಸಕ್ಷಮ ಅಧಿಕಾರಿಯಿಂದ ದಾಸ್ತಾನು ಸೇರ್ಪಡೆ ಮತ್ತು ಧೃಢೀಕರಣವಾಗಿರುವ ಪಟ್ಟಿಯ, ಪ್ರತಿ ಅಡಕಗೊಳಿಸಿದೆ.<br><br>ಆದ ಕಾರಣ ಸೂಚಿತ ಕಂಡಿಕೆಯನ್ನು ಕೈ ಬಿಡಲು ಕೋರರದೆ. |
| **173. ಖರೀದಿಸಿದ ಸಾಮಾಗ್ರಿಗಳನ್ನು ವಾರ್ಷಿಕ ದಾಸ್ತಾನು ಪರಿಶೀಲನಾ ವರದಿಯಲ್ಲಿ ಸೇರ್ಪಡೆಗೊಳಿಸದಿರುವುದು:– (ರಸಾಯನಶಾಸ್ತ್ರ ಅಧ್ಯಯನ ವಿಭಾಗ)**<br><br>ಈ ವಿಭಾಗದ ವಿವಿಧ ಯೋಜನೆಗಳಡಿ ಖರೀದಿಸಲಾದ ಪ್ರಯೋಗಶಾಲಾ ಪರಿಕರಗಳ ವೋಚರ್‌ಗಳನ್ನು ಪರಿಶೋಧಿಸಲಾಗಿ ಖರೀದಿಸಲಾದ ಪರಿಕರಗಳನ್ನು ದಾಸ್ತಾನು ವಹಿಗೆ ಸ್ವೀಕೃತಿ ತೆಗೆದುಕೊಂಡಿದ್ದು 2017–18ನೇ ಸಾಲಿನ ವಾರ್ಷಿಕ ದಾಸ್ತಾನು ಪರಿಶೀಲನಾ ವರದಿಯಲ್ಲಿ ಎಣಿಕೆ ಮಾಡಿ ಹೊಸದಾಗಿ ಸೇರ್ಪಡೆಗೊಳಿಸಿರುವುದಿಲ್ಲ ಇದರಿಂದಾಗಿ ಒಟ್ಟಾರೆ ವಿಶ್ವವಿದ್ಯಾನಿಲಯದ ಆಸ್ತಿ ಕ್ರೋಢೀಕರಣ ತಃಖ್ತೆಯಲ್ಲಿ ಈ ಪರಿಕರಗಳ ಮೌಲ್ಯದ ಕೊರತೆ ಉಂಟಾಗುವುದರಿಂದ ಹಾಗೂ | ಪ್ರಸ್ಥಾವಿತ ಕಂಡಿಕೆಯಲ್ಲಿನ ವಿಷಯಕ್ಕೆ ಸಂಬಂಧಿಸಿದಂತೆ 2017–18ನೇ ಸಾಲಿನಲ್ಲಿ ರಸಾಯನಶಾಸ್ತ್ರ ವಿಭಾಗಕ್ಕೆ ಖರೀದಿಸಲಾಗಿರುವ ವಸ್ತುಗಳಿಗೆ ಸಂಬಂಧಿಸಿದ ಪ್ರಾಧ್ಯಾಪಕರು, ಸಹಾಯಕ ಪ್ರಾಧ್ಯಾಪಕರು ಹಣಕಾಸು ಅಧಿಕಾರಿಗಳು ಮೈಸೂರು ವಿಶ್ವವಿದ್ಯಾನಿಲಯ ಮೈಸೂರು, ಇವರಿಗೆ ಸಲ್ಲಿಸಿರುವ ವಾರ್ಷಿಕ ದಾಸ್ತಾನು ವರದಿಯಲ್ಲಿ (ಅನುಬಂಧ–89ರಲ್ಲಿ) ಸೂಚಿತವಾಗಿರುವ ಪರಿಕರಗಳು, ತಾಂತ್ರಿಕ ಉಪಕರಣಗಳು ಸೇರ್ಪಡೆಯಾಗದೆ ಇರುವ ಬಗ್ಗೆ ಉಲ್ಲೇಖಿಸಲಾಗಿದೆ. |

| | |
|---|---|
| ಕೈಬಿಟ್ಟಂತಾಗುವುದರಿಂದ ವಿಶ್ವವಿದ್ಯಾನಿಲಯದ ಆಸ್ತಿ ಮತ್ತು ಹೊಣೆಗಾರಿಕೆಯ ಪಟ್ಟಿಯಲ್ಲಿ ಅಸಮತೋಲನ ಉಂಟಾಗುತ್ತದೆ ಮತ್ತು ಕರ್ನಾಟಕ ಆರ್ಥಿಕ ಸಂಹಿತೆ 1958 ಅನುಚ್ಛೇಧ–169,170,171 ಮತ್ತು 172 ರ ನಿಯಮಗಳನ್ನು ಉಲ್ಲಂಘಿಸಿದಂತಾಗಿರುತ್ತದೆ.<br><br>ಈ ನ್ಯೂನ್ಯತೆ ಕುರಿತಂತೆ ವಿಚಾರಣಾ ಪತ್ರ ಸಂಖ್ಯೆ:06/2019–20ನ್ನು ದಿನಾಂಕ:28.06.2019 ರಂದು ನೀಡಿದ್ದರೂ ಸಹ ಉತ್ತರ ನೀಡದ ಕಾರಣ ದಾಖಲಿಸಿರುವ ಒಟ್ಟು ಮೊತ್ತ ರೂ.2,59,534/–ಗಳನ್ನು ಆಕ್ಷೇಪಣೆಗೆ ಸೂಚಿಸಲಾಗಿದೆ ಅನುಬಂಧ–89 ರಲ್ಲಿ ಲಗತ್ತಿಸಿದೆ. | ಪ್ರಸ್ತುತ ವರದಿಯಲ್ಲಿನ ಸೂಚನೆ ಪ್ರಕಾರ ಸರಬರಾಜು ಪಡೆಯಲಾಗಿದ್ದರೂ ಸಹ ವಾರ್ಷಿಕ ದಾಸ್ತಾನು ಪಟ್ಟಿಯಲ್ಲಿ ಸೇರ್ಪಡೆಯಾಗದಿರುವ ವಸ್ತುಗಳು ಉಪಕರಣಗಳ ಸರಬರಾಜು ವಿವರವನ್ನು ಸವಿವರವಾಗಿ (Revised Annual Stock Verification Report) ಪಟ್ಟಿಯಲ್ಲಿ ಸೇರ್ಪಡೆ ಮಾಡಲಾಗಿದೆ ಎಂಬ ಅಂಶವನ್ನು ಲೆಕ್ಕಪರಿಶೋಧನೆ ಅವಗಾಹನೆಗೆ ತರಲಾಗಿದೆ ಮತ್ತು ಈ ವರದಿಯೂ ಅಧ್ಯಕ್ಷರು, ರಸಾಯನ ಶಾಸ್ತ್ರ ವಿಭಾಗ ಇವರಿಂದ ಧೃಢೀಕರಿಸಲ್ಪಟಿದೆ. Revised Annual Stock Verification Report ಪ್ರತಿ ಅಡಕಗೊಳಿಸಿದೆ.<br><br>ಪ್ರಸ್ತುತ ವರದಿಯಲ್ಲಿ ಸೂಚಿತವಾಗಿರುವ ಎಲ್ಲಾ ಅಂಶಗಳನ್ನು ಪಾಲನೆ ಮಾಡಿರುವದರಿಂದ ಸೂಚಿತ ಆಕ್ಷೇಪಣೆ ಕಂಡಿಕೆ ಕೈ ಬಿಡಲು ಕೋರಿದೆ. |
| **174. 2017–18ನೇ ಸಾಲಿನ ವಾರ್ಷಿಕ ಪರಿಶೀಲನಾ ವರದಿಯನ್ನು ನಿಯಮಾನುಸಾರ ಸಮರ್ಪಕವಾಗಿ ನಿರ್ವಹಿಸದಿರುವುದು ಮತ್ತು ವರದಿಯಲ್ಲಿ ಕಂಡುಬಂದ ಲೋಪದೋಷಗಳು :– (ರಸಾಯನಶಾಸ್ತ್ರ ಅಧ್ಯಯನ ವಿಭಾಗ)**<br><br>ಈ ವಿಭಾಗದ 2017–18ನೇ ಸಾಲಿನ ವಾರ್ಷಿಕ ದಾಸ್ತಾನು ಪರಿಶೀಲನೆಯನ್ನು ಡಾ॥ ನಾಗರಾಜು ನಾಯ್ಕ ಪ್ರಾಧ್ಯಪಕರು, ಡಾ॥ ಮೋಹನ್,ಕೆ.ಎಸ್ ಸಹ ಪ್ರಾಧ್ಯಪಕರು ಡಾ॥ ಕೆ,ಮಂಟೇಲಿಂಗು ಸಹಾಯಕಪ್ರಾಧ್ಯಪಕರು ಮತ್ತು ಡಾ॥ ಬಿ,ಎಸ್,ಪ್ರಿಯಾ ಸಹಾಯಕ ಪ್ರಧ್ಯಾಪಕರು ಇವರುಗಳು ದಿನಾಂಕ:18.06.2018 ರಿಂದ ದಿನಾಂಕ:23.06.2018 ರವರೆಗೆ ಕೈಗೊಂಡು ವಾರ್ಷಿಕ ದಾಸ್ತಾನು ಪರಿಶೀಲನಾ ವರದಿಯನ್ನು ಹಣಕಾಸು ಅಧಿಕಾರಿಯವರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ರವರಿಗೆ ಕಛೇರಿ ಪತ್ರ ಸಂಖ್ಯೆ:ಎಂಜಿಸಿ/216/2018–19/ದಿನಾಂಕ:29.06.2018 ರಂದು ಸಲ್ಲಿಸಲಾಗಿದೆ.<br><br>ಸಲ್ಲಿಸಿರುವ ವರದಿಯನ್ನು ಪರಿಶೀಲಿಸಲಾಗಿ ಅನೇಕ ಲೋಪದೋಷಗಳು ಕಂಡು ಬಂದಿದ್ದು ವಿವರಗಳು ಈ ಕೆಳಕಂಡಂತಿವೆ<br><br>ಅ) 2017–18ನೇ ಸಾಲಿನ ಖರೀದಿಸಿರುವ (ಅನುಬಂಧ–90 ರಲ್ಲಿ ವಿವರಿಸಿದೆ) ಅನೇಕ ಸಾಮಾಗ್ರಿಗಳನ್ನು ವರದಿಯಲ್ಲಿ ಸೇರ್ಪಎಡಗೊಳಿಸಿರುವುದಿಲ್ಲ.<br><br>ಆ) ವರದಿಯಲ್ಲಿ ಸಾಮಾಗ್ರಿಗಳ ಒಟ್ಟು ಸಂಖ್ಯೆಗಳನ್ನು ಮಾತ್ರ ದಾಖಲಿಸಿದ್ದು ಪ್ರಾರಂಭಿಕ ಶಿಲ್ಕು | ಪ್ರಸ್ತಾವಿತ ಕಂಡಿಕೆಯಲ್ಲಿನ ವಿಷಯಕ್ಕೆ ಸಂಬಂಧಿಸಿದಂತೆ, 2017–18ನೇ ಸಾಲಿನಲ್ಲಿ ಖರೀದಿಸಲಾಗಿರುವ ವಸ್ತುಗಳಿಗೆ ಸಂಬಂಧಿಸಿದ ಪ್ರಾಧ್ಯಾಪಕರು, ಸಹ ಪ್ರಾಧ್ಯಾಪಕರು ಮತ್ತು ಸಹಾಯಕ ಪ್ರಾಧ್ಯಾಪಕರು, ದಾಸ್ತಾನು ಪರಿಶೀಲನಾ ಕಾರ್ಯನಿರ್ವಹಿಸಿದ್ದು, ಹಣಕಾಸು ಅಧಿಕಾರಿಗಳು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರಿಗೆ ಸಲ್ಲಿಸಿರುವ ವಾರ್ಷಿಕ ದಾಸ್ತಾನು ವರದಿ (ಅನುಬಂಧ – 90) ಯಲ್ಲಿ ಸೂಚಿತವಾಗಿರುವ ಪರಿಕರಗಳು, ತಾಂತ್ರಿಕ ಉಪಕರಣಗಳು ಸೇರ್ಪಡೆಯಾಗದಿರುವ ಬಗ್ಗೆ ಉಲ್ಲೇಖಿಸಲಾಗಿದೆ.<br><br>ಪ್ರಸ್ತುತ ವರದಿಯಲ್ಲಿನ ಸೂಚನೆ ಅನ್ವಯ (ಅನುಬಂಧ – 90) ರ ಪ್ರಕಾರ ಸರಬರಾಜು ಪಡೆಯಲಾಗಿದ್ದರೂ ಸಹ ವಾರ್ಷಿಕ ದಾಸ್ತಾನು ವರದಿಯಲ್ಲಿ ಸೇರ್ಪಡೆಯಾಗದಿರುವ ವಸ್ತುಗಳನ್ನು ಉಪಕರಣಗಳ ಸರಬರಾಜು ವಿವರವನ್ನು ಸವಿವರವಾಗಿ ಖಿಜತುಜಜ ಂಟಿಟಿಣಾಚಿಟ ಖಣಂಛಿಞ ಗಿಜಡುಜುಛಿಛಿಚಿಣುಂಟಿ ಪಟ್ಟಿಯಲ್ಲಿ ಸೇರ್ಪಡೆ ಮಾಡಲಾಗಿದೆ ಎಂಬ ಅಂಶವನ್ನು ಲೆಕ್ಕಪರಿಶೋಧನೆ ಅವಗಾಹನೆಗೆ ತರಲಾಗಿದೆ.<br><br>ಆದ್ದರಿಂದ ಸೂಚಿತ ಕಂಡಿಕೆಯನ್ನು ಕೈಬಿಡಲು ಕೋರಿದೆ. |

| | |
|---|---|
| ಪ್ರಸ್ತಕ ಸಾಲಿನ ಖರೀದಿ ಹಾಗೂ ಅಂತಿಮಶಿಲ್ಕು ವಿವರಗಳನ್ನು ದಾಖಲಿಸಿರುವುದಿಲ್ಲ ಹಾಗೆಯೇ ವರದಿಯಲ್ಲಿರುವಂತೆ ಒಟ್ಟು 908 ಸಾಮಾಗ್ರಿಗಳ ದಿನಾಂಕ:31.03.2018ರ ಅಂತ್ಯಕ್ಕೆ ಇರುವ ವಾಸ್ತವ ವಸ್ತು ಸ್ಥಿತಿಯ ಬಗ್ಗೆ ವಿವರಗಳನ್ನು ದಾಖಲಿಸಿರುವುದಿಲ್ಲ ಕರ್ನಾಟಕ ಆರ್ಥಿಕ ಸಂಹಿತೆ 1958 ಅನುಚ್ಛೇಧ–172 ರಂತೆ ವಾರ್ಷಿಕ ದಾಸ್ತಾನು ಪರಿಶೀಲನಾ ವರದಿಯನ್ನು ಸಿದ್ಧಪಡಿಸಲು ಸೂಚಿಸಿದೆ (ವಿಚಾರಣಾ ಪತ್ರ ಸಂಖ್ಯೆ:06/2019–20/ದಿನಾಂಕ:28.06.2019) | |

**175. ಖರೀದಿಸಿದ ಸಾಮಾಗ್ರಿಗಳನ್ನು ವಾರ್ಷಿಕ ದಾಸ್ತಾನು ಪರಿಶೀಲನಾ ವರಿದಿಯಲ್ಲಿ (2016–17ನೇ ಸಾಲು) ಸೇರ್ಪಡೆಗೊಳಿಸದಿರುವುದು :– (ಜೀವ ರಸಾಯನ ಶಾಸ್ತ್ರ ಅಧ್ಯಯನ ವಿಭಾಗ)**

| ಕ್ರ ಸಂ | ಬಿ,ಆರ್ ಸಂಖ್ಯೆ ದಿನಾಂಕ | ಧನಾದೇಶ ಸಂಖ್ಯೆ ದಿನಾಂಕ | ವಿವರ ಸಂಸ್ಥೆ | ಮೊಬಲಗು (ರೂ.ಗಳಲ್ಲಿ) |
|---|---|---|---|---|
| 1 | 103/2016–17 | 868726/01.04.17 | Magnetic Stirrer (Project under UGC/MRP) ನಿಧಿ ಏಜೆನ್ಸೀಸ್ ಮೈಸೂರು | 6327 |
| 2 | 105/2016–17 ದಿನಾಂಕ:17.02.17 | 868725/01.04.17 | Electophoresis (Project under UGC/MRP) ಶ್ರೀ ಮಾರುತಿ ಸೈಂಟಿಫಿಕ್ ವರ್ಕ್ಸ್ ಬೆಂಗಳೂರು | 10877 |
| | | | **ಒಟ್ಟು** | **17,204** |

ವಿಭಾಗದಲ್ಲಿ ಮೇಲ್ಕಂಡ ಪ್ರಯೋಗಶಾಲಾ ಪರಿಕರಗಳನ್ನು ದಾಸ್ತಾನು ವಹಿಗೆ ಸ್ವೀಕೃತಿ ತೆಗೆದುಕೊಂಡಿದ್ದು 2016–17ನೇ ಸಾಲಿನ ವಾರ್ಷಿಕ ದಾಸ್ತಾನು ಪರಿಶೀಲನಾ ವರದಿಯಲ್ಲಿ ಎಣಿಕೆ ಮಾಡಿ ಸೇರ್ಪಡೆಗೊಳಿಸಿರುವುದಿಲ್ಲ ಹಾಗಾಗಿ ಕರ್ನಾಟಕ ಆರ್ಥಿಕ ಸಂಹಿತೆ 1958 ಅನುಚ್ಛೇಧ 169,170,171 ಮತ್ತು 172 ರ ಸೂಚನೆಗಳನ್ನು ಉಲ್ಲಂಘಿಸಿದಂತಾಗಿದೆ

ಈ ನ್ಯೂನತೆ ಕುರಿತಂತೆ ವಿಚಾರಣಾ ಪತ್ರ ಸಂಖ್ಯೆ:08/2019–20 ನ್ನು ದಿನಾಂಕ:25.06.2019 ರಂದು ನೀಡಿದರೂ ಸಹ ಪ್ರತಿಕ್ರಿಯೆ ನೀಡದ ಕಾರಣ ಎರಡೂ ಬಿಲ್ಲುಗಳ ಒಟ್ಟು ಮೊತ್ತ **ರೂ.17,204/–ಗಳನ್ನು ಆಕ್ಷೇಪಣೆಗೆ ಸೂಚಿಸಿದೆ.**

ಸಾಮಗ್ರಿಗಳನ್ನು ವಾರ್ಷಿಕ ದಾಸ್ತಾನು ವಹಿಯಲ್ಲಿ ಸೇರ್ಪಡೆಗೊಳಿಸದ ಬಾಬ್ತು ಕಂಡಿಕೆ ಸಂಖ್ಯೆ:175ರಲ್ಲಿ ಗಮನಿಸಿ ಆಕ್ಷೇಪಿಸಿದ್ದು ಸದರಿ ಕಂಡಿಕೆಯ ರೂ.17,204/–ಗಳಿಗೆ ಈ ಕೆಳಕಂಡಂತೆ ಮಾಹಿತಿಯನ್ನು ಒದಗಿಸಲಾಗಿರುತ್ತದೆ.

| ಕಂಡಿಕೆ ಸಂಖ್ಯೆ | ನ್ಯೂನತೆಯ ವಿವರ | ಆಕ್ಷೇಪಣೆ | ಅನುಪಾಲನಾ ವರದಿ |
|---|---|---|---|
| 175 | ಖರೀದಿಸಿದ ಸಾಮಾಗ್ರಿಗಳನ್ನು ವಾರ್ಷಿಕ ದಾಸ್ತಾನು ಪರಿಶೀಲನಾ ವರದಿಯಲ್ಲಿ (2016–17) ಸೇರ್ಪಡೆಗೊಳಿಸದಿರುವುದು | 6327 | 2016–17ನೇ ಸಾಲಿನಲ್ಲಿ ಬಿ,ಆರ್ ಸಂಖ್ಯೆ:103/2016–17 ಧನಾದೇಶ ಸಂಖ್ಯೆ:868726 ದಿನಾಂಕ:01.04.2017 ಖರೀದಿಸಿದ Magnetic Stirrer (Project under UGC/MRP) ಇದನ್ನು ಕಣ್ತಪ್ಪಿನಿಂದ ದಾಸ್ತಾನು ಪರಿಶೀಲನಾ ವರದಿಯಲ್ಲಿ ಸೇರ್ಪಡೆಗೊಳಿಸಿರುವುದಿಲ್ಲ ಸದರಿ ದಾಸ್ತಾನು ವಿವರವನ್ನು 2020–21ನೇ ಸಾಲಿನ ವರದಿಯಲ್ಲಿ ಸೇರ್ಪಡಿಸಿ ಸರಿಪಡಿಸಲಾಗುವುದು. |
| | | 10877 | 2016–17ನೇ ಸಾಲಿನಲ್ಲಿ ಬಿ,ಆರ್ ಸಂಖ್ಯೆ:105/2016–17 ಧನಾದೇಶ ಸಂಖ್ಯೆ:868725 ದಿನಾಂಕ:01.04.2017 ಖರೀದಿಸಿದ Electophoresis (Project under UGC/MRP) ಇದನ್ನು ಕಣ್ತಪ್ಪಿನಿಂದ ದಾಸ್ತಾನು ಪರಿಶೀಲನಾ ವರದಿಯಲ್ಲಿ ಸೇರ್ಪಡೆಗೊಳಿಸಿರುವುದಿಲ್ಲ ಸದರಿ ದಾಸ್ತಾನು ವಿವರವನ್ನು 2020–21ನೇ |

| | | | |
|---|---|---|---|
| | | | ಸಾಲಿನ ವರದಿಯಲ್ಲಿ ಸೇರ್ಪಡಿಸಿ ಸರಿಪಡಿಸಲಾಗುವುದು. |
| | **ಒಟ್ಟು** | **17,204** | |

ಮೇಲ್ಕಂಡ ಆಕ್ಷೇಪಣೆಗಳಿಗೆ ಸೂಕ್ತ ದಾಖಲೆಗಳನ್ನು ಲಗತ್ತಿಸಿ ಕಳುಹಿಸಲಾಗಿದೆ ಅದ್ದರಿಂದ ದಯಮಾಡಿ ಮೇಲ್ಕಂಡ ಆಕ್ಷೇಪಣೆಯನ್ನು ಕೈಬಿಡಬೇಕೆಂದು ಕೋರಲಾಗಿದೆ.

ಕೈ ಬಿಟ್ಟು ಹೋಗಿರುವ ದಾಸ್ತಾನು ವಿವರವನ್ನು 2020–21ನೇ ಸಾಲಿನ ದಾಸ್ತಾನು ವರದಿಯಲ್ಲಿ ಸೇರಿಸಲು ಕ್ರಮಕೈಗೊಳ್ಳಲಾಗಿರುತ್ತದೆ ಈ ನಿಟ್ಟಿನಲ್ಲಿ ಮೇಲಿನ ಆಕ್ಷೇಪಣೆ ಕಂಡಿಕೆ 175 ನ್ನು ಕೈ ಬಿಡುವಂತೆ ನಿವೇದಿಸಿದೆ.

**176. ಪ್ರಯೋಜನವಿಲ್ಲದ ಸಣ್ಣ ವಸ್ತುಗಳು/ ಕಾರ್ಯನಿರ್ವಹಿಸದ /ಹಾನಿಗೊಳಗಾದ /ಭಿನ್ನವಾದ ವಸ್ತುಗಳನ್ನು ವಿಲೇವಾರಿ ಮಾಡದಿರುವುದು :– (ಜೀವ ರಸಾಯನ ಶಾಸ್ತ್ರ ಅಧ್ಯಯನ ವಿಭಾಗ)**

ಈ ವಿಭಾಗದ 2017–18ನೇ ಸಾಲಿನ ವಾರ್ಷಿಕ ದಾಸ್ತಾನು ಪರಿಶೀಲನೆಯನ್ನು ಪ್ರೊ॥ ಬಿ.ಎಸ್.ವಿಶ್ವನಾಥ್ ಪ್ರಧ್ಯಾಪಕರು ಮತ್ತು ಡಾ॥ ಗೋಪಾಲ್ ಮರಾಠೆ.ಕೆ ಸಹ ಪ್ರಧ್ಯಾಪಕರು ಇವರುಗಳು ದಿನಾಂಕ:22.05.2017 ರಿಂದ ದಿನಾಂಕ:29.05.2017 ರವರೆಗೆ ಕೈಗೊಂಡು ವಾರ್ಷಿಕ ದಾಸ್ತಾನು ಪರಿಶೀಲನಾ ವರದಿಯನ್ನು ಹಣಕಾಸು ಅಧಿಕಾರಿಯವರು ಮೈಸೂರು ವಿಶ್ವವಿದ್ಯಾನಿಲಯ ಮೈಸೂರು ರವರಿಗೆ ಕಛೇರಿ ಪತ್ರ ಸಂಖ್ಯೆ:ಎಂಜಿ,ಬಯೋ/182/2017–18/ದಿನಾಂಕ:20.06.2018 ರಂದು ಸಲ್ಲಿಸಲಾಗಿದೆ.

ಸಲ್ಲಿಸಿರುವ ವರದಿಯನ್ನು ಪರಿಶೀಲಿಸಲಾಗಿ ಕೆಲವು ವಸ್ತುಗಳು ಪ್ರಯೋಜನವಿಲ್ಲದ ಸಣ್ಣ ವಸ್ತುಗಳಾಗಿದ್ದು/ಕಾರ್ಯನಿರ್ವಹಿಸದ/ಹಾನಿಗೊಳಗಾದ/ಭಿನ್ನವಾಗಿರುವುದಾಗಿ ಮನೂದಿಸಿದ್ದು ಅಂತಹವುಗಳನ್ನು ದುರಸ್ಥಿಗೊಳಿಸಿಕೊಂಡು ಮರು ಉಪಯೋಗಿಸಲು ಅಥವಾ ಸಂಪೂರ್ಣವಾಗಿ ಉಪಯೋಗಕ್ಕೆ ಬಾರದಿದ್ದಲ್ಲಿ ಕರ್ನಾಟಕ ಆರ್ಥಿಕ ಸಂಹಿತೆ 1958, ಅನುಚ್ಛೇಧ 168 ರ ಬಿ (I) ರಿಂದ ಬಿ (VI) ರ ರೀತ್ಯಾ ಅಗತ್ಯ ಕ್ರಮ ಕೈಗೊಳ್ಳಲು ಸೂಚಿಸಿದೆ (ವಿಚಾರಣಾ ಪತ್ರ ಸಂಖ್ಯೆ:07/219–20/ದಿನಾಂಕ:25.06.2019)

ಕಂಡಿಕೆ ಸಂಖ್ಯೆ 176 ರಲ್ಲಿ ಅನುಪಯುಕ್ತ ವಸ್ತುಗಳ ವಿಲೇವಾರಿ ಬಗ್ಗೆ ಪ್ರಸ್ತಾಪಿಸಿಲಾಗಿದ್ದು ಈ ಸಂಬಂಧ ಜೀವರಸಾಯನ ಶಾಸ್ತ್ರ ವಿಭಾಗದಲ್ಲಿ ಶೇಖರಣೆಯಾಗಿರುವ ಈ ಕೆಳಕಂಡ 15 ಸಂಖ್ಯೆಯ ಅನುಪಯುಕ್ತ ಸಲಕರಣೆಗಳನ್ನು ವಿಶ್ವವಿದ್ಯಾನಿಲಯದ ಆದೇಶ ಸಂಖ್ಯೆ:ಜಿಎಲ್6/124/1997–98 ದಿನಾಂಕ:21.01.2017 ರ ಆದೇಶದ ಮೇರೆಗೆ ವಿಲೇವಾರಿ ಮಾಡಿ ಇವರಿಂದ ಬಂದಂತಹ ಮೊತ್ತ ರೂ.11,900/–ಗಳನ್ನು ವಿಶ್ವವಿದ್ಯಾನಿಲಯದ ಜಿ,ಆರ್,ಎ ಖಾತೆಗೆ ಚಲನ್ ಸಂಖ್ಯೆ:46014 ರಲ್ಲಿ ಜಮೆ ಮಾಡಲಾಗಿದೆ ಇದರ ವಿವರಗಳನ್ನು ಇದರೊಂದಿಗೆ ಲಗತ್ತಿಸಲಾಗಿದೆ.

| ಕ್ರ ಸಂ | ವಿವರ | ಸಂಖ್ಯೆ |
|---|---|---|
| 1 | Hot Plate | 02 |
| 2 | Photo colorimeter | 01 |
| 3 | Water Purifier filter | 02 |
| 4 | Colorimeter | 02 |
| 5 | Laboratory Centrifuge | 02 |
| 6 | Power Pack | 01 |
| 7 | Wheel chair | 01 |
| 8 | CPU | 01 |
| 9 | Waste Wooden Lot | |

| | | |
|---|---|---|
| 10 | Old Iron Window | 50 |
| 11 | Old refrigerator | 01 |
| 12 | Wooden Chromatography Chamber | 01 |
| 13 | Scintillation counter | 02 |
| 14 | Iron chair | 06 |
| 15 | Wooden Chair | 02 |

ಈ ನಿಟ್ಟಿನಲ್ಲಿ ಕಂಡಿಕೆ ಸಂಖ್ಯೆ 176 ರಲ್ಲಿ ಪ್ರಸ್ತಾಪಿಸಲಾಗಿರುವ ಆಕ್ಷೇಪಣೆಯನ್ನು ಕೈ ಬಿಡುವಂತೆ ನಿವೇದಿಸಿದೆ.

**177. ಗ್ರಂಥಾಲಯದಲ್ಲಿ ಪುಸ್ತಕಗಳನ್ನು ಖರೀದಿ ಮಾಡಿರುವುದು ಮತ್ತು ಎರವಲು ಪಡೆದಿರುವ ದಾಸ್ತಾನು ವಹಿ ಪರಿಶೀಲನೆ:– (ಗಣಕ ವಿಜ್ಞಾನ ಸ್ನಾತಕೋತ್ತರ ಅಧ್ಯಯನ ವಿಭಾಗ)**

ಮೈಸೂರು ವಿಶ್ವವಿದ್ಯಾನಿಲಯದ ಗಣಕ ವಿಜ್ಞಾನ ಅಧ್ಯಯನ ವಿಭಾಗದಲ್ಲಿ ಗ್ರಂಥಾಲಯದಿಂದ ಸ್ನಾತಕೋತ್ತರ ವಿದ್ಯಾರ್ಥಿಗಳು 2017–18ನೇ ಸಾಲಿನಲ್ಲಿ ಪುಸ್ತಕಗಳನ್ನು ಎರವಲು ಪಡೆದು ಸಕಾಲದಲ್ಲಿ ಹಿಂದುರುಗಿಸದೇ ಇರುವುದು ಕಂಡುಬಂದಿರುತ್ತದೆ ಇದಕ್ಕೆ ಸಂಬಂಧಿಸಿದಂತೆ ವಿಚಾರಣಾ ಪತ್ರ ಸಂಖ್ಯೆ:05/2019–20 ದಿನಾಂಕ:24.05.2019ರಲ್ಲಿ ದಾಸ್ತಾನು ವಹಿ ಹಾಜರುಪಡಿಸಲು ಸೂಚಿಸಲಾಗಿತ್ತು ವಹಿಯನ್ನು ಪರಿಶೀಲಿಸಲಾಗಿ ಸ್ನಾತಕೊತ್ತರ ವಿದ್ಯಾರ್ಥಿಗಳು ಗ್ರಂಥಾಲಯದಿಂದ ಎರವಲು ಪಡೆದು ಹಿಂದಿರುಗಿಸದೇ ಇರುವ ಪುಸ್ತಕಗಳನ್ನು ವಿದ್ಯಾರ್ಥಿಗಳಿಂದ ಹಿಂಪಡೆದು ಗ್ರಂಥಾಲಯದಲ್ಲಿ ಸೇರ್ಪಡೆಗೊಳಿಸಿಕೊಳ್ಳಲು ಸೂಚಿಸಿದೆ.

2017–18ನೇ ಸಾಲಿನಲ್ಲಿ ಗ್ರಂಥಾಲಯಕ್ಕೆ ಪುಸ್ತಕಗಳನ್ನು ಕೊಟೇಷನ್ ಕರೆಯದೆ ಖರೀದಿ ಮಾಡಲಾಗಿರುತ್ತದೆ. ಇದು ಕೆ.ಟಿ.ಪಿ.ಪಿ ನಿಯಮ 1999–2000 ರಂತೆ ನಿಯಮ ಪಾಲಿಸದೆ ಇರುವುದು ಕಂಡುಬಂದಿರುತ್ತದೆ ಹೀಗೆ ಖರೀದಿಸಿರುವ **ಮೊತ್ತ ರೂ.2,48,834/–ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.**

ಗಣಕ ವಿಜ್ಞಾನ ಅಧ್ಯಯನ ವಿಭಾಗದಲ್ಲಿ ಗ್ರಂಥ ದಾಸ್ತಾನು ವಹಿ ನಿರ್ವಹಿಸಲಾಗಿದ್ದು ಗ್ರಂಥ ದಾಸ್ತಾನು **ಸಂಪುಟ–03ರ** ಪುಟ **ಸಂಖ್ಯೆ:–75 ರಿಂದ 103 ರವರೆಗೆ** 2017–18ನೇ ಸಾಲಿನಲ್ಲಿ ಖರೀದಿಸಿದ ಪುಸ್ತಕಗಳ ದಾಸ್ತಾನು ಸಂಗ್ರಹಣಾ **ಸಂಖ್ಯೆ:–6019 ರಿಂದ 6434** ರವರೆಗೆ **ಒಟ್ಟು 416** ರ ಪುಸ್ತಕಗಳ ದಾಸ್ತಾನು ನಿರ್ವಹಣೆ ಸಂಬಂಧ ಸದರಿ ಪುಸ್ತಕಗಳ ಒಟ್ಟು ಮೊತ್ತ **ರೂ.2,48,834/–ಗಳನ್ನು** ಐ.ಎಸ್.ಎಫ್ ಲೆಕ್ಕ ಶೀರ್ಷಿಕೆಯಿಂದ ವೆಚ್ಚ ಭರಿಸಲಾಗಿರುತ್ತದೆ.

ವಿದ್ಯಾರ್ಥಿಗಳು ಪುಸ್ತಕಗಳನ್ನು ಎರವಲು ಪಡೆಯುವ ವಹಿಯನ್ನು ನಿರ್ವಹಿಸಲಾಗಿದ್ದು ಪುಸ್ತಕಗಳನ್ನು ಎರವಲು ಪಡೆದ ವಿದ್ಯಾರ್ಥಿಗಳ (ಎಂ.ಎಸ್.ಸಿ ಮತ್ತು ಎಂ.ಸಿ.ಎ) ವಿವರಣಾ ಪಟ್ಟಿಯನ್ನು ಈ ಕೂಡ ಲಗತ್ತಿಸಿ ಸಲ್ಲಿಸುತ್ತಾ ಸದರಿ ಗ್ರಂಥಾಲಯದಿಂದ ಎರವಲು ಪಡೆದ ಪುಸ್ತಕಗಳನ್ನು ಬಹುತೇಕ ವಿದ್ಯಾರ್ಥಿಗಳು ನಿಗಧಿತವಾದ ಅವಧಿಯಲ್ಲಿ ಹಿಂದಿರುಗಿಸಿರುತ್ತಾರೆ ಹಿಂದಿರುಗಿಸದೇ ಇರುವ ಪ್ರಕರಣಗಳಲ್ಲಿ ಮೂಲ ಅಂಕಪಟ್ಟಿ ಮತ್ತು ದಾಖಲೆಗಳನ್ನು ಹಿಂದಿರುಗಿಸುವ ಸಮಯದಲ್ಲಿ ಪುಸ್ತಕದ ಪೂರ್ಣ ಮೊತ್ತವನ್ನು ದ್ವಿಗುಣದಲ್ಲಿ ವಸೂಲಿಸಲು ಕ್ರಮವಹಿಸಲಾಗುವುದು.

ಗ್ರಂಥಾಲಯಕ್ಕೆ ಪುಸ್ತಕಗಳನ್ನು ಸರಬರಾಜು/ಖರೀದಿಸುವ ಸಂಧರ್ಭದಲ್ಲಿ ದರಪಟ್ಟಿ ಮೂಲಕ ಅಥವಾ ಟೆಂಡರ್ ಪ್ರಕಟಣೆ ಹೊರಡಿಸಿ ದರಪಟ್ಟಿ/ಟೆಂಡರ್ ಮೂಲಕ ಖರೀದಿಸುವ/ಸರಬರಾಜು ಪಡೆಯಬೇಕೆಂಬ ನಿಯಮದಿಂದ ಜನರಲ್ ಫೈನಾನ್ಸಿಯಲ್ ರೂಲ್ಸ್–2017ರಲ್ಲಿ ವಿನಾಯ್ತಿ ನೀಡಿರುವುದರಿಂದ (ಪ್ರತಿ ಲಗತ್ತಿಸಿದೆ) ಗ್ರಂಥಾಲಯಕ್ಕೆ

| | |
|---|---|
| | ಅವಶ್ಯಕವಿರುವ ಪುಸ್ತಕಗಳನ್ನು ನೇರವಾಗಿ ಸರಬರಾಜುದಾರರಿಂದ ಖರೀದಿಸಿ ದಾಸ್ತಾನು ಲೆಕ್ಕ ನಿರ್ವಹಿಸಲಾಗಿರುತ್ತದೆ ಎಂಬುವುದಾಗಿ ತಮ್ಮಲ್ಲಿ ನಿವೇದಿಸುತ್ತಾ **ಕಂಡಿಕೆಯಲ್ಲಿನ ಆಕ್ಷೇಪಣೆ ಮೊತ್ತ ರೂ.2,48,834/–ಗಳನ್ನು ತೀರುವಳಿಗೊಳಿಸಬೇಕಾಗಿ ಕೋರಿದೆ.** |
| **178. 2017–18ನೇ ಸಾಲಿನಲ್ಲಿ ವಿಭಾಗದಿಂದ ಖರೀದಿಸಲಾದ ಉಪಕರಣಗಳನ್ನು/ಕಂಪ್ಯೂಟರ್‌ಗಳನ್ನು ವಾರ್ಷಿಕ ದಾಸ್ತಾನು ಪರಿಶೀಲನಾ ವರದಿ (Annual Stock Verification Report) ಯಲ್ಲಿ ಪರಿಗಣಿಸದಿರುವುದು/ಸೇರ್ಪಡೆಗೊಳಿಸದಿರುವುದು:– (ಜೈವಿಕ ತಂತ್ರಜ್ಞಾನ ಅಧ್ಯಯನ ವಿಭಾಗ)**<br><br>ಜೈವಿಕ ತಂತ್ರಜ್ಞಾನ ಅಧ್ಯಯನ ವಿಭಾಗದಲ್ಲಿ ಲೆಕ್ಕಪರಿಶೋಧನೆಗೆ ಹಾಜರುಪಡಿಸಲಾದ ವೋಚರ್‌ಗಳನ್ನು ಪರಿಶೀಲಿಸಲಾಗಿ 2017–18ನೇ ಸಾಲಿನಲ್ಲಿ ಅಧ್ಯಯನ ವಿಭಾಗದಿಂದ ಹಾಗೂ ಯುಜಿಸಿ ಪ್ರಾಯೋಜಿತ ವಿವಿಧ ಕಾರ್ಯಕ್ರಮದಡಿಯಲ್ಲಿ ಖರೀದಿಸಿರುವ ವಿವಿಧ ಉಪಕರಣ/ಕಂಪ್ಯೂಟರ್‌ಗಳನ್ನು ವಿಭಾಗದ **ವಾರ್ಷಿಕ ದಾಸ್ತಾನು ಪರಿಶೀಲನಾ ವರದಿಯಲ್ಲಿ ಪರಿಗಣಿಸದಿರುವುದು/ಸೇರ್ಪಡೆಗೊಳಿಸದಿರುವುದನ್ನು ಗಮನಿಸಲಾಗಿದೆ** ವಿವರವನ್ನು **ಅನುಬಂಧ–90ರಲ್ಲಿ** ನೀಡಲಾಗಿದೆ ಈ ಸಂಬಂಧ ಸೂಕ್ತ ವಿವರಣೆ ಕೋರಿ ವಿಚಾರಣಾ ಪತ್ರದ ಸಂಖ್ಯೆ:08/2019–20/20.06.2019 ಅನ್ನು ನೀಡಲಾಗಿದ್ದರೂ ಯಾವುದೇ ವಿವರಣೆಯನ್ನು ನೀಡಿರುವುದಿಲ್ಲ ಕರ್ನಾಟಕ ಆರ್ಥಿಕ ಸಂಹಿತೆ–1958 ರ ಅನುಚ್ಛೇಧ–168 ರಿಂದ 172 ರಲ್ಲಿ ನಿರ್ದೇಶಿಸಿರುವಂತೆ ಪ್ರತಿ ಹೊಸ ಖರೀದಿಯನ್ನು ಸದರಿ ಸಾಲಿನ ವಾರ್ಷಿಕ ದಾಸ್ತಾನು ಪರಿಶೀಲನಾ ವರದಿಯಲ್ಲಿ ಸೇರ್ಪಡೆಗೊಳಿಸಬೇಕು ಆದರೆ ವಿಭಾಗದಲ್ಲಿ ಹೊಸ ಉಪಕರಣ/ಕಂಪ್ಯೂಟರ್‌ಗಳ ಖರೀದಿಯನ್ನು ಸೇರ್ಪಡೆಗೊಳಿಸದಿರುವುದು ಕರ್ನಾಟಕ ಆರ್ಥಿಕ ಸಂಹಿತೆ–1958 ರ ಸೂಚನೆಯನ್ನು ಉಲ್ಲಂಘಿಸಿದಂತಾಗಿದೆ ಆದ್ದರಿಂದ ಖರೀದಿಯ **ಒಟ್ಟು ಮೊತ್ತ ರೂ.97,500/–ಗಳನ್ನು ಆಕ್ಷೇಪಣೆಗೆ ಸೂಚಿಸಲಾಗಿದೆ.** | 2017–18ನೇ ಸಾಲಿನಲ್ಲಿ ಯು.ಜಿ.ಸಿ ಪ್ರಾಯೋಜಿತ ವಿವಿಧ ಕಾರ್ಯಕ್ರಮದಡಿಯಲ್ಲಿ ಖರೀದಿಸಿರುವ ವಿವಿಧ ಉಪಕರಣ/ಕಂಪ್ಯೂಟರ್‌ಗಳನ್ನು ವಿಭಾಗದ ವಾರ್ಷಿಕ ದಾಸ್ತಾನು ಪರಿಶೀಲನಾ ವರದಿಯಲ್ಲಿ ಪರಿಗಣಿಸದಿರುವುದು/ಸೇರ್ಪಡೆಗೊಳಿಸದಿರುವುದನ್ನು ಪರಿಗಣಿಸಿ ಅವುಗಳ ಒಟ್ಟು ಮೊತ್ತ ರೂ.97,500/–ಗಳನ್ನು ಆಕ್ಷೇಪಿಸಲಾಗಿರುತ್ತದೆ.<br><br>ಕಂಡಿಕೆಯಲ್ಲಿನ ತಮ್ಮ ಸಲಹೆ ಮತ್ತು ಸೂಚನೆಯ ಮೇರೆಗೆ 2017–18ನೇ ಸಾಲಿನಲ್ಲಿ ಖರೀದಿಸಿರುವ ಉಪಕರಣ/ಕಂಪ್ಯೂಟರ್‌ಗಳನ್ನು **ಕಂಡಿಕೆಯ ಅನುಬಂಧ–90ರ** ಕ್ರಮ ಸಂಖ್ಯೆ (2) ಮತ್ತು (3)ರ ಉಪಕರಣಗಳನ್ನು **2018–19ನೇ** ಸಾಲಿನ ವಾರ್ಷಿಕ ದಾಸ್ತಾನು ಭೌತಿಕ ಪರಿಶೀಲನಾ ವರದಿಯ **ಕ್ರಮ ಸಂಖ್ಯೆ 53ರಲ್ಲಿ Lab Equipment (S.L.No:02) ಮತ್ತು ಕ್ರಮಸಂಖ್ಯೆ:–14ರಲ್ಲಿ Audio Visual Equipment(S.L.No:03)** ಸೇರ್ಪಡೆಗೊಳಿಸಲಾಗಿದೆ. ಅನುಬಂಧ–90ರ **ಕ್ರಮ ಸಂಖ್ಯೆ (1)ರ ಉಪಕರಣವನ್ನು** 2021–22ರ ವಾರ್ಷಿಕ ದಾಸ್ತಾನು ಪರಿಶೀಲನಾ ವರದಿಯಲ್ಲಿ ಸೇರ್ಪಡೆಗೊಳಿಸಿ ದಾಸ್ತಾನು ಭೌತಿಕ ಪರಿಶೀಲನಾ ವರದಿ ಸಲ್ಲಿಸುವುದಾಗಿ ಹಾಗೂ 2017–18 ಮತ್ತು 2018–19 ನೇ ಸಾಲಿನ ವಿವಿಧ ಉಪಕರಣ/ಕಂಪ್ಯೂಟರ್‌ಗಳ ವಾರ್ಷಿಕ ದಾಸ್ತಾನು ಭೌತಿಕ ಪರಿಶೀಲನಾ ವರದಿಯನ್ನು ಲಗತ್ತಿಸಿ ಸಲ್ಲಿಸುತ್ತಾ **ಕಂಡಿಕೆಯ ಆಕ್ಷೇಪಿತ ಒಟ್ಟು ಮೊತ್ತ ರೂ.97,500/–ಗಳಲ್ಲಿ ರೂ.87,500/–ಗಳನ್ನು ತೀರುವಳಿಗೊಳಿಸಬೇಕಾಗಿ ಕೋರಿದೆ.** |

| | |
|---|---|
| **179. ವಾರ್ಷಿಕ ದಾಸ್ತಾನು ಪರಿಶೀಲನಾ ವರದಿಯನ್ನು ಹಾಜರುಪಡಿಸದಿರುವುದು :– (ಸ್ನಾತಕೋತ್ತರ ವಿದ್ಯಾರ್ಥಿನಿಲಯ (ಪುರುಷ) ಬ್ಲಾಕ್–1)**<br><br>ಸ್ನಾತಕೊತ್ತರ ವಿದ್ಯಾರ್ಥಿನಿಲಯ (ಪುರುಷ) ಬ್ಲಾಕ್–1 ಮಾನಸಗಂಗೋತ್ರಿ ಮೈಸೂರು ಇಲ್ಲಿನ ವಾರ್ಷಿಕ ದಾಸ್ತಾನು ಪರಿಶೀಲನಾ ವರದಿಯನ್ನು ಹಾಜರುಪಡಿಸುವಂತೆ ವಿಚಾರಣಾ ಪತ್ರ ಸಂಖ್ಯೆ:01/2019–20 ದಿನಾಂಕ:29.06.2019 ರಂದು ಕೋರಲಾಗಿ ಕೋರಲಾದ ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ.<br><br>ಕರ್ನಾಟಕ ಆರ್ಥಿಕ ಸಂಹಿತೆ 1958 ಸಂಪುಟ–1 ರ ಅನುಚ್ಛೇಧ 169 ರೀತ್ಯಾ ವಾರ್ಷಿಕ ದಾಸ್ತಾನು ಪರಿಶೀಲನೆಯನ್ನು ಬೇರೆ ಕಛೇರಿಯ ನೌಕಕರಿಂದ ಪರಿಶೀಲಿಸಿ ಸಕ್ಷಮ ಪ್ರಾಧಿಕಾರದ ಮೇಲಾಧಿಕಾರಿಗಳಿಗೆ ನೀಡಬೇಕಾಗಿರುತ್ತದೆ ಆದರೆ 2017–18ನೇ ಸಾಲಿನಲ್ಲಿ ವಾರ್ಷಿಕ ದಾಸ್ತಾನು ಪರಿಶೀಲನಾ ವರದಿಯನ್ನು ಹಾಜರುಪಡಿಸದಿರುವುದರಿಂದ ದಾಸ್ತಾನುಗಳ ವಿವರ ಅನುಪಯುಕ್ತ ದಾಸ್ತಾನು ಹಾಗೂ ನಾಶವಾದ ದಾಸ್ತಾನುಗಳನ್ನು ನಿಯಮಾನುಸಾರ ವಿಲೇವಾರಿ ಮಾಡುವುದಕ್ಕೆ ಕ್ರಮಕೈಗೊಂಡಿರುವುದರ ಬಗ್ಗೆ ಪರಿಶೀಲಿಸಲು ಸಾಧ್ಯವಾಗಿರುವುದಿಲ್ಲ ಕಛೇರಿ ಮುಖ್ಯಸ್ಥರು ಶೀಘ್ರ ಕ್ರಮವಹಿಸಿ ವಾರ್ಷಿಕ ದಾಸ್ತಾನು ಪರಿಶೀಲನೆ ನಡೆಸಿ ವರದಿಯನ್ನು ಸಕ್ಷಮ ಪ್ರಾಧಿಕಾರಕ್ಕೆ ಸಲ್ಲಿಸಲು ಸೂಚಿಸಿದೆ. | ಕಂಡಿಕೆಯಲ್ಲಿ 2017–18ನೇ ಸಾಲಿನ ವಾರ್ಷಿಕ ದಾಸ್ತಾನು ಪರಿಶೀಲನಾ ವರದಿಯನ್ನು ಹಾಜರುಪಡಿಸದಿರುವ ಸಂಬಂಧ ಹಾಗೂ ದಾಸ್ತಾನುಗಳ ವಿವರ ಮತ್ತು ಅನುಪಯುಕ್ತ ವಸ್ತುಗಳ ವಿಲೇವಾರಿ ಬಗ್ಗೆ ಪರಿಶೀಲಿಸಲು ಸಾಧ್ಯವಾಗದಿರುವ ಬಗ್ಗೆ ಪ್ರಸ್ತಾಪಿಸಲಾಗಿರುತ್ತದೆ.<br><br>ವಿದ್ಯಾರ್ಥಿನಿಲಯದ ಶಿಕ್ಷಕ ಸಲಹೆಗಾರರು ಮಾನ್ಯ ಕುಲಸಚಿವರಿಗೆ ಪತ್ರ ವ್ಯವಹಾರ ನಡೆಸಿ ವಾರ್ಷಿಕ ದಾಸ್ತಾನು ಪರಿಶೀಲನೆ ಬಗ್ಗೆ ಅಗತ್ಯ ಕ್ರಮವಹಿಸಿ ಸಕ್ಷಮ ಪ್ರಾಧಿಕಾರಕ್ಕೆ ವರದಿ ಸಲ್ಲಿಸುವುದಾಗಿ ನಿವೇದಿಸುತ್ತಾ. ಇನ್ನು ಮುಂದೆ ತಮ್ಮ ಸಲಹೆ ಮತ್ತು ಮಾರ್ಗದರ್ಶನದಂತೆ ನಿಯಮಾನುಸಾರ ವಾರ್ಷಿಕ ದಾಸ್ತಾನು ಪರಿಶೀಲನೆಯ ವರದಿಯನ್ನು ಸಕ್ಷಮ ಪ್ರಾಧಿಕಾರಕ್ಕೆ ಸಲ್ಲಿಸುವುದಾಗಿ ವಿನಂತಿಸಿರುತ್ತಾರೆ. |
| **ಭಾಗ–4**<br>**ಲೆಕ್ಕಪರಿಶೋಧನೆಗೆ ಓಚರ್‌ಗಳನ್ನು ಹಾಜರುಪಡಿಸದಿರುವ ವಿವರ**<br><br>**180. 2017–18ನೇ ಸಾಲಿನಲ್ಲಿ ಮೈಸೂರು ವಿಶ್ವವಿದ್ಯಾನಿಲಯಕ್ಕೆ ಪಡೆಯಲಾದ ವಾಹನಗಳ ಬಾಡಿಗೆಗೆ ವೆಚ್ಚವಾಗಿರುವ ಮೊತ್ತದ ವಿವರಗಳು ಲಭ್ಯವಿಲ್ಲದಿರುವುದು/ಹಾಜರುಪಡಿಸದಿರುವುದು :– (ಆಡಳಿತ ವಿಭಾಗ)**<br><br>2017–18ನೇ ಸಾಲಿನ ಲೆಕ್ಕಪರಿಶೋಧನೆ ಕೈಗೊಂಡ ಅವಧಿಯಲ್ಲಿ ಹಾಜರುಪಡಿಸಿದ ವಾಹನಗಳ ಕಡತಗಳನ್ನು ಪರಿಶೀಲಿಸಿದಾಗ ಮೆ॥ ಕಾವೇರಿ ಟೂರ್ಸ್ ಅಂಡ್ ಟ್ರಾವೆಲ್ಸ್ ಮೈಸೂರು ರವರಿಂದ ವಿಶ್ವವಿದ್ಯಾನಿಲಯ ವಾಹನಗಳನ್ನು ಬಾಡಿಗೆಗೆ ಪಡೆಯಲಾಗಿರುತ್ತದೆ ಹೆಚ್ಚಿನ ಬಾಡಿಗೆಗೆ ವಾಹನಗಳನ್ನು ಪರೀಕ್ಷಾ ಕಾರ್ಯ/ಕಾಲೇಜು ಸಂಯೋಜನೆ ನೀಡುವ ಕಾರ್ಯಗಳಿಗೆ ಬಳಸಿಕೊಳ್ಳಲಾಗಿರುತ್ತದೆ.<br><br>ಆಡಳಿತ ವಿಭಾಗದಿಂದ ಟೆಂಡರ್ ಕರೆಯಲಾಗಿರುತ್ತದೆ ಆದರೆ ಟೆಂಡರ್ ಮೊತ್ತ ಮತ್ತು ಸದರಿ ವೆಚ್ಚದ ವಿವರದ ಬಗ್ಗೆ ಮಾಹಿತಿ ಇರುವುದಿಲ್ಲ ಇದಕ್ಕೆ ಸಂಬಂಧಿಸಿದಂತೆ ವಿಚಾರಣಾ ಪತ್ರ | 2017–18ನೇ ಸಾಲಿನಲ್ಲಿ ಮೈಸೂರು ವಿಶ್ವವಿದ್ಯಾನಿಲಯ ವಿವಿಧ ವಿಭಾಗಗಳ ಶೈಕ್ಷಣಿಕ ಕಾರ್ಯಗಳಿಗೆ ಅವಶ್ಯಕವಿರುವ ಸಂದರ್ಭಗಳಲ್ಲಿ ಬಾಡಿಗೆ ವಾಹನಗಳನ್ನು ಪಡೆಯುವ ಸಂಬಂಧವಾಗಿ ವಿಶ್ವವಿದ್ಯಾನಿಲಯದ ಆದೇಶ ಸಂಖ್ಯೆ:ಜಿ.ಎಲ್8/531/2000–01, ದಿನಾಂಕ:20.09.2017 ರಂದು e-procurement portal ಮೂಲಕ ಟೆಂಡರ್ ಪ್ರಕಟಣೆ ಹೊರಡಿಸಿದ್ದು Tender Reference No :–ಎಂ.ಯು/ಎ.ಬಿ/ಜಿ.ಎಲ್8.ವಾಹನ/2017–18, ದಿನಾಂಕ:18.09.2017ರ ಟೆಂಡರ್‌ನ ಅಂದಾಜು ಮೊತ್ತ ರೂ.20.00 ಲಕ್ಷಗಳು (ಪ್ರತಿ ಲಗತ್ತಿಸಿದೆ). ಇ–ಪ್ರಕ್ಯೂರ್‌ಮೆಂಟ್ ಟೆಂಡರ್ ಪ್ರಕ್ರಿಯೆಯಲ್ಲಿ ಯಶಸ್ವಿ ಬಿಡ್‌ದಾರರಾದ ಮೆ॥ ಕಾವೇರಿ ಟೂರ್ಸ್ ಅಂಡ್ ಟ್ರಾವೆಲ್ಸ್, ಮೈಸೂರು ಇವರಿಂದ ವಾಹನಗಳನ್ನು ಬಾಡಿಗೆಗಾಗಿ |

| | |
|---|---|
| ಸಂಖ್ಯೆ:18/03.05.2019 ರಲ್ಲಿ ಕೋರಲಾಗಿತ್ತು ಇದಕ್ಕೆ ಉತ್ತರವನ್ನು ದಿನಾಂಕ:17.05.2019ರಲ್ಲಿ ನೀಡಲಾಗಿದ್ದು ಉತ್ತರವು ಸಮಂಜಸವಾಗಿರುವುದಿಲ್ಲ ಲೆಕ್ಕಪರಿಶೋಧನೆಗೆ ಪೂರ್ಣ ಪ್ರಮಾಣದಲ್ಲಿ ದಾಖಲೆಗಳನ್ನು ಹಾಜರುಪಡಿಸದೆ ಇರುವುದರಿಂದ ಸಂಬಂಧಿಸಿದ ಸಿಬ್ಬಂದಿ/ಅಧಿಕಾರಿಗಳ ವಿರುದ್ಧ ಶಿಸ್ತು ಕ್ರಮ ಜರುಗಿಸಲು ಸೂಕ್ತ ಆಡಳಿತಾತ್ಮಕ ಕ್ರಮಕೈಗೊಳ್ಳುವಂತೆ ಸೂಚಿಸಿದೆ. | ಪಡೆಯಲು ವಿಶ್ವವಿದ್ಯಾನಿಲಯದ ಆದೇಶ ಸಂಖ್ಯೆ:ಜಿಎಲ್8/531/2000–01 ದಿನಾಂಕ:08.11.2017ರ ಆದೇಶದಲ್ಲಿ ಆಡಳಿತಾತ್ಮಕ ಮಂಜೂರಾತಿ ನೀಡಲಾಗಿರುತ್ತದೆ.(ಪ್ರತಿ ಲಗತ್ತಿಸಿದೆ).<br><br>ದಿನಾಂಕ:09.11.2017 ರಿಂದ ದಿನಾಂಕ:–08.11.2018ರವರೆಗೆ (ಒಂದು ವರ್ಷ) ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿ ಬರುವ ಕಛೇರಿ/ವಿಭಾಗಗಳ ಆಡಳಿತ ಕಾರ್ಯ ಮತ್ತು ಪರೀಕ್ಷಾ ಕಾರ್ಯಗಳಿಗೆ ವಾಹನಗಳನ್ನು ಮೆ॥ ಕಾವೇರಿ ಟೂರ್ಸ್ ಅಂಡ್ ಟ್ರಾವೆಲ್ಸ್, ಮೈಸೂರು ಇವರಿಂದ ಬಾಡಿಗೆಗೆ ಪಡೆದುಕೊಳ್ಳುವ ಬಗ್ಗೆ ದಿನಾಂಕ:08.11.2017 ರಂದು ಒಪ್ಪಂದದ ಕರಾರು ಪತ್ರವಾಗಿದ್ದು ಈ ರೀತಿ ಬಳಕೆಗಾಗಿ ಪಡೆದ ವಾಹನಗಳಿಗೆ ಅವುಗಳು ಕಾರ್ಯನಿರ್ವಹಿಸಿದ ಬಾಬ್ತಿನ ಮೊತ್ತವನ್ನು ಆಯಾಯ ಕಛೇರಿ/ವಿಭಾಗಗಳು ಡಿ.ಸಿ ಹುಂಡಿ ಮುಖಾಂತರ ಪಾವತಿಸಲಾಗಿದ್ದು 2017–18ನೇ ಸಾಲಿನ **"ಪ್ರಯಾಣ ಮತ್ತು ಸಭಾ ವೆಚ್ಚಗಳ–111"** ಲೆಕ್ಕ ಶೀರ್ಷಿಕೆಯಿಂದ ವೆಚ್ಚ ಭರಿಸಿರುವುದಾಗಿ ನಿವೇದಿಸಿದೆ. |
| **181. ಮೈಸೂರು ವಿಶ್ವವಿದ್ಯಾನಿಲಯದ 2017–18ನೇ ಸಾಲಿನ ಸಮಸ್ಥಿತಿ ವಿವರಣಾ ಪಟ್ಟಿ (Balance sheet) & ಆಸ್ತಿ ಮತ್ತು ಹೊಣೆಗಾರಿಕೆ ಪಟ್ಟಿಯನ್ನು ಹಾಜರುಪಡಿಸದಿರುವುದು:– (ಹಣಕಾಸು ವಿಭಾಗ)**<br><br>2017–18ನೇ ಸಾಲಿನ ಮೈಸೂರು ವಿಶ್ವವಿದ್ಯಾನಿಲಯದ ವಾರ್ಷಿಕ ಲೆಕ್ಕಪತ್ರಗಳ ಪ್ರಕಾರ ವಿಶ್ವವಿದ್ಯಾನಿಲಯಕ್ಕೆ ಯು.ಜಿ.ಸಿ ಅನುದಾನ ರಾಜ್ಯ ಸರ್ಕಾರದಿಂದ ಸ್ವೀಕರಿಸಿದ ಅನುದಾನ & ಸ್ಕೀಂಗಳು ಅಭಿವೃದ್ಧಿ ಶುಲ್ಕುಗಳು ದತ್ತಿನಿಧಿ ಸಂಘ ಏಜೆನ್ಸಿ ಯೋಜನೆಗಳು ಭಾರತ ಸರ್ಕಾರದ ಯೋಜನೆಗಳು ಮತ್ತು ಸ್ಕೀಂಗಳು ರಾಜ್ಯ ಅಭಿವೃದ್ಧಿ ಅನುದಾನ ರಾಜ್ಯ ಸರ್ಕಾರದ ಸಹಾಯಾನುದಾನ ರಾಜ್ಯ ಸರ್ಕಾರದಿಂದ ಸ್ವೀಕೃತವಾಗುವ ಪಿಂಚಣಿ ಅನುದಾನ ಇತರೆ ಯೋಜನೆಗಳು ಸ್ಕೀಂಗಳು ಅನುದಾನದ ಸ್ವೀಕೃತಿ ಮತ್ತು ಪಾವತಿ ಹಾಗೂ ಆದಾಯ ಮತ್ತು ವೆಚ್ಚ ಗಳ ವಿವರಗಳನ್ನು ವಿಶ್ವವಿದ್ಯಾನಿಲಯದ ಒಟ್ಟು 40 ಖಾತೆಗಳಲ್ಲಿ ಅನುದಾನದ ಮಾಹಿತಿಯನ್ನು ಬ್ಯಾಂಕ್ ಖಾತೆಗಳಲ್ಲಿ ನಿರ್ವಹಿಸಲಾಗುತ್ತಿದ್ದು ಕ್ರೋಢೀಕರಿಸಿದ ಒಟ್ಟು ಮಾಹಿತಿಯನ್ನು ಅನುಮೋದಿತ ಸಮಸ್ಥಿತಿ ವಿವರಣಾ ಪಟ್ಟಿ Balance sheet ಹಾಗೂ ದೃಢೀಕರಿಸಿ ಅಡಕಗೊಂಡ ಆಸ್ತಿ ಮತ್ತು ಹೊಣೆಗಾರಿಕೆ ವಿವರಣಾ (Assets and Liabilites) ಪಟ್ಟಿಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸುವಂತೆ ಲೆಕ್ಕ ತನಿಖಾ ವಿಚಾರಣೆ ಸಂಖ್ಯೆ:84/10.06.2019ರಲ್ಲಿ ಕೋರಲಾಗಿತ್ತು ಯಾವುದೇ ದಾಖಲೆ ಒದಗಿಸಿರುವುದಿಲ್ಲ ವಿಧ್ವವಿದ್ಯಾನಿಲಯದ ಕ್ರೋಢಿಕೃತ ಸಮಸ್ಥಿತಿ ವಿವರಣಾ ಪಟ್ಟಿಯನ್ನು ಹಾಜರುಪಡಿಸುವಂತೆ ಸೂಚಿಸಿದೆ. | ಮೈಸೂರು ವಿಶ್ವವಿದ್ಯಾನಿಲಯದ ಕೇಂದ್ರ ಕಛೇರಿ ಕಟ್ಟಡಗಳು ಕಾಲೇಜುಗಳು ಮತ್ತಿತರೆ ಖಾಲಿ ಸ್ಥಳಗಳನ್ನೊಳಗೊಂಡ ಸ್ಥಿರ ಆಸ್ತಿಗಳೆಲ್ಲವೂ ಆಗಿನ ಮೈಸೂರು ಮಹಾರಾಜರಾದ ಗೌರವಾನ್ವಿತರಾದ ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ರವರು ಶೈಕ್ಷಣಿಕ ಉದ್ದೇಶಕ್ಕಾಗಿ ನೀಡಿರುವ ಆಸ್ತಿಯಾಗಿರುತ್ತದೆ ಹಾಗೂ ಸದರಿ ಸ್ಥಿರ ಆಸ್ತಿಗಳು ಮೈಸೂರು ವಿಶ್ವವಿದ್ಯಾನಿಲಯದ ಅಧೀನದಲ್ಲಿರುತ್ತದೆಂಬ ಅಂಶವನ್ನು ಅವಗಾಹನೆಗೆತರಲಾಗಿದೆ.<br><br>2017–18ನೇ ಸಾಲಿನ ವಿಶ್ವವಿದ್ಯಾನಿಯದ ಚರ ಮತ್ತು ಸ್ಥಿರ ಆಸ್ತಿಗಳ ವಿವರಗಳನ್ನೊಳಗೊಂಡ 2017–18ನೇ ಸಾಲಿನ ನಿರ್ವಹಣಾ ವಹಿಯನ್ನು ನಿರ್ವಹಿಸಲಾಗಿದೆ ಇದಕ್ಕೆ ಸಂಬಂಧ ಪಟ್ಟ ದೃಢೀಕೃತ ಪ್ರತಿಯನ್ನು ಇದರೊಂದಿಗೆ ಲಗತ್ತಿಸಲಾಗಿದೆ.<br><br>ಈ ನಿಟ್ಟಿನಲ್ಲಿ ಸದರಿ ಕಂಡಿಕೆಯನ್ನು ಆಕ್ಷೇಪಣೆಯನ್ನು ಕೈ ಬಿಡುವಂತೆ ನಿವೇದಿಸಲಾಗಿದೆ. |

**182. ಡಾ॥ ಬಾಬು ಜಗಜೀವನ ರಾಂ ಅಧ್ಯಯನ ಪೀಠಕ್ಕೆ ಸರ್ಕಾರದಿಂದ ಬಿಡುಗಡೆಯಾದ ರೂ.2.00 ಕೋಟಿ ಅನುದಾನದ ಬಳಕೆ ಮತ್ತು ಭೌತಿಕ ಗುರಿ ವಿವರವನ್ನು ಹಾಜರುಪಡಿಸದಿರುವುದು :- (ಹಣಕಾಸು ವಿಭಾಗ)**

